START

START

MICRO FILMED
BY

KARNATAKA STATE
ARCHIVES

1991

MICRO FILMED
BY

KARNATAKA STATE
ARCHIVES

1991

HRS. 15. APP. 30

ಜೀವನ ಚಿತ್ರಗಳು - ಕನ್ನಡ ಶಾಲಾ ಪುಸ್ತಕ

ಸಂಪುಟ 1914 ರಿಂದ ಮುಂದುವರಿದ

ಲಾಗಿದೆ.



ಕನ್ನಡ
ಶಾಲಾ ಪತ್ರಿಕೆ

ಕಾಲಲಾಪತ್ರಕೆ.

ಪುಸ್ತಕ ೪೧ಂ. | ಜನವರಿ ೧೯೦೫. | ಸಂಚಿಕೆ ೧.

ಸ್ಫುಟವಿಷಯಗಳು.

೧. ಡಾ. ಬೋಸ ಇವರ ಹೊಸ ಶೋಧವು: ವನಸ್ಪತಿಗಳಿಗೆ ಜ್ಞಾನ ಶಕ್ತಿಯುಂಟು.

ಸ್ವಲ್ಪ ದಿವಸಗಳಾಚೆಯಲ್ಲಿ ಬಂಗಾಲದ ಗೌವ್ಹರ್ನರರಾದ ಲಾರ್ಡ ಕಾರ್ಮೀಕೇಲರವರ ಅಧ್ಯಕ್ಷತೆಯ ಕೆಳಗೆ ಕಲಕತ್ತೆಯಲ್ಲಿ ಪ್ರಸಿದ್ಧ ಶಾಸ್ತ್ರಜ್ಞರಾದ ಡಾ. ಬೋಸ ಇವರು ತಾವು ಮಾಡಿದ ಹೊಸ ಶೋಧವನ್ನು ಕುರಿತು ಒಂದು ವ್ಯಾಖ್ಯಾನವನ್ನು ಕೊಟ್ಟರು. ಮಿಮೋಸಾ (Mimosa: ಮುಟ್ಟಿಲ ಮುರಿಕೆಯ ಜಾತಿಯ ಒಂದು ವನಸ್ಪತಿ) ಎಂಬದೊಂದು ವನಸ್ಪತಿಯುಂಟು. ಅದರ ಎಲೆಗಳಲ್ಲಿ ಒಂದು ವಿಲಕ್ಷಣ ಗುಣವಿರುತ್ತದೆ. ಅವುಗಳಿಗೆ ತುಸು ಕೈ ಹಚ್ಚಿದ ಕೂಡಲೆ ಅವು ತಮಗೆ ತಿಳಿಯುತ್ತೋ ಏನೋ ಅನ್ನುವಂತೆ ತೋರಿಸಿಕೊಳ್ಳುವವು. ಇಂಗ್ಲೀಷ ಭಾಷೆಯಲ್ಲಿಂತೂ ಈ ವನಸ್ಪತಿಗೆ ಸೆನ್ಸಿಟಿವ್ಹ ಪ್ಲ್ಯಾಂಟ್ (Sensitive plant) ಅಂದರೆ, ತಿಳುವಳಿಕೆಯುಳ್ಳ ವನಸ್ಪತಿ ಎಂಬ ಹೆಸರುಂಟು. ಈ ವನಸ್ಪತಿಗಳಿಗೆ ಮನುಷ್ಯರಂತೆ ಜ್ಞಾನಶಕ್ತಿಯು ಇರುತ್ತದೆಂದು ಡಾ. ಬೋಸ ಎಂಬವರು ಮೊನ್ನೆ ಮೊನ್ನೆ ಸಿದ್ಧಮಾಡಿರುತ್ತಾರೆ. ಮತ್ತು ಅವರ ಈ ಅದ್ಭುತವಾದ ಶೋಧವನ್ನು ಲಂಡನದ ರಾಯಲ್ ಸೊಸಾಯಿಟಿಯವರು ಪ್ರಸಿದ್ಧ ಮಾಡಿದ್ದಾರೆ. ಇಂಥ ವನಸ್ಪತಿಗಳಿಗೆ ಹೊರಗಿನಿಂದ ಯಾವದೊಂದು ಪ್ರಕಾರದ ಪ್ರೇರಣೆಯನ್ನು ಮಾಡಲು ಅಂತೆ ತಂಗದಲ್ಲಿ ಯಾವ ಕಾರ್ಯಗಳು ನಡೆಯುವವೆಂಬದನ್ನು ನಿರೀಕ್ಷಣೆ ಮಾಡುವದಕ್ಕಾಗಿ ಡಾ. ಬೋಸ ಇವರು ಸ್ವತಃ ಬಹು ಸೂಕ್ಷ್ಮವಾದ ಕೆಲವು ಯಂತ್ರ ಸಾಮಗ್ರಿಗಳನ್ನು ಸಿದ್ಧ ಮಾಡಿರುತ್ತಾರೆ. ಮತ್ತು ಅವುಗಳ ಸಹಾಯದಿಂದಲೇ ಅವರು ಮೇಲೆ ಹೇಳಿದ ಅತ್ಯಾಶ್ಚರ್ಯಕರವಾದ ಹೊಸ ಶೋಧವನ್ನು ಮಾಡಿರುವರು. ಈ ಯಂತ್ರದಿಂದ ವನಸ್ಪತಿಗಳ ಅಂತರಂ

ಗನಲ್ಲಿ ನಡೆಯುವ ವಿಲಕ್ಷಣ ಕಾರ್ಯಗಳು ಗೊತ್ತಾಗುವವಲ್ಲದೆ, ಆ ಕಾರ್ಯಗಳ ವೇಗವು ಸಹ ತನ್ನಿಂದ ತಾನೇ ತಿಳಿಯುವದು. ಈ ವೇಗವನ್ನು ಅಳೆಯುವ ವ್ಯವಸ್ಥೆಯು ಈ ಯಂತ್ರದಲ್ಲಿ ಇರುವದು. ಡಾ. ಬೋಸ ಇವರು ಕಲಕತ್ತೆಯಲ್ಲಿ ಕೊಟ್ಟ ವ್ಯಾಖ್ಯಾನದ ಸಾರಾಂಶವನ್ನು ಇಲ್ಲಿ ಕೊಡುವೆವು.

ಪ್ರಾಣಿ-ವನಸ್ಪತಿಗಳಿಗೆ ಚೈತನ್ಯವುಂಟು; ಆದರೆ ಆ ಚೈತನ್ಯಶಕ್ತಿಯನ್ನು ವ್ಯಕ್ತ ಪಡಿಸುವಲ್ಲಿ ಮಾತ್ರ ಅವೆರಡರಲ್ಲಿ ಬಹಳ ಹೆಚ್ಚು ಕಡಿಮೆಯುಂಟೆಂದು ಮೊದಮೊದಲು ಭಾಸವಾಗುತ್ತದೆ. ಶಾಸ್ತ್ರೀಯ ಶೋಧಕರು ಈ ಹೆಚ್ಚು ಕಡಿಮೆಯನ್ನು ಕಂಡು ಬಹಳ ಸೋಜಿಗಗೊಳ್ಳುತ್ತಾರೆ. ಪ್ರಾಣಿಗಳ ಅವಯವಗಳಿಗೆ ಎಲ್ಲಿಯಾದರೂ ಸ್ವಲ್ಪ ದಕ್ಕೆ ತಗಲಿದರೆ ಅವು ಶರೀರದ ಯಾವದೊಂದು ಭಾಗವನ್ನು ಆಲ್ಲಾಡಿಸಿ ಅದನ್ನು ವ್ಯಕ್ತಪಡಿಸುವವು. ಆದರೆ ಎಷ್ಟೋ ವನಸ್ಪತಿಗಳಿಗೆ ಬೇಕಾದಷ್ಟು ದಕ್ಕೆಯನ್ನು ಕೊಟ್ಟರೂ ಅವು ತಮ್ಮಲ್ಲುಂಟಾದ ಪರಿಣಾಮವನ್ನು ಪ್ರತ್ಯಕ್ಷವಾಗಿ ಏನೂ ತೋರಿಸುವದಿಲ್ಲ. ಪ್ರಾಣಿಗಳಲ್ಲಿರುವ ಎಷ್ಟೋ ರಕ್ತವಾಹಿನಿಗಳು ಯಾವದೊಂದು ಪ್ರತ್ಯಕ್ಷಕಾರಣವಿಲ್ಲದೆ ಹಾರುತ್ತಿರುತ್ತವೆ. ಬೇರೆ ಬೇರೆ ಪ್ರಕಾರದ ಔಷಧಗಳನ್ನು ಕೊಟ್ಟರೆ ಈ ಚಲನವು ಬೇರೆ ಬೇರೆ ತರದ ರೂಪಗಳನ್ನೂ ತೋರಿಸುವದು. ಆದರೆ ಈ ಪ್ರಕಾರದ ಚಲನವು ವನಸ್ಪತಿಗಳಲ್ಲಿ ಕಂಡು ಬರುವದಿಲ್ಲೆಂದು ಸಾಧಾರಣ ತಿಳುವಳಿಕೆಯುಂಟು. ಪ್ರಾಣಿಗಳಿಗೆ ಯಾವದೊಂದು ತರದ ದಕ್ಕೆಯು ತಗಲಿದ ಕೂಡಲೆ ಅವು ವಿದ್ಯುತ್ತಿನ ದಕ್ಕೆ ತಗಲಿದಂತೆ ಚಲನವಲನವನ್ನು ತೋರಿಸುವವು. ಆದರೆ ಈ ಪರಿಣಾಮವು ವನಸ್ಪತಿಗಳಲ್ಲಿ ಸಾಮಾನ್ಯವಾಗಿ ಕಂಡು ಬರುವದಿಲ್ಲ. ಮುಟ್ಟಲಮುರಿಕೆಯಂಥ ವನಸ್ಪತಿಗಳಿಗೂ ಕೂಡ ಜ್ಞಾನಶಕ್ತಿಯುಂಟೆಂದು ಯಾರೂ ಖಂಡಿತವಾಗಿ ಹೇಳಲಾರರು.

ಪ್ರೋ. ಬೋಸ ಇವರು ಮಿಮೋಝಾ ವನಸ್ಪತಿಗೆ ಒಂದು ಸ್ಥಳದಲ್ಲಿ ದಕ್ಕೆಯನ್ನುಕೊಟ್ಟು, ಅದರ ಅಂತರಂಗದಲ್ಲಿ ನಡೆಯುವ ಕಾರ್ಯವನ್ನು ತಿಳಿಯುವ ಹಾಗು ಅಳೆಯುವ ಯಂತ್ರವನ್ನು ಆ ವನಸ್ಪತಿಯ ಮತ್ತೊಂದು ತುದಿಗೆ ಹಚ್ಚಿಟ್ಟರು. ವನಸ್ಪತಿಗೆ ದಕ್ಕೆ ತಗಲಿದ ಕೂಡಲೆ ಯಂತ್ರದೊಳಗಿನ ಮುಳ್ಳು ಉಲುಕಿತು; ಅಂದರೆ, ಮಿಮೋಝಾ ವನಸ್ಪತಿಯ ಒಂದು

ಭಾಗಕ್ಕೆ ಮಾಡಿದ ಪ್ರೇರಣೆಯು ಆ ವನಸ್ಪತಿಯ ಚೈತನ್ಯ ಶಕ್ತಿಯಿಂದ ಎರಡನೇ ಭಾಗದ ವರಗೆ ಬಯ್ಯಲ್ಪಟ್ಟಿತು. ಈ ಪ್ರೇರಣೆಯ ಸಂಚಾರವನ್ನು ಕುರಿತು ಶಾಸ್ತ್ರಜ್ಞರು ನಾನಾಪ್ರಕಾರದ ಅನುಮಾನಗಳನ್ನು ಮಾಡಿದರು. ಆದರೆ ಡಾ. ಬೋಸ ಇವರು ಈ ಪರಿಣಾಮವು ಆ ವನಸ್ಪತಿಯ ಜ್ಞಾನಶಕ್ತಿಯದೇ ಇದ್ದು, ಇದಕ್ಕೆ ಬೇರೆ ಯಾವ ಕಾರಣವೂ ಇಲ್ಲೆಂದು ಹಲವು ಬಲವತ್ತರ ಪ್ರಮಾಣಗಳಿಂದ ಸಿದ್ಧಮಾಡಿ ತೋರಿಸಿದರು. ಪ್ರಾಣಿಗಳ ಶರೀರದಲ್ಲಿ ಕಾವು ಹೆಚ್ಚಾದರೆ ನಾಡಿಗಳು ತೀವ್ರವಾಗಿ ಹಾರುವವು; ಕಡಿಮೆಯಾದರೆ ಅವು ನಾವಕಾಶವಾಗಿ ಹಾರುವವು. ಕೆಲವು ವಿಷಗಳ ಪ್ರಯೋಗದಿಂದ ನಾಡಿಗಳ ಹಾರೋಣವು ಕಟ್ಟಾಗುವದು. ಈ ರೀತಿಗಳಿಂದಲೂ, ಇದರಂಥ ಬೇರೆ ಹಲವು ರೀತಿಗಳಿಂದಲೂ ವನಸ್ಪತಿಗಳಿಗೆ ಜ್ಞಾನಶಕ್ತಿಯುಂಟೆಂಬದನ್ನು ವ್ಯಾಖ್ಯಾನಕಾರದು ಸಿದ್ಧಮಾಡಿ ತೋರಿಸಿದರು.

ಡಾ. ಬೋಸ ಇವರು ಬೇರೆ ಬೇರೆ ಹನ್ನೆರಡು ಪದ್ಧತಿಗಳಿಂದ ತಮ್ಮ ಸಿದ್ಧಾಂತದ ಪರೀಕ್ಷಣೆಯನ್ನು ಮಾಡಿ, ಅದರ ಸತ್ಯತೆಯ ಬಗ್ಗೆ ತಮ್ಮ ಮನವರಿಕೆಯನ್ನು ಮಾಡಿಕೊಂಡಿದ್ದಾರೆ. ಆ ಹನ್ನೆರಡು ಪದ್ಧತಿಗಳು ತೀರ ಭಿನ್ನವಾಗಿದ್ದು, ಅವುಗಳ ಸಹಾಯದಿಂದ ಒಂದೇ ಸಿದ್ಧಾಂತವು ಹೊರಟಿರುವದು. ವನಸ್ಪತಿಗೆ ಪ್ರೇರಣೆಯನ್ನು ಕೊಟ್ಟರೆ ಅದರ ಶರೀರದಲ್ಲಿ ಅದು ಎಷ್ಟು ವೇಗದಿಂದ ಸಂಚರಿಸುವದು, ಹಾಗು ಬೇರೆ ಬೇರೆ ಪರಿಸ್ಥಿತಿಗಳಲ್ಲಿ ಈ ವೇಗದಲ್ಲಿ ಏನೇನು ಹೆಚ್ಚು ಕಡಿಮೆಗಳು ಆಗುವವು, ಎಂಬ ಈ ಎರಡು ಮುಖ್ಯ ಸಂಗತಿಗಳ ವಿಷಯವಾಗಿ ಡಾ. ಬೋಸ ಇವರು ಶೋಧಮಾಡಿರುವರು. ತಮ್ಮ ಅಪೂರ್ಣ ಇಂದ್ರಿಯಗಳ ಮೂಲಕವಾಗಿ ಈ ಶೋಧದಲ್ಲಿ ಹಲವು ತಪ್ಪುಗಳಾಗುವ ಸಂಭವವುಂಟೆಂತಲೂ ವನಸ್ಪತಿಗಳಿಗೆ ಕೊಟ್ಟ ಪ್ರೇರಣೆಯಿಂದ ಅವುಗಳಲ್ಲುಂಟಾಗುವ ವೇಗವನ್ನು ಬರಿಗಣ್ಣಿನಿಂದ ಅಳೆಯುವದು ಬಹು ಕಠಿಣವು, ಅಥವಾ ಅಶಕ್ಯವೆಂತಲೂ ತಿಳಿದು, ಈ ವೇಗವನ್ನು ತಿಳಿಸುವಂಥ ಒಂದು ಯಂತ್ರವನ್ನು ಡಾ. ಬೋಸ ಇವರು ರಚಿಸಿದರು. ಈ ಯಂತ್ರಕ್ಕೆ ಅವರು ಪ್ರತಿನಿಲೇಖನಯಂತ್ರ (Response Recorder) ವೆಂಬ ಹೆಸರನ್ನು ಕೊಟ್ಟಿರುವರು. ಈ ಯಂತ್ರವನ್ನು ಡಾ. ಬೋಸ ಇವರು ಬಹು ಶ್ರಮಬಟ್ಟು

ಸಿದ್ಧಮಾಡಿದರು. ಈ ಯಂತ್ರದಿಂದ ವನಸ್ಪತಿಯ ಅಂತರಂಗದಲ್ಲಿ ನಡೆಯುವ ಪ್ರೇರಣಾಸಂಚಾರದ ವೇಗವು ನಮಗೆ ಗೊತ್ತಾಗುತ್ತದೆ. ವನಸ್ಪತಿಗಳಿಗೆ ಪ್ರೇರಣೆಯನ್ನು ಕೊಟ್ಟಕೂಡಲೆ ಅದರ ಜ್ಞಾನವು ಆ ವನಸ್ಪತಿಗೆ ಆದ ಚಿಹ್ನವು ಸಹ ಈ ಯಂತ್ರದಿಂದ ಗೊತ್ತಾಗುತ್ತದೆ. ಈ ಚಿಹ್ನಕ್ಕೆ "ರೆಸ್ಪಾನ್ಸ" (Response) ಅಂದರೆ ಪ್ರತ್ಯುತ್ತರವೆಂಬ ಹೆಸರುಂಟು. ಈ ಯಂತ್ರದ ರಚನೆಯು ಬಹು ಸೂಕ್ಷ್ಮವಾದದ್ದೂ ಚಾತುರ್ಯವುಳ್ಳದ್ದೂ ಇರುತ್ತದೆ. ವನಸ್ಪತಿಗೆ ಪ್ರೇರಣೆಯು ದೊರೆತಕೂಡಲೆ ಪ್ರತ್ಯುತ್ತರದ ವೇಗವನ್ನು ತೋರಿಸುವ ಬಿಂದು ಮುಳ್ಳು ಈ ಯಂತ್ರದಲ್ಲಿ ಇರುತ್ತವೆ. ಈ ಯಂತ್ರದ ಸಹಾಯದಿಂದಲೇ ಡಾ. ಬೋಸ ಇವರು ತಮ್ಮ ಸಿದ್ಧಾಂತವು ನಿಜವೆಂದು ಸಿದ್ಧಮಾಡಿದ್ದಾರೆ. ಈ ಯಂತ್ರದ ಸಹಾಯದಿಂದ ಬೇರೆ ಎಷ್ಟೋ ಸಂಗತಿಗಳೂ ಗೊತ್ತಾಗುತ್ತವೆ. ಉದಾಹರಣಾರ್ಥವಾಗಿ ವನಸ್ಪತಿಗೆ ದಕ್ಕೆಯನ್ನು ಕೊಟ್ಟಾಗಿನಿಂದ ಅದು ಪ್ರತ್ಯುತ್ತರವನ್ನು ಕೊಡುವ ತನಕ ಎಷ್ಟು ವೇಳೆಯು ಹಿಡಿಯುವದೆಂಬದೂ ಈ ಯಂತ್ರದಿಂದ ಗೊತ್ತಾಗುತ್ತದೆ. ಮುಟ್ಟಲಮುರಿಕೆಯ ಗಿಡಕ್ಕೆ $\cdot 0 \pm -(\frac{1}{1000})$ ಸೇಕಂದಿನಷ್ಟು ಕಾಲವು ಹಿಡಿಯುವದೆಂದು ಗೊತ್ತಾಗಿರುತ್ತದೆ. ಕಪ್ಪೆಗೆ ಸಹ ಇಷ್ಟೇ ವೇಳೆಯು ಹಿಡಿಯುವದು. ಈ ಯಂತ್ರದಿಂದ ಗೊತ್ತಾದ ಮತ್ತೊಂದು ಚಮತ್ಕಾರವುಳ್ಳ ಸಂಗತಿಯು ಯಾವದೆಂದರೆ, ಸಾಧಾರಣ ಗಮನಿಲವಾದ ವನಸ್ಪತಿಯು ಪ್ರತ್ಯುತ್ತರವನ್ನು ತಡವಾಗಿ ಕೊಡುವದು, ಅಂದರೆ, ಆಲಸ್ಯಮಾಡುವದು; ಆದರೆ ಸಣ್ಣ ವನಸ್ಪತಿಗಳು ಪ್ರತ್ಯುತ್ತರವನ್ನು ಒಳ್ಳೇ ಚಟುವಟಿಕೆಯಿಂದ ಕೊಡುವವು. ವನಸ್ಪತಿಯು ದಣಿದಿದ್ದರೆ ಆಚಕ್ಕೆಕೊಟ್ಟ ದಕ್ಕೆಯ ಜ್ಞಾನವಾಗಲಿಕ್ಕೆ ಬಹಳ ಹೊತ್ತು ಹಿಡಿಯುವದು. ಈ ದಣಿವು ವಿಶೇಷವಾಗಿದ್ದರೆ ಕೆಲವು ಹೊತ್ತು ಆ ವನಸ್ಪತಿಗೆ ಸಂವೇದನವೇ ಆಗುವದಿಲ್ಲ. ಈ ಸ್ಥಿತಿಯಲ್ಲಿ ಆ ವನಸ್ಪತಿಯು ಅರ್ಧ ತಾಸು ವಿಶ್ರಾಂತಿಯನ್ನು ತೆಗೆದುಕೊಂಡ ಮೇಲೆ ಅದರ ಜ್ಞಾನಶಕ್ತಿಯು ಜಾಗ್ರತವಾಗುವದಿಲ್ಲ. ಇದಲ್ಲದೆ ಮುಟ್ಟಲಮುರಿಕೆಯ ಸಂಬಂಧದಿಂದ ಇನ್ನೂ ಎಷ್ಟೋ ಆಶ್ಚರ್ಯಕರವಾದ ಸಂಗತಿಗಳನ್ನು ವ್ಯಾಖ್ಯಾನಕಾರರು ವಿವರಿಸಿ ಹೇಳಿದರು.

ಕಟ್ಟಕಡೆಗೆ ಡಾ. ಬೋಸ ಇವರು ಅಂದದ್ದೇನಂದರೆ:—ಈ ಮೇಲೆ

ಗೆ ಪ್ರಾಣಿ ಹಾಗು ವನಸ್ಪತಿ ಇವುಗಳಲ್ಲಿ ಅಭಿನ್ನತೆಯು ಸಿದ್ಧವಾಗಿರುತ್ತದೆ. ಮತ್ತು ಈ ಎರಡು ಜೀವ ಪ್ರಕರಣಗಳಲ್ಲಿ ಇರುವ ಭೇದಭಾವದ ಪರದೆಯು ನಿಷ್ಟವಾಗಿರುತ್ತದೆ. ಪ್ರಾಣಿಗಳಿಂದಾಗುವ ಕಾರ್ಯಗಳೆಲ್ಲ ವನಸ್ಪತಿಗಳಿಂದಲೂ ಆಗುವವು. ಇದರಿಂದ ಈ ವಿಶ್ವರೂಪಮಹಾನಾಗರದಲ್ಲಿ ವನಸ್ಪತಿ ಹಾಗು ಪ್ರಾಣಿ ಇವು ಒಂದೇ ಪ್ರಕಾರದ ಬಿಂದುಗಳಿರುತ್ತವೆಂಬ ಮಾತು ಲಕ್ಷದಲ್ಲಿ ಬರುವದು.

ಇದೊಂದು ಅತಿಮುಖ್ಯವಾದ ಸಿದ್ಧಾಂತವು ಜೈಲಿಗೆ ಬಂದಂತಾಯಿತು. ಇದರಿಂದ ಮನುಷ್ಯಶರೀರದೂಪಯಂತ್ರದ ಅಂತರ ರಚನೆಯು ಈಗಿನಷ್ಟು ಗೂಢವಾಗಿ ಉಳಿಯುತಿಕ್ಕಿಲ್ಲ. ಪ್ರಾಣಿಗಳಿಗೂ ವನಸ್ಪತಿಗಳಿಗೂ ನಿಜವಾಗಿ ಅಭೇದಭಾವವು ಸಿದ್ಧವಾದದ್ದರಿಂದ ವನಸ್ಪತಿಗಳಸಂಬಂಧದಿಂದ ಪ್ರಯೋಗಗಳನ್ನು ಮಾಡಿ, ಪ್ರಾಣಿಗಳ ಶರೀರಯಂತ್ರಗಳ ವಿಷಯವಾಗಿ ಹೊಸ ಹೊಸ ಸಂಗತಿಗಳನ್ನು ಗೊತ್ತುಹಚ್ಚಬಹುದು. ಯಾಕಾಂದರೆ ಪ್ರಯೋಗ ಮಾಡುವ ಸಂಬಂಧದಿಂದ ಪ್ರಾಣಿಗಳಿಗಿಂತ ವನಸ್ಪತಿಗಳೇ ಹೆಚ್ಚು ಸುಲಭವೆಂಬ ಮಾತು ಸಹಜವದೆ.

ಭೂಗೋಲದೊಳಗಿನ ಕೆಲವು ಹೆಸರುಗಳ ಉಪಪತ್ತಿ.

(ಬರೆದು ಬಂದದ್ದು.)

ಭೂಮಿಯ ಮೇಲಿನ ಕೆಲವು ಸ್ಥಳ ಜಲವಿಶೇಷಗಳಿಗೆ, ಅವುಗಳ ಅನಾಧಾರಣವಾದ ಧರ್ಮದ ಮೂಲಕ, ಸಾರ್ಥಕವಾದ ಹೆಸರುಗಳು ಇಂದಿಗು ತ್ತವೆ. ಭೂಗೋಲವನ್ನು ಕಲಿಸುವಾಗ ಅಲ್ಲಲ್ಲಿ ಆಯಾ ಹೆಸರುಗಳು ಮತ್ತು ಅವರ ಅರ್ಥಗಳೊಳಗೆ ಏನಾದರೂ ಕಾರ್ಯಕಾರಣ ಸಂಬಂಧವಿದ್ದರೆ, ಅದನ್ನು ಹುಡುಗರಿಗೆ ತಿಳಿಸಿ ಹೇಳಿದ ಪಕ್ಷದಲ್ಲಿ, ಆ ವಿಷಯದಲ್ಲಿ ವೈಚಿತ್ರ್ಯವಾಗು ವದಲ್ಲದೆ ಆಯಾ ಹೆಸರುಗಳು ನೆನಪಿನಲ್ಲಿ ಗಟ್ಟಿಯಾಗಿ ಉಳಿಯಲಿಕ್ಕೆ ಅವುಗಳಲ್ಲಿ ಅಡಕವಾದ ಅರ್ಥದ ಸಾಹಚರ್ಯವು ಸಹಾಯವಾಗುವದೆಂದು ಹೇಳಬಹುದು. ಆದ್ದರಿಂದ ಅಂಥ ಹಲ ಕೆಲವು ಹೆಸರುಗಳನ್ನೂ ಅವುಗಳ ಯಥಾಪ್ರಕಾರವಾದ ಅರ್ಥವನ್ನೂ ಕ್ರಮದಿಂದ ಬರೆದು ಕಳಿಸಿದ್ದೇನೆ.

ಇದಕ್ಕೆ ತಮ್ಮ ವಿದ್ಯಾವಿಷಯಕವಾದ ಶಾಲಾಪತ್ರಿಕದಲ್ಲಿ ಸ್ಥಳ ದೊರೆಯು ಬೇಕೆಂದು ಅಪೇಕ್ಷೆಯುದೆ.

ಆರ್ಕ್ಟಿಕ್.— ಇದು ಉತ್ತರ ಮಹಾಸಾಗರದ ಹಾಗು ಉತ್ತರಧ್ರುವ ವೃತ್ತದ ಹೆಸರು. ಇದರ ಅರ್ಥವು "ಕರಡಿ" ಎಂದು. ಯಾಕಂದರೆ, ಉತ್ತರದ ಕಡೆಗೆ ಆಕಾಶದಲ್ಲಿ ಇರುವ ಒಂದು ನಕ್ಷತ್ರ ಪುಂಜಕ್ಕೆ "ಬೃಹದೃಷ್ಟ" (Ursa major) "ದೊಡ್ಡ ಕರಡಿ," ಎಂಬ ಹೆಸರದೆ. ಇದೇ ಅರ್ಥವು ಆರ್ಕ್ಟಿಕ್ ಎಂಬುದಕ್ಕೆ ಉಂಟು. ಆದರೂ ಇದು "ಉತ್ತರದಿಕ್ಕಿನ" ಎಂಬ ಸಾಮಾನ್ಯಾರ್ಥದಲ್ಲಿ ವ್ಯವಹರಿಸುತ್ತದೆ. ಉದಾ:— ಆರ್ಕ್ಟಿಕ್ ಮಹಾಸಾಗರ ಅಂದರೆ, ಉತ್ತರ ಮ. ಸಾ. ಆರ್ಕ್ಟಿಕ್‌ವೃತ್ತ ಅಂದರೆ, ಉತ್ತರ ಧ್ರುವವೃತ್ತ.

ಅಂತಾರ್ಕ್ಟಿಕ್.— ಇದು ಆರ್ಕ್ಟಿಕ್ ಎಂಬುದರ ಹಿಂದೆ ಆಂತಿ (ಅಂಟಿ) ಎಂಬ ಶಬ್ದವನ್ನು ಇಟ್ಟು ಮಾಡಿದ್ದದೆ. 'ಆಂತಿ' ಅಂದರೆ ಎದುರು ವಿರುದ್ಧ ಎಂಬರ್ಥ. ಅದ್ದರಿಂದ ಅಂತಾರ್ಕ್ಟಿಕ್ ಎಂದರೆ, ದಕ್ಷಿಣದ ಅಥವಾ ಉತ್ತರದ ಎದುರಿನ ದಿಕ್ಕಿನ ಎಂದಾಗುತ್ತದೆ.

ಆಸ್ಟ್ರೇಲಿಯಾ.— ಇದರ ಅರ್ಥ "ದಕ್ಷಿಣ" ಎಂಬುದು.

ಪಾಸಿಫಿಕ್.— ಇದರ ಅರ್ಥ ಶಾಂತವಾದದ್ದು. ಇದರಲ್ಲಿ ಭಯಂಕರವಾದ ತುಫಾನುಗಳು ಏಳುವದಿಲ್ಲವಾದ್ದರಿಂದ ಇದಕ್ಕೆ ಈ ಹೆಸರು ಬಂದದೆ.

ಅಲ್ಬಾಯ್.— ಇದರ ಅರ್ಥ "ಬಂಗಾರದ" ಎಂದು.

ಹೋ-ಆಂಗ-ಹೋ.—ಹೋಆಂಗ ಅಂದರೆ, ಹಳದೀ ಬಣ್ಣದ. ಹೋ ಅಂದರೆ ಹೊಳೆ (ನದಿ). ಕಯಾಂಗ, ಹೋ, ವಿಾ, ದಾರಿಯಾ ಇವುಗಳ ಅರ್ಥ ಹೊಳೆ (ನದಿ) ಯೆಂದಾಗುತ್ತದೆ. ಉದಾ:— ಯಾಂಗ್ಟಸಿ-ಕಿಯಾಂಗ್, ಹೋಆಂಗ-ಹೋ, ವಿಾ-ಕ್ಯಾಂಗ, ಅಮೂ-ದಾರಿಯಾ, ಸಿರ-ದಾರಿಯಾ.

ಆರಲ್.— ಅಂದರೆ ದ್ವೀಪಗಳು. ಅಂದಮೇಲೆ ಆರಲ್ ಸಮುದ್ರ ಇದರ ಅರ್ಥ ದ್ವೀಪಗಳ ಸಮುದ್ರ ಎಂದಾಗುತ್ತದೆ.

ಬೈಕಲ್.— ಅಂದರೆ ದೊಡ್ಡ (ಮಹತ್) ಎಂದರ್ಥ.

ಅಲಹಾಬಾದ.— ದೇವರ ಪಟ್ಟಣವೆಂಬರ್ಥ.

ಅಮೃತ್‌ಸರ.— ಇದರ ಅರ್ಥ ಅಮೃತದ ಸರೋವರದ, ಅಥವಾ ಜೀವನದ ಸರೋವರವೆಂದು.

ಹೊಂಗಕೊಂಗ.— ಅಂದರೆ ಸವಿ (ಸಿಹಿ) ನೀರು ಎಂದರ್ಥ.

ಕಿಯೋಟೋ.— ಪಶ್ಚಿಮದಿಕ್ಕಿನ ರಾಜಧಾನಿ ಎಂದರ್ಥ.

ಬೋಖಾರಾ.— ಇದಕ್ಕೆ ಶಾಸ್ತ್ರಗಳ ಭಂಡಾರ ಎಂದರ್ಥ.

ಬುಡಾಪಯರ.— ಇದರ ಸರಿಯಾದ ಹೆಸರು ಅಬುಬೆಹ್ರ ಅಂದರೆ, ಪಟ್ಟಣಗಳ ತಂದೆ. ಇದರಂತೆ ಬಲ್ಖ್ ಇದಕ್ಕೆ ಪಟ್ಟಣಗಳ ತಾಯಿ ಎಂಬ ಅರ್ಥವುಂಟು.

ಮದೀನಾ.— ಇದರ ಅರ್ಥ ಪಟ್ಟಣ ಎಂದು.

ಬೆಟ್ ಅಲ್ ಅರಬ.— ತೈಗ್ರಿಸ, ಯುಫ್ರೆತಿಸ ನದಿಗಳು ಒಂದಾಗಿ ಹರಿಯುವ ಮುಂದಿನ ಭಾಗಕ್ಕೆ ಈ ಹೆಸರದೆ. ಇದರ ಅರ್ಥ ಅರಬರ ಹೊಳೆ ಎಂದು.

ಬಾಲ್ಟಿಕ್ ಸಮುದ್ರ.—ಅಂದರೆ ಸಾಮುದ್ರಧ್ವನಿ(ಒತ್ತು)ಗಳ ಸಮುದ್ರ ಎಂಬ ಅರ್ಥ.

ಬೊಸ್ಫೊರಸ.—ಅಂದರೆ, "ಉಕ್ಷತರಣ" ಎಂದು ಅರ್ಥವಾಗುತ್ತದೆ. ಯಾಕಂದರೆ, ಇದು ಒಂದು ಎತ್ತು ಈಸಿಕೊಂಡು ಪಾರಾಗಬಹುದಾದಷ್ಟು ಇಕ್ಕಟ್ಟಾದದ್ದು.

ನಾರ್ದಕಿನ್.—ಕಿನ್ ಎಂದರೆ ಕೊನೆ (ಭೂಶಿರ) ಎಂಬರ್ಥ. ನಾರ್ದಕಿನ್, ಅಂದರೆ ಉತ್ತರದ ಕಡೆಯ ಭೂಶಿರ ಎಂದು ಅರ್ಥವಾಗುತ್ತದೆ.

ಮೌಂಟ ಬ್ಲಾಂಕ್.— ಬ್ಲಾಂಕ್ ಅಂದರೆ, ಬಿಳೀ ಎಂದು ಅರ್ಥ. ಮೌಂಟ ಬ್ಲಾಂಕವೆಂದರೆ ಬಿಳೀ ಪರ್ವತವೆಂಬರ್ಥ. ಇದು ಯಾವಾಗಲೂ ಬರ್ಫದಿಂದ ಆಚ್ಛಾದಿತವಾಗಿರುವದರಿಂದ ಇದಕ್ಕೆ ಈ ಹೆಸರು ಬಂದದೆ. ಇದು ಹಿಮಾಲಯದ ಧವಲಗಿರಿ ಎಂಬ ಹೆಸರಿನ ಹೋಲಿಕೆಯುಳ್ಳದ್ದು.

ಫ್ಲಾಂಬೊರೊ ಹೆಡ್.— ಇದರ ಮೇಲೆ ದೀಪಸ್ತಂಭವಿದ್ದುದರಿಂದ ಈ ಹೆಸರು ಬಂದದೆ. ಇಂಗ್ಲೀಷ ಭಾಷೆಯಲ್ಲಿ ಫ್ಲೇವ್, ಅಂದರೆ ಜ್ವಾಲೆ, ಬೆಳಕು, ದೀಪ ಎಂಬರ್ಥ.

ಸ್ನೋಡನ್.— ಅಂದರೆ, ಬರ್ಫದ (ಬರ್ಫವುಳ್ಳ) ಎಂಬರ್ಥ.

ಎಡಿನ್‌ಬರ್ಗ,—ಅಂದರೆ ಎಡ್ವಿನ್‌ನ ಪಟ್ಟಣವೆಂಬರ್ಥ. ಯಾಕಂದರೆ ಇದನ್ನು ಪೂರ್ವದಲ್ಲಿ ನಾರ್ಥಂಬರ್ಲಂಡದ ರಾಜಕುಮಾರನಾದ ಎಡ್ವಿನ್‌ನು ವಶಮಾಡಿಕೊಂಡಿದ್ದನು.

ಕೋನಿಂಗ್ಜಬರ್ಗ್.— ಅಂದರೆ, ಅರಸನ ಪಟ್ಟಣ ಎಂದರ್ಥ.

ದಾಂಜಿಗ್— ಅಂದರೆ, ಡೇನರ ಪಟ್ಟಣ ಎಂಬರ್ಥ.

ಆಸ್ಟ್ರಿಯಾ.— ಅಂದರೆ, ಪೂರ್ವದಿಕ್ಕಿನ ರಾಜ್ಯವೆಂದರ್ಥ.

ವಿಎನ್ನಾ.—ಇದು ವೀನ ಎಂಬ ನದಿಯ ತೀರದಲ್ಲಿರುವದರಿಂದ ಈ ಊರನ್ನು ಹೊಂದಿರುತ್ತದೆ.

ಇನ್ಸ್‌ಬ್ರುಕ್.—ಅಂದರೆ ಇನ್‌ದ ಸೇತುವೆ ಎಂಬರ್ಥ. ಇನ್ ಎಂಬದು ಟಿರೋಲದ ರಾಜಧಾನಿಯಾಗಿತ್ತು.

ಟ್ರಾನ್ಸಿಲ್‌ವೇನಿಯಾ.— ಅಡವಿಯ ಆಚೆಯ ದೇಶ ಎಂಬರ್ಥ.

ಹಾಲಂಡ.— ಅಂದರೆ ತಗ್ಗಾದ ದೇಶವೆಂಬರ್ಥ.

ದಾಮ್.— ಅಂದರೆ ಒಡ್ಡು ಎಂಬ ಅರ್ಥ. ಉದಾ:—ಆಮ್ಸ್‌ದಾಮ್, ರಾತರ ದಾಮು.

ಸ್ತೆಂಬೂಲ.— ಅಂದರೆ, ಪಟ್ಟಣ ಎಂಬರ್ಥ.

ಅಡ್ರಿಯಾ ನೋಪಲ್.—ಈ ಹೆಸರು ಇದನ್ನು ಸ್ಥಾಪಿಸಿದ ರೋಮನ್ ಬಾದಶಹನಾದ ಅಡ್ರಿಯನ್‌ನ ಹೆಸರಿನಿಂದ ಉಂಟಾಯಿತು.

ನ್ಯಾಜಿರ್.— ಎಂದರೆ ಕಪ್ಪು ಎಂಬರ್ಥ.

ನ್ಯಾಂಜೊ, ನ್ಯಾಸ್ಸಾ.— ಇವುಗಳ ಅರ್ಥ ಸರೋವರ ಎಂದು.

ಚಾಡ.— ಅಂದರೆ ಬೈಲಿನಂತೆ ಕಾಣುವ ಸರೋವರವೆಂದರ್ಥ.

ಟ್ರಾನ್ಸ್‌ವಾಲ್.—ಎಂದರೆ, ವಾಲ ನದಿಯ ಆಚೆಯ ದೇಶವೆಂಬರ್ಥ.

ಮೊರಿಶಸ್.—ಇದು ಡಚ್ಚರು ಇಟ್ಟ ಹೆಸರು. ಹಾಲಂಡದ ಅರಸನಾದ ಮೊರಿಸ್ ಎಂಬವನ ಹೆಸರಿನಿಂದ ಇಟ್ಟದ್ದು.

ಬಾಫಿನ್‌ಬೇ.—ಬಾಫಿನ್‌ನು ಶೋಧಿಸಿದರಿಂದ ಈ ಹೆಸರು ಬಂತು.

ಹಡ್ಸನ್‌ಬೇ.—ಹಡ್ಸನ್‌ನು ಶೋಧಿಸಿದರಿಂದ ಈ ಹೆಸರು ಬಂದದೆ.

ಡಾವಿಸ್, ಸಾ. ಧು —ಡಾವಿಸ್‌ನು ಕಂಡುಕೊಂಡದರಿಂದ ಈ ಹೆಸರನ್ನು ಹೊಂದಿದೆ.

ಮಿಸ್ಸಿಸಿಪ್ಪಿ.— ವಿಶಾಲವಾದ ಮತ್ತು ಉದ್ದವಾದ ನದಿ ಎಂಬರ್ಥ.

ಮಿಸ್ಸೌರಿ.— ಕೆಸರುಳ್ಳ ನದಿ ಎಂಬರ್ಥ.

(ಈ ವಿಷಯದ ಉಳಿದ ಭಾಗವನ್ನು ಇದೇ ಸಂಚಿಕೆಯ ಕವ್ವಾರಿನ ೩ನೆಯ ಪುಟದಲ್ಲಿ ನೋಡಿರಿ.)

ಜಾತಸ್ಯ ಮರಣಂ ಧ್ರುವಂ.

(ಬರೆದು ಬಂದದ್ದು.)

ಕೈ. ವಾ. ನ್ಯಾಯಮೂರ್ತಿ ರಾನಡೆಯವರು ಅನ್ನುತ್ತಿದ್ದಂತೆ, ಈಶ ಸಂಕೇತಾನುಸಾರವಾಗಿಯೇ ಇಂಗ್ಲಂಡದ ಪ್ರಭುತ್ವವು ನಮ್ಮ ಮೇಲೆ ವಿರಾಜಮಾನವಾಗಿರುತ್ತದೆ. ಆಂಗ್ಲ ಸಾಮ್ರಾಜ್ಯವು ಜಗತ್ತಿನ ಎಲ್ಲ ಭಾಗಗಳಲ್ಲಿ ಹಬ್ಬಿಕೊಂಡಿರುವದರಿಂದಲೂ ಅದಕ್ಕೂ ಹೆಚ್ಚಾಗಿ ಇಂಗ್ಲಿಷ ಭಾಷೆಯು ಜಗತ್ತನ್ನು ವ್ಯಾಪಿಸಿಕೊಂಡಿದ್ದರಿಂದಲೂ ಪೃಥ್ವಿಯ ಯಾವದೊಂದು ಭಾಗದಲ್ಲಿ ಅದ ಸಂಗತಿಗಳು ತಟ್ಟನೆ ಭರತ ಖಂಡಕ್ಕೆ ತಿಳಿಯುತ್ತವೆ. ಇಂಗ್ಲಂಡ, ಜರ್ಮನಿ, ಅಮೇರಿಕಾ ಮುಂತಾದ ದೇಶಗಳಲ್ಲಿ ಅದ ಸುಧಾರಣೆಗಳು ನಮ್ಮ ಕಿವಿಗೆ ಬೀಳುತ್ತವೆ. ಸಾಂಪ್ರತಕ್ಕೆ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಎಲ್ಲ ಅನುಕೂಲತೆಗಳು ಕೈಜೋಡಿಸಿಕೊಂಡು ನಿಂತದ್ದರಿಂದಲೂ, ಸಾಹಸಪ್ರೀತಿಯು ಅವರ ಸ್ವಾಭಾವಿಕ ಗುಣವಾದ್ದರಿಂದಲೂ ಅವರು ಪ್ರತಿ ಒಂದು ಸಂಗತಿಯಲ್ಲಿ ಮಹತ್ವದ ಶೋಧಗಳನ್ನು ಮಾಡಲು ಸಮರ್ಥರಾಗಿರುತ್ತಾರೆ.

ಸಾಂಪ್ರತಕ್ಕೆ ಯುರೋಪ ಅಮೇರಿಕಾ ಖಂಡಗಳ ಪ್ರತಿ ಒಂದು ದೇಶದವರು ವಿದ್ಯಾಪ್ರಸಾರ ಮಾಡುವದೇ ತಮ್ಮ ಕರ್ತವ್ಯವೆಂದು ತಿಳಿಯುತ್ತಾರೆ. ಅದಕ್ಕನುಸಾರವಾಗಿ ಸರಕಾರದವರೂ ಶ್ರೀಮಂತರೂ ಹಣದ ಸಹಾಯ ಮಾಡುವದಕ್ಕೆ ಸಿದ್ಧರಿರುತ್ತಾರೆ. ಆದ್ದರಿಂದ ಹಲವು ಕಡೆಯಲ್ಲಿ ಹೊಸ ಹೊಸ ಶೋಧಗಳು ಆಗ ಹತ್ತಿರುತ್ತವೆ. ಎಷ್ಟೋ ತತ್ವಜ್ಞಾನಿಗಳು ತಮ್ಮ ಆಯುಷ್ಯವನ್ನೇ ಹೊಸ ಶೋಧಗಳನ್ನು ಮಾಡುವದರಲ್ಲಿ ಕಳೆಯಲು ಸಿದ್ಧರಿರುತ್ತಾರೆ. ಅಮೇರಿಕೆಯಂತೂ ಹೊಸ ಶೋಧಗಳನ್ನು ಮಾಡುವದರಲ್ಲಿ ವಿಶ್ವಾಮಿತ್ರನಾಗಿರುತ್ತದೆ. ಈ ಹೊತ್ತು ಆತ್ಮದ ಭಾರವು ೨॥ ತೊಲೆಯೆಂದು ಹೇಳುವ ನ್ಯೂಯಾರ್ಕದ ಪಂಡಿತರು ನಾಳಿಗೆ ಅನ್ನಾಶಯವನ್ನು ತೆಗೆದು ಅನ್ನದ ಬಳಿಗೆಯನ್ನು ಸಣ್ಣ ಕರುಳಿಗೆ ಹೊಂದಿಸಿಕೂಡ್ರಿಸಿದರೆ ಮನುಷ್ಯನು ಬದಕುತ್ತಾನೆಂದು ಸಿದ್ಧಮಾಡಿ ತೋರಿಸುತ್ತಾರೆ. ಮಿಂಚಿನ ಸೆನ್ನನಂತೂ ವಿದ್ಯುಲ್ಲತೆಯನ್ನೂ ತನ್ನ ದಾಸಿಯನ್ನಾಗಿ ಮಾಡಿಕೊಂಡಿರು

ತ್ತಾನೆ. ಎಕ್ಸ ಕಿರಣಗಳಂತೂ ಸೃಷ್ಟಿಯ ನಿಜಸ್ಥಿತಿಯನ್ನು ಗೊತ್ತು ಹಚ್ಚಲು ಟೊಂಕವನ್ನೇ ಕಟ್ಟಿರುತ್ತವೆ. ಈ ಪೇರೆಗೆ ೨೦ನೇ ಶತಕದ ಆರಂಭವು ಮನುಷ್ಯನನ್ನು ಕೌತುಕಬಡಿಸುತ್ತಿರುವದು. ಇದರ ಅಂತ್ಯವು ಮನುಷ್ಯಪ್ರಾಣಿಯನ್ನು ಸುಧಾರಣಾಪರ್ವತದ ಯಾವ ಸ್ಥಳಕ್ಕೆ ಒಯ್ಯುತ್ತದೋ ದೇವರೇ ಬಲ್ಲ!

ಪ್ರತಿ ಒಂದು ಹೊಸ ಶೋಧವು ಮನುಷ್ಯನ ಸುಖಕ್ಕಾಗಿಯೇ ಜನ್ಮಕ್ಕೆ ಬರುತ್ತದೆಂದು ತಿಳಿದರೆ ತಪ್ಪಾಗಲಾರದು. ಈಗಾದ ಎಷ್ಟೋ ಹೊಸ ಶೋಧಗಳು ಮನುಷ್ಯ ಪ್ರಾಣಿಯ ನೈಸರ್ಗಿಕ ಪೀಡೆಗಳನ್ನು ಹೊಡೆದೋಡಿಸಲಿಕ್ಕೆ ಸಮರ್ಥವಾಗಿರುತ್ತವೆ. ಆರೋಗ್ಯ ಶಾಸ್ತ್ರವು ಮನುಷ್ಯನ ಆಯುಷ್ಯವನ್ನು ಬೆಳಿಸಲು ಸಮರ್ಥವಾಗಿರುತ್ತದೆ. ಇಷ್ಟರಿಂದಲೇ ಶಾಸ್ತ್ರಜ್ಞರು ತೃಪ್ತರಾಗದೆ ಮನುಷ್ಯನು 'ಚಿರಂಜೀವಿ' ಯಾಕಾಗಬಾರದು, ಎಂಬ ವಿಚಾರವನ್ನು ತಮ್ಮ ಮುಂದಿಟ್ಟುಕೊಂಡು ಅದಕ್ಕಾಗಿ ಶೋಧ ನಡಿಸಿರುವರು. ಈ ಶೋಧಕರಲ್ಲಿ ಒಬ್ಬರಾದ ಪ್ರೊ. ಮ್ಯಾಕ್ನಿಕಾಫ ಎಂಬ ಪ್ರಸಿದ್ಧ ಶಾಸ್ತ್ರಜ್ಞರು "ಮನುಷ್ಯ ಪ್ರಾಣಿಯು ಚಿರಂಜೀವಿಯಾಗಬಹುದು" ಎಂಬುದನ್ನು ಪ್ರಸಿದ್ಧ ಮಾಡಿದ ಸಂಗತಿಯನ್ನು ಓದಿ ಸರ್ವಸುಖಕ್ಕೆ ತವರ ಮನೆಯಾದ ಈ ಭೂಲೋಕದಲ್ಲಿ ಹೆಚ್ಚಾಗಿ ಬಾಳಬೇಕೆಂದು ಇಚ್ಛಿಸುವ ಪ್ರತಿ ಒಬ್ಬನು ಆನಂದಭರಿತನಾಗ ಬಹುದು. ಆಶೀರ್ವಾದದಲ್ಲಿ ಮಾತ್ರ 'ಚಿರಂಜೀವಿ' ಎಂದೆನಿಸಿಕೊಳ್ಳುವ ಹಿಂದೂ ಜನರಂತೂ ಈ ಸುದ್ದಿಯನ್ನು ಕೇಳಿ ಚಕಿತರಾಗಬಹುದು. ಸಾಂಪ್ರತಕ್ಕೆ ಪ್ರೊ. ಮ್ಯಾಕ್ನಿಕಾಫರವರು ಮನುಷ್ಯನಿಗೆ ಮುಪ್ಪನ್ನುಂಟು ಮಾಡುವ ದೋಷಗಳ ನಿವಾರಣೆಗೋಸುಗ ಔಷಧಗಳನ್ನು ತಯಾರಿಸುವದರಲ್ಲಿ ತೊಡಗಿರುವರೆಂದು ಪ್ರಸಿದ್ಧವಾಗಿರುವದು. ಅವರ ಪ್ರಯತ್ನವು ಫಲಪ್ರದವಾಗಿ ಪರಿಣಮಿಸುವದೆಂದು ಭಾವಿಸಿದರೆ ಅತಿಶಯೋಕ್ತಿಯಾಗಲಾರದು. ಆದರೂ ಸೃಷ್ಟಿಶಾಸ್ತ್ರದ ಸೂಕ್ಷ್ಮನಿರೀಕ್ಷಣ ಮಾಡುವದರಿಂದ ಗೊತ್ತಾಗುವದೇನಂದರೆ, ಸೃಷ್ಟಪದಾರ್ಥಗಳ ಮಿಶ್ರಣದಿಂದುಂಟಾದ ಶಕ್ತಿಯು ಕೆಲವೊಂದು ನಿಯಮಿತ ಅವಧಿಯವರೆಗೆ ಮಾತ್ರ ಇರುತ್ತದಲ್ಲದೆ, ಅನಂತಕಾಲ ನಡೆಯಲಾರದು. ಇಂದಿನವರೆಗೆ ಮನುಷ್ಯನು ಮಾಡಿದ ಶೋಧದಿಂದ ಹಲವುಪದಾರ್ಥಗಳು ಸಿದ್ಧವಾಗಿರುತ್ತವೆ. ಆದರೆ ಅವುಗಳ ಶಕ್ತಿಯು ೭-೮ ವರ್ಷ ಸಹ ಒಂದೇ

ಸವಸೆ ನಡೆದದ್ದು ಎಲ್ಲಿಯೂ ಕಂಡು ಬರುವದಿಲ್ಲ. ಇನ್ನು ಶಾರೀರಕ ದೋಷನಾಶಕವಾದ ಎಷ್ಟೋ ಔಷಧಿಮಿಶ್ರಣಗಳು ಮನುಷ್ಯ ಪ್ರಾಣಿಯಿಂದ ನಿರ್ಮಿಸಲ್ಪಟ್ಟಿರುತ್ತವೆ. ಆದರೆ ಅವುಗಳ ಪರಿಣಾಮವು ಕೆಲವೊಂದು ಕಾಲದವರೆಗೆ ಮಾತ್ರ ಶರೀರದ ಮೇಲೆ ಆಗುತ್ತದೇ ಹೊರತು ಚಿರಕಾಲ ನಡೆಯುವದಿಲ್ಲ. ಒಂದು ವೇಳೆ ಚಿರಕಾಲ ನಡೆಯಬೇಕೆಂದೂ ನಾವು ಪ್ರತಿ ದಿನ ಅದನ್ನು ಉಪಯೋಗಿಸಿದರೆ ಅದು ಆಹಾರದಂತೆ ಪರಿಣಮಿಸುವದು, ಎಂದು ಕಂಡು ಬರುತ್ತದೆ. ಸಾರಾಂಶವೇನೆಂದರೆ, ಶರೀರವು ಚಿರಂಜೀವಿಯಾಗುವದಕ್ಕೆ ಮಾಡುವ ಪ್ರಯತ್ನಗಳು ಸೃಷ್ಟಿಯ ಅಗಾಧವಾದ ಗೂಢತತ್ವವನ್ನು ಎಂದೂ ಜಯಿಸಲಾರವು.

ಮನುಷ್ಯಪ್ರಾಣಿಯ ಪ್ರಯತ್ನಪರಂಪರ್ಯವನ್ನು ನೋಡಿದರೆ, ಸಾಂಪ್ರತದ ಶೋಧವು ಮೊದಲನೆಯ ಮೆಟ್ಟಿಲಾಗಿ ಯಾಕೆ ಪರಿಣಮಿಸಬಾರದು? ಎಂಬ ಶಂಕೆಯು ಹುಟ್ಟಬಹುದು. ಆದರೆ ಇದಕ್ಕೆ ಸಯುಕ್ತಿಕ ಉತ್ತರವನ್ನಾದರೂ ಕೊಡಬಹುದು. ಸಾಂಪ್ರತಕ್ಕೆ ಪಾಶ್ಚಿಮಾತ್ಯ ದೇಶಗಳಲ್ಲಿ ನಡೆದ ಶೋಧಗಳ ಮೇಲಿಂದ ಭವಿಷ್ಯತ್ ಕಾಲದಲ್ಲಿ ತರ್ಕಿಸಲಸಾಧ್ಯವಾದ ಶೋಧಗಳು ಆಗಬಹುದು, ಎಂದು ಕಂಡು ಬರುತ್ತದೆ. ಆದರೆ ಪಾಶ್ಚಿಮಾತ್ಯ ದೇಶಗಳು ಕಾಡು ಸ್ಥಿತಿಯಿಂದ ಉನ್ನತಿಗೆ ಬಂದ ಕಾಲವು ೨೦೦೦ ಕ್ಕೆ ಮಿಕ್ಕಿಲ್ಲ. ಆದರೆ ಇದಕ್ಕೂ ಹೆಚ್ಚು ಕಾಲದಿಂದ ತಮ್ಮ ಸುಧಾರಣೆಯನ್ನು ಮಾಡಿಕೊಂಡು ಸಾಂಪ್ರತಕ್ಕೆ ಹೀನಸ್ಥಿತಿಯಲ್ಲಿರುವ ಕೆಲವು ರಾಷ್ಟ್ರಗಳು ಪೃಥ್ವಿಯ ಮೇಲೆ ಇರುತ್ತವೆ. ಅವುಗಳಲ್ಲಿ ಹಿಂದುಸ್ತಾನವು ಒಂದಾಗಿರುತ್ತದೆ. ಭರತ ಖಂಡದ ಸುಧಾರಣೆಯು ವೇದಾದಿ ಗ್ರಂಥಗಳ ಮೇಲಿಂದ ಬಹು ಪುರಾತನದ್ದಾಗಿ ಕಂಡು ಬರುತ್ತದೆ. ವೇದಾಂತದಂಥ ಗಹನ ವಿಷಯದ ವಿಚಾರ ಮಾಡುವಷ್ಟು ಸುಧಾರಣೆಯು ಮನುಷ್ಯನಲ್ಲಿ ಕಂಡು ಬರಬೇಕಾದರೆ ಅತನು ಸುಧಾರಣೆಯ ಬಹು ಉಚ್ಚಪದವನ್ನು ಏರಿರಲಿಕ್ಕೆ ಬೇಕೆಂದು ಊಹಿಸಿದರೆ ತಪ್ಪಾಗಲಾರದು. ಸಾಂಪ್ರತಕ್ಕೆ ಹಿಂದುಸ್ತಾನದಲ್ಲಿ ಬಹು ಪುರಾತನ ಕಾಲದ ಕೆಲವು ಪಾರಮಾರ್ಥಿಕ ಗ್ರಂಥಗಳೇ ಇರುತ್ತವಲ್ಲದೆ ಉಳಿದ ವಿಷಯದ ಮೇಲಿನ ಗ್ರಂಥಗಳು ಕಂಡು ಬರುವದಿಲ್ಲ. ಗ್ರಂಥ ಭಾಂಡಾರಗಳು ನಾಶವಾಗಲಿಕ್ಕೆ ಪೂರ್ವ ಕಾಲದ ಅರಸರ ದಾಳಿಗಳು ಕಾರಣವಾಗಿರುತ್ತವೆಂದು ಇತಿಹಾಸವಿಂದ ತಿಳಿಯುತ್ತದೆ. ಹಿಂದುಸ್ತಾನ

ತ್ತಾನೆ. ಎಕ್ಸ್ ಕಿರಣಗಳಂತೂ ಸೃಷ್ಟಿಯ ನಿಜಸ್ಥಿತಿಯನ್ನು ಗೊತ್ತು ಹಚ್ಚಲು ಟೊಂಕವನ್ನೇ ಕಟ್ಟಿರುತ್ತವೆ. ಈ ಮೇರೆಗೆ ೨೦ನೇ ಶತಕದ ಆರಂಭವು ಮನುಷ್ಯನನ್ನು ಕೌತುಕಬಡಿಸುತ್ತಿರುವದು. ಇದರ ಅಂತ್ಯತ್ತ ಮನುಷ್ಯಪ್ರಾಣಿಯನ್ನು ಸುಧಾರಣಾಪರ್ವತದ ಯಾವ ಸ್ಥಳಕ್ಕೆ ಒಯ್ಯುತ್ತದೋ ದೇವರೇ ಬಲ್ಲ!

ಪ್ರತಿ ಒಂದು ಹೊಸ ಶೋಧವೂ ಮನುಷ್ಯನ ಸುಖಕ್ಕಾಗಿಯೇ ಜನ್ಮಕ್ಕೆ ಬರುತ್ತದೆಂದು ತಿಳಿದರೆ ತಪ್ಪಾಗಲಾರದು. ಈಗಾದ ಎಷ್ಟೋ ಹೊಸ ಶೋಧಗಳು ಮನುಷ್ಯ ಪ್ರಾಣಿಯ ನೈಸರ್ಗಿಕ ಪೀಡೆಗಳನ್ನು ಹೂಡೆದೋಡಿಸಲಿಕ್ಕೆ ಸಮರ್ಥವಾಗಿರುತ್ತವೆ. ಆರೋಗ್ಯ ಶಾಸ್ತ್ರವು ಮನುಷ್ಯನ ಆಯುಷ್ಯವನ್ನು ಬೆಳೆಸಲು ಸಮರ್ಥವಾಗಿರುತ್ತದೆ. ಇಷ್ಟರಿಂದಲೇ ಶಾಸ್ತ್ರಜ್ಞರು ತೃಪ್ತರಾಗದೆ ಮನುಷ್ಯನು 'ಚಿರಂಜೀವಿ' ಯಾಕಾಗಬಾರದು, ಎಂಬ ವಿಚಾರವನ್ನು ತಮ್ಮ ಮುಂದಿಟ್ಟುಕೊಂಡು ಅದಕ್ಕಾಗಿ ಶೋಧ ನಡಿಸಿರುವರು. ಈ ಶೋಧಕರಲ್ಲಿ ಒಬ್ಬರಾದ ಪ್ರೊ. ಮ್ಯಾಕ್ನಿಕಾಫ ಎಂಬ ಪ್ರಸಿದ್ಧ ಶಾಸ್ತ್ರಜ್ಞರು "ಮನುಷ್ಯ ಪ್ರಾಣಿಯು ಚಿರಂಜೀವಿಯಾಗಬಹುದು" ಎಂಬುದನ್ನು ಪ್ರಸಿದ್ಧ ಮಾಡಿದ ಸಂಗತಿಯನ್ನು ಹಿಡಿ ಸರ್ವಸುಖಕ್ಕೆ ತವರ ಮನೆಯಾದ ಈ ಭೂಲೋಕದಲ್ಲಿ ಹೆಚ್ಚಾಗಿ ಬಾಳಬೇಕೆಂದು ಇಚ್ಛಿಸುವ ಪ್ರತಿ ಒಬ್ಬನು ಆನಂದಭರಿತನಾಗ ಬಹುದು. ಆಶೀರ್ವಾದದಲ್ಲಿ ಮಾತ್ರ 'ಚಿರಂಜೀವಿ' ಎಂದೆನಿಸಿಕೊಳ್ಳುವ ಹಿಂದೂ ಜನರಂತೂ ಈ ಸುದ್ದಿಯನ್ನು ಕೇಳಿ ಚಕಿತರಾಗಬಹುದು. ಸಾಂಪ್ರತಕ್ಕೆ ಪ್ರೊ. ಮ್ಯಾಕ್ನಿಕಾಫರವರು ಮನುಷ್ಯನಿಗೆ ಮುಪ್ಪನ್ನುಂಟು ಮಾಡುವ ದೋಷಗಳ ನಿವಾರಣೆಗೋಸುಗ ಔಷಧಗಳನ್ನು ತಯಾರಿಸುವದರಲ್ಲಿ ತೊಡಗಿರುವರೆಂದು ಪ್ರಸಿದ್ಧವಾಗಿರುವದು. ಅವರ ಪ್ರಯತ್ನವು ಫಲಪ್ರದವಾಗಿ ಪರಿಣಮಿಸುವದೆಂದು ಭಾವಿಸಿದರೆ ಅತಿಶಯೋಕ್ತಿಯಾಗಲಾರದು. ಆದರೂ ಸೃಷ್ಟಿಶಾಸ್ತ್ರದ ಸೂಕ್ಷ್ಮನಿರೀಕ್ಷಣ ಮಾಡುವದರಿಂದ ಗೊತ್ತಾಗುವದೇನಂದರೆ, ಸೃಷ್ಟಪದಾರ್ಥಗಳ ವಿಶ್ರಣದಿಂದುಂಟಾದ ಶಕ್ತಿಯು ಕೆಲವೊಂದು ನಿಯಮಿತ ಅವಧಿಯವರೆಗೆ ಮಾತ್ರ ಇರುತ್ತದಲ್ಲದೆ, ಅನಂತಕಾಲ ನಡೆಯಲಾರದು. ಇಂದಿನವರೆಗೆ ಮನುಷ್ಯನು ಮಾಡಿದ ಶೋಧದಿಂದ ಹಲವುಪದಾರ್ಥಗಳು ನಿರ್ಮಾಣವಾಗಿರುತ್ತವೆ. ಆದರೆ ಅವುಗಳ ಶಕ್ತಿಯು ೭-೮ ವರ್ಷ ಸಹ ಮಿಂದೇ

ಸೇವಿಸಿ ನಡೆದದ್ದು ಎಲ್ಲಿಯೂ ಕಂಡು ಬರುವದಿಲ್ಲ. ಇನ್ನು ಶಾರೀರಕ ದೋಷನಾಶಕವಾದ ಎಷ್ಟೋ ಔಷಧಿಮಿಶ್ರಣಗಳು ಮನುಷ್ಯ ಪ್ರಾಣಿಯಿಂದ ನಿರ್ಮಿಸಲ್ಪಟ್ಟಿರುತ್ತವೆ. ಆದರೆ ಅವುಗಳ ಪರಿಣಾಮವು ಕೆಲವೊಂದು ಕಾಲದವರೆಗೆ ಮಾತ್ರ ಶರೀರದ ಮೇಲೆ ಆಗುತ್ತದೇ ಹೊರತು ಚಿರಕಾಲ ನಡೆಯುವದಿಲ್ಲ. ಒಂದು ವೇಳೆ ಚಿರಕಾಲ ನಡೆಯಬೇಕೆಂದು ನಾವು ಪ್ರತಿ ದಿನ ಅದನ್ನು ಉಪಯೋಗಿಸಿದರೆ ಅದು ಆಹಾರದಂತೆ ಪರಿಣಮಿಸುವದು, ಎಂದು ಕಂಡು ಬರುತ್ತದೆ. ಸಾರಾಂಶವೇನೆಂದರೆ, ಶರೀರವು ಚಿರಂಜೀವಿಯಾಗುವದಕ್ಕೆ ಮಾಡುವ ಪ್ರಯತ್ನಗಳು ಸೃಷ್ಟ್ಯಾದಿ ಅಗಾಧವಾದ ಗೂಢತತ್ವವನ್ನು ಎಂದೂ ಜಯಿಸಲಾರವು.

ಮನುಷ್ಯಪ್ರಾಣಿಯ ಪ್ರಯತ್ನಪಾರಂಪರ್ಯವನ್ನು ನೋಡಿದರೆ, ಸಾಂಪ್ರತದ ಶೋಧವು ಮೊದಲನೆಯ ಮೆಟ್ಟಾಗಿ ಯಾಕೆ ಪರಿಣಮಿಸಬಾರದು? ಎಂಬ ಶಂಕೆಯು ಹುಟ್ಟಬಹುದು. ಆದರೆ ಇದಕ್ಕೆ ಸಯುಕ್ತಿಕ ಉತ್ತರವನ್ನಾದರೂ ಕೊಡಬಹುದು. ಸಾಂಪ್ರತಕ್ಕೆ ಪಾಶ್ಚಿಮಾತ್ಯ ದೇಶಗಳಲ್ಲಿ ನಡೆದ ಶೋಧಗಳ ಮೇಲಿಂದ ಭವಿಷ್ಯತ್ ಕಾಲದಲ್ಲಿ ತರ್ಕಿಸಲಸಾಧ್ಯವಾದ ಶೋಧಗಳು ಆಗಬಹುದು, ಎಂದು ಕಂಡು ಬರುತ್ತದೆ. ಆದರೆ ಪಾಶ್ಚಿಮಾತ್ಯ ದೇಶಗಳು ಕಾಡು ಸ್ಥಿತಿಯಿಂದ ಉನ್ನತಿಗೆ ಬಂದ ಕಾಲವು ೨೦೦೦ ಕ್ಕೆ ಮಿಕ್ಕಿಲ್ಲ. ಆದರೆ ಇದಕ್ಕೂ ಹೆಚ್ಚು ಕಾಲದಿಂದ ತಮ್ಮ ಸುಧಾರಣೆಯನ್ನು ಮಾಡಿಕೊಂಡು ಸಾಂಪ್ರತಕ್ಕೆ ಹೀನಸ್ಥಿತಿಯಲ್ಲಿರುವ ಕೆಲವು ರಾಷ್ಟ್ರಗಳು ಪೃಥ್ವಿಯ ಮೇಲೆ ಇರುತ್ತವೆ. ಅವುಗಳಲ್ಲಿ ಹಿಂದುಸ್ತಾನವು ಒಂದಾಗಿರುತ್ತದೆ. ಭರತ ಖಂಡದ ಸುಧಾರಣೆಯು ವೇದಾದಿ ಗ್ರಂಥಗಳ ಮೇಲಿಂದ ಬಹು ಪುರಾತನದ್ದಾಗಿ ಕಂಡು ಬರುತ್ತದೆ. ವೇದಾಂತದಂಥ ಗಹನ ವಿಷಯದ ವಿಚಾರ ಮಾಡುವಷ್ಟು ಸುಧಾರಣೆಯು ಮನುಷ್ಯನಲ್ಲಿ ಕಂಡು ಬರಬೇಕಾದರೆ ಅತನು ಸುಧಾರಣೆಯ ಬಹು ಉಚ್ಚಪದವನ್ನು ಏರಿರಲಿಕ್ಕೆ ಬೇಕೆಂದು ಊಹಿಸಿದರೆ ತಪ್ಪಾಗಲಾರದು. ಸಾಂಪ್ರತಕ್ಕೆ ಹಿಂದುಸ್ತಾನದಲ್ಲಿ ಬಹು ಪುರಾತನ ಕಾಲದ ಕೆಲವು ಪಾರಮಾರ್ಥಿಕ ಗ್ರಂಥಗಳೇ ಇರುತ್ತವಲ್ಲದೆ ಉಳಿದ ವಿಷಯದ ಮೇಲಿನ ಗ್ರಂಥಗಳು ಕಂಡು ಬರುವದಿಲ್ಲ. ಗ್ರಂಥ ಭಾಂಡಾರಗಳು ನಾಶವಾಗಲಿಕ್ಕೆ ಪೂರ್ವ ಕಾಲದ ಅರಸರ ದಾಳಿಗಳು ಕಾರಣವಾಗಿರುತ್ತವೆಂದು ಇತಿಹಾಸದಿಂದ ತಿಳಿಯುತ್ತದೆ. ಹಿಂದುಸ್ತಾನ

ವಂತೂ ಕೆಲವೊಂದು ಕಾಲದ ಹಿಂದೆ ಪರದೇಶದ ರಾಜರ ದೌಡುಗಳ ತವರ ಮನೆಯಾಗಿತ್ತು. ಆ ಕಾಲದಲ್ಲಿ ಎಷ್ಟು ಗ್ರಂಥಗಳು ನಾಶವಾಗಿರುವವೋ ಯಾರು ಬಲ್ಲರು? ಆದ್ದರಿಂದ ಸಾಂಪ್ರತಕ್ಕೆ ಭರತಖಂಡವು ಪೂರ್ವಕಾಲದಲ್ಲಿ ತಾನು ಮಾಡಿದ ಶೋಧಗಳನ್ನು ತೋರಿಸಲು ಅಸಮರ್ಥವಾಗಿರುತ್ತದೆ. ಆದರೂ ಇದ್ದ ಪಾರಮಾರ್ಥಿಕ ಗ್ರಂಥಗಳ ಮೇಲಿಂದ ಆ ವಿಷಯದಲ್ಲಾದರೂ ಜಗತ್ತಿನ ಗುರುತ್ವವನ್ನು ವಹಿಸಲು ಸಮರ್ಥವಾಗಿರುತ್ತದೆ. ಇನ್ನು, ಪಾರಮಾರ್ಥಿಕ ವಿಷಯವನ್ನು ಚರ್ಚಿಸುವ ಎಷ್ಟೋ ಗ್ರಂಥಗಳಲ್ಲಿ ಓಘಾನುಸಾರವಾಗಿ ಬೇರೆ ಕೆಲವು ವಿಷಯಗಳು ಬಂದಿರುತ್ತವೆ. ಅವುಗಳನ್ನು ಸೂಕ್ಷ್ಮ ರೀತಿಯಿಂದ ವಿಚಾರಮಾಡಿ ನೋಡಿದರೆ ಪದಾರ್ಥ ವಿಜ್ಞಾನಶಾಸ್ತ್ರದಲ್ಲಿಯೂ ಅವರು ಈಗಿನ ಪಾಶ್ಚಿಮಾತ್ಯ ಶೋಧಕರಿಗಿಂತ ಮುಂದೆ ಹೋಗಿದ್ದರೆಂದು ತರ್ಕಿಸಲು ಹಲವು ಆಧಾರಗಳು ಕಂಡು ಬರುತ್ತವೆ.

ಸದ್ಯಕ್ಕೆ ಪಾಶ್ಚಿಮಾತ್ಯ ಶೋಧಕರ ಹೊಸ ಪ್ರಾಣಿಗಳನ್ನು ಹುಟ್ಟಿಸಬಹುದೆಂಬ ವಾದವು ಪೂರ್ಣಾವಸ್ಥೆಯನ್ನು ಹೊಂದಲು ತಯಾರಾಗಿರುತ್ತದೆ. ಅಮೇರಿಕದ ಒಬ್ಬ ಶೋಧಕನು ೪ ತಿಂಗಳಲ್ಲಿ ಬೆಳೆಯುವ ಕಡ್ಲಿಯನ್ನು ಎರಡೇ ತಿಂಗಳಲ್ಲಿ ಬೆಳೆಸಿ ತೋರಿಸಿದನಂತೆ. ಜರ್ಮನಿಯ ಒಬ್ಬ ರಸಾಯನಜ್ಞನು ಒಂದು ಪ್ರಕಾರದ ಕಿರಣಗಳನ್ನು ಸೂಕ್ಷ್ಮಪ್ರಾಣಿಗಳ ಮೇಲೆ ಪ್ರಯೋಗಿಸಿ ಅವು ತೀವ್ರ ಬೆಳೆಯುತ್ತವೆಂದು ಸಿದ್ಧಮಾಡಿರುತ್ತಾನೆ. ಏನೊಂದು ಅರಿಯದ ಹಿಂದೂ ಜನರು ಇಂಥ ಶೋಧಗಳನ್ನು ಕೇಳಿ ಅರಿದಾಗುವದರಲ್ಲಿ ಸಂದೇಹವೇನು? ಆದರೆ ಇದಕ್ಕೂ ಅದ್ಭುತವಾದ ಶೋಧಗಳು ಪ್ರಾಚೀನ ಕಾಲದಲ್ಲಿ ಹಿಂದೂ ಜನರಿಂದ ಮಾಡಲ್ಪಟ್ಟಿರುತ್ತವೆಂದು ಈಗಿದ್ದ ಪಾರಮಾರ್ಥಿಕ ಗ್ರಂಥಗಳ ಸೂಕ್ಷ್ಮನಿರೀಕ್ಷಣದಿಂದ ಕಂಡುಬರುತ್ತದೆ. ವಿಶ್ವಾಮಿತ್ರನ ತಪಸ್ಸಾಮರ್ಥ್ಯವನ್ನು ವರ್ಣಿಸುವಾಗ ಆತನು ದೇವಸೃಷ್ಟಿಯ ಹೊರ್ತು ಬೇರೆ ಸೃಷ್ಟಿಯನ್ನು ಮಾಡಿದನೆಂದು ಉಲ್ಲೇಖಿಸಿರುವದಲ್ಲದೆ ಆತನು ಹೊಸದಾಗಿ ನಿರ್ಮಿಸಿದ ಎಷ್ಟೋ ಪ್ರಾಣಿಗಳ ಮತ್ತು ವನಸ್ಪತಿಗಳ ಹೆಸರುಗಳಾದರೂ ಪ್ರಚಾರದಲ್ಲಿ ಇರುತ್ತವೆ. ಇದರ ಮೇಲಿಂದ ವಿಶ್ವಾಮಿತ್ರನು ಆ ಕಾಲದಲ್ಲಿ ಭರತಖಂಡದ ಎಡಿಸನ್‌ನಾಗಿದ್ದನೆಂದು ಯಾಕೆ ತಿಳಿಯಬಾರದು? ಮತ್ತು ಆತನ ರಸಾ

ಯನ ವಿಷಯದ ಶೋಧವು ಹೊಸ ಪ್ರಾಣಿವನಸ್ಪತಿಗಳನ್ನು ಹುಟ್ಟಿಸು ವಷ್ಟು ಯೋಗ್ಯತೆಯುಳ್ಳದ್ದಾಗಿತ್ತೆಂದು ಯಾಕೆ ತಿಳಿಯಬಾರದು?

ಯಾರ ರಸಾಯನ ವಿಷಯದ ಜ್ಞಾನವು ಕೆಲವು ಕಾಲ ಬಾಳುವ ಹೊಸ ಪ್ರಾಣಿಗಳನ್ನು ಹುಟ್ಟಿಸುವದಲ್ಲಿ ಯಶದೊರಕಿಸಿತ್ತೋ, ಅವರ ಮನ ಸಿನಲ್ಲಿ ತಾವು ಚಿರಂಜೀವಿಗಳಾಗಲಿಕ್ಕೆ ಏನು ಮಾಡಬೇಕು? ಎಂಬ ವಿಚಾ ರವು ಬಾರದೆ ಇರುವ ಮಾತು ಅಸಂಭವನಾಗಿ ಕಂಡುಬರುತ್ತದೆ. ಬಹು ಪ್ರಾಚೀನ ಕಾಲದ ಎಷ್ಟೋ ರಾಜರ ಮತ್ತು ಋಷಿಗಳ ವಯಸ್ಸಿನ ಮಾನ ವನ್ನು ನೋಡಿದರೂ ಈ ಮಾತು ಬಲಪಡುತ್ತದೆ. ಅಂದರೆ ಅಷ್ಟು ವಯ ಸ್ಸಿನ ವರೆಗೆ ಬದಕುವಷ್ಟು ಅವರ ಔಷಧಶೋಧವು ಆಗಿತ್ತೆಂದೆಂದು ಕಂಡು ಬರುತ್ತದೆ. ಆದರೂ ಅವರ ಶೋಧವು ಚಿರಂಜೀವಿಯಾಗುವ ವಿಷಯದಲ್ಲಿ ಪರಿಪೂರ್ಣತೆಯನ್ನು ಹೊಂದಲಿಲ್ಲೆಂದು ತರ್ಕಿಸಲು ಮಾರ್ಗವಿರುತ್ತದೆ.

ಸಾರಾಂಶವೇನಂದರೆ, ಮನುಷ್ಯನು ಎಷ್ಟೇ ಶೋಧಕ ಬುದ್ಧಿಯವ ನಾದರೂ ಅವನು ಸೃಷ್ಟಿಯ ಗೂಢ ತತ್ವಗಳನ್ನು ಗೆಲ್ಲುವದು ಅಸಂಭವವಾ ಗಿರುತ್ತದೆ ಡಾ. ಫ್ರ್ಯಾನ್ಕಿಕಾಫ್ ಇವರ ಚಿರಂಜೀವಿಯಾಗುವ ವಿಷಯದ ಶೋಧಾಂಕುರವು ಅವರಿಂದಲೇ ಆಗಲಿ, ಭವಿಷ್ಯತ್ ಕಾಲದಲ್ಲಿಯೇ ಆಗಲಿ ಬೆಳೆದು ಗಗನಚುಂಬಿಯಾದ ವೃಕ್ಷನಾಗಬಹುದು. ಆದರೆ ಅದು ಎಷ್ಟೇ ಭರದಿಂದ ಬೆಳೆದರೂ ಪ್ರತ್ಯಕ್ಷ ಗಗನವನ್ನು ಚುಂಬಿಸಲಾರದು. ಈ ಮೇರೆಗೆ ಪ್ರಾಚೀನ ಭಾರತೀಯ ರಸಾಯನಶಾಸ್ತ್ರವು ಹೇಳುತ್ತದೆ. ತತ್ವಜ್ಞಾನಿಯಾದ ಸ್ಪೆನ್ಸರನ ಅಜ್ಞೇಯವಾದವೂ ಇದನ್ನೇ ಹೇಳುತ್ತದೆ. ಇವೆಲ್ಲ ಸಂಗತಿಗಳ ಮೇಲಿಂದ ನೋಡಲು ಅತ್ಯಗಾಧವಾದ ಈ ಸೃಷ್ಟಿ ಯಲ್ಲಿ ಮನುಷ್ಯನ ಶೋಧಕ್ಕೆ ಮರ್ಯಾದೆ ಇರುತ್ತದೆ. ಆದ್ದರಿಂದ ಶಿರೋಲೇಖದಲ್ಲಿ ಬರೆದಂತೆ "ಜಾತಸ್ಯ ಮರಣಂ ಧ್ರುವಂ" ಎಂಬ ವಾಕ್ಯ ವು ಸತ್ಯವೆಂದು ತಿಳಿದರೆ ಬಹುಶಃ ತಪ್ಪಾಗಲಾರದು.

ಕೇ. ರ. ನ.

ಒಂಬತ್ತು ಕಂಬನಿ.

ಶ್ರೀಯುತ ರಾ. ಬಾ. ಕರಂದಿಕರ ಬಿ. ಎ. ಪೆನ್ಶನರ ಎ. ಇ. ದಕ್ಷಿಣ ಭಾಗ ಈ ದೊರೆಗಳವರು ಅಕಸ್ಮಾತ್ ಕೈ. ವಾ. ಗಳಾದ ಸುದ್ದಿಯನ್ನು ತನ್ನ ಮಿತ್ರನಿಂದ ಕೇಳಿದ ಒಬ್ಬ ಶಿಷ್ಯನುದ್ಗಾರಗಳು:—

"ಒಳಿತು ಒಳಿತೆ"ನ್ನೆನಿತು ಪುಸಿಯುವೆ ।
ಕೆಳೆಯ, ಮದ್ಗುರುಕುಲಲಲಾಮರು ।
ಕಳಿದರು ಕರಂದಿಕರರೆನ್ನುತೆ ಪಿರಿದುಮಿದ್ದರಿಗೆ ॥
ಕೆಳೆಯನುಕ್ತಿಯೊಳಿರಡು ಬಗೆವರೆ! ।
ಕುಳಿಕುಳಿತವೋಲಳಿವುದುಂ ನಿಜ ।
ಫಿಳೆಯೊಳಕಟಾ! ಗುರುವರೇಂದ್ರನೆ, ಬಿಟ್ಟು
ತೊಲಗಿದೆಯಾ! ॥ ೧ ॥

ಗುರುವರನೆ, ಭಯಲಾದೆಯೋ! ಗುಣ ।
ತರುವರವೆ, ಗಣ! ಮುರಿದುಹೋದೆಯೊ! ।
ಕರಗಿದೆಯೊ! ಸುವಿಚಾರಕನಕವೆ, ತಿಳಿಯಕನ್ನಡಿಯೋ, ॥
ನೆರೆಯೊಡೆದೆಯೊ! ವಿತವ್ಯಯೆದ ಮುಂ ।
ದಿರವೆ, ನೆಲಕುರುಳಿದೆಯೊ! ಮಂತ್ರದ ।
ಶರಧಿಯೇ, ಬತ್ತಿದೆಯೊ! ಹಾ! ಬಳವಂತಸಂಭವನೇ ॥೨॥

ಗುರುವೆ, ನಿನ್ನಯ ಮರಣವಾರ್ತೆಯ ।
ಹರಹರಾ! ಕೇಳ್ದೆನ್ನ ಕಿವಿಗಳ ।
ಗುರುವಿಯೊಳು ಸಳಮಳನೆ ಸಲೆ ಕುದಿವೆಸರಿನೆಣ್ಣೆಯನು ॥
ಸುರುವಿದವೊಲುರೆ ಕಾಯ್ದಲಗುಗಳ ।
ತಿರುವಿದಂತೆವೊಲಾಯ್ತು ಕಟ! ಬಗೆ ।
ಮರುಳುಗೊಂಡುದು! ಕಣ್ಣ ಬಿನ್ನನೆ ಬಿಗಿದವೋ
ಲಾಯ್ತು! ॥ ೩ ॥

ಎಳ್ಳಿಯದು ಪದಿಮೂರನೆಯ ದಿ ।
ವ್ಯೆಳ್ಳಿಯ ನವಂಬರದ ತಿಂಗಳ ।
ದೆಳ್ಳಿಯದು ಪದಿನೆಂಟನಿಯ ತಾರೀಖುಮಂಗಳದ ॥

ಎಲ್ಲಿಯದು ಮಂಗಳನವಾಸರ।
ಮೆಲ್ಲಿಯದು ವಿಳ್ತಂದು ನಿನಗದ।
ನೆಲ್ಲಿಯದು ಕೇಳ್ದಳಲು ಶಿಷ್ಯರ್ಗಕಟ! ಗುರುರಾಯಾ ॥ ೪ ॥
ಶೈವಮತಾನುವರ್ತಿ, ಸುಗುಣಾಜರ್ಜಿತಕೀರ್ತಿ,
ಸುಗೌರವಾರ್ಥಿ ಹಾ! ।
ಭಾವಜರೂಪ, ಬಾಳಕುಲದೀಪ, ವಿಚಾರಕಲಾ
ಕಲಾಪ, ಸಂ ॥
ಭೂವಿತರಾಜನಮಾನ್ಯ, ಅವದಾನ್ಯ, ಬುಧಾಗ್ರಣಿಗಣ್ಯ,
ಅಕ್ಕಟಾ! ।
ದಾವಜಿರಾವ, ಶಿಷ್ಯಕುಲಜೀವ, ಲಸದ್ಗುರುಭಾವ
ಪೋದೆಯಾ!! ॥ ೫ ॥
ಮರುಕದಿಂ ನಡೆಸೋಳ್ಪ ತಾಯಿಯು ।
ತೊರೆದು ಕರುಗಳನಗಲುವಂತಿರೆ ।
ಗುರುವೆ, ನಿನ್ನಯಗಲ್ಕೆ ಶಿಷ್ಯರ್ಗಾದುದಕಟಕಟಾ! ॥
ಸರಣಿ ಮುಂದೇನವರ ಕಷ್ಟವ ।
ನೊರೆಯಲಾ ಕರ್ಣಿಸುವರಾರಿನ್ ।
ತೆರಳಿ ಸನ್ನಿಧಿಗೋತು ಬಾ! ಏನೆಂಬೆರೆಯರಾರು? ॥ ೬ ॥
"ಎನಿತು ದಿನವಿರ್ದೇನಿದ್ಯೈಹಿಕ ।
ಮೆನಿಪುದಸ್ಥಿರವಿದರ ಕೆಳೆತನ ।
ಮೆನಗೆ ಬೇಡವೆನು"ತ್ತ ಸುಸ್ಥಿರಮೆನಿಪ ಪರಸುಖವ ॥
ನೆನೆದದಕೆ ಬಿಟ್ಟೆವ್ಮನೆಲ್ಲಾ ।
ವ್ಮನೆ ತಿಳಿಸದಲೆ ಹೋಹ ವಂಚಕ ।
ತನವಿದಕಟಾ! ಸರಿಯೆ ನಿನ್ನನ್ನರಿಗೆ ಗುರುರಾಯಾ! ॥ ೭ ॥
ಸುರನರೋರಗರೆಲ್ಲ " ಭಲೆ! ಭಾ ।
ಪುರೆ"!! ಎನುವಪೋಲ್ ಧನವಲಕ್ಷಾಂ ।
ತರವ ಕಷ್ಟಾರ್ಜಿತವ ವಿದ್ಯಕೆ ಸೂರೆಗೆಯ್ಯುತಲಿ ॥
ಪರಮಧನ್ಯತೆವೆತ್ತ ಗುರುವರ, ।
ಸರಿ ನಿನಗದಾರ್ ನಿಜಗುರುತ್ವದೆ ।
ಭರಿ ಸುಡಿಯ ಬಡಿವಾರನವರಿದ್ದೇನು! ಬಿದ್ದೇನು! ॥ ೮ ॥

ಇಂತನಂತ ಗುಣಪ್ರಭೂಷಣ।
ಎಂತು ಮರೆಯುವದಕ್ಕಟ! ನಿನ್ನನು।
ಚಿಂತೆಯಿಂದೇಂ! ತಿರುಗಿಬಾರದವ್ರೊಗೆ ಪೋದರೊಳು॥
ಶಾಂತಿಯಂ ನಿನಗೀಗ ಗೌರೀ।
ಕಾಂತನೆಂದಾಂ ಬೇಳ್ವಿ ವದದೊಳ।
ದೆಂತುಮಿಹದೊಳ್ ಕೀರ್ತಿಕಾಯನೆ! ನೀನು ಗುರುಸಿಂಹ॥೯॥

ಮ. ರಾ. ರಾ. ರಾವಜೀ ಬ. ಕರಂದೀಕರ ಇವರ ಸ್ವರ್ಗಯಾತ್ರೆಯಲ್ಲಿ ಶೋಕೋದ್ಗಾರವು:—

हाहंत हंत किमहो समुपागतं नो
मध्येऽन्हि चाऽस्तमगमद्दिवसाधिनाथः ॥
व्याप्तं जगद्धि तमसा मुदिरालिहीना
कोऽयं बतांबरतलादशनिः पपात ॥१॥

ಅರ್ಥ–ಅಯ್ಯೋ ನಮಗೆ ಹೊತ್ತಲ್ಲದ ಹೊತ್ತಿನಲ್ಲಿ ಇದೇನು ಬಂತು? ಮಧ್ಯಾಹ್ನದಲ್ಲಿಯೇ ಸೂರ್ಯನು ಅಸ್ತಮಿಸಿದನು. ಜಗತ್ತು ತಮಸ್ಸಿನಿಂದ ವ್ಯಾಪ್ತವಾಯಿತು. ಮೋಡಗಳಿಲ್ಲದ ಆಕಾಶದಿಂದ ಸಿಡಿಲು ಬಂದು ಬಿತ್ತಲ್ಲ!

मंदाकिनी वारिविहारिणं किं। नंदाम वृंदारकसुंदरीभिः ॥
निंदाम किं त्यक्तसमस्तबंधु। वृंदं करंदीकर तन्न विभ्रः ॥२॥

ಹಾ ಕರಂದೀಕರ ಸಾಹೇಬರೇ, ಮಂದಾಕಿನೀಜಲದಲ್ಲಿ ಸುರಸುಂದರಿಯರ ಕೂಡ ವಿಹಾರ ಮಾಡುವ ನಿಮ್ಮನ್ನು ಸ್ತುತಿಸೋಣವೇ? ಅಥವಾ, ನಿಮ್ಮೆಲ್ಲ ಬಂಧುವೃಂದವನ್ನು ದುಃಖದಲ್ಲಿ ನೂಕಿ ಹೋದದ್ದರಿಂದ, ನಿಂದಿಸೋಣವೇ?

स्नुषाया भारत्या ननु नियुयुजे प्रीणनकृते।
प्रतीक्ष्यामां श्वश्रूमपि बत करंदीकर सुधीः ॥
इति क्रोधांधेव स्वसहजदिनेशस्य तनय।
कृतांत प्राप्तांतं सपदिचरमेयं कृतवती ॥ २ ॥

ಅರ್ಥ–ದುಷ್ಟಳಾದ ಲಕ್ಷ್ಮಿಯು ತನ್ನನ್ನು ಸೊಸೆಯು (ವಿದ್ಯೆಯು) ಅಧೀನವಾಗಿ ಮಾಡಿದ್ದರಿಂದ (ಕರಂದೀಕರ ಸಾಹೇಬರು ಬಂದುವರೆ ಲಕ್ಷ್ಮ

ರೂಪಾಯಿ ವಿದ್ಯೆಯ ಸಲುವಾಗಿ ಕೊಟ್ಟದ್ದು ಪ್ರಸಿದ್ಧವದೆ) ಸಿಟ್ಟಿಗೆದ್ದು, ಅಯ್ಯೋ ಇವರನ್ನು ತನ್ನ ತಮ್ಮನ ಮಗನ ಅಧೀನರನ್ನಾಗಿ ಮಾಡಿದಳೇ!

ಸೋದ್ವೇಗಂ ಸಮುದೀಕ್ಷಿತಃ ಪರಿಜನೈರ್ದೂರೋಷ್ಮತಪ್ತಾಂತರೈಃ ।
ಸಾಸೂಯಂ ಸುರಶಾಖಿನಾ ಸ್ವಮಹಿಮಾವಿಚ್ಛೇದನಾಶಂಕಿನಾ ॥
ಸಾನಂದಂ ಪುನರನ್ಯಕಲ್ಪಲತಿಕಾಲಾಭೇನ ವೃದಾರಕೈಃ ।
ಸಾಕೂತಂಚ ರಿರಂಸಯಾಽಮರವಧೂವೃಂದೈಃ ಕರಂದಿಕ್ಕರಃ ॥ ೪ ॥

ಕರಂದೀಕ್ಕರರೇ, ನಿಮ್ಮನ್ನು ಬಂಧು ಜನರು ದುಃಖದಿಂದ ಪ್ರತೀಕ್ಷಿಸುವರು. ಕಲ್ಪವೃಕ್ಷವು ತನ್ನ ಮಹತ್ವವು ಕಡಿಮೆಯಾಯಿತೆಂದು ಹೊಟ್ಟೆಕಿಚ್ಚಿನಿಂದ ನೋಡುವದು! ಅನ್ಯಕಲ್ಪವೃಕ್ಷವು ಸಿಕ್ಕಿತೆಂದು ಸಂತೋಷದಿಂದ ದೇವತೆಗಳು ನೋಡುವರು! ಅಮರವಧುಗಳು ರಮಣೇಚ್ಛೆಯಿಂದ ಅಭಿಪ್ರಾಯಸಹಿತವಾಗಿ ನೋಡುವರು!

ತಮ್ಮ ವಿನಯಾನ್ವಿತ ಛಾತ್ರಾಗ್ರೇಸರ
ಕೇಶವ ರಂಗಭಟ್ಟ ಜೋಸಿ
ಶಾಲಾಧ್ಯಾಪಕ ಗಲಗಲಿ.

ಪತ್ರವ್ಯವಹಾರವು.

ಗುರುವರ್ಯ ರಾಯಸಾಹೇಬ ಕನ್ನಡ ಶಾಲಾಪತ್ರಿಕೆಯ ಎಡಿಟರರವರ ಸನ್ನಿಧಿಗೆ—

ತಮ್ಮ ಶಿಷ್ಯರಲ್ಲೊಬ್ಬನ ವಿನಂತಿ ಏನಂದರೆ, ನವಂಬರ ತಿಂಗಳ ಮಾಸಪತ್ರಿಕೆಯಲ್ಲಿ ಎ. ಭೀ. ಕುಲಕರ್ಣಿಯವರು ಕೊಟ್ಟ ಎರಡು ಗಣಿತದ ಉದಾಹರಣೆಗಳನ್ನು ನನ್ನ ಅಲ್ಪಮತಿಗೆ ತಿಳಿದ ಮಟ್ಟಿಗೆ ಬಿಡಿಸಿದ್ದೇನೆ. ಯೋಗ್ಯ ಕಂಡಲ್ಲಿ ಇದಕ್ಕೆ ತಮ್ಮ ಕರಕಮಲದಿಂದುದ್ಧರಿಸುವ ಪತ್ರಿಕೆಯಲ್ಲಿ ಸ್ಥಳ ದೊರೆತೀತೆಂದು ನಂಬಿದ್ದೇನೆ.

ಗನೇ ಉದಾಹರಣೆ— ೩೯೦ ಅಗಸೆಯೆನ್ನು ದಾಟಿ ರಾಜನಿಂದ ದಕ್ಷಿಣೆಯನ್ನು ಪಡೆದ ಬ್ರಾಹ್ಮಣರ ಸಂಖ್ಯೆಯು ಕ್ಷ ಇರುತ್ತದೆಂದು ತಿಳಿಯುವಾ.

ಇನ್ನು ಇವರ ಸಂಖ್ಯೆಯು ಇಡೀ ಬ್ರಾಹ್ಮಣರ ಸಂಖ್ಯೆಯ $\frac{2}{3}$ ಇರುವ ಕಾರಣ ಒಟ್ಟು ಬ್ರಾಹ್ಮಣರ ಸಂಖ್ಯೆಯು ೧೫೭೬ ಕ್ಷ ಆಯಿತು.

ಇನ್ನು ಒಳಗೆ ಹೋದ ಕ್ಷ ಜನರಿಗೆ ಗಣಿತ ಶ್ರೇಢಿಯ ಪ್ರಕಾರ ಮೊದಲನೆಯವನಿಗೆ ೨ ರೂ. ಎರಡನೆಯವನಿಗೆ ೫ ರೂ. ೩ನೆಯವನಿಗೆ

೮ ಕೂ. ಈ ಪ್ರಕಾರವಾಗಿ ದಕ್ಷಿಣೆಯು ದೊರೆತದ್ದರಿಂದ ೨ ಇದು ಆದಿ ಪದವು, ೩ ಇದು ಉತ್ತರ ಪದವು, ಕ್ಷ ಇದು ಗಚ್ಛ ಪದವು. ಇನ್ನು ಕ್ಷ ಜನರಿಗೆ ದೊರೆತ ದಕ್ಷಿಣೆಯನ್ನು ಪ್ರತಿಯೊಬ್ಬರು ಹಂಚಿಕೊಂಡರೆ ೧ ರೂಪಾಯಿ ಬರುವದೆಂದು ಹೇಳಿದ್ದರಿಂದ ಅವರಿಗೆ ೧೩೮ ಕ್ಷ ರೂಪಾಯಿಗಳು ದೊರೆತಿರಲಿಕ್ಕೇ ಬೇಕು. ಆದ್ದರಿಂದ ೧೩೮ ಕ್ಷ ಇದು ಸರ್ವ ಧನವು.

$$\{(\text{ಗಚ್ಛ}-೧)\times \text{ಉತ್ತರಪದ}+೨\ (\text{ಆದಿ})\}\ \frac{೨}{}\ \text{ಗಚ್ಛ} = \text{ಸರ್ವಧನ}$$

$$= \{(\text{ಕ್ಷ}-೧)\times ೩+೨\ (೨)\}\times \frac{೨}{}\ \text{ಕ್ಷ} = ೧೩೮\ \text{ಕ್ಷ}.$$

$$\therefore\ (೩\text{ಕ್ಷ}-೩+೪)\ \frac{೨}{}\ \text{ಕ್ಷ} = ೧೩೮\ \text{ಕ್ಷ}.$$

$$\therefore\ ೩\ \text{ಕ್ಷ}+೧ = ೨೫೬,$$

$$\therefore\ ೩\ \text{ಕ್ಷ} = ೨೫೫,$$

$$\therefore\ \text{ಕ್ಷ} = ೮೫.$$

ಇನ್ನು ಒಟ್ಟು ಬ್ರಾಹ್ಮಣರ ಸಂಖ್ಯೆಯು ೧೩೮ ಕ್ಷ ಇರುವದೆಂದು ಹೇಳಿರುತ್ತದೆ. ಆದ್ದರಿಂದ ಒಟ್ಟು ಬ್ರಾಹ್ಮಣರ ಸಂಖ್ಯೆ = ೧೩೮ × ೮೫ =
೧೦೮೮೦ ಬ್ರಾಹ್ಮಣರು ಉತ್ತರ.

೩ನೆಯ ಉದಾಹರಣೆ—ಮುತ್ತಿಗೆಯು ಮುಗಿದ ನಂತರ ಪ್ರತಿಯೊಂದು ಅಗಸೆಯಲ್ಲಿ ಕ್ಷ ಜನರು ಉಳಿದರೆಂದು ತಿಳಿಯುವಾ.

ಮೂರನೆಯ ಅಗಸೆಯವರು ಮುತ್ತಿಗೆಯನ್ನು ಓಡಿಸುವಾಗ ಅವರು ೧ನೆಯ ಹಾಗು ೨ನೆಯ ಅಗಸೆಯವರ ಕಡೆಯಿಂದ ತಮ್ಮಲ್ಲಿದ್ದಷ್ಟು ಜನರನ್ನು ಸಹಾಯಕ್ಕೆ ತಕ್ಕೊಂಡದ್ದರಿಂದ ಕೆಳಗೆ ಬರೆದ ಪ್ರಕಾರ ಪ್ರತಿಯೊಂದು ಅಗಸೆಯಲ್ಲಿ ಜನರು ಇದ್ದರು:—

$\frac{೧}{೩}$ ಕ್ಷ (೧ನೆಯ ಅಗಸೆ) $\frac{೧}{೩}$ ಕ್ಷ (೨ನೆಯ ಅಗಸೆ) $\frac{೧}{೩}$ ಕ್ಷ (೩ನೆಯ ಅಗಸೆ)

ಅದರಂತೆ ಎರಡನೆಯ ಅಗಸೆಯವರಾದರೂ ತಮ್ಮಲ್ಲಿದ್ದಷ್ಟು ಜನರನ್ನು ಪ್ರತಿಯೊಂದು ಅಗಸೆಯಿಂದ ತರಿಸಿದ್ದರಿಂದ ಆ ಕಾಲದಲ್ಲಿ ಪ್ರತಿಯೊಂದು ಅಗಸೆಯಲ್ಲಿ ಕೆಳಗೆ ಕೊಟ್ಟ ಪ್ರಕಾರ ಜನರು ಇದ್ದರು.

$\frac{೨}{೩}$ ಕ್ಷ (೧ನೆಯ ಅಗಸೆಯಲ್ಲಿ) $\frac{೨}{೩}$ ಕ್ಷ (೨ನೆಯ ಅಗಸೆಯಲ್ಲಿ) $\frac{೨}{೩}$ ಕ್ಷ (೩ನೆಯ ಅಗಸೆಯಲ್ಲಿ)

ಇದೇ ಪ್ರಕಾರವಾಗಿ ಮೊದಲನೆಯ ಅಗಸಿಗೆ ಮುತ್ತಿಗೆ ಹಾಕುವ ಮುಂದೆ ಪ್ರತಿಯೊಂದು ಅಗಸಿಯಲ್ಲಿ,

$\frac{೧೬}{೨೭}$ಹ $\frac{೨೮}{೨೭}$ಹ $\frac{೩೨}{೨೭}$ಹ್ಷ ಈ ಪ್ರಕಾರವಾಗಿ ಜನರಿದ್ದರು. ನೆವಗೆ ಉತ್ತರವು ಪೂರ್ಣ ಬರಬೇಕಾಗಿದ್ದರೆ ಹ್ಷ = ೨೭ ಅಥವಾ ೨೭ ರ ಪಟ್ಟುಗಳನ್ನು ಹಿಡಿಯಬೇಕು. ಹ್ಷ = ೨೭ ಹಿಡಿದರೆ

ಗಿಸೆಯ ಅ. ೨ನೆಯ ಅ. ೩ನೆಯ ಅ. } ಉತ್ತರ.

ಇನ್ನು ಇವುಗಳ ಮಡಿಗಳಾದ ೩೨, ೫೬, ೭೪ ಈ ಪ್ರಕಾರ ಹ್ಷ = ೨೭ರ ಬೇರೆ ಬೇರೆ ಪಟ್ಟುಗಳನ್ನು ಹಿಡಿದಂತೆ ಅಸಂಖ್ಯ ಉತ್ತರಗಳು ಬರುವವು.

ತಮ್ಮ ವಿಧೇಯ ಶಿಷ್ಯ.

ಹ. ಅ. ಆಥಣಿ.

೨ನೆಯ ವರ್ಷದ ವಿದ್ಯಾರ್ಥಿ. ಟ್ರೇ. ಕಾ. ಧಾರವಾಡ.

ಇದೇ ಪ್ರಕಾರ ಬಹಳ ಮಂದಿ ಶಾಲಾಧ್ಯಾಪಕರು ಮೇಲ್ಕಾಣಿಸಿದ ಉದಾಹರಣೆಗಳನ್ನು ಬಿಡಿಸಿ ಕಳುಹಿಸಿದ್ದಾರೆ. ಅವುಗಳನ್ನು ಮುದ್ರಿಸುವ ಅವಶ್ಯಕತೆ ತೋರುವದಿಲ್ಲ. ಎ. ಶಾ. ಪ.

ಶ್ರೀಯುತ ರಾ. ಸಾ. ಶಾಲಾಪತ್ರಿಕಾ ಕರ್ತರ ಸನ್ನಿಧಿಗೆ—

ತಮ್ಮ ಶಿಷ್ಯರಲ್ಲೋರ್ವನ ಶಿ. ಸಾ. ವಿನ್ನಹಗಳು. ಪೂಜ್ಯರೆ! ತಮ್ಮ ಮಾಸಪತ್ರಿಕೆಯಲ್ಲಿ ಕೆಳಗೆ ಕೊಟ್ಟ ಎರಡು ಉದಾಹರಣೆಗಳನ್ನು ಪ್ರಸಿದ್ಧಿಸಬೇಕೆಂದು ಅಪೇಕ್ಷಿಸುತ್ತೇನೆ:—

೧ನೆಯ ಉದಾಹರಣೆ:—ಒಂದು ಊರೊಳಗೆ ೩ ದೇವಾಲಯಗಳಿದ್ದವು. ಅವುಗಳ ಪೂಜೆ ಮಾಡುವದಕ್ಕಾಗಿ ಒಬ್ಬ ಬ್ರಾಹ್ಮಣನು ಎಷ್ಟೋ ಸಂಪಿಗೆ ಹೂವುಗಳನ್ನು ತಕ್ಕೊಂಡು ೧ನೆಯ ದೇಗುಲದ ಒಳಗೆ ಹೋಗಲು ಆ ಬ್ರಾಹ್ಮಣನ ಕೈಯಲ್ಲಿರುವ ಹೂಗಳ ಎರಡಪ್ಪು ಹೂಗಳಾದವು. ಆಗ್ಗೆ ಅವನು ಎಷ್ಟೋ ಹೂಗಳನ್ನು ದೇವರಿಗೆ ಅರ್ಪಿಸಿ ದೇಗುಲದ ಹೊರಬೀಳಲು, ಆಗ್ಯೂ ಅವನ ಕೈಯಲ್ಲಿರುವ ಹೂಗಳ ಇಮ್ಮಡಿ ಹೂಗಳಾದವು. ಅಲ್ಲಿಂದ ಅವನು ೨ನೆಯ ದೇಗುಲದ ಒಳ ಹೋಗುವಾಗಲೂ ಕೈಯ್ಯಲ್ಲಿರುವ ಹೂಗಳ ಇಮ್ಮಡಿ ಹೂಗಳಾದವು. ಅವನು ೧ನೆಯ ದೇಗುಲದಲ್ಲಿ ದೇವರಿಗೆ ಅರ್ಪಣ ಮಾಡಿದಷ್ಟೇ ಹೂಗಳನ್ನು ೨ನೆಯ ದೇಗುಲದಲ್ಲೂ ಅರ್ಪಿಸಿ ಹೊರ ಬೀಳಲು

ಅಲ್ಲಿಯೂ ಕೈಯಲ್ಲಿರುವ ಹೂಗಳ ಎರಡಷ್ಟು ಹೂಗಳಾದವು. ಅಲ್ಲಿಂದ ೩ನೆಯ ದೇಗುಲದ ಬಳಹೊಗಲು ಅಲ್ಲಿಯೂ ಕೈಯ್ಯಲ್ಲಿರುವ ಹೂಗಳ ೨ ಪಟ್ಟು ಆಗಲು, ಅಷ್ಟೂ ಹೂಗಳನ್ನೂ ದೇವರಿಗೆ ಅರ್ಪಿಸಿ ೩ನೆಯ ದೇವಾಲಯದಲ್ಲೂ ಸರಿಯಾಗಿ ಹೂಗಳನ್ನು ಅರ್ಪಿಸಿದೆನೆಂದು ಖಾತ್ರಿ ಮಾಡಿಕೊಂಡು ಹೊರಬೀಳುವಾಗ್ಗೆ ಅವನ ಬಳಿಯಲ್ಲಿ ಹೂಗಳಿರಲಿಲ್ಲ. ಆದರೆ ಅವನು ೧ನೆಯ ದೇವಾಲಯಕ್ಕೆ ಹೋಗುವಾಗ್ಗೆ ಒಯ್ದ ಹೂವುಗಳೆಷ್ಟು?

೨ನೆಯ ಉದಾ:— ಎರಡು ಮನುಷ್ಯರು ಪೇಟೆಯಲ್ಲಿ ಖೊಬ್ಬರಿ ಎಣ್ಣೆಯನ್ನು ಕೊಳ್ಳುವದಕ್ಕಾಗಿ ೧೦ ಸೇರಿನದೊಂದು ೭ ಸೇರಿನದೊಂದು ೩ ಸೇರಿನದೊಂದು ಹೀಗೆ ೩ ಪಾತ್ರೆಗಳನ್ನು ತಕ್ಕೊಂಡು ಹೋಗಿ ಎಣ್ಣೆಯು ತಮಗೆ ಬೇಕಷ್ಟು ದೊರೆಯದ್ದರಿಂದ ೧೦ ಸೇರು ಎಣ್ಣೆ ತಕ್ಕೊಂಡು ಬಂದರು. ಬರುವಾಗ್ಗೆ ಅವರೊಳಗೆ ಕಲಹ ಬಂದದ್ದರಿಂದ ಆ ಎಣ್ಣೆಯನ್ನು ಸರಿಯಾಗಿ ಎರಡು ಪಾಲು ತಮ್ಮಲ್ಲಿರುವ ೩ ಪಾತ್ರೆಗಳಿಂದಲೇ ಮಾಡಿಕೊಳ್ಳಬೇಕಾಯಿತು. ಆದರೆ ಅವರು ಹ್ಯಾಗೆ ಪಾಲು ಮಾಡಿಕೊಂಡರೆ ಪ್ರತಿಯೊಬ್ಬನಿಗೆ ರೀತಿಯಂತೆ ಪಾಲು ಸಿಗುವದು? ಬೇರೆ ಪಾತ್ರೆಗಳನ್ನು ತರಕೂಡದು.

ಇಂತಿ ಶಿರಸಾ॥ ಬಿನ್ನಹಂಗಳು.

ತಮ್ಮ ವಿಧೇಯ ಶಿಷ್ಯ.

P. I. EDEKAR,

ಸ್ಕೂಲ್ ಮಾಸ್ತರ.

ಹೂತನ ಜಾನಮನೆ.
ತಾ. ಶಿಸಿ ಜಿಲ್ಲಾ ಕಾರವಾರ.
ತಾರೀಖು ೧೫ – ೧೨ – ೧೩

ಸಂಪುಟದ ಸಮಾಪ್ತಿಯಿಂದ ವಿಜಾಪುರ ಜಿಲ್ಲೆಯೊಳಗಿನ ಸ್ಥಳಗಳ ಎತ್ತರಗಳು.

(ದಿಶಂಬರ ತಿಂಗಳ ಸಂಚಿಕೆಯ ಲನೆಯ ಪುಟದಿಂದ ಮುಂದೆ ಸಾಗಿದ್ದು.)

ತಾಲೂಕ ಮುದ್ದೇಬಿಹಾಳ.

೨೯. ಸುರೂರ	೧೮೮೩ಫೂ.	೩೪. ತಾರನಾಳ	೧೮೮೩ಫೂ.
೩೦. ಸಾಲವಾಡಗಿ	೧೭೯೨ ,,	೩೫. ತುಂಬಗಿ	೧೭೩೫ ,,
೩೧. ತಾಳೀಕೋಟಿ	೧೬೫೦ ,,	೩೬. ಎಲಗೂರ	೧೬೧೮ ,,
೩೭. ತಮದಡಿ	೧೭೪೬ ,,	೩೭. ನಾಗರಾಳ	೧೬೫೮ ,,
೩೮. ತಂಗಡಿಗಿ	೧೭೭೫ ,,	೩೮. ನಾಗಬನಾಳ	೧೭೦೫ ,,

೮. ಸಿಂದಿಗ ತಾಲೂಕ.

೧. ಸಿಂದಿಗಿ	೧೬೮೪ಫೂ.	೨೨. ಹಿಟ್ಟನಹಳ್ಳಿ	೧೫೭೩ಫೂ.
೨. ಆಲಗೂರ	೧೬೯೫ ,,	೨೩. ಜೂಲವಾದಿ	೧೭೬೦ ,,
೩. ಆಲಮೇಲ	೧೫೦೬ ,,	೨೪. ಕಡಣಿ	೧೪೦೪ ,,
೪. ಅಸ್ಕಿ	೧೭೨೫ ,,	೨೫. ಕಲಕೇರಿ	೧೭೯೫ ,,
೫. ಬಳಗಾನೂರ	೧೫೬೦ ,,	೨೬. ಕನ್ನೊಳ್ಳಿ	೧೬೩೩ ,,
೬. ಬೆಕ್ಕಿನಾಳ	೧೫೬೮ ,,	೨೭. ಕೊಕಟನೂರ	೧೭೫೩ ,,
೭. ಬಿಂಜಲಬಾವಿ	೧೭೬೯ ,,	೨೮. ಕೊಂಡಗುಳಿ	೧೭೯೮ ,,
೮. ಬೊಮ್ಮನಜೋಗಿ	೧೬೬೯ ,,	೨೯. ಕೊರವಾರ	೧೭೫೩ ,,
೯. ಬ್ಯಾಕೋಡ	೧೬೬೫ ,,	೩೦. ಕೋರಹಳ್ಳಿ	೧೫೭೩ ,,
೧೦. ಚಾಂದಕವಟೆ	೧೫೩೨ ,,	೩೧. ಕುಮಸಿ	೧೭೬೦ ,,
೧೧. ಚಟ್ಟರಿಕಿ	೧೬೪೨ ,,	೩೨. ಮಲಘಾಣ	೧೫೩೪ ,,
೧೨. ದೇವಣಗಾವಿ	೧೭೫೮ ,,	೩೩. ಮೊರಟಗಿ	೧೪೬೯ ,,
೧೩. ದೇವರನಾವದಗಿ	೧೪೦೭ ,,	೩೪. ಮುಳಸಾವಳಗಿ	೧೬೫೦ ,,
೧೪. ಡಬ್ಬಸಾವಳಗಿ	೧೪೬೧ ,,	೩೫. ಸಾಗಾವಿ	೧೪೭೦ ,,
೧೫. ಗಣಿಹಾರ	೧೫೯೯ ,,	೩೬. ಪಡಗಾನೂರ	೧೬೯೪ ,,
೧೬. ಗುಬ್ಬೆವಾಡ	೧೬೬೫ ,,	೩೭. ರೊಗಿ	೧೬೭೦ ,,
೧೭. ಗೊಲಗೇರಿ	೧೬೪೩ ,,	೩೮. ಸುರಗೀಹಳ್ಳಿ	೧೫೮೦ ,,
೧೮. ಗುಂದಗಿ	೧೫೧೪ ,,	೩೯. ತಿಳಗುಳ	೧೭೭೧ ,,
೧೯. ಹುಂದಿಗನೂರ	೧೫೮೭ ,,	೪೦. ಎಂಕಂಚಿ	೧೫೪೬ ,,
೨೦. ಹಿಪ್ಪರಿಗಿ	೧೭೦೯ ,,	೪೧. ಯರಗಲ್ಲ	೧೫೬೫ ,,
೨೧. ಬೂದಿಹಾಳ ಸ. ಹಿಪ್ಪರಿಗಿ	೧೬೧೧ ,,		

ಅಲಂಕಾರದಕರ್ಣ–ಪ್ರತ್ಯನೀಕಾಲಂಕಾರವು.

(ದಿಶೆಂಬರ ತಿಂಗಳ ಸಂಚಿಕೆಯ ೩೦ನೆಯ ಪುಟದಿಂದ ಮುಂದೆ ಸಾಗಿದ್ದು.)

ಭಾಮಿನಿ ॥ ಎನ್ನಗುಣರೂಪಗಳ ಕೀರ್ತಿಗ ।
ಳನ್ನು ಭುವಿಯಲಿ ಕಳೆದ ನಳನಲಿ ।
ಚನ್ನೆ! ಮಾನಸವನ್ನದಿಟ್ಟಹಳಿಂದು ಮನ್ಮಥನು ॥

ನಿನ್ನೊಳಗೆ ಮತ್ಸರವ ತಳೆದಿಹ।
ನೆನ್ನುವಂತಿರೆ ಕಾರಣವಿಲ್ಲದೆ।
ಖಿನ್ನಬಡಿಸುವನಕಟ! ಬಿಡದಲೆ ಪಗಲಿರುಳುಗಳಲಿ ॥

ಇಲ್ಲಿ ಬಲವುಳ್ಳ ಶತ್ರುವಾದ ನಳನನ್ನು ಪ್ರೀತಿಸುವ ದಮಯಂತಿಯನ್ನು ಕಾಮನು ಕಷ್ಟಪಡಿಸುವನೆಂದು ಹೇಳಿದೆ. ಬಲವುಳ್ಳ ಶತ್ರುವಿನೊಡನೆ ಕಾದಲು ಅಶಕ್ತನಾದವನು ಅವರ ಸಂಬಂಧಿಕರನ್ನು ಬಾಧೆಪಡಿಸುವದು ಪತ್ಯನೀಕವೆನಿಸುವದು. ಕಾರಣ ಸಾಕ್ಷಾತ್ ಶತ್ರುವಿನೊಡನೆ ಪರಾಕ್ರಮವನ್ನು ತೋರಿಸಿದಲ್ಲಿಯೂ ಇದೇ ಅಲಂಕಾರವಾಗುವದು. ಉದಾ:—

ಕಂದ ॥ ಮಧುಕರಗಳ್ಕೈದೆ ತಮ್ಮಯ।
ಮಧುಪಾತ್ರೆಯರೂಪವಾದ ಪದ್ಮಂಗಳನು ॥
ವಿಧು ಮುಚ್ಚಿದನೆನುತವನ ನು।
ವದನದೆ ಮುನುಕುತ್ತ ಕುಪಿನಿಗೈದವು ಕಲೆಯರ ॥

ಇಲ್ಲಿ ಮಧುಕರಗಳು ತಮಗೆ ಪೀಡೆಯನ್ನುಂಟುಮಾಡಿದ ಚಂದ್ರನಿಗೆ ಕಲೆಯನ್ನುಂಟುಮಾಡಿದವೆಂದು ಹೇಳಿವೆ. ಕಾರಣ ಸಾಕ್ಷಾತ್ ಶತ್ರುವಿನೊಡನೆ ಪರಾಕ್ರಮ ತೋರಿಸಿದರಂತಾಯಿತು.

೫೯. ಕಾವ್ಯಾರ್ಥಾಪತ್ಯಲಂಕಾರವು. ಲಕ್ಷಣ:—ಹೆಚ್ಚಿನ ಕೆಲಸವನ್ನು ಮಾಡಿದವನಿಂದ ಇಂಥ ಸಣ್ಣ ಕೆಲಸವು ಆಗುವದು ಏನಾಶ್ಚರ್ಯವು? ಎಂಬ ಮಾತು ಕೈಮುತಿಕನ್ಯಾಯದಿಂದ ಫಲಿಸುವದು. ಅಂದರೆ ಕಟ್ಟಾಹದೊಳಗಿನ ದ್ರವ್ಯವು ಸವುಟನ್ನು ಆಕರ್ಷಿಸುವದರಿಂದ ಅದಕ್ಕೆ ಹತ್ತಿದ ಅನಾರಸಾದಿ ಪದಾರ್ಥಗಳು ಹೇಗೆ ಆಕರ್ಷಿಸಲ್ಪಡುವವೋ, ಹಾಗೆ ಒಂದರಿಂದ ಮತ್ತೊಂದು ಅರ್ಥವು ತಾನೇ ಸಿದ್ಧವಾಗುವದು. ಇಂಥಲ್ಲಿ ಈ ಅಲಂಕಾರವಾಗುವದು. (ಕಿಮುತಸ್ಯಭಾವಃ ಕೈಮುತ್ಯಂ, ಏನಾಶ್ಚರ್ಯವು?) ಉದಾ:—

ಕಂದ ॥ ನಿನ್ನಯ ಮೊಗವಾಯಿಂದುವೆ।
ಮುನ್ನಮೆ ಜಯಿಸಿರಲು ಕಮಲವಾರ್ತೆಯದಿನ್ನೇಂ ॥

ಅರ್ಥ—ನಿನ್ನ ಮೊಗವು ಕಮಲಗಳನ್ನು ಸಂಕೋಚಿಸಿದ ಚಂದ್ರನನ್ನು ಗೆದ್ದಿರಲು ಕಮಲಗಳನ್ನು ಗೆದ್ದಿತೆಂಬ ಮಾತನ್ನು ಹೇಳಬೇಕಾಗಿಲ್ಲ. ಇಲ್ಲಿ

ಪೊಗವ ಚಂದ್ರನನ್ನು ಗೆದ್ದಿತೆಂಬ ಅರ್ಥವು ಕೈಮುತಿಕನ್ಯಾಯದಿಂದ ಫಲಿಸುವದು.

ಕಂದ ॥ ರಾಜನೆ ನಿನ್ನೆದುರಿಗೆ ಸುರ ।
ಭೂಜನೆ ನಿಂತಿರಲು ಹಾರುವರ ದಾರಿದ್ರ್ಯಂ ॥
ಈಜಗದೆ ತಮವುಸೂರ್ಯನ ।
ಮೇಜಿನ ಮೇಲೇರಿ ಸಾಜದಿಂ ಕೂಡುವೆದ್ಯೈ ॥

ಇಲ್ಲಿ 'ರಾಜನ ಎದುರಿಗೆ ದಾರಿದ್ರ್ಯವು ನಿಲ್ಲಲು' ಎಂಬ ನ್ಯೂನಾರ್ಥದಿಂದ 'ಸೂರ್ಯನೆ ಮುಂದೆ ತಮವು ನಿಲ್ಲುವದು' ಎಂಬ ಅಧಿಕಾರ್ಥವು ಸಿದ್ಧವಾಗುವದು. ಆದರೆ ನ್ಯೂನಾರ್ಥವಿಷಯತ್ವದಿಂದ ಅಧಿಕಾರ್ಥಾಪತ್ತಿಯು ಕೈಮುತಿಕ ನ್ಯಾಯದಿಂದೆ ಆಗದು. ಕಾರಣ ಇಂಥಲ್ಲಿ ಕಾವ್ಯಾರ್ಥಾಪತ್ಯಲಂಕಾರವಾಗದು.

ಭಾವಿನಿ॥ ಬಂಧುಜೀವಪ್ರಭೆಯನುಳಿಸದ ।
ಸುಂದರಿಯ ತುಟಿಯಂದವೀಕ್ಷಿಸಿ ।
ನಿಂದವರ ಜೀವಗಳ ಪ್ರಭೆಯನೆದಕಟಿ ಉಳಿಸುವದೇ? ॥

ಇಲ್ಲಿ ಬಂಧುಗಳ ಜೀವವನ್ನು ಉಳಿಸದವನು ಬೇರೆ ಜನರ ಜೀವವನ್ನು ಉಳಿಸನೆಂಬ ಅರ್ಥವು ಕೈಮುತಿಕನ್ಯಾಯದಿಂದ ಫಲಿಸುವದು. (ದಾಶಾಳದ ಹೂವಿಗಿಂತ ಕೆಂಪಾಗಿರುವ ಇವಳ ತುಟಿಯ ಶೋಭೆಯು ನೋಡುವವರ ಸ್ಮೃತಿಯನ್ನು ತಪ್ಪಿಸುವದೆಂಬದು ಸ್ವಾಭಾವಿಕವು.)

---

೬೦. ಕಾವ್ಯಲಿಂಗಾಲಂಕಾರವು ಲಕ್ಷಣ:— ಸಮರ್ಥನಾಪೇಕ್ಷವಾದ ಅರ್ಥವನ್ನು ಸಮರ್ಥಿಸಿದಲ್ಲಿ ಈ ಅಲಂಕಾರವಾಗುವದು. ಇಲ್ಲಿ ಸಮರ್ಥನಾಪೇಕ್ಷವಾದ ಅರ್ಥವನ್ನು ಸಮರ್ಥಿಸಲಿಕ್ಕೆ ಬೇರೊಂದು ವಾಕ್ಯಾರ್ಥವಾಗಲಿ ಪದಾರ್ಥವಾಗಲಿ ಹೇತುವಾಗಿರುವದು. ಉದಾ:—

ಕಂದ॥ ಸತ್ಪೆ! ಎಲೊ! ಮೂಢಮುದನನೆ ।
ಚಿತ್ತದೊಳಿದ್ದವನು ಮೂರು ಕಣ್ಣಿನ ಶಿವನು ॥

ಇಲ್ಲಿ 'ಕಾಮನು ಸಾಯುವನು,' ಎಂಬ ಅರ್ಥವು ದುಷ್ಕರ ವಿಷಯತ್ವವಾದದ್ದು. ಕಾರಣ ಇದು ಸಮರ್ಥನೆಯನ್ನು ಅಪೇಕ್ಷಿಸುವದು. ಇದನ್ನು ಸಮರ್ಥಿಸಲಿಕ್ಕೆ "ಚಿತ್ತದೊಳು.....ಶಿವನು" ಎಂಬ ವಾಕ್ಯಾ

ರ್ಥವು ಹೇತುವಾಗಿರುವದು. ಕಾರಣ ಇದು ವಾಕ್ಯಾರ್ಥಹೇತುಕಕಾ
ವ್ಯಲಿಂಗವೆನಿಸುವದು. ಮತ್ತೆ ಉದಾ:—

ಕಂದ॥ ಸರಳಾದ ಸಕ್ಕದಂಗಳ।
ವಿರಲದೆ ಬೆರಸಿಹೆನು ಹಲವು ಕಬ್ದಂಗಳನು॥
ನೆರೆ ಪಳಗನ್ನಡವುಳಿದೆನು।
ವರಪ್ರೌಢರ ಕ್ರೋಶ್ವಿನೆಂಬ ಬಹುಭೀತಿಯಲಿ॥

ಇದು ಗ್ರಾಮ್ಯಜನವರ್ಣನಾಶತಕದ ಪಸ್ತಾವನೆಯ ಪದ್ಯವು. ಇಲ್ಲಿ "ಸರಳ ಸಂಸ್ಕೃತಗಳನ್ನು ಬೆರಸಿದೆನು. ಪಳಗನ್ನಡಗಳನ್ನು ಬಿಟ್ಟೆನು" ಎಂಬ ವಾಕ್ಯಾರ್ಥಗಳನ್ನು ಸಮರ್ಥಿಸಲು "ವರಪ್ರೌಢರ....ಭೀತಿಯಲಿ" ಎಂಬ ವಾಕ್ಯಾರ್ಥವು ಹೇತುವಾಗಿರುವದು. ಮತ್ತೆ ಉದಾ:—

ಭಾವಿನಿ॥ ಸ್ಮರಿಸುವೆನು ಕೆಲರಿನ್ನು ನನ್ನಯ।
ಪರಮ ಪರಿಚಿತರಾದ ಕವಿಗಳ।
ವರಸುಮತಿಯನು ಕೊಡುವುದೆನ್ನಯ ಕಾವ್ಯದೊಳಗೆಂದು॥
ವರಕವಿಯ ನರಕವಿಯ ಭೇದವ।
ನರಿಯೆ ಕವಿಗಳ ಸಂಘದಲಿ ನೆರೆ।
ಧರೆಯ ಕವಿಗಳೆ ನನಗೆ ಬಾಂಧವರೆಂಬ ಕಾರಣದೆ॥

ಇದು ಇದೇ ಗ್ರಂಥದ ಮಂಗಲಾಚರಣದ ಪದ್ಯವು. ಇಲ್ಲಿ "ಸ್ಮರಿಸುವೆನು" ಎಂಬ ವಾಕ್ಯಾರ್ಥವನ್ನು ಸಮರ್ಥಿಸಲು "ವರಸುಮತಿ.....ಗೆಂದು" ಎಂಬ ವಾಕ್ಯಾರ್ಥವು ಹೇತುವಾಗಿರುವದು. "ವರಕವಿಯ.....ಭೇದವನರಿಯೆ" ಎಂಬ ವಾಕ್ಯಾರ್ಥವನ್ನು ಸಮರ್ಥಿಸುವ ಹೇತುವು ಸ್ಪಷ್ಟವಾಗಿ ಕವಿಯಿಂದಲೇ ಉಕ್ತವಾಗಿದೆ. ಮತ್ತೆ ಉದಾ:—

ವಾರ್ಧಿಕ॥ ಇಮ್ಮಡಿಯ ಸುಖವಾಗಲಾ ಭಸ್ಮಲೇಪಕ್ಕೆ।
ಮುಮ್ಮಡಿಯ ಸುಖವುಕ್ಕೆ ರುದ್ರಾಕ್ಷವಾಲೆಗಾ।
ಹೆಮ್ಮೆಟ್ಟದಿಹ ಸೌಖ್ಯವಾಗಲಾಶಿವನಿಲಯ ಸೋಪಾನ
ಪಂಕ್ತಿಗಳಿಗೆ॥
ನಿಮ್ಮ ಪೂಜೆಗಳನೀಕ್ಷಿಸುವ ಸುಖವಿಲ್ಲದಿಹ।
ಸುಮ್ಮನೀ ಮೋಕ್ಷವೆಂಬೀ ಮಹಾಮೋಹದಲಿ।
ನಿಮ್ಮನೀಕ್ಷನು ಮುಳುಗಿಸಿದನಿಂದು ತುಷ್ಟನಾಗೆನ್ನವ್ರತದೆ॥

ಇಲ್ಲಿ 'ಮೋಕ್ಷವೆಂಬೀ ಮಹಾ ಮೋಹದಲಿ' ಎಂಬ ಪದಾರ್ಥವನ್ನು ಸಮರ್ಥಿಸಲು 'ನಿಮ್ಮ ಪೂಜೆಗಳನೀಕ್ಷಿಸುವ ಸುಖವಿಲ್ಲದಿಹ, ಎಂಬ ವಾಕ್ಯಾರ್ಥವು ಹೇತುವಾಗಿರುವದು. ಮತ್ತೆ ಉದಾ—

ಕಂದ॥ ಮೊನ್ನೆಯೆ ರೊಕ್ಕವ ಕೊಟ್ಟೆನು।
ಜನ್ನನೆ, ಅಗಿಲ್ಲವಿನ್ನು ಹನ್ನೊಂದು ದಿನಂ॥
ಇನ್ನೊಂದಕ್ಕರ್ಕಲಿಸದ।
ಮುನ್ನಮೆ ಫೀರೊಕ್ಕವೆಂತು ಬೇಡುವೆ ನೀನು॥

(ಗ್ರಾಮ್ಯ. ಶತಕ)

ಇಲ್ಲಿ ಪೂರ್ವಾರ್ಧದಿಂದ ಸೂಚಿತವಾಗುವ 'ಹಗಲೆಲ್ಲ ಫೀ ಬೇಡ ಬೇಡ, ಎಂಬ ಅರ್ಥವನ್ನು ಸಮರ್ಥಿಸಲು 'ಇನ್ನೊಂದಕ್ಕರ ಕಲಿಸದ ಮುನ್ನಮೆ, ಎಂಬ ವಾಕ್ಯಾರ್ಥ ಹೇತುವಾಗಿರುವದು. ಮತ್ತೆ ಉದಾ:—

ಭಾಮಿನಿ॥ ಭದ್ರಮೆಕ್ಕೆ ಸುಭಸ್ಮಲೇಪಕೆ।
ಭದ್ರಮದು ರುದ್ರಾಕ್ಷವಾಲೆಗೆ।
ರುದ್ರನಾಲಯದೆಡೆಯ ಸೋಪಾನದ ಪರಂಪರೆಗೆ॥
ಭದ್ರ, ನಿಮ್ಮ ತದರ್ಚನಾಸುಖ।
ಕ್ಷಿದ್ರಿಸುವ ತನ್ಮೋಕ್ಷರೂಪದ।
ನಿದ್ರೆಯಲಿ ಮುಳುಗಿದೆವು ತುಷ್ಟಿಯೊಳದ್ರಿಜಾಧವನೆ॥

ಇಲ್ಲಿ 'ಮೋಕ್ಷರೂಪದ ನಿದ್ರೆಯಲಿ, ಎಂಬ ಪದಾರ್ಥವನ್ನು ಸಮರ್ಥಿಸಲು 'ತದರ್ಚನಾಸುಖಕ್ಷಿದ್ರಿಸುವ' ಎಂಬ ಪದಾರ್ಥವು ಹೇತುವಾಗಿರುವದು. ಮತ್ತೆ ಉದಾ:—

ಭಾಮಿನಿ॥ ಚಂದದೀಕರಯುಗಲದಿಂ ಕ್ರಮ।
ದಿಂದೆ ಧರಣಿಯ ಕುಜನ ಸುಜನರ।
ವಂದಿಸುವೆನತ್ಯಂತ ಕುಟಿಲ ವಿಶೇಷಗುಣದವರ॥
ಒಂದು ಕಡೆಯಲಿ ಭೀತಿಯಿಂ ಮ।
ತ್ತೊಂದು ಕಡೆಯಲಿ ಪ್ರೀತಿಯಿಂ ನೆರೆ।
ಸಂದ ವೈರಕೆ ಪರವು ಸೌಖ್ಯಕೆ ಪಾತ್ರರಾದವರ॥

(ಮಂಗಲಾಚರಣ ನೋಡು)

ಇಲ್ಲಿ 'ಕುಜನ ಸುಜನರನು ವಂದಿಪೆನು' ಎಂಬ ಅರ್ಥವನ್ನು ಸಮ

ರ್ಥಿಸಲಿಕ್ಕೆ ಕ್ರಮವಾಗಿ 'ಭೀತಿ ಪ್ರೀತಿ' ಎಂಬ ಪದಗಳ ಅರ್ಥಗಳು ಹೇತುಗಳಾಗಿರುವವು. ಮತ್ತೆ ಉದಾ:—

ಭಾಮಿನಿ ॥ ಮೋಸವಿದರೊಳಗೇನು? ಪೂರ್ವದ ।
ಭಾಷೆಯಲಿ ಕವಿತೆಗಳ ರಚಿಸಲು ।
ದೂಷಿಪರು ಕದ್ದಿಹನು ಪದಪಾದಾದಿಗಳನೆಂದು ॥
ತೋಷಿಸಲಿ ರೋಷಿಸಲಿ ಜನರುರೆ ।
ಪೋಷಿಸಲಿ ದೂಷಿಸಲಿ ಧರೆಯಲಿ ।
ಘೋಷಿಸುವೆನೀಗೆನ್ನ ಸ್ವಾಭಾವಿಕದ ಭಾಷೆಯನು ॥
(ಮಂಗಲಾಚರಣ ನೋಡು)

ಇಲ್ಲಿ 'ಪದಪಾದಾದಿ ಚೋರನೆಂದು ದೂಷಿಸಬಾರದು' ಎಂಬ ಅರ್ಥವನ್ನು ಸಮರ್ಥಿಸಲು 'ಪೂರ್ವದ ಭಾಷೆಯಲಿ' ಎಂಬ ಪದಾರ್ಥವು ಹೇತುವಾಗಿರುವದು. ಮತ್ತೆ ಉದಾ:—

ಭಾಮಿನಿ ॥ ದೇಶದಲಿ ಧನ್ಯಗಳು ವಿದುಷಿಯ ।
ಳಾಶಿರದೆ ಧರಿಸಿರುವ ಕೇಶದ ।
ಪಾಶಗಳು ಪಶುಗಳಿಗು ಕೀಳ್ತರವಾದ ಚಾನುರದ ॥
ಕೇಶಗಳಿಗವು ಸರಿಸಸೆಂಬುದು ।
ಭೂಷಣವೆ! ಜಗದೊಳಗದಾವನು ।
ಭಾಷಿಸುವನಿವಳಳಕ ಸಂಚಕಯುಗಳಿಗ ಸಾಮ್ಯವನು ॥

ಇಲ್ಲಿ 'ಚಾಮರದ ಕೇಶಗಳು ದಮಯಂತಿಯ ಕೇಶಗಳಿಗೆ ಸಾಮ್ಯಗಳಲ್ಲ' ಎಂಬ ಅರ್ಥವನ್ನು ಸಮರ್ಥಿಸಲು ವಿದುಷಿಯಳಾಶಿರದೆ ಧರಿಸಿರುವ' ಎಂಬ ವಾಕ್ಯಾರ್ಥವೂ 'ಪಶುಗಳಿಗು ಕೀಳ್ತರವಾದ' ಎಂಬ ಪದಾರ್ಥಗಳೂ ಪರಸ್ಪರಸಾಪೇಕ್ಷೆಗಳಾಗಿ ಹೇತುಭಾವವನ್ನು ಹೊಂದಿವೆ. ಇಲ್ಲಿ ಉಪಮಾನದ ನಿಂದೆಯಿಂದಲೇ ಅಳಕಸಾಮ್ಯಾಭಾವತ್ವವು ಸಿದ್ಧವಾಗುವದೆಂದು ಕವಿಗಳ ಮತವದೆ. ಕಾರಣ ಇದು ಬೇರೆ ರೀತಿಯ ಸಮರ್ಥನೆಗೆ ನಿರಪೇಕ್ಷವಾಗಿದೆ. (ಕೀಳ್ತರವಾದ=ಆದರಿಸದಂಥ; ಹಿಂದುಗಡೆಯಲ್ಲಿರುವ). ಮತ್ತೆ ಉದಾ:—

ಕುಸುಮ ॥ ಆಗಲಿಲ್ಲವ ವಿಷದೊ ।
ಳಾಗಿಲ್ಲವನಳನೊಳ ।
ಗಾಗಿಲ್ಲವಯ್ಯ! ಮೃತ್ಯುವಿನಿಂದಲು ॥

ಆಗಿಹರು ಸ್ತ್ರೀಯರುಗ ।
ಳಾಗಲಾ ಸ್ತ್ರೀಯರಿಂ ।
ಸಾಗದ ಪ್ರತೀಕಾರ ಪಾರುಷ್ಯರು ॥

ಅರ್ಥ–ಸ್ತ್ರೀಯರು ವಿಷ-ಬೆಂಕಿ ಮೊದಲಾದವುಗಳಲ್ಲಿ ಮಾಡಲ್ಪಟ್ಟಿದ್ದರೆ ವಿಷಶಮನದ ಔಷಧ, ನೀರು ಮೊದಲಾದವುಗಳಿಂದ ಅವರ ಪೀಡೆಯನ್ನು ಕಡಿಮೆ ಮಾಡಬಹುವಾಗಿತ್ತು. ಆದರೆ ಸ್ತ್ರೀಯರು ಸ್ತ್ರೀಯರಿಂದಲೇ ಮಾಡಲ್ಪಟ್ಟಿದ್ದಾರೆ. ಕಾರಣ ಪ್ರತೀಕಾರವು ಸಾಗದಂಥ ಕ್ರೂರತನವುಳ್ಳವರಾಗಿದ್ದಾರೆ. ಇಲ್ಲಿ 'ಸ್ತ್ರೀಯರು ಸ್ತ್ರೀಯರಿಂದಲೇ ಆಗಿಹರು' ಎಂಬ ವಾಕ್ಯಾರ್ಥದಿಂದ 'ಸಾಗದ ಪ್ರತೀಕಾರಪಾರುಷ್ಯರು' ಎಂಬ ಪದಾರ್ಥವು ಸಮರ್ಥಿತವಾಗಿದೆ. ಇಲ್ಲಿ ಸ್ತ್ರೀಯರಲ್ಲಿ ವಿಷಾದಿ ನಿರ್ಮಿತತ್ವಗಳನ್ನು ಕಲ್ಪಿಸುವದರಿಂದಲೇ ಅರ್ಥವು ಸಮರ್ಥಿಸಲ್ಪಡುವದು. ಕಾರಣ ಇದು ಬೇರೆ ರೀತಿಯ ಸಮರ್ಥನೆಗೆ ನಿರಪೇಕ್ಷವಾಗಿದೆ. ಇವೆರಡೂ ಉದಾಹರಣಗಳಲ್ಲಿಯೆ ಅರ್ಥಗಳಲ್ಲಿ ಸಮರ್ಥನಾಪೇಕ್ಷೆಯು ಇರದಿದ್ದರೂ ಇವು ಕವಿಸಮಯದಲ್ಲಿ ಪ್ರಸಿದ್ಧವಾದವುಗಳಾಗಿವೆ. ಮತ್ತೆ ಉದಾ:—

ಭಾಮಿನಿ॥ ಎನ್ನದೇಹೊತ್ಪನ್ನದಿಂದಲೆ ।
ಮುನ್ನದಾವಾಗಳದುವೆಲ್ಲಿಯು ।
ನಿನ್ನನ್ನು ನಮಿಸಿಲ್ಲನಾನೆಂಬುವದು ತಿಳಿಯುವದು ॥
ಇನ್ನು ಸಂಪ್ರತಿ ನಮಿಸಿ ಮುಕ್ತನು ।
ನಿನ್ನನ್ನು ನಾನತನು ನಮಿಸೆನು ।
ಸನ್ಮತೀಶನೆ! ಕ್ಷಮಿಸು ನನ್ನೀಯೆರಡು ತಪ್ಪುಗಳಂ ॥

ಇಲ್ಲಿ ಎರಡು ಅಪರಾಧಗಳು ಸಮರ್ಥಿಸತಕ್ಕವುಗಳಾಗಿವೆ. ಇವು 'ಹಿಂದಿನ ಜನ್ಮದಲ್ಲಿ ನಮಿಸಿಲ್ಲ, ಈ ಜನ್ಮದಲ್ಲಿ ನಮಿಸುವದಿಲ್ಲ' ಎಂಬ ವಾಕ್ಯಾರ್ಥಗಳಿಂದ ಸಮರ್ಥಿತವಾಗಿವೆ. ಎರಡನೇ ವಾಕ್ಯದಲ್ಲಿ 'ಅತನುತ್ವ' ಎಂಬದೊಂದೇ ಪದಾರ್ಥವು ಹೇತುವಾಗಿದೆ. ಇದಕ್ಕಾದರೂ 'ಸಂಪ್ರತಿ ನಮಿಸಿ ಮುಕ್ತನು' ಎಂಬ ವಾಕ್ಯಾರ್ಥವು ಹೇತುವಾಗಿದೆ. ಅಂದರೆ ಸಮರ್ಥನೀಯವಾದ ಅರ್ಥವನ್ನು ಸಮರ್ಥಿಸುವ ವಾಕ್ಯಾರ್ಥದಲ್ಲಿ ಬಿಂದು ಪದಾರ್ಥವು ಹೇತುವಾದಂತಾಯಿತು. ಮತ್ತೆ ಉದಾ

ಭಾವಿನಿ ॥ ಅವಳತಪದುಗ್ರತ್ವ ಸಹಿಸದ ।
ಶಿವೆಯ ಸವಿನುಡಿಗಳಿಗೆ ಮೆಚ್ಚಿದ ॥
ಕವಡು ವಟುವೇಷವನು ಕಳೆಯಲಿಬೊಮ್ಮಲೇ ಮನವಂ ॥
ಜವದಿ ಶಿಥಿಲತೆಯೊಳಗು ಬೆರಸಿದ ।
ಶಿವನು ಸಮ್ಮದವನ್ನೆದೀಯಲಿ ।
ಭುವಿಯು ನರರನುಭವಿಪ ಕಷ್ಟಂಗಳನು ಪರಿಹರಿಸಿ ॥

ಇಲ್ಲಿ ಶಿವನು "ಕೃತ್ರಿಮವೇಷವನ್ನು ಜವದಿ ಬಿಡಬೇಕೆನ್ನುವ ಹಾಗು ಕೆಲವು ಕಾಲ ಅದೇ ವೇಷದಲ್ಲಿರಬೇಕೆನ್ನುವ" ಎಂಬ ಪರಸ್ಪರ ವಿರುದ್ಧವಾದ ಎರಡು ಅರ್ಥಗಳು ಸಮರ್ಥನೀಯವಾದವುಗಳು. ಇವುಗಳನ್ನು ಸಮರ್ಥಿಸಲು ಕ್ರಮವಾಗಿ ಪೂರ್ವತಿಯ 'ತಪದ ಉಗ್ರತ್ವ ಸಹಿಸದಿರುವ ಹಾಗು ಸವಿನುಡಿಗಳನ್ನು ಅಲಿಸಲಿಚ್ಛಿಸುವ' ಎಂಬ ಪದಾರ್ಥಗಳು ಹೇತುಗಳಾಗಿರುವವು. ಅಂದರೆ ಪರಸ್ಪರ ವಿರುದ್ಧವಾದ ಎರಡು ಅರ್ಥಗಳನ್ನು ಸಮರ್ಥಿಸಲು ಕ್ರಮವಾಗಿ ಎರಡು ಹೇತುಗಳನ್ನು ಹೇಳಿದಂತಾಯಿತು. ಮತ್ತೆ ಉದಾ:—

ವಾರ್ಧಿಕ ॥ ಸಪ್ತಯೋಧಿಯ ತನಯಳಧರರಸವನು ಸವಿದು ।
ತಪ್ತಯೋಧಿಯ ಮಥನಕ್ಲೇಶವುಂ ಮನದೊಳಗ ।
ಸಫಲಾಸತ್ಫಲಂಗಳ* ತಿಳಿದ ಹರಿಯೆಮಗದೀಗೆ ಸುಖ
ಸಂಪದವನು ॥

ಇಲ್ಲಿ 'ಸುಫಲತ್ವ-ವಿಫಲತ್ವಗಳೆಂಬ ವಿರುದ್ಧವಾದ ಅರ್ಥಗಳನ್ನು ಸಮರ್ಥಿಸಲು ಸಮುದ್ರತನಯಳ ಅಧರರಸಾಸ್ವಾದವದೊಂದೇ ಹೇತುವಾಗಿರುವದು. (ಉತ್ತಮ ಸ್ತ್ರೀಯಳ ಲಾಭದಿಂದ ಮಥನಕ್ಲೇಶದ ಸಫಲತ್ವವನ್ನೂ, ಇಂಥ ಸ್ತ್ರೀಯಳ ಅಧರಮಾಧುರ್ಯವಿರಲು ಅಮೃತದ ಮೈಯ್ಯರ್ಥವಾದ್ದರಿಂದ ಮಥನಕ್ಲೇಶದ ವಿಫಲತ್ವವನ್ನೂ ತಿಳಿಯಬೇಕು.)
ಮತ್ತೆ ಉದಾ:—

ಭಾವಿನಿ ॥ ಈಗ ಧಾರ್ವಾಡಪುರದೊಳಮುಳ ।
ಬಾಗಲನು ತನ್ನೊಡನೆ ಋಹುದಿನ ।
ರಾಗದಲಿ ಕೂಡಿರುವ ವಾಣಿಯ ಬಿಟ್ಟು ಪೋಗಿಹನು ॥

---

* "ಫಲಂಗಳಂ ತಿಳಿದ" ಎಂದು ಪಾಠಾಂತರವು.

ಹೇಗಿರುವಳೆಳೆಯಲ್ಲದೊಬ್ಬಳೆ ।
ಬೇಗದಲಿ ಕನ್ನಡದ ಗುರುಗಳೆ ।
ಹೋಗಿ ಮುಟ್ಟಿಸಿರಯ್ಯ ಕಾಲೇಜದೊಳುವೇಂದ್ರನಿಗೆ ॥

ಇಲ್ಲಿ 'ಸರಸ್ವತಿಯನ್ನು ಉಪೇಂದ್ರನಿಗೆ ಹೇಗೆ ಮುಟ್ಟಿಸತಕ್ಕದ್ದು ಎಂಬ ಅರ್ಥವು ಸಮರ್ಥನೀಯವಾವದ್ದು. ಇದನ್ನು ಸಮರ್ಥಿಸಲು 'ಕನ್ನಡದ ಗುರುಗಳೆ ಹಾಗು ಕಾಲೇಜದೊಳುವೇಂದ್ರನಿಗೆ' ಎಂಬ ಪದಾರ್ಥಗಳು ಪರಸ್ಪರಸಾಪೇಕ್ಷಗಳಾಗಿ ಹೇತು ಭಾವವನ್ನು ಹೊಂದಿವೆ.

ಈ ಅಲಂಕಾರದಲ್ಲಿ ಸಾಭಿಪ್ರಾಯವುಳ್ಳ ಪದಾರ್ಥವಾಕ್ಯಾರ್ಥಗಳೇ ಹೇತುಭಾವವನ್ನು ಹೊಂದುವವು. ಆದರೆ ಪರಿಕರದಲ್ಲಿ ಹೇತುತ್ವವಿರುವದಿಲ್ಲ. ಕಾರಣ ಇದು ಪರಿಕರಾಲಂಕಾರಕ್ಕಿಂತ ಬೇರೆ ತರದ್ದಾಗಿದೆ, ಎಂದು ವಿಸ್ತಾರ ಭಯದಿಂದ ಸ್ವಲ್ಪದರಲ್ಲಿ ಹೇಳುವೆನು.

---

೬೨. ಅರ್ಥಾಂತರನ್ಯಾಸಾಲಂಕಾರವು ಲಕ್ಷಣ:—ವಿಶೇಷವು ಪ್ರಸ್ತುತವಾಗಿರಲು ಅದರಿಂದ ಅಪ್ರಸ್ತುತವಾದ ಸಾಮಾನ್ಯ ರೂಪದ ಅರ್ಥವನ್ನಾಗಲಿ, ಸಾಮಾನ್ಯವು ಪ್ರಸ್ತುತವಾಗಿರಲು ಅದರಿಂದ ಅಪ್ರಸ್ತುತವಾದ ವಿಶೇಷರೂಪದ ಅರ್ಥವನ್ನಾಗಲಿ, ಸಮರ್ಥಿಸಿದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ॥ ಹಾರಿದನು ಹನುಮನಬ್ಧಿಯ।
ವೊರಿರುವದದಾವ ಕಜ್ಜ ಘನಮಹಿಮರಿಗೆ ॥

ಇಲ್ಲಿ ಪೂರ್ವಾರ್ಧದ ಹನುಮಂತನ ವಿಶೇಷೋದಾಹರಣೆಯಿಂದ ಉತ್ತರಾರ್ಧದ ಸಾಮಾನ್ಯಾರ್ಥವು ಸಮರ್ಥಿಸಲ್ಪಟ್ಟಿದೆ. ಮತ್ತೆ ಉದಾ:—

ಭಾವಿನಿ॥ ಅರಸ ತನ್ನೊಳು ನಂಬಿಗೆಯನಿ।
ಟ್ಟರುವರನು ಘಾತಿಸಿದ ದೋಷವ।
ಧರೆಯೊಳೆಲ್ಲಿಯು ಬಿಡದಲಾಖುಳ ಜನರ ಘಾತಿಪುದು ॥
ಹರಿಯನಿದ್ರೆಯನಿರದೆ ಕೆಡಿಸುತ।
ಲುರುತರದ ಕೋಪವನು ಪುಟ್ಟಿಪ।
ಮುರಿಪ ಸಪ್ಪಳದಂತೆ ತರುಗಳ ಟೊಂಗೆಯನು ಕರಿಯು ॥

ಇಲ್ಲಿ ಪೂರ್ವಾರ್ಧದ ಸಾಮಾನ್ಯಾರ್ಥವು ಉತ್ತರಾರ್ಧದ ವಿಶೇಷೋದಾಹರಣೆಯ ಉಪಮಾನತ್ವದಿಂದ ಸಮರ್ಥಿಸಲ್ಪಟ್ಟಿದೆ. ಮತ್ತೆ ಉದಾ:—

ಭಾಮಿನಿ॥ ಬಳಿಕ ಶರದಿಯು ವೆರಸೆ ಚಂದ್ರನ।
ತೊಲಗಿದಳು ಪ್ರಾವೃಷಿಯು ವೇಗದೆ।
ಹುಳುಹುಳುಸೆ ನೋಡುತ್ತ ಶಾಂತತಡಿತ್ಕಟಾಕ್ಷದಲಿ॥
ಉಳಿಯದದು ಸೌಭಾಗ್ಯಗುಣವದು।
ಇಳಿಯೊಳಿಲ್ಲಿಯು ತಿಳಿದು ನೋಡಲು।
ಕೆಳಗೆ ಬಿದ್ದಿರೆ ಕ್ಷೀರಧರಗಳವೈದೆ ನಾರಿಯರ॥

ಇಲ್ಲಿ ಉತ್ತರಾರ್ಧದ ಸಾಮಾನ್ಯಾರ್ಥವು ಪೂರ್ವಾರ್ಧದ ವಿಶೇಷೋದಾಹರಣೆಯಿಂದ ಸಮರ್ಥಿತವಾಗಿದೆ. (ಶಾಂತತಡಿತ್ಕಟಾಕ್ಷ = ಮಳೆಯು ಬಿದ್ದಮೇಲೆ ಮಿಂಚಿಗೆ ಸಮಾಧಾನತ್ವವು ಬರುವದು. ಇದರಂತೆ ಯೌವನ ನ ಹೋದ ಸ್ತ್ರೀಯರ ನೋಟದಲ್ಲಿ ಉಗ್ರತ್ವವು ಕಡಿಮೆಯಾಗಿರುವದು. ಕ್ಷೀರಧರ = ನೀರನ್ನು ಧರಿಸುವದು ಮೋಡವು. ಹಾಲನ್ನು ಧರಿಸುವದು ಸ್ತನವು. ಪ್ರಾವೃಷಿ = ಮಳೆಗಾಲವೆಂಬ ಸ್ತ್ರೀ.) ಮತ್ತೆ ಉದಾ:—

ಪರಿವರ್ಧಿನಿ॥ ಮೊಕ್ಕುತೆ ಗುಹೆಯಲಿ ದಿನಭೀತಗಳೋಲ್।
ಹೆಚ್ಚಿನ ದಿನಕರನಿಂದಾ ತಮವನ।
ದಚ್ಚಳಿಯದೆ ಸಂರಕ್ಷಿಪನೀ ಸಿಮವಂತನು ಪ್ರೇಮದಲಿ॥
ಹುಚ್ಚನು ಬೆನ್ನಿಗೆ ಬೀಳಲು ಜಗದೊಳು।
ಹೆಚ್ಚಿನ ಮಮತೆಯನಿಡುತೆ ಮನದೆ ಬಹ।
ಳಿಚ್ಚರದಲಿ ಸಂರಕ್ಷಿಪುದುಚ್ಚಶಿರದವನು ನಿಶ್ಚಯವು॥

(ಮುಂದೆ ಸಾಗುವದು)

ಉಕ್ಕೇಂದ್ರಶರ್ಮಾ ತೋಳಮಟ್ಟಿ.

ಪತ್ರವ್ಯವಹಾರವು.

ಗುರುವರ್ಯ ರಾ. ಸಾ. ಎಡಿಟರ ಶಾಲಾಪತ್ರಿಕ ಇವರ ಸನ್ನಿಧಿಗೆ—

ಕೆಳಗಣ ಸಂಗತಿಯನ್ನು ಶಾಳಾಪತ್ರಿಕದಲ್ಲಿ ಮುದ್ರಿಸುವಿರೆಂದು ನಂಬಿದ್ದೇನೆ:—

ಎಲ್ಲೆ ಬ್ರಾಂಥವರೇ, ಶಾಲಾ ಮಾಸ್ತರರೇ ಕೆಳಗೆ ಬರೆದ ಸಮಸ್ಯೆಗಳನ್ನು ಪೂರ್ಣ ಮಾಡಿರೆಂದು ಪ್ರಾರ್ಥಿಸುತ್ತೇನೆ:—

"ನವನೀತ ಮೂರ್ತಿಕುಣಿದುದನಲದೊಳ್"
"ವಿನೇಕನೊದಂಪ್ರದು ಮಾಡಶರಹೀನಿತನೊಳ್"

ಪತ್ರವ್ಯವಹಾರವು.

" ಪ್ರಜೆಗಳನ್ನು ನೋಡುವರ್ನಿಶೆಯೊಳ್ಮಿಹಿರನನಾಂ ಧನ್ಯ
ನೈಧರಣಿಯಲಿ "
ಭಟ್ಟ ಕೇಶವ ಶರ್ಮಾ.

ರಾವಸಾಹೇಬ ಶಾಲಾಪತ್ರಕದ ಎಡೀಟರ, ಜಿಲ್ಹಾ ಧಾರವಾಡ ಇವರಿಗೆ—

ವಿಜಾಪುರ ಜಿಲ್ಹಾ ಹುನಗುಂದ ತಾಲೂಕ ಪೈಕಿ ಮುವಜೆ ಹಿರೇಪೊತಿಗೇರಿ ಸ್ಕೂಲ ಮಾಸ್ತರ ಈತನ ವಿನಂತಿಯೇನೆಂದರೆ—

ತಮ್ಮ ಕರಕಮಲದಿಂದುದ್ಭವಿಸುವ ಮಾಸಪತ್ರಿಕೆಯಲ್ಲಿ ಕೆಳಗೆ ಬರೆದ ಅಭಿಪ್ರಾಯಕ್ಕೆ ಇಂಬುಗೊಡಿಸುವಿರೆಂದು ಅಶಿಸುತ್ತೇನೆ.

ಈ ಊರ ಶಾಲೆಗೆ ವರ್ಗಾಗಿ ಬಂದ ಮಾಸ್ತರ ಜನರಿಗೆ ವಾಸಮಾಡಲಿಕ್ಕೆ ಮನೆಯು ಸಿಗದ್ದರಿಂದ ಇಲ್ಲಿಯವರಿಗೆ ಬಹಳೇ ಅಡಚಣೆಯಾಗುತ್ತಿತ್ತು. ಈ ಅಡಚಣೆಯನ್ನು ದೂರ ಮಾಡುವದಕ್ಕಾಗಿ ಈ ಶಾಲೆಯ ಸ್ಕೂಲ ಕಮಿಟಿ ಮೆಂಬರರಾದ ೧. ಬಾಳಕೃಷ್ಣ ಎಲಗೂರ ಕುಲಕರ್ಣಿ ೨. ರಾಮರಾವ ರಾಘವೇಂದ್ರ ಕುಲಕರ್ಣಿ, ೩. ಅಯ್ಯನಗವಡಾ ಹನಮಗವಡಾ ಪೋಲೀಸ ಪಾಟೀಲ, ೪. ಲಿಂಗನಗವಡಾ ಲಿಂಗನಗವಡಾ ಮುಲ್ಕಿ ಪಾಟೀಲ, ೫. ವೀರನಗವಡಾ ರುದ್ರಗವಡಾ ಇವರು ತಮ್ಮ ಉದಾರ ಆಶ್ರಯದಿಂದ (೧೦೦) ಒಂದು ನೂರು ರೂಪಾಯಿ ವರ್ಗಣಿ ವಸೂಲು ಮಾಡಿ ಶಾಲೆಯ ಮಗ್ಗಲಲ್ಲಿ ಒಂದು ಮನೆಯನ್ನು ಹಾಕಿಸಿ ಮಾಸ್ತರ ಜನರ ಅಡಚಣೆಯನ್ನು ದೂರ ಮಾಡಿ ಇವತ್ತಿನ ದಿವಸ ನನ್ನ ತಾಬೇಕ್ಕೆ ಮನೆಯನ್ನು ಕೊಟ್ಟರು. ಇದು ವಿದ್ಯಾಭಿವೃದ್ಧಿಗೆ ಬಹಳ ಶ್ರೇಯಸ್ಕರವಾದದ್ದೆಂದು ತಿಳಿದು ತಮ್ಮ ಕಡೆಗೆ ತಿಳುಹಿಸಿರುವೆನು. ಸದರೀ ಸಂಗತಿಯು ಎಲ್ಲ ಕಡೆಗೂ ಪ್ರಸಿದ್ಧವಾಗುವದರ ದೆಸೆಯಿಂದ ತಮ್ಮ ಕಡೆಗೆ ತಿಳುಹಿರುವೆನು.

ತಮ್ಮ ವಿಧೇಯ,

ರಾಮಚಂದ್ರ ಭೀಮರಾವ ಕೆಲೂರ.
ಸ್ಕೂಲಮಾಸ್ತರ ಹಿರೇಪೊತಗೇರಿ.

ಹಿರೇಪೊತಗೇರಿ.
ತಾ|| ಹುನಗುಂದ
೨೫ - ೧೦ - ೧೩

ವಿದ್ಯಾಭ್ಯಾಸದ ನೋಟೀಸು.

ಕೆಳಗೆ ಕಾಣಿಸಿದ ಪುಸ್ತಕಗಳು ಪ್ರಾಥಮಿಕ ಶಾಲೆಗಳಿಗೋಸ್ಕರ ಸರಕಾರದಿಂದ ಮಂಜೂರ ಮಾಡಲ್ಪಟ್ಟವೆ:—

ಪ್ರ. ನಂಬರು	ಪುಸ್ತಕದ ಹೆಸರು.	ಭಾಷೆ.	ಯಾತಕ್ಕೋಸ್ಕರ ಮಂಜೂರ ಮಾಡಿದೆ.	ಕ್ರಯ. ರೂ.	ಆ.	ಪೈ.
೧	ಮಿರ್ಝಾ ಹಜೀಬಹುಸೇನ ಅಲ್ಲಾಹಬಾದಕೃತ:— "ಉರ್ದೂ ಕಾ ನಯಾ ಕ್ವಾಯದಾ (ಉರ್ದೂ ಎ. ಬಿ. ಸಿ. ಪಾಠಯಮರ)"	ಊರ್ದೂ	ಊರ್ದೂ ಶಾಲೆಗಳಲ್ಲಿ ಉಪಯೋಗಿಸುವದಕ್ಕೆ	೦	೦	೯
೨	"ಊರ್ದೂ ಪಾಠಯಮರ" ಎಸ್. ಗುಲಾಮ ಅಲ್ಲಿ ಲಾಹೋರಕೃತ:—	ಸದರ	ಸದರ	೦	೦	೯
೩	"ಊರ್ದೂ ಕಿ ಫ್ರೇಸರಿ ಕ್ವಾಯಿದಾ (ಊರ್ದೂ ರಾಯಲ್ ಪಾಠಯಮರ" ಕೆ. ಎಲ್, ರಾಲಿಯಾ ರಾವುಕೃತ.	ಸದರ	ಸದರ	೦	೦	೬

ಫೋರ್ಟ್ ಸೇಂಟ್ ಜಾರ್ಜ್,
ತಾ॥ ೧೩-೧೧-೧೩

(Sd.) A. L. Coverton,
ಡೆಪ್ಯೂಟಿ ಡಿರೆಕ್ಟರ ಆಫ್
ಪಬ್ಲಿಕ್ ಇನ್ಸ್ಟ್ರಕ್ಷನ್ಸ್.

ಫೋರ್ಟ್ ಸೇಂಟ್ ಜಾರ್ಜ್,
ತಾ॥ ೧೩-೧೧-೧೩

ಡಿರೆಕ್ಟರಆಫ್ ಪಬ್ಲಿಕ್ ಇನ್ಸ್ಟ್ರಕ್ಷನ್ಸ್ ಆಫೀಸು.

ಶಾಲಾಪತ್ರಿಕೆ.

ಪುಸ್ತಕ ೫ನೇ. | ಫೇಬ್ರುವರಿ ೧೯೧೪. | ಸಂಚಿಕೆ ೨ನೇ.

ಸ್ಫುಟವಿಷಯಗಳು.

೧. ಪ್ರಾಥಮಿಕ ಶಾಲೆಗಳ ಉದ್ದೇಶ.

ಇಂಗ್ಲಂಡದ ಸಾರ್ವಜನಿಕ ಪ್ರಾಥಮಿಕ ಶಾಲೆಗಳಿಗೋಸ್ಕರ ಬೋರ್ಡ ಆಫ್ ಎಜ್ಯುಕೇಶನದವರು ಮಾಡಿದ ನಿಯಮಗಳಿಗೆ ಉಪೋದ್ಘಾತರೂಪವಾಗಿ ಸಾರ್ವಜನಿಕ ಪ್ರಾಥಮಿಕ ಶಾಲೆಗಳ ಉದ್ದೇಶವನ್ನು ಅವರು ಕೆಳಗೆ ಬರೆದ ಪ್ರಕಾರ ವರ್ಣಿಸಿದ್ದಾರೆ:—

ಸಚ್ಚೀಲವನ್ನು ಉಂಟು ಮಾಡಿ ಅದನ್ನು ಬಲಪಡಿಸುವದು, ಶಾಲೆಯು ಸ್ವಾಧೀನ ಮಾಡಲ್ಪಟ್ಟ ಹುಡುಗರ ಬುದ್ಧಿಯನ್ನು ವಿಕಾಸಗೊಳಿಸುವದು, ಹುಡುಗರೂ, ಹುಡಿಗೆಯರೂ ಅವರಿಗೆ ಮುಂದೆ ಪ್ರಪಂಚದಲ್ಲಿ ಬೀಳುವೆ ಅವಶ್ಯಕತೆಗಳಿಗನುರೂಪವಾಗಿ, ವ್ಯವಹಾರಜ್ಞರೂ ಬುದ್ಧಿಯುಳ್ಳವರೂ ಆಗಿ, ಪ್ರಪಂಚಕ್ಕೆ ತಕ್ಕವರಾಗುವಂತೆ, ಅವರು ಶಾಲೆಯಲ್ಲಿ ಕಳೆಯುವ ವರ್ಷಗಳನ್ನು ಉತ್ತಮ ರೀತಿಯಿಂದ ಉಪಯೋಗಿಸುವದು, ಇದೇ ಸಾರ್ವಜನಿಕ ಪ್ರಾಥಮಿಕ ಶಾಲೆಗಳ ಉದ್ದೇಶವಾಗಿರುತ್ತದೆ.

ಈ ಉದ್ದೇಶವನ್ನು ಕೊನೆಗಾಣಿಸುವದಕ್ಕಾಗಿ ಹುಡುಗರಿಗೆ ಅವಲೋಕನಮಾಡುವ ಚಟವೂ, ವಿಶದವಾಗಿ ವಿಚಾರ ಮಾಡುವ ಚಟವೂ ಬೀಳುವಂತೆ, ಜಾಗ್ರತೆಯಿಂದ ಶಿಕ್ಷಣ ಕೊಡತಕ್ಕದ್ದೆಂಬದನ್ನು ಲಕ್ಷ್ಯದಲ್ಲಿಡತಕ್ಕದ್ದು; ಇದರಿಂದ ಅವರಲ್ಲಿ ಸೃಷ್ಟಿಯ ಹಲವು ಸಂಗತಿಗಳ ಬಗ್ಗೆಯೂ ನಿಯಮಗಳ ಬಗ್ಗೆಯೂ ತಿಳುವಳಿಕೆಯುಂಟಾಗುವದು. ಅವರ ಮನಸ್ಸಿನಲ್ಲಿ, ಮನುಷ್ಯಜಾತಿಯ ಶ್ರೇಷ್ಠವಾದ ಧ್ಯೇಯದ ವಿಷಯದಲ್ಲಿಯೂ, ಮನುಷ್ಯಜಾತಿಯು ಇದುವರೆಗೆ ಮಾಡಿದ ಘನಕಾರ್ಯಗಳ ವಿಷಯದಲ್ಲಿಯೂ ನಿಜವಾದ ಗೌರವವನ್ನುಂಟುಮಾಡತಕ್ಕದ್ದು; ಅವರಿಗೆ ತಮ್ಮ ದೇಶದ ವಾಙ್ಮಯದ ಪರಿಚಯವನ್ನೂ ಇತಿಹಾಸದ ಪರಿಚಯವನ್ನೂ ತಕ್ಕ ಮಟ್ಟಿಗೆ ಮಾಡಿಕೊಡತಕ್ಕದ್ದು; ವಿಚಾರ ಮಾಡುವದಕ್ಕೂ ವಿಚಾರಗಳನ್ನು

ಬಹಿರಂಗಪಡಿಸುವದಕ್ಕೂ ಸಾಧನರೂಪವಾದ ಭಾಷೆಯನ್ನು ತಕ್ಕಮಟ್ಟಿಗೆ ಉಪಯೋಗಿಸುವಷ್ಟು ಶಕ್ತಿಯು ಅವರಲ್ಲಿ ಉಂಟಾಗುವಂತೆ ಮಾಡತಕ್ಕದ್ದು; ಅವರಿಗೆ ಉಂಟಾಗುವ ಜ್ಞಾನವು ಕೇವಲ ಪುಸ್ತಕಾದಿತವಾಗಿರುವದೆಂಬದನ್ನು ಅವರಿಗೆ ಮನವರಿಕೆ ಮಾಡಿಕೊಡುವದಲ್ಲದೆ, ಅವರಲ್ಲಿ ತಮ್ಮ ಜ್ಞಾನವನ್ನು ಮುಂದೆ ತಮ್ಮ ಯತ್ನದಿಂದಲೇ ಬೆಳೆಯಿಸಿಕೊಳ್ಳತಕ್ಕಷ್ಟು ಯೋಗ್ಯತೆಯುಂಟಾಗುವಂತೆ, ಒಳ್ಳೇ ವಾಚನಾಭಿರುಚಿಯನ್ನೂ ವಿಚಾರಪೂರ್ವಕವಾಗಿ ಅಭ್ಯಾಸ ಮಾಡುವ ಆಸ್ಥೆಯನ್ನೂ ವಿಕಾಸಗೊಳಿಸತಕ್ಕದ್ದು.

ಇದಲ್ಲದೆ, ಅವರಿಂದ ವ್ಯವಹಾರೋಪಯುಕ್ತವಾದಂಥ ತಕ್ಕ ಕೆಲಸಗಳನ್ನು ಮಾಡಿಸಿ, ಅವರಿಗೆ ತಕ್ಕ ಹಸ್ತಶಿಕ್ಷಣವನ್ನು ಕೊಟ್ಟು, ಅವರ ಕಣ್ಣು-ಕೈಗಳಲ್ಲಿ ಸ್ವಾಭಾವಿಕವಾಗಿರುವ ಚಟುವಟಿಕೆಗಳಿಗೆ ಪರಮಾವಧಿ ಉತ್ತೇಜನವನ್ನು ಕೊಡತಕ್ಕದ್ದು; ಹುಡುಗರಿಗೆ ತಕ್ಕ ಶಾರೀರಿಕಶಿಕ್ಷಣವನ್ನು ಕೊಟ್ಟು, ಸುವ್ಯವಸ್ಥಿತವಾದ ಆಟಗಳನ್ನು ಆಡುವದಕ್ಕೆ ಪ್ರೋತ್ಸಾಹಪಡಿಸಿ, ಆರೋಗ್ಯರಕ್ಷಣದ ಹಲವು ಸಾಮಾನ್ಯ ನಿಯಮುಗಳ ಕಾರ್ಯಗಳನ್ನು ತಿಳಿಸಿಕೊಟ್ಟು, ಅವರ ಶರೀರಗಳು ಆರೋಗ್ಯಕರವಾದ ವಿಕಾಸವನ್ನು ಹೊಂದುವಂತೆ. ಸಾಧ್ಯವಾದ ಎಲ್ಲ ತರದ ಪ್ರಸಂಗಗಳನ್ನು ಅವರಿಗೆ ಒದಗಿಸಿ ಕೊಡತಕ್ಕದ್ದು.

ಮೇಲೆ ಹೇಳಿದ ಮುಖ್ಯ ಉದ್ದೇಶವಲ್ಲದೆ, ಮತ್ತೊಂದು ಗೌರವವುಳ್ಳ ಉದ್ದೇಶವನ್ನೂ ಶಾಲೆಯಲ್ಲಿ ಲಕ್ಷಿಸತಕ್ಕದ್ದಾಗಿರುತ್ತದೆ. ಅದು ಯಾವದಂದರೆ, ಶಾಲೆಯು ಹುಡುಗರಲ್ಲಿ ವಿಶೇಷ ಚುರುಕುಬುದ್ಧಿಯುಳ್ಳ ಹುಡುಗರನ್ನು ಹುಡುಕಿ ತೆಗೆದು, (ಶಾಲೆಯೊಳಗಿನ ಬೇರೆ ಹುಡುಗರ ಅಭ್ಯಾಸಕ್ಕೆ ವ್ಯತ್ಯಯಬಾರದಂತೆ) ಅವರಲ್ಲಿರುವ ವಿಶೇಷ ತರದ ಬುದ್ಧಿಯನ್ನು ವಿಕಾಸಗೊಳಿಸುವದು; ಅದರಿಂದ ಮುಂದೆ ಅವರು ತಕ್ಕ ವಯಸ್ಸಿಗೆ, ಮೇಲ್ತರದ ಶಾಲೆಗಳಿಗೆ ಹೋಗುವದಕ್ಕೆ ಯೋಗ್ಯರಾಗಿ, ಆ ಶಾಲೆಗಳಲ್ಲಿ ಕೊಡಲ್ಪಡುವ ಶಿಕ್ಷಣದಿಂದ ದೊರೆಯಬಹುದಾದ ಪರಮಾವಧಿ ಲಾಭವನ್ನು ಹೊಂದುವ ಯೋಗ್ಯತೆಯುಳ್ಳವರಾಗುವರು.

ಮತ್ತೂ ಏನೆಂದರೆ, ಶಿಕ್ಷಕರಿಗೆ ಅನುಕೂಲವಾದ ಪ್ರಸಂಗಗಳು ಸ್ವಲ್ಪವೇ ಇದ್ದಾಗ್ಯೂ, ಅವರು ಹುಡುಗರ ಸದಾಚಾರಣೆಯ ಅಸ್ತಿವಾರವನ್ನು ಹಾಕುವ ಕೆಲಸವನ್ನು ಬಹಳ ಮಟ್ಟಿಗೆ ಮಾಡಬಹುದು. ಅವರು

ತಮ್ಮ ಸ್ವಂತ ಉದಾಹರಣೆಯಿಂದಲೂ ವರ್ಜಿಸ್ಸಿನಿಂದಲೂ, ಶಾಲೆಯಲ್ಲಿ ಸಂಪೂರ್ಣವಾಗಿ ನೆಲೆಗೊಂಡಿದ್ದ ಶಿಸ್ತಿನ ಭಾವನೆಯಿಂದಲೂ ಹುಡುಗರಲ್ಲಿ ಉದ್ಯೋಗಪ್ರೀತಿ, ಆತ್ಮಸಂಯಮನ, ಎಡರುಗಳಿಗೆ ಎದೆಗುಂದದೆ ಅವುಗಳನ್ನು ಧೈರ್ಯದಿಂದ ಎದುರಿಸುವ ಸ್ವಭಾವ, ಇವುಗಳು ನೆಲೆಗೊಳ್ಳುವಂತೆ ಯತ್ನ ಮಾಡಬಹುದು; ಹುಡುಗರಿಗೆ, ಉದಾತ್ತವಾದ ವಸ್ತುಗಳನ್ನು ಅಭಿವಂದಿಸುವದಕ್ಕೂ, ಪ್ರಸಂಗಬಿದ್ದಾಗ್ಗೆ ಸ್ವಾರ್ಥತ್ಯಾಗ ಮಾಡುವದಕ್ಕೆ ಸಿದ್ಧರಾಗಿರುವದಕ್ಕೂ, ನಿರ್ಮಲತ್ವವನ್ನೂ ಸತ್ಯವನ್ನೂ ಅನುಸರಿಸಿ ಪರಮಾವಧಿ ಪ್ರಯತ್ನವನ್ನು ಮಾಡುವದಕ್ಕೂ, ಕಲಿಸಬಹುದು; ಹುಡುಗರಲ್ಲಿ ಕಾರ್ಯದಕ್ಷತೆಯ ಬಲವತ್ತರವಾದ ಭಾವನೆಯನ್ನುಂಟುಮಾಡುವದಕ್ಕೂ, ಎಲ್ಲ ಒಳ್ಳೆ ನಡೆನುಡಿಗಳಿಗೆ ನಿಜವಾಗಿ ಆಧಾರವಾಗಿಯೂ ಎಲ್ಲ ನಿರ್ಮಮತ್ವಕ್ಕೆ ಅಸ್ತಿವಾರದಂತೆಯೂ ಇದ್ದಂಥ, ಎರಡನೆಯ ವಿಷಯದಲ್ಲಿರಬೇಕಾದ ಸದ್ಭಾವನೆಯನ್ನೂ ಆದರ ಬುದ್ಧಿಯನ್ನೂ ಹುಡುಗರ ಮನಸ್ಸಿನಲ್ಲಿ ಹುಟ್ಟಿಸುವದಕ್ಕೂ ಶಿಕ್ಷಕರು ಸಮರ್ಥರಾಗಿರುವರು; ಇಷ್ಟೇ ಅಲ್ಲ, ಶಾಲೆಯಲ್ಲಿರುವ ಹುಡುಗರೆಲ್ಲ ನಿಯಮಬದ್ಧವಾದ ಬಂದು ಸಮಾಜವಾಗಿರುವದರಿಂದ, ಮುಖ್ಯವಾಗಿ, ಅವರು ನಿಯಮಬದ್ಧವಾದ ಆಟಗಳನ್ನು ಆಡುವದರಿಂದ, ಅವರಲ್ಲಿ ನ್ಯಾಯ್ಯವಾದ ಆಚರಣೆಯ ವಿಷಯದಲ್ಲಿಯೂ ಪರಸ್ಪರರಿಗೆ ವಿಧೇಯತ್ವದಿಂದ ನಡೆಯುವ ವಿಷಯದಲ್ಲಿಯೂ ಸ್ವಾಭಾವಿಕ ಪ್ರವೃತ್ತಿಯು ಉಂಟಾಗಿ ಅದು ವಿಕಾಸಹೊಂದತಕ್ಕದ್ದು. ಮುಂದೆ ಪ್ರಪಂಚದಲ್ಲಿ ಅವರಲ್ಲಿ ಕಂಡು ಬರಬೇಕಾದ ಗೌರವತ್ವದ ಭಾವನೆಗೆ ಇದೇ ಅಂಕುರವಾಗಿರುವದು.

ಈ ಮೇರೆಗೆ, ಹುಡುಗರು ವ್ಯಕ್ತಿಶಃ ಸರ್ವಾಂಗಪೂರ್ಣವಾದ ವಿಕಾಸವನ್ನು ಹೊಂದುವದಕ್ಕಾಗಿ ಮಾತ್ರವೇ ಅಲ್ಲ, ಅವರು ಯಾವ ಸಮಾಜದಲ್ಲಿರುವರೋ ಆ ಸಮಾಜದ ಸ್ತೋಮಾಣಿಕರಾದಂಥ ಉಪಯೋಗವುಳ್ಳವರಾದಂಥ ಘಟಕರಾಗಿಯೂ, ಅವರು ಯಾವ ದೇಶದಲ್ಲಿ ಜನ್ಮತಾಳಿರುವರೋ ಆ ದೇಶಕ್ಕೆ ಅಭಿಮಾನಾಸ್ಪದವಾದಂಥ ಹುಡುಗರೂ ಹುಡಿಗೆಯರೂ ಆಗುವಂತೆಯೂ ಮಾಡುವದಕ್ಕೆ, ಶಾಲೆಯು ಮಾಡುವ ಎಲ್ಲ ಯತ್ನಗಳಲ್ಲಿಯೂ ಸಾಧ್ಯವಾದ ಮಟ್ಟಿಗೆ ಹುಡುಗರ ತಂದೆತಾಯಿಗಳ ಆಸ್ಥೆಯನ್ನೂ ಸಹಾಯವನ್ನೂ ಸಂಪಾದಿಸಿ, ಈ ಸಂದರ್ಭದಲ್ಲಿ ಶಾಲೆಯ ಮತ್ತು ಮನೆಯ ಪ್ರಯತ್ನಗಳು ಒಟ್ಟುಗೂಡುವಂತೆ ಮಾಡತಕ್ಕದ್ದು.

ವಿದ್ಯಾರ್ಥಿಗಳು ಓದಬೇಕೆಂಬ ಬಗ್ಗೆ ಲಾರ್ಡ್ ಮೋರ್ಲೆ ಯವರು ಮಾಡಿದ ಮಹತ್ವದ ಸೂಚನೆಗಳು.

ನಾವು ಓದಿದ್ದೆಲ್ಲ ಕೆಲಸಕ್ಕೆ ಬರಬೇಕೆಂದು ಇಚ್ಛಿಸುವದಾದರೆ ಓದಿದ ವಿಷಯವನ್ನು ತಮ್ಮ ಮಾತಿನಲ್ಲಿ ಹೇಳುವದಕ್ಕೆ ಬರುವಂತೆ ಓದುವ ಕಾಲದಲ್ಲಿಯೇ ಚೆನ್ನಾಗಿ ವಿಷಯಗ್ರಹಣ ಮಾಡುವದು ಅವಶ್ಯವಾದದ್ದು.

ನಮ್ಮ ಓದು ಯಾವ ರೀತಿಯಿಂದ ಸಾಗಿದರೆ ಪ್ರಯೋಜನಕರವಾದೀತು? ಎಂಬ ವಿಷಯದಲ್ಲಿ ಅವರು ಕೆಲವು ಸೂಚನೆಗಳನ್ನು ಮಾಡಿರುವರು. ಅವು ಯಾವವೆಂದರೆ:—

(೧). ಓದಿದ್ದರ ಸಾರವನ್ನು ಬರೆದಿಡುವದು ಉತ್ತಮ.

(೨). ಸರ್ ವಿಲ್ಯಮ್ ಹ್ಯಾಮಿಲ್ಟನ್ನನು ಹೇಳಿದಂತೆ ಪುಸ್ತಕದಲ್ಲಿ ಗುರುತುಗಳನ್ನು ಮಾಡುವದು ಯೋಗ್ಯವು. ಇದಕ್ಕೆ ಹಲವು ಬಣ್ಣಗಳ ಪೆನ್ಸಿಲುಗಳನ್ನು ಉಪಯೋಗಿಸಬಹುದು. ಯಾಕಂದರೆ, ಇದರಿಂದ ಗ್ರಂಥದಲ್ಲಿಯ ಯುಕ್ತಿಗಳು, ದೃಷ್ಟಾಂತಗಳು ಮುಂತಾದ ಮುಖ್ಯ ಮುಖ್ಯ ಭಾಗಗಳನ್ನು ಪ್ರತ್ಯೇಕವಾಗಿ ತೆಗೆದಿಟ್ಟಂತಾಗುವದು.

(೩). ಗಿಬನ್, ಲಾರ್ಡ ಸ್ಟ್ರ್ಯಾಫರ್ಡ್ ಎಂಬವರು ಯಾವದೊಂದು ವಿಷಯವನ್ನು ಓದುವದಕ್ಕೆ ಮುಂಚೆ ತಮಗೆ ಆ ವಿಷಯದಲ್ಲಿ ಎಷ್ಟುಮಟ್ಟಿಗೆ ಜ್ಞಾನವುಂಟೆಂಬದನ್ನು ಮನಸ್ಸಿನಲ್ಲಿ ಆಲೋಚಿಸುತ್ತಿದ್ದರು. ಈ ಪ್ರಕಾರ ಮಾಡುವದರಿಂದ ತಮಗೆ ಹೊಸದೆನಿಸಿದ ವಿಷಯವು ಮನಸ್ಸಿನಲ್ಲಿ ನಿಲ್ಲುವದಕ್ಕೆ ಅನುಕೂಲವಾಗುವದು. ಮತ್ತು ಪುಸ್ತಕವನ್ನು ಓದಿ ಮುಗಿಸಿದ ಬಳಿಕ ತಮಗೆ ಆ ವಿಷಯದ ಜ್ಞಾನವು ಮೊದಲಿಗಿಂತ ಎಷ್ಟು ಹೆಚ್ಚಿತೆಂಬದು ತಿಳಿಯುವದು.

(೪). ಓದಬೇಕಾದ ಪುಸ್ತಕಗಳನ್ನು ಎರಡು ಬಾರಿ ಓದುವದು ಒಳ್ಳೇದು. ಯಾಕಂದರೆ, ಮೊದಲನೆಯ ಬಾರಿ ಓದುವಾಗ ವಿಷಯಗಳು ಮನಸ್ಸಿಗೆ ಹತ್ತದೆ ಇರಬಹುದು. ಇಲ್ಲವೆ ಕೆಲವು ತಪ್ಪು ತಿಳುವಳಿಕೆಗಳಾಗಿರಬಹುದು. ಯಾವ ಪುಸ್ತಕಗಳನ್ನು ಮನಸ್ಸುಗೊಟ್ಟು ವಿಚಾರಪೂರ್ವಕವಾಗಿ ಓದುವೆವೋ, ಅವುಗಳನ್ನು ಎರಡನೆಯ ಸಾರೆ ಓದುವದಕ್ಕೆ ನಡುವೆ ಸ್ವಲ್ಪ ಅವಕಾಶವನ್ನು ಕೊಡುವದು ಒಳ್ಳೇದು. ನಡುವೆ ಅವಕಾಶವು ದೊರೆಯುವದರಿಂದ ವಿಚಾರಗಳು ಸ್ಪಷ್ಟವಾಗಿಯೂ ಪರಿಪಕ್ವವಾಗಿಯೂ ಆಗು

ವು. ಯಾವ ಪುಸ್ತಕಗಳು ಒಂದು ಸಾರೆ ಓದುವದಕ್ಕೆ ಯೋಗ್ಯವಾದವುಗಳೋ, ಅವು ಎರಡನೆಯ ಸಾರೆ ಓದುವದಕ್ಕೂ ಯೋಗ್ಯವಾದವುಗಳು. ಸಾಹಿತ್ಯವಿಷಯಕವಾದ ಗ್ರಂಥಗಳನ್ನು ಎಷ್ಟು ಸಾರೆ ಓದಿದರೂ ಒಳ್ಳೇದು.

(೫). ಪ್ರಸಿದ್ಧ ತತ್ವಜ್ಞನಾದ ಲಾಕ್ ಸಾಹೇಬನ ಮತದಂತ ಒಂದು ಟಿಪ್ಪಣಿಯ ಪುಸ್ತಕವನ್ನು ಮಾಡಿ ಅದರಲ್ಲಿ ವಿಷಯಾನುಸಾರವಾಗಿ ಬೇರೆ ಬೇರೆ ಭಾಗಗಳನ್ನು ಮಾಡಿ ಅವುಗಳಲ್ಲಿ ಆ ಗ್ರಂಥದ ಉತ್ತಮ ಸ್ಥಳಗಳನ್ನು ಬರೆದಿಡಬೇಕು. ಆ ಉದ್ಧರಿಸಿದ ಸ್ಥಳಗಳ ಮೇಲ್ಗಡೆಗೆ ಶಿರೋಲೇಖ (ಹೆಡಿಂಗ್)ವನ್ನು ಬರೆದಿಡಬೇಕು. ಇದರಿಂದ ಆ ಉತ್ತಮ ಸ್ಥಳಗಳ ವಿಷಯವಾಗಿ ಮನಸ್ಸು ಚನ್ನಾಗಿ ಎಳೆಯಲ್ಪಡುವದು. ಆದರೆ, ಗಿಬನ್‌ಸಾಹೇಬರ ಮತವು ಈ ವಿಷಯದಲ್ಲಿ ವಿರುದ್ಧವಿರುವದು. ಅವರು ಹೇಳುವದೇನಂದರೆ, ಈ ರೀತಿ ಮಾಡುವದಕ್ಕೆ ಬೇಕಾಗುವ ವೇಳೆಯ ಪರಿಮಾಣದಂತೆ ಉಪಯೋಗವಾಗುವದಿಲ್ಲ. ಹೀಗೆ ಮಾಡುವದಕ್ಕಿಂತ ಯಾವದೊಂದು ವಿಷಯವನ್ನು ಎರಡು ಸಾರೆ ಓದುವದು ಲೇಸು.

(೬). ಲೇಖಕನ ಯಾವದೊಂದು ಅಭಿಪ್ರಾಯವು ಇಲ್ಲವೆ ಯುಕ್ತಿಯು ಸುಸಂಗತವಾದದ್ದಿಲ್ಲದಿದ್ದರೆ ಅದಕ್ಕೆ ಗುರುತುಮಾಡಿಟ್ಟರೆ ಸಾಲದು. ಲೇಖಕನಿಗೆ ಇಲ್ಲಿ ಪ್ರಮಾದವಾದ ಕಾರಣವೇನು? ಈ ಅಸಂಗತತನದಿಂದ ನಾವು ಕಲಿಯಬೇಕಾದದ್ದೇನು? ಮೊದಲಾದ ವಿಚಾರಗಳನ್ನು ಮಾಡಬೇಕು. ಇದರಿಂದ ವಿದ್ವಾಂಸರಿಗೆ ಇರಬೇಕಾದ ಶಾಂತಸ್ವಭಾವ, ಗಾಂಭೀರ್ಯ, ಸರಲವಿಚಾರ ಮೊದಲಾದ ಗುಣಗಳು ಉಂಟಾಗುವವಲ್ಲದೆ ತನ್ನ ಮತ್ತು ಪರರ ವಿಚಾರಗಳಲ್ಲಿ ಹೆಚ್ಚು ಪ್ರವೇಶಮಾಡಿದಂತಾಗುವದು. ಬಹ್ಮೆಮ್ಮೆ ಒಂದು ಅಭಿಪ್ರಾಯಕ್ಕೆ ಎರಡು ದಿಕ್ಕುಗಳಿರುವ ಸಂಭವವುಂಟು. ಲೇಖಕರು ಒಂದು ದಿಕ್ಕು ಹಿಡಿದು ಬರೆದಿರಬಹುದು. ಆಗ ಲೇಖಕನ ಮೇಲೆ ತಪ್ಪು ಹೊರಿಸದೆ ಎರಡೂ ಅಭಿಪ್ರಾಯಗಳ ಸಾಮಂಜಸ್ಯವನ್ನು ಆಲೋಚಿಸಿ ತಿಳಿದುಕೊಳ್ಳಬೇಕು.

ಈ ನಿಯಮಗಳನ್ನು ಪಾಲಿಸುವಲ್ಲಿ ಕೆಲವು ವೇಳೆಯು ವ್ಯಯವಾಗುವದೆಂಬದೇನೋ ನಿಜ. ಆದರೆ ಪದ್ಧತಿಯನ್ನನುಸರಿಸಿ ಓದದಿದ್ದರೆ ಓದಿದ್ದರ ಪ್ರಯೋಜನವೇ ಆಗುವದಿಲ್ಲ.

೩. ಪಶುಪಕ್ಷಿಗಳ ಸ್ಮರಣಶಕ್ತಿ.

ಆನೆಯ ಸ್ಮರಣಶಕ್ತಿಯ ವಿಷಯವಾಗಿ ಹಲವು ಕಥೆಗಳನ್ನು ಕೇಳುವೆವು. ಸಾಕಿದ ಆನೆಯು ಒಮ್ಮೊಮ್ಮೆ ಅಡವಿಗೆ ಓಡಿಹೋಗುವದು; ಮತ್ತು ಕೆಲವು ವರ್ಷಗಳ ತರುವಾಯ ಒಡೆಯನ ಮನೆಗೆ ತಾನಾಗಿ ಬರುವದುಂಟು. ಒಂದು ಸಾಕಿದ ಆನೆಯು ಅಡವಿಯಲ್ಲಿ ಹೋಗುವಾಗ ಮಾವುತನನ್ನು ಕೆಳಗೆ ಒಗೆದು ಓಡಿಹೋಯಿತು. ೧೮ ವರ್ಷಗಳ ತರುವಾಯ ಆ ಆನೆಯ ಒಡೆಯನು ಅಡವಿಯಲ್ಲಿ ಆನೆಗಳ ಗುಂಪಿನಲ್ಲಿ ತನ್ನ ಆನೆಯ ಗುರುತು ಹಿಡಿದು ಅದರ ಹತ್ತರಕ್ಕೆ ಹೋಗಿ ಅದಕ್ಕೆ ಕುಳಿತುಕೊಳ್ಳುವದಕ್ಕೆ ಅಪ್ಪಣೆ ಮಾಡಿದನು. ಪೂರ್ವಸಂಸ್ಕಾರದಿಂದ ಆ ಆನೆಯು ತನ್ನ ಒಡೆಯನ ಅಪ್ಪಣೆಯನ್ನು ಮೀರದೆ ಅಲ್ಲಿಯೇ ಕುಳಿತಿತು. ಆ ಆನೆಯು ೧೮ ವರ್ಷಗಳ ವರೆಗೆ ಮೊದಲು ಕಲಿಸಿದ ಎಲ್ಲ ಸಂಕೇತಗಳನ್ನು ನೆನಪಿನಲ್ಲಿಟ್ಟುಕೊಂಡಿತ್ತು.

ಕುದುರೆಯ ಸ್ಮರಣಶಕ್ತಿಯೂ ತೀಕ್ಷ್ಣವಾಗಿರುವದು. ಬಾಡಿಗೆಯ ಕುದುರೆಯು ತನ್ನ ಒಡೆಯನ ಮನೆಯರಿಯದ ಮನುಷ್ಯನನ್ನು ಕರೆದು ಕೊಂಡು ತನ್ನ ಮನೆಗೆ ಬರುವದನ್ನು ಎಲ್ಲರೂ ಬಲ್ಲರು. ಒಂದು ಕುದುರೆಯು ಒಂದು ಸ್ಥಳವನ್ನು ಬಿಟ್ಟು ಎರಡನೆಯ ಸ್ಥಳಕ್ಕೆ ಹೋಗಿ ೮।೧೦ ವರ್ಷಗಳಾಗಿದ್ದವು. ಅದು ಒಮ್ಮೆ ಪುನಃ ಮೊದಲಿನ ಸ್ಥಳಕ್ಕೆ ಬಂದಿತು. ಆಗ ಅದರ ಕಡಿವಾಣವನ್ನು ತೆಗೆದಕೂಡಲೆ, ಅದು ಮೊದಲು ತನ್ನನ್ನು ಕಟ್ಟುತ್ತಿದ್ದ 'ಪಾಗಾ'ಕ್ಕೆ ಹೋಗಿ ನಿಂತುಕೊಂಡಿತು.

ನಾಯಿಗಳಿಗೂ ಸ್ಮರಣಶಕ್ತಿಯು ಚೆನ್ನಾಗಿ ಇರುವದು. ಒಂದು ನಾಯಿಯು ೫।೬ ವರ್ಷಗಳ ತರುವಾಯ ಪೂರ್ವದ ಒಬ್ಬ ಮನುಷ್ಯನನ್ನು ಗುರುತಿಸಿ ಅವನ ಎದುರಿಗೆ ಬಾಲವನ್ನಲ್ಲಾಡಿಸುತ್ತ ಆನಂದವನ್ನು ತೋರಿಸಿತು.

ಪಕ್ಷಿಗಳ ಸ್ಮರಣಶಕ್ತಿಯು ವಿಲಕ್ಷಣವಾದದ್ದು. ಇವುಗಳ ಪ್ರತಿಯೊಂದು ಕಾರ್ಯವು ಸ್ಮರಣಶಕ್ತಿಯನ್ನು ಸೂಚಿಸುವದು. ಪ್ರತಿವರ್ಷ ಯಾವದೋ ಒಂದು ಸಮಯದಲ್ಲಿ ಯಾವದೋ ಒಂದು ಗಿಡದ ಮೇಲೆ ಟೊಂಗೆಯ ಮೇಲೆ ಗೂಡುಕಟ್ಟುವದು, ಗಿಳಿ ಮೊದಲಾದ ಪಕ್ಷಿಗಳು ಸಾಮಾನ್ಯವಾದ ಶಬ್ದಗಳನ್ನು ಅನುಕರಿಸುವದು ಮೊದಲಾದವೆಲ್ಲವು

ಸ್ಮರಣಶಕ್ತಿಯೆ ಕಾರ್ಯವಾಗಿರುವದು. ಪೂರ್ವದಲ್ಲಿ ಪಾರಿವಾಳಗಳಿಂದ ಟಪಾಲು ಕಳಿಸುತ್ತಿದ್ದರು. ಪಾರಿವಾಳಗಳನ್ನು ನೂರಾರು ಮೈಲು ದೂರದಲ್ಲಿ ಅವುಗಳಿಗೆ ತಿಳಿಯದಂತೆ ಬಯ್ದುಬಿಟ್ಟರೂ ಅವು ತಿರುಗಿ ಮೊದಲಿನ ಸ್ಥಳಕ್ಕೆ ಬರುವವು.

---

೪. ಪೈರು ಕೆಡಿಸುವ ಪ್ರಾಣಿಗಳಿಂದ ಆದರ ರಕ್ಷಣವು.

ಇಲಿ, ಇಣಚಿ, ಮೊಲ ಇವೇ ಮೊದಲಾದ ಪ್ರಾಣಿಗಳು ನೆಲದ ಹೋರಿನೊಳಗೆ ಮನೆ ಮಾಡಿಕೊಂಡಿದ್ದು ಪೈರುಗಳನ್ನು ಕೆಡಿಸುತ್ತಿರುವವು. ಇತ್ತಿತ್ತಲಾಗಿ ಕೆಲವು ಗೃಹಸ್ಥರು ಅವುಗಳನ್ನು ಕೊಂದು ಹಾಕುವ ಹಂಚಿಕೆಗಳನ್ನು ತೆಗೆದಿದ್ದಾರೆ. ಅವುಗಳಲ್ಲಿ ಒಂದು ಪ್ರಯೋಗವಂದರೆ:— ಹೋರಿನೊಳಗೆ ಪ್ರಾಣಿಗಳು ಇರುವಾಗಲೇ ಮೇಲೆ ಮಣ್ಣು ಮುಚ್ಚಿದರೆ ಆ ಪ್ರಾಣಿಗಳು ಪುನಃ ಆ ಹೋರುಗಳನ್ನು ಕೆದರುವವಷ್ಟೇ. ಅದಕಾರಣ, ಪ್ರಾಣಿಯು ಹೋರಿನೆಲ್ಲಿ ಸೇರಿಕೊಂಡು ಕೂತಿರುವದೆಂದು ತಿಳಿದ ಕೂಡಲೆ ಸುಮಾರು ಅರ್ಧ ಚಟಾಕಿ ಕಾರ್ಬನ್ ಬಾಯು ಸಲ್ಫಾಯಿಡ್‌ವನ್ನು ಹೋರಿನಲ್ಲಿ ಹಾಕಿ, ಅದು ಉಗಿಯಾದ ಕೂಡಲೆ ಅದಕ್ಕೆ ಕೊಳ್ಳಿಯನ್ನು ಹಚ್ಚಬೇಕು. ಕೂಡಲೆ ಸ್ಫೋಟವಾಗಿ ಹೊಗೆಯು ಗುದ್ದಿನಲ್ಲಿ ಸೇರುವದು. ಅದರಿಂದ ಬಳಗಿನ ಪ್ರಾಣಿಯು ಸತ್ತು ಹೋಗುವದು. ಒಂದು ಪೌಂಡು ಬಾಯು ಸಲ್ಫಾಯಿಡದಿಂದ ೨೦೦ ಕ್ಕಿಂತ ಹೆಚ್ಚು ಇಲಿಗಳನ್ನು ಕೊಲ್ಲಬಹುದು. ಈ ಪ್ರಾಣಿಗಳನ್ನು ಕೊಲ್ಲುವ ಇನ್ನೊಂದು ಉಪಾಯವು ಯಾವದೆಂದರೆ:— ಒಂದು ಸಾಧಾರಣ ಗಡಿಗೆಯನ್ನು ತಕ್ಕೊಂಡು ಅದರ ಒಂದು ಮಗ್ಗಲಿಗೆ ಒಂದು ತೂತು ಕೆತವಿ ಆ ತೂತಿನಿಂದ ತಿರಿಯನ್ನು ಊದಲಿಕ್ಕೆ ಬರುವಂತೆ ವ್ಯವಸ್ಥೆ ಮಾಡಬೇಕು. ಆ ಗಡಿಗೆಯ ಬುಡಮಗ್ಗಲು ಮತ್ತೊಂದು ತೂತು ಕೆಡವಿ, ಅಲ್ಲಿಂದ ಒಂದು ಕೊಳವೆಯನ್ನು ಒಯ್ದು ಹೋರಿನೊಳಗೆ ಬಿಡಬೇಕು. ಗಡಿಗೆಯ ಬುಡದಲ್ಲಿ ಸ್ವಲ್ಪ ಬೆಂಕಿಯನ್ನು ಹಾಕಿ ಅದರ ಮೇಲೆ ಇದ್ದಲಿಯನ್ನೂ ಸ್ವಲ್ಪ ಗಂಧಕವನ್ನೂ ಹಾಕಿ ಅದರ ಮೇಲೆ ಬೇವಿನ ಎಲೆಗಳನ್ನೂ ಮಾವಿನ ಎಲೆಗಳನ್ನೂ ಹಾಕಿ ಗಡಿಗೆಯ ಬಾಯನ್ನು ಮುಚ್ಚಿ ಬಿಡಬೇಕು. ತರುವಾಯ ತಿರಿಯನ್ನು ಊದ ಹತ್ತಿದ ಕೂಡಲೆ ಬಳಗಿನ ಬೆಂಕಿಯು ಹೊತ್ತಿ ಹೊಗೆಯಾಗಿ ಕೆಳಗಿನ ಕೊಳವೆಯ ಮಾರ್ಗದಿಂದ ಗುದ್ದಿನಲ್ಲಿ ಸೇರುವದು. ಆದರಿಂದ ಬಳಗಿನ ಪ್ರಾಣಿಯು ಉಸುರುಗಟ್ಟಿ ಸತ್ತು ಹೋಗುವದು.

---

೫ ನಿದ್ದೆ ಇಲ್ಲದೆ ಇರಬಹುದು.

ಯೂ ಸಾಚುಸೆಟ್ಸ್ ಎಂಬಲ್ಲಿ ಡಾ. ಎಲ್. ಎಚ್. ಹೊರ್ಟನ, ಹಾಗು ಪ್ರೊ. ಮನ್ಸ್ಟರ್‌ಬರ್ಗ ಎಂಬವರು ಮನುಷ್ಯ ಪ್ರಾಣಿಯು ನಿದ್ದೆ ಇಲ್ಲದೆ ಬದುಕಬಹುದೆಂಬದನ್ನು ಸಪ್ರಯೋಗವಾಗಿ ಸಿದ್ಧ ಮಾಡಿತೋರಿಸಿರುವರು. ಅವರು ಪ್ರಯೋಗ ಮಾಡಿ ನೋಡಿದ ಗೃಹಸ್ಥರು ಹಾರ್ವರ್ಡ ಯುನಿವ್ಹರ್ಸಿಟಿಯ ಪ್ರೊಫೆಸರರಾಗಿದ್ದು ತಮ್ಮ ಹೆಸರು ಪ್ರಸಿದ್ಧವಾಗಬಾರದೆಂದು ಅವರ ಅಪೇಕ್ಷೆ ಇರುತ್ತದೆ. ಆ ಪ್ರೊಫೆಸರರಿಗೆ ಮಾನಸಿಕ ಶ್ರಮದ ಕೆಲಸವನ್ನು ಬಹಳ ಹೊತ್ತು ಮಾಡಬೇಕಾಗುತ್ತಿತ್ತು. ಅದರಿಂದ ಅವರಿಗೆ ಹುಚ್ಚು ಹಿಡಿಯುವ ಹೊತ್ತು ಬರಗಿತು. ಆಗ ಅವರ ಸಲುವಾಗಿ ಬಂದು ಶಾಸ್ತ್ರೀಯ ಪದ್ಧತಿಯ ಖುರ್ಚಿಯು ಸಿದ್ಧ ಮಾಡಿಕೊಡಲ್ಪಟ್ಟಿತು. ಅದರ ಮೇಲೆ ಕೂಡ್ರುವದರಿಂದ ಅವರಿಗೆ ಸ್ವಲ್ಪ ಹೊತ್ತಿನಲ್ಲಿಯೇ ಬಹಳ ವಿಶ್ರಾಂತಿಯು ದೊರೆತು, ನಿದ್ದೆಯಿಲ್ಲದೆ ಬಹಳ ಹೊತ್ತು ಕೆಲಸ ಮಾಡುವ ಸಾಮರ್ಥ್ಯವು ಬರಲಾರಂಭಿಸಿತು. ಬಳಿಕ ಅವರು ಅಲ್ಲಿಂದ ಎದ್ದ ಬಳಿಕ ಸಹ ಮೊದಲಿನಂತೆ ಉತ್ಸಾಹವು ಉಳಿಯುತ್ತಿತ್ತು, ಎಂದು ಆ ಪ್ರೊಫೆಸರರು ಎಷ್ಟೋ ವರ್ಷಗಳ ತಮ್ಮ ಅನುಭವವನ್ನು ಹೇಳುತ್ತಾರೆ. ಮತ್ತು ಮೇಲೆ ಹೇಳಿದ ಉಭಯ ಡಾಕ್ಟರರು ಇದರಲ್ಲೇನೂ ಆಶ್ಚರ್ಯವಿಲ್ಲೆಂತಲೂ, ಇದರ ಕಾರಣವನ್ನು ಶಾಸ್ತ್ರೀಯ ರೀತಿಯಿಂದ ಸಿದ್ಧ ಮಾಡಲಿಕ್ಕೆ ಬರುವದೆಂತಲೂ ಅನ್ನುತ್ತಾರೆ.

---

೬ ಬಿಸಿ ಬಿಸಿ ಚಹಾ.

ಮನುಷ್ಯನ ಮೈಯ ಹೊರಗಿನ ಭಾಗಕ್ಕಿಂತಲೂ ಅವನ ಅಂತರಂಗದ ಭಾಗವು ಸೂಕ್ಷ್ಮವಾಗಿರುವದೆಂದು ಸಾವಕಾಶವಾಗಿ ಜನರು ತಿಳಿಯುವದುಂಟು. ಆದರೆ ಈ ಮಾತು ಚಹಾದ ವಿಷಯದಲ್ಲಂತೂ ನಿಃಸಂಶಯವಾಗಿ ಸುಳ್ಳೆಂದು ನಿರ್ಣಯವಾಗುತ್ತವೆ. ಚಹಾದ ನಿಸ್ಸೀಮ ಭಕ್ತರು ೧೪೫ ಅಂಶ ಉಷ್ಣತೆಯುಳ್ಳ ಚಹಾವನ್ನು ಕುಡಿಯಲಿಕ್ಕೆ ಸಮರ್ಥರಾಗಿರುವರು. ಅದರೆ ೧೩೦ ಅಂಶ ಉಷ್ಣತೆಯುಳ್ಳ ಚಹಾದಲ್ಲಿ ಅವರು ತಮ್ಮ ಬೊಟ್ಟನ್ನು ಸಹ ಹಾಕಲಾರರು!! ಕಾಲಿನ ಚರ್ಮವು ಬಹಳ ಬಿರುಸಾಗಿರುತ್ತಿದ್ದರೂ ೧೧೫ ಅಂಶ ಬಿಸಿ ನೀರು ಅದಕ್ಕೆ ತಡೆಯುವದಿಲ್ಲ!!! ೧೦೫ ಅಂಶಕ್ಕಿಂತ ಹೆಚ್ಚು ಬಿಸಿಯಾದ ನೀರಿನಿಂದ ಸ್ನಾನಮಾಡುವದೂ ಅಶಕ್ಯವು!!!

ಕೈಬೆರಳುವ ವಜಾಬಾಕಿಗಳನ್ನು ಕಲಿಸುವ ಮೂರು ರೀತಿಗಳು.

ಅಂಕಗಣಿತವನ್ನು ಕಲಿಸುವ ಮುಖ್ಯ ಉದ್ದೇಶಗಳು ಎರಡು: (೧) ವಿಚಾರಶಕ್ತಿಯ ಬೆಳವಣಿಗೆ, (೨) ವ್ಯವಹಾರಜ್ಞಾನ. ಇವುಗಳಲ್ಲಿ ಮೊದಲನೆಯ ಉದ್ದೇಶವು ಸಫಲವಾಗುವದಕ್ಕೆ ಗಣಿತದ ಪ್ರತಿಯೊಂದು ಕೃತಿಯನ್ನು ಹುಡುಗರಿಂದ ಯಾಂತ್ರಿಕ ರೀತಿಯಿಂದ ಮಾಡಿಸದೆ ಆ ಕೃತಿಯ ಕಾರಣದ ಬಗ್ಗೆ ಅವರಲ್ಲಿ ಜಿಜ್ಞಾಸೆಯನ್ನು ಹುಟ್ಟಿಸಿ, ಅವರನ್ನು ವಿಚಾರಕ್ಕೆ ಹಚ್ಚಿ, ಶಕ್ಯವಿದ್ದಷ್ಟು ಮಟ್ಟಿಗೆ ಸಮಾಧಾನಪಡಿಸಲಿಕ್ಕೆ ಯತ್ನಮಾಡತಕ್ಕದ್ದು. ಈ ಕ್ರಮವು ಮೊದಮೊದಲು ಬಹು ಶ್ರಮದ್ದೆಂದು ಕಂಡುಬಂದರೂ ಹುಡುಗರಿಗೆ ಒಮ್ಮೆ ಈ ರೂಢಿಯು ಬಿತ್ತೆಂದರೆ ಶಿಕ್ಷಕನ ಶ್ರಮವು ಕಡಿಮೆಯಾಗಹತ್ತುವದು. ಮುಂದೆ ಮುಂದೆ ಹುಡುಗರು ತಾವೇ ಸ್ವತಂತ್ರವಾಗಿ ವಿಚಾರಮಾಡಿ ಕಾರಣಗಳನ್ನು ಶೋಧಿಸಹತ್ತುವದು.

೨ನೆಯ ಇಯತ್ತೆಗೆ ಬಂದ ಹೊಸ ಹುಡುಗರಿಗೆ ಸಂಖ್ಯಾಲೇಖನವನ್ನೂ ವಾಚನವನ್ನೂ ಕಲಿಸಿದ ತರುವಾಯ ಬೇಕೀಜಿಗಿಂತ ವಜಾಬಾಕಿಯನ್ನು ಕಲಿಸುವದು, ಅದರಲ್ಲಿಯೂ, ಕೈಬೆರುವ ವಜಾಬಾಕಿಗಳನ್ನು ಸಕಾರಣವಾಗಿ ತಿಳಿಸಿಕೊಡುವದು ಕಠಿಣ ಸಂಗತಿಯಾಗಿದೆ. ಹುಡುಗರು ಡಾಗೂ ಹೀಗೂ ತಿಳಕೊಂಡು ನಿಜವಾದ ಉತ್ತರವನ್ನು ತೆಗೆಯಲಿಕ್ಕೆ ಕಲಿಯುವರು. ಆದರೆ ಮಾಡಿದ ಕೃತಿಯ ಕಾರಣವನ್ನು ಕೇಳಿದರೆ, ಬಹುಃ ಎಷ್ಟೋ ಹುಡುಗರಿಗೆ ವಿವರಿಸಿ ಹೇಳಲಿಕ್ಕೆ ಬರುವದಿಲ್ಲ. ಆ ಕಾರಣವನ್ನು ಮೂರು ಬಗೆಯಾಗಿ ವಿವರಿಸಿ ಹೇಳಬಹುದು.

೧ನೆಯಬಗೆ:—ಹೆಚ್ಚಿನಜಾತಿಯ ಗಂಟುಗಳನ್ನು ಮುರಿಸುವ ಪದ್ಧತಿಯು.

ಉದಾ:— ೩೭೬ ಇಲ್ಲಿ ಮೇಲಿನ ಸಂಖ್ಯೆಯೊಳಗೆ ೬ ಬಿಡಿಕಾಳು
೨೫೮ ಗಳು ಇರುವವು; ಕೆಳಗಿನ ಸಂಖ್ಯೆಯಲ್ಲಿ ೮ ಬಿಡಿಕಾಳುಗಳು ಇರುವವು. ಅಂದರೆ, ೬ ಬಿಡಿಕಾಳುಗಳಲ್ಲಿ ೮ ಬಿಡಿಕಾಳುಗಳನ್ನು ಕಳೆಯಬೇಕಾಗಿದೆ ಅಥವಾ ಕೊಡಬೇಕಾಗಿದೆ. ಕೊಡಲಿಕ್ಕೆ ಬರುವದಿಲ್ಲ. ನಮ್ಮ ಹತ್ತರ ಒಂದು ದುಡ್ಡು ಒಂದು ಪೈ ಇದ್ದು ನಾವು ೨ ಪೈಗಳನ್ನು ಕೊಡಬೇಕಾಗಿದ್ದರೆ ಆ ದುಡ್ಡನ್ನು ಮುರಿಸಿಕೊಡುತ್ತೇವೆ. ಅದೇ

ಪ್ರಕಾರ ಈಗ ೩೭೬ ಈ ಸಂಖ್ಯೆಯೊಳಗಿನ ೭ ಹತ್ತರ ಗಂಟುಗಳಲ್ಲಿ ಬಂದು ಹತ್ತರ ಗಂಟನ್ನು ಮುರಿಸಿ ಬಿಡಿಕಾಳು ಮಾಡಿಕೊಂಡರೆ ಕೊಡಲಿಕ್ಕೆ ಬರುವದು. ಆಗ ಆ ಸಂಖ್ಯೆಯು,

೩ ನೂ.	೬ ಹ.	೧೬ ಬಿ.
೨	೫	೮
೧	೧	೮

ಹೀಗೆ ಆಯಿತು. ಇದರಲ್ಲಿ ಈ ಸಂಖ್ಯೆಯನ್ನು ಕಳೆಯಲು ಉತ್ತರವಾಯಿತು.

೨ನೆಯಬಗೆ:— ೮ರಲ್ಲಿ ೩ ಕಳೆಯಬೇಕಾಗಿದೆ ಎಂದು ತಿಳಿಯುವಾ: ಈ ಎರಡೂ ಸಂಖ್ಯೆಗಳಲ್ಲಿ ೨ ಕೂಡಿಸಿ (೮+೨)= ೧೦ ಹಾಗು (೩+೨)= ೫ ಇವುಗಳ ವಜಾಬಾಕಿ ಮಾಡಿದರೆ ಮೊದಲಿನಷ್ಟೇ ಉತ್ತರವು ಬರುವದು. ಅಂದರೆ "ಕಳಿಸಿಕೊಳ್ಳುವ ಸಂಖ್ಯೆಯಲ್ಲಿಯೂ ಕಳೆಯುವ ಸಂಖ್ಯೆಯಲ್ಲಿಯೂ ಒಂದೇ ಅಂಕೆಯನ್ನು ಕೂಡಿಸಿದರೆ ವಜಾಬಾಕಿಯಲ್ಲಿ ಹೆಚ್ಚುಕಡಿಮೆಯಾಗುವದಿಲ್ಲ," ಈ ಸಿದ್ಧಾಂತದ ಸಹಾಯದಿಂದ ತಿಳಿಸುವದು.

ಮೇಲಿನ ಉದಾಹರಣೆಯನ್ನು ಪುನಃ ತೆಗೆದುಕೊಳ್ಳುವಾ. ೬ ಬಿಡಿಕಾಳುಗಳಲ್ಲಿ ೮ ಬಿಡಿಕಾಳುಗಳನ್ನು ಕೊಡಲಿಕ್ಕೆ ಬರುವದಿಲ್ಲವಾದ ಕಾರಣ ನಾವು ನಮ್ಮ ಹತ್ತರ ಇದ್ದ ಹತ್ತರ ಗಂಟುಗಳನ್ನು ಮುರಿಸುವ ಗೋಜಿಗೆ ಹೋಗದೆ, ಬಂದು ಹತ್ತರ ಗಂಟನ್ನು ಕೈಗಡ ತಂದು ಬರೆದಿಡುವದು; ಹಾಗು ಅದನ್ನು ಮುರಿಸಿ ಮೊದಲನೇ ರೀತಿಯಂತೆ ೮ ಬಿಡಿಕಾಳುಗಳನ್ನು ಕೊಟ್ಟು ಬಿಡೋಣ. ತರುವಾಯ ಹತ್ತರ ಗಂಟುಗಳ ವಜಾಬಾಕಿಯನ್ನು ಮಾಡುವಾಗ ಕೈಗಡ ತಂದ ಬಂದು ಗಂಟನ್ನು ಕೂಡಿಸಿಕೊಂಡು ಕಳೆಯುವದು. ಈ ಕೃತಿಯಲ್ಲಿ ಎರಡೂ ಸಂಖ್ಯೆಗಳ ಸ್ವರೂಪವು ಕೆಳಗೆಕೊಟ್ಟಂತೆ ಆಗುವದು:

೩ ನೂ.	೭ ಹ.	೧೬ ಬಿ.
೧	೬ ಹ.	೮ ಬಿ.
	೧ ಹ.	
೧ ನೂ.	೧ ಹ.	೮ ಬಿ.

ಇಲ್ಲಿ ಕಳಿಸಿಕೊಳ್ಳುವ ಸಂಖ್ಯೆಯ ಬಿಡಿಕಾಳುಗಳಲ್ಲಿ ಹತ್ತು ಬಿಡಿಕಾಳುಗಳನ್ನೂ ಕಳೆಯುವ ಸಂಖ್ಯೆಯ ಹತ್ತರಗಂಟುಗಳಲ್ಲಿ ಅವ್ವೇ,

ಅಂದರೆ ಒಂದು ಹತ್ತರಗಂಟನ್ನೂ ಕೂಡಿಸಿ ಕೊಂಡು ವಜಾಬಾಕಿಯನ್ನು ಮಾಡಿರುತ್ತೇವೆ. ಕೈಗಡ ತಂದ ಒಂದು ಹತ್ತರ ಗಂಟನ್ನು "ಕೈ" ಎಂದು ಹೇಳಿ ಬರೆದಿಟ್ಟದ್ದೇವೆ. ಈ ಪ್ರಕಾರ ಕೈಲೆ ತೆಗೆದುಕೊಳ್ಳುವದು ಮೊದಲನೆಯ ರೀತಿಯಲ್ಲಿ ಇಲ್ಲ. ಅಲ್ಲಿ ಹೆಚ್ಚಿನ ಜಾತಿಯ ಒಂದು ಗಂಟನ್ನು ಮುರಿಸಲಿಕ್ಕೆ ತಕ್ಕೊಂಡ ಕೂಡಲೆ ಅಲ್ಲಿ ಒಂದು ಕಡಿಮೆಯಾಯಿತೆಂತಲೇ ತಿಳಕೊಂಡು ವಜಾಬಾಕಿಯನ್ನು ಮಾಡುವೆವು.

ಈ ಎರಡನೇ ರೀತಿಯಲ್ಲಿ ಕೈಗಡ ತಂದದ್ದನ್ನು ಇಟ್ಟುಕೊಳ್ಳದೆ ಕೂಡಲೆ ಮುಟ್ಟಿಸಿ ಬಿಡಬೇಕೆಂಬ ನೀತಿಯ ಮಾತನ್ನು ಹೊರಡಿಸಿಕೊಳ್ಳಲಿಕ್ಕೆ ಅನುಕೂಲತೆಯಿರುವದು.

ಇನೆಯ ಬಗೆ:—ಕಳೆಯುವ ಸಂಖ್ಯೆಯು ಒಂದೊಂದೇ ಸ್ಥಾನದಲ್ಲಿ ಎಷ್ಟು ಕೂಡಿಸಿದರೆ ಕಳೆಸಿಕೊಳ್ಳುವ ಸಂಖ್ಯೆಯು ಆಯಾಸ್ಥಾನದ ಅಂಕೆಯು ಬರುವದೆಂಬದನ್ನು ನೋಡಿಕೊಂಡು ಉತ್ತರವನ್ನು ತೆಗೆಯುವದು. ಹ್ಯಾಗಂದರೆ:—

೨೭೬ . ಕಳೆಯುವ ಸಂಖ್ಯೆಯಾದ ೨೫೮ ರ ೮ ಬಿಡಿ ಕಾಳುಗ
೨೫೮ ಳಲ್ಲಿ ಎಷ್ಟು ಬಿಡಿಕಾಳುಗಳನ್ನು ಕೂಡಿಸಿದರೆ ಬಿಡಿ

ಕಾಳಿನ ಸ್ಥಳದಲ್ಲಿ ೬ ಇರುವ ಅಂಕೆಯು ಬರುವದೆಂಬದನ್ನು ಸ್ವಲ್ಪ ವಿಚಾರಮಾಡಿದರೆ ೮ ಬಿಡಿಕಾಳುಗಳನ್ನು ಕೂಡಿಸಬೇಕೆಂದು ಹೊರಡುವದು. ಯಾಕಂದರೆ ೮ ಕ್ಕಿಂತ ೬ ಕಡಿಮೆ ಇರುವದು. ಮತ್ತು ೮ ರಲ್ಲಿ ಒಂದು ಅಂಕೆಯನ್ನು ಕೂಡಿಸಿದರೆ ಬಿಡಿಕಾಳಿನ ಸ್ಥಳದಲ್ಲಿ ೬ ಬರುವ ಅಂಕೆಯುಂಟರೆ ೧೬ ಈ ಸಂಖ್ಯೆಯಿಷ್ಟಿರಲಿಕ್ಕೆಬೇಕು. ಪಾಗು ೧೬ ಬರಬೇಕಾದರೆ ೮ ರಲ್ಲಿ ೮ ಈ ಅಂಕೆಯನ್ನೇ ಕೂಡಿಸಲಿಕ್ಕೆಬೇಕು. ಆದಕಾರಣ ವಜಾಬಾಕಿಯ ಬಿಡಿಕಾಳಿನ ಸ್ಥಾನದಲ್ಲಿ ೮ ಇರಲಿಕ್ಕೆಬೇಕು. ಈ ರೀತಿಯಿಂದ ವಿಚಾರಮಾಡಿ ಎಲ್ಲ ಸ್ಥಾನಗಳ ಅಂಕೆಗಳನ್ನು ತೆಗೆಯಬಹುದು.

ಈ ಮೂರು ರೀತಿಗಳಲ್ಲಿ ಯಾವ ರೀತಿಯು ಚಿಕ್ಕಮಕ್ಕಳಿಗೆ ಸುಲಭವಾಗಿ ತಿಳಿಯುವದೆಂಬಬಗ್ಗೆ ವಿಚಾರಮಾಡಲು ಅನುಭವವಿಂದ ಮೊದಲನೆಯ ರೀತಿಯೇ ತಿಳಿಯಲಿಕ್ಕೆ ಸುಲಭವಾಗಿದ್ದು ವ್ಯವಹಾರಕ್ಕೆ

ಅನುಸರಿಸಿದ್ದೂ ಆಗಿರುವದು. ಆದಕಾರಣ ಪ್ರಾರಂಭದಲ್ಲಿ ಅದನ್ನೇ ಕಲಿಸತಕ್ಕದ್ದು. ಆದರೆ ಪಾಟಿಯು ಮೇಲಿನ ದೊಡ್ಡ ದೊಡ್ಡ ಸಂಖ್ಯೆಗಳ ವಜಾಬಾಕಿಗಳನ್ನು ಮಾಡುವಾಗ ಈ ರೀತಿಯಿಂದ ತೊಂದರೆ ಯಾಗುವದು.

ಉದಾ:— ೪೦೦೦೦೫ ಈ ವಜಾಬಾಕಿಯನ್ನು ಮಾಡುವಾಗ ೫೬೭೮ ಹೆಚ್ಚಿನ ಜಾತಿಯ ಗಂಟನ್ನು ಮುರಿ

ಸಿಕೊಳ್ಳಬೇಕಾದರೆ ಒಂದು ಲಕ್ಷದ ಗಂಟನ್ನು ತಕ್ಕೊಂಡು ಅನುಕ್ರಮವಾಗಿ ಮುರಿಸುತ್ತ ೯೯೯೯೫ ಹೀಗೆ ಸಂಖ್ಯೆಯನ್ನು ಸಿದ್ಧಮಾಡಿಕೊಳ್ಳಬೇಕಾಗುವದು. ೩ನೆಯ ರೀತಿಯಲ್ಲಿ ಈ ತೊಂದರೆಯು ಇರುವದಿಲ್ಲ. ಪ್ರತಿಯೊಂದು ಸ್ಥಾನದ ವಜಾಬಾಕಿಯನ್ನು ಮಾಡುವಾಗ ಅದರ ಹಿಂದಿನ ಸ್ಥಾನದ ಒಂದು ಗಂಟನ್ನು ಕೈಗಡ ತಂದು, ಕೂಡಲೆ ಕೊಟ್ಟು ಬಿಡುವದರಿಂದ ಇಡೀ ಸಂಖ್ಯೆಯಲ್ಲಿ ಆದ ಬದಲಾವಣೆಯನ್ನು ಲಕ್ಷದಲ್ಲಿಡುವ ಕಾರಣ ಬೀಳುವದಿಲ್ಲ.

ಇನ್ನು ಮೂರನೆಯ ರೀತಿಯು ವಜಾಬಾಕಿಯ ಶಾಳೆಯಿಂದ ಹೊರಟಿರುವ ಕಾರಣ ಅದು ಚಿಕ್ಕಮಕ್ಕಳಿಗೆ ತಿಳಿಯಲಾರದು. ವಜಾಬಾಕಿಯನ್ನು ಕಲ್ಪಿತ ಉಪಾಧ್ಯಾಯರಿಗೆ ಮಾತ್ರ ಹೇಳಬಹುದು.

ತ. ನಾ. ಅವಿನಭಾವಿ.



(ಬರೆದು ಬಂದದ್ದು.)

ಶರೀರಸಂಪತ್ತಿಯನ್ನು ಕಾಯ್ದುಕೊಳ್ಳಲಿಕ್ಕೆ ಮುಖ್ಯ ಉಪಾಯವು ವ್ಯಾಯಾಮವು. ಆದರೂ ಈ ಉಪಾಯಕ್ಕೆ ಬ್ರಹ್ಮಚರ್ಯ ಮತ್ತು ಯೋಗ್ಯ ಆಹಾರ ಇವುಗಳ ಅವಶ್ಯಕತೆಯುಂಟು. ಆದ್ದರಿಂದ ಇವುಗಳ ಸಂಬಂಧವಾಗಿ ಸಂಕ್ಷಿಪ್ತ ಮಾಹಿತಿಯನ್ನು ಕೆಳಗೆ ಕೊಟ್ಟಿರುತ್ತದೆ.

ಧನಸಂಪತ್ತಿಯನ್ನು ಪೆಚ್ಚಿಸುವ ಮನುಷ್ಯನು ವಿನಾಕಾರಣ ಖರ್ಚನ್ನೂ ದುಂದುಗಾರಿಕೆಯನ್ನೂ ಬಿಡುವದು, ಅಂದರೆ ಮಿತವ್ಯಯ ವಿಂದಿರುವದು ಹೇಗೆ ಅವಶ್ಯಕವೊ, ಅದರಂತೆ ಶರೀರಸಂಪತ್ತಿಯನ್ನು

ಬೆಳೆಯಿಸುವವನು ಬ್ರಹ್ಮಚರ್ಯವನ್ನು ಕಾಯ್ದುಕೊಳ್ಳುವದು ಅತ್ಯಾವಶ್ಯವದೆ. ಖರ್ಚಿನಲ್ಲಿ ಮಿತವ್ಯಯವಿಲ್ಲದಿದ್ದರೆ, ಕುಬೇರನಷ್ಟು ಸಂಪತ್ತಿ ಇದ್ದರೂ ಹಾಳಾಗಲಿಕ್ಕೆ ಹೇಗೆ ತಡವಾಗುವದಿಲ್ಲವೋ, ಅದರಂತೆ ಬ್ರಹ್ಮಚರ್ಯವನ್ನು ಯಾವ ಮನುಷ್ಯನು ಉಲ್ಲಂಘನ ಮಾಡುವನೋ, ಅವನ ಮೊದಲಿನ ಶರೀರಸಂಪತ್ತಿಯು ಬೇಕಾದಷ್ಟು ಇದ್ದರೂ ಅದರ ನಾಶವಾಗಲಿಕ್ಕೆ ವಿಲಂಬವಾಗುವದಿಲ್ಲ. ಅನ್ನದ ಸಾರವು ರಕ್ತವು. ರಕ್ತದ ಸಾರವು ವೀರ್ಯವು. ಇದರ ಮೇಲಿಂದ ವೀರ್ಯದ ವ್ಯಯವಾದ ಮೇಲೆ ಶರೀರದಲ್ಲಿಯ ಬಹಳ ಮಹತ್ವವುಳ್ಳ ದ್ರವ್ಯದ ವ್ಯಯವಾಗುತ್ತದೆನ್ನಲಿಕ್ಕೆ ಅಡ್ಡಿ ಇಲ್ಲ. ವೀರ್ಯವು ಉತ್ಪನ್ನವಾಗುವ ಹಾಗೂ ಅದು ವೃದ್ಧಿಸುವ ಕಾಲವು ತಾರುಣ್ಯವು. ಇಂಥಾ ತಾರುಣ್ಯಕಾಲದಲ್ಲಿಯೇ ಮನುಷ್ಯನ ಯಾವತ್ತು ಶಕ್ತಿಗಳು ಭರದಿಂದ ಬೆಳೆಯುತ್ತಿರುತ್ತವೆ. ಈ ವಿಶ್ವವು ನಂದನವನದಂತೆ ತೋರುವ ದಿವ್ಯಕವಿತ್ವದೃಷ್ಟಿಯು ತಾರುಣ್ಯಾವಸ್ಥೆಯಲ್ಲಿಯೇ ಪ್ರಾಪ್ತವಾಗುತ್ತದೆ.

ವಂಶವೃದ್ಧಿಯನ್ನು ಮಾಡಿ ಲೌಕಿಕದೃಷ್ಟಿಯಿಂದ ಅಮರನನ್ನಾಗಿ ಮಾಡುವದು ವೀರ್ಯವೇ. ಇದರ ಮೇಲಿಂದಲೂ ವೀರ್ಯದ ನಾಶವಾದ ಕೂಡಲೆ ಮನುಷ್ಯನ ಇತರ ಶಕ್ತಿಗಳ ನಾಶವಾದರೂ ಆಗುತ್ತದೆಂಬ ಅನುಭವದ ಮೇಲಿಂದಲೂ, ವೀರ್ಯದ ಮಹತ್ವವೆಷ್ಟಿದೆ, ಎಂಬದು ಎಲ್ಲರಿಗೂ ತಿಳಿಯುವಂತಿದೆ. ಯಾರಲ್ಲಿ ವೀರ್ಯೋತ್ಪತ್ತಿಯಾಗುವದಿಲ್ಲವೋ ಅಂಥಾ ಜನರಲ್ಲಿ (ಷಂಢರಲ್ಲಿ) ಎಲ್ಲ ಪ್ರಕಾರದ ಶಕ್ತಿಗಳ ದೌರ್ಬಲ್ಯವು ಕಂಡು ಬರುವ ಸಂಗತಿಯಾದರೂ ವೀರ್ಯದ ಮಹತ್ವವನ್ನೇ ಹೇಳುತ್ತದೆ. ವೀರ್ಯವು ಶರೀರದಲ್ಲಿಯ ಅತ್ಯಂತ ಅಮೂಲ್ಯವಾದ ವಸ್ತುವಾದ್ದರಿಂದ ಅಯೋಗ್ಯಕಾಲಕ್ಕೆ ಅದನ್ನು ವ್ಯಯಮಾಡುವದು ಆರೋಗ್ಯಕ್ಕೆ ಅತ್ಯಂತ ಹಾನಿಕರವಾದ ಸಂಗತಿಯಾಗಿದೆ. ಎಷ್ಟೋ ಪ್ರಾಣಿಗಳಲ್ಲಿ ಸ್ತ್ರೀಪುರುಷರ ಸಂಬಂಧವು ಇಡೀ ಜನ್ಮದಲ್ಲಿ ಒಂದೇ ಸಾರೆ ಇರುತ್ತದೆ. ಮತ್ತು ಈ ಸಂಬಂಧವು ಪೂರ್ಣವಾದಮೇಲೆ ಗಂಡು ಸಾಯುತ್ತದೆ. ಇದರ ಮೇಲಿಂದ ವೀರ್ಯಪತನಕ್ಕೂ ಶರೀರದಲ್ಲಿಯ ಪ್ರಾಣರೂಪ ಜೈತನ್ಯಕ್ಕೂ ಎಷ್ಟು ನಿಕಟ ಸಂಬಂಧವಿದೆ, ನೋಡಿರಿ! ವೀರ್ಯವನ್ನು ಅನಿಯಮಿತವಾಗಿ ವೆಚ್ಚಮಾಡುವದು ಆಯುಷ್ಯಹಾನಿಯ ಮಾರ್ಗವಾಗಿದೆ. ಆದ್ದರಿಂದ ಶರೀರಸಂಪತ್ತಿಯನ್ನು ಬೆಳೆಯಿಸಲಿಚ್ಛಿಸುವವರು ಬ್ರಹ್ಮಚರ್ಯ

ವನ್ನು ಕಾಯ್ದುಕೊಳ್ಳುವದಕ್ಕೆ ಬಹಳೇ ದಕ್ಷರಾಗಿರಬೇಕು. ಮಾನಸಿಕ ಸಂಪತ್ತಿ ಮತ್ತು ಬುದ್ಧಿಪ್ರಭಾವ ಇವುಗಳನ್ನು ಕಾಯ್ದುಕೊಳ್ಳಲಿಕ್ಕೆ ಬ್ರಹ್ಮಚರ್ಯದ ಅವಶ್ಯಕತೆಯು ಎಷ್ಟಿದೆ ಎಂಬದಕ್ಕೆ ನಮ್ಮ ಧರ್ಮಗ್ರಂಥಗಳೂ ಎರಡನೇ ಧರ್ಮಗ್ರಂಥಗಳೂ ಸಾಕ್ಷಿಗಳಾಗಿವೆ.

ಬ್ರಹ್ಮಚರ್ಯವನ್ನು ಕಾಯ್ದುಕೊಳ್ಳುವದು ಅವಶ್ಯವೆಂದು, ಅಜನ್ಮ ಸ್ತ್ರೀಪರಾಙ್ಮುಖರಾಗಿರಬೇಕೆಂದು ನಾವು ಹೇಳುವದಿಲ್ಲ. ವ್ಯವಹಾರದ ಮತ್ತು ಭೌತಿಕಶಾಸ್ತ್ರದ ದೃಷ್ಟಿಯಿಂದ ವಿಚಾರಿಸಲು, "ಪರಸ್ಪರರು ಪರಸ್ಪರರ ದರ್ಶನವನ್ನು ತ್ಯಜಿಸಬೇಕೆಂಬ ಹೇತುವಿನಿಂದ ಪರಮೇಶ್ವರನು ಸ್ತ್ರೀಪುರುಷರ ಜಾತಿಯನ್ನು ನಿರ್ಮಿಸಿರುವನು" ಎಂದು ಕಂಡುಬರುವದಿಲ್ಲ. ಜಿತೇಂದ್ರಿಯರಾಗಿ ಇಡೀ ಆಯುಷ್ಯವನ್ನು ಸನ್ಯಾಸಿಗಳಂತೆ ಕಳೆಯಬೇಕೆಂದೂ ನಾವು ಹೇಳುವದರ ಉದ್ದೇಶವಿಲ್ಲ. ಗೃಹಸ್ಥಾಶ್ರಮವು ಮನುಷ್ಯರಿಗೆ ಅತ್ಯವಶ್ಯವಾದದ್ದೂ ಸುಖಕರವಾದದ್ದೂ, ಇದೆ ಎಂದು ನಮ್ಮ ಅಭಿಪ್ರಾಯ ಉಂಟು. ಗೃಹಸ್ಥಾಶ್ರಮವು ಸುಖಕರವಾಗಿರುವದು ನಿಜವು. ಆದರೆ ಅದರಲ್ಲಿ ಸಹ ಸ್ತ್ರೀಸಂಬಂಧವಾದ ಸುಖವನ್ನು ಮನುಷ್ಯನು ಎಷ್ಟು ತಕ್ಕೊಳ್ಳಬೇಕೆಂಬದು ಸೃಷ್ಟಿ ನಿಯಮದಿಂದ ಮರ್ಯಾದಿತವಾಗಿದೆ. ಆ ಮರ್ಯಾದೆಯಲ್ಲಿಯೇ ನಾವು ಇರತಕ್ಕದ್ದು ಯೋಗ್ಯವು. ಬ್ರಹ್ಮಚರ್ಯದ ಮರ್ಯಾದೆಯನ್ನು ಮೀರಿ ಮನಬಂದಂತೆ ನಡೆದರೆ ಅಶಕ್ತತೆ, ಉತ್ಸಾಹಹೀನತೆ, ಮುಖಪಾಂಡ್ಯ ಮೊದಲಾದ ವಿಕಾರಗಳುಂಟಾಗುವವು. ಶಿಮ್ಮೆಮ್ಮೆ ಈ ಅತಿಕ್ರಮಣವು ಬಹಳೇ ಹೆಚ್ಚಾದರೆ ಪ್ರಮೇಹಾದಿ ಭಯಂಕರ ರೋಗಗಳಾಗುವವು. ಇಷ್ಟರಮೇಲಿಂದ ನಮ್ಮ ಪ್ರಿಯವಾಚಕರಿಗೆ ಬ್ರಹ್ಮಚರ್ಯದ ಮಹತ್ವವು ಸಹಜವಾಗಿ ತಿಳಿಯುವಂತಿದೆ.

ಗೃಹಸ್ಥರಾಗುತ್ತು ಒತ್ತಟ್ಟಿಗಿರಲಿ. ಇಪ್ಪತ್ತೈದು ವರುಷಗಳವರೆಗೆ ಗಂಡಸರಿಗೂ, ಹದಿನಾರು ವರುಷಗಳವರೆಗೆ ಹೆಂಗಸರಿಗೂ ಬ್ರಹ್ಮಚರ್ಯವು ವಿಧಿಸಲ್ಪಟ್ಟಿದೆಂಬದು ಕೆಳಗಿನ ಚರಕ ಮಹಾಋಷಿಯ ಉಕ್ತಿಯ ಮೇಲಿಂದ ಸಿದ್ಧವಾಗುತ್ತದೆ:—

ಕೃತಬ್ರಹ್ಮಚರ್ಯೋಽಶವರ್ಷ್ಯಾಮಪ್ರಾಪ್ತಃ ಪಂಚವಿಂಶತಿಮ್ ॥
ಯಃ ಪುಮಾನ್ಗರ್ಭಮಾಧತ್ತೇ ಕುಕ್ಷಿಸ್ಥಃಸನಿಪದ್ಯತೇ ॥೧॥

ಮೇಲೆ ಹೇಳಿದ ನಿಯಮವನ್ನು ಪಾಲಿಸಲಿಕ್ಕೆ ತರುಣ ಜನರು ಪ್ರಯತ್ನಮಾಡಲಿಕ್ಕೆ ತೊಡಗಬೇಕು.

ವಿದ್ಯಾರ್ಥಿಗಳು ಬ್ರಹ್ಮಚರ್ಯವನ್ನು ಪಾಲಿಸಬೇಕು; ಅಂದರೆ, ಲಗ್ನ ಮಾಡಿಕೊಳ್ಳಬಾರದೆಂಬ ಮಾತು ಒತ್ತಟ್ಟಿಗಿರಲಿ. ಸ್ತ್ರೀಪುರುಷರ ಸಂಬಂಧವಾದ ಸಂಗತಿಗಳಿಗೆ ಮನದಲ್ಲಿ ಆಶ್ರಯ ಸಹ ಕೊಡಬಾರದು. ಈ ಮಾತಿಗೆ ಬಹಳೇ ಜಾಗರೂಕರಾಗಿರಬೇಕು. ಕಾಮವಾಸನೆಯು ಮನದಲ್ಲಿ ಸಂಚರಿಸಿದರೆ ಸಾಕು. ವೀರ್ಯಪಿಂಡದಿಂದ ವಿರ್ಯಸ್ಖಲನವಾಗುವದು. ಆಪ್ಪರಿಂದ ಈ ವಿಷಯಸಂಬಂಧವಾದ ಯಾವ ಪ್ರಕಾರದ ಕಲ್ಪನೆಯು ಸಹ ಮನದಲ್ಲಿ ಬರಕೂಡದು.

ಲಗ್ನವಾಗಿ ಯೋಗ್ಯಕಾಲಕ್ಕೆ ಗರ್ಭಾಧಾನವಾಗುವವರೆಗೆ ಮೂತ್ರೋತ್ಸರ್ಗದ ಹೊರತು ಯಾವದೇ ಕಾರಣದಿಂದ ಜನನೇಂದ್ರಿಯಕ್ಕೆ ಸ್ಪರ್ಶ ಮಾಡುವದು ಅತ್ಯಂತ ನಿಂದ್ಯವೂ ಅಪಾಯಕರವೂ ಆಗಿದೆ. ಈ ಸಂಗತಿಯನ್ನು ಯೋಗ್ಯ ಕಾಲಕ್ಕೆ ಹುಡುಗರ ಮನಸ್ಸಿನಲ್ಲಿ ಅವರ ಪಾಲಕರು ಬಿಂಬಿಸತಕ್ಕದ್ದು.

ಬ್ರಹ್ಮಚರ್ಯವನ್ನು ಕಾಯ್ದುಕೊಳ್ಳಲಿಕ್ಕೆ ಅವಶ್ಯವಾದ ಸಂಗತಿಗಳು.

(೧). ಉತ್ತೇಜಕ ಆಹಾರವನ್ನು ತ್ಯಜಿಸಬೇಕು:—ಉತ್ತೇಜಕ ಆಹಾರದಿಂದ ಕಾಮವಾಸನೆಯು ಹೆಚ್ಚುತ್ತದೆ. ಹಾಗು ಅಯೋಗ್ಯವಿಚಾರಗಳು ಮನದಲ್ಲಿ ಬರುವವು. ಆದ್ದರಿಂದ ಇಂಥ ಆಹಾರಗಳನ್ನು ಸೇವನ ಮಾಡಬಾರದು. ಚಟ್ನಿ, ಮಸಾಲಿ, ಉಳ್ಳೇಗಡ್ಡಿ, ಬಳ್ಳೊಳ್ಳಿ, ಚಹಾ, ಕಾಫಿ, ತಂಬಾಕು ಮೊದಲಾದ ಪದಾರ್ಥಗಳೂ, ಎಲ್ಲ ಪ್ರಕಾರದ ಮದ್ಯಗಳೂ, ಮಾಂಸವೂ ಉತ್ತೇಜಕಗಳಾಗಿವೆ. ಕಾರಣ ಈ ಪದಾರ್ಥಗಳು ವಿದ್ಯಾರ್ಥಿಗಳಿಂದ ತ್ಯಜಿಸಲ್ಪಡಬೇಕು. ಇದರಂತೆ ಖೊಬ್ಬರಿ, ಹಾಲು, ಬೇಳೆ ಇವುಗಳನ್ನು ಮರ್ಯಾದೆ ಮೀರಿ ಸೇವನ ಮಾಡಬಾರದು. ಯಾಕಂದರೆ ಈ ಪದಾರ್ಥಗಳಾದರೂ ಬ್ರಹ್ಮಚರ್ಯಭಂಗಕ್ಕೆ ಕಾರಣಗಳಾಗಿವೆ. ಆದ್ದರಿಂದ ಇವುಗಳನ್ನು ತಕ್ಕಮಟ್ಟಿಗೆ ಸೇವಿಸತಕ್ಕದ್ದು.

(೨). ಶೃಂಗಾರವಿಷಯಸಂಬಂಧವಾದ ವಿಚಾರಗಳನ್ನಾಗಲಿ

ವಾಗ್ವಾದಗಳನ್ನಾಗಲಿ ಮಾಡಕೂಡದು. ಈ ಮಾತಿನ ವಾಗ್ವಾದದಿಂದ ಹಾಗೂ ವಿಚಾರದಿಂದ ಕಾಮುವಾಸನೆಯು ಜಾಗೃತವಾಗಿ ವೀರ್ಯವು ಸ್ಥಾನಭ್ರಷ್ಟವಾಗುತ್ತದೆ. ಆದ್ದರಿಂದ ಇಂಥ ಪ್ರಸಂಗ ತಂದುಕೊಳ್ಳಲಾಗದು. ಅಂದರೆ, ಬೀಭತ್ಸ ಆಟ ಮುಂತಾದವುಗಳನ್ನು ನೋಡುವದೂ, ಅಂಥ ಪುಸ್ತಕಗಳನ್ನೋದುವದೂ ವರ್ಜಮಾಡಬೇಕು.

(೩). ಮಲಗುವದಕ್ಕಿಂತ ಮೊದಲು ಪರಮೇಶ್ವರನ ಇಲ್ಲವೆ ಯಾವದೊಂದು ಪೂಜ್ಯವಿಭೂತಿಯಬಗ್ಗೆ ಚಿಂತಿಸಬೇಕು. ಮಲಗುವ ಮೊದಲು ಯಾವ ವಿಚಾರಗಳು ನಮ್ಮ ಮನದಲ್ಲಿ ಸಂಚರಿಸುವವೋ ಅವುಗಳ ಪರಿಣಾಮವು ನಿದ್ದೆಯಲ್ಲಿ ಸಹ ನಮ್ಮ ಮೇಲೆ ಆಗುತ್ತದೆ. ಆದ್ದರಿಂದ ಅಯೋಗ್ಯ ವಿಚಾರಗಳು ಮನಸದಲ್ಲಿ ಬರಲಿಕ್ಕೆ ಅಸ್ಪದ ಕೊಡಬಾರದು. ಕಾರಣ, ಮಲಗುವದಕ್ಕಿಂತ ಮೊದಲು ಈಶ್ವರನ ಇಲ್ಲವೆ ಯಾವದೊಂದು ಪೂಜ್ಯವಿಭೂತಿಯನ್ನು ಧ್ಯಾನಿಸಬೇಕು.

(೪). ಸಾಯಂಕಾಲದಲ್ಲಿ ಸಾಕಷ್ಟು ವ್ಯಾಯಾಮವನ್ನು ಸ್ವೇಚ್ಛವಾದ ಹವೆಯಲ್ಲಿ ತಕ್ಕೊಳ್ಳಬೇಕು. ವ್ಯಾಯಾಮದಿಂದ ಮನುಷ್ಯನು ದಣಿದ ಮೇಲೆ ಅವನ ಮನಸ್ಸಿನಲ್ಲಿ ಯಾವ ವಿಚಾರಗಳೂ ಭರದಿಂದ ಸೇರಲಾರವು. ಮತ್ತು ಅವನಿಗೆ ಚನ್ನಾಗಿ ನಿದ್ದೆ ಹತ್ತುವದು. ಇದರ ಹೊರ್ತು ವ್ಯಾಯಾಮದಿಂದ ಶರೀರದಲ್ಲಿ ಉಂಟಾದ ಸವಕಳಿಯು ರಾತ್ರಿಕಾಲಕ್ಕೆ ನಿದ್ರೆಯಿಂಪ ತುಂಬಿಬರುತ್ತದೆ; ಹಾಗು ಎರಡನೇ ಕಡೆಗೆ ಲಕ್ಷಕೊಡಲಿಕ್ಕೆ ಅವಕಾಶವೂ ದೊರೆಯುವದಿಲ್ಲ. ಆದ್ದರಿಂದ ವ್ಯಾಯಾಮದಿಂದ ಬ್ರಹ್ಮಚರ್ಯದ ರಕ್ಷಣವಾಗುತ್ತದೆ. ವ್ಯಾಯಾಮದಿಂದ ತಾರುಣ್ಯವು ತೀವ್ರವಾಗಿ ಪ್ರಾಪ್ತವಾಗುವದಿಲ್ಲ; ಅಂದರೆ, ಸ್ವಲ್ಪ ಮುಂದಕ್ಕೆ ಹೋಗುತ್ತದೆ. ಈ ಮಾತಿನ ಅನುಭವವಿದ್ದು, ಇದಕ್ಕೆ ವೈದ್ಯಶಾಸ್ತ್ರದ ಸಮ್ಮತಿಯೂ ಇರುತ್ತದೆ. ಇದರ ಮೇಲಿಂದ ಬ್ರಹ್ಮಚರ್ಯವನ್ನು ಕಾಯ್ದುಕೊಳ್ಳಲಿಕ್ಕೆ ವ್ಯಾಯಾಮವು ಎಷ್ಟು ಉಪಯೋಗವುಳ್ಳದ್ದಾಗಿರುತ್ತದೆಂಬದು ಸಹಜವಾಗಿ ಕಂಡುಬರುವಂತಿದೆ. ತಾರುಣ್ಯವು ತಡವಾಗಿ ಪ್ರಾಪ್ತವಾದಮೇಲೆ ಆಯುಷ್ಯದ ಬೇರೆ ಅವಸ್ಥೆಗಳಾದರೂ ತಡವಾಗಿಯೇ ಪ್ರಾಪ್ತವಾಗುವವು; ಅಂದರೆ, ಇದರಿಂದ ಆಯುರ್ವ್ಯದ ಮರ್ಯಾದೆಯೂ ಬೆಳೆಯುತ್ತದೆ. ಇದು ಅತ್ಯಂತ ಲಾಭಕರವಾದ ಸಂಗತಿಯು.

ಸ್ವಪ್ನದಲ್ಲಿ ಕೆಟ್ಟಕಲ್ಪನೆಗಳು ಸೇರಿ ಯೂರ ಬ್ರಹ್ಮಚರ್ಯವು ಭಂಗವಾಗುವದೋ ಅಪರ ಬಗ್ಗೆ ನಿಯಮಗಳು.

(೧). ಕಾಮೋತ್ತೇಜಕ ವಿಚಾರಗಳನ್ನು ಬಿಡಲಿಕ್ಕೆ ಯತ್ನಿಸಿತೆಂದರೆ, ಒಮ್ಮೊಮ್ಮೆ ಅವು ಹೆಚ್ಚು ಹೆಚ್ಚೇ ಮನದಲ್ಲಿ ಸೇರಹತ್ತುವವು. ಆದ್ದರಿಂದ ಇಂಥ ವಿಚಾರಗಳನ್ನು ತ್ಯಜಿಸಲಿಕ್ಕೆ ಒಂದು ಉಪಾಯವಿದೆ. ಅದೇನಂದರೆ:– ಇಂಥ ವಿಚಾರಗಳು ಯಾವ ವಸ್ತುವಿನ ದರ್ಶನದಿಂದ ಇಲ್ಲವೆ ಯಾವ ಪ್ರಸಂಗದಿಂದ ಉತ್ಪನ್ನವಾಗುವವೋ ಆ ವಸ್ತುವನ್ನು ಅಥವಾ ಆ ಪ್ರಸಂಗವನ್ನು ತ್ಯಜಿಸಬೇಕು. ಮತ್ತು ಯಾವದರಲ್ಲಿ ತಮ್ಮ ಮನಸ್ಸು ಹೆಚ್ಚು ಸೇರುವದೋ ಅಂಥ ಎರಡನೇ ಪ್ರಕಾರದ ವಿಷಯವನ್ನು ಧ್ಯಾನಿಸಬೇಕು. ಕಸರತ್ತು, ತಾಲೀಮು, ಗಾಯನ, ಹಸ್ತಕೌಶಲ್ಯದ ಕಲೆ, ಶಾಸ್ತ್ರೀಯ ವಿಷಯ ಇವುಗಳಲ್ಲಿ ತಮಗೆ ಯಾವದರಿಂದ ಹೆಚ್ಚು ಆನಂದವಾಗುವದೋ ಅದರ ಅಭ್ಯಾಸವನ್ನು ಮಾಡಬೇಕು. ಈ ವಿಷಯದಿಂದ ಮನಸ್ಸು ತುಂಬಿತೆಂದಶೆ ಎರಡನೇ ವಿಚಾರಗಳು ಮನದೊಳಗಿಂದ ಹೊರಟು ಹೋಗುವವು.

(೨). ಕೋಷ್ಠವನ್ನು ಸ್ವಚ್ಛವಾಗಿಡತಕ್ಕದ್ದು. ಮಲಾವಷ್ಟಂಭವಾಯಿತೆಂದರೆ ಮಲದಿಂದ ಕೂಡಿದ ಕರಳುಗಳ ಭಾರವು ವೀರ್ಯಾಶಯದ ಮೇಲೆ ಬಿದ್ದು, ರೇತಸ್ಖಲನವಾಗುತ್ತದೆ. ಆದ್ದರಿಂದ ಮಲಶುದ್ಧಿಯ ಔಷಧವನ್ನು ಅವಶ್ಯಕಂಡಂತೆ ವಾರದಲ್ಲಿ ೨–೩ ಸಾರೆ ತಕ್ಕೊಂಡು ಕೋಷ್ಠವನ್ನು ಸ್ವಚ್ಛವಾಗಿಡಬೇಕು. ರಾತ್ರಿಯಲ್ಲಿ ಮಲಗುವದಕ್ಕಿಂತ ಮುಂಚೆ ಶೌಚಕ್ಕೆ ಹೋಗಬೇಕು. ಇದರಿಂದ ಬಳಗಿನ ಕರಳುಗಳು ಹಗುರಾಗುವವು. ಕೋಷ್ಠವನ್ನು ಸ್ವಚ್ಛವಾಗಿಡಲಿಕ್ಕೆ "ತ್ರಿಫಳಾಚೂರ್ಣ"ವು ಬಹಳ ಉಪಯೋಗವುಳ್ಳದ್ದು.

(೩). ಜಡ, ಉಷ್ಣ, ಉತ್ತೇಜಕ, ವಾತಕರ ಪದಾರ್ಥಗಳ ಸೇವನೆ ಮಾಡಬಾರದು. ಉಸಳಿ, ಬೇಳೆ, ಥಾಲೀಪಿಟ್ಟು, ಕೋಡಬಳೆ, ಬುರಬುರಿ, ಉಳ್ಳೇಗಡ್ಡಿಯ ಮತ್ತು ಬಳ್ಳಾಳ್ಳಿಯ ಪದಾರ್ಥ ಇವುಗಳಿಂದ ವಾಕ ನಶಕ್ತಿಯ ಕಾರ್ಯವು ಕುಂದುತ್ತದೆ; ಅಂದರೆ ಬದ್ಧಕೋಷ್ಠತೆಯಾಗು

ತ್ತದೆ. ಆದ್ದರಿಂದ ಇಂಥ ಪದಾರ್ಥಗಳನ್ನು ರಾತ್ರಿಯ ಕಾಲಕ್ಕೆ ವಿಶೇಷವಾಗಿ ತಿನ್ನಬಾರದು.

(೪). ರಾತ್ರಿಯಲ್ಲಿ ತೀವ್ರವೇ ಊಟ ಮಾಡಬೇಕು. ಊಟವಾದ ಮೇಲೆ ಎರಡು ತಾಸು ಎಚ್ಚರವಾಗಿದ್ದು ನಂತರ ಮಲಗಲಿಕ್ಕೆ ಅನುಕೂಲವಿರುವಂತೆ ಮೊದಲೇ ಉಣ್ಣಬೇಕು. ನಿದ್ದೆ ಹತ್ತಿದ ಮೇಲೆ ಶರೀರದಲ್ಲಿಯ ಯಾವತ್ತು ವ್ಯಾಪಾರಗಳು ಮಂದವಾಗುತ್ತವೆ. ಅಂದರೆ, ಪಚನಕ್ರಿಯೆಯಾದರೂ ಮಂದವಾಗುತ್ತದೆ. ಆದ್ದರಿಂದ ಭೋಜನವಾದ ನಂತರ ಬೇಗನೆ ಶಯನಮಾಡಿದರೆ, ಪಚನಕ್ರಿಯೆಯು ಚನ್ನಾಗಿ ನಡೆಯುವದಿಲ್ಲ. ಭೋಜನೋತ್ತರ ಎರಡು ತಾಸು ಎಚ್ಚರಿದ್ದರೆ, ಅಷ್ಟು ವೇಳೆಯಲ್ಲಿ ಪಚನಕ್ರಿಯೆಯು ಎಷ್ಟೋ ಭಾಗವು ಮುಗಿಯುತ್ತ ಬಂದಿರುತ್ತದೆ. ಆದಕಾರಣ, ಆಮೇಲೆ ಮಲಗಿದರೆ ಪಚನಕ್ರಿಯೆಯ ಕಾರ್ಯಕ್ಕೆ ವಿಶೇಷ ಪ್ರತಿಬಂಧವಾಗುವದಿಲ್ಲ. ಭೋಜನೋತ್ತರ ತೀವ್ರವೇ ಮಲಗಿದರೆ ಅನ್ನ ಪಚನವು ಉತ್ತಮ ರೀತಿಯಿಂದ ಆಗುವದಿಲ್ಲ. ಆದ್ದರಿಂದ ನಿದ್ದೆಯಲ್ಲಿ ಕನಸುಗಳು ಬೀಳುವವು; ಮತ್ತು ಬದ್ಧಕೋಷ್ಠತೆಯು ಉತ್ಪನ್ನವಾಗುತ್ತದೆ. ಸ್ವಪ್ನದಲ್ಲಿಯ ಉಚ್ಛೃಂಖಲ ವಿಚಾರ, ಹಾಗು ಅಪಚನದಿಂದಾಗುವ ಬದ್ಧಕೋಷ್ಠತೆ ಇವುಗಳಿಂದ ಬ್ರಹ್ಮಚರ್ಯಾಶ್ರಮ ಭಂಗಕ್ಕೆ ಬಹಳೇ ಅನುಕೂಲವಾಗುತ್ತದೆ. ಈ ಕಾರಣದಿಂದ ಸ್ವಪ್ನಾವಸ್ಥೆಯಾಗುವದು.

(೫). ರಾತ್ರಿಯಲ್ಲಿ ಮಲಗುವದಕ್ಕಿಂತ ಮೊದಲು ೩ ತಾಸಿನವರೆಗೆ ನೀರು, ಹಾಗೂ ಬೇರೆ ಯಾವ ಪೇಯ (ತೆಳ್ಳಗಿನ) ಪದಾರ್ಥಗಳನ್ನು ಕುಡಿಯಬಾರದು. ಯಾಕಂದರೆ ನೀರು, ಮತ್ತು ಬೇರೆ ಯಾವದಾದರೊಂದು ತೆಳ್ಳಗಿನ ಪದಾರ್ಥ ಇವುಗಳಲ್ಲಿಯ ನೀರಿನ ಅಂಶದ ಬಹಳ ಭಾಗವು ಮೂತ್ರದ್ವಾರದಿಂದ ಹೊರಬೀಳುತ್ತದೆ. ಕಾರಣ ಮಲಗುವಾಗ್ಗೆ ಇಂಥ ಪದಾರ್ಥಗಳ ಸೇವನೆ ಮಾಡಿದರೆ, ರಾತ್ರಿಯಲ್ಲಿ ಮೂತ್ರಾಶಯವು ಮೂತ್ರದಿಂದ ತುಂಬಿಬರುತ್ತದೆ. ಹೀಗೆ ತುಂಬಿಕೊಳ್ಳುವದರಿಂದ ಇದರ ಭಾರವು ನೆರೆಯಲ್ಲಿದ್ದ ವೀರ್ಯಾಶಯದ ಮೇಲೆ ಬಿದ್ದು, ಆ ಇಂದ್ರಿಯದಲ್ಲಿ ಚೇತನೆ ಉಂಟಾಗಿ, ವೀರ್ಯವು ಸ್ಥಾನಭ್ರಷ್ಟವಾಗುತ್ತದೆ. ಈ ಕಾರಣದ ಮೂಲಕ ಒಮ್ಮೊಮ್ಮೆ ವೀರ್ಯಸ್ಖಲನವಾಗುತ್ತದೆ. ಮಲಗುವದಕ್ಕಿಂತ ಮೊದಲೇ ೩ ತಾಸು ಇರುವಾಗ ನೀರು ಕುಡಿದರೆ, ಆ

ನೀರಿನೆ ಬಹಳ ಭಾಗವು ಮಲಗುವ ಮೊದಲೇ ಮೂತ್ರರೂಪದಿಂದ ಹೊರಟು ಹೋಗುತ್ತದೆ. ಹೀಗೆ ಮಾಡಿದರೆ ಮೇಲೆ ಬರೆದ ಪ್ರಕಾರದ ಅಂಜಿಕೆಯು ಕಡಿಮೆಯಾಗುತ್ತದೆ.

(೬). ಕೃಮಿ, ಇಲ್ಲವೆ ಜಂತಗಳನ್ನಾಗಗೊಡಬಾರದು. ಕೃಮಿ ಗಳಿಂದ ಬಹ್ವಕೋಷ್ಠತೆಯಾಗುತ್ತದೆ. ಹೊರತು, ಅವುಗಳ ಹಲನಚಲ ನದಿಂದ ಕಿಪ್ಪೊಟ್ಟೆಯಲ್ಲಿ ತ್ರಾಸವಾಗುತ್ತದೆ. ಈ ತ್ರಾಸದಿಂದಾದರೂ ವೀರ್ಯಸ್ಖಲನವಾಗುವದು. ಆದ್ದರಿಂದ ಹೊಟ್ಟೆಯಲ್ಲಿ ಕೃಮಿಗಳಾದರೆ ಕೃಮಿನಾಶಕ ಔಸಧವನ್ನು ತಕ್ಕೊಂಡು ಅವುಗಳನ್ನು ನಾಶಪಡಿಸಬೇಕು.

(೭). ಅಂಗಾತಾಗಿ ಮಲಗಬಾರದು. ಈ ಸ್ಥಿತಿಯಲ್ಲಿ ವೀರ್ಯಾ ಶಯದ ಮೇಲೆ ಮೂತ್ರಾಶಯದ ಭಾರಬೀಳುತ್ತದೆ. ಆದ್ದರಿಂದ ಶರೀ ರದ ಈ ಸ್ಥಿತಿಯು ಸ್ವಪ್ನಾವಸ್ಥೆಯಾಗಲಿಕ್ಕೆ ಅನುಕೂಲವಿದೆ. ಈ ಕಾ ರಣದ ದೆಶೆಯಿಂದ, ಬೆನ್ನಹಿಂದೆ ಗಂಟು ಬರುವಂತೆ ರುಮಾಲನ್ನಾಗಲಿ ಪಟಕೆಯನ್ನಾಗಲಿ ಟೊಂಕಕ್ಕೆ ಕಟ್ಟಬೇಕು. ಇದರಿಂದ ನಿದ್ದೆಹತ್ತಿದರೂ ಸಹ ಅಂಗಾತ ಮಲಗಲಿಕ್ಕೆ ಅಡ್ಡಿಯಾಗುತ್ತದೆ.

(೮). ಸ್ವಚ್ಛ ಹವೆಯಲ್ಲಿ ಮಲಗಬೇಕು; ಮತ್ತು ಹಾಸಿಕೆ ಹೊ ದಿಕೆಗಳಲ್ಲಿ ಬಹಳ ಬೆಚ್ಚನ್ನ ಅರಿವೆಗಳಿರಬಾರದು. ಪ್ರತಿಬಂಧಿತವಾದ ಹವೆಯಲ್ಲಿ ಮಲಗಿದರೆ, ನಿದ್ದೆಯು ಚೆನ್ನಾಗಿ ಹತ್ತದೆ ಸ್ವಪ್ನಯುಕ್ತವಾಗಿ ಹತ್ತುವದು. ಮೈಮೇಲೆ ಬಹಳ ಹೊತ್ತುಕೊಂಡರೆ ಮೈಯು ಬೇಕಾಗು ವಷ್ಟಕ್ಕಿಂತ ಹೆಚ್ಚು ಬೆಚ್ಚಗಾಗುತ್ತದೆ. ಮತ್ತು ಒಮ್ಮೊಮ್ಮೆ ನಿದ್ದೆಯು ಪೂರ್ಣವಾದರೂ ಕೇವಲ ಬೆಚ್ಚಗಿನ ಅರಿವೆಗಳ ಮೂಲಕ ಮುಂಜಾನೆ ಹೆಚ್ಚು ನಿದ್ದೆ ಹತ್ತುವದು. ಈ ನಿದ್ದೆಯು ಸ್ವಪ್ನಯುಕ್ತವಿರುತ್ತದೆ. ಮತ್ತು ಈ ಕಾಲಕ್ಕೆ ಕರಳುಗಳಲ್ಲಿ ಹಲನಚಲನ ನಡೆದಿರುತ್ತದೆ. ಆದ್ದ ರಿಂದ ಇಂಥ ಪ್ರಸಂಗದಲ್ಲಿ ಸ್ವಪ್ನಾವಸ್ಥೆಯಾಗುವ ಸಂಭವವು ವಿಶೇಷ ವಾಗಿರುತ್ತದೆ. ಆದಕಾರಣ, ಈ ಪ್ರಸಂಗ ತಪ್ಪಿಸಲಿಕ್ಕೆ ಸ್ವಚ್ಛವಾದ ಹವೆಯಲ್ಲಿ ಯೋಗ್ಯವಾದಷ್ಟು ಅರಿವೆಗಳನ್ನು ತಕ್ಕೊಂಡು ಮಲಗುವದೂ ಮುಂಜಾನೆ ಬೇಗನೇಳುವದೂ ಒಂದು ಉಪಾಯವಿದೆ.

ಮೇಲೆ ಹೇಳಿದ ರೀತಿಯಂತೆ ಬ್ರಹ್ಮಚರ್ಯವನ್ನು ಕಾಯ್ದುಕೊಳ್ಳ

ಲಿಕ್ಕೆ ಯತ್ನಿಯಿಸಿದವರು ತಮ್ಮ ಜನ್ಮವನ್ನು ಸುಖಕರವಾಗಿ ಮಾಡಿಕೊಳ್ಳುವರೆಂಬದಕ್ಕೆ ಸಂದೇಹವಿಲ್ಲ.

ಶಾಲಾ—ಪಾಚ್ಚಾಪೂರ.
ತಾರೀಖು. ೨—೧—೧೯೧೧ಳ.

ಭಾಷಾಂತರಕಾರ.
ಗೋ. ನಾ. ಜಿಕ್ಕೋಗೌ.
ಉಪಶಿಕ್ಷಕ.
ಪಾಚ್ಚಾಪೂರ. ಜಿಲ್ಹಾ ಬೆಳಗಾಂವ್.

ಉಪ್ಪಿನ ಬೆಟಗೇರಿಯಲ್ಲಿದ್ದ ಗವಿಯು.

(ಬರೆದು ಬಂದದ್ದು.)

ಮನುಷ್ಯರು ಆಲಸ್ಯವೆಂಬ ದುರ್ಗುಣವನ್ನು ಹೊಡೆದೋಡಿಸದಿದ್ದರೆ ಅವರ ಬಾಳುವೆಯು ವ್ಯರ್ಥವಾಗುವದು. "ದುಡಿಯುವವನೇ ದುಡ್ಡನ್ನು ಪಡೆಯುವನು" ಎಂಬ ನಾಣ್ನುಡಿಯು ಪ್ರಸಿದ್ಧವದೆ. ಸತತ ಪ್ರಯತ್ನದಿಂದ ಬಹಳ ಲಾಭವಾಗುವದು. ಮನಸ್ಸುಗೊಟ್ಟು ದುಡಿಯುವ ಮನುಷ್ಯನು ಹೇಗೆ ಕೀರ್ತಿಯುತನಾಗುವನೆಂಬದು ಕೆಳಗೆ ಬರೆದ ಗವಿಯ ವರ್ಣನೆಯಿಂದ ಗೊತ್ತಾಗುವದು:—

ಇದನ್ನು ಹುಸೇನಸಾಹೇಬ ತುರ್ಕಿದ ಎಂಬ ಗೃಹಸ್ಥನು ಶಕೆ ೧೮೧೧ನೇ ಚೈತ್ರ ಶುದ್ಧ ೧ರಿಂದ, ಶಕೆ ೧೮೧೪ನೇ ಚೈತ್ರ ಶುದ್ಧ ೨ರವರೆಗೆ, ಅಂದರೆ ೩ ವರ್ಷ ಸತತವಾಗಿ ಒಬ್ಬನೇ ಕಡೆದಿರುವನಂತೆ! ಹುಸೇನಸಾಹೇಬನು ಎತ್ತರವಳ್ಳವನೂ ಗಟ್ಟಮುಟ್ಟಿ ಶರೀರದವನೂ ಆಗಿದ್ದನು. ಬಟ್ಟನ್ನ ಮೋರೆಯೂ, ತೇಜಃಪುಂಜವಾದ ಕಣ್ಣುಗಳೂ ಶೋಭಿಸುತ್ತಿದ್ದವು. ಇವನು ಚಿಕ್ಕವನಿರುವಾಗಲೇ ಒಕ್ಕಲತನವ ಉದ್ಯೋಗಕ್ಕೆ ಹತ್ತಿದನು. ಉರುಟು ಅರಿವೆಗಳನ್ನು ನೆಯ್ಯುವ ಕೆಲಸವಾದರೂ ಅವನಿಗೆ ಅಲ್ಪಸ್ವಲ್ಪ ಬರುತ್ತಿತ್ತು. ಲಾವಣಿಪದಗಳನ್ನು ಮಾಡುವ ರೂಢಿಯೂ ಅವನಿಗೆ ವಿಶೇಷವಾಗಿತ್ತು. ಇದಲ್ಲದೆ ಇವನು ಸತತೋದ್ಯೋಗಿಯೂ ಶಾಂತಸ್ವಭಾವದವನೂ ಆಗಿದ್ದನಂತೆ.

ಈ ಊರಿಗೆ ಹೊಂದಿ ನೈಋತ್ಯ ದಿಕ್ಕಿಗೆ ಬಂದು ಗುಡ್ಡವದೆ. ಹಲ ಕೆಲವು ಮನೆಗಳು ಗುಡ್ಡಗಳ ಮೇಲೆಯೇ ಇರುವದರಿಂದ ಅವು ಸ್ವಲ್ಪ ದೂರದಿಂದ ನೋಡುವವರಿಗೆ ಪೆಟಗಟ್ಟೆಗಳ ಹಾಗೆ ಕಾಣುತ್ತವೆ. ಈ

ಗುಡ್ಡದ ಪೂರ್ವದ ಏರಿಗಿರುವ ತನ್ನ ಮನೆಯಲ್ಲಿ ಹುಸೇನ ಸಾಹೇಬನು ಹೆಂಡರು ಮಕ್ಕಳೊಂದಿಗೆ ಕೆಲಕಾಲ ಸುಖದಿಂದಿರ ಹತ್ತಿದ ಬಳಿಕ ತನ್ನ ೭೨ನೇ ವರ್ಷದಲ್ಲಿ ಈ ಗವಿಯನ್ನು ಕಡೆಯಹತ್ತಿದನಂತೆ! ಇದನ್ನು ಕಡೆಯುವ ಕೆಲಸದಲ್ಲಿ ಶ್ರೀ ಕುರುಬಗಟ್ಟೀಶನ ದೇವಾಲಯದಲ್ಲಿ ಉತ್ತಮವಾದ ಪೀಠಪ್ರಭಾವಳಿಯನ್ನು ಮಾಡಿ ಪ್ರಸಿದ್ಧಿಯನ್ನು ಪಡೆದ ಭೀಮಪ್ಪಾ ಅಗಸಾಲಿ ಎಂಬವನು ಹಲಕೆಲವು ಕವಾನುಗಳ ಆಕೃತಿಯನ್ನು ತೆಗೆದು ಕೊಟ್ಟನಂತೆ. ಇದರ ಹೊರ್ತು ಅವನಿಗೆ ಎಳ್ಳಷ್ಟಾದರೂ ಅನ್ಯರ ಸಹಾಯವು ಇಲ್ಲೇ ಇಲ್ಲವಂತೆ!

ಈ ಗವಿಯ ಬಾಗಿಲವು ಪೂರ್ವಕ್ಕಿದ್ದು ೨ ಫೂಟು ೧೦ ಇಂಚು ಉದ್ದವೂ, ೨|| ಫೂಟು ಅಗಲವೂ ಅದೆ. ಒಳಗೆ ಹೋಗಿ ೧|| ಫೂಟು ಎತ್ತರವಿರುವ ಎರಡು ಪಾವಟಿಗೆಗಳನ್ನು ಇಳಿದು ಉತ್ತರದಿಕ್ಕಿರುವ ಸಣ್ಣ ಕವಾನದೊಳಗಿಂದ ೫ ಫೂಟು ಮುಂದಕ್ಕೆ ಹೋಗಿ ಅಲ್ಲಿಂದ ಪಶ್ಚಿಮಕ್ಕಿರುವ ಸಣ್ಣ ಕವಾನವನ್ನು ಪ್ರವೇಶಿಸಬೇಕು. ಅಲ್ಲಿ ೭ ಫೂಟು ಉದ್ದವೂ ೪|| ಫೂಟು ಅಗಲವೂ ಆದ ಬಂದು ಕೋಣೆಯದೆ. ಅದರ ಪೂರ್ವ ಪಶ್ಚಿಮಕ್ಕಿರುವ ಗೋಡೆಗಳಲ್ಲಿ ಬಂದೊಂದು ಕವಾನವೂ, ದಕ್ಷಿಣಕ್ಕೆ ಬಂದು ಕವಾನವೂ ಇರುವದು. ದಕ್ಷಿಣಕ್ಕಿರುವ ಕವಾನದಲ್ಲಿ ತನ್ನ ಧರ್ಮಕ್ಕನುಸರಿಸಿ ಕೆಲವು ಮೂರ್ತಿಗಳನ್ನು ಕೂಡ್ರಿಸಿರುವನು. ಅಲ್ಲಿಗೆ ಹೋದ ಬಳಿಕ ಉಳಿದ ಭಾಗವನ್ನೆಲ್ಲ ನೋಡುವದಕ್ಕಾಗಿ ದೀಪಗಳನ್ನು ಕೊಡುತ್ತಾರೆ. ಅವುಗಳನ್ನು ತಕ್ಕೊಂಡು ಪಶ್ಚಿಮಕ್ಕಿರುವ ಕವಾನದೊಳಗಿಂದ ೩|| ಫೂಟು ಕೆಳಗಿಳಿಯಲು ೫| ಫೂಟು ಉದ್ದ ೩| ಫೂಟು ಅಗಲವಿದ್ದ ಬಂದು ಸಣ್ಣ ಕೋಣೆಯು ಬರುವದು. ಅದರೊಳಗಿಂದ ಪಶ್ಚಿಮಕ್ಕೆ ಹೋಗಲು ಮತ್ತೊಂದು ಷಟ್ಕೋನಾಕೃತಿಯಾದ ಕೋಣೆಯು ಹತ್ತುವದು. ಆ ಕೋಣೆಯ ಪ್ರತಿಯೊಂದು ಕೋನದ ಹತ್ತರವಿರುವ ಗೋಡೆಯ ಭಾಗದಲ್ಲಿ ಬಂದೊಂದು ಕವಾನವನ್ನು ಕಡೆದಿರುವನು. ಆ ಕೋಣೆಯ ಚೌಕಟ್ಟು ಕಲ್ಲಿನಲ್ಲಿಯೇ ಕಡೆಯಲ್ಪಟ್ಟದ್ದು ನೋಡಲಿಕ್ಕೆ ಬಹು ಸರಸಾಗಿದೆ.

ಈ ಷಟ್ಕೋನಾಕೃತಿಯಾದ ಕೋಣೆಯ ಉತ್ತರದಿಕ್ಕಿನಲ್ಲಿ ಸಣ್ಣದೊಂದು ಮಾರ್ಗವದೆ. ಇದರೊಳಗಿಂದ ಪೂರ್ವದ ಮೂಲೆಗುಂಟ ಅಡ

ಮಾಸು ೧೦–೧೫ ಘೂಟು ಅಂಬೇಗಾಲಿನಿಂದ ಮೆಟಗಟ್ಟೆಗಳ ಮಾರ್ಗವಾಗಿ ಹೋಗಲು, ಅಲ್ಲಿ ಹವೆ ಬೆಳಕುಗಳ ಸಲುವಾಗಿ ಪೂರ್ವದಿಕ್ಕಿಗೆ ಒಂದು ಕಿಡಕಿಯು ಹೆಚ್ಚಲ್ಪಟ್ಟಿದೆ. ಈ ಕಿಡಕಿಯ ಎಡಗಡೆಯಲ್ಲಿ ಒಂದು ಸಣ್ಣ ಕೋಣೆಯು ಇದ್ದು ಅಲ್ಲಿ ತಪಸ್ವಿಗಳ ಏಕಾಂತ ಸ್ಥಳದಂತೆ ಭಾಸವಾಗುತ್ತದೆ. ಇದರ ಎದುರಿಗೆ ಮತ್ತೊಂದು ಕಿಡಕಿಯು ಇರುವದು. ಮುಂಹಾಗೆಯೇ ದಕ್ಷಿಣ ದಿಕ್ಕಿಗೆ ಹೊರಳಲು, ಅಲ್ಲಿ ಮತ್ತೊಂದು ಸಣ್ಣ ಕೋಣಯು ಹತ್ತುವದು. ಅಲ್ಲಿಂದ ದಕ್ಷಿಣಾಭಿಮುಖವಾಗಿರುವ ಒಂದು ಸಣ್ಣ ಕವಾನವನ್ನು ಸೇರಿ ೮ ಘೂಟು ಬಗ್ಗಿ ಬರಲು ಮೊದಲು ನೋಡಿದ ಮೂರ್ತಿಗಳಿದ್ದ ಸ್ಥಳಕ್ಕೆ ಬರುವೆವು.

ಇಲ್ಲಿಗೆ ಗವಿಯ ಪಶ್ಚಿಮದ ಅರ್ಧ ಭಾಗವಾದಂತಾಯಿತು. ಪೂರ್ವಕ್ಕಿರುವ ಭಾಗವು ಇದಕ್ಕೂ ಸ್ವಲ್ಪ ಬಿಗಿಯಾದದ್ದಿರುತ್ತದೆ. ಮೂರ್ತಿಗಳಿದ್ದ ಕೋಣೆಯ ಪೂರ್ವಕ್ಕಿರುವ ಸಣ್ಣ ಹಾದಿಯಿಂದ ೭॥ ಘೂಟುಗಳವರೆಗೆ ಕೂತಲ್ಲಿಯೇ ಸರಿಯುತ್ತ ಹೋಗಿ, ೧। ಘೂಟು ಎತ್ತರವಿರುವ ಎರಡು ಮೆಟಗಟ್ಟೆಯನ್ನು ಇಳಿಯಲು, ಒಬ್ಬ ಮನುಷ್ಯನು ಅತಂಕವಿಲ್ಲದೆ ಕುಳಿತುಕೊಳ್ಳುವಷ್ಟಾದ್ದೊಂದು ಮಾಡವು ಹತ್ತುವದು. ಈ ಮಾಡದ ಹಿಂಬದಿಯಲ್ಲಿ ಒಂದು ಘೂಟು ಉದ್ದವೂ, ೯ ಇಂಚು ಅಗಲವೂ ಆದ ಒಂದು ಬೆಳಕಿಂಡಿಯು ಇರುತ್ತದೆ. ಇದು ಗವಿಯ ಪೂರ್ವಕ್ಕಿರುವ ಬಾವಿಯ ಒಂದು ಬದಿಯಲ್ಲಿರುವದು. ಇದರೊಳಗಿಂದ ಬಗ್ಗಿ ನೋಡಿದರೆ ಒಳಗಿನ ನೀರು ಕಾಣುತ್ತವೆ. ಈ ಕಿಂಡಿಗೂ, ಮೇಲಿರುವ ನೆಲದ ಭಾಗಕ್ಕೂ ಅಜಮಾಸು ೧೫ ಘೂಟು ಅಂತರವಿರಬಹುದು. ಈ ಕಿಂಡಿಯ ಕಡೆಗೆ ಬೆನ್ನು ಮಾಡಿ ಎಡಕ್ಕೆ ಹೊರಳಿದರೆ ಒಂದು ಸಣ್ಣ ಕೋಣೆಯು ಹತ್ತುವದು. ಈ ಕೋಣೆಯ ಪಶ್ಚಿಮಕ್ಕಿರುವ ಒಂದು ಮಾಡದೊಳಗೆ ೧೫ ಇಂಚ ಉದ್ದವೂ ೧೫ ಇಂಚು ಅಗಲವೂ ಆದ ಮತ್ತೊಂದು ಕಿಡಕಿಯ ಆಕಾರದ ಮಾರ್ಗವದೆ. ಅದರೊಳಗಿಂದ ಕಷ್ಟ ಬಟ್ಟು ಪೂರಾಗಿ ಹೋಗಲು, ನಾಲ್ಕಾರು ಜನರು ಬೊಗ್ಗಿ ನಿಲ್ಲುವಂಥ ಒಂದು ಕವಾನವು ಹತ್ತುವದು. ಅಲ್ಲಿಂದ ಉತ್ತರಕ್ಕಿರುವ ಮತ್ತೊಂದು ಕವಾನವನ್ನು ದಾಟಲು ಗವಿಯ ಆರಂಭದ ಬಾಗಿಲವು ಬರುವದು. ಇದರ ಒಳಭಾಗವೆಲ್ಲವೂ ಜಳ ಜಳವದೆ. ಅಲ್ಲಿ ಸಾಕಷ್ಟು ಹವೆಯಾಡುತ್ತಿದೆ

ವಾಚಕ ಮಹನೀಯರೇ, ಸುತ್ತೆಲ್ಲ ಎಣಿಸಿನೋಡಿದರೆ ಈ ಗವಿಯಲ್ಲಿ ಅಜವಾಸು ಒಂದೊಂದು ಅಂಕಣ ಅಗಲಿರುವ ೫ ಕೋಣೆಗಳೂ ೩೨ ಕವಾನುಗಳೂ ೧೨ ಸಣ್ಣ ದೊಡ್ಡ ಮಾಡಗಳೂ ಅವೆ. ಗವಿಯತುಂಬೆಲ್ಲ ಜನರು ಕುಳಿತುಕೊಂಡರೆ ೧೦೦ಕ್ಕಿಂತ ಹೆಚ್ಚು ಸಂಖ್ಯೆಯಾಗಬಹುದು. ಇಂಥ ಗವಿಯನ್ನು ಹುಸೇನಸಾಹೇಬನು ೩ ವರ್ಷಗಳಲ್ಲಿ ಒಬ್ಬನೇ ಕಡೆದಿರುವನು. ಅಂದಬಳಿಕ ಈ ತರದ ಸತತ ಪ್ರಯತ್ನವನ್ನು ಮಾಡಿದರೆ ಯಾವಕಾರ್ಯಗಳಾಗಲಿಕ್ಕಿಲ್ಲ! ಗವಿಯಹತ್ತರವೇ ಒಂದು ಬಾವಿ ಇರುವದೆಂದು ಹಿಂದೆ ಹೇಳಿರುವದಷ್ಟೇ. ಅದನ್ನಾದರೂ ಹುಸೇನಸಾಹೇಬನು ಒಬ್ಬನೇ ಕಡೆದಿರುವನಂತೆ!

ಈಗಿನ ಹೊಸ ಪದ್ಧತಿಯ ಶಿಕ್ಷಣದಂತೆ ಪ್ರತ್ಯಕ್ಷ ವಸ್ತುಗಳನ್ನು ತೋರಿಸಿ ವಿದ್ಯಾರ್ಥಿಗಳಿಗೆ ವಿಷಯವನ್ನು ಹೇಳುವದು ಒಳ್ಳೇಯದಾಗಿರುತ್ತದೆ. ಅದರಂತೆ ನಾವು ನಮ್ಮ ವಿದ್ಯಾರ್ಥಿಗಳಿಗೆ "ಉದ್ಯೋಗ" ದ ವಿಷಯವಾಗಿ ಹೇಳುವಾಗ ಇಂಥ ಉದಾಹರಣೆಗಳನ್ನು ಕಣ್ಮುಟ್ಟ ತೋರಿಸಿ, ಅವುಗಳ ಪೂರ್ವಾಪರ ಸಂಬಂಧವನ್ನು ಹೇಳಿ, ಆ ಮೇಲೆ ವಿಷಯವನ್ನು ತಿಳಿಸಿದರೆ ಹುಡುಗರಿಗೆ ಉಪಯೋಗವಾಗದೆ ಏನು ಮಾಡೀತು! ಇದರಂತೆ "ಕಾರ್ಲಿಯ ಗುಡ್ಡದೊಳಗೆ ಕೊರೆದು ಹುಟ್ಟಿಸಿರುವ ಗುಡಿಗಳು" ಎಂಬ ವಿಷಯವನ್ನು ಹೇಳುವ ಮೊದಲು ಈ ಗವಿಯನ್ನು ವಿದ್ಯಾರ್ಥಿಗಳಿಗೆ ತೋರಿಸಿ ವಿಷಯವನ್ನು ಹೇಳಿಕೊಟ್ಟರೆ, ಕಾರ್ಲಿಯ ಗುಡ್ಡದಲ್ಲಿರುವ, ಕೊರೆದು ಮಾಡಿರುವ ಗುಡಿಗಳ ಕಲ್ಪನೆಯು ತನ್ನಷ್ಟಕ್ಕೆ ತಾನೇ ಅವರಲ್ಲಿ ಉತ್ಪನ್ನವಾಗುವದು.

ರಸಿಕವಾಚಕರೇ, ಪ್ರಿಯಬಾಂಧವರೇ, ಏನೇ ಆಗಲಿ, ನಿಮಗೆ ಕೂಡಿದಾಗ ಇಲ್ಲಿಯ ವರೆಗೆ ಬಂದು ಸತತ ಪ್ರಯತ್ನದ ಫಲವು ಹೇಗಿರುವದೆಂಬದನ್ನು ಕಣ್ಣಾರೆ ಕಂಡು ಹೋಗಬೇಕೆಂದು ಅತ್ಯಾಗ್ರಹದಿಂದ ಬೇಡಿಕೊಳ್ಳುವೆನು.

ತಮ್ಮೆಲ್ಲರ ವಿಧೇಯ.

ವೆಂಕಟೇಶ ನರಸಿಂಗರಾವ ತಲವಾಯಿ
ಅ॥ ವಾಸ್ತರ ಉಪ್ಪಿನಬೆಟಗೇರಿ ತಾಲೂಕ ಧಾರವಾಡ.

ಉಪ್ಪಿನಬೆಟಗೇರಿ
೭-೬-೧೯೧೩

ಅಲಂಕಾರದರ್ಪಣ.

(ಕಳೆದ ತಿಂಗಳ ಸಂಚಿಕೆಯ ೩೦ನೆಯ ಪುಟದಿಂದ ಮುಂದೆ ಸಾಗಿದ್ದು.)

ಇದು ಹಿಮಾಲಯದ ವರ್ಣನೆಯ ಪದ್ಯವು. ಇಲ್ಲಿ "ಹಿಮವಂತನು ದಿನಭೀತಗಳಂತೆ ತಮವನ್ನು ಗುಹೆಯಲ್ಲಿ ಸಂರಕ್ಷಿಸುವನು, ಎಂಬ ವಿಶೇಷೋದಾಹರಣೆಯಿಂದ "ಉಚ್ಚಶಿರದವನು ಬೆನ್ನಿಗೆ ಬಿದ್ದ ಹುಚ್ಚನನ್ನಾದರೂ ಸಂರಕ್ಷಿಸುವನು" ಎಂಬ ಸಾಮಾನ್ಯಾರ್ಥವು ಸಮರ್ಥಿಸಲ್ಪಟ್ಟಿದೆ. (ದಿನಭೀತ = ಹಗಲಿಗೆ ಅಂಜುವದು, ಗೂಗೆ; ದಿನಕರ = ಹಗಲನ್ನುಂಟು ಮಾಡುವವನು, ಸೂರ್ಯ; ಉಚ್ಚಶಿರದವ = ಎತ್ತರವಾದ ಶಿಖರಗಳುಳ್ಳವ; ದೊಡ್ಡ ಮನಸ್ಸಿನವ.) ಮತ್ತೆ ಉದಾ:—

ಕಂದ ॥ ಮೇಲಾದ ವಸ್ತುಸಂಗದೊ।
ಳೀಲೋಕದೆ ಘನತೆಗೇರುತಿರುವದಲುಪವುಂ ॥
ಮೂಲೆಯ ಸಂಗಡದಿಂದಲೆ।
ನೂಲನು ಶಿರದೊಳಗೆ ಧರಿಸುತಿರುವರು ಜನರು ॥

ಇಲ್ಲಿ ಪೂರ್ವಾರ್ಧದ ಸಾಮಾನ್ಯಾರ್ಥದಿಂದ ಉತ್ತರಾರ್ಧದ ವಿಶೇಷರೂಪದ ಅರ್ಥವು ಸಮರ್ಥಿಸಲ್ಪಟ್ಟಿದೆ. ಮತ್ತೆ ಉದಾ:—

ಶರ ॥ ಸಾರರಹಿತಗಳ।
ಭೂರಿಸಮುದಯವು।
ಕಾರ್ಯಕೆ ಜಗದೊಳು ಸಾಧಕವು ॥
ಘೋರ ಕರಿಯ.ನಾ।
ದರು ಬಂಧಿಸುವದು।
ನೂರು ತೃಣಚಯದ ರಜ್ಜುವದು ॥

ಇಲ್ಲಿ ಉತ್ತರಾರ್ಧದ ವಿಶೇಷಾರ್ಥವು ಪೂರ್ವಾರ್ಧದ ಸಾಮಾನ್ಯಾರ್ಥದಿಂದ ಸಮರ್ಥಿಸಲ್ಪಟ್ಟಿದೆ.

---

* 'ಹಗ್ಗ' ವಾರಾಂತರ.

ಇವೆಲ್ಲವು ಅಪ್ರಕೃತಗಳಿಂದ ಪ್ರಕೃತ ಸಮರ್ಥನೆಯ ಉದಾಹರಣಗಳು. ಇನ್ನು ಪ್ರಕೃತಗಳಿಂದ ಅಪ್ರಕೃತಗಳ ಸಮರ್ಥನವು ಹೇಗಂದರೆ :—

ಭಾಮಿನಿ ॥ ರೂಪಯುತನಾರಿಯರು ಪಾರ್ವತಿ ।
ಪಾಪಗಳನಾಚರಿಸರೆಂಬುವ ।
ದಾ ಪರಮಸಾಧುಗಳನುಡಿಯದು ಪಿಟ್ಟವು ಜಗದೊಳಗೆ ॥
ತಾಪಸರಿಗುಪದೇಶಿಪುದು ಸ ।
ದ್ರೂಪಿಯೇ, ನಿನ್ನಾಚರಣೆಯದು ।
ಔಪಚಾರಿಕವೆಂದು ತಿಳಿಯಲು ಬೇಡವೀನುಡಿಯಂ ॥

ಇದು ವಟುವೇಷಧಾರಿಯಾದ ಶಿವನು ಪಾರ್ವತಿಗೆ ಆಡಿದ ವಾಕ್ಯವು. ಇಲ್ಲಿ 'ರೂಪಯುತನಾರಿಯರು ಪಾಪಗಳನಾಚರಿಸರು,' ಎಂಬ ಅಪ್ರಕೃತವಾದ ಸಾಮಾನ್ಯಾರ್ಥವು ಪ್ರತ್ಯಕ್ಷವಾದ ಪಾರ್ವತಿಯ ವಿಶೇಷೋದಾಹರಣೆಯಿಂದ ಸಮರ್ಥಿತವಾಗಿದೆ. ಮತ್ತೆ ಉದಾ :—

ಭೋಗ ॥ ಆನೆ ನದಿಯಲಿಳೆಯೆ ತಾನು ।
ಸ್ನಾನಕಾಗಿ ಕಟಿಕಟಾಹ ।
ಲೀನವಪ್ಪ ಭೃಮರಚಯವದೀಗ ಹಾರಿತ್ತೈ ॥
ದಾನಕೊಡುವನಾದರವನು ।
ಹೀನಜಡಚಯದರಿ ಬೆರಸೆ ।
ತಾನು ವಿದ್ಯಮಾನಗತಿಯು ಜವದೆ ಬಿಡುವನು ॥

ಇದು ಜಲಕ್ರೀಡಾವರ್ಣನೆಯ ಪದ್ಯವು. ಇಲ್ಲಿ ಪ್ರಕೃತವಾದ ಕರಿಭೃಮರಗಳ ವಿಶೇಷೋದಾಹರಣೆಯಿಂದ ಅಪ್ರಕೃತವಾದ ಉತ್ತರಾರ್ಧದ ಸಾಮಾನ್ಯಾರ್ಥವು ಸಮರ್ಥಿಸಲ್ಪಟ್ಟಿದೆ (ಜಡಚಯ=ಮೂರ್ಖರ ಸಮೂಹ; ನೀರಿನ ಸಮೂಹ; ವಿದ್ಯಮಾನಗತಿ=ಬೇರೆಗತಿಯುಳ್ಳವನು, ಅಂದರೆ ಹೊಟ್ಟೇತುಂಬಿಕೊಳ್ಳಲಿಕ್ಕೆ ಎರಡನೇ ಮಾರ್ಗವುಳ್ಳವ; ಸಮರ್ಥನಾದವ; ದಾನ = ವಿತರಣ; ಮದಜಲ; ಕಟಃ ಏವ ಕಟಾಹಃ, ತಸ್ಮಿನ್ ಲೀನಃ = ಗಂಡಸ್ಥಲವೆಂಬ ಕಡಾವಿಗೆಯ ಮೇಲೆ ಕೂತಂಥ).

ವಿಶೇಷೋದಾಹರಣೆಗಳಿಲ್ಲದೆ ಸಾಮಾನ್ಯಾರ್ಥವು ಸಿದ್ಧಿಸದು. ಇನ್ನು ಸಾಮಾನ್ಯಾರ್ಥವು ಬುದ್ಧಿಯಲ್ಲಿ ನಡುವದಕ್ಕಾಗಿ ವಿಶೇಷೋದಾಹರಣೆಯ

ನ್ನಪೇಕ್ಷಿಸುವದು. ಕಾರಣ ಸಾಮಾನ್ಯವಿಶೇಷಾರ್ಥಗಳು ಪರಸ್ಪರಸಾಪೇಕ್ಷಗಳಾಗಿರುವವು. ಕಾವ್ಯಲಿಂಗದಲ್ಲಿ ನಿರಪೇಕ್ಷವಾದ ಅರ್ಥಗಳ ಸಮರ್ಥನೆಗಳು ಕಡಿಮೆ. ಆದರೆ ಅರ್ಥಾಂತರನ್ಯಾಸದಲ್ಲಿಯೂ ಸಾಪೇಕ್ಷ ಹಾಗು ನಿರಪೇಕ್ಷವಾದ ಎರಡೂ ಅರ್ಥಗಳ ಸಮರ್ಥನೆಗಳು ತೋರುವವು. ಕಾರಣ ಸಾಮರ್ಥ್ಯಸಮರ್ಥಕಗಳಾದ ಅರ್ಥಗಳಲ್ಲಿ ಸಾಮಾನ್ಯ ವಿಶೇಷಗಳ ಸಂಬಂಧವಿರಲು ಅರ್ಥಾಂತರನ್ಯಾಸವೆಂತಲೂ ಬೇರೆ ಸಂಬಂಧವಿರಲು ಕಾವ್ಯಲಿಂಗವೆಂತಲೂ ಊಹಿಸುವದು ಸಮಂಜಸವಾಗಿದೆ, ಎಂದು ಸಂಕ್ಷಿಪ್ತವಾಗಿ ಹೇಳುವೆನು.

---

೬೨. ವಿಕಸ್ವರಾಲಂಕಾರವು. ಲಕ್ಷಣ:— ಯಾವದೊಂದು ವಿಶೇಷಾರ್ಥವನ್ನು ಸಮರ್ಥಿಸಲಿಕ್ಕೆ ಒಂದು ಸಾಮಾನ್ಯಾರ್ಥವನ್ನು ಹೇಳಿ ಅದು ಪ್ರಸಿದ್ಧವಾಗಿದ್ದರೂ ಅದರಿಂದ ತುಷ್ಟನಾಗದ ಕವಿಯು ಅದರ ಸಮರ್ಥನೆಗಾಗಿ ಬೇರೆ ವಿಶೇಷೋದಾಹರಣೆಯನ್ನು ಉಪಮಾನರೀತಿಯಿಂದಾಗಲಿ ಅರ್ಥಾಂತರನ್ಯಾಸರೂಪದಿಂದಾಗಲಿ ಹೇಳಿದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ ॥ ಅವನುರೆ ಜಯಿಸಲಶಕ್ಯನು ।
ಜವನಿಂದಲು ಭಯವದಿಲ್ಲ ಬಹುಮಹಿಮರಿಗೆ ॥
ತವೆ ಭೀಕರತರವಾಗಿಹ ।
ಭವಸಾಗರದಂತೆಯವದು ಬಹು ದುರ್ಧರ್ಷರ್ ॥

ಇಲ್ಲಿ ಕವಿಯು 'ರಾಜನು ಜಯಿಸಲಶಕ್ಯನು' ಎಂಬ ವಿಶೇಷಾರ್ಥವನ್ನು ಸಮರ್ಥಿಸಲಿಕ್ಕೆ "ಬಹುಮಹಿಮರಿಗೆ ಜವನಿಂದಲು ಭೀತಿಯಿಲ್ಲ" ಎಂಬ ಸಾಮಾನ್ಯಾರ್ಥವನ್ನು ಹೇಳಿ, ಮತ್ತೆ ಇದನ್ನು ಸಮರ್ಥಿಸುವದಕ್ಕಾಗಿ 'ಭವಸಾಗರದಂತೆ' ಎಂಬ ಉಪಮಾನ ರೂಪವಾದ ವಿಶೇಷೋದಾಹರಣೆಯನ್ನು ಹೇಳಿದ್ದಾನೆ. ಮತ್ತೆ ಉದಾ:—

ಭಾಮಿನಿ ॥ ತೊಳಗುತಿಹ ಮುತ್ತುಗಳ ರಾಶಿಯ ।
ಬಳಸಿರುವ ಜಲನಿಧಿಯ ಕಳೆಯನು ।
ಕಳೆಯದದು ಸಿಮವೆಂದು ನಾಂ ಪೇಳುವೆನು ನಿಶ್ಚಯದಿ ॥
ಮುಳುಗುವದು ಬಹುಗುಣದ ಸಂಚಯ ।

ದೊಳಗೆ ದೋಷವದೊಂದು ಚಂದ್ರನು ।
ನೊಳಗಿರುವ ಮೃಗಲಾಂಛನದ ತೆರದಂತೆ ಜಗದೊಳಗೆ ॥

ಇಲ್ಲಿ 'ಹಿಮವು ಸಮುದ್ರದ ಶೋಭೆಯನ್ನು ಕಳೆಯದು' ಎಂಬ ವಿಶೇಷಾರ್ಥವನ್ನು ಸಮರ್ಥಿಸಲಿಕ್ಕೆ "ಅನೇಕ ಸದ್ಗುಣಗಳಲ್ಲಿ ಒಂದು ದುರ್ಗುಣವು ಅಡಗುವದು" ಎಂಬ ಸಾಮಾನ್ಯಾರ್ಥವನ್ನು ಹೇಳಿ, ಮತ್ತೆ ಇದನ್ನು ಸಮರ್ಥಿಸುವದಕ್ಕಾಗಿ "ಮೃಗಲಾಂಛನದ ತೆರದಂತೆ, ಎಂಬ ಉಪಮಾನ ರೂಪವಾದ ವಿಶೇಷೋದಾಹರಣೆಯನ್ನು ಹೇಳಿದ್ದಾನೆ. ಮತ್ತೆ ಉದಾ:—

ವರಿವರ್ಧಿನಿ॥ ಕೆಟ್ಟಸ್ವರವನದು ಬಿಟ್ಟು ಮಕರಂದ ।
ವೊಟ್ಟಿದ ಮಾಮರದೊಳಗಾಗೂಡನ ।
ದಿಟ್ಟರೆ ತಿಳಿಯುವೆ ಕಾಕವೆ ನಿನ್ನನು ಕೋಕಿಲ ಸಮವೆಂದು॥
ಕೆಟ್ಟವೊಡವೆಗಳು ಪೋಗಲು ಬೇರೊ ।
ತಟ್ಟಗೆ ಧನ್ಯಗಳಪ್ಪುವು ಪಂಕದ ।
ಬೊಟ್ಟನು ತಾನಿಟ್ಟರೆ ನೇಪಾಳನು ತಿಳಿಯರೆ ಕಸ್ತೂರಿಯಂ॥

ಇಲ್ಲಿ 'ಕಾಗೆಯನ್ನು ಕೋಗಿಲವೆಂದು ತಿಳಿಯುವೆನು' ಎಂಬ ವಿಶೇಷಾರ್ಥವನ್ನು ಸಮರ್ಥಿಸಲು 'ಕೆಟ್ಟ ವೊಡವೆಗಳು ಕೆಲವೆಡೆಗಳಲ್ಲಿ ಹೋಗಲು ಧನ್ಯಗಳಾಗುವವು; ಎಂಬ ಸಾಮಾನ್ಯಾರ್ಥವನ್ನು ಹೇಳಿ ಮತ್ತೆ ಇದನ್ನು ಸಮರ್ಥಿಸುವದಕ್ಕಾಗಿ "ನೇಪಾಳ ರಾಜನು ಹಣೆಯಲ್ಲಿ ಪಂಕದ ಬೊಟ್ಟನ್ನಿಟ್ಟರೂ ಕಸ್ತೂರಿಯೆಂದು ತಿಳಿಯುವರು." ಎಂಬ ವಿಶೇಷರೂಪವಾದ ಅರ್ಥಾಂತರವನ್ನು ಹೇಳಿದ್ದಾನೆ. (ಕಸ್ತೂರಿಯು ನೇಪಾಳ ದೇಶದಲ್ಲಿ ವಿಪುಲವಾಗಿರುವದು.) ಮತ್ತೆ ಉದಾ:—

ಭಾವಿನಿ॥ ಕಾಣುವವು ಶಶಿತಾವುರಸದೊ ।
ಗೇಣಾಂಕವಳಿಗಳು ಕಲಂಕದೆ ।
ರಾಣಿಯರ ದೃಙ್ಮುಖದೊಳಂಜನತಿಲಕಶೋಭೆಯಲಿ ॥
ವೇಣೆರಡು ದೋಷಂಗಳಪ್ಪುವ ।
ಗೌಣಗಳು ಬೇರೊಂದು ತಾಣದೆ ।
ಜಾಣನಲಿ ಕಪಟಭ್ರಮಂಗಳು ಹೊಂದುವವು ಗುಣವಂ ॥

ಇದು ವಿಕ್ಟೋರಿಯಾ ಮಹಾರಾಣಿಯವರ ರೂಪವರ್ಣನೆಯ ಪದ್ಯವು. ಇಲ್ಲಿ ಕವಿಯು "ಶಶಿತಾವುರಸಗಳಲ್ಲಿ ಕಲಂಕರೂಪದಿಂದ ತೋರುವ

ವೈಗಾಂಕಭ್ರುವರಗಳು ರಾಣಿಯರ ದೃಷ್ಟಿಮುಖಗಳಲ್ಲಿ ಅಂಜನ-ತಿಲಕಗಳ ಶೋಭೆಯನ್ನು ಹೊಂದಿರುವವು" ಎಂಬ ವಿಶೇಷಾರ್ಥವನ್ನು ಸಮರ್ಥಿಸಲಿಕ್ಕೆ 'ಎರಡು ದೋಷಗಳು ಕೆಲವೊಂದು ಕಡೆಯಲ್ಲಿ ಕೂಡಲು ಗುಣಭಾವವನ್ನು ಹೊಂದುವವು' ಎಂಬ ಸಾಮಾನ್ಯಾರ್ಥವನ್ನು ಹೇಳಿ, ಮತ್ತೆ ಇದನ್ನು ಸಮರ್ಥಿಸುವದಕ್ಕಾಗಿ 'ಜಾಣನ ಮಾತಿನಲ್ಲಿ ಕಪಟ-ಭ್ರುಮುಂಗಳು ಗುಣಭಾವವನ್ನು ಹೊಂದುವವು' ಎಂಬ ವಿಶೇಷರೂಪವಾದ ಅರ್ಥಾಂತರವನ್ನು ಹೇಳಿದ್ದಾನೆ. ನೈಯ್ಯಾಯಿಕರು ಘಟವಿದ್ದಲ್ಲಿ ಘಟಾಭಾವವನ್ನು ನಿರ್ಣಯಿಸುವದು ಪ್ರಸಿದ್ಧವೇ ಅದೆ.

---

೬೩. ಪ್ರೌಢೋಕ್ತ್ಯಲಂಕಾರವು. ಲಕ್ಷಣ:—ಕಾರ್ಯೋತ್ಕರ್ಷಕ್ಕೆ ಹೇತುವಲ್ಲದ್ದನ್ನು ಅದರ ಹೇತುವಾಗಿ ಕಲ್ಪಿಸಿದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ ॥ ನಿಲಾಗಿವೆಯಳಕಾವಳಿ ।
ಕಾಲಿಂದೀತಟ ತಮಾಲಸಂಚಯದಂತೆ ॥

ಅರ್ಥ—'ಇವಳ ಅಳಕಗಳು ಯಮುನೆಯ ದಂಡೆಯ ತಮಾಲಗಳಂತೆ ನೀಲಗಳಾಗಿವೆ ಎಂದು ಹೇಳಿದೆ, ಇಲ್ಲಿ ನೈಲ್ಯೋತ್ಕರ್ಷಕ್ಕೆ ಹೇತುವಲ್ಲದ ಯಮುನಾ ತಟರೋಹಣವು ಹೇತುವಾಗಿ ಕಲ್ಪಿಸಲ್ಪಟ್ಟಿದೆ. (ನೀರು ನೀಲಗಳಾದರೆ ಗಿಡಗಳು ನೀಲಗಳಾಗುವವೇ?) ಮತ್ತೆ ಉದಾ:—

ಪರಿವರ್ಧಿನಿ॥ ಸುರತರುವಿನರಜ, ಚಿಂತಾಮಣಿರುಚೆ ।
ಹರಸಖನು ಸುಧಾಸುರತುರುವಿನ ಪಯ ।
ನೆರೆ ಶಂಖಾಂತರ್ನಭದಿಂ ರಚಿಸಲ್ಪಟ್ಟಹನೀನೈವನು ॥

ಅರ್ಥ—'ಈ ಅರಸನು ಕಲ್ಪವೃಕ್ಷದ ಹುಡಿಯಿಂದಲೂ, ಕಾಮಧೇನುವಿನ ಹಾಲಿನಿಂದಲೂ, ಚಿಂತಾಮಣಿಯ ತೇಜದಿಂದಲೂ, ಕುಬೇರನ ಶ್ವಾಸದಿಂದಲೂ, ಶಂಖದೊಳಗಿನ ಅವಕಾಶದಿಂದಲೂ ರಚಿಸಲ್ಪಟ್ಟಿದ್ದಾನೆ, ಎಂದು ಹೇಳಿದೆ. ಇಲ್ಲಿ ರಾಜನ ವಿತರಣಾತಿಶಯಕ್ಕೆ ಹೇತುವಲ್ಲದ ಕಲ್ಪವೃಕ್ಷಾದಿಗಳ ಪರಾಗಾದಿರೂಪ ಪಂಚಭೂತೆತ್ವಗಳಿಂದ ಅತನ ನಿರ್ಮಾಣತ್ವವನ್ನು ಹೇತುವಾಗಿ ಕಲ್ಪಿಸಿದ್ದಾನೆ. (ಪೃಥಿವಿ, ಅಪ್ಪು, ತೇಜ, ವಾಯು, ಆಕಾ

ಶಗಳು ಪಂಚಭೂತಗಳು. ಇವುಗಳಿಂದಲೇ ಎಲ್ಲ ಸೃಷ್ಟಿಯು ನಿರ್ಮಾಣವಾಗಿರುವದು. ಶಂಖವು ನವನಿಧಿಗಳಲ್ಲಿ ಒಂದಾಗಿರುವದು.)

---

೬೪. ಸಂಭಾವನಾಲಂಕಾರವು ಲಕ್ಷಣ:—ಬೇರೊಂದು ಕಾರ್ಯ ಸಿದ್ಧಿಗೆ 'ಇದು ಹೀಗಿರಬೇಕಾಗಿತ್ತು, ಎಂದು ಊಹಿಸಿದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ ॥ ಶೇಷ ತವ ಶಿಷ್ಯನಾದರೆ ।
ಘೋಷಿಸುವನು ನಿನ್ನ ಗುಣದ ವಿಸರವನನಿತುಂ ॥

ಇಲ್ಲಿ ಗುಣವರ್ಣನೆಯು ಕಾರ್ಯಸಿದ್ಧಿಗೆ 'ಶೇಷನು ನಿನ್ನ ಶಿಷ್ಯನಾಗಬೇಕು' ಎಂದು ಊಹಿಸಲ್ಪಟ್ಟಿದೆ. ಮತ್ತೆ ಉದಾ:—

ಭಾಮಿನಿ ॥ ಇಂದೆ ನಾನಜನಾದರೆಲ್ಲವ ।
ಗಂಧಗುಣವನು ಕತ್ತುರಿಯೆಮ್ಮೆಗ ।
ದಿಂದೆ ಖಳಜಿಹ್ವೆಯೊಳಗಿರಿಸುತ್ತಿದ್ದೆ ತಂದದನು ॥

(ಮುಂದೆ ಸಾಗುವದು.)

ಉಪೇಂದ್ರಶರ್ಮಾ, ತೋಳವಟ್ಟಿ.

ಪತ್ರವ್ಯವಹಾರವು.

ರಾವಸಾಹೇಬ ಕನ್ನಡ ಶಾಲಾಪತ್ರಕರ್ತರ ಸನ್ನಿಧಿಗೆ.

ವಿದ್ಯಾಗುರುಗಳೇ ತಮ್ಮ ಅಂದವಾದ ಪತ್ರಿಕೆಯಲ್ಲಿ ಕೆಳಗೆ ಬರೆದ ವ್ಯಾಕರಣ ಸಂಬಂಧವಾದ ಸಂಕಯವನ್ನು ಮುದ್ರಿಸಬೇಕೆಂದು ಪ್ರಾರ್ಥನೆಯದೆ:—

"ಬೇರೆ ಬೇರೆ ದೇಶಗಳ ನಿವಾಸಿಗಳು ಬಹು ಮಾತ್ಸರ್ಯದಿಂದ ಒಬ್ಬರಿಗೊಬ್ಬರು ಜಗಳಾಡುತ್ತಾರೆ." ಈ ವಾಕ್ಯದ ವ್ಯಾಕರಣವನ್ನು ಪದಶಃ ಮಾಡಿ ಕಳಿಸಬೇಕಾಗಿದೆ. ಯಾಕಂದರೆ, ಇದರ ನಿಜವಾದ ವ್ಯಾಕರಣದ ಬಗ್ಗೆ ಎಷ್ಟೋ ಮಾಸ್ತರ ಜನರನ್ನು ಕೇಳಿದರೆ ಒಬ್ಬರಾದರೂ ಒಂದೇ ಅಭಿಪ್ರಾಯವನ್ನು ಕೊಡಲಿಲ್ಲ. ಭಿನ್ನ ಭಿನ್ನ ಅಭಿಪ್ರಾಯವನ್ನು ಕೊಟ್ಟದ್ದರಿಂದಲೂ ಪ್ರಸಿದ್ಧ ಮಾಸ್ತರರಾಗಿ ಹೋದ ವ್ಹಿ. ಚಿ. ಹೂಲಿ ಇವರು ತಮ್ಮ

"ಪರೀಕ್ಷೆಯು ಕಾಗದ" ವೆಂಬ ಪುಸ್ತಕದಲ್ಲಿ ಸಂಶಯವನ್ನು ಹೇಳಿದ್ದರಿಂದಲೂ ತಮ್ಮ ಮುಂದೆ ಈ ಸಂಗತಿಯನ್ನು ಇಡಬೇಕಾಯಿತು. ಮಾಸ್ತರ ಜನರು ಬೇರೆ ಬೇರೆ ಅಭಿಪ್ರಾಯ ಕೊಟ್ಟದ್ದರಿಂದ ಬೇರೆ ಬೇರೆ ಶಾಲೆಗಳ ಹುಡುಗರಿಗೆ ಬೇರೆ ಬೇರೆ ಜ್ಞಾನವಾಗಿ ಅವರ ಪರೀಕ್ಷೆಗೆ ಭಂಗಬರುವದು. ಇಂಥ ಭಂಗಬರಬಾರದೆಂಬ ಉದ್ದೇಶದಿಂದಲೂ ಎಲ್ಲ ಮಾಸ್ತರರ ಹೇಳಿಕೆಯು ಮುಂದೆ ಒಂದೇಯಾಗಬೇಕಾಗಿಯೂ ಇದನ್ನು ಮುದ್ರಿಸಬೇಕಾಗಿ ಕೋರುವೆನು. ಇಂತೀ ವಿನಂತಿ.

ಬಸನಾಳ ತಾ॥ ಬಂಕಾಪೂರ
ತಾರೀಖು ೩೧-೧೨-೧೩.

ತಮ್ಮ ವಿಧೇಯ
ಪಾಟೀಲ.

ವಿದ್ಯಾಖಾತೆಯ ನೋಟೀಸು.

——(೦)——

ವ್ಹರ್ನ್ಯಾಕ್ಯುಲರ ಫಾಯನಲ್‌ಪರೀಕ್ಷೆ.

ದಕ್ಷಿಣಭಾಗ.

೧೯೦೩ನೆಯ ಇಸವಿಯ ನವಂಬರತಿಂಗಳ ೩೧ನೆಯ ತಾರೀಖಿನ ಮುಂಬಯಿ ಸರಕಾರೀ ಗ್ಯಾಝೆಟಿನ ೧೧ನೆಯ ಭಾಗದಲ್ಲಿ ಪ್ರಸಿದ್ಧಪಡಿಸಿದ ನಿಯಮಗಳ ಮೇರೆಗೆ ಸನ್ ೧೯೧೧ಳ ಇಸವಿಯಲ್ಲಿ ಆಗುವ ವ್ಹರ್ನ್ಯಾಕ್ಯುಲರ ಫಾಯನಲ್ ಪರೀಕ್ಷೆಗೆ ಕೆಳಗೆ ಬರೆದ ಪುಸ್ತಕಗಳು ನಿಯಮಿಸಲ್ಪಟ್ಟಿರುತ್ತವೆ:—

ಮರಾಠಿ.

ಗದ್ಯ:— ಹೊಸ ಮರಾಠಿ ಕ್ರಮಿಕ ೩ನೆಯ ಪುಸ್ತಕ ಸಂಪೂರ್ಣ.

ಪದ್ಯ:— ಹೊಸ ಕ್ರಮಿಕ ಮರಾಠಿ ೩ನೆಯ ಪುಸ್ತಕದೊಳಗಿನ ಮೊದಲಿನ ಪದ್ಯಗಳ ೩೦೦ ಸಾಲುಗಳನ್ನು ಬಾಯಿಪಾಠ ಮತ್ತು ಅರ್ಥ ಹೇಳುವದು.

ಕನ್ನಡ.

ಗದ್ಯ:— ಹೊಸ ಕ್ರಮಿಕ ಕನ್ನಡ ೩ನೆಯ ಪುಸ್ತಕ ಸಂಪೂರ್ಣ

ಪದ್ಯ:— ಹೊಸ ಕ್ರಮಿಕ ಕನ್ನಡ ೩ನೆಯ ಪುಸ್ತಕದಲ್ಲಿ ಪ್ರಾರಂಭದಿಂದಿರುವ ಪದ್ಯಗಳ ೩೦೦ ಸಾಲುಗಳನ್ನು ಬಾಯಿಪಾಠ ಮತ್ತು ಅರ್ಥ ಹೇಳುವದು.

ಊರ್ದು.

ಗದ್ಯ:— ದೇಶಭಾಷೆಯ ಹೊಸ ಕ್ರಮಿಕ ಓದಿನೆಯ ಪುಸ್ತಕದೊಳಗಿನ ಗದ್ಯಪಾಠಗಳನ್ನೂ ಪದ್ಯಾವಳಿ ನಾಯಿರ ಅಹಮದಬಕ್ಷತ ತಾಬ ತನ್ ನಸೂಹ್‌ವನ್ನೂ ಓದುವದು ಮತ್ತು ಅರ್ಥ ಹೇಳುವದು.

ಪದ್ಯ:— ಮಜಮುಯಿ ಸಖುನ್ ಭಾಗ ೧ ಇದರೊಳಗಿನ ಮೊದಲನೆಯ ೧೫೦ ದ್ವಿಪದಿಗಳನ್ನು ಬಾಯಿಪಾಠ ಅನ್ನುವದು ಮತ್ತು ಅರ್ಥ ಹೇಳುವದು.

ಧಾರವಾಡ.
ತಾ|| ೨೨.೧೨.೧೩ }

F. B. P. Lory.
ಎ. ಇ. ದಕ್ಷಿಣಭಾಗ.

೧೯೧೩ನೇ ಇಸವಿಯ ವರ್ಷಪ್ರಾಯಿಕ್ಕು ಪರೀಕ್ಷೆಯ ಪ್ರಶ್ನೆಗಳು.

ವ್ಯಾಕರಣ.

೧. ಧಾತುಗಿಸು ಕನ್ನಡಕ್ಕಾ। ಹೇತುವಿನೊಳ್ ಸ್ವಪರ ಕರ್ತೃವೊಳ್ ಸಂಸ್ಕೃತದಾ। ಧಾತುಗನೇಕಾಕ್ಷರ ಸು । ಜಾತಂ ನಿಜಕರ್ತೃವೊಳ್ ಪ್ರಯೋಜನದೆಡೆಯೊಳ್॥ ಸತತಂ ಮಧ್ಯಮ ಪುರುಷ। ಪ್ರತಿಷೇಧದ ವಿಧಿಯೊಳಂ ಪ್ರಯೋಜನವಸ್ತ್ವಾಶ್ರಿತಹೇತುಕ್ರಿಯೆಯೆಳವು ; ನ್ವಿತವುಲ್ ಕ್ರಿಯೆತಾಂ ಕ್ರಿಯಾರ್ಥಮಪ್ಪೆಡೆಗಳೊಳಂ॥ ಕೇಶವನ ವೃತ್ತ್ಯನುಗುಣವಾಗಿ ಸೂತ್ರಾರ್ಥಗಳನ್ನು ಹೇಳಿ ಅದರಲ್ಲಿ ತೋರುವ ನ್ಯೂನಾತಿರೇಕಗಳನ್ನು ವ್ಯಕ್ತ ಪಡಿಸಿ ನಿಶ್ಚಿತವಾದ ಅರ್ಥವನ್ನು ಬರೆಯಿರಿ.

೨. ಸೂತ್ರವೆಂದರೇನು? ಅದರಲ್ಲಿರುವ ಭೇದಗಳೆಷ್ಟು? ಉದಾಹರಿಸಿ ಸೂತ್ರಾರ್ಥವನ್ನು ತಿಳಿಯುವದಕ್ಕೆ ಕೇಶವನ ವೃತ್ತಿಯ ಹೊರತು ಬೇರೆ ಉಪಾಯಗಳನ್ನು ಹೇಳಿರುವನೇ? ಸಕಾರಣವಾದ ಉತ್ತರವನ್ನು ಬರೆಯಿರಿ.

೩. ನುಡಿಗಟ್ಟಿನಲ್ಲಿ ಹೇಳಿದ ಪ್ರಯೋಗವಿಚಾರವು ದರ್ಪಣದ ಯಾವ ಯಾವ ಸೂತ್ರಾನುಸಾರಿಯಾಗಿದೆ?

೪. ಹೊಸಗನ್ನಡದಲ್ಲಿ ಪ್ರಸಿದ್ಧವಾದ ಪ್ರಯೋಗಗಳನ್ನೆಲ್ಲ ಶಬ್ದ ಮಣಿದರ್ಪಣದ ನಿಯಮಗಳಿಂದ ಸಾಧಿಸಲಾಗುವದಿಲ್ಲೆಂಬದನ್ನು ಕೆಲವು ಉದಾಹರಣೆಗಳಿಂದ ತೋರಿಸಿರಿ. ಕ್ರಿಯಾಸವಾಸ ಮತ್ತು ಕ್ರಿಯಾಸದಗಳ ವಿಷಯದಲ್ಲಿ ಸಂಸ್ಕೃತಕ್ಕೂ ಕನ್ನಡಕ್ಕೂ ವ್ಯತ್ಯಾಸವೇನು?

೫. ದರ್ಪಣದಲ್ಲಿ ವ್ಯಾಕರಣಕ್ಕೆ ಸಂಬಂಧಿಸದ ಕೆಲವು ವಿಚಾರಗಳಿವೆಯೆಂದು ಹಲವರು ಆಕ್ಷೇಪಿಸುವದುಂಟು. ಅವು ಅವವು? ಅವುಗಳ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು?

೬. ಅಡಕೆಗೆ ಹೋದವಾನೆ, ಮೂರ್ಖನಿಗೆ ಹೇಳಿದ ಬುದ್ಧಿ, ಊಟಕ್ಕೆ ಉಪ್ಪಿನಕಾಯಿ, ತೋಟಕ್ಕೆ ತೆಂಗಿನಮರ ಭೂಷಣ, ಹುಲಿಗೆ ಹುಣ್ಣು ಹುಟ್ಟಿದ ಹಾಗೆ, ಹುಡುಗನಿಗೆ ಕಲಿಸಿದೆನು. ಈ ವಾಕ್ಯಗಳಲ್ಲಿ ಚತುರ್ಥಿಯು ಯಾವ ಯಾವ ಅರ್ಥಗಳಲ್ಲಿ ಬಂದಿದೆ?

೭. ಪ್ರರೂಢ ಮುದನಾತನಾದನೆಂಬುದಮಾರ್ಗಂ, ಬಳಪೊಕ್ಕಳರಿಸಿದನೆಂಬ ನಿಯಮಂ ದೂಷ್ಯಂ, ಕೃಲ್ಲಿಂಗ ಮಾಗವವರ್ಕೆ ವಿಭಕ್ತ್ಯಂತಪತ್ತಿಸಲಾಗದು, ಚಂದ್ರನಸಿತ್ತನೆಂದು ನಕಾರಮುಪಚಾರವಾಯ್ತು, ಎಲ್ಲವೆಂಬುದರಿಂದೊಂಬತ್ತರ್ಕಿಲ್ಲಂ, ಕೆಂಬಿಸಲೆಳಸಲೆಸೆದುವಾಶ್ರಮತರುಗಳ್ ಎಂಬಿವಬದ್ಧಂಗಳ್, ಇವುಗಳ ಪೂರ್ವಾಪರ ಸಂದರ್ಭವನ್ನು ವಿವರಿಸಿ ಇವು ಸರ್ವಸಮ್ಮತಗಳಲ್ಲ ಎಂಬುವದಕ್ಕೆ ಪ್ರಾಕ್ಕಾವ್ಯ ಮೂಲೆಯ ಪ್ರಯೋಗಗಳನ್ನೇ ಹೇಳಿರಿ.

೮. ಪ್ರಾಕ್ಕಾವ್ಯ ಮೂಲೆಯಲ್ಲಿ ಉದ್ಧೃತವಾದ ಗ್ರಂಥಸ್ಥ ಪ್ರಯೋಗಗಳು ಶಬ್ದಮಣಿ ದರ್ಪಣದಲ್ಲಿ ಉದಾಹೃತವಾಗಿದ್ದರೆ ತೋರಿಸಿರಿ.

೯. ಇನೇ ಪ್ರಶ್ನೆಯ ವಾಕ್ಯವನ್ನು ಛಂದೋಬದ್ಧವಾಗಿ ಬರೆದಲ್ಲಿ ಅದು ಯಾವ ವೃತ್ತದ ಅಥವಾ ವೃತ್ತಗಳ ಪಾದಗಳಾಗಬಹುದು? ಅವುಗಳ ಲಕ್ಷಣಗಳನ್ನು ಹೇಳಿರಿ.

ಪ್ರಾಕ್ಕಾವ್ಯಮೂಲೆಕೆ.

೧. ಕೆಳಗೆ ಬರೆದ ಸಂಗತಿಗಳನ್ನು ವಿವರಣೆಮಾಡಿರಿ:—

(೧) ಕಾವ್ಯವೆಂದರೇನು? ಕಾವ್ಯಭೇದಗಳು ಯಾವವು?

(೨) ಕವಿಗಳುಮಾಡಿದ ಕಾವ್ಯದಿಂದ ಲೋಕಕ್ಕೇನು ಪ್ರಯೋಜನ?

ಶಾಲಾಪತ್ರಿಕೆ.

ಪುಸ್ತಕ ೫೧೦. | ಮಾರ್ಚಿ ೧೯೧೪. | ಸಂಚಿಕೆ ೩.

ಸ್ಫುಟವಿಷಯಗಳು.

೧. ವರದಕ್ಷಿಣೆಗೆ ಬಲಿ. ನಮ್ಮ ಹಿಂದೂ ಸಮಾಜದಲ್ಲಿ ಸೇರಿಕೊಂಡಂಥ ಅನೇಕ ಕೆಟ್ಟ ನಡತೆಗಳಲ್ಲಿ ನೀತಿ ವಿಾರಿ ವರದ ಕ್ಷಿಣೆಯನ್ನು ತೆಗೆದುಕೊಳ್ಳುವ ನಡತೆಯು ಬಂದಾಗಿದೆ. ಈ ವಿಘಾತಕವಾದ ನಡತೆಯಿಂದ ಎಷ್ಟೋ ಬಳ್ಳೇ ಹೆಸರಾದಂಥ ದೈವಭಕ್ತ ಮನೆತನಗಳೂ ಹಾಳಾಗಿ ಹೋಗಿವೆ; ಇದರ ತಾಪದಿಂದ ಎಷ್ಟೋ ಸದ್ಗೃಹಸ್ಥರ ಮನೆಸುಗಳು ಬೆಂದು ಹುರಪಳಿಸಿ ಹೋಗಿವೆ. ಹೆಣ್ಣು ಮಕ್ಕಳಿದ್ದ ಪ್ರತಿ ಬಬ್ಬ ಗೃಹಸ್ಥನಿಗೆ "ದಾರಿಕಾ ಹೃದಯದಾರಿಕಾ ಪಿತುಃ" ಎಂಬ ವಾಕ್ಯದ ಸತ್ಯತೆಯು ಕ್ಷಣಕಃ ತೋರಹತ್ತಿದೆ. ಹಾಗೂ ಸದ್ಯದ ಸ್ಥಿತಿಯೇ ಮುಂದೆ ಸಾಗಿದರೆ ಅದರಿಂದ ಯಾವ ದುಷ್ಪರಿಣಾಮಗಳುಂಟಾಗುವವೋ ಎಂಬುದು ತಿಳಿಯದಾಗಿದೆ. ಈ ದುಷ್ಟ ನಡತೆಯು ಮೂಲಕವಾಗಿ ಸ್ವಲ್ಪ ದಿವಸದ ಆಚೆಯಲ್ಲಿ ಬಂಗಾಲದಲ್ಲಿ ವರ್ತಿಸಿದ ಬಂದು ಹೃದಯದ್ರಾವಕವಾದ ಸಂಗತಿಯನ್ನು ಇಲ್ಲಿ ಹೇಳುತ್ತೇವೆ:—

ಕಲಕತ್ತೆಯಲ್ಲಿ ಬಾಬೂ ಹರೇಂದ್ರಚಂದ್ರ ಮುಕರ್ಜಿ ಎಂಬ ಬಬ್ಬ ದಲಾಲರಿರುವರು. ಅವರಿಗೆ ಸ್ನೇಹಲತೆಯೆಂಬ ಬಬ್ಬ ಸುಶೀಲಳಾದ ಮಗಳಿದ್ದಳು. ಸ್ನೇಹಲತೆಗೆ ೧೪ ವರ್ಷ ವಯಸ್ಸಾದ್ದರಿಂದ ಆಕೆಯ ಲಗ್ನದ ವಿಷಯದಲ್ಲಿ ಹರೇಂದ್ರ ಬಾಬೂನವರಿಗೆ ಹಗಲಿರಳು ಚಿಂತೆ ಹತ್ತಿತು. ಬಹಳ ಕಡೆಗೆ ಪ್ರಯತ್ನ ಮಾಡಿದ ನಂತರ ಬಂದು ಯೋಗ್ಯ ಸ್ಥಳವು ಕಂಡು ಬಂತು. ಆದರೆ ಸಾಲಂಕೃತಕನ್ಯಾದಾನವನ್ನು ಮಾಡಿ ಕೊಟ್ಟು, ಮೇಲೆ ೫೦೦ ರೂ ಪಾಯಿ ವರದಕ್ಷಿಣೆಯನ್ನು ಕೊಡಬೇಕೆಂದು ಆ ವರಪಕ್ಷದವರು ಆಗ್ರಹ ತೊಟ್ಟರು. ಆದ್ದರಿಂದ ಒಟ್ಟಿಗೆ ೧೦೦೦ ರೂಪಾಯಿ ಖರ್ಚು ಮಾಡುವ ಪ್ರಸಂಗ ಬಂದಗಿತು. ಹರೇಂದ್ರ ಬಾಬೂನವರಿಗೆ ಸ್ನೇಹಲತೆಯು ಬಬ್ಬಳೇ

ಮಾಗಳಾದ್ದರಿಂದ ತನ್ನ ಪ್ರೀತಿಯ ಮಗಳಿಗೆ ಚಲೋ ಮನೆತನವು ದೊರೆತು ಆಕೆಯು ಸುಖಿಯಾಗಬೇಕೆಂಬ ಅಪೇಕ್ಷೆಯು ಅವರಲ್ಲಿ ಸ್ವಾಭಾವಿಕವಾಗಿ ಉತ್ಕಟವಾಗಿತ್ತು. ಆದರಿಂದ ಅವರು ನಿರುಪಾಯದಿಂದ ವರಪಕ್ಷದವರ ಮಾತಿಗೆ ಒಡಂಬಟ್ಟರು. ಆದರೆ ಇಪ್ಪ ರಕಮು ಖರ್ಚು ಮಾಡುವ ಶಕ್ತಿಯು ಅವರಿಗೆ ಇಲ್ಲದ್ದರಿಂದ ಅದಕ್ಕೆ ಅನ್ಯ ಉಪಾಯವನ್ನು ಕಾಣದೆ ತಾವು ಇರುವ ಮನೆಯನ್ನು ಒತ್ತೇ ಹಾಕಿ ಹಣವನ್ನು ಸಾಲಾ ತೆಗೆಯಬೇಕೆಂದು ನಿಶ್ಚಯಿಸಿದರು. ಸ್ನೇಹಲತೆಗೆ ತನ್ನ ತಂದೆಯ ಗೃಹಸ್ಥಿತಿಯು ಗೊತ್ತಿದ್ದ ದರಿಂದ ತನ್ನ ಸಲುವಾಗಿ ತನ್ನ ತಂದೆಗೆ ಮನೆಮಾರನ್ನು ಕಳಕೊಳ್ಳುವ ಪ್ರಸಂಗ ಬಂತೆಂಬದನ್ನು ನೋಡಿ ಅತಿಶಯವಾದ ದುಃಖವಾಯಿತು. ಆದ್ದರಿಂದ ಈ ದುರ್ಧರ ಪ್ರಸಂಗದೊಳಗಿಂದ ತನ್ನ ತಂದೆಯನ್ನು ಹ್ಯಾಗೆ ಬಿಡಿಸಬೇಕೆಂಬ ಬಗ್ಗೆ ಆಕೆಯು ವಿಚಾರ ಮಾಡತೊಡಗಿದಳು. ಕಡೆಗೆ ತಂದೆಯ ಸಂಕಟವನ್ನು ನಿವಾರಣೆ ಮಾಡುವದಕ್ಕೆ ಆತ್ಮತ್ಯಾಗದ ಹೊರ್ತು ಬೇರೆ ಉಪಾಯವಿಲ್ಲೆಂದೆಣಿಸಿ, ಅದನ್ನೇ ನಿಶ್ಚಯಿಸಿ ಒತ್ತಟ್ಟಿಗೆ ಹೋಗಿ, ತಾನು ಉಟ್ಟ ಸೀರೆಯ ಮೇಲೆ ಚಿಮಣೇ ಎಣ್ಣೆಯನ್ನು ಸುರವಿ ದೀಪದ ಕಡ್ಡಿಯನ್ನು ಕೊರೆದು ಅದಕ್ಕೆ ಹಚ್ಚಿದಳು. ಕೂಡಲೆ ಉರಿ ಎದ್ದು ಮನೆಯೊಳಗಿನ ಜನರಿಗೆ ಈ ಸಂಗತಿಯು ತಿಳಿಯಿತು. ಅವರು ತತ್ಕಾಲಕ್ಕೆ ಉರಿಯನ್ನು ನಂದಿಸಿ ಆಕೆಯನ್ನು ಔಷಧೋಪಚಾರಕ್ಕೆ ಆಸ್ಪತ್ರಿಗೆ ಕಳಿಸಿದರು. ಆದರೆ ಔಷಧೋಪಚಾರಗಳಿಂದ ಏನೂ ಉಪಯೋಗದೆ ಆಕೆಯು ಸ್ವಲ್ಪ ಕಾಲದಲ್ಲಿಯೇ ಮರಣ ಹೊಂದಿದಳು.

ಸ್ನೇಹಲತೆಯು ಆತ್ಮಹತ್ಯೆಮಾಡಿಕೊಳ್ಳುವದಕ್ಕಿಂತ ಮೊದಲು ತನ್ನ ತಂದೆಗೆ ಈ ಕೆಳಗಿನ ಹೃದಯದ್ರಾವಕ ಅಭಿಪ್ರಾಯವುಳ್ಳ ಪತ್ರವನ್ನು ಬರೆದಿಟ್ಟಿದ್ದಳು:— ಪರಮಪೂಜ್ಯರಾದ ತಂದೆಯವರೇ,

ನನ್ನ ಲಗ್ನದ ಸಲುವಾಗಿ ಮನೆಯನ್ನು ಒತ್ತೆಹಾಕುವ ಪ್ರಸಂಗವು ನಿಮಗೆ ಒದಗಿದ್ದನ್ನು ನಾನು ನೋಡಲಾರೆನು. ಅದರಿಂದ ನಾನು ಆ ಪ್ರಸಂಗವನ್ನೇ ತಪ್ಪಿಸಿ ಬಿಡುವೆನು. ದುಷ್ಟ ಲಗ್ನದಲ್ಲಿ ಹುಟ್ಟಿದ ಈ ದುರ್ಭಾಗ್ಯಳಾದ ನಾನು ನಾಳೆ ಅರುಣೋದಯವಾಗುವ ಪೂರ್ವದಲ್ಲಿಯೇ ಇಹದಲ್ಲಿ ಇಲ್ಲದಂತಾಗಿ ಬಿಡುವೆನು.

ತಾವು ಇಂದಿನ ವರೆಗೆ ನನ್ನನ್ನು ಅತ್ಯಂತ ಪ್ರೀತಿಯಿಂದ ಸಾಕಿ ಸಲುಹಿದಿರಿ. ಈ ಸ್ನೇಹಲತೆಯು ತಮ್ಮ ಹೃದಯಮಧ್ಯದಲ್ಲಿ ನಿವಾಸ

ಸ್ಥಾನವನ್ನು ಹೊಂದಿದ್ದಳು. ತಾಯಿತಂದೆಗಳು ನನ್ನನ್ನು ಅತ್ಯಂತ ಪ್ರೀತಿಸುತ್ತಿದ್ದರಿಂದ ನಾನು ರಾಜಕನ್ಯೆಗೂ ಅಲಭ್ಯವಾದ ಸುಖದಿಂದ ಕಾಲಕಳೆಯುತ್ತಿದ್ದೆನು. ನನ್ನ ಸಲುವಾಗಿ ನೀವು ಇರುವದಕ್ಕೆ ಮನೆಯಿಲ್ಲದೆ ಬೀದಿಯಲ್ಲಿ ಕಣ್ಣೀರಿಡುತ್ತ ಅಲೆಯಬೇಕಾಗುವದು. ನನ್ನ ಮೇಲಿನ ಆ ನಿಮ್ಮ ನಿಸ್ಸೀಮವಾದ ಪ್ರೇಮಕ್ಕೆ ಪ್ರತಿಫಲವಾಗಿ ನನ್ನಿಂದ ನಿಮಗೆ ಇಂಥ ಕಷ್ಟವು ಒದಗಬೇಕೇ? ಮೊನ್ನೆ ನೀವು ಹಗಲೆಲ್ಲ ತಿರುಗಿ ತಿರುಗಿ, ಸಾಯಂಕಾಲದಲ್ಲಿ ದಣಿದು ಹಣ್ಣಾಗಿ ಮನೆಗೆ ಬಂದಾಗ ನಿಮ್ಮ ಮುಖ ಲಕ್ಷಣವು ಅತ್ಯಂತ ಖಿನ್ನವಾಗಿತ್ತು. "ಸರ್ವಸ್ವವೂ ಹೋಯಿತು" ಎಂಬೀ ಹೃದಯವಿದಾರಕವಾದ ಉದ್ಗಾರವು ನಿಮ್ಮ ಮುಖದಿಂದ ಹೊರಬಿದ್ದದ್ದನ್ನು ನಾನು ಕಿವಿಮುಟ್ಟ ಕೇಳಿದೆನು. ನಿಮ್ಮ ಆ ಖಿನ್ನವಾದ ಮುಖ ಮುದ್ರೆಯು ಸದಾ ಸರ್ವದಾ ನನ್ನ ಕಣ್ಣಮುಂದೆ ಕಟ್ಟಿದಂತಾಗಿರುವದು. ಆ ನಿಮ್ಮ ದುಃಖ ಪೂರ್ಣವಾದ ಕಂಠದಿಂದ ಹೊರಟ ಉದ್ಗಾರವು ಈಗಲೂ ನನ್ನ ಕಿವಿಯಲ್ಲಿ ಪ್ರತಿಧ್ವನಿತವಾಗುತ್ತಲೇ ಇರುವದು. ನನ್ನ ವರದಕ್ಷಿಣೆಯ ಸಲುವಾಗಿ ನೀವು ಮನೆಯನ್ನು ಒತ್ತೆಹಾಕಬೇಕಾಗಿರುವದೆಂಬ ದುರ್ವಾರ್ತೆಯೂ ನನಗೆ ಬೇಗನೇ ತಿಳಿಯಿತು.

ಅಪ್ಪಾ, ಈ ಮಾತನ್ನು ನಾನು ಸರ್ವಥಾ ಸಹಿಸಲಾರೆನು. ನನ್ನ ಸಂಬಂಧದ ಚಿಂತೆಯೆಂಬ ನಿಮ್ಮ ಹೃದಯದ ಮೇಲಿನ ಈ ಭಾರವನ್ನು ಕಳೆಯುವದೇ ನನ್ನ ಲಗ್ನದ ಉದ್ದೇಶವೆಂದು ನನಗೆ ತೋರುತ್ತದೆ. ಇಷ್ಟೊಂದು ವಯಸ್ಸಾದರೂ ನನ್ನ ಮದುವೆಯನ್ನು ಮಾಡಲಿಲ್ಲವೆಂದು ಜನರು ಎಷ್ಟೊಂದು ನಿಂದೆಯನ್ನು ಮಾಡಿದರೂ ನನಗೆ ಯೋಗ್ಯವಾದ ಸ್ಥಳವು ದೊರೆಯಬೇಕೆಂದು ನೀವು ಬಹಳ ಕಷ್ಟಬಟ್ಟಿರಿ. ಕಟ್ಟಕಡೆಗೆ ಇದರ ಪರಿಣಾಮವು ಹೀಗಾಗಬೇಕಾಯಿತೇ? ಯಾವ ವಾಸ್ತುವಿನಲ್ಲಿ ನನ್ನ ಹಿರಿಯರು ಕೋಭಿಸುತ್ತಿರುವರೋ ಅಲ್ಲಿ ಪರಕೀಯರು ಕಾಲಿಡಲಿಕ್ಕೆ ನಾನು ಎಂದೆಂದೂ ಕೊಡೆನು. ಅಪ್ಪಾ, ನನ್ನ ಸಲುವಾಗಿ ನಿಮ್ಮ ಸರ್ವಸ್ವವನ್ನೂ ನೀವು ಬಲಿಕೊಡುವದಕ್ಕಿಂತ ನಾನು ನನ್ನನ್ನೇ ಬಲಿಕೊಡುವದು ಒಳ್ಳೆಯದು.

ಅಪ್ಪಾ, ಬರದ್ವಾನದೊಳಗಿನ ಮಹಾಪೂರದಿಂದುಂಟಾದ ಅನರ್ಥದಿಂದ ಅನೇಕರು ಸಂಕಟದಲ್ಲಿ ಬೀಳಬೇಕಾಯಿತು. ಆಗ ಅವರಿಗೆ ಸಹಾಯಮಾಡುವದಕ್ಕಾಗಿ ಎಷ್ಟೋಮಂದಿ ಉದಾರಿಗಳಾದ ಬಂಗಾಲೀ ಶರುಗಳು ತಾವಾಗಿ ಸಿದ್ಧರಾದರು. ದುಃಖಿತರಾದವರಲ್ಲಿ ಸಹಾನುಭೂತಿ

ಯೆನ್ನು ತೋರಿಸಿದ್ದಕ್ಕಾಗಿ ಈಶ್ವರನು ಅವರಿಗೆ ಕಲ್ಯಾಣ ಮಾಡಲಿ, ಎಷ್ಟೋ ಮಂದಿ ತರುಣರು ಸ್ವದೇಶೋದ್ಧಾರಕ್ಕಾಗಿ ವರದೇಶದ ಬಡವಿಗಳನ್ನು ಕೊಳ್ಳುವದಿಲ್ಲೆಂದು ಪ್ರತಿಜ್ಞೆಮಾಡಿರುವರು. ಮೊನ್ನೆ ಮೊನ್ನೆ ದಕ್ಷಿಣ ಆಫ್ರಿಕಾದೊಳಗಿನ ತಮ್ಮ ಬಾಂಧವರಿಗೆ ಸಹಾಯಮಾಡುವದಕ್ಕಾಗಿ ಎಷ್ಟೋ ಬಂಗಾಲೀ ತರುಣರು ಮನೆ ಮನೆ ತಿರುಗಿ ಫಂಡು ಕೂಡಿಸಿದರೆಂಬದನ್ನು ನಾನು ಕೇಳಿರುವೆನು. ಅದರೆ ಆ ಜನರಿಗೆ ಸ್ವಜನರ ವಿಷಯದಲ್ಲಿ ಕರುಣೆ ಬರುವದಿಲ್ಲವೇ?

ಅಪ್ಪಾ, ನಿನ್ನಿನ ರಾತ್ರಿಯಲ್ಲಿ ನನಗೊಂದು ಕನಸು ಬಿದ್ದಿತು. ವಾದ್ಯಗಳ ಅಶ್ರುತಪೂರ್ವವಾದ ಮಂಗಲ ಧ್ವನಿಯು ಕೇಳಬರುತ್ತಿತ್ತು. ತೇಜಸ್ಸಿನ ಅವರೂಪವಾದ ಪ್ರಭೆಯು ನಾಲ್ಕೂ ಕಡೆಗೆ ಪಸರಿಸಿತ್ತು. ಇಂಥ ಸಮಯದಲ್ಲಿ ದುರ್ಗಾಮಾತೆಯು ನನಗೆ ದರ್ಶನಕೊಟ್ಟಳು. ಅವಳು ಆನಂದಿತ ಮುದ್ರೆಯಿಂದ "ಸ್ವರ್ಗಲೋಕಕ್ಕೆ ಬಾ" ಎಂದು ನನಗೆ ಸಂಜ್ಞೆ ಮಾಡಿದಳು. ಆ ಸಮಯದಲ್ಲಿ ಅಪ್ಪಾ, ನನಗೆ ನಿಮ್ಮ, ನಿಮ್ಮ ಆ ಚಿಂತಾಯುಕ್ತವಾದ ಮುಖಮುದ್ರೆಯ, ನನ್ನ ಪ್ರಿಯತಮಳಾದ ಮಾತೆಯ, ಹಾಗು ನನ್ನ ಅಣ್ಣ ತಮ್ಮಂದಿರ ನೆನಪು ಆಯಿತು. ಈ ಇವರೆಲ್ಲರ ರಕ್ಷಣಮಾಡಬೇಕೆಂದು ನಿಶ್ಚಯಿಸಿ, "ನಾನು ಬರುತ್ತೇನೆ" ಎಂದು ದುರ್ಗಾತಾಯಿಗೆ ತಿರುಗಿ ಸಂಜ್ಞೆಮಾಡಿ ತಿಳಿಸಿದೆನು.

ಅಪ್ಪಾ, ನಾನು ಹೋದ ಬಳಿಕ ನೀವು ದುಃಖದಿಂದ ಕಣ್ಣೀರು ಸುರಿಸಬಹುದು. ನನ್ನ ದೆಸೆಯಿಂದ ನಿಮ್ಮ ಜನ್ಮವು ದುಃಖಿತವಾಗಬಹುದು. ಆದರೆ ನಮ್ಮ ಮನೆಯು ಉಳಿಯುವದು. ಇರಲಿ. ಈ ಜೀವನಯಾತ್ರೆಯನ್ನು ಯಾವ ಮಾರ್ಗದಿಂದ ಕೊನೆಗಾಣಿಸಲಿ? ಅಗ್ನಿ, ಜಲ, ಅಥವಾ ವಿಷ ಈ ಮೂರರಲ್ಲಿ ಯಾವದನ್ನು ಆಶ್ರಯಿಸಲಿ? ಎಂಬ ವಿಚಾರವು ನನ್ನ ಮನಸ್ಸಿನಲ್ಲಿ ಉಂಟಾಯಿತು. ಕಡೆಗೆ ಶ್ರೀ ಅಗ್ನಿನಾರಾಯಣನನ್ನೇ ಆಶ್ರಯಿಸಬೇಕೆಂದು ನಿರ್ಣಯಿಸಿದೆನು. ನಾನು ಈ ಸ್ವಶರೀರದಹನದಿಂದ ಹುಟ್ಟಿಸಿದ ಅಗ್ನಿಯ ಕಿಡಿಗಳು ದೇಶದ ತುಂಬಹಬ್ಬಲಿ.

ಇನ್ನು ಮೇಲೆ ಅಪ್ಪಾ, ನಾನು ನಿಮ್ಮ ಅಪ್ಪಣೆಯನ್ನು ತೆಗೆದುಕೊಳ್ಳುತ್ತೇನೆ. ನನ್ನ ಆತ್ಮವಿಸರ್ಜನೆಯ ಸಮಯವು ಬದಗಿ ಬಂದಿತು. ಸೃಷ್ಟಿಯು ಶಾಂತವಾದ ನಿದ್ರಾಸುಖವನ್ನು ಅನುಭವಿಸುತ್ತಿರುವದು. ನಾನಾದರೂ

ದೀರ್ಘ ನಿದ್ರೆಯ ಆಶ್ರಯವನ್ನು ಹೊಂದುವೆನು. ನನ್ನ ಮನಸ್ಸಿನ ಸ್ಥಿತಿಯು ತೀರ ವಿಲಕ್ಷಣತರದ್ದಾಗಿರುವದು. ಶ್ರೀ ದುರ್ಗಾಮಾತೆಯ ಪದಕಮಲದ ಬಳಿಯಲ್ಲಿ ನಾನು ನಿಮ್ಮ ಹಾಗು ಅಪ್ಪನವರ ಮಾರ್ಗಪ್ರತೀಕ್ಷೆ ಮಾಡುತ್ತ ಕುಳಿತುಕೊಳ್ಳುವೆನು.

ತಮ್ಮ ದುರ್ದೈವಿಯಾದ
ಸ್ನೇಹಲತಾ.

ಸ್ನೇಹಲತೆಯ ಈ ತರದ ಆತ್ಮಯಾಗದಿಂದ ಬಂಗಾಲಿ ಜನರಲ್ಲಿ ಬಹಳ ಉದ್ವೇಗ ಉಂಟಾಗಿದೆ. ವರದಕ್ಷಿಣೆಯ ಈ ಕೆಟ್ಟ ನಡತೆಗೆ ಏನು ಉಪಾಯ ಮಾಡಬೇಕೆಂಬದನ್ನು ವಿಚಾರ ಮಾಡುವದಕ್ಕೋಸ್ಕರ ತಾ॥ ೧೫ ಗಳನೇ ಫೇಬ್ರುವರಿ ದಿವಸ ಬಾಬೂ ಕೃಷ್ಣ ಕುಮಾರ ಮಿತ್ರ ಇವರು ಅಧ್ಯಕ್ಷರಾಗಿರಲು ಕಲಕತ್ತೆಯಲ್ಲಿ ಕಾಲೇಜ ಸ್ಕೋಯರ ಎಂಬಲ್ಲಿ ಒಂದು ಸಾರ್ವಜನಿಕ ಸಭೆ ಕೂಡಿ, ಈ ನಡತೆಯನ್ನು ಪ್ರತಿಬಂಧಿಸುವ ಬಗ್ಗೆ ಠರಾವು ಮಾಡಲ್ಪಟ್ಟಿತು. ಅದೇ ಸಮಯದಲ್ಲಿ ಕಲಕತ್ತಾದ ಕಾಲೇಜುಗಳ ಎಷ್ಟೋ ತರುಣ ವಿದ್ಯಾರ್ಥಿಗಳು, ತಾವು ವರದಕ್ಷಿಣೆಯನ್ನು ಸ್ವೀಕರಿಸಲಿಕ್ಕಿಲ್ಲವೆಂದು ಆಣೆ ಇಟ್ಟುಕೊಂಡರು. ಇದರಿಂದ ಆ ಪ್ರಾಂತದಲ್ಲಿ ಈ ನೀಚ ನಡತೆಯ ಪ್ರಾಬಲ್ಯವು ಕೆಲಮಟ್ಟಿಗಾದರೂ ಕಡಿಮೆಯಾಗುವದೆಂದು ತೋರುತ್ತದೆ.

ಚಿಕ್ಕಮಕ್ಕಳಿಗೆ ಸಲುವಾಗಿ ಆಟಗಳ ಯೋಜನೆ.

ಶರೀರ-ಬುದ್ಧಿ-ಮನಸ್ಸು ಇವುಗಳ ಶಕ್ತಿಗಳನ್ನು ತಕ್ಕ ಕ್ರಮದಿಂದ ಕಾಸಗೊಳಿಸಿ, ಶಕ್ಯವಿದ್ದಷ್ಟು ಮಟ್ಟಿಗೆ ಪೂರ್ಣ ಸ್ಥಿತಿಗೆ ಬಿಯ್ಯುವದೇ ಶಿಕ್ಷಣವೆಂದು ಆಧುನಿಕ ಶಿಕ್ಷಣಶಾಸ್ತ್ರಜ್ಞರ ಮತವುಂಟು. ನಿಜವಾಗಿ ವಿಚಾರಿಸಿದರೆ ಶಿಕ್ಷಣಕ್ಕೆ ಶರೀರ, ಮನಸ್ಸು ಇವೆರಡೇ ಅಂಗಗಳೆಂದು ಹೇಳಬಹುದು. ಶಿಕ್ಷಕರು ಈ ಎರಡೂ ಅಂಗಗಳ ಕಡೆಗೆ ಸರಿಯಾಗಿ ಲಕ್ಷಕೊಡಿಕ್ಕೆ ಬೇಕು. ಯಾಕಂದರೆ, ಅವೆರಡರಲ್ಲಿ ಒಂದರ ಬೆಳವಣಿಗೆಯು ಮತ್ತೊಂದರ ಬೆಳವಣಿಗೆಯನ್ನು ಅವಲಂಬಿಸಿರುವದು. ಶರೀರವು ಅಶಕ್ತವೂ ರೋಗಿಷ್ಠವೂ ಆಗಿದ್ದರೆ, ಮನಸ್ಸು ಕ್ರಿಯಾಶೂನ್ಯವೂ ದುರ್ಬಲವೂ ಆಗುವದರಲ್ಲಿ ಸಂದೇಹವಿಲ್ಲ. ಮನಸ್ಸಿನ ವಿಕಾಸವು ಇಂದ್ರಿಯ

ಜನ್ಮಜ್ಞಾನದಿಂದಲೂ ಶರೀರದ ಬೆಳವಣಿಗೆಯು ಬೇರೆ ಬೇರೆ ಸ್ನಾಯುಗಳ ಚಲನವಲನಗಳಿಂದಲೂ ಪ್ರಾರಂಭವಾಗುತ್ತದೆ. ಕೂಸು ಹುಟ್ಟಿದಂದಿನಿಂದಲೇ ಈ ಎರಡೂ ಕಾರ್ಯಗಳು ಆರಂಭವಾಗುವವು. ಆಗ ಮೊದಲನೆಯದರ ಗತಿಯು ಅತಿಮಂದವಾಗಿಯೂ, ಎರಡನೆಯದರ ಗತಿಯು ಅತಿತೀವ್ರವಾಗಿಯೂ ಇರುವದು. ಅಂದರೆ, ಬಾಲ್ಯದಲ್ಲಿ ಮನಸ್ಸು ಅತಿ ಸಾವಕಾಶವಾಗಿ ವಿಕಾಸ ಹೊಂದುತ್ತಿರುವದು. ಆದರೆ ಶರೀರವು ಒಳ್ಳೇ ಭರದಿಂದ ಬೆಳೆಯುತ್ತಿರುವದು. ಮುಂದೆ ಶರೀರದ ಬೆಳವಣಿಗೆಯು ಕಡಿಮೆಯಾಗುತ್ತ ಸುಮಾರು ನಾಲ್ವತ್ತು ವರ್ಷದ ವಯಸ್ಸಿಗೆ ಅದು ನಿಂತುಹೋಗುವದು. ಆಗ ಮಾನಸಿಕ ಶಕ್ತಿಗಳು ಪ್ರಬಲವಾಗುತ್ತಿರುವವು. ಈ ಕಾರ್ಯವು ಅವಿರಣ ಸಾಗುವದೆಂದು ಹೇಳಬಹುದು. ಬೇರೆ ಬೇರೆ ವಯಸ್ಸಿನ ಹುಡುಗರನ್ನೂ ಗಂಡಸರನ್ನೂ ಹೆಂಗಸರನ್ನೂ ನಿರೀಕ್ಷಿಸಿದರೆ ಈ ಮಾತಿನ ಸತ್ಯತೆಯು ತೋರಿಬರುವದು. ಪ್ರೌಢರಿಗಿಂತ ಚಿಕ್ಕವರಿಗೆ ಓಡಾಡುವದೂ, ಜಿಗಿದಾಡುವದೂ, ಕುಣಿಯುವದೂ ಒದರಾಡುವದೂ ನಗುವದೂ ಬಹಳ ಸೇರುತ್ತದೆ. ಅದರಿಂದ ಅವರು ಆ ಕೆಲಸಗಳನ್ನು ಬಹಳ ಉಲ್ಲಾಸದಿಂದ ಮಾಡುವರು. ಅವರು ಒತ್ತಟ್ಟಿಗೆ ಎಂದೂ ಸುಮ್ಮನೆ ಕೂಡ್ರುವದಿಲ್ಲ. ಮನೆಯಲ್ಲಿ ಏನಾದರೂ ಸಪ್ಪಳವಾಗಹತ್ತಿದರೆ ಅಡಿಗೆಯ ಮನೆಯಲ್ಲಿದ್ದ ಮಗುವು ತಟ್ಟನೆ ಓಡಿಬಂದು ಅಂಗಳದಲ್ಲಿ ನಿಲ್ಲುವದು. ಅದೇ ಪ್ರೌಢರಿಗೆ ಎಲ್ಲಿಗಾದರೂ ಹೋಗಿ ಬರುವದೆಂದರೆ ಬೇಸರವಾಗುತ್ತದೆ. ಅವರಿಗೆ ಒತ್ತಟ್ಟಿಗೆ ಕೂಡ್ರ ಹೇಳಿದರೆ ಸಂತೋಷವಾಗುತ್ತದೆ. ಅದೇ ಪ್ರಕಾರ ಚಿಕ್ಕವರಿಗಿಂತ ಪ್ರೌಢರಲ್ಲಿ ಅವಲೋಕನ, ಸ್ಮರಣ, ವಿಚಾರ ಅನುಮಾನ, ನಿರ್ಣಯ ಇವೇ ಮೊದಲಾದ ಮಾನಸಿಕ ಶಕ್ತಿಗಳು ಹೆಚ್ಚು ಹೆಚ್ಚು ಪ್ರಮಾಣದಿಂದ ದೃಷ್ಟಿಗೆ ಬೀಳುವವು. ಶಿಕ್ಷಕರು ಈ ಮಾತುಗಳನ್ನು ಲಕ್ಷದಲ್ಲಿಟ್ಟು ವಿದ್ಯಾರ್ಥಿಗಳ ವಯೋನುಗುಣವಾಗಿ ಪಾಠಗಳ ಯೋಜನೆಯನ್ನು ಮಾಡತಕ್ಕದ್ದು. ಚಿಕ್ಕ ಮಕ್ಕಳ ಶಾರೀರಿಕ ಶಿಕ್ಷಣದಲ್ಲಿ ತಾಲೀಮು, ಡ್ರಿಲ್, ಹಾಗು ಆಟಗಳೆಂದು ಮೂರು ವಿಧವಾಗಿ ಪಾಠಗಳನ್ನು ಮಾಡಿಕೊಳ್ಳಬಹುದು. ಇವೆಲ್ಲವುಗಳಿಗೂ ಸಾಮಾನ್ಯವಾಗಿ ಆಟಗಳೆಂತಲೇ ಅನ್ನೋಣ. ಮೇಲೆ ಹೇಳಿದ ಸಂಗತಿಗಳನ್ನು ಲಕ್ಷ್ಯದಲ್ಲಿಟ್ಟು ಬೇರೆ ಬೇರೆ ವಯಸ್ಸಿನ ಹುಡುಗರಿಗೆ ಆಟಗಳ ಯೋಜನೆಯನ್ನು ಮಾಡುವಾಗ

ಯಾವ ಮೂಲತತ್ವಗಳನ್ನು ಅನುಸರಿಸಬೇಕೆಂಬದನ್ನೂ ಅಂಥ ಆಟಗಳು ಸದ್ಯಕ್ಕೆ ಪ್ರಚಾರದಲ್ಲಿ ಯಾವವಿರುವವೆಂಬದನ್ನೂ ಇಲ್ಲಿ ವಿಚಾರಿಸುವಾ:—

ಶಾರೀರಿಕ ಶಿಕ್ಷಣದ ಬಗ್ಗೆ ವಿದ್ಯಾರ್ಥಿಗಳ ಆಯುಷ್ಯದಲ್ಲಿ ಮೂರು ಅವಧಿಗಳನ್ನು ಕಲ್ಪಿಸಬಹುದು. ಚಿಕ್ಕಮಕ್ಕಳ ಪ್ರಾರಂಭದ ೮ ವರ್ಷಗಳು ಮೊದಲನೆಯ ಅವಧಿಯಲ್ಲಿ ಸೇರುವವು. ಈ ಅವಧಿಯಲ್ಲಿ ಹುಡುಗರು ತಮ್ಮ ಬೇರೆ ಬೇರೆ ಸ್ನಾಯುಗಳನ್ನು ಉಪಯೋಗಿಸಿ ಶಾರೀರಿಕ ಶಕ್ತಿಗಳನ್ನು ಬೆಳೆಯಿಸುತ್ತಿರುವರು. ಹಾಗೂ ಒಂದೊಂದೇ ಇಂದ್ರಿಯದ ಉಪಯೋಗವನ್ನು ಮಾಡಿ ಅನುಭವವನ್ನು ಗಳಿಸುತ್ತಿರುವರು. ಆಗ ಮನಸ್ಸು ಬಹು ಚಂಚಲವಾಗಿರುವದು; ಯಾವದೊಂದು ಕೆಲಸದಲ್ಲಿ ಅದು ಬಹಳ ಹೊತ್ತಿನವರೆಗೆ ನಿಲ್ಲುವದಿಲ್ಲ. ಅಪ್ಪಟಪ್ಪಟಕ್ಕೆ ಅಸಮಾಧಾನವು ವ್ಯಕ್ತವಾಗುವದು. ಆದರೆ, ಈ ಅವಧಿಯಲ್ಲಿ ಅವರು ಕೆಲಸವಿಲ್ಲದೆ ಸುಮ್ಮನೆ ಕೂಡ್ರಲಾರರು; ಮತ್ತು ಸ್ವೇಚ್ಛೆಯಿಂದಲೂ ಆಡಲಾರರು. ತಮಗಿಂತ ದೊಡ್ಡವರು ಮಾಡುವದನ್ನು ನೋಡಿ ತಾವಾದರೂ ಅವರಂತೆ ಅನುಕರಿಸಲು ಯತ್ನಮಾಡುವರು. ಅದು ಸಹ ಅರ್ಧತಾಸಿಗಿಂತ ಹೆಚ್ಚಾದರೆ ಬೇಸರಿಯುವರು. ಈ ಮಾತುಗಳನ್ನು ಲಕ್ಷದಲ್ಲಿಟ್ಟು ಶಿಕ್ಷಕರು ಹುಡುಗರನ್ನು ದುಂಡಗೆ ನಿಲ್ಲಿಸಿಕೊಂಡು, ತಾನು ಜಿಗಿದು ಕೈಕಾಲುಗಳನ್ನು ಹಿಂದೆ ಮುಂದೆ ಮೇಲೆ ಕೆಳಗೆ ಮಾಡಿ, ಚಪ್ಪಳೆಯನ್ನು ಬಾರಿಸಿ, ಇತ್ಯಾದಿ ಅನೇಕ ತರದ ಹಾವಭಾವಗಳನ್ನು ಮಾಡಿ ತೋರಿಸಿ ಅವುಗಳ ಅನುಕರಣ ಮಾಡಲಿಕ್ಕೆ ಹಚ್ಚುತಕ್ಕದ್ದು. ಮತ್ತು ಇಲಿ, ಬೆಕ್ಕು, ನಾಯಿ, ಕೋಳಿ ಮತ್ತು ಅದರ ಮರಿಗಳು ಹಕ್ಕಿಗಳು ಇವುಗಳ ನಿರೀಕ್ಷಣವನ್ನು ಮಾಡಿಸಿ ಬೆಕ್ಕಾಗಿ ಇಲಿಗಳನ್ನು ಹಿಡಿಯುವಂತೆಯೂ, ನಾಯಿಯಾಗಿ ಬೆಕ್ಕನ್ನು ಬೆನ್ನಟ್ಟುವಂತೆಯೂ, ಕೋಳಿಯಾಗಿ ಮರಿಗಳಿಗೆ ಮೆಯ್ಯಲಿಕ್ಕೆ ಕಲಿಸುವಂತೆಯೂ, ಹಕ್ಕಿಗಳಾಗಿ ಕೈಗಳನ್ನು ರೆಕ್ಕೆಗಳಂತೆ ಉಪಯೋಗಿಸಿ ಹಾರುತ್ತ ಹೋಗುವಂತೆಯೂ ಅಡಿಸಬಹುದು.

ಈ ವಯಸ್ಸಿನ ಹುಡುಗರು ಉಗೆಬಂಡಿ, ಕುದುರೆ ಎತ್ತುಗಳು ಬಂಡಿಯನ್ನು ಎಳೆಯುವದು, ರಥೋತ್ಸವ, ಪಲ್ಲಕ್ಕಿಸೇವೆ, ಪಂಜಾಗಳ ಮೆರವಣಿಗೆ ಇವೇ ಮೊದಲಾದವುಗಳ ಅನುಕರಣವನ್ನು ಮಾಡಿ ಆಡುತ್ತಿರುವ

ದನ್ನೂ ನಾಟಕದೊಳಗಿನ ಬೇರೆಬೇರೆ ಪಾತ್ರಗಳ ಅನುಕರಣ ಮಾಡುವ ದನ್ನೂ ನಾವು ಆಗಾಗ್ಗ ನೋಡುತ್ತೇವೆ. ಹೊತ್ತು ಸಾಧಿಸಿ ಇಂಥ ಆಟಗಳನ್ನು ಹುಡುಗರಿಂದ ಆಡಿಸುತ್ತಿದ್ದರೆ, ಮನೋರಂಜನವೂ ಶರೀರಾವಯವಗಳ ಬೆಳವಣಿಗೆಯೂ ಆಗುವವಲ್ಲದೆ, ಇಂದ್ರಿಯಜನ್ಯಜ್ಞಾನಕ್ಕೆ ಉತ್ತೇಜನ ಕೊಟ್ಟಂತೆ ಆಗುವದು. ಇಂಥ ಆಟಗಳನ್ನು ಆಡುವಾಗ ಎಲ್ಲ ಹುಡುಗರು ಒಟ್ಟು ಗೂಡಿ ಆಡುವಾಗ ಆ ಆಟಗಳಿಗೆ ತಕ್ಕ ಗೀತಗಳನ್ನು ಹಾಡುತ್ತಿದ್ದರೆ ಹೆಚ್ಚು ಪ್ರಯೋಜನವಾಗುವದು.

ಹುಡುಗರು ಸುಮಾರು ಎಂಟು ವರ್ಷದವರಾದಂದಿನಿಂದ ೧೬ ವರ್ಷದ ವಯಸ್ಸಿನವರೆಗೆ ಹೋಗುವ ಕಾಲವು ಶಾರೀರಿಕ ಶಿಕ್ಷಣದ ಎರಡನೇ ಅವಧಿಯು. ಈ ಅವಧಿಯಲ್ಲಿ ಮಕ್ಕಳ ಬುದ್ಧಿ ಶಕ್ತಿಗಳು ಜಾಗೃತವಾಗಿ ಬೆಳವಣಿಗೆಯನ್ನು ಹೊಂದುತ್ತಿರುವವು. ಶಾರೀರಿಕ ಶಕ್ತಿಗಳಂತೂ ಭರದಿಂದ ಬೆಳೆಯುತ್ತಿರುವವು. ಕೇವಲ ಅನುಕರಣ ಮಾಡುವ ಬಲವು ಕಡಿಮೆಯಾಗಿ ಅಪ್ಪಣೆಯಂತೆ ಕೆಲಸ ಮಾಡುವಷ್ಟು ಯೋಗ್ಯತೆಯು ಬರಹತ್ತಿರುವದು. ಆದಕಾರಣ ಶರೀರದ ಬೇರೆ ಬೇರೆ ಸ್ನಾಯುಗಳಿಗೆ ವ್ಯಾಯಾಮವು ಸಿಗುವಂತೆ ಪದ್ಧತಿಗೆ ಸರಿಯಾಗಿ ಸಾದಾ ಡ್ರಿಲ್, ಡಂಬೆಲ್ಸ ಡ್ರಿಲ್‌ಗಳನ್ನು ಮಾಡುವದು, ಸಾಮುಗಳನ್ನೂ ಉಠಾಬಸಿಗಳನ್ನೂ ತೆಗೆಯುವದು, ಲೋಡುಗಳನ್ನು ತಿರುವುವದು ಈ ಮೊದಲಾದವುಗಳನ್ನು ಅಪ್ಪಣೆಕೊಟ್ಟು ಮಾಡಿಸಲಿಕ್ಕೆ ಅಡ್ಡಿ ಇಲ್ಲ. ಇದರಿಂದ ಹುಡುಗರಲ್ಲಿ ಆಜ್ಞಾಧಾರಕತನವು ಹುಟ್ಟುವದಲ್ಲದೆ, ಹೇಳಿದ ಕೆಲಸವನ್ನು ತತ್ಪರತೆಯಿಂದ ಮಾಡುವ ಅಭ್ಯಾಸವು ಅವರಲ್ಲಿ ನೆಲೆಗೊಳ್ಳುವದು. ಹುಡುಗರು ಆಜ್ಞಾಧಾರಕರಾಗಲಿ, ಅವಿಧೇಯರಾಗಲಿ, ಸತ್ಯವಂತರಾಗಲಿ, ಸುಳ್ಳುಗಾರರಾಗಲಿ, ಪ್ರಾಮಾಣಿಕರಾಗಲಿ ಅಪ್ರಾಮಾಣಿಕರಾಗಲಿ, ಸ್ವಾಭಿಮಾನಿಗಳಾಗಲಿ, ಅಭಿಮಾನ ಶೂನ್ಯರಾಗಲಿ ಆಗುವ ಕಾಲವು ಇದೇ. ಆದಕಾರಣ ಈ ಅವಧಿಯಲ್ಲಿ ಹುಡುಗರು ಸ್ವೇಚ್ಛೆಯಿಂದ ಆಡುವಾಗ ಶಿಕ್ಷಕರಾಗಲಿ ತಾಯಿತಂದೆಗಳಾಗಲಿ ಅವರ ಸ್ವಭಾವವನ್ನು ಸೂಕ್ಷ್ಮ ದೃಷ್ಟಿಯಿಂದ ಅವಲೋಕಿಸಿ ಕೆಟ್ಟ ಚಟುಗಳು ಹತ್ತದಂತೆ ಲಕ್ಷವಿಡಲಿಕ್ಕೆ ಬೇಕು.

ಸಶೇಷ.

ತ. ನಾ. ಅವಿಮಾನಬಾವಿ.

ಯುದ್ಧವು ಜನಾಂಗದ ಅವನತಿಯ ಮುಖ್ಯಕಾರಣವು.

ಈ ವರೆಗೆ ವಿದ್ವಾಂಸರು ಯುದ್ಧದ ವಿರುದ್ಧವಾಗಿ, ಪ್ರಾಣಿವಧೆ ಮಾಡುವದು ಪಾಪವೆಂದು ನೀತಿಶಾಸ್ತ್ರದ ವಿಷಯವನ್ನು ಹೇಳಿಯಾಗಲಿ, ರಾಜನೀತಿಯ ದೃಷ್ಟಿಯಿಂದ ಅದು ದ್ರವ್ಯಹಾನಿಕರವೆಂದು ಹೇಳಿಯಾಗಲಿ ಯುದ್ಧಲೋಲುಪವಾದ ಜನಾಂಗಕ್ಕೆ ಈ ಪಾಪಕಾರ್ಯದಿಂದ ತಿರುಗಿಸುವದಕ್ಕಾಗಿ ಉಪದೇಶಿಸುತ್ತ ಬಂದರು. ಆದರೆ ಸಮಾಜಶಾಸ್ತ್ರದ ದೃಷ್ಟಿಯಿಂದೂ ಯುದ್ಧವು ನಿಷಿದ್ಧವಾದದ್ದಿರುವದೆಂದು ಈಗ ನಿರ್ಣಯಿಸಲ್ಪಟ್ಟಿದೆ.

ರಾಜನೀತಿಯು ಯುದ್ಧಕ್ಕೆ ಅಪರಿಮಿತ ದ್ರವ್ಯವು ಬೇಕಾಗುವದೆಂದು ಹೇಳುತ್ತದೆ. ಧರ್ಮಶಾಸ್ತ್ರವು ಯುದ್ಧವು ಪ್ರಾಣಿವಧೆಯನ್ನುಂಟುಮಾಡುವದಾದ್ದರಿಂದ ಪಾಪವೆಂದು ಹೇಳುತ್ತದೆ. ಅರ್ಥಶಾಸ್ತ್ರವು ಯುದ್ಧವು ಬೇಸಾಯಕ್ಕೆ ಅಡ್ಡಿಯಾದದ್ದೆಂದು ಹೇಳುತ್ತದೆ. ಇವೆಲ್ಲದೆ ಮನುಷ್ಯರು ಯುದ್ಧದಿಂದ ತಮ್ಮ ಮನಸ್ಸನ್ನು ತಿರುಗಿಸುವದಕ್ಕೆ ಇನ್ನೂ ಒಂದು ಮುಖ್ಯಕಾರಣವುಂಟು. ಅನೇಕ ಜನಾಂಗಗಳು ಒಂದೊಂದು ಕಾಲದಲ್ಲಿ ಅವನತಿಯನ್ನು ಹೊಂದಿದವೆಂಬದನ್ನು ಇತಿಹಾಸದಲ್ಲಿ ನೋಡುತ್ತೇವೆ; ಈಗಲೂ ಕೇಳುತ್ತೇವೆ. ಅನೇಕ ಜನಾಂಗಗಳು ತೇಜಸ್ಸು, ವೀರ್ಯ, ಶಾರೀರಬಲ, ಶಾರೀರಿಕಉನ್ನತಿ, ಜನನಶಕ್ತಿ ಇವೇ ಮೊದಲಾದ ವಿಷಯಗಳಲ್ಲಿ ದಿನದಿನಕ್ಕೆ ಅವನತಿಯನ್ನು ಹೊಂದುತ್ತಿರುವದನ್ನು ನೋಡುತ್ತೇವೆ.

ದಾರಿದ್ರ್ಯ-ದೈನ್ಯಗಳಿಂದ ಯಾವ ಜನಾಂಗವೂ ನಾಶಹೊಂದುವದಿಲ್ಲ. ವಿಲಾಸವೂ ಜನಾಂಗದ ಅವನತಿಯ ಮುಖ್ಯಕಾರಣವಲ್ಲ. ಜನಾಂಗದ ಶ್ರೇಷ್ಠವ್ಯಕ್ತಿಗಳು ಯಾವದರಿಂದ ನಾಶವಾಗುವದಿಲ್ಲವೊ ಅದು ಜನಾಂಗದ ಅವನತಿಯ ಕಾರಣವಾಗಲಾರದು. ಜ್ಞಾನದಲ್ಲಿಯೂ, ಶರೀರಬಲದಲ್ಲಿಯೂ ಶ್ರೇಷ್ಠವಾದ ವ್ಯಕ್ತಿಗಳ ನಾಶವೇ ಜನಾಂಗದ ಅವನತಿಗಾಗಲಿ, ನಾಶಕ್ಕಾಗಲಿ ಮುಖ್ಯಕಾರಣವಾಗಿರುತ್ತದೆಂಬದು ಇತಿಹಾಸದಲ್ಲಿ ಸಿದ್ಧವಾಗಿರುತ್ತದೆ.

ದೇಶದ ಮೇಲೆಯಲ್ಲಿ ಯುದ್ಧವು ಆರಂಭವಾದರೆ ಸ್ವದೇಶಪ್ರೇಮವುಳ್ಳ ವೀರರು ಎಂದೂ ಮನೆಯ ಮೂಲೆಯಲ್ಲಿ ಕುಳಿತುಕೊಳ್ಳುವದಿಲ್ಲ.

ಯುದ್ಧದ ಸುದ್ದಿಯನ್ನು ಕೇಳಿದೊಡನೆ ಅವರ ಹೃದಯವು ಸ್ಫುರಣಗೊಳ್ಳುವದು. ಅವರು ಯುದ್ಧದಲ್ಲಿ ಪ್ರಾಣತ್ಯಾಗವಾಡಲು ಅನುಮಾನಪಡುವದಿಲ್ಲ. ದುರ್ಬಲರೂ ಅಂಜುಗುಳಿಗಳೂ ಆದವರು ಮಾತ್ರ ಮನೆಯಲ್ಲಿ ಉಳಿಯುವರು. ಭಾವಿ ಪ್ರಜೆಯೆನಿಸುವ ಇವರ ಸಂತತಿಯೂ ಅವರಂತೆಯೆ ಆಗುವದು.

ಯಾವದೊಂದು ಜಾತಿಯ ಪಕ್ಷಿಗಳ ಗುಂಪಿನಲ್ಲಿ ಉತ್ತಮವಾದ ಪಕ್ಷಿಗಳನ್ನಾರಿಸಿ ಅವನ್ನು ಇಲ್ಲದಂತೆ ಮಾಡಿದರೆ ಉಳಿದ ಕ್ಷೀಣವೂ ದುರ್ಬಲವೂ ಆದ ಪಕ್ಷಿಗಳ ಸಂತಾನವು ಅವುಗಳಂತೆಯೇ ಆಗುವದು. ಈ ನಿಯಮವು ಮನುಷ್ಯಜಾತಿಗೂ ಅನ್ವಯಿಸುವದು. ಯುದ್ಧಕ್ಕೆ ಹೋಗದೆ ಮನೆಯಲ್ಲಿ ಉಳಿದ ಅಂಜುಗುಳಿಗಳೂ ದುರ್ಬಲರೂ ಆದವರು ಮುಂದಿನ ವಂಶಕ್ಕೆ ಜನಕರಾಗಿ, ಜನಾಂಗದ ಅವನತಿಗೆ ಕಾರಣವಾಗುವರು.

ಜನಾಂಗದ ಅವನತಿಯ ಮುಖ್ಯಕಾರಣವು ಯಾವದು? ದೇಶದ ಜನರು ದೇಶಾಂತರಕ್ಕೆ ಹೋಗಿ ಅಲ್ಲಿ ಒಕ್ಕಲಾಗಿ ನಿಂತುಕೊಳ್ಳುವದು ಒಂದು ಕಾರಣವು. ಉತ್ಸಾಹಿಗಳೂ, ಸಾಹಸಿಗಳೂ, ಮಹತ್ವಾಕಾಂಕ್ಷಿಗಳೂ ಆದವರು ಪರದೇಶಕ್ಕೆ ಹೋಗಿ ಅಲ್ಲಿ ಸುಖಸಂಪತ್ತಿಯನ್ನುಂಟು ಮಾಡಿಕೊಳ್ಳುವರು. ಅವರು ದೇಶದ ಕೃಷಿ ಮೊದಲಾದ ಉದ್ಯೋಗಗಳನ್ನು ಉಳಿದ ದುರ್ಬಲ ಜನರಿಗೆ ಒಪ್ಪಿಸಿ, ಪರದೇಶಕ್ಕೆ ಹೋಗುವದರಿಂದ ಆ ಉದ್ಯೋಗಗಳು ದಿನದಿನಕ್ಕೆ ಕ್ಷೀಣಾವಸ್ಥೆಗೆ ಬರುವವು. ಅವರ ಈ ಪ್ರಕಾರದ ಸ್ವದೇಶತ್ಯಾಗದಿಂದ ಸಮಗ್ರ ಜಗತ್ತಿನ ಸಂಬಂಧವಾಗಿ ಯಾವ ಹಾನಿಯೂ ಒದಗುವದಿಲ್ಲ. ಒಂದು ದೇಶದ ಜನರು ಇನ್ನೊಂದು ದೇಶದಲ್ಲಿ ನಿಂತು ಅಲ್ಲಿಯ ಸಂಪತ್ತನ್ನು ಬೆಳೆಸುವರು. ಭೂಮಿಯ ಯಾವದೊಂದು ಭಾಗದಲ್ಲಿದ್ದುಕೊಂಡು ಅವರು ಉದ್ಯೋಗವನ್ನು ಮಾಡುವರು. ಆದರೆ ಯುದ್ಧವು ಒಂದು ಭಾಗದ ಜನರನ್ನು ಇನ್ನೊಂದು ಭಾಗಕ್ಕೆ ಒಯ್ಯುವದಿಲ್ಲ. ಅವರನ್ನು ಪರಲೋಕಕ್ಕೆ ಒಯ್ಯುವದು. ಯುದ್ಧದ ಈ ಹಾನಿಯು ಒಂದು ಜನಾಂಗದ ಹಾನಿಯೆಂದು ಹೇಳಲಾಗುವದಿಲ್ಲ. ಸಮಗ್ರ ಜಗತ್ತಿನ ಹಾನಿಯೇ ಇರುತ್ತದೆ.

ಒಂದಾನೊಂದು ಕಾಲದಲ್ಲಿ ಗ್ರೀಕಜನಾಂಗವು ಪೃಥ್ವಿಯಲ್ಲಿ ಅತ್ಯಂತ ಪ್ರತಾಪವುಳ್ಳದ್ದೆಂದು ಪೆಸರಾಗಿತ್ತು. ಆದರೆ ಅಂತಸ್ಥ ಯುದ್ಧಗಳಿಂದ ದೇಶ

ದ ಶ್ರೇಷ್ಠವ್ಯಕ್ತಿಗಳು ನಷ್ಟವಾಗಿ ಹೋದದ್ದರಿಂದ ಇದು ಪರೆಗೆ ಅದಕ್ಕೆ ತನ್ನ ಪೂರ್ವದ ಗೌರವವನ್ನು ಹೊಂದುವದಕ್ಕೆ ಆಗಿಲ್ಲ. ಈಗೀಗ ಗ್ರೀಕ ಜನಾಂಗದ ಉತ್ಕರ್ಷಕ್ಕೆ ಆರಂಭವಾಗಿದೆ. ರೋಮಕ ಜನಾಂಗದ್ದಾದರೂ ಇದೇ ಹಾಡು. ರೋಮದ ಸುವ್ಯವಸ್ಥಿತ ಜನಾಂಗವು ಎಂದಾದರೂ ಅವನತಿಯನ್ನು ಹೊಂದಬಹುದೆಂದು ಆ ಕಾಲದಲ್ಲಿ ತೋರಬಹುದಾಗಿತ್ತೇ? ರೋಮದ ಅವನತಿಗೂ ಯುದ್ಧವೇ ಕಾರಣವಿರುತ್ತದೆ. ರೋಮದಲ್ಲಿ ಯುದ್ಧಗಳು ಮುಗಿದ ಬಳಿಕ ದೇಶದಲ್ಲಿ ಒಕ್ಕಲಿಗರ ಸಂಖ್ಯೆಯು ಬಹಳ ಕಡಿಮೆಯಾಗಿ ಒಕ್ಕಲತನವೇ ನಡೆಯದಂತಾಗಿತ್ತು. ಯುದ್ಧಕ್ಕೆ ಹೋಗದೆ ಉಳಿದಂಥ ಹೇಡಿಗಳ ಸಂತಾನವೇ ಅಭಿವೃದ್ಧವಾಗಿ ಅದೇ ಮುಂದಿನ ಜನಾಂಗವಾಯಿತು. ಆ ದೇಶದಲ್ಲಿ ಒಬ್ಬ ಅರಸನು ಪ್ರಜೆಗಳ ಸಂಖ್ಯೆಯು ಅತ್ಯಲ್ಪವಾಗಿರುವದನ್ನು ಕಂಡು ಪ್ರಜಾವೃದ್ಧಿಗಾಗಿ ಜನರ ಲಗ್ನಕ್ಕೆ ಸರಕಾರದಿಂದ ಹಣವನ್ನು ಕೊಡುತ್ತಿದ್ದನಂತೆ.

ಈ ಮೇರೆಗೆ ಗ್ರೀಕ, ರೋಮಕ, ಮಿಸೆರ, ಅರಬ, ತುರ್ಕ ಮೊದಲಾದ ಜನಾಂಗಗಳು ಬಂದೊಂದು ಕಾಲದಲ್ಲಿ ಯುದ್ಧ ಮೂಲಕವಾಗಿಯೇ ಅವನತಿಯನ್ನು ಹೊಂದಿರುತ್ತವೆ. ಯಾಕೆಂದರೆ, ನಿಜವಾಗಿ ಪ್ರತಾಪಶಾಲಿಗಳಾದ ತರುಣರು ಯುದ್ಧದಿಂದ ಅಕಾಲದಲ್ಲಿ ಮೃತ್ಯುಮುಖದಲ್ಲಿ ಬೀಳುವದರಿಂದ ಉಳಿದಂಥ ಅಯೋಗ್ಯ ಜನರ ವಂಶವು ಬೆಳೆದು ಮುಂದೆ ಆ ಸಂತಾನವೇ ಆ ದೇಶದ ಜನಾಂಗವಾಗುವದರಿಂದ ಕ್ರಮವಾಗಿ ಆ ದೇಶವು ಅವನತ ಸ್ಥಿತಿಯನ್ನು ಹೊಂದುವದು.

ಜಪಾನ ದೇಶವು ಈಚೆಗೆ ಸ್ವಲ್ಪ ದಿವಸಗಳಲ್ಲಿ ಅತ್ಯಂತ ಪ್ರತಾಪಯುಕ್ತವಾದದ್ದೆಂದು ಪ್ರಸಿದ್ಧಿಯನ್ನು ಪಡೆದಿದೆ. ಇದರ ಕಾರಣವೇನೆಂದರೆ ಜಪಾನ ದೇಶವು ೨೦೦ ವರ್ಷಗಳ ವರೆಗೆ ಶಾಂತಿಯನ್ನು ಅನುಭವಿಸಿರುವದು. ಯಾವ ದೇಶದೊಡನೆಯೂ ಯುದ್ಧಮಾಡಲಿಲ್ಲ. ದೇಶವು ಸಮಾಧಾನ ಸ್ಥಿತಿಯಲ್ಲಿರುವಾಗ ಶ್ರೇಷ್ಠವ್ಯಕ್ತಿಗಳೇ ಹಬ್ಬಾಗಿ ಅಭಿವೃದ್ಧಿಯನ್ನು ಹೊಂದುವವು. ಜೀವನಸಂಗ್ರಾಮದಲ್ಲಿ ದುರ್ಬಲರೂ ಸೋಮಾರಿಗಳೂ ಬೆಳವಣಿಗೆಯನ್ನು ಹೊಂದಲಾರರು. ಅವರ ವಂಶವಿಸ್ತಾರವಾಗಲಾರದು. ಆದ್ದರಿಂದೇ ಜಪಾನವು ಇನ್ನೂರು ವರ್ಷಗಳ ವರೆಗೆ ಶಾಂತಿಯನ್ನು ಅನುಭವಿಸಿ ಅಪಾರವಾದ ರಸಿಯ ಸಾಮ್ರಾಜ್ಯವೊಡನೆಯೂ ಯುದ್ಧಮಾಡಿ ಗೆಲ್ಲುವಷ್ಟು ಪ್ರತಾಪವುಳ್ಳದ್ದಾಯಿತು.

ಯುದ್ಧವು ಮುಗಿದ ಬಳಿಕ ಯುದ್ಧಮಾಡಿದ ಎರಡೂ ದೇಶಗಳಿಗೆ ತಮಗೊದಗಿದ ಹಾನಿಯನ್ನು ತುಂಬಿಕೊಳ್ಳುವದಕ್ಕೆ ನೂರಾರು ವರ್ಷಗಳು ಬೇಕಾಗುವವು. ಹಲವರು ಯುದ್ಧವು ಅವಶ್ಯವೆಂದು ಹೇಳುತ್ತಾರೆ. ಆದರೆ ಯುದ್ಧವು ಅವಶ್ಯವಾದದ್ದಲ್ಲ. ಒಂದು ದೇಶದವರು ಇನ್ನೊಂದು ದೇಶದವರ ಹಕ್ಕು ಸ್ವಾತಂತ್ರ್ಯಗಳಿಗೆ ಬಾಧೆಯನ್ನು ತರದಿದ್ದರೆ ಒಬ್ಬರು ಇನ್ನೊಬ್ಬರ ಧರ್ಮಕ್ಕೆ ಕೇಡುಬಗೆಯದಿದ್ದರೆ, ಒಟ್ಟಿಗೆ ಎಲ್ಲ ದೇಶದವರು ಪರಸ್ಪರ ಸ್ನೇಹಭಾವದಿಂದ ಇದ್ದರೆ ಯುದ್ಧದ ಪ್ರಸಂಗವೇ ಬರುವದಿಲ್ಲ. ಆದರೆ ಸಮಗ್ರ ಪೃಥ್ವಿಯಲ್ಲಿ ಸೋದರಭಾವವು ನೆಲೆಗೊಳ್ಳುವವರೆಗೆ ಯುದ್ಧವಾಗದಿರುವದು ಅಸಂಭವನೀಯವಾದದ್ದು.

ಮ. ಪ್ರ. ಪೂಜಾರ.

ಅಲಂಕಾರದರ್ಪಣ.

(ಕಳೆದ ತಿಂಗಳ ಸಂಚಿಕೆಯ ೨೯ನೆಯ ಪುಟದಿಂದ ಮುಂದೆ ಸಾಗಿದ್ದು.)

ಇಲ್ಲಿ ಬಳಜಿಹ್ವೆಯಲ್ಲಿ, ಗಂಧಗುಣವನ್ನಿರಿಸುವ ಕಾರ್ಯಸಿದ್ಧಿಗೆ 'ತಾನು ಅಜನಾಗಿರಬೇಕೆಂದು ಊಹಿಸಲ್ಪಟ್ಟದೆ.

---

೬೫. ವಿಥ್ಯಾಧ್ಯವಸಿತ್ಯಲಂಕಾರವು. ಲಕ್ಷಣ:— ಯಾವದೊಂದರ ಅಸಂಭಾವಿತತ್ವವನ್ನು ಸಿದ್ಧಿಸುವದಕ್ಕಾಗಿ ಬೇರೆ ಅಸಂಭಾವಿತವಾದ ಅರ್ಥಗಳನ್ನು ಕಲ್ಪಿಸಿದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ ॥ ಖಸ್ರಜವ ಧರಿಸಿದಾತಗ ।
ಜಸ್ರಂ ಮೆಚ್ಚುವಳು ವಾರನಾರಿಯು ನಿಜದಿಂ ॥

ಇಲ್ಲಿ ಅಸಂಭಾವಿತವಾದ ವೇಶ್ಯಾವಶೀಕರಣಕ್ಕೆ 'ಖಸ್ರಜವ ಧರಿಸಬೇಕು, ಎಂಬ ಅಸಂಭಾವಿತವಾದ ಅರ್ಥಾಂತರವನ್ನು ಹೇಳಿದ್ದಾನೆ. (ಖ + ಸ್ರಜ = ಆಕಾಶವೆಂಬ ಪುಷ್ಪಮಾಲೆ; ಅಜಸ್ರಂ = ಯಾವಾಗಲೂ, ವಿಥ್ಯಾ = ಸುಳ್ಳು). ಮತ್ತೆ ಉದಾ:—

ಪರಿವರ್ತಿನಿ॥ ಕುರುಡರು ನೋಳ್ಪರು ಕಿವುಡರು ಕೇಳ್ವರು।
ಸ್ವರಮಷ್ಟಪುವನು ಗೈಯ್ಯುತ ವಂಧ್ಯೋ।
ದರದಿಂ ಜನಿಸಿದ ಮೂಕರ ನಿಕರವು ಕೂರ್ಮನ
ಕಾಮಿನಿಯ ॥

ಕ್ಷೀರೋದಧಿ ತಟದೊಳು ಗಾಯನದಿಂ।
ಕೋರುವರೀತನ ದುಷ್ಕೀರ್ತಿಗಳಂ।
ಮಾರಿ ಪರಾರ್ಧದ ಸಂಖ್ಯೆಯ ಮಿತಿಯನು ನೆರೆದಿರೆ
ವೈಭವದಿಂ ॥

ಮೊದಲಿನ ಉದಾಹರಣವು ನಿದರ್ಶನಾಗರ್ಭವಾದದ್ದು. ಅದರಲ್ಲಿ ಇದು ಕುದ್ಧ ಮಿಥ್ಯಾತ್ವವುಳ್ಳದ್ದು. ಇಲ್ಲಿ 'ಕುರುಡರು ನೋಳ್ಪರು ..... ಮೊದಲಾದ ಮಿಥ್ಯಾರ್ಥಾಂತರಗಳಿಂದ ರಾಜನ ದುಷ್ಕೀರ್ತಿಗಳ ಮಿಥ್ಯಾತ್ವವು ಸಿದ್ಧವಾಗುವದು. ಈ ಅಲಂಕಾರದಲ್ಲಿ ಕೆಲವೊಂದರ ಮಿಥ್ಯಾತ್ವವು ಬೇರೆ ಮಿಥ್ಯಾರ್ಥಗಳಿಂದ ಸಿದ್ಧಿಸುವದು. ಕಾರಣ ಇದು ಅಸಂಬಂಧ ಸಂಬಂಧ ರೂಪವಾದ ಅತಿಶಯೋಕ್ತಿಗಿಂತ ಬೇರೆತರದ್ದಾಗಿದೆ.

---

೬೬. ಲಲಿತಾಲಂಕಾರವು. ಲಕ್ಷಣ:— ಪ್ರಸ್ತುತವಾದ ವಿಷಯದಲ್ಲಿ ವರ್ಣಿಸತಕ್ಕ ವೃತ್ತಾಂತವನ್ನು ಬಿಟ್ಟು ಅಲ್ಲಿಯೇ ಅದರ ಪ್ರತಿಬಿಂಬರೂಪವಾದ ಬೇರೊಂದು ಅಪ್ರಸ್ತುತವಾದ ವೃತ್ತಾಂತದ ವರ್ಣನೆಯನ್ನು ಮಾಡಿದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ ॥ ಮಾರಲು ಬೇಳೆಯು ತಿರುಗುತ।
ಜೇರೆಯು ರಮಿಸುವನ ಕರೆದು ತಾರೆಲೆ! ಬೇಗ ॥
ನೀರೆಲ್ಲ ಪೊಣಗಲೀಕೆಯು।
ಭಾರಿಯ ಸೇತುವೆಯ ಕಟ್ಟಲೆಳಸುವಳಾಗ ॥

ಇಲ್ಲಿ ಕೆಲವೊಬ್ಬರ ದಾಕ್ಷಿಣ್ಯದಿಂದ ನಾಯಿಕೆಯ ಸವಾಗಮಕ್ಕೆ ಬಂದು ಆ ವೇಳೆಯಲ್ಲಿ ಅವಳು ಇಲ್ಲದಿರಲು ತಿರುಗಿ ಹೋಗಿ ಜೇರೊಬ್ಬಳಲ್ಲಿ ಆಸಕ್ತನಾದ ನಾಯಕನನ್ನು ಕರತಾರೆಂದು ನುಡಿದ ನಾಯಿಕೆಯ ವ್ಯಾವಹಾರಕ್ಕೆ ಪ್ರತಿಬಿಂಬ ಭೂತವಾದ ಗತಜಲಸೇತುಬಂಧವರ್ಣನವು ಅವಳ ಸಖಿಯಿಂದ ಉತ್ತರಾರ್ಧದಲ್ಲಿ ಉಕ್ತವಾಗಿದೆ. ಇದು "ನೀರು ಹೋದು

ಮೇಲೆ ಸೇತುವೆಯು ನಿರುಪಯೋಗವಾಗುವಂತೆ ಈಗ ನನ್ನನ್ನು ಕಳಿಸುವ ಹಂಬಿಕೆಯು ನಿರರ್ಥಕವಾದದ್ದು. ಇವೇ ಮೊದಲಾದ ಅರ್ಥಗಳಿಂದ ಗರ್ಭಿತವಾಗಿದೆ. ಮತ್ತೆ ಉದಾ:—

ಕಂದ ॥ ಎತ್ತಣದಲ್ಪವಿಷಯಮತಿ।
ಎತ್ತಣದಾಖ್ಯಾತಿಗೊಂಡ ಸೂರ್ಯನವಂಶಂ ॥
ಉತ್ತರಿಸಲಾ ಸಮುದ್ರವ।
ನೊತ್ತರದಿಂ ಡೋಣಿಯಿಂದೆ ದಾಟಲಿಳಸುವೆಂ ॥

ಇದು ರಘುವಂಶ ವರ್ಣನೆಯನ್ನು ಮಾಡಲಿಚ್ಛಿಸುವ ಕಾಳಿದಾಸನ ವಾಕ್ಯವು. ಇಲ್ಲಿ 'ಅಲ್ಪ ವಿಷಯವೆಳ್ಳ ಮತಿಯಿಂದ ಸೂರ್ಯವಂಶವನ್ನು ವರ್ಣಿಸಲಿಚ್ಛಿಸುವೆನು, ಎಂದು ಪ್ರಸ್ತುತ ವೃತ್ತಾಂತವನ್ನು ಉಲ್ಲೇಖಿಸದೆ ಅದಕ್ಕೆ ಪ್ರತಿಬಿಂಬ ಭೂತವಾದ 'ಡೋಣಿಯಿಂದೆ ಸಮುದ್ರವನ್ನು ದಾಟಲಿಚ್ಛಿಸುವೆನು, ಎಂದು ಅಪ್ರಸ್ತುತ ವೃತ್ತಾಂತದ ವರ್ಣನೆಯನ್ನು ಮಾಡಿದ್ದರಲ್ಲಿಯೂ, ಮೊದಲಿನ ವಿಷಮಾಲಂಕಾರದ ಉಲ್ಲೇಖದಲ್ಲಿಯೂ ಕೇವಲ ತಾತ್ಪರ್ಯವನ್ನು ಮಾತ್ರ ತಿಳಿಯುತಕ್ಕದ್ದಾಗಿದೆ. ಕಾರಣ ನಿದರ್ಶನಾಭ್ರಾಂತಿಯನ್ನು ಬಿಟ್ಟು ಲಲಿತಾಲಂಕಾರವೆಂದು ಊಹಿಸತಕ್ಕದ್ದು.
ಮತ್ತೆ ಉದಾ:—

ಭಾಮಿನಿ ॥ ಸುಡುಬಿಡೇನಿದರೊಳಗೆ ಮಣ್ಣಿನ।
ಹುಡಿಯದಿರುವದು ಕೈಗಳೆಡಸು।
ಬಿಡಿಸಿ ಕೂಡಿಸಿ ತೋರಿಸುವ ಬಹು ಜನದ ರೂಢಿಯಲಿ॥
ನಡೆದು ಬರೆ ಚಂದ್ರಮಸು ನಭದಲಿ।
ಒಡೆದು ತೋರುತ ತಮವ ಬರುತಿರೆ।
ಮಡಚಿಕೊಳ್ಳುವದಿಲ್ಲವೇ? ಕುಮುದವದು ದಳಗಳನು ॥
(ಮಂಗಲಾಚರಣ ನೋಡು).

ಇಲ್ಲಿ 'ಸುಮ್ಮನೇ ಕೈಗಳನ್ನು ಜೋಡಿಸುವದರಲ್ಲಿ ಏನೂ ಅರ್ಥವಿಲ್ಲ, ಎಂಬ ವಾಕ್ಯಾರ್ಥವನ್ನು ಉತ್ತರಾರ್ಧದಲ್ಲಿ ಸಮರ್ಥಿಸತಕ್ಕದ್ದನ್ನು ಬಿಟ್ಟು ಇದರ ಪ್ರತಿಬಿಂಬ ಭೂತವಾದ ಕುಮುದಕಾರ್ಯದ ವರ್ಣನೆಯು ಉಲ್ಲೇಖಿಸಲ್ಪಟ್ಟಿದೆ. ಮತ್ತೆ ಉದಾ

ಭಾವಿನಿ ॥ ಕವಿತೆಗಳ ರಚಿಸುವೆನು ಜಗದನು ।
ಭವಿಕ ಕವಿಮಾರ್ಗವನು ಬಿಡದಲೆ ।
ಸವಿದ ಕಾವ್ಯದ ರಸದೆ ಬೆರಸುತಲೆನ್ನ ಸುಮತಿಯನು ॥
ಆವ ಕವಿ ನೆರೆ ಚೋರನೆಲ್ಲವ ।
ದಾವ ಬಣಜಿಗ ಕಳ್ಳನೆಲ್ಲವ ।
ಯಾವ ಬಿಡುವನು ದೊರೆತ ಧನವನು ಧರಣಿಯಲಿ ನಿಜದೆ॥
(ಮಂಗಲಾಚರಣನೋಡು).

ಇಲ್ಲಿ "ಸವಿದ ಕಾವ್ಯದ ರಸದೆ ಎನ್ನಸುಮತಿಯ ಬೆರಸಿ ರಚಿಸುವೆನು" ಎಂಬ ವಾಕ್ಯಾರ್ಥವನ್ನು ಉತ್ತರಾರ್ಧದಲ್ಲಿ ಸಮರ್ಥಿಸತಕ್ಕದ್ದನ್ನು ಬಿಟ್ಟು ಉತ್ತರಾರ್ಧದಲ್ಲಿ ಇದರ ಪ್ರತಿಬಿಂಬ ಭೂತವಾದ "ಕವಿ-ಬಣಜಿಗರ ವೃತ್ತಾಂತವೂ ಒಂದು ಅರ್ಥಾಂತರವೂ ಉಲ್ಲೇಖಿಸಲ್ಪಟ್ಟಿದೆ. ಮತ್ತೆ ಉದಾ:—

ಭಾವಿನಿ ॥ ವಿಂರಿದೆನು ತನ್ಮಾರ್ಗವನು ಹೊಸ ।
ದಾರಿಯನು ಮಾಡಿದೆನದೀಗಲು ।
ದೂರಿದೆನು ಪೂರ್ವಿಕರಮತವನ್ನೆಂದು ತಿಳಿಯದಿರಿ ॥
ಸೇರಲಾ ಕಾರಿಣ್ಯವಜ್ರದೆ ।
ದಾರಿಯದು ಪೂರ್ವಿಕರ ದಾರವ ।
ನಾರಿಯರ ನೇತ್ರಗಳಿಗಂಜನವಿಡಲು ಕೋಭಿಪುದು ॥
(ಮಂಗಲಾಚರಣ ನೋಡು).

ಇಲ್ಲಿ ಪ್ರಸ್ತುತವಾದ ಪೂರ್ವಾರ್ಧದ ಅರ್ಥಕ್ಕೆ ಪ್ರತಿಬಿಂಬಭೂತ ಗಳಾದ ವಜ್ರಾದಿಗಳ ವೃತ್ತಾಂತವು ಉತ್ತರಾರ್ಧದಲ್ಲಿ ಉಕ್ತವಾಗಿದೆ. ಮತ್ತೆ ಉದಾ:—

ಭಾವಿನಿ ॥ ತಿದ್ದಲಿದರೊಳು ಮೆರೆದು ನೋಡದೆ ।
ಬಿದ್ದಬದ್ಧಂಗಳನು ಶೋಧಿಸಿ ।
ಬುದ್ಧಿವಂತರು ತಮ್ಮ ಮನಬಂದಂತೆ ಸರಿಯಾಗಿ
ಗದ್ದರಿಸಿ ನಗೆಮಾಡುತಿರುವದು ।
ಕುದ್ದಮೂರ್ಖರಿಗುಚಿತವಲ್ಲದೆ ।

ಬಿದ್ದವನಿಗುಪಚಾರ ಮಾಳ್ಪುದು ಸಜ್ಜನರಿಗುಚಿತಂ ॥
(ಮಂಗಲಾಚರಣ ನೋಡು).

ಇಲ್ಲಿ ಪ್ರಸ್ತುತವಾದ ಪೂರ್ವಾರ್ಧದ ಅರ್ಥಕ್ಕೆ ಪ್ರತಿಬಿಂಬ ರೂಪವಾದ ಅಪ್ರಸ್ತುತವಾದ ಮೂರ್ಖ-ಸಜ್ಜನರ ನಡಾವಳಿಗಳ ವರ್ಣನೆಯು ಉತ್ತರಾರ್ಧದಲ್ಲಿ ಉಕ್ತವಾಗಿದೆ. ಮತ್ತೆ ಉದಾ:—

ಪರಿವರ್ಧಿನಿ॥ ಆವದದೀಗ ವಸಂತನು ಬಿಟ್ಟರು।
ಯಾವನ ದೆಸೆಯನು ಹೊಂದಿತು ದೇಶವು।
ಪಾಪನವಾಗಿಹ ನಿನ್ನಯ ಮುಖದಿಂ ಬಾರದೆ ಕೇಳಲ್ಕೆ॥

ಇಲ್ಲಿ 'ನೀನು ಯಾವ ದೇಶವನ್ನು ಬಿಟ್ಟೆ?' ಎಂಬುದು ಪ್ರಸ್ತುತಾರ್ಥವನ್ನು ಉಲ್ಲೇಖಿಸದೆ ಇದರ ಪ್ರತಿಬಿಂಬ ರೂಪವಾದ 'ವಸಂತನು ಬಿಟ್ಟ ವನದ ದೆಸೆಯನ್ನು ಹೊಂದಿತು', ಎಂಬ ಅಪ್ರಸ್ತುತಾರ್ಥವು ಉಲ್ಲೇಖಿಸಲ್ಪಟ್ಟಿದೆ, ಮತ್ತೆ ಉದಾ:—

ಭೂವಿನಿ॥ ಬಿತ್ತರದ ಸಾಹಿತ್ಯಗ್ರಂಥದೊ।
ಳೊತ್ತರದಿ ಲಕ್ಷ್ಯಗಳ ಜೋಡಿಪೆ।
ಮತ್ತೆ ಪರಗ್ರಂಥೋಕ್ತಿಗಳನರಸುತ್ತ ಕೂಡ್ರದಲೆ॥
ಸುತ್ತು ಮೇರೆಯದಿರದ ಶರಧಿಯೊ।
ಳೆತ್ತತ್ತ ನೋಡಿದರು ಕಾಣದೆ।
ಮುತ್ತುಗಳನಂಬಿಗನದರಸುವ ತೆರದೆ ಮುಣು ಮುಣುಗಿ॥
(ಮಂಗಲಾಚರಣ ನೋಡು)

ಇಲ್ಲಿ ಪ್ರಸ್ತುತವಾದ ಪೂರ್ವಾರ್ಧದ ಅರ್ಥಕ್ಕೆ ಪ್ರತಿಬಿಂಬ ಭೂತವಾದ ಅಪ್ರಸ್ತುತವಾದ ಅಂಬಿಗನ ವೃತ್ತಾಂತವು ಉತ್ತರಾರ್ಧದಲ್ಲಿ ವರ್ಣಿತವಾಗಿದೆ. ಈ ಅಲಂಕಾರದಲ್ಲಿ ತೋರುವ ಅಪ್ರಸ್ತುತ ಪ್ರಶಂಸಾ-ಸಮಾಸೋಕ್ತಿ-ನಿದರ್ಶನಾ-ರೂಪಕ-ಪರ್ಯಾಯೋಕ್ತ ಮೊದಲಾದ ಅಲಂಕಾರಗಳ ಭ್ರಾಂತಿ ನಿವಾರಣೆಯನ್ನು ಹೇಳುವದು ಟೀಕಾಕಾರರ ಕರ್ತವ್ಯವೆಂದು ತಿಳಿದು ಲಕ್ಷಣಸಮನ್ವಯವನ್ನು ಸಂಕ್ಷೇಪಿಸಿರುವೆನು.

---

೬೭. ಪ್ರಹರ್ಷಣಾಲಂಕಾರವು. ಲಕ್ಷಣ:— ಇಲ್ಲಿ ಮೊದಲು ಉತ್ಕಂಠೆಯಿಂದತೇನೆಂಬುದನ್ನು ಹೇಳಬೇಕಾಗಿದೆ:—

॥ ಕಂದ ॥ ಎಲ್ಲಿಪ್ಪುದೊ ಸರ್ವೇಂದ್ರಿಯ।
ದಲ್ಲಿಯು ಸುಖರಸದ ಸ್ವಾದವದು ನಿಗಲೆಂಬ॥
ಎಲ್ಲರ ಮನಸಿನ ಬಯಕೆಗೆ।
ಬಲ್ಲದು ಪೇಳುವರು ಜಗದೊಳುತ್ಕಂಠತೆಯಂ॥

ಅರ್ಥ.—ಎಲ್ಲಾ ಇಂದ್ರಿಯಗಳ ಸೌಖ್ಯರಸದ ಸ್ವಾದವು ಎಲ್ಲಿರುವದೋ ಅದು ದೊರಕಲೆಂಬ ಇಚ್ಛೆಯುಳ್ಳ ತನ್ನ ಮನೋರಥಕ್ಕೆ ಉತ್ಕಂಠತೆಯೆಂಬ ಹೆಸರು. ಇಂಥ ಉತ್ಕಂಠಿತಾರ್ಥದ ಸಿದ್ಧಿಯು ಯತ್ನವಿಲ್ಲದೆ ಆಯಿತೆಂದು ವರ್ಣಿಸಿದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ ॥ ದೂತಿಯು ಬರಲಿಲ್ಲನುತಿರೆ।
ಪ್ರೀತನೆ, ಬಾರೆನ್ನುತವಳೆ, ಕರವನು ಪಿಡಿದಳ್॥

ಇಲ್ಲಿ ದೂತಿಯ ಆಗಮನವನ್ನು ಅಪೇಕ್ಷಿಸಿ ಚಿಂತಿಸುತ್ತಿರುವವನಿಗೆ ಯತ್ನವಿಲ್ಲದೆ ಅವಳ ಆಗಮನವು ಪ್ರಾಪ್ತಿಸಿದ್ದು ಸ್ಪಷ್ಟವೇ ಅದೆ. ಮತ್ತೆ ಉದಾ: —

ಭೋಗ ॥ ಪೋಗಲಾರೆ ನಾನದೊಬ್ಬ।
ನೀಗ ಮನೆಗೆ ರಾಧೆನೀನು।
ಬೇಗ ಕಳಿಸಬಾರೆ? ಎಂದು ಕೇಳುವನಿತರೊಳ್॥
ಮೇಗೆ ಮುಗಿಲು ಕವಿದುಬಂದು।
ದೀಗ ರಾತ್ರಿ; ನೆಲವು ಬಹಳ।
ವಾಗಿ ಕತ್ತಲಾಗಿದೀ ತಮಾಲ ತರುಗಳಿಂ॥
ಪೋಗಲಾರನಂಜುಬುರುಕ।
ನೀಗಳಿವನ ರಾಧೆ ನೀನೆ।
ಹೋಗಿ ಕಳಿಸಿಬಾರೆ ಎಂದು ನಂದ ನುಡಿದನು॥

ಇಲ್ಲಿ ರಾಧಾಕೃಷ್ಣರ ಉತ್ಕಂಠಿತಾರ್ಥವು ಯತ್ನವಿಲ್ಲದೆ ಸಿದ್ಧಿಗೆ ಹೋಯಿತೆಂದು ವರ್ಣಿತವಾಗಿದೆ.

೨. ಬಯಸಿದ್ದಕ್ಕಿಂತ ಹೆಚ್ಚಿನ ಅರ್ಥವು ಇಚ್ಛಾಮಾತ್ರದಿಂದಲೇ ದೊರಕಿತೆಂದು ವರ್ಣಿಸಿದಲ್ಲಿಯೂ ಇದೇ ಅಲಂಕಾರವಾಗುವದು. ಉದಾ:—

ಕಂದ॥ ದೀಪವ ಪ್ರಜ್ವಲಿಸೀಗಲು।
ಶಿವಳೆ, ಬೇಗೆನ್ನುತಿರಲು ರವಿಯುದಯಿಸಿದಂ॥

ಇಲ್ಲಿ 'ದೀಪದ ಪ್ರಕಾಶವನ್ನು ಬಯಸಿದವನಿಗೆ ಅದಕ್ಕೂ ಹೆಚ್ಚಿನ ಸೂರ್ಯನ ಪ್ರಕಾಶವು ಇಚ್ಛಾಮಾತ್ರದಿಂದ ದೊರಕಿತೆಂದು ಹೇಳಿದೆ. ಮತ್ತೆ ಉದಾ:—

ಭಾಮಿನಿ॥ ಕೋರಲಾ ಚಾತಕವು ಮೋಡದೆ।
ಮೂರುನಾಲ್ಕೇ ಹನಿಗಳನ್ನದು॥
ಬೀರುವದು ಜಗವೆಲ್ಲ ತುಂಬಿಡುವನಿತು ಹನಿಗಳನು॥
ಅರರೆ! ಏನಿದುದಾರತನವಿದು!।
ಎರೆಯಲೊಂದನದಿರಿಸದನಿತುವ।
ಪರರ ಕೈವಶಕಿಡುವರೈ ಘನವುಹಿಮುರೀ ಧರೆಯೊಳ್'॥

ಇಲ್ಲಿ 'ಮೂರು ನಾಲ್ಕೇ ಹನಿಗಳನ್ನು ಬಯಸಿದ ಚಾತಕಕ್ಕೆ ಅದಕ್ಕೂ ಹೆಚ್ಚಿನ ಅಥವಾ ಪ್ರಾಪ್ತವಾಯಿತೆಂದು, ಹೇಳಿದೆ. ಇಲ್ಲಿ ಅಪ್ರಸ್ತುತವಾದ ಮೇಘಚಾತಕಗಳ ವೃತ್ತಾಂತವು ಪ್ರಸ್ತುತವಾದ ದಾತೃ-ಯಾಚಕರ ವೃತ್ತಾಂತದಲ್ಲಿ ಪರ್ಯವಸಾನವಾಗುವದು. ಕಾರಣ ಚಾತಕಕ್ಕೆ ಹೆಚ್ಚಿನ ಜಲವು ಏನೂ ಉಪಯೋಗವಿಲ್ಲವೆಂದು ವಿರುದ್ಧಾರ್ಥವನ್ನು ಊಹಿಸಿಕೊಳ್ಳಬಾರದು.

೩. ಫಲೋಪಾಯಸಿದ್ಧಿಗಾಗಿ ಯತ್ನವನ್ನು ನಡಿಸಿದಾಗ್ಗೆ ಉಪಾಯಸಿದ್ಧಿಯನ್ನು ಅಪೇಕ್ಷಿಸದೆ ಅವನಿಗೆ ಸಾಕ್ಷಾತ್ ಫಲವೇ ಲಬ್ಧವಾಯಿತೆಂದು ವರ್ಣಿಸಿದಲ್ಲಿಯೂ ಈ ಅಲಂಕಾರವಾಗುವದು. ಉದಾ:—

ಕಂದ॥ ನಿಧ್ಯಂಜನೌಪಧಿಯು ಭೂ।
ಮಧ್ಯದೊಳಗಿಯುವನಿಗಾಗ ಸಿಕ್ಕಿತು ನಿಧಿಯೇ!॥

ಇಲ್ಲಿ 'ಫಲೋಪಾಯವಾದ ನಿಧ್ಯಂಜನದ ಸಿದ್ಧಿಯನ್ನು ಅಪೇಕ್ಷಿಸದೆ ಸಾಕ್ಷಾತ್ ನಿಧಿಯೇ ದೊರಕಿತೆಂದು, ಹೇಳಿದೆ. (ನಿಧಿ = ಹುಗಿದಿಟ್ಟ ದ್ರವ್ಯ ಸಂಚಯ; ಕಾಡಿಗೆಯಂತೆ ಯಾವ ಪದಾರ್ಥವನ್ನು ಕಣ್ಣಿಗೆ ಹಚ್ಚಿಕೊಂಡು ನೋಡುವವರಿಂದ ಭೂಮಿಯೊಳಗಿನ ಎಲ್ಲ ನಿಧಿಗಳು ಕಾಣಿಸುವವೊ ಅದು ನಿಧ್ಯಂಜನವೆನಿಸುವದು). ಮತ್ತೆ ಉದಾ:—

ಭಾಮಿನಿ॥ ಬೂಡದಲ್ಲಿ ಬಿದ್ದಿರುವ ಪೂಗಳ।
ನೋಡನೆ ಕೂಡಿಸಿಕೊಂಡಶೋಕದ।
ಗಿಡದ ಟೊಂಗೆಯೊಳಿದ್ದ ಪೂಗಳ ತೆಗೆಯಲಂಗನೆಯು॥

ಬುಡದ ಟೊಂಗೆಯ ಮೇಲೆ ಚರಣಗ ।
ಳಿಡಲು ಬುಡದಿಂ ತುದಿಯ ವರೆಗಾ ।
ಗಿಡವು ಕುಸುಮದೊಳಿಡಿದುದೈಯವಳಡಿಯ ಸೋಂಕಿನಲಿ॥

ಇಲ್ಲಿ ವೃಕ್ಷಾರೋಹಣವು ಪುಷ್ಪಗ್ರಹಣಕ್ಕೆ ಉಪಾಯವಾಗಿರುವೆದು. ಈ ಉಪಾಯಸಿದ್ಧಿಗಾಗಿ ಗಿಡದ ಮೇಲೆ ಕಾಲಿಟ್ಟವಳಿಗೆ ಅಲ್ಲಿಯೇ ಪುಷ್ಪಗಳು ದೊರಕಿದವೆಂದು ಹೇಳಿದೆ. (ತರುಣಿಯರ ಪಾದಾಹತಿಯಿಂದಲೇ ಅಶೋಕವು ಪುಷ್ಪಿತವಾಗುವದು.)

---

೬೮. ವಿಷಾದನಾಲಂಕಾರವು. ಲಕ್ಷಣ:— ಅಪೇಕ್ಷಿಸುತ್ತಿರುವ ವಿರುದ್ಧವಾದ ಅರ್ಥವು ಪ್ರಾಪ್ತವಾಯಿತೆಂದು ವರ್ಣಿಸಿದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ ॥ ಮುಂದಕ್ಕೆ ಬತ್ತಿಚಾಚೈ ।
ಕಂದನೆ, ಎಂದೆನ್ನುತಿರಲು ನಂದಿತು ದೀಪಂ ॥

ಇಲ್ಲಿ ಹೆಚ್ಚಿನ ಬೆಳಕನ್ನು ಅಪೇಕ್ಷಿಸುತ್ತಿರುವವನಿಗೆ ಆದಕ್ಕೆ ವಿರುದ್ಧವಾದ ಅರ್ಥವು (ಕತ್ತಲೆ) ಪ್ರಾಪ್ತವಾಯಿತೆಂದು ಹೇಳಿದೆ. ಮತ್ತೆ ಉದಾ:—

ಭಾಮಿನಿ ॥ ಇರುಳು ಪೋಗುವದಿನ್ನು ಬರುವದು ।
ಪರಮ ಪ್ರೀತಿಕಾಲವೀಗಲೆ ।
ಭರದೆ ಖಡ್ಗಕರನುದಿಸಿ ಬರುವನು ಗಿರಿಯ ಶಿಖರದಲಿ ॥
ಅರಳುವವು ಕಮಲಗಳು ತಮವಿ ।
ನ್ನಿರದೆಂದು ಭ್ರಮರಗಳು ಚಿಂತಿಸು ।
ತಿರಲು ಕಿತ್ತಿದುದಯ್ಯೋ! ನಲಿನಿಯನು ವಾರಣವು ॥

ಇಲ್ಲಿ ಭ್ರಮರಕ್ಕೆ ಅದರ ಇಚ್ಛೆಯ ವಿರುದ್ಧವಾದ ಅರ್ಥವು ಪ್ರಾಪ್ತಿಸಿದ್ದು ಸ್ಪಷ್ಟವೇ ಅದೆ. ಮತ್ತೆ ಉದಾ:—

ಭಾಮಿನಿ ॥ ಬಯ್ಯುವವ ಮನೆಗಿನ್ನು ಪೋಗುವ ।
ನಯ್ಯ, ಬರುವನಿನ್ನು ಬಹುರಸಿ ।
ಕಯ್ಯ, ನಮಗುಬ್ಬಯ್ಯನಹನೆಂದಿರಲು ಚಿಂತಿಸುತ ॥
ಮುಯ್ಯಕ್ಕೆ ಮುಯ್ಯವನು ಗೈಯ್ಯುವ ।
ಬಯ್ಯದಲೆ ಕುತ್ತಿಗೆಯ ಕೊಯ್ಯುವ ।
ಆಯ್ಯಯ್ಯೋ! ವಿಗುಣಯ್ಯನವನೇ ಬಂದನಸಿತರೊಳು ॥

ಇಲ್ಲಿಯಾದರೂ ಒಬ್ಬನಿಗೆ ಅವನ ಬಯಕೆಯ ವಿರುದ್ಧವಾದ ಅರ್ಥವು ಪ್ರಾಪ್ತವಾದದ್ದು ಸ್ಪಷ್ಟವೇ ಅದೆ. ಈ ಅಲಂಕಾರದಲ್ಲಿ ಇಚ್ಛಾನಾತ್ರದಿಂದಲೇ ವಿರುದ್ಧವಾದ ಅರ್ಥದ ಪ್ರಾಪ್ತಿಯಾಗುವದು. ಯತ್ನದ ಸಂಬಂಧವಿರುವದಿಲ್ಲ. ಕಾರಣ ಇದು ವಿಷಮಾಲಂಕಾರಕ್ಕಿಂತ ಬೇರೆ ತರದ್ದಾಗಿದೆ. ಇದು ದ್ವಿತೀಯ ಪ್ರಹರ್ಷಣಕ್ಕೆ ಪ್ರತಿದ್ವಂದ್ವವಾಗಿದೆ.

---

೬೯. ಉಲ್ಲಾಸಾಲಂಕಾರವು ಲಕ್ಷಣ:— ಒಂದರ ಗುಣದಿಂದ ಮತ್ತೊಂದಕ್ಕೆ ಗುಣತ್ವವು, ಇಲ್ಲವೆ ದೋಷದಿಂದ ದೋಷತ್ವವು ಇಲ್ಲವೆ ಗುಣದಿಂದ ದೋಷತ್ವವು, ಇಲ್ಲವೆ ದೋಷದಿಂದ ಗುಣತ್ವವು ಉಂಟಾಯಿತೆಂದು ವರ್ಣಿಸಿದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ ॥ ಶ್ರದ್ಧೆಯಲಿ ಗಂಗೆ ಕರೆವಳು।
ಪದ್ಧತಿಯದು ಬೀಳಲೆನ್ನೊಳಾ ವರ ಯತಿಯ ॥
ಶುದ್ಧಿಸಲಿ ನನ್ನನಾದರು।
ಸದ್ಧರ್ಮದ ಸತಿಯು ಸ್ನಾನವೆಂತೆ ಜವದಿಂ ॥

ಇಲ್ಲಿಯತಿ-ಪತಿವ್ರತೆಯರ ಮಹಿಮೆಯ ಗುಣದಿಂದ ಅವರ ಸ್ಪರ್ಶ-ಸ್ನಾನಗಳಿಂದ ಉಂಟಾಗುವ ಗಂಗೆಯ ಪಾವನತ್ವಗುಣವು ವರ್ಣಿಸಲ್ಪಟ್ಟದೆ. ಮತ್ತೆ ಉದಾ:—

ಭಾಮಿನಿ ॥ ಪದುಮನಯನೆಯ ವರಭುಜವ ಸೋಂ।
ಕಿದ ಭುಜನೆ ಜಗದೊಳಗೆ ಧನ್ಯವು!।
ಇದುವಳಿದಯೆನ್ನಂಗ ಭೂಮಿಗೆ ಭಾರವಾಗಿಹುದು ॥

ಇಲ್ಲಿ ನಾಯಿಕೆಯ ಸೌಂದರ್ಯಗುಣದಿಂದ ಅವಳ ಭುಜಕ್ಕೆ ತಾಕಿದ ತನ್ನಭುಜದ ಧನ್ಯತ್ವಗುಣವು ವರ್ಣಿಸಲ್ಪಟ್ಟದೆ. ಇನ್ನು ದೋಷದಿಂದ ದೋಷತ್ವವು ಹೇಗಂದರೆ:—

ಕಂದ ॥ ದಿಟದಿಂ ನಿನ್ನಭಿಯೋಗವು।
ಘಟಿಸಲು ರಿಪುಯುವತಿಜನವು ತಮ್ಮಯ ಕುಚದ ॥
ಕಠಿಣತೆಯಂ ವರಪದಗಳ।
ಕಟದೊಳು ಬಯಸುತ್ತ ಹೆಳೆಯುತಿರುವರು ವಿಧಿಯಂ ॥

ಇಲ್ಲಿ ರಾಜನೆ ಅಭಿಯೋಗವುಂಟಾಗಲು ಅಡವಿಯಲ್ಲಿ ಬೇಡಾಡುತ್ತಿರುವ ಶತ್ರುಸ್ತ್ರೀಯರ ಪಾದಗಳಿಗೆ ಬಿಡಾಡಲಿಕ್ಕೆ ಅಡ್ಡಿಯನ್ನು ಮಾಡುತ್ತಿರುವಂಥ ಅವುಗಳ ಮೃದುತ್ವದೋಷದಿಂದ, ಇವುಗಳಿಗೆ ಕಠಿಣತೆಯನ್ನು ಮಾಡದೆ ವ್ಯರ್ಥವಾಗಿ ಕುಚಗಳಲ್ಲಿ ಕಠಿಣತ್ವವನ್ನುಂಟು ಮಾಡಿದ ಬ್ರಹ್ಮನ ನಿಂದ್ಯತ್ವದೋಷವು ವರ್ಣಿತವಾಗಿದೆ. ಮತ್ತೆ ಉದಾ:—

ಭಾಮಿನಿ ॥ ವರುಷರುಷ ಕಾಲೇಜದಿಂ ಹೊರ।
ಬರುತಿರುವ ಜನರೆಲ್ಲ ಕನ್ನಡ।
ಮರೆಯದಲೆ ಸಕ್ಕದದ ಸಾಹಿತ್ಯಗಳನೋದಿದೊಡೆ ॥
ಎರಡು ವರುಷದೊಳಿರದೆ ಬರುವದು।
ಪರವು ಪಂಡಿತತನವ ನೆಮ್ಮಯ।
ಕೊರತೆಯದು ಹಿಂಗುವದು ಕರ್ನಾಟಕದೆ ಪಂಡಿತರ ॥

ಇಲ್ಲಿ ಟ್ರೇನಿಂಗ್‌ಕಾಲೇಜದಿಂದ ಬಂದವರೆಲ್ಲ ಸಕ್ಕದದ ಸಾಹಿತ್ಯಗಳನ್ನೋದದೆ ಕಲಿತ ಕನ್ನಡವನ್ನು ಮರೆತುಬಿಟ್ಟ ದೋಷದಿಂದ ನಮಗೆ ಕನ್ನಡ ಪಂಡಿತರ ಕೊರತೆಯು ದೋಷವುಂಟಾಗಿದೆಯೆಂದು ಹೇಳಿದೆ.
ಮತ್ತೆ ಉದಾ:—

ಭಾವಿನಿ ॥ ಚಂದನವೆ ನೀನಖಿಳ ಲೋಕಕೆ।
ನಂದನವೆ ತಡೆಯದಲೆ ತೆರಳಿ।
ನ್ನೊಂದು ಘ್ರಾಣವಿಲ್ಲಿರದೆ ಬೇರಿನ್ನೊಂದು ಕಾನನಕೆ ॥
ಹೊಂದಿಹುದು ನಿಸ್ಸಾರಪರುಷರ।
ಸಂದಣಿಯು ದುರ್ವಂಶರಿಂದಲೆ।
ಕಂದಕೇಳೀವನವಿದೆಲ್ಲಾ ಕಡೆಗು ಕುಂದದಲೆ ॥
ಮುಂದಿವೊಂದನ್ನೊಂದು ತಿಕ್ಕಿದ।
ರಿಂದೆ ಪುಟ್ಟಿದ ಬೆಂಕಿಯಿಂತ।
ನ್ನೊಂದು ಕುಲವನದುಳಿಸದೀವನವೆಲ್ಲವಹಿಸುವವು ॥

ಇಲ್ಲಿ ಕೆಲವು ಬಿದುರುಗಳ ಪರಸ್ಪರ ಸಂಘಷ್ಟಣದಿಂದುಂಟಾದ ಬೆಂಕಿಯು ಸಂಗ್ರಹತ್ವದೋಷದಿಂದ ಇಡೀ ವನಕ್ಕೆ ನಾಶರೂಪದೋಷವು ಬರುವದೆಂದು ಹೇಳಿದೆ. (ನಿಸ್ಸಾರ = ಪೊಳ್ಳಾಗಿರುವ; ಸಾರವಿಲ್ಲದವ. ದುರ್ವಂಶ = ಕೆಟ್ಟಬಿದುರು; ದುಷ್ಟಕುಲೋತ್ಪನ್ನ. ಸಂದಣಿ = ಗುಂಪು)
ಪರುಷ = ಬಿರಸು, ಕಠಿಣವೆನಿಸಿದವ.

ಮತ್ತೆ ಉದಾ:—

ಭಾಮಿನಿ ॥ ಜಡಭಾವವೆದು ತನ್ನೊಳಿದ್ದರು।
ಕಡೆಗುನೆರೆ ಸಾಹಿತ್ಯಜಡದೊಳ।
ಗೆಡೆಗುಡದ ಕನ್ನಡದ ಭಾಷೆಯನಿನ್ನು ತಡೆಯದಲೆ ॥
ಒಡೆಯಯಲಗುರದೂರ್ಜಹನುಮನ।
ಬಿಡಲು ಕುಡಿನೋಟವನುಪ್ರೇಂದ್ರನು।
ಬಿಡುವನೇ ಸಾಹಿತ್ಯದಲಿ ಮುಳುಗಿಸದೆ ಬುಡತನಕ ॥

ಇಲ್ಲಿ ಉಪೇಂದ್ರನಿಗೆ ಯಲಗುರದೀಶನ ಕೃಪೆಯಾಗದ ದೋಷದಿಂದ ಕನ್ನಡಕ್ಕೆ ಸಾಹಿತ್ಯದಲ್ಲಿ ಮಗ್ನವಾಗದ ದೋಷವು ಬಂತೆಂದು ಹೇಳಿದೆ. (ಜಡ = ಜಲ; ಮಂದ). ಇನ್ನು ಗುಣದಿಂದ ದೋಷತ್ವವು ಹೇಗಂದರೆ:—

ಕಂದ ॥ ದುರ್ಜ್ಯವವದುವೆ! ಲಕುಮಿಗೆ।
ನಿರ್ದಯದಿಂ ಸುಜನರನ್ನು ಬಿಟ್ಟುಬಿಡುವದು ॥

ಇಲ್ಲಿ ಸಜ್ಜನರ ಮಹಿಮೆಯ ಗುಣದಿಂದ ಲಕ್ಷ್ಮಿಯು ಅವರನ್ನಾಶ್ರಯಿಸದಿರುವದು. ಆವಳಿಗೆ ದೋಷತ್ವವಾಗಿ ವರ್ಣಿಸಲ್ಪಟ್ಟಿದೆ. ಮತ್ತೆ ಉದಾ:—

ಪರಿವರ್ಧಿನಿ॥ ಬೇಡಲು ದಾನವ ಬಂದಿರುಬಳಿಗಳ।
ನೋಡಿಸೆ ಕರಿಯದು ಹೊಡೆದಾ ಕಿವಿಯಿಂ।
ಕೇಡಲ್ಲವೆ ತನ್ನಯ ಕುಂಭಸ್ಥಳ ಯುಗಳದ ಮಂಡನಕೆ ॥
ನೂಡಿದ ರಾಭ್ರಮರಂಗಳ ಪೋಡುತ।
ಕೂಡಲೆ ವಿಕಸಿತ ಕಮಲವನಗಳೊಳ।
ಗಡ್ಡಾಡುವನೆಂಬುವದದುವಾದರು ತಿಳಿಯದೆ ಮೂಢನಿಗೆ ॥

ಇಲ್ಲಿ ಭ್ರಮರಗಳ ಅಲಂಕರಣ ಗುಣತ್ವದಿಂದ ಅವುಗಳನ್ನು ಪಿಡಿಸಿದ್ದು ಆನೆಗಳಿಗೆ ದೋಷತ್ವವಾಗಿ ವರ್ಣಿಸಲ್ಪಟ್ಟಿದೆ. ಇನ್ನು ದೋಷದಿಂದ ಗುಣತ್ವವು ಹೇಗಂದರೆ:—

ಕಂದ ॥ ಸೇವಕರಿಗಿದುವೆ ಲಾಭವು।
ಜೀವದಿನುಳಿಸಿದ್ದು ವಧವ ಮಾಡದೆ ನೃಪನೇ ॥

ಇಲ್ಲಿ ರಾಜನ ಕ್ರೂರತ್ವದೋಷದಿಂದ ವಧವ ಮಾಡಿಸಿಕೊಳ್ಳದೆ ಹೊರಬಿದ್ದದ್ದು ಸೇವಕರಿಗೆ ಗುಣತ್ವವಾಯಿತೆಂದು ವರ್ಣಿಸಲ್ಪಟ್ಟಿದೆ.

ಮತ್ತೆ ಉದಾ:—

ಭಾವಿನಿ ॥ ಸಿಡಿಸಿಡಿದು ನೋಡಿದರು ಕೈಯ್ಯಂ।
ಬಿಡದೆ ಬಾಯೊಳಗಿಡಲು ತಾಮು।
ದ್ದಿಡಲು ನೋಡಲು ಮೂಸಿ ತಾ ತಿರುತಿರುಗಿ ಸಕ್ಕದರು ॥
ಪೊಡವಿಯಲಿ ನಿನ್ನೊಗೆದು ರನ್ನವೆ।
ಒಡೆಯದಲೆ ಬಿಟ್ಟಿದ್ದಿ ಕ್ಷೇಮವು।
ಒಡಲ ಸಾರವನಿರದೆ ನೋಡುವ ವಾನರನು ನಿನ್ನ ॥

ಇಲ್ಲಿ ವಾನರನ ಚಾಪಲದೋಷದಿಂದ ರತ್ನವನ್ನು ಚೂರ ಮಾಡದೆ ಬಿಟ್ಟದ್ದು ಅದಕ್ಕೆ ಗುಣತ್ವವಾಗಿ ವರ್ಣಿಸಲ್ಪಟ್ಟಿದೆ. ಮತ್ತೆ ಉದಾ:—

ಭಾವಿನಿ ॥ ಆ ಮಹಾನಿದ್ರೆಯೊಳಗಿದ್ದರು।
ನೇಮದಲಿ ಯಾಮಿನಿಯೊಳೇಳುತ।
ಲೀಮಹಾನದಿಯಿಂದ ನೀರನು ತರುತಿಹುದು ನಿನಗೆ ॥
ಭೂಮಿಯಲ್ಲಿರುವಖಿಳರಂತಿರ।
ಲೀಮಹಾವರ್ಷದಲಿ ಬಿಟ್ಟುದು।
ಗ್ರಾಮತೋಳನಮಿಟ್ಟ ವಾಸನೆ? ನಿನಗೆ ಕ್ಷೇಮವಿದ್ಯೈ ॥

ಮಳೆಗಾಲದಲ್ಲಿ ರೊಜ್ಜು-ರಾಡಿಗಳನ್ನು ತುಳಿಯುತ್ತ ನೀರು ತರಬೇಕಾಗುವದರಿಂದ ಬಹಳೇ ಶ್ರಮವಾಗುವದು. ಕಾರಣ ಇದು ದೋಷತ್ವವುಳ್ಳದ್ದಾಗಿರುವದು. ಆದರೆ ಇದು ಬಹಳೇ ದೂರದಿಂದ ನೀರು ತಂದು ಶ್ರಮಬಟ್ಟಿರುವ ತೋಳನ ಮಟ್ಟಿಯ ಜನರಿಗೆ ಗುಣತ್ವವುಳ್ಳದ್ದಾಗಿರುವದು.

(ಮುಂದೆ ಸಾಗುವದು.)

ಉಪೇಂದ್ರಶರ್ಮಾ ತೋಳಮಟ್ಟಿ.

ಪತ್ರವ್ಯವಹಾರವು.

ಸಂಪಗಾವ ತಾಲೂಕಕ್ಕೆ ಸೇರಿದ ಮುಗುಟಖಾನೆ ಹುಬ್ಬಳ್ಳಿಯ ಸಾಲೆಯಲ್ಲಿ ಶಾ. ೩೮–೧೩– ೧೯೧೩ನೇ ಇ. ದಿವಸ, ಮೇಹಬಾನ ಡಿವೂಟ ಎಜ್ಯುಕೇಶನಲ್ ಇನ್ಸಪೇಕ್ಟರ ಜಿ. ಬೆಳಗಾವ ಇವರ ಅಧ್ಯಕ್ಷತೆಯ ಕೆಳಗೆ ಆದ ವಾರ್ಷಿಕ ಪರೀಕ್ಷೆಯ ಬಕ್ಷೀಸ ಸಮಾರಂಭದಲ್ಲಿ,

ಹುಣಸಿಕಟ್ಟೆ ಸಾಲೆಯ ಹೆ. ಮಾಸ್ತರರಾದ ಶಂಕರ ಅಪ್ಪಾಜಿ ಎಲಿಗಾರ ಇವರು ವಿದ್ಯಾರ್ಥಿಗಳನ್ನು ಕುರಿತು ಮಾಡಿದ

ಹಿತೋಪದೇಶವು.

"ಪ್ರಿಯ ಸದ್ಗೃಹಸ್ಥರೇ, ನಾವೆಲ್ಲರೂ ಈಗ ಈ ನಮ್ಮ ದೈವಶಾಲಿಗಳಾದ ಖಾನಸಾಹೇಬ ಡಿ|| ಎ|| ಇನಸ್ಪೆಕ್ಟರವರ ಅಧ್ಯಕ್ಷತೆಯ ಕೆಳಗೆ ಪಕ್ಷೀಸ ಸಮಾರಂಭಕ್ಕಾಗಿ ನೆರೆದಿರುತ್ತೇವಷ್ಟೇ. ಈ ಪ್ರಸಂಗದಲ್ಲಿ ವಿದ್ಯಾರ್ಥಿಗಳಿಗೆ ಬೋಧಪರವಾಗಿ ನಾಲ್ಕು ಮಾತುಗಳನ್ನು ಹೇಳಬೇಕೆಂದು ಯೋಚಿಸಿದ್ದೇನೆ. ನಮ್ಮ ಪ್ರಿಯ ವಿದ್ಯಾರ್ಥಿಗಳು ಕಿವಿಗೊಟ್ಟು ಕೇಳುವರೆಂದು ಆಶಿಸುತ್ತೇನೆ.

ಮುದ್ದು ಮಕ್ಕಳೇ, ಏನಂದರೂ ನಾವು ಹುಡುಗರು, ಎಂದು ಮಾತ್ರ ನೀವು ತಿಳಕೊಳ್ಳಬೇಡಿರಿ. ಒಂದು ವೇಳೆ ಈ ತರದ ಅಜ್ಞಾನವು ನಿಮ್ಮಲ್ಲಿ ಸುಳಿದಾಡುತ್ತಿದ್ದರೆ ಅದನ್ನು ಹೊರದೂಡಿಬಿಡಿರಿ. ವಿಚಾರಮಾಡಿ ನೋಡುತ್ತಿರಲು ನಿಮ್ಮ ಮಹತ್ವವು ಕಡಿಮೆತರದ್ದೆಂದು ತಿಳಿಯಲಾಗದು. ಈಗ ಈ ಸಭೆಯನ್ನಲಂಕರಿಸಿದ ಸಭ್ಯ ಗೃಹಸ್ಥರೆಲ್ಲ ಮೊದಲು ನಿಮ್ಮಂತೆ ಹುಡುಗರಾಗಿಯೇ ಇದ್ದವು; ಈಗ ಪ್ರಬುದ್ಧರಾಗಿ ನಿಮ್ಮ ಜನಕ ಪಾಲಕರೆನಿಸಿಕೊಂಡು ನಿಮಗೆ ಬುದ್ಧಿವಾದ ಹೇಳುವವರಾಗಿದ್ದೇವೆ; ಕೆಲವರು ಸಾರ್ವಜನಿಕ ಹಿತಚಿಂತಕರಾಗಿರುವರಲ್ಲದೆ ಹಲವರು ತಮ್ಮ ಸದಾಚಾರದಿಂದ ಅನ್ಯರಿಗೆ ಆಚಾರವಿಚಾರಗಳ ಮಾರ್ಗದರ್ಶಕರಾಗಿದ್ದಾರೆ. ಗ್ರಾಮವೆಂಬ ಪದವು ಜನರ ಸಮುದಾಯವು; ಅದರ ಸಾಲೆಯು ಚಿಕ್ಕ ವಯಸ್ಸಿನ ಪ್ರಜರ (ಅರ್ಥಾತ್ ಭಾವೀ ಪ್ರಜರ) ಸಂದಣಿಯು. ಇದರಲ್ಲಿ ವಯಸ್ಸಿನ ಹೆಚ್ಚು ಕಡಿಮೆಯೇ ಮಾತ್ರ ಮುಖ್ಯ ಭೇದವು. ಸೂಕ್ಷ್ಮ ವಿಚಾರ ಮಾಡಿ ನೋಡಿದರೆ, ಮನುಷ್ಯನು ದೊಡ್ಡವನಾದ ಬಳಿಕ ತನ್ನಲ್ಲಿಲ್ಲದ ಸದ್ಗುಣಗಳನ್ನು ಹೊಂದುವದು ಕಠಿಣವು. "ಮೂರು ವರ್ಷದ ಬುದ್ಧಿ ನೂರು ವರ್ಷದ ವರೆಗೆ" ಎಂಬ ಗಾದೆಯಂತೆ ಚಿಕ್ಕಂದಿನಲ್ಲಿ ಹತ್ತಿದ ಚಲೋ ಗುಣಗಳು, ಪ್ರೌಢಾವಸ್ಥೆಯಲ್ಲಿ ಬಲಹೊಂದಿ ಅನಘವನಿಂದ ತನ್ನ ಗ್ರಾಮ ಮತ್ತು ದೇಶಬಂಧುಗಳ ಹಿತದ ಕೆಲಸಗಳು ಕೆಲಮಟ್ಟಿಗಾದರೂ ಆಗಬಹುದು. ಆದ್ದರಿಂದ ನಿಮಗೆ ಗೌಣತ್ವವನ್ನು ಎಂದೂ ತಿಳಿಯುತಿಲ್ಲದಿರುವದಿಲ್ಲ.

ನೀವು ಗೋಧಿ ಮೊದಲಾದ ಧಾನ್ಯಗಳಂತೆ ಇದ್ದೀರಿ. ನಿಮ್ಮಿಂದ ಬೇಕಾದ ಪಕ್ವಾನ್ನಾದಿಗಳನ್ನು ಮಾಡಿ ಆನಂದದಿಂದ ಭುಂಜಿಸ ಬಹುದು. ಅದರೆ ಇಂಥ ಪಕ್ವಾನ್ನ ಮಾಡುವದರಲ್ಲಿ ಮಾತ್ರ ಬಹು ಜಾಣತನವು ಬೇಕಾಗುತ್ತದೆ. ನಿಮ್ಮನ್ನು ಬೀಸಿ ಸೋಸಿ, ತೀಡಿ ತಿದ್ದಿ, ಅರೆದು ಕರಿದು, ಹೆಚ್ಚಿ ಕೊಚ್ಚಿ, ಇಂಗು ಸಾಸಿವೆಗಳ ಒಗ್ಗರಣೀ ಹಾಕಿ ಉತ್ತಮವಾದ ಊಣ್ಣುವ, ತಿನ್ನುವ, ನಂಜುವ ಮೊದಲಾದ ಆಹಾರದ ಜೀನಸುಗಳನ್ನು ಸಿದ್ಧಪಡಿಸುವದೆಂದರೆ, ನಿಮ್ಮನ್ನು ವ್ಯವಹಾರಕ್ಕೆ ತಕ್ಕವರನ್ನು ಮಾಡಶಕ್ಯ ವಿರುತ್ತದೆ. ಅಂದರೆ ನಿಮ್ಮಲ್ಲಿ ಬುದ್ಧಿವಂತಿಕೆ, ಸತ್ಯವಂತಿಕೆ, ಧೈರ್ಯ, ನಮ್ರತೆ, ವಿವೇಕ, ಸ್ಥಿರಮನಸ್ಸು, ಪ್ರಾಮಾಣಿಕತನ ಮೊದಲಾದ ಸದ್ಗುಣಗಳು ಉಂಟಾಗಬೇಕಲ್ಲದೆ, ನೀವು ಶರೀರಸಂಪತ್ತುಳ್ಳವರು, ಅಂದರೆ ಆರೋಗ್ಯವಂತರೂ ಆಗಬೇಕಾಗುತ್ತದೆ. ಈ ಧೋರಣದಿಂದ ಸಿಗುವ ಶಿಕ್ಷಣವೇ ನಿಮ್ಮ ಇಹ ಲೋಕದ ಯಾತ್ರೆಯನ್ನು ಸುಖಕರವಾಗಿ ಮಾಡಿ, ನಿಮಗೆ ಯಶಸ್ಸು ಕೊಟ್ಟು ನಿಮ್ಮ ಜನ್ಮದ ಸಾಫಲ್ಯ ಮಾಡುವದೆನ್ನಲಿಕ್ಕೆ ಅಡ್ಡಿಯಿಲ್ಲ.

ಉಳ್ಳೀದು, ಈ ರೀತಿಯಿಂದ ನಿಮ್ಮನ್ನು ಹದಗೊಳಿಸುವ ಜವಾಬದಾರಿಯು ಪಾಲಕರು, ಶಿಕ್ಷಕರು ಮುಂತಾದವರದು ಇರುವದೆಂದಬಳಿಕ ನಾವೇನು ಕಷ್ಟಬಡುವ ಕಾರಣವಿಲ್ಲೆಂದು ಮಾತ್ರ ನೀವು ತಿಳಿಯಬೇಡಿರಿ. ಅವರ ಪ್ರೇರಣೆಯಂತೆಯೂ ಉಪದೇಶದಂತೆಯೂ ನಡೆದುಕೊಳ್ಳುವ ಜವಾಬದಾರಿಯೂ ನಿಮ್ಮ ಮೇಲೆ ಇರುತ್ತದೆ. ನೀವು ಗುರು ಹಿರಿಯರ ಅಪ್ಪಣೆಯನ್ನು ಶಿರಸಾವಹಿಸಿ ಮನ್ನಿಸಬೇಕಾಗುತ್ತದೆ. ಇರಲಿ.

ಮನುಷ್ಯಪ್ರಾಣಿಗೆ ತನ್ನ ಇಚ್ಛೆಯ ಮೇರೆಗೆ ಯಾವದೊಂದು ಇಷ್ಟ ದೇವತೆ ಇದ್ದೇ ಇರುವಳು. ಪ್ರಿಯ ವಿದ್ಯಾರ್ಥಿಗಳೇ, ನಿಮ್ಮ ಇಷ್ಟ ದೇವತೆಯು ಶ್ರೀ ಸರಸ್ವತಿ ದೇವಿಯಲ್ಲವೇ! ನೀವು ಸದ್ಭಕ್ತಿಯಿಂದ ನಡೆಯುವದಲ್ಲದೆ ಆ ದೇವಿಯ ಪೂಜೆಯನ್ನು ತನುಮನಾದಿಗಳಿಂದ ಮಾಡಬೇಕಾಗುತ್ತದೆ. ಪೂಜೆಯಲ್ಲಿ ಲೌಕಿಕ ಪೂಜೆಯಿಂತಲೂ ತಾತ್ವಿಕ ಪೂಜೆಯಿಂತಲೂ ಎರಡು ವಿಧಗಳಿಂದು ಹೇಳಬಹುದು. ದೇವಿಯಲ್ಲಿ ಏಕಾಗ್ರಚಿತ್ತವಿಲ್ಲದೆ ನೀರು ಸಿಂಪಡಿಸಿ ಗಂಧಾದಿಗಳನ್ನು ಹಚ್ಚಿ, ಧೂಪದೀಪ ನೈವೇದ್ಯಾದಿಗಳನ್ನು ಅರ್ಪಿಸುವದು ಲೌಕಿಕ ಪೂಜೆಯು. ಇದರಿಂದ

ದೇವಿಯು ಸಂತುಷ್ಟಳಾಗಲಾರಳು! ಆದರೆ ಸದ್ಗುರುಗಳನ್ನು ಪ್ರಸನ್ನಗೊ
ಳಿಸಿಕೊಂಡು ಅವರ ಆಜ್ಞೆಯ ಮೇರೆಗೆ ಆ ದೇವಿಯ ತಾತ್ವಿಕ ಪೂಜೆ
ಯನ್ನು ನೀವು ಎಡೆ ಬಿಡದೆ ಮಾಡಲಿಕ್ಕೆ ಬೇಕು. ಅದರಿಂದ ಆ ನಿಮ್ಮ
ಇಷ್ಟ ದೇವತೆಯಾದ ಬ್ರಹ್ಮ ಪತ್ನಿಯು ಪ್ರಸನ್ನಳಾಗಿ, ನಿಮ್ಮ ದೆಸೆಯಿಂದ
ತನ್ನ ತುದಿ ಬೆರಳಿನ ಮೇಲೆ ಇಟ್ಟುಕೊಂಡಿದ್ದ ವಿಚಾರ, ಕಲ್ಪನಾ
ನಿರೀಕ್ಷಣ, ಸ್ಮರಣ, ಆರೋಗ್ಯಾದಿಗಳೆಂಬ ವರಗಳನ್ನು ತಡವಿಲ್ಲದೆ ದಯ
ಪಾಲಿಸುವಳು! ಇಷ್ಟಾಯಿತೆಂದರೆ, ಕೃತಕೃತ್ಯರಾಗುವಿರಿ. ಆದ್ದರಿಂದ
ನೀವು ಮಾಡಬೇಕಾಗಿರುವ ಸರಸ್ವತೀ ದೇವಿಯ ಪೂಜಾವಿಧಿಗಳನ್ನೆ
ಕುರಿತು ನಾಲ್ಕು ಮಾತು ಹೇಳುತ್ತೇನೆ. ಅವುಗಳನ್ನು ಲಕ್ಷದಲ್ಲಿಟ್ಟುಕೊ
ಳ್ಳುವಿರೆಂದು ನಂಬಿದ್ದೇನೆ. ಅವು ಯಾವವೆಂದರೆ:—

(೧) ಬೆಳಗುಮುಂಜಾನೆ ಬೇಗ ಎದ್ದು ಶುದ್ಧ ಮನಸ್ಸಿನಿಂದ ದೇವರ
ನಾಮಸ್ಮರಣ ಮಾಡಿರಿ. (೨) ಮಡಿಯಾಗಿರುವದಕ್ಕೆ, ಅಂದರೆ ಸ್ವಚ್ಛತೆ
ಯಿಂದ ಇರಲಿಕ್ಕೆ ಯತ್ನಿಸಿರಿ. (೩) ನಿಮ್ಮೊಳಗಿನ ಆಲಸ್ಯವನ್ನು ಹೊರ
ಹಾಕಿ ಬಿಡಿರಿ. (೪) ದಿನಾಲು ವೇಳೆಗೆ ಸರಿಯಾಗಿ ಶಾಲೆಗೆ (ಸರಸ್ವತೀ
ದೇವಾಲಯಕ್ಕೆ) ಹೋಗಿರಿ. (೫) ಗುರುಗಳು ಹೇಳುವ ಪಾಠವನ್ನು
ಲಕ್ಷ್ಯವಿಟ್ಟು ಕೇಳಿಕೊಳ್ಳಿರಿ. (೬) ತಿಳಿಯದ್ದನ್ನು ಅಥವಾ ಬಂದ ಸಂಶ
ಯವನ್ನು ಅಂಜಿಕೆ ಅಭಿಮಾನಗಳನ್ನು ತೊರೆದು ವಿನಯದಿಂದ ಕೇಳಿ
ಕೊಳ್ಳಿರಿ. (೭) ವಿಷಯವು ತಿಳಿಯದೆ ಇದ್ದರೆ ತಿಳಿದವರಂತೆ ಎಂದೂ
ನಟಿಸಬೇಡಿರಿ. (೮) ನೀವು ಬಾರದಿದ್ದಾಗ ಶಾಲೆಯಲ್ಲಿ ನಡೆದ ವಿಷಯಗ
ಳನ್ನು ಕಲಿತುಕೊಳ್ಳದೆ ಹಾಗೆಯೇ ಮುಂದೆ ಸಾಗಬೇಡಿರಿ. ಸಾಗಿದರೆ
ನಿಮ್ಮ ಅಭ್ಯಾಸವೆಂಬ ಪೂಜೆಯಿಂದ ಏನೂ ಫಲವಾಗಲಿಕ್ಕಿಲ್ಲ. (೯) ಸಂಜೆ
ಮುಂಜಾವಿನಲ್ಲಿ ಗೊತ್ತು ಮಾಡಿದಷ್ಟು ವೇಳೆಯ ವರೆಗೆ ತಪ್ಪದೆ ಅಭ್ಯಾಸ
ಮಾಡಿರಿ. (೧೦) ಒಬ್ಬರ ಕೂಡೊಬ್ಬರು ಪ್ರೀತಿಯಿಂದ ನಡಕೊಳ್ಳಿರಿ.
ಹೊಟ್ಟೆಯಕಿಚ್ಚು ಏನೂ ಕೆಲಸದ್ದಲ್ಲವೆಂಬದನ್ನು ಧ್ಯಾನದಲ್ಲಿಡಿರಿ.
(೧೧) ಉತ್ತಮರೂ ನಿಮಗಿಂತ ಬುದ್ಧಿವಂತರೂ ಆದ ಹುಡುಗರ ಸಹ
ವಾಸದಲ್ಲಿ ಇರುವಂತೆ ಮಾಡಿರಿ. ಕೆಟ್ಟವರ ನೆರಳಿಗೆ ಹೋಗಬೇಡಿರಿ.
(೧೨) ಮಾನನೀಯರಾದ ಅಜ್ಞಾಧಿಕಾರಿಗಳೊಡನೆ ಮನ್ನಣೆಯಿಂದ
ನಡೆಯಿರಿ. (೧೩) ತಕ್ಕಷ್ಟು ವ್ಯಾಯಾಮವನ್ನು ಬಿಡದಲೆ ಮಾಡಿರಿ.

೧೪) ಚಿಕ್ಕಂದಿನಲ್ಲಿ ಲಗ್ನವಾಡಿಕೊಳ್ಳುವದಕ್ಕೆ ಒಪ್ಪಬೇಡಿರಿ. ಮತ್ತು ೧೫) ಸ್ಥಿರಮನಸ್ಸಿನವರಾಗಿರಿ.

ಈ ಮೊದಲಾದ ವಿಧಿಗಳಿಗೆ ಅನುಸರಿಸಿ ವಿದ್ಯಾದೇವಿ (ಸರಸ್ವತಿ) ಯನ್ನು ಆರಾಧಿಸುವದೇ ನಿಮ್ಮ ನಿಜವಾದ (ತಾತ್ವಿಕ) ಪೂಜೆಯು. ಈ ರೀತಿಯ ಪೂಜೆಯಿಂದಲೇ ದೇವಿಯು ನಿಮಗೆ ನಿಶ್ಚಯವಾಗಿ ಸುಖವನ್ನೂ ಕೀರ್ತಿಯನ್ನೂ ಕೊಡುವಳು. ಇದನ್ನು ಲಕ್ಷ್ಯದಲ್ಲಿಟ್ಟು ವರ್ತಿಸಿರಿ. ಅಸ್ತು.

ಇಲ್ಲಿಯ ವಿದ್ಯಾರ್ಥಿಗಳ ಬಕ್ಷೀಸ ಸಮಾರಂಭಕ್ಕೆ ಹೋದ ವರ್ಷದಂತೆ ಈ ಸಾರೆಯಾದರೂ ಇಲ್ಲಿಯ ತುಪ್ಪದಂಗಡಿಯ ಮಿ. ಬಾಳು ಜವ ಪಡತೆ ಮೊದಲಾದ ಪ್ರಮುಖ ಜನರು, ಅಸ್ಥೆಯಿಂದ ಮುಂದಾಗಿ ನಿಂತು ನೋಡಿ ಆನಂದಪಾಗುತ್ತದೆ. ಮಿ. ಬಾಬುರಾವ ಇವರು ಚಿಕ್ಕವಯಸ್ಸಿನವರಿದ್ದು ತನುಮನಧನಾದಿಗಳಿಂದ ಸಾಲೆಗೆ ಆಗುತ್ತಿರುವ ಇವರ ಸಹಾಯವು ಸ್ತುತಿಸಲಿಕ್ಕೆ ಯೋಗ್ಯವಾದದ್ದೇ ಸರಿ. ಇದರಂತೆ ಮುಂದಾದರೂ ಇವರು ಸಾರ್ವಜನಿಕ ಕೆಲಸದ ಕಡೆಗೆ ಹೆಚ್ಚಿಗೆ ಲಕ್ಷ್ಯ ಕೊಟ್ಟು ಯಶಸ್ಸಿಗೆ ಪಾತ್ರರಾಗಲೆಂದು ಆಶಿಸುತ್ತೇನೆ.

ಇನ್ನು ವಿದ್ಯಾಸಂಪಾದನೆವಾಗಲಿಕ್ಕೆ ಅನುಕೂಲವಾದ ವ್ಯವಸ್ಥೆಯೂ ಸಾಧನೆಗಳೂ ಈಗಿನ ಕಾಲದಷ್ಟು ಇನ್ನೊಂದು ಕಾಲದಲ್ಲಿ ಇದ್ದಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ವಿದ್ಯಾಪಕ್ಷಪಾತಿಗಳೂ ನ್ಯಾಯವಂತರೂ ಆದ ಈ ನಮ್ಮ ಇಂಗ್ಲಿಷ ಸರಕಾರದವರು ವಿದ್ಯಾವರ್ಧನೆಗೆ ಬೇಕಾಗುವ ಅನುಕೂಲತೆಗಳನ್ನೆಲ್ಲ ಮಾಡಿಕೊಡುತ್ತ ಪ್ರಜೆಗಳನ್ನು ಸುಖದಿಂದ ಕಾಪಾಡುತ್ತಿರುವದರಿಂದ ಇವರ ಆಳಿಕೆಯು ನಮ್ಮ ಮೇಲೆ ಚಿರಕಾಲವಿರಲೆಂತಲೂ ನಮ್ಮ ಪಾಠೆಯ ವರಿಷ್ಠಾಧಿಕಾರಿಗಳಿಗೆ ಉತ್ತರೋತ್ತರ ವಿದ್ಯಾಭಿವೃದ್ಧಿ, ಸುಧಾರಣಾದಿಗಳನ್ನು ಉಂಟುಮಾಡಲಿಕ್ಕೆ ಶಕ್ತಿಯನ್ನೂ ದೀರ್ಘಾಯುಷ್ಯವನ್ನೂ ದಯಪಾಲಿಸಲೆಂದೂ ಪರಮೇಶನಿಗೆ ಬೇಡಿಕೊಂಡು ನನ್ನ ಈ ಅಲ್ಪಭಾಷಣವನ್ನು ಮುಗಿಸುತ್ತೇನೆ."

ಮೆ. ರಾ. ರಾ. ಕನ್ನಡ ಶಾಲಾಪತ್ರದ ಎಡಿಟರ ಮಹಾರಾಯರ ಸನ್ನಿಧಿಗೆ— ತಮ್ಮ ಪತ್ರಿಕೆಯಲ್ಲಿ ಕೆಳಗಿನ ಲೇಖಕ್ಕೆ ಅವಶ್ಯವಾಗಿ ಸ್ಥಳ ದೊರೆಯುವದೆಂದು ನಂಬಿರುವೆನು:—

ಕನ್ನಡದ ಎಷ್ಟೋ ಪದ್ಯಗಳಲ್ಲಿ, ಮಹಾಕವಿಗಳೂ ಕೂಡ, ಅಥ
ಡಿಗೆ ಯತಿಚ್ಛೇದವನ್ನು ಮಾಡಿದ್ದು ಕಂಡು ಬರುತ್ತದೆ. ಕೇವಲ ಅರ್ಥ
ದೃಷ್ಟಿಯಿಂದ ನೋಡುವ ಜನರು, ಇದನ್ನು ಅಕ್ಷನ್ಯದೋಷವೆಂದು ಎ
ಸುತ್ತಿದ್ದರೂ, ಛಂದಸ್ಸಿನ ಕಷ್ಟತರವಾದ ನಿಯಮಗಳನ್ನು ಪರಿಭಾವಿ
ವಿಚಾರಿಸುವ ಉದಾರಧೀಗಳು, ಅದನ್ನು ಮನ್ನಿಸಿ ಆ ಕಬ್ಬಿಗರನ್ನು ಕೃತ
ಶಾಪೂರ್ವಕವಾಗಿ ಗೌರವಿಸದೆ ಎಂದೂ ಬಿಡಲಾರರು! ಯತಿಭಂಗವ
ಮಾಡಬೇಕೆಂದು ಯಾರೂ ಮಂಡಿಸರು. ಅವನ್ನು ಕವಿಗಳಾದರೂ ಕ
ದಿಂದ ಮಾಡಿರುವರೆಂದು ಯಾರೂ ಹೇಳರು. ಅದರೆ "नहि वेद्या विजा
ति । ग्रावो प्रसवेदनाम् ॥" ಎಂಬಂತೆ ತಮಗೆ ತಟ್ಟುವ ತಡೆಗಳನ್ನು ಕ
ಗಳೇ ಬಲ್ಲರು! ಅನಿರ್ವಾಹಪಕ್ಷವೆಂದೇ ತಿಳಿದೂ ತಿಳಿದೂ, ಈ ಮಾ
ವನ್ನು ಅವರು ಅವಲಂಬಿಸಿರುವರು!! ಇದೆಲ್ಲ ಸರಿಯೇ ಆಯಿತು. ಹೀ
ದ್ದು ಪೂರ್ವ ಪಕ್ಷಿಗಳು:— ಅರ್ಥದ ಕಡೆಗೇ ಲಕ್ಷ್ಯಗೊಟ್ಟು, ಯತಿಚ್ಛೇ
ದವಿದ್ದಲ್ಲಿ (ಯತಿ ಇದ್ದರೂ) ಉಸುರು ಬಿಡದೆ, ಹಾಗೇ ಮುಂದೆ ಅನ್ನು
ಸಾಗಿ, ಅರ್ಥಕ್ಕೆ ಅನುಕೂಲವಾದ (ವಿಭಕ್ತಿಯಿದ್ದ) ಬೇರೊಂದು ಸ್ಥಳದ
ನಿಲ್ಲಬೇಕು; ಇಲ್ಲವೆ ಮೊದಲೇ ಉಸುರು ಬಿಡುವ ಕಾರ್ಯವನ್ನು ಮು
ಸಿರಬೇಕು, ಎಂದು ಹೇಳುವರು. ಇದರಿಂದ ಇವರು ತಮ್ಮ ಅರ್ಥಾಭಿ
ಮಾನವನ್ನಷ್ಟೇ ಹೊರಪಡಿಸಿದರಲ್ಲದೆ, ಛಂದಸ್ಸಿನ ಅಭಿಮಾನವನ್ನೂ
ಸ್ವರ-ತಾಲ-ಲಯ ಮುಂತಾದ ಪದ್ಯೋಚಿತ ಗಾನಾನಂದವನ್ನೂ, ಲಕ್ಷ್ಯ
ಮಾಡಲಿಲ್ಲೆಂದು ಬಹು ಕಷ್ಟದಿಂದ ಹೇಳಬೇಕಾಗುವದು. ಗದ್ಯದಂತೆ ಪದ್ಯ
ವನ್ನು ಮನಸೋಕ್ತವಾಗಿ ಅನ್ನುವದು ಸ್ವತಂತ್ರವೂ ಸಯುಕ್ತವೂ ಆಗಿ
ರುವದಿಲ್ಲ. ಅದು ಬೇರೆ ಶಾಸ್ತ್ರದಿಂದ ನಿರ್ಬಂಧಿತವಾಗಿದೆ. ಒಂದೇ ಒಂದು
ಅರ್ಥದ ಕಡೆಗೆ ಲಕ್ಷ್ಯವಿಟ್ಟು, ಒಂದು ರೀತಿಯಿಂದ ಧನ್ಯತೆಯೆನ್ನು ಪಡೆ
ಯುವ ಭರದಲ್ಲಿ, ಛಂದಸ್ಸಿನ ನಿಯಮಗಳನ್ನು ಹೊಸದಾಗಿ ಮುರಿದು,
ಪದ್ಯದ ಕರ್ಣಮಾಧುರ್ಯವನ್ನು ಹಾಳುಮಾಡಿದ ಪಾತಕ್ಕನನ್ನು ಸಂಪಾ
ದಿಸಿದರೆ, ಅದರಲ್ಲೇನೂ ಪುರುಷಾರ್ಥವಿಲ್ಲ! ಆದ ಕಾರಣ ಪದ್ಯವನ್ನು
ಅನ್ನುವಾಗ, ಅರ್ಥ ಸೌಷ್ಟವದ ನೆವಮಾಡಿ, ಅದರ ನೈಸರ್ಗಿಕ ಹಕ್ಕಾ
ಗಿರುವ ಛಂದಸ್ಸಿನ ಕಡೆಗೆ ದುರ್ಲಕ್ಷ ಮಾಡುವದು, ಎಷ್ಟು ಮಾತ್ರವೂ
ಸರಿಯಾದದ್ದಲ್ಲ! ಹೀಗೆ ಪದ್ಯದ ಮೇಲೆ ಜಿತ್ತಾಯವನ್ನು ಮಾಡಲಿಕ್ಕೆ ಯಾ

ಗೂ ಬಾಧ್ಯತೆಯಿಲ್ಲ. ಯತಿಯಿದ್ದಲ್ಲೇ ಉಸುರುಬಿಟ್ಟು ಅನ್ನುವದು, ಸ್ವಭಾವಿಕವೂ ಯುಕ್ತವೂ ಶ್ರೇಯಸ್ಕರವೂ ಆಗಿದೆ.

ಲೋಭ ವಿರುವದು ಇಂತಿ ವಿಜ್ಞಾಪನೆಗಳು.

ನ್ನಡ ಶಾಲಾ ವಂಟಮುರಿ
(ಜಿ|| ಬೆಳಗಾವ)
ತಾ|| ೫-೨-೧೯೧೧ಳ.

ತಮ್ಮ ವಿಧೇಯ.
ಬಸಪ್ಪ ಚನ್ನಪ್ಪ ಪಟ್ಟೇದ.
ಹೆ|| ಮಾಸ್ತರ.

ಕಳೆದ ಜನವರಿ ತಿಂಗಳ ಶಾಲಾಪತ್ರಕದಲ್ಲಿ ಕೊಟ್ಟ ಸಮಸ್ಯೆಗಳ ಪೂರಣಗಳು.

ತ್ರಿದಶಾರಿರಾವಣನೆ, ಗೃ।
ಹದತ್ತಣಿಂ, ವಶದಾಕರಥಿ ಸೀತೆಯಂ, ತರ ॥
ಲು ದೋಷವುಂ, ಕಳೆಯಲ್ಕೆ ಸ।
ಲೆ ದಾನವ ನೀತ ಮೂರ್ತಿ, ಕುಣಿದುದನಲದೊಳು ॥೧॥
ವಿವಿಧ ಪಣ್ಯ ಮಹಿಲೆಯರಿರ।
ಲವನಿಂದ್ರಂ, ತ್ರಿದಿವ ಪತಿವಾದೊಡಂ ಪೋದಂ ॥
ಪ್ರವರ ಮುನಿಕಲತ್ರಂ, ಸು।
ವಿವೇಕವುದಾವುದು ಮಾರಶರಪೀಡಿತನೊಳ್ ॥೨॥

ಭಟ್ಟಕೇಶವ ಶರ್ಮಾ ಗಲಗಲಿ.

ಜ್ವಲನಂ ತನ್ನಯ ರೋಗವ।
ಕಳೆಯಲ್ವಾಂಡವನಿಂ ಕೂಡಿ ಖಾಂಡವವನದ ॥
ಸಲೆ ದಹನವ ಗೆಯ್ಯುತಲಿರ।
ಲೆಲೀಂದ್ರನ ವನೀತ ಮೂರ್ತಿಕುಣಿದುದನಲದೊಳ್ ॥೧॥
ಅವನಿಜನಕಂ ಪ್ರವರಕೇ।
ಶವ ಸೂನುವು ಪಿತಾಮಹನಾದೊಡೇಂ ಪೋಪಂ ॥
ಜವದಿಂ ಸ್ವಕೀಯ ಪುತ್ರಿಯ।
ವಿವೇಕವುದಾವುದು ಮಾರಶರಪೀಡಿತನೊಳ್ ॥೨॥

ತಮ್ಮ ವಿಧೇಯ ಶಿಷ್ಯ.
ಎಚ್. ಎಮ್. ಹುದ್ದಾರ.

ಗುರುವರ್ಯ ರಾವಸಾಹೇಬ ಕನ್ನಡ ಶಾಲಾಪತ್ರಿಕೆಯ ಎಡಿಟರರ
ವರ ಸನ್ನಿಧಿಗೆ:—

ತಮ್ಮ ಶಿಷ್ಯರಲ್ಲೋರ್ವನ ವಿನಂತಿ ಏನಂದರೆ:—ಜನವರಿ ತಿಂಗಳ
ಮಾಸಪತ್ರಿಕೆಯಲ್ಲಿ ರಾ॥ ರಾ॥ ಎಡೆಕರ ವಾಸ್ತವ್ಯ [illegible]ತನ ಜಾಣ ಮನ
ಇವರು ಕೊಟ್ಟ ಎರಡು ಉದಾಹರಣೆಗಳನ್ನು [illegible]ಮತಿಗನುಸ
ರವಾಗಿ ಬಿಡಿಸಿ ಕಳಿಸಿರುತ್ತೇನೆ. ಯೋಗ್ಯ [illegible]ಲ್ಲಿ ತಮ್ಮ ಮಾಸಪತ್ರಿ
ಕೆಯಲ್ಲಿ ಸ್ಥಳ ದೊರೆದೀತೆಂದು, ಅಂಜಲಿಬದ್ಧವಾಗಿ ಬೇಡಿಕೊಳ್ಳುತ್ತೇನೆ

ಗನೇ ಉದಾಹರಣೆ:—ಆ ಬ್ರಾಹ್ಮಣನು ಕ್ಷ ಹೂವು ತೆಗೆದುಕೊಂ
ಡು ಪೂಜೆಗೆ ಹೋದನೆಂದೂ, ಮತ್ತು ಯ ಹೂವು ಪ್ರತಿಯೊಂದು ದೇವ
ರಿಗೆ ಏರಿಸಿದನೆಂದೂ, ತಿಳಿಯುತ್ತೇನೆ.

ಗನೇ ಗುಡಿಯಲ್ಲಿ ಹೋಗುವಾಗ್ಗೆ ಅವನ ಹತ್ತರ ಕ್ಷ, ಹೂವು ಉಂಟು
,, ಹೋದಾಗ್ಗೆ ,, ,, ೨ ಕ್ಷ ಹೂವು ಆದವು
,, ದೇವರಿಗೆ ಏರಿಸಿದಾಗ್ಗೆ ೨ ಕ್ಷ– ಯ ಉಳಿದವು
,, ಯಿಂದ ಹೊರಗೆ ಬಂದಾಗ್ಗೆ ೪ ಕ್ಷ–೨ ಯ ಆದವು
೨ನೇ ಗುಡಿಯಲ್ಲಿ ಪ್ರವೇಶ ಮಾಡಿದಾಗ್ಗೆ, ೮ ಕ್ಷ–೪ ಯ ಆದವು
,, ದೇವರಿಗೆ ಅರ್ಪಿಸಿದಾಗ್ಗೆ ೮ ಕ್ಷ–೬ ಯ ಉಳಿದವು
,, ಯಿಂದ ಹೊರಗೆ ಬಂದಾಗ್ಗೆ ೧೬ ಕ್ಷ–೧೦ ಯ ಆದವು
೩ನೇ ಗುಡಿಯಲ್ಲಿ ಪ್ರವೇಶ ಮಾಡಿದಾಗ್ಗೆ ೩೨ ಕ್ಷ–೨೦ ಯ ಆದವು
,, ದೇವರಿಗೆ ಅರ್ಪಿಸಿದಾಗ್ಗೆ, ೩೨ ಕ್ಷ–೩೧ ಯ.
,, ಯಿಂದ ಹೊರಗೆ ಬಂದಾಗ್ಗೆ ಏನೂ ಉಳಿಯಲಿಲ್ಲ.

∴ ೩೨ ಕ್ಷ–೩೧ ಯ = ೦ ∴ ೩೨ ಕ್ಷ = ೩೧ ಯ

∴ ಕ್ಷ:ಯ :: ೩೧:೩೨. ಅಂದ ಬಳಿಕ ಆಬ್ರಾಹ್ಮಣನ ಹತ್ತರ,
ಬಯಿದ ಹೂವಿಗೂ, ಮತ್ತು ಏರಿಸಿದ ಹೂವಿಗೂ ೩೧:೩೨ ಈ ಪ್ರಮಾಣ
ವಿತ್ತು. ಇದೇ ಪ್ರಮಾಣದಿಂದ ಅನೇಕ ಉತ್ತರಗಳು ಈ ಲೆಕ್ಕಕ್ಕೆ
ಹೊರಡುತ್ತವೆ.

∴ ೩೧ ಹೂ ಅವನ ಬಳಿಯಲ್ಲಿದ್ದವು.

ಉತ್ತರ.

———

೩ನೇ ಉದಾಹರಣೆಯಲ್ಲಿ, ಮೊದಲನೇ ಬುದ್ದಲಿಕೆಯೊಳಗೆ ೧೦ ಕೇರು ಎಣ್ಣೆಯುಂಟೆಂದು ನೆನಿ.

೧ನೇ ಬು. (೧೦ ಸೇರಿನದು.)	೩ನೇ ಬು. (೭ ಸೇರಿನದು)	೪ನೇ ಬು. (೩ ಸೇರಿನದು.)	
೧೦ ಸೇ.	೦ ಸೇ.	೦ ಸೇ.	೪ನೇ ಬುದ್ದಲಿಕೆಯಿಂದ ೩ ಸಾರೆ ತುಂಬಿ,
೧ ಸೇ.	೭ ಸೇ.	೩ ಸೇ.	೩ನೇದಕ್ಕೆ ಹಾಕಿ ೪ನೇ ಸಾರೆ ತುಂಬಿ ಇಡು.
೧ ಸೇ.	೭ ಸೇ.	೩ ಸೇ.	೪ನೇ ಬುದ್ದಲಿಕೆಯೊಳಗಿಂದ ಎರಡನೇ ಬುದ್ದಲಿಕೆ ತುಂಬುವ ವರೆಗೆ ಸುರುವು.
೮ ಸೇ.	೦ ಸೇ.	೩ ಸೇ.	೪ನೇ ಬುದಲಿಕೆಯೊಳಗಿನ ಎಲ್ಲ ಎಣ್ಣೆಯನ್ನು ೧ನೇ ಬುದ್ದಲಿಕೆಗೆ ಸುರುವು.
೮ ಸೇ.	೩ ಸೇ.	೩ ಸೇ.	೪ನೇ ಬುದ್ದಲಿಕೆಯೊಳಗಿನ ಎಲ್ಲ ಎಣ್ಣೆಯನ್ನು ೩ನೇ ಬುದ್ದಲಿಕೆಗೆ ಸುರುವು.
೫ ಸೇ.	೩ ಸೇ.	೩ ಸೇ.	೧ನೇ ಬುದ್ದಲಿಕೆಯಿಂದ ೩ನೇ ಬುದ್ದಲಿಕೆಯನ್ನು ತುಂಬು.
೫ ಸೇ.	೫ ಸೇ.	೦	೩ನೇ ೪ನೇ ಬುದ್ದಲಿಕೆಗಳ ಎಣ್ಣೆಯನ್ನು ೩ನೇ ೧ದರಲ್ಲಿ ಕೂಡಿಸು.

ಇದೇ ಬೇಕಾದ ಉತ್ತರ.

ತಮ್ಮ ವಿಧೇಯ ಶಿಷ್ಯ
K. S. Hombal,
Master.

Janage,
Taluka Haliyal, Dist. Kanara,
Date 16-1-1913.

ಗುರುವರ್ಯ ರಾವಸಾಹೇಬ ಕನ್ನಡ ಶಾಲಾಪತ್ರಿಕೆಯ ಎಡಿಟರರ ಮೆರೆ ಸನ್ನಿಧಿಗೆ.—

ತಮ್ಮ ಶಿಷ್ಯರಲ್ಲೊಬ್ಬಳ ವಿನಂತಿ ಏನೆಂದರೆ. ಜನವರಿ ತಿಂಗಳ ಮೊಸೆ ಪತ್ರಿಕೆಯಲ್ಲಿ ಬಿ. ಆಯ್. ಎಡೇಕರರವರು ಕೊಟ್ಟ ಎರಡು ಗಣಿತದ ಉದಾಹರಣೆಗಳನ್ನು ನನ್ನ ಅಲ್ಪ ಮತಿಗೆ ತಿಳಿದ ಮಟ್ಟಿಗೆ ಬಿಡಿಸಿದ್ದೇನೆ. ಯೋಗ್ಯಕಂಡಲ್ಲಿ ಇದಕ್ಕೆ ತಮ್ಮ ಕರಕಮಲದಿಂದ ಉದ್ಭವಿಸುವ ಪತ್ರಿಕೆಯಲ್ಲಿ ಸ್ಥಳದೊರದೀತೆಂದು ನಂಬಿದ್ದೇನೆ.

ಗನೇ ಉದಾಹರಣೆ:— ೩ನೇ ದೇವಾಲಯದಲ್ಲಿ ಒಂದು ಬುಟ್ಟಿ ಹೂವು ದೇವರಿಗೆ ಏರಿಸಿದೆವೆಂದು ತಿಳಿದು ಲೆಕ್ಕವನ್ನು ಬಿಡಿಸುವಾ.

ಇದರಿಂದ ಆ ಗುಡಿಯಲ್ಲಿ ಹೋಗುವ ಕಾಲಕ್ಕೆ ಅರ್ಧ ಬುಟ್ಟಿ ಹೂವುಗಳು ಇರಬೇಕಾಯಿತು

ಇನ್ನು ಎರಡನೇ ದೇವಾಲಯದಲ್ಲಿ ದೇವರಿಗೆ ಏರಿಸಿ ಹೊರಗೆ ಬರುವಾಗ ಉಳಿದ ಹೂವುಗಳ ಇಮ್ಮಡಿಯೊಗಿ ಅರ್ಧ ಬುಟ್ಟಿ ಆಗಿರುವವು. ಅಂದ ಬಳಿಕ ೩ನೇ ದೇವರಿಗೆ ಏರಿಸಿ ೪ ಹೂವುಗಳು ಉಳಿದಿದ್ದವೆಂಬಂತೆ ಆಯಿತು.

ಎರಡನೇ ದೇವರಿಗೂ ಒಂದು ಬುಟ್ಟಿ ಹೂವುಗಳನ್ನು ಏರಿಸಿರುವನು. ಆದ ಕಾರಣ ಆ ದೇವರಿಗೆ ಹೂವುಗಳನ್ನು ಏರಿಸುವ ಮೊದಲು $೧+೪$ ಹೂವುಗಳು ಇದ್ದವೆಂಬಂತಾಯಿತು.

ಬುಟ್ಟಿ ೧೪ ಬುಟ್ಟಿ ಹೂವುಗಳು ೩ನೇ ದೇವಾಲಯದಲ್ಲಿ ಹೋದಾಗ ಇದ್ದವು. ೩ನೇ ದೇವಾಲಯದ ಬಾಗಿಲದಲ್ಲಿ ಈ ಹೂವುಗಳ ಅರ್ಧ ಹೂವುಗಳು, ಅಂದರೆ $೧೪ \times ೧/೨ = ೭$ ಬುಟ್ಟಿ ಹೂವುಗಳು ಇದ್ದಂತೆ ಆಯಿತು.

೭ ಬುಟ್ಟಿ ಹೂವಿನ ಅರ್ಧ ಹೂವುಗಳು ಅಂದರೆ $೭ \times ೧/೨ = ೩೧/೨$ ಬುಟ್ಟಿ ಹೂವುಗಳು ೧ನೇ ದೇವಾಲಯದಲ್ಲಿ ದೇವರಿಗೆ ಒಂದು ಬುಟ್ಟಿ ಹೂವುಗಳನ್ನು ಏರಿಸಿದ ಬಳಿಕ ಆತನ ಕೈಯಲ್ಲಿ ಇದ್ದವೆಂಬಂತಾಯಿತು. $೩೧/೨ + ೧ = ೪೧/೨$ ಬುಟ್ಟಿ ಹೂವುಗಳು ಒಂದನೇ ದೇವಾಲಯದಲ್ಲಿದ್ದಾಗ ಇದ್ದವೆಂಬಂತಾಯಿತು.

ಆತನು $೪೧/೨$ ಬುಟ್ಟಿ ಹೂವುಗಳ ಅರ್ಧ ಹೂವುಗಳನ್ನು ಅಂದರೆ $೪೧/೨ \times ೧/೨ = ೨೧/೪$ ಬುಟ್ಟಿ ಹೂವುಗಳನ್ನು ಮನೆಯಿಂದ ತಂದಿದ್ದನೆಂಬಂತಾಯಿತು.

ಶಾಲಾಪತ್ರೆ.

ಪುಸ್ತಕ ೫೦. | ಎಪ್ರಿಲ ೧೯೧೪. | ಸಂಚಿಕೆ ೪.

ಸ್ಫುಟವಿಷಯಗಳು.

೧. ೧೯೧೩-೧೪ನೆಯ ವರ್ಷದಲ್ಲಿ ಶಿಕ್ಷಣದ ಪ್ರಗತಿ.

ಮೆ. ಡೈರೆಕ್ಟರ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನ್‌ರವರ ಕಳೆದ ವರ್ಷದ ವಿದ್ಯಾಖಾತೆಯ ರಿಪೋರ್ಟಿನ ಮೇಲೆ ಸರಕಾರದ ಠರಾವು ಪ್ರಸಿದ್ಧವಾಗಿರುತ್ತದೆ. ಅದರೊಳಗಿನ ಕೆಲವು ಸಂಗತಿಗಳನ್ನು ಇಲ್ಲಿ ಕೊಡುತ್ತೇವೆ:—

ಕಳೆದ ವರ್ಷ ಮುಂಬಯಿ ಇಲಾಖೆಯಲ್ಲಿ ಯಾವತ್ತು ಬಗೆಯ ಶಿಕ್ಷಣಾಲಯಗಳು ೧೬,೪೬೦ ರಿಂದ ೧೭,೧೭೦ ಆದವು; ಹಾಗೂ ಅವುಗಳಲ್ಲಿ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆಯು ೯,೨೨,೬೭೩ ರಿಂದ ೯,೬೩,೫೪೫ ಆಯಿತು. ಶಿಕ್ಷಣಾಲಯಗಳ ಹೆಚ್ಚಿದ ಸಂಖ್ಯೆಯಲ್ಲಿ ಪ್ರಾಥಮಿಕ ಶಾಲೆಗಳೇ ಮುಖ್ಯವಾಗಿರುತ್ತವೆ. ಒಟ್ಟು ೧೫,೩೬೪ ಪ್ರಾಥಮಿಕ ಶಾಲೆಗಳಲ್ಲಿ ೬೦೦ ಹೊಸ ಶಾಲೆಗಳಿರುವವು; ಹಾಗೂ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳ ಸಂಖ್ಯೆಯು ೭,೫೭,೧೫೦ ರಿಂದ ೮,೧೪,೪೮೦ ಆಯಿತು. ಅಂದನೆ, ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳ ಸಂಖ್ಯೆಯು ೫೭೩೩೦ ಹೆಚ್ಚಾಯಿತು.

ಕಳೆದ ವರ್ಷದಲ್ಲಿ ವಿದ್ಯಾಖಾತೆಯ ಒಟ್ಟು ಖರ್ಚು ೧,೩೬,೧೭,೫೩೭ ರೂಪಾಯಿ ಇದ್ದದ್ದು, ೧,೪೩,೪೭,೪೭೫ ರೂಪಾಯಿ ಆಯಿತು. ಅಂದರೆ, ಕಳೆದ ವರ್ಷ ಶಿಕ್ಷಣಕ್ಕೆ ೧೭,೩೦,೧೭೮ ರೂಪಾಯಿ ಹೆಚ್ಚು ಖರ್ಚು ಆಯಿತು. ಅವುಗಳಲ್ಲಿ ಪ್ರೊವಿನ್ಸಿಯಲ್ ಕಂದಾಯದಿಂದ ೧೫ ಲಕ್ಷ ರೂಪಾಯಿಗಳೂ, ಲೋಕಲ್ ಫಂಡಿನಿಂದ ಸುಮಾರು ಐದು ಲಕ್ಷವೂ ಕೊಡಲ್ಪಟ್ಟವು. ಮುನಿಸಿಪಾಲಿಟಿಗಳ ಖರ್ಚು ಹಿಂದಿನ ವರ್ಷಕ್ಕಿಂತ ಸ್ವಲ್ಪ ಕಡಿಮೆಯಾಯಿತು. ಶಿಕ್ಷಣಕ್ಕೆ ತಗಲಿದ ಒಟ್ಟು ಖರ್ಚಿನಲ್ಲಿ ಪ್ರೊವಿನ್ಸಿಯಲ್ ಕಂದಾಯದೊಳಗಿಂದ ೬೯ ಲಕ್ಷ ರೂಪಾಯಿಗಳು ಕೊಡಲ್ಪಟ್ಟವು. ಮತ್ತು

ಈ ರಕಮಿನಲ್ಲಿ ಸುಮಾರು ೨೭ ಲಕ್ಷ ರೂಪಾಯಿಗಳು ಪ್ರಾಥಮಿಕ ಶಿಕ್ಷಣಕ್ಕೆ ಉಪಯೋಗಿಸಲ್ಪಟ್ಟವು. ಹಿಂದಿನ ವರ್ಷಕ್ಕಿಂತ ಕಳೆದ ವರ್ಷ ಪ್ರಾಥಮಿಕ ಶಿಕ್ಷಣಕ್ಕೆ ೪ ಲಕ್ಷ ರೂಪಾಯಿಗಳು ಹೆಚ್ಚು ಖರ್ಚು ಮಾಡಲ್ಪಟ್ಟವು.

ಕಳೆದ ವರ್ಷದಲ್ಲಿ ಒಟ್ಟು ಜನಸಂಖ್ಯೆಯ ಮಾನದಿಂದ ಶಿಕ್ಷಣಾಲಯಗಳಲ್ಲಿದ್ದ ವಿದ್ಯಾರ್ಥಿಗಳ ಸಂಖ್ಯೆಯ ಪ್ರಮಾಣವು ನೂರಕ್ಕೆ ೩.೩ ರಿಂದ ೩.೬ ಆಯಿತು. ಹಾಗೂ ಒಟ್ಟು ಗ್ರಾಮಗಳಲ್ಲಿ ನೂರಕ್ಕೆ ೪೨.೧ ಗ್ರಾಮಗಳಲ್ಲಿ ಶಾಲೆಗಳಿದ್ದವು.

ಪ್ರಾಥಮಿಕ ಶಾಲೆಗಳ ಸಂಬಂಧದಿಂದ ಕೆಳಗೆ ಬರೆದ ಸಂಗತಿಗಳು ಮಹತ್ವವುಳ್ಳವಿರುತ್ತವೆ:—

೧. ಕಳೆದ ವರ್ಷ ಒಟ್ಟು ೩೮೭ ಹೊಸ ಲೋಕಲ್‌ಬೋರ್ಡ ಶಾಲೆಗಳು ಸ್ಥಾಪಿಸಲ್ಪಟ್ಟವು. ಅವುಗಳಲ್ಲಿ ಬಹಳ ಶಾಲೆಗಳು ಮಧ್ಯಭಾಗದಲ್ಲಿ ಸ್ಥಾಪಿಸಲ್ಪಟ್ಟಿರುತ್ತವೆ. ಕಳೆದ ನಾಲ್ಕು ವರ್ಷಗಳಲ್ಲಿ ಒಟ್ಟು ಸುಮಾರು ೧೯೦೦ ಹೊಸ ಪ್ರಾಥಮಿಕ ಶಾಲೆಗಳು ಸ್ಥಾಪಿಸಲ್ಪಟ್ಟವು. ಈಗ ಬಹು ತರವಾಗಿ ಜನರಿಗೆ ನಿಜವಾಗಿ ಬೇಕಾಗಿದ್ದಲ್ಲೆಲ್ಲ ಶಾಲೆಗಳು ಸ್ಥಾಪಿಸಲ್ಪಟ್ಟಿರುವದರಿಂದ ಇನ್ನು ಮುಂದೆ ಹೊಸ ಶಾಲೆಗಳನ್ನು ಸ್ಥಾಪಿಸಬೇಕಾದರೆ ಊರೊಳಗಿನ ಮುಖಂಡರಾದ ಒಬ್ಬಿಬ್ಬರಿಗೆ ಮಾತ್ರ ಶಾಲೆಯು ಬೇಕಾಗಿರುವದೋ, ನಿಜವಾಗಿ ಊರ ಎಲ್ಲ ಜನರಿಗೂ ಶಾಲೆಯು ಬೇಕಾಗಿರುವದೋ ಎಂಬ ಬಗ್ಗೆ ವಿಶೇಷವಾಗಿ ವಿಚಾರಮಾಡಲ್ಪಡುವದು; ಹಾಗೂ ಇನ್ನು ಮುಂದೆ ಮಾಡಲ್ಪಡುವ ಬಹುತರ ಹೆಚ್ಚು ಖರ್ಚು ಇದ್ದ ಶಾಲೆಗಳ ಮತ್ತು ಶಾಲಾಧ್ಯಾಪಕರ ಸ್ಥಿತಿಯನ್ನು ಸುಧಾರಿಸುವದಕ್ಕೆ ಉಪಯೋಗಿಸಲ್ಪಡುವದು.

೨. ಸದ್ಯಕ್ಕೆ ನೂರರಲ್ಲಿ ೩೮ ಶಾಲೆಗಳು ಮಾತ್ರ ತಮ್ಮ ಸ್ವಂತ ಇಮಾರತುಗಳಲ್ಲಿ ಅವೆ. ಸ್ವಲ್ಪ ಖರ್ಚಿನಿಂದ ಆಗುವ ದೇಶೀ ಪದ್ಧತಿಯ ಇಮಾರತುಗಳನ್ನು ಹಲವು ಸ್ಥಳಗಳಲ್ಲಿ ಕಟ್ಟಿಸಿ, ಅನುಭವ ತಕ್ಕೊಳ್ಳಬೇಕೆಂದು ಸರಕಾರದವರು ಅಪ್ಪಣೆ ಮಾಡಿದ್ದಾರೆ. ಇಂಥ ಇಮಾರತುಗಳು ಚನ್ನಾಗಿ ಉಪಯೋಗಕ್ಕೆ ಬರುತ್ತವೆಂದು ಸಿಂಹಲ ದ್ವೀಪದಲ್ಲಿ ತೆಗೆದುಕೊಂಡ ಅನುಭವದಿಂದ ಕಂಡು ಬಂದಿರುತ್ತದೆ.

೩. ಕೆಲವೆಡೆಯಲ್ಲಿ, ಮುಖ್ಯವಾಗಿ, ಪುಣೆ ಮತ್ತು ಪೂರ್ವಬಾನದೇಶ ಜಿಲ್ಲೆಗಳಲ್ಲಿ ಕೆಲವರು ಸದ್ಗೃಹಸ್ಥರೂ ಸನಾಜಸೇವರೂ ಶಾಲಾಗೃಹಗಳನ್ನು ಧರ್ಮಾರ್ಥವಾಗಿ ಕಟ್ಟಿಸಿಕೊಟ್ಟಿರುವರು. ಈ ಪ್ರಚಾರವು ಸಂತೋಷಕರವಾಗಿರುತ್ತದೆ.

೪. ಕಳೆದ ವರ್ಷ ಮುನಸಿಪಾಲಿಟಿಗಳಿಗೆ ಸಹಾಯ್ಯಾರ್ಥವಾಗಿ ಸರಕಾರದಿಂದ ೧,೩೦,೦೦೦ ರೂಪಾಯಿ ಹಣವು ಕೊಡಲ್ಪಟ್ಟಿತು.

೫. ಎಲ್ಲ ದೇಶಭಾಷೆಗಳಲ್ಲಿ ನಡೆಯುವ ಶಾಲೆಗಳ ಅಭ್ಯಾಸಕ್ರಮವು ಸುಧಾರಿಸಲ್ಪಟ್ಟಿತು.

೬. ಕೆಲವು ಮುನಿಸಿಪಾಲಿಟಿಯವರು ಶಾಲಾ ಮಾಸ್ತರರಿಗೆ ಕೋಡಿನ ಪ್ರಕಾರ ಪಗಾರವನ್ನು ಕೊಟ್ಟಿರುವರು.

೭ ಶಾಲೆಯೊಳಗಿನ ಮೇಲಿನ ವರ್ಗಗಳನ್ನು ಮುಂಜಾನೆಯಲ್ಲಿಯೂ, ಕೆಳಗಿನ ವರ್ಗಗಳನ್ನು ಮಧ್ಯಾಹ್ನದಲ್ಲಿಯೂ ಹಾಕಿ ಕೆಲವು ಕಡೆಯಲ್ಲಿ ಅನುಭವ ತಕ್ಕೊಳ್ಳುವದಕ್ಕೆ ಪ್ರಾರಂಭ ಮಾಡಿರುತ್ತದೆ.

೮. ಇನ್ಸಪೆಕ್ಶನ್ ಅಧಿಕಾರಿಗಳ ಅಧ್ಯಕ್ಷತೆಯ ಕೆಳಗೆ ಕೆಲವು ಕಡೆಯಲ್ಲಿ ಶಾಲಾಧ್ಯಾಪಕರ ಕಾನಫರನ್ಸ ಅಂದರೆ (ಸಂಭಾಷಣಸಭೆ) ಗಳು ನಡೆದವು.

೯. ಮಲೇರಿಯ (ಚಳಿ ಜ್ವರದ ವಿಷ) ವು ವಿಶೇಷವಾಗಿರುವ ಹಲವು ಪ್ರದೇಶಗಳಲ್ಲಿ ಹುಡುಗರಿಗೆ ಮೋಫತ್ತಾಗಿ ಕೊಯಿನಲ್ಲು ಕೊಡಲ್ಪಟ್ಟಿತು.

೧೦. ಬಂದು ಲೋಕಲ್‌ಬೋರ್ಡ ಶಾಲೆಯ ಯಾವತ್ತು ವಿದ್ಯಾರ್ಥಿಗಳ ಫೀಯನ್ನು ಮಾಫೀ ಮಾಡುವದಕ್ಕೋಸ್ಕರ ಒಬ್ಬ ಗೃಹಸ್ಥರು ಹಣವನ್ನು ಕಟ್ಟಿದರು.

---

೨. ಹಿಂದುಸ್ತಾನ-ಸಿಂಹಲದ್ವೀಪಗಳನ್ನು ಕೂಡಿಸುವ ಹೊಗೆಬಂಡಿಯ ಮಾರ್ಗ.

ಕೆಳೆದ ತಿಂಗಳಲ್ಲಿ ಹಿಂದುಸ್ತಾನ-ಸಿಂಹಲದ್ವೀಪಗಳನ್ನು ಕೂಡಿಸುವ ಹೊಗೆಬಂಡಿಯ ಮಾರ್ಗವನ್ನು ಪ್ರಾರಂಭವಮಾಡುವ ಸಮಾರಂಭವು ಮುದ್ರಾಸದ ಗವ್ಹರ್ನರರವರಿಂದ ನೆರವೇರಿಸಲ್ಪಟ್ಟಿತು. ಹಿಂದುಸ್ತಾನ-ಸಿಂಹಲದ್ವೀಪಗಳನ್ನು ಹೊಗೆಬಂಡಿಯ ಮಾರ್ಗದಿಂದ ಕೂಡಿಸುವ ವಿಚಾರವು ಸುಮಾರು ೪೦ ವರ್ಷದ

ಹಿಂದೆ ಮೊದಲು ಹುಟ್ಟಿತು. ಆದರೆ ಆ ಕೆಲಸಕ್ಕೆ ಸುಮಾರು ೩೫೦ ಲಕ್ಷರೂಪಾಯಿ ಖರ್ಚು ಬೀಳುವದೆಂದು ಅಂದಾಜು ಮಾಡಲ್ಪಟ್ಟಿದ್ದರಿಂದ ಇಷ್ಟು ಖರ್ಚು ಮಾಡಿದರೆ ವ್ಯಾಪಾರದೃಷ್ಟಿಯಿಂದ ಲಾಭವಾಗಲಾರದೆಂದು ಕಂಡು ಬಂದದ್ದರಿಂದ ಆ ವಿಚಾರವು ಕೆಲವು ಕಾಲ ಹಾಗೆಯೇ ಮೂಲೆಗೆ ಬಿದ್ದಿತು. ಕಡೆಗೆ ಅಡಾಮ್ಸ್‌ಬ್ರಿಜ್ಜಿನ ಹತ್ತಿರ ಸಮುದ್ರ ಸ್ವಲ್ಪಭಾಗವನ್ನು ಬಿಟ್ಟು, ಅಲ್ಲಿಯವರೆಗೆ ಎರಡೂ ಕಡೆಯಿಂದ ಹೊಗೆಬಂಡಿಯ ಮಾರ್ಗವನ್ನು ಮಾಡುವದು ಸನ್ ೧೯೦೦ನೇ ಇಸವಿಯಲ್ಲಿ ಗೊತ್ತಾಗಿ, ಕಳೆದತಿಂಗಳ ೧೯ನೆಯ ತಾರೀಖಿನಿಂದ ಹಿಂದುಸ್ತಾನದಿಂದ ಸಿಂಹಲದ್ವೀಪಕ್ಕೆ ಹೋಗುವ ಪ್ರಯಾಣಸ್ಥರ ಅನಾನುಕೂಲತೆಯು ಬಹಳವಾಗಿ ಕಡಿಮೆಯಾಯಿತು. ಈಗ ಪ್ರಯಾಣಸ್ಥನು ಎಂದಿನಂತೆ ಮಂಡಪಮ್ ಎಂಬಲ್ಲಿ ಹಿಂದುಸ್ತಾನವನ್ನು ಬಿಟ್ಟನಂತರ ಸುಮಾರು ೭೦೦೦ ಫೂಟು ನೀರಿನ ಕಾಲುವೆಯೊಳಗಿಂದ ಡೋಣಿಯೊಳಗೆ ಕುಳಿತು ರಾಮೇಶ್ವರಕ್ಕೆ ಮುಟ್ಟುವನು. ಅಲ್ಲಿಂದ ಅವನು ಹೊಗೆಬಂಡಿಯ ಮಾರ್ಗವಾಗಿ ಧನೇಶಕೋಡಿ ಎಂಬಲ್ಲಿಗೆ ಹೋಗುವನು. ಅಲ್ಲಿ ಉಗಿಯಿಂದ ನಡೆಯುವ ಡೋಣಿಯಲ್ಲಿ ಕುಳಿತು ಸುಮಾರು ಒಂದೂವರೆ ತಾಸಿನಲ್ಲಿ ಸಿಂಹಲದ್ವೀಪದಲ್ಲಿದ್ದ ತಲೈಮನಾರ್ ಎಂಬಲ್ಲಿ ಇಳಿಯುವನು. ಅಲ್ಲಿಂದ ಸಿಂಹಲದ್ವೀಪದ ಹೊಸ ಹೊಗೆಬಂಡಿಯ ಮಾರ್ಗವಾಗಿ ಕೊಲೊಂಬೋಕ್ಕೆ ಹೋಗಿ ಮುಟ್ಟುವನು.

ಈ ಹೊಸ ಮಾರ್ಗದಿಂದ ವ್ಯಾಪಾರಸಂಬಂಧದಿಂದ ಸದ್ಯಕ್ಕೆ ವಿಶೇಷ ಹೆಚ್ಚು ಕಡಿಮೆಯಾಗುವಂತೆ ತೋರುವದಿಲ್ಲ. ಆದರೆ ಹಿಂದುಸ್ತಾನಕ್ಕೂ ಸಿಂಹಲದ್ವೀಪಕ್ಕೂ ಹೋಗಿಬರುವ ಜನರ ಸಂಖ್ಯೆಯು, ಮುಖ್ಯವಾಗಿ, ಮದ್ರಾಸ ಇಲಾಖೆಯಿಂದ ಸಿಂಹಲದ್ವೀಪದ ಚಹಾದ ತೋಟಗಳಿಗೆ ಹೋಗುವ ಕೂಲಿಕಾರರ ಸಂಖ್ಯೆಯು ಬಹಳವಾಗಿ ಬೆಳೆಯಬಹುದಾದ್ದರಿಂದ ಈ ಹೊಸ ಮಾರ್ಗದಿಂದ ಲಾಭವಾದರೂ ಆಗಬಹುದು.

---

೩. ಎಲೆಯಡಿಕೆಯನ್ನು ತಿನ್ನೋಣ.

ಎಲೆಯಡಿಕೆಯನ್ನು ತಿನ್ನುವದರಿಂದುಂಟಾಗುವ ದುಷ್ಪರಿಣಾಮವನ್ನು ಕುರಿತು ಲಖನೌದೊಳಗಿನ ಡಾ. ಮ್ಯಾನ್ ಎಂಬವರು ಮೊನ್ನೆ ಮೊನ್ನೆ ಒಂದು ಲೇಖನವನ್ನು ಪ್ರಸಿದ್ಧಿಸಿರುವರು. ಅದರ ಅಭಿಪ್ರಾಯವೇನೆಂದರೆ:—"ತಿನುವ

ಎಲೆಯಿಂದ ಸ್ನಾಯುಗಳು, ಜಠರ, ಮತ್ತು ಹೃದಯ ಇವು ಬಲಹೀನವಾಗುವವು. ಅಡಿಕೆಯಿಂದ ದೃಷ್ಟಿಭ್ರಮವು ಕೆಡುವದು. ಸುಣ್ಣದಿಂದ ಎಲುಬುಗಳು ಜೀರ್ಣವಾಗಿ ಮಾಂಸವು ನಷ್ಟವಾಗುವದು. ಇವೆಲ್ಲವನ್ನು ಕೂಡಿಸಿ ಸೇವಿಸುವದರಿಂದ ಮೂಗುನೋವು, ಅರಸುಹುಣ್ಣು ಎಂಬ ರೋಗಗಳು ಉಂಟಾಗುವವು. ಹಾಗು ತಂಬಾಕ-ಕಾಚುಗಳಿಂದ ಈ ರೋಗಗಳ ಬೆಳುವಣಿಗೆಗೆ ಉತ್ತೇಜನವು ದೊರೆಯುವದು."

ತಂಬಾಕದ ವಿಷಯದಲ್ಲಿ ಡಾ. ಮ್ಯಾನ್‌ರವರು ಕೊಟ್ಟ ಅಭಿಪ್ರಾಯದ ಸಂಬಂಧದಿಂದ ಬಹುಶಃ ಮತಭೇದವಾಗಲಿಕ್ಕಿಲ್ಲ. ಆದರೆ ವೀಳ್ಯದ ಎಲೆಯ ಸಂಬಂಧದಿಂದ ನಮ್ಮಲ್ಲಿ ತೀರ ವಿರುದ್ಧವಾದ ಅಭಿಪ್ರಾಯವಿರುವದು. "ಏಕೈವ ವಲ್ಲಿಷು ವಿರಾಜತಿ ನಾಗವಲ್ಲೀ" ಎಂದು ನಮ್ಮ ಪ್ರಾಚೀನ ಕವಿಗಳು ವೀಳ್ಯದ ಎಲೆಯ ಸಂಬಂಧದಿಂದ ಗೌರವಪರವಾದ ನಿರ್ದೇಶವನ್ನು ಮಾಡಿದ್ದಾರೆ; ಮತ್ತು ತಾಂಬೂಲದ ಸಂಬಂಧದಿಂದ "ತಾಂಬೂಲಂ ಮುಖರೋಗನಾಶಿ ನಿಪುಣಂ ಸಂವರ್ಧನಂ ತೇಜಸೋ ನಿತ್ಯಂ ಜಾಠರವಹ್ನಿ ವೃದ್ಧಿಜನನಂ ದುರ್ಗಂಧದೋಷಾಪಹಂ," ಅಂದರೆ, ತಾಂಬೂಲವು ಮುಖರೋಗವನ್ನು ನಾಶಮಾಡುವದೂ, ತೇಜವನ್ನು ವೃದ್ಧಿಪಡಿಸುವದೂ, ಹಸಿವೆಯನ್ನು ಬೆಳೆಸುವದೂ ಇದ್ದೀತು, ಎಂದು ಆಯುರ್ವೇದವಿದರು ಅದರ ಗುಣಗಳನ್ನು ಹೊಗಳಿದ್ದಾರೆ. ನಮ್ಮ ಧರ್ಮಕೃತ್ಯಗಳಲ್ಲಂತೂ ಪೂಗಫಲತಾಂಬೂಲವನ್ನು ದೇವರಿಗೆ ಅಡಿಗಡಿಗೆ ಅರ್ಪಿಸಬೇಕಾಗುತ್ತದೆ. ಬೆಟ್ಟತಿಕೆಗಂತೂ ಶ್ರೀಗಣಪತಿಯು ತನಗೆ ಮಾಡತಕ್ಕ ಎಲ್ಲ ಮಾನಮರ್ಯಾದೆಗಳನ್ನು ಪ್ರತಿನಿಧಿತ್ವದಿಂದ ಯಾವಾಗಲೂ ಮಾಡಿಸಿಕೊಳ್ಳಲಿಕ್ಕೆ ಕಾಯಮವಾದ ಸನದು ಕೊಟ್ಟಿರುತ್ತಾನೆ. ನವ್ಮೊಳಗೆ ತಾಂಬೂಲವನ್ನು ಸೇವಿಸುವದು ಬಹುಶಃ ನಿತ್ಯಕ್ರಮವಾಗಿರುತ್ತದೆ. ಹೀಗಿರಲು, ಡಾ. ಮ್ಯಾನರವರು ತಾಂಬೂಲವು ಭಯಂಕರವಾದ ರೋಗಗಳ ಕಾರಣವಾಗಿರುವದೆಂದು ಹೇಳುತ್ತಾರೆ. ಆದಕಾರಣ, ನವ್ಮ ಆಯುರ್ವೇದವಿಚಾರದರು ತಾಂಬೂಲದ ತಪ್ಪಿನ ಪುರಾವೆಯನ್ನು ತ್ವರ್ಯವಾಗಿ ಪ್ರಸಿದ್ಧಪಡಿಸುವರೆಂದು ನಂಬುತ್ತೇವೆ; ಹಾಗೂ ತಾಂಬೂಲಸೇವನವು ನಿಜವಾಗಿ ಅಪಾಯಕಾರಕವಾಗಿದ್ದರೆ, ಅದರ ನಿರ್ಣಯವಾಗುವದು ಅತ್ಯವಶ್ಯವಾಗಿದೆ.

೪. ಉಷಃಕಾಲದ ಮಾಹಾತ್ಮ್ಯ.

ಹುಂಚಪಂಚ-ಉಷಃಕಾಲದಲ್ಲಿ ಹಾಸಿಗೆಯಿಂದ ಏಳಬೇಕೆಂದು ಧರ್ಮಶಾಸ್ತ್ರದ ಅಪ್ಪಣೆಯಂಟು. ಸೂರ್ಯೋದಯಕ್ಕೆ ಇನ್ನು ಐದು ಗಳಿಗೆ ಇರುವಾಗಲೇ ಏಳಬೇಕು. ಹೊತ್ತು ಮೂಡುವದಕ್ಕೆ ನಾಲ್ಕು ಗಳಿಗೆ ಇರುವಾಗ ಸಂಧಿಪ್ರಕಾಶವು ಬೀಳಹತ್ತುವದು. ಅದಕ್ಕೇ ಅರುಣೋದಯವೆನ್ನುವರು. ಈ ಸಂಧಿಪ್ರಕಾಶದ ಅವಧಿಯು ಬೇರೆಬೇರೆ ಅಕ್ಷಾಂಶಗಳಲ್ಲಿ ಬೇರೆ ಬೇರೆ ಇರುವದು. ವಿಷುವದ್ವೃತ್ತದಲ್ಲಿ ಈ ಅವಧಿಯು ಕಡಿವೆಯಿದ್ದು ಧ್ರುವಗಳ ಕಡೆಗೆ ಹೋದಂತೆ ಹೆಚ್ಚಾಗುತ್ತ ಹೋಗುವದು.

ಉಷಃಕಾಲದ ಈ ವೇಳೆಯು ಬಹು ಶಾಂತವೂ ಮನೋಹರವೂ ಉಲ್ಲಾಸಕರವೂ ಆಗಿರುವದು. ದೇವರ ಧ್ಯಾನ ಮಾಡುವದಕ್ಕೂ, ಪ್ರವಾಸ ಮಾಡುವದಕ್ಕೂ, ಗಹನವಾದ ತತ್ವಜ್ಞಾನದ ವಿಷಯವಾಗಿ ವಿಚಾರ ಮಾಡುವದಕ್ಕೂ, ಇಲ್ಲವೆ ಯಾವದೊಂದು ಮಹತ್ವದ ಲೇಖನ, ವಾಚನ, ಮನನ ಇವುಗಳನ್ನು ಮಾಡುವದಕ್ಕೂ ಉಷಃಕಾಲದಷ್ಟು ಅನುಕೂಲವಾದ ವೇಳೆಯು ಬೇರೊಂದಿಲ್ಲ, ಕವಿಯ ಕವಿತ್ವವು ಇದೇ ಕಾಲದಲ್ಲಿ ಸ್ಫೂರ್ತಿಗೊಳ್ಳುವದು. ಇದುವರೆಗೆ ಜಗತ್ತಿನಲ್ಲಿ ಆಗಿಹೋದ ಕರ್ತೃತ್ವ ಶಕ್ತಿಯುಳ್ಳ ಮಹಾಪುರುಷರು ಉಷಃಕಾಲದಲ್ಲಿ, ಅಂದರೆ ಮುಂಜಾವಿನಲ್ಲಿ, ಏಳುವವರೇ ಆಗಿದ್ದರು.

ಈಚೆಗೆ ನಮ್ಮಲ್ಲಿಯ ಹಲವು ಒಳ್ಳೆಯ ನಡತೆಗಳು ಹೊರಟು ಹೋಗುತ್ತಿರುವವು. ಮುಂಜಾವಿನಲ್ಲಿ ಏಳುವದು ಅವುಗಳಲ್ಲೊಂದಾಗಿರುವದು. ಈಗ ಮುಂಜಾವಿನಲ್ಲಿ ಏಳುವವರು ನೂರಕ್ಕೊಬ್ಬರೂ ದೊರೆಯುವದು ದುರ್ಲಭವಾಗಿದೆ. ಬಹುತರ ಎಲ್ಲರು ಈ ಉಷಃಕಾಲದ ಶಾಂತವೂ, ರಮ್ಯವೂ, ಉತ್ತೇಜಕವೂ, ಶರೀರಕ್ಕೆ ಹಗುರುತನವನ್ನು ಮತ್ತು ಮನಸ್ಸಿಗೆ ಶಾಂತತೆಯನ್ನು ಉಂಟು ಮಾಡುವದೂ ಆದ ತಂಪಾದ ಹವೆಗೆ ಎರವಾಗುತ್ತಿರೆ. ಮತ್ತು ಈ ಕಾರಣದಿಂದ ಸಮಾಜದಲ್ಲಿ ಕರ್ತೃತ್ವಶಕ್ತಿಯುಳ್ಳವರೂ, ಉದ್ಯೋಗಶೀಲರೂ, ಶಾಂತರೂ ಆದ ಜನರ ಕೊರತೆಯು ತೋರಹತ್ತಿರುವದು.

ಉಷಃಕಾಲದಲ್ಲಿ ಏಳದಿರುವದರಿಂದ ಆಗುವ ಹಾನಿಗಳೂ, ಏಳುವದರಿಂದ ಆಗುವ ಲಾಭಗಳೂ ಲಕ್ಷದಲ್ಲಿ ಬರುವದಕ್ಕಾಗಿ ಈ ಕಾಲದ

ಸೃಷ್ಟಿಸೌಂದರ್ಯದ ಮತ್ತು ಪರಿಸ್ಥಿತಿಯ ನಿರೀಕ್ಷಣವನ್ನು ಮಾಡುವ:—

ಉಷಃಕಾಲದ ಪ್ರಕಾಶವು ಸೌಮ್ಯವಾದದ್ದು ಇರುವದಲ್ಲದೆ, ಸುತ್ತಲಿನ ವಸ್ತುಗಳು ಕಾಣುವದಕ್ಕೆ ಸಾಕಷ್ಟು ಇರುವದು. ಈ ಕಾಲದ ಹವೆಯು ತಂಪಾಗಿದ್ದು ಆಯಾಸವನ್ನು ಕಳೆಯುವದಾಗಿರುವದು; ಮತ್ತು ಹೆಚ್ಚು ಉದ್ಯೋಗವನ್ನು ಮಾಡುವ ಉತ್ಸಾಹವನ್ನು ಕೊಡುವದು. ಆದ್ದರಿಂದ ಪ್ರವಾಸಿಕರು ಉಷಃಕಾಲವನ್ನು ಎದುರು ನೋಡುತ್ತಿರುವರು. ಕಾಲಿಸಿಂದ ನಡೆದು ಹೋಗುವವರಿಗಂತೂ ಈ ಸಮಯಕ್ಕಿಂತ ಅನುಕೂಲವಾದ ಬೇರೆ ಸಮಯವಿಲ್ಲ.

ಉದ್ಯೋಗಶೀಲರೂ ಧನವಿದ್ಯೆಗಳನ್ನು ದೊರಕಿಸುವ ಇಚ್ಛೆಯುಳ್ಳವರೂ ಈ ಕಾಲದಲ್ಲಿಯೇ ತಮ್ಮ ಉದ್ಯೋಗದಲ್ಲಿ ತೊಡಗುವರು. ಸ್ವಾತಂತ್ರ್ಯವನ್ನು ಉಪಭೋಗಿಸುವ ಒಂದು ಹಕ್ಕಿಯಾದರೂ ಈ ಕಾಲದಲ್ಲಿ ತನ್ನ ಗೂಡಿನಲ್ಲಿ ಮಲಗಿರಲಾರದು! ಸೋಮಾರಿ ಮನುಷ್ಯರು ಮಾತ್ರ ಬಿಸಿಲು ಬೀಳುವವರೆಗೆ ಹಾಸಿಗೆಯಮೇಲೆ ಹೊರಳಾಡುತ್ತ ಬೀಳುವರು!!

ಉಷಃಕಾಲದ ವೇಳೆಯು ಮನುಷ್ಯನ ಮನಸ್ಸಿನಲ್ಲಿ ಸದಿಚ್ಛೆಗಳನ್ನು ಹುಟ್ಟಿಸುವದು; ರಾಗ-ದ್ವೇಷ-ಲೋಭ-ಮೋಹಗಳಿಗೆ ಇಂಬುಗೊಡುವದಿಲ್ಲ. ಇದು ಮನಸ್ಸಿನಲ್ಲಿ ಪವಿತ್ರಭಾವನೆ, ಸದಿಚ್ಛೆ, ಭಕ್ತಿ ಮೊದಲಾದವುಗಳನ್ನುಂಟು ಮಾಡುವ ಪವಿತ್ರ ವೇಳೆಯು. ದುರ್ವಿಚಾರಗಳಿಗೂ ದುಷ್ಕೃತ್ಯಗಳಿಗೂ ಅಸ್ಪದ ಕೊಡಬಹುದಾದ ಭಯಂಕರ ರಾತ್ರಿಯು ಹೊರಟು ಹೋಗಿರುವದರಿಂದ ಆಕಾಲದಲ್ಲಿ ಜಾರರು, ಚೋರರು, ಕ್ರೂರರು, ಮೊದಲಾದ ದುಷ್ಟ ಜನರು ಅಡಗಿಕೊಳ್ಳುವದಕ್ಕೆ ತೊಡಗುವರು. ಎಷ್ಟೇ ಕೆಟ್ಟ ಮನುಷ್ಯನಿರಲಿ, ಈ ಕಾಲದಲ್ಲಿ ಅವನ ನೀಚತನವು ಕಡಿಮೆಯಾಗುವದು; ಎಷ್ಟೇ ದುಃಖಿಯಿರಲಿ, ಅವನಿಗೆ ಸ್ವಲ್ಪ ಶಾಂತಿಯು ಸಿಕ್ಕುವದು.

ಅಕಕ್ತರಿಗೂ, ರೋಗಿಗಳಿಗೂ ಕೂಡ ಈ ಕಾಲದಲ್ಲಿ ಚೈತನ್ಯವು ದೊರೆತಂತೆ ಸ್ವಲ್ಪ ಸಮಾಧಾನವೆನಿಸುವದು. ಬೇನೆಯು ಹಿಮ್ಮೆಟ್ಟಿದಂತೆ ತೋರಿ, ಅವರಿಗೆ ಸ್ವಲ್ಪ ಉತ್ಸಾಹವುಂಟಾಗುವದು. ಈ ಪ್ರಕಾರದ ಉತ್ಸಾಹವು ಬೇರೆ ವೇಳೆಯಲ್ಲಿ ಉಂಟಾಗುವದಿಲ್ಲ. ಶರೀರ, ಬುದ್ಧಿ, ಮನಸ್ಸು ಇವೆಲ್ಲಕ್ಕೆ ಉತ್ಸಾಹವನ್ನಿತ್ತು, ಉದ್ಯೋಗದಲ್ಲಿ ಆಸಕ್ತಿ, ಪರ

ಮೇಶ್ವರನಲ್ಲಿ ಭಕ್ತಿ ಮೊದಲಾದ ಸದ್ಗುಣಗಳನ್ನು ಅಭಿವೃದ್ಧಿಪಡಿಸುವ ವೇಳೆಯು ಇಡೀ ದಿವಸದಲ್ಲಿ ಬೇರೆ ಯಾವದೂ ಇಲ್ಲ.

ಊರ್ಧ್ವ ಆಕಾಶದಲ್ಲಿ ಪಸರಿಸಿ, ವಿಚಿತ್ರವೂ ಮನೋಹರವೂ ಆದ ಬಣ್ಣದಿಂದ ಒಪ್ಪುವ ಈ ಉಷಃಕಾಲದ ತೇಜಸ್ಸನ್ನು ನೋಡಿ, ಹಲವರು ಕವಿಗಳು ಕಾವ್ಯಗಳನ್ನು ಬರೆದಿರುವರು. ಆದರೆ ಅವುಗಳಲ್ಲಿಯೂ ಅದರ ಯಥಾರ್ಥ ಸ್ವರೂಪವು ವರ್ಣಿತವಾಗಿಲ್ಲ; ಮತ್ತು ಮನುಷ್ಯನು ಬಂದೀಸವನೆ ಈ ವೇಳೆಯ ರಮಣೀಯವಾದ ದೃಶ್ಯವನ್ನು ನೋಡುತ್ತ ಇದ್ದರೂ ಅವನ ಕಣ್ಣಿಗೆ ತೃಪ್ತಿದೊರೆಯುವದಿಲ್ಲ. ನಿಪುಣನಾದ ಚಿತ್ರಕಾರನು ತನ್ನ ಬುದ್ಧಿಯನ್ನೆಲ್ಲ ವೆಚ್ಚಮಾಡಿದರೂ ಸೃಷ್ಟಿದೇವಿಯ ಈ ಸ್ವರೂಪದ ಯಥಾರ್ಥ ಚಿತ್ರವನ್ನು ಬರೆಯುವದು ಅವನಿಗೆ ಸಾಧಿಸದು. ಹೀಗೆ ಆ ಕಾಲದ ಸೃಷ್ಟಿಸೌಂದರ್ಯವು ಬಹು ಮನೋಹರವಾಗಿರುವದು.

ಸೂರ್ಯನಾರಾಯಣನ ಪ್ರಖರ ಕಿರಣಗಳ ಆಗಮನವನ್ನು ಸೂಚಿಸುವದಕ್ಕೋಸ್ಕರವೇ ಈ ಅರುಣೋದಯವಾಗುತ್ತಿರುವದು. ಇದರ ಕಿರಣಗಳು ಮೋಡಗಳ ಮೇಲೆ ಪಸರಿಸಲು ಅವು ಚಿತ್ರವಿಚಿತ್ರವಾದ ಬಣ್ಣಗಳಿಂದ ಕಂಗೊಳಿಸುವವು. ಈ ಪ್ರಕಾರದ ಉಷಃಕಾಲವು ಸಾಧಕರೇ, ನಿಮ್ಮಲ್ಲಿ ಸಾಮರ್ಥ್ಯವನ್ನುಂಟುಮಾಡುವದಕ್ಕೆ, ನಿಮ್ಮ ಕೀರ್ತಿಯನ್ನು ಪಸರಿಸುವದಕ್ಕೆ, ನಿಮ್ಮ ಇಷ್ಟಾರ್ಥವನ್ನು ಕೊನೆಗಾಣಿಸುವದಕ್ಕೆ, ನಿಮ್ಮ ಜೀವನಯಾತ್ರೆಯನ್ನು ಸುಖರೂಪವಾಗಿ ಸಾಗಿಸುವದಕ್ಕೆ ಪ್ರತಿದಿವಸ ನಿಮ್ಮಿಡೆಗೆ ಬರುತ್ತಿರುವದು. ಆದ್ದರಿಂದ ಏಳಲಾಗ ಬೇಡಿರಿ.

"ಏಳಿರಿ; ಚೈತನ್ಯವು ಬಂದಿತು; ಕತ್ತಲೆ ಹೋಯಿತು; ಪ್ರಕಾಶವು ಬರುತ್ತಿದೆ." ಎಂದು ಪವಿತ್ರವಾದ ವೇದವು ಹೇಳುತ್ತದೆ.—

ಉದ್ಧೀರ್ಷಜೀವೋ ಅಸುರ್ನ ಆಗಾದಪ ಪ್ರಾಗಾತ್ತಮ ಆಜ್ಯೋತಿರೇತಿ । ಋಗ್ವೇದ.

ಮ. ಶಾ. ಪ.

ಚಿಕ್ಕಮಕ್ಕಳ ಸಲುವಾಗಿ ಆಟಗಳ ಯೋಜನೆ.

(ಕಳೆದ ತಿಂಗಳ ಸಂಚಿಕೆಯ ಲನೇ ಪುಟದಿಂದ ಮುಂದೆ ನಾಗಿದ್ದು)

ಎಂಟರಿಂದ ಹದಿನಾರು ವರ್ಷ ವಯಸ್ಸುಳ್ಳ ಹುಡುಗರು ಸಾಧಾರಣವಾಗಿ ಕಣ್ಣುಮುಚ್ಚಾಣಿಕೆ, ಚಿಣ್ಣೀಧಣ್ಣೀ, ಕುಂಟಹಲಿಜೆ, ಗಣೇಶನಆಟ, ಈ ನೊದಲಾದ ಆಟಗಳನ್ನು ಆಡುವರು. ಈ ಎಲ್ಲ ಆಟಗಳಿಂದ ಮನೋರಂಜನವೂ, ಶಾರೀರಿಕ ಹಾಗು ಮಾನಸಿಕ ಶಕ್ತಿಗಳ ಬೆಳವಣಿಗೆಗೆ ಅಲ್ಪ ಸ್ವಲ್ಪ ಪ್ರಮಾಣದಿಂದ ಸಹಾಯವೂ ಆಗುವವಲ್ಲದೆ, ಕೆಲವಷ್ಟಗೆ ಸ್ವಾಭಿಮಾನವು ಜಾಗೃತವಾಗಲಿಕ್ಕೆ ಆಸ್ಪದವಿರುವದು. ಅವರಲ್ಲಿ ಸರಿಕರೊಡನೆ ತಾನು ಮೇಲಾಗಬೇಕೆಂಬ ಹಂಬಲವು ವ್ಯಕ್ತವಾಗುವದು. ಮತ್ತು ಅಪ್ರಾಮಾಣಿಕತನ, ಸುಳ್ಳು ಮೊದಲಾದ ದುರ್ಗುಣಗಳಿದ್ದರೆ ಅವು ಹೊರ ಬೀಳುವವು.

ಹುಡುಗರ ೧೫ ವರ್ಷಗಳ ಮುಂದಿನ ಆಯುಷ್ಯವು ಇನೇ ಅವಧಿಯಲ್ಲಿ ಎಣಿಸಲ್ಪಡುವದು. ಈ ಕಾಲಕ್ಕೆ ಹುಡುಗರು ತಕ್ಕಷ್ಟು ಪ್ರೌಢರಾಗಿರುವರು. ಅವರಿಗೆ ಸಮಾಜದ ಕಲ್ಪನೆಯು ಆಗುವಷ್ಟು ಅವರ ಯೋಗ್ಯತೆಯು ಬೆಳೆದಿರುವದು. ಇಲ್ಲಿಯವರೆಗೆ ಅವರಲ್ಲಿ ಸರಿಕರೊಳಗೆ ತಾವು ಮೇಲಾಗ ಬೇಕೆಂಬ ಬಲವು ಬಲವತ್ತರವಾಗಿತ್ತು. ಮನಸ್ಸಿನಲ್ಲಿ ಇದೇ ಭಾವವನ್ನು ಇಟ್ಟುಕೊಂಡು ಅವರು ಆಟಗಳನ್ನು ಆಡುತ್ತಿದ್ದರು. ಇನ್ನು ಮುಂದೆ ಅವರು ಪಂಗಡಗಳನ್ನು ಮಾಡಿಕೊಂಡು ಆಡುವರು. ಮತ್ತು ತಮ್ಮಲ್ಲಿರುವ ಎಲ್ಲ ಪ್ರಕಾರದ ಶಾರೀರಿಕ ಮಾನಸಿಕ ಶಕ್ತಿಗಳನ್ನು ಕೇವಲ ತಮ್ಮ ಸಲುವಾಗಿಯೇ ಉಪಯೋಗಿಸಿ ಕೊಳ್ಳದೆ, ತಮ್ಮ ಪಂಗಡದ ಸಲುವಾಗಿ ಉಪಯೋಗಿಸಿ ಅದಕ್ಕೆ ಜಯ ಸಂಪಾದಿಸಿ ಕೊಡಲಿಕ್ಕೆ ಯತ್ನಮಾಡುವರು. ಈ ಕಾಲಕ್ಕೆ ಹುಡುಗರಲ್ಲಿ ಸ್ವಜನಪ್ರೀತಿ, ಸಹಾನುಭೂತಿ, ಈರ್ಷೆ, ಧೈರ್ಯ, ಸಾಹಸ, ಕರ್ತವ್ಯದಕ್ಷತೆ, ಮಹತ್ವಾಕಾಂಕ್ಷೆ, ವಿವೇಕ, ನ್ಯಾಯಾನ್ಯಾಯಗಳ ವಿಚಾರ ಇವೇ ಮೊದಲಾದ ಸದ್ಗುಣಗಳು ವ್ಯಕ್ತವಾಗುವವು. ಅವುಗಳ ಸಂಗಡ ವಿರುದ್ಧ ಪಂಗಡದವರ ವಿಷಯವಾಗಿ, ಕೋಪ, ದ್ವೇಷ, ಅಸೂಯೆ ಮೊದಲಾದ ದುರ್ಗುಣಗಳೂ ತೋರಬಹುದು. ತಮ್ಮ ಪಕ್ಷದ ಅಭಿಮಾನದಿಂದಲೂ, ತಮ್ಮ ಜತೆಗಾರರ

ಮೇಲಿನ ಪ್ರೀತಿಯಿಂದಲೂ, ತಮ್ಮೊಳಗಿರುವ ದೋಷಗಳು ಕಾಣದಾಗಿ
ವವು. ಅದೇ, ವಿರುದ್ಧ ಪಂಗಡದವರ ಸಣ್ಣ ಪುಟ್ಟ ದೋಷಗಳು ಬಿಡೆದ
ಕಾಣುವವು. ಅದರಿಂದ ನಾನಾ ಪ್ರಕಾರದ ಮನೋವಿಕಾರಗಳು ಉತ್ಪ
ನ್ನವಾಗುವವು. ಇಂಥ ಪ್ರಸಂಗಗಳಲ್ಲಿ ಉದಾತ್ತಗುಣಮಂಡಿತನೂ,
ಜಾಣನೂ, ವ್ಯವಹಾರಚತುರನೂ ಆದ ಶಿಕ್ಷಕನು ಆ ಹುಡುಗರೊಳಗೆ
ಕೂಡಿಕೊಂಡಿದ್ದು, ಅವರು ಪರಿಪೂರ್ಣವಾದ ಬಾಳುವೆಗೆ ತಕ್ಕವರಾಗು
ವಂತೆ ಯಾವ ಯಾವ ಗುಣಗಳಿಗೆ ಉತ್ತೇಜನವನ್ನು ಕೊಡಬೇಕೆಂಬ
ಬಗ್ಗೆಯೂ, ಯಾವ ಯಾವ ಮನೋವಿಕಾರಗಳನ್ನು ಎಷ್ಟರ ಮಟ್ಟಿಗೆ
ಹತ್ತೊತ್ತಬೇಕೆಂಬ ಬಗ್ಗೆಯೂ ಅಮೂಲಾ ಪ್ರಸಂಗಗಳಲ್ಲಿ ಜಾಗೃತವಹಿಸಿಕ್ಕೆ
ಬೇಕು. ಮತ್ತು ಉದಾತ್ತೆವಾದ ಧ್ಯೇಯವನ್ನು ಮುಂದಿಟ್ಟುಕೊಂಡು ನಡೆ
ಯುವ ರೀತಿಯನ್ನು ವರೋಕ್ಷವಾಗಿ ತನ್ನ ಸ್ವಂತ ಉದಾಹರಣದಿಂದ
ಗೊತ್ತು ಮಾಡಿಕೊಡಬೇಕು. ಇಂಥ ಪ್ರಸಂಗಗಳಲ್ಲಿ ಶಿಕ್ಷಕನ ಆಚರಣೆ
ಯಿಂದ ಆಗುವಷ್ಟು ಪ್ರಯೋಜನವು ವ್ಯಾಖ್ಯಾನಗಳಿಂದ ಆಗುವದಿಲ್ಲೆಂಬ
ಮಾತನ್ನು ಲಕ್ಷದಲ್ಲಿಡತಕ್ಕದ್ದು. ಈ ಅವಧಿಯಲ್ಲಿ ಹುಡುಗರು, ಬೋ,
ತಿಳ್ಳಿ, ಚಿಣಿಪಣಿ, ಜುಟ್ಟಾಟ, ಕ್ರಿಕೆಟ, ಟೆನಿಸ್, ಫುಟ್‌ಬಾಲ್ ಮೊದಲಾದ
ಆಟಗಳನ್ನು ಆಡುವರು. ಈ ಎಲ್ಲ ಆಟಗಳಲ್ಲಿ ಪಂಗಡಗಳನ್ನು ಮಾಡಿ
ಕೊಂಡು ಆಡಬೇಕಾಗುವದು. ಇದಲ್ಲದೆ, ಪಗಡಿ, ಚತುರಂಗ(ಬುದ್ಧಿಬಲ)
ದಶಾವತಾರದ ಗಂಜೀಫ, ಬಿಯಿಳಿಕ ಈ ಮೊದಲಾದ ಆಟಗಳನ್ನು ಪ್ರೌಢ
ರು ಆಡುವರು. ಈ ಆಟಗಳಿಂದ ಶರೀರಕ್ಕೆ ವ್ಯಾಯಾಮವೇನೂ ಆಗ
ದಿದ್ದರೂ, ಬುದ್ಧಿ ಶಕ್ತಿಯ ಉಪಯೋಗವನ್ನು ಬಹಳ ಮಟ್ಟಿಗೆ ಮಾಡ
ಬೇಕಾಗುವದು. ಈ ಆಟಗಳನ್ನು ಆಡಲಿಕ್ಕೆ ಹೊರಗೆ ಹೋಗುವ ಕಾರಣ
ವಿಲ್ಲದ್ದರಿಂದ ನಾಲ್ವತ್ತು ವರ್ಷ ದಾಟಿದವರಿಗೆ ಈ ಆಟಗಳು ಯೋಗ್ಯವಾ
ಗಿರುವವು.

ತ. ನಾ. ಅವಿನಾಶಭಾವಿ.

ಶಿವನಾಥ ಹೂಲಿ, ಸೊಲಾಪುರ.

ಪುಣೆಯ ಫರ್ಗ್ಯುಸನ್ ಕಾಲೇಜದಲ್ಲಿ
ಪ್ರೊಫೆಸರ ಫಿಶರವರು ಮಾಡಿದ ಭಾಷಣ.

ಹಿಂದುಸ್ತಾನದೊಳಗಿನ ಸರಕಾರದ ಯಾವತ್ತೂ ಖಾತೆಗಳಲ್ಲಿ ಇರುವ ಅಧಿಕಾರಿಗಳರ ಸಂಬಳ ಮುಂತಾದವುಗಳ ಬಗ್ಗೆ ವಿಚಾರ ಮಾಡುವದಕ್ಕಾಗಿ ಬ್ರಿಟಿಶ್ ಪಾರ್ಲಿಮೆಂಟದವರು "ರಾಯಲ್ ಕಮಿಶನ್" ಎಂಬ ವಿಚಾರಣಾಸಭೆಯನ್ನು ಒಳಗಡೆಯಲ್ಲಿ ನೇಮಿಸಿದ್ದರಷ್ಟೇ ಈ ಕಮಿಶನ್ನ ದವರು ಈ ದೇಶದೊಳಗಿನ ವಿಚಾರಣೆಯ ತಮ್ಮ ಕೆಲಸವನ್ನು ಮುಗಿಸಿ ಕೊಂಡು ಕಳೆದ ಫೆಬ್ರುವರಿ ತಿಂಗಳಲ್ಲಿ ಇಂಗ್ಲಂಡಕ್ಕೆ ಮರಳಿ ಹೋದರು. ಈ ಸಭೆಗೆ ಸೇರಿದ ಪ್ರೊಫೆಸರ್ ಫಿಶರ್ ಎಂಬ ಸಭಾಸದರು ಪುಣೆಯ ಫರ್ಗ್ಯುಸನ್ ಕಾಲೇಜವನ್ನು ನೋಡುವದಕ್ಕೆ ಹೋದಾಗ ಆ ಕಾಲೇಜದ ವಿದ್ಯಾರ್ಥಿಗಳನ್ನುದ್ದೇಶಿಸಿ ಒಂದು ಉಪದೇಶಪರವಾದ ಭಾಷಣವನ್ನು ಮಾಡಿದರು. ಪ್ರೊ. ಫಿಶರರವರು ಆಕ್ಸ್‌ಫರ್ಡ ಯುನಿವ್ಹರ್ಸಿಟಿಯ ಫಾಪಾಂಕಿತರಾದ ಪದವೀಧರರೂ ಸದ್ಯದಲ್ಲಿ ನ್ಯೂ ಝಿಲ್ಯಾಂಡ ಯುನಿವ್ಹರ್ಸಿಟಿಯ ವ್ಹಾಯಿಸ್ ಪ್ರಿನ್ಸಿಪಾಲರೂ ಇರುವರು. ಇವರು ಮಾಡಿದ ಭಾಷಣದ ಸಾರಾಂಶವನ್ನು ಇದರಡಿಯಲ್ಲಿ ಕೊಡುತ್ತೇವೆ:—

"ವಿದ್ಯಾರ್ಥಿಗಳ ಮುಂದೆ ಮಾತಾಡುವದರಲ್ಲಿ ನನಗೆ ಸ್ವಭಾವತಃ ಯಾವಾಗಲೂ ಬಹಳ ಆನಂದವೆನಿಸುತ್ತದೆ. [illegible] ಫರ್ಗ್ಯುಸನ್ ಕಾಲೇಜದ ಛಾತ್ರವರ್ಗದ ಮುಂದೆ ಭಾಷಣಮಾಡುವ ಸುಯೋಗವು ಒದಗಿದ್ದರಿಂದಂತೂ ನನಗೆ ಅತ್ಯಂತ ಆನಂದವಾಗಿರುವದು. ತೀರ ಬಡ ವಿದ್ಯಾರ್ಥಿಗಳಿಗೂ ಉಚ್ಚ ಶಿಕ್ಷಣವು ದೊರೆಯಲಿಕ್ಕೆ ಅನುಕೂಲವಾಗಲೆಂಬ ಉದಾತ್ತ ಹೇತುವಿನಿಂದ ಈ ಸಂಸ್ಥೆಯು ಸ್ಥಾಪಿಸಲ್ಪಟ್ಟಿರುವದು. ಇದೊಂದು ಶಿಕ್ಷಣವಿಷಯದೊಳಗಿನ ಪ್ರಯೋಗವಿರುತ್ತದೆ. ಜಗತ್ತಿನೊಳಗಿನ ವಿದ್ಯಾರ್ಥಿಗಳಲ್ಲಿ ಒಬ್ಬರೊಬ್ಬರ ವಿಷಯದಲ್ಲಿ ಒಂದು ವಿಲಕ್ಷಣತರದ ಬಂಧುಭಾವವಿರುವದು. ವಿದ್ಯಾಸಾಮ್ರಾಜ್ಯದಲ್ಲಿ ಜಾತಿಮತಗಳ ಸಂಬಂಧದ ವಿಚಾರಗಳು ಅಡ್ಡಬರುತ್ತಿರುವದಿಲ್ಲ. ಕಾಲೇಜದಲ್ಲಿರುವದರಿಂದ ಅನೇಕ ತರದ ಲಾಭಗಳಾಗುವವು. ಅವುಗಳಲ್ಲಿ ಮುಖ್ಯವಲನೆಯ ಲಾಭವು ಕೇವಲ ಜೀವಧ ಗೆಳೆತನವು ಕೂಡುವ ಸುಯೋಗವು ಕಾಲೇಜದಲ್ಲಿರುವಾಗಲೇ

ಬದಗುವದು. ಇನ್ನೊಂದು ಸಂಗತಿಯೇನೆಂದರೆ, ವಿದ್ಯಾರ್ಥಿಗಳಿಗೆ ದೊಡ್ಡ ದೊಡ್ಡ ಜನರ ಸಹವಾಸವು ದೊರೆದು ಅವರ ಮನಸ್ಸು ವಿಕಾಸ ಹೊಂದಲು ಅನುಕೂಲವಾಗುವದು. ಮತ್ತೊಂದು ಸಂಗತಿಯೇನೆಂದರೆ, ಮುಂದಿನ ಆಯುಷ್ಯವೆನ್ನೆಲ್ಲಾ ಯಾವ ವಿಷಯದ ವ್ಯಾಸಂಗದಲ್ಲಿ ಕಳೆಯಬೇಕಾಗುವದೋ ಅದರ ಅಸ್ತಿವಾರವು ಕಾಲೇಜದಲ್ಲಿಯೇ ಹಾಕಲ್ಪಡುವದು. ಕಾಲೇಜದಿಂದ ಹೊರಟ ತರುವಾಯ ಯಾವದಾದರೂ ಒಂದು ವಿಷಯದ ವ್ಯಾಸಂಗವನ್ನು ಹಾಗೆಯೇ ಮುಂದಕ್ಕೆ ನಡೆಯಿಸುತ್ತಾ ಇದ್ದರೆ ಮಾತ್ರ, ಆ ವಿದ್ಯಾರ್ಥಿಯು ಕಾಲೇಜದಲ್ಲಿ ತಕ್ಕ ಶಿಕ್ಷಣವನ್ನು ಹೊಂದಿದನೆಂದು ಹೇಳಬಹುದು. ಕಾಲೇಜದ ವಾಸದಿಂದ ವಿದ್ಯಾರ್ಥಿಯಲ್ಲಿ ವಿದ್ಯೆಯ ಸಂಬಂಧದಿಂದ ಅತ್ಯಂತ ಅಭಿರುಚಿಯು ಉಂಟಾಗಲಿಕ್ಕೇ ಬೇಕು. ಅವನಲ್ಲಿ ಜ್ಞಾನವನ್ನು ದೊರಕಿಸುವ ಉದ್ದೇಶದಿಂದಲೇ ಅಧ್ಯಯನ ಮಾಡುವ ಚಟವು ಉಂಟಾಗಲಿಕ್ಕೆ ಬೇಕು. ಇತಿಹಾಸವೇ ಆಗಲಿ, ಪಾಠ್ಯವೇ ಆಗಲಿ ಅದರ ಮರ್ಮವನ್ನು ತಿಳಿದುಕೊಳ್ಳಲಿಕ್ಕೆ ಕಲಿಯಬೇಕು. ಕಾಲೇಜದಲ್ಲಿರುವಾಗ ಇನ್ನೂ ಕೆಲವು ಲಾಭಗಳನ್ನು ಮಾಡಿಕೊಳ್ಳಬೇಕಾಗಿರುವದು. ಶುದ್ಧಾಂತಃಕರಣದಿಂದಲೂ ಸಮತೋಲವಾದ ಬುದ್ಧಿಯಿಂದಲೂ ಪ್ರಮಾಣಬದ್ಧವಾಗಿ ವಿಚಾರ ಮಾಡಲಿಕ್ಕೆ ಕಲಿಯಬೇಕು. ಇವನು ಸುಶಿಕ್ಷಿತನು, ಇವನು ಅಶಿಕ್ಷಿತನು, ಎಂದು ಒಂದೇ ಲಕ್ಷಣದಿಂದ ವಿಂಗಡಿಸಬಹುದು. ಅಶಿಕ್ಷಿತನು ಓದಿದ್ದರಲ್ಲೆಲ್ಲ ವಿಶ್ವಾಸವಿಡುವನು; ಅವನು ಸ್ವಂತ ವಿಚಾರವನ್ನು ಮಾಡುವದೇ ಇಲ್ಲ. ಆದರೆ ಸುಶಿಕ್ಷಿತನು ಹಾಗೆ ಮಾಡುವದಿಲ್ಲ. ವರ್ತಮಾನಪತ್ರಗಳನ್ನು ಓದುವಾಗಂತೂ ಈ ಮಾತಿನ ಕಡೆಗೆ ವಿಶೇಷ ಲಕ್ಷಕೊಡುವದು ಅವಶ್ಯವು. ಯಾಕಂದರೆ, ವರ್ತಮಾನಪತ್ರಿಕೆಗಳೊಳಗಿನ ಲೇಖಗಳು ತೀರ ಅವಸರದಿಂದಲೂ ಏಕಪಕ್ಷೀಯವಾದ ವಿಚಾರದಿಂದಲೂ ಅತಿಶಯೋಕ್ತಿಯಿಂದಲೂ ಬರೆದಂಥವುಗಳಿರುವವು. ಇರಲಿ. ಪರೀಕ್ಷೆಯ ಸಂಬಂಧದಿಂದ ನಿಮಗೆ ಒಂದೆರಡು ಮಾತುಗಳನ್ನು ಇಲ್ಲಿ ಹೇಳಿದರೆ ಅಪ್ರಾಸಂಗಿಕವಾಗಲಾರದು. ವಿದ್ಯಾರ್ಥಿಗಳು ಬಹು ಸಂಗತಿಗಳನ್ನು, ಬೇಕಾದದ್ದನ್ನೂ ಬೇಡಾದದ್ದನ್ನೂ ಕೂಡೇ ಪಾಠಮಾಡಿ ಲಕ್ಷದಲ್ಲಿಟ್ಟುಕೊಳ್ಳುವರು. ನಿಜವಾಗಿ ನೋಡಿದ್ದರೆ, ಓದಿದ ಸಂಗತಿಗಳಲ್ಲಿ ಐಂಭತ್ತು ಹತ್ತನೆಯ ಅಂಶಗಳು ಮರೆತು ಬಿಡಲಿಕ್ಕೆ ತಕ್ಕವುಗಳಾಗಿರು

ತ್ತವೆ. ಮುಖ್ಯವಾಗಿ ನೆನಪಿನಲ್ಲಿಡತಕ್ಕದ್ದೇನೆಂದರೆ, ಒಂದು ತೊಲೆಯಷ್ಟು ವಿಚಾರವು ಒಂದು ಸೇರಿನಷ್ಟು ಮಾಹಿತಿಯ ಯೋಗ್ಯತೆಯುಳ್ಳದ್ದಿರುವದು. ಮತ್ತೊಂದು ಸಂಗತಿಯೇನೆಂದರೆ, ವಿದ್ಯಾರ್ಥಿಯು ಕಾಲೇಜದಲ್ಲಿರುವಾಗ ಸಭ್ಯಗೃಹಸ್ಥನಾಗಲಿಕ್ಕೆ ಕಲಿಯಬೇಕು. "ಯಾವನು ತಿಳಿದೂ ತಿಳಿದೂ ಪರಪೀಡೆಯನ್ನು ಮಾಡುತ್ತಿರುವದಿಲ್ಲವೋ ಅವನೇ ಸಭ್ಯಗೃಹಸ್ಥನು" ಎಂದು ನಾನು "ಸಭ್ಯಗೃಹಸ್ಥ" ಎಂಬ ಶಬ್ದದ ವ್ಯಾಖ್ಯೆಯನ್ನು ಹೇಳುತ್ತೇನೆ. ನಿಮ್ಮಲ್ಲಿ ಅನೇಕರು ಬಡವರಾಗಿರಬಹುದು; ನಿಮಗೆ ಅನೇಕ ತೊಂದರೆಗಳಿರಬಹುದು. ಆದರೆ ನಿಮ್ಮ ಜೀವಿತ ಸಂಬಂಧದಿಂದ ನಿರಾಶರಾಗಬೇಡಿರಿ. ನಿಮ್ಮ ಅಭ್ಯುದಯದ ವಿಷಯದಲ್ಲಿ ಹತಾಶರಾಗಬೇಡಿರಿ. ಒಂದೇ ಒಂದು ಸುಂದರವಾದ ಪುಸ್ತಕದಲ್ಲಿ ನಿಮ್ಮ ಸಂಸಾರದೊಳಗಿನ ಸರ್ವ ದುಃಖಗಳನ್ನು ಮರೆಯಿಸಿ ಬಿಡುವಂಥ ಮಹಾ ಮಂತ್ರಶಕ್ತಿಯಿರುವದೆಂಬದನ್ನು ಮರೆಯಬೇಡಿರಿ. ಹಿಂದುಸ್ತಾನದಲ್ಲಿ ಶಿಕ್ಷಣಕಾರ್ಯವನ್ನು ವಹಿಸಿದವರ ಸಂಖ್ಯೆಯು ಸಾಕಷ್ಟು ಇಲ್ಲ. ಶಿಕ್ಷಣಕಾರ್ಯದಂಥ ಶ್ರೇಷ್ಠವೂ ಪವಿತ್ರವೂ ಆದ ವ್ಯವಸಾಯವು ಇನ್ನೊಂದಿಲ್ಲ. ದೊಡ್ಡ ದೊಡ್ಡ ವಿದ್ವಾಂಸರು ಯಾವ ಉದಾತ್ತ ಹೇತುವಿನಿಂದ ಈ ನಿಮ್ಮ ಕಾಲೇಜವನ್ನು ನಡೆಸಿರುವರೋ, ಅದೇ ಉಚ್ಚಧ್ಯೇಯವನ್ನು ನಿಮ್ಮ ಮನಸ್ಸಿನಲ್ಲಿಟ್ಟುಕೊಂಡು ಆದರಂತೆ ನಡೆಯಬೇಕೆಂದು ನಿಶ್ಚಯಿಸಿರಿ."

ವಿವಿಧ ಪರಿಮಾಣಗಳನ್ನು ಕಲಿಸುವ ಬಗ್ಗೆ
ಕೆಲವು ಸೂಚನೆಗಳು.

ಅಂಕಗಣಿತದ ಎಲ್ಲ ಭಾಗಗಳಲ್ಲಿ ಚಿಕ್ಕ ಮಕ್ಕಳಿಗೆ ವಿಶೇಷ ಮನೋರಂಜಕವಾಗುವಂಥ ಭಾಗವೆಂದರೆ ವಿವಿಧ ಪರಿಮಾಣಗಳ ಭಾಗವು. ವ್ಯವಹಾರಿಕ ಪ್ರಯೋಜನದ ದೃಷ್ಟ್ಯಿಂದಲೂ ವಿವಿಧ ಪರಿಮಾಣಗಳ ಕೃತಿಗಳು ಬಹಳ ಮಹತ್ವವುಳ್ಳವುಗಳು. ಯಾಕಂದರೆ, ನಾವು ಅನೇಕ ತರದ ವ್ಯವಹಾರಗಳಲ್ಲಿ ಅನೇಕ ಜಾತಿಯ ವಿವಿಧ ಪರಿಮಾಣಗಳನ್ನು ಉಪಯೋಗಿಸುತ್ತೇವೆ. ಪೇಟೆಯಲ್ಲಿ ಅಂಗಡಿಕಾರರಿಗೆ ಅನೇಕ ಪ್ರಕಾರದ ತೂಕದ ಪರಿಮಾಣಗಳೂ, ಅಳತೆಯ ಪರಿಮಾಣಗಳೂ, ಬೆಲೆಯ ಪರಿಮಾಣಗಳೂ ಬೇಕು. ಉಪ್ಪಾರ, ಬಡಿಗ, ಕಮ್ಮಾರ ಕೂಲಿಕಾರ ಮೊದ

ಲಾಗವರಿಗೂ ಕೆಲವು ವಿವಿಧ ಪರಿಮಾಣಗಳು ಬೇಕು. ಇದಲ್ಲದೆ ನಮ್ಮ ನಿತ್ಯದ ವ್ಯವಹಾರದಲ್ಲಿ ಕಾಲವನ್ನು ಅಳೆಯುವದಕ್ಕೂ ಪದಾರ್ಥಗಳ ಉಷ್ಣತೆಯನ್ನು ಅಳೆಯುವದಕ್ಕೂ ಬೇರೆ ಬೇರೆ ಪರಿಮಾಣಗಳು ಬೇಕು. ಸಾರಾಂಶವೇನೆಂದರೆ, ಈ ಪರಿಮಾಣಗಳಿಲ್ಲದಿದ್ದರೆ ವ್ಯವಹಾರವು ಸುಸೂತ್ರವಾಗಿ ಸಾಗಲಾರದು. ಮನುಷ್ಯರಿಗೆ ಈ ಉಪಯುಕ್ತವಾದ ವಿಷಯದ ಯಥಾರ್ಥ ಜ್ಞಾನವನ್ನು ಬೆಳೆಸಿಕೊಡುವದು ಅತ್ಯವಶ್ಯವು. ಅದಕ್ಕಾಗಿ ಶಿಕ್ಷಕನು ಸ್ವಲ್ಪ ಶ್ರಮ ತಕ್ಕೊಳ್ಳಬೇಕಾಗುವದು. ಉದಾಹರಣಾರ್ಥವಾಗಿ, ಸೇರು ಈ ಪರಿಮಾಣವನ್ನು ಕಲಿಸತಕ್ಕದ್ದೆಂದು ತಿಳಿಯುವ. ವ್ಯವಹಾರದಲ್ಲಿ ಎಣ್ಣೆ-ತುಪ್ಪಗಳನ್ನು ಅಳೆಯುವ ಸೇರೂ (ಅದರಲ್ಲಿಯೂ ಧಾರವಾಡದ್ದು ಬೇರೆ, ಬೆಳಗಾವಿಯದು ಬೇರೆ) ಹಾಲು ಅಳೆಯುವ ಸೇರೂ ಬೇರೆ ಬೇರೆ ಇರುವವು. ಅದೇ ಪ್ರಕಾರ ಬೆಲ್ಲಸಕ್ಕರೆಗಳನ್ನು ತೂಗುವ ಸೇರೂ ಬೆಳ್ಳಿ-ಬಂಗಾರಗಳನ್ನು ತೂಗುವ ಸೇರೂ, ಸ್ಟೇಶನಗಳಲ್ಲಿ ಗುಡ್ಸ-ಪಾಸಂಜರುಗಳನ್ನು ತೂಗುವ ಸೇರೂ ಬೇರೆ ಬೇರೆ ಇರುವವು. ಈ ಎಲ್ಲ ಪ್ರಕಾರಗಳನ್ನು ಹುಡುಗರಿಗೆ ಪ್ರತ್ಯಕ್ಷವಾಗಿ ತೋರಿಸಿ ಅವುಗಳ ಪರಸ್ಪರ ಸಂಬಂಧವನ್ನು ಅವರ ಅನುಭವಕ್ಕೆ ತಂದು ಕೊಟ್ಟರೆ ಮಾತ್ರ 'ಸೇರು' ಈ ಪರಿಮಾಣದ ಜ್ಞಾನವನ್ನು ಸರಿಯಾಗಿ ಮಾಡಿಕೊಟ್ಟಂತೆ ಆಗುವದು. ಇಲ್ಲದಿದ್ದರೆ ಕೇವಲ ತಾಂತ್ರಿಕಜ್ಞಾನವಾಗುವದು. ವಿವಿಧ ಪರಿಮಾಣಗಳ ಮತ್ತು ಅವುಗಳ ಕೃತಿಗಳ ಸರಿಯಾದ ಜ್ಞಾನವನ್ನು ಮಾಡಿಕೊಡಲಿಕ್ಕೆ ಕೆಳಗೆ ಕೊಟ್ಟ ಅನುಭವದ ಸಂಗತಿಗಳಿಂದ ಅಲ್ಪಸ್ವಲ್ಪ ಸಹಾಯವಾಗಬಹುದು.

ಮೇಲೆ ಹೇಳಿದಂತೆ ವ್ಯವಹಾರದಲ್ಲಿ ಉಪಯೋಗವಾಗುವ ಬಹುಶಃ ಎಲ್ಲ ಜಾತಿಯ ಪರಿಮಾಣಗಳನ್ನು ಗಣಿತಶಾಸ್ತ್ರಜ್ಞರು (೧) ಬೆಲೆಯ ಪರಿಮಾಣಗಳು, (೨) ತೂಕದಪರಿಮಾಣಗಳು, (೩) ಅಳತೆಯಪರಿಮಾಣಗಳು ಎಂದು ಮೂರು ಗುಂಪುಗಳಲ್ಲಿ ವರ್ಗೀಕರಿಸುವರು. ಇವುಗಳ ಸಂಬಂಧದ ಸಂಪೂರ್ಣ ವಿವೇಚನವು "ಅಂಕಗಣಿತದ ಉಪಪತ್ತಿ" ಎಂಬ ಪುಸ್ತಕದಲ್ಲಿಯೂ ಜೇರೆ ಅಂಕಗಣಿತಗಳಲ್ಲಿಯೂ ಮಾಡಲ್ಪಟ್ಟಿರುವದು. ಮತ್ತು ಆ ಅಂಕಗಣಿತಗಳಲ್ಲಿ ಅವುಗಳ ಸಂಬಂಧದ ಉದಾಹರಣ ಸಂಗ್ರಹಗಳೂ ಕೊಡಲ್ಪಟ್ಟಿರುವವು. ಆದರೆ ಆ ಎಲ್ಲ ಪುಸ್ತಕ

ಗಳು ಶಿಕ್ಷಕನಿಗೆ ವಿಷಯ ಜ್ಞಾನವನ್ನು ಪಡೆಯಲು ಸಾಧನಗಳೇ ಹೊರತು, ಶಿಕ್ಷಣದ ಮಾರ್ಗದರ್ಶಕಗಳಾಗಿರುವದಿಲ್ಲ. ಅಲ್ಪ ಶ್ರಮದಿಂದ ಬಹು ಫಲವಾಗುವಂತೆ ವಿಷಯಕ್ಕೆ ಸುಲಭ ರೂಪವನ್ನು ಕೊಡುವದೂ, ಸರಿಯಾಗಿ ಹೊಂದಿಕೆ ಮಾಡಿಕೊಂಡು ವಿದ್ಯಾರ್ಥಿಗಳ ಮುಂದೆ ಇಡುವದೂ, ಆಗಾಗ್ಗೆ ಅವಶ್ಯ ಕಂಡ ಕೈಕೆಲಸಗಳನ್ನು ಮಾಡಿಸುವದೂ, ಯೋಗ್ಯ ಉದಾಹರಣೆಗಳನ್ನು ರಚಿಸಿ, ಇಲ್ಲವೆ ಅರಿಸಿ ಕಲಿಸಿದ ಸಂಗತಿಯನ್ನು ದೃಢಪಡಿಸುವದೂ ಶಿಕ್ಷಕನ ಕರ್ತವ್ಯಗಳಾಗಿರುತ್ತವೆ. ಇದಕ್ಕಾಗಿ ಪ್ರತಿಯೊಬ್ಬ ಶಿಕ್ಷಕನು ತನ್ನ ಅನುಕೂಲತೆಯ ಪ್ರಕಾರ ಕಾಣಿಕೆಯ ಬಗೆಯ ಹೊಸ ಅಂಕಗಣಿತವನ್ನೇ ರಚಿಸಿಕೊಂಡು ಕಲಿಸುವದು ಒಳ್ಳೇದು; ಇಲ್ಲವೆ ಅನುಭವಿಕರಾದ ಶಿಕ್ಷಕರು ಶಿಕ್ಷಣದ ಮೂಲತತ್ವಗಳಿಗನುಸರಿಸಿ ರಚಿಸಿದ ಅಂಕಗಣಿತಗಳನ್ನಾದರೂ ಉಪಯೋಗಿಸಬೇಕು.

ಸದ್ಯಕ್ಕೆ ವಿವಿಧ ಪರಿಮಾಣಗಳನ್ನು ಬಹುಶಃ ಅಂಕಗಣಿತಗಳಲ್ಲಿ ಕೊಟ್ಟ ಕ್ರಮ ಹಿಡಿದು ಕಲಿಸುವ ಪಾಡಿಕೆಯುಂಟು. ಅಂದರೆ, ಮೊದಲು ಎಲ್ಲ ಜಾತಿಯ ವಿವಿಧ ಪರಿಮಾಣಗಳ ಕೊಷ್ಟಕಗಳು, ತರುವಾಯ ಕ್ರಮದಿಂದ ಎಲ್ಲ ಜಾತಿಯ ಪರಿಮಾಣಗಳ ರೂಪಾಂತರಗಳು, ಬೇರಿಜುಗಳು, ವಜಾಬಾಕಿಗಳು, ಗುಣಾಕಾರಗಳು, ಭಾಗಾಕಾರಗಳು ಈ ಪ್ರಕಾರ ಕ್ರಮತಿಗಳ ಅನುಕ್ರಮದಿಂದ ಕಲಿಸಲ್ಪಡುವವು. ಈ ಪದ್ಧತಿಯಿಂದ ಬಹಳ ತೊಂದರೆಯಾಗುವದು. ಇದರಿಂದ ವಿಷಯವಿಜ್ಞಾನವು ಸರಿಯಾಗಿ ಆಗುವದಿಲ್ಲ. ಎಷ್ಟೋ ಹೊಸ ಹೊಸ ಪರಿಮಾಣಗಳ ಹೆಸರುಗಳನ್ನೂ ಅವುಗಳ ಪರಸ್ಪರ ಸಂಬಂಧವನ್ನೂ ತೋರಿಸುವ ಕೊಷ್ಟಕಸಂಖ್ಯೆಗಳನ್ನು ನೆನಪಿನಲ್ಲಿಡುವದು ಪರಮ ಪ್ರಯಾಸವಾಗುವದು. ಆಯಾ ಪರಿಮಾಣಗಳನ್ನು ತೋರಿಸುವ ನಮೂನೆಗಳನ್ನೂ ಕಲ್ಲುಗಳನ್ನೂ ಕಣ್ಣಿಟ್ಟು ನೋಡದೆ, ಅವುಗಳಿಂದ ಕೈಮುಟ್ಟಿ ಪ್ರಯೋಗವಾಗದೆ, ಕಲಿತ ಸಂಗತಿಗಳಿಂದ ಏನೂ ಪ್ರಯೋಜನವಾಗುವದಿಲ್ಲ. ಮುಂದುವರಿದ ಕಲ್ಲುಗಳನ್ನೂ ನಮೂನೆಗಳನ್ನೂ ಪ್ರತ್ಯಕ್ಷವಾಗಿ ತೋರಿಸಿ ಅವರ ಕೈಯಿಂದ ಪ್ರಯೋಗ ಮಾಡಿಸಿ ತೋರಿಸಿದರೂ ಎಲ್ಲ ಜಾತಿಯ ಪರಿಮಾಣಗಳನ್ನು ಒಮ್ಮೆಲೆ ಕಲಿಸುವದರಿಂದ ಹಿತವಾಗುವದಿಲ್ಲ. ಯಾಕಂದರೆ, ಸ್ವಲ್ಪಕಾಲದಲ್ಲಿ ಹುಡುಗರ ತಲೆಯಲ್ಲಿ ಅನೇಕ ಹೊಸಸಂಗತಿಗಳನ್ನು ತುಂಬಿದ್ದರಿಂದ ಅವೆಲ್ಲ ಕೂಡಿ ಗೊಂದಲ

ವಾಗಿ ಹೋಗುವದರಿಂದ ವಿವಿಧ ಸಂಖ್ಯೆಗಳ ಬೇರೀಜು, ವಜಾಬಾಕಿ ಮೊ
ದಲಾದ ಕೃತಿಗಳನ್ನು ಕಲಿಸುವಾಗ ಅವುಗಳ ಕಡೆಗೆ ವಿದ್ಯಾರ್ಥಿಗಳ
ಸಂಪೂರ್ಣ ಲಕ್ಷ್ಯವು ಹತ್ತುವದಿಲ್ಲ; ಮತ್ತು ಪರಿಮಾಣಗಳ ಯಥಾರ್ಥ
ಜ್ಞಾನವೂ ಆಗುವದಿಲ್ಲ. ಅದಕಾರಣ ಎಲ್ಲ ಜಾತಿಯ ಪರಿಮಾಣಗಳ
ಕೊಷ್ಟಕಗಳನ್ನು ಮೊದಲು ಹೇಳದೆ, ಹುಡುಗರು ಹಿಂದಿನ ಇಯತ್ತೆ
ಯಲ್ಲಿ ಕಲಿತ ರೂಪಾಯಿ, ಅಣೆ, ಪೈ ಮೊದಲಾದ ಬೆಲೆಯ ಪರಿಮಾಣ
ಗಳ ಸಹಾಯದಿಂದ ವಿವಿಧ ಸಂಖ್ಯೆಗಳ ಬೇರೀಜು ಮೊದಲಾದ ನಾಲ್ಕು
ಕೃತಿಗಳನ್ನು ಕಲಿಸಿ ಬಿಡಬೇಕು. ಆಗ ಅವರ ತಲೆಯಲ್ಲಿ ಅನೇಕ ಹೊ
ಸ ಹೊಸ ಪರಿಮಾಣಗಳ ಹೆಸರುಗಳು, ಕೊಷ್ಟಕ ಸಂಖ್ಯೆಗಳೂ ಇರುವ
ದಿಲ್ಲಾದ ಕಾರಣ, ಅವರು ತಾವು ಹೊಸದಾಗಿ ಕಲಿಯತಕ್ಕ ಕೃತಿಗಳ
ಕಡೆಗೆ ಸಂಪೂರ್ಣ ಲಕ್ಷ್ಯವನ್ನು ಕೊಡುವರು. ಒಂದು ಸಾರೆ ಈ ಕೃತಿ
ಗಳ ರೀತಿಗಳು ಗೊತ್ತಾದ ಬಳಿಕ ಅವುಗಳ ಸಂಬಂಧದಿಂದ ಹೆಚ್ಚಿಗೇನೂ
ಕಲಿಯತಕ್ಕದ್ದು ಉಳಿಯುವದಿಲ್ಲ. ಇದಲ್ಲದೆ, ಅವರು ಮೊದಲು ಕಲಿತ
ಸಾಮಾನ್ಯ ಸಂಖ್ಯೆಗಳ ಕೃತಿಗಳಿಗೂ, ಈಗ ಕಲಿಯತಕ್ಕ ವಿವಿಧ
ಸಂಖ್ಯೆಗಳ ಕೃತಿಗಳಿಗೂ ವಿಶೇಷ ಹೆಚ್ಚು ಕಡಿಮೆಯಿರುವದಿಲ್ಲ. ಮುಖ್ಯ
ವಾಗಿ, ಒಂದೇ ಅಭ್ಯಂತರವಿರುವದು. ಅದನ್ನಷ್ಟು ತಿಳಿಸಿಬಿಟ್ಟರೆ ಈ
ಕೃತಿಗಳು ಅವುಗಳಂತೆ ಆಗುವವು. ಆ ಅಭ್ಯಂತರವು ಕೆಳಗೆ ಕೊಟ್ಟ
ಎರಡೂ ಪ್ರಕಾರದ ಬೇರೀಜಿನ ರೀತಿಗಳಿಂದ ಸ್ಪಷ್ಟವಾಗಿ ತಿಳಿಯುವದು:-

ಸಾಮಾನ್ಯ ಸಂಖ್ಯೆಗಳ ಬೇರೀಜಿನಲ್ಲಿ:—	ವಿವಿಧ ಸಂಖ್ಯೆಗಳ ಬೇರೀಜಿನಲ್ಲಿ:—
೧. ಒಂದೇಸ್ಥಾನದ ಅಂಕೆಗಳು ಒಂದರ ಕೆಳಗೊಂದು ಬರುವಂತೆ ಬರಕೊಳ್ಳುವದು.	ಒಂದೇ ಹೆಸರಿನ ವಿವಿಧ ಪರಿಮಾಣಗಳು ಒಂದರ ಕೆಳಗೊಂದು ಬರುವಂತೆ ಬರಕೊಳ್ಳುವದು.
೨. ಬಲಗಡೆಯಿಂದ ಆರಂಭ ಮಾಡಿ ಒಂದೊಂದೇ ಸ್ಥಾನದ ಬೇರಿಜುಮಾಡಿಆ ಸ್ಥಾನದ ಕೆಳಗೆ ಬರೆಯುವದು.	ಅದೇ ಪ್ರಕಾರ ಒಂದೊಂದೇ ಹೆಸರಿನ ಪರಿಮಾಣಗಳ ಬೇರೀಜು ಮಾಡಿ, ಆ ಪರಿಮಾಣದ ಕೆಳಗೆ ಬರೆಯುವದು.

೩. ಯಾವದೊಂದು ಸ್ಥಾನದ ಬೇರಿಜು ಹತ್ತಕ್ಕಿಂತ ಹೆಚ್ಚಾದರೆ ಗಂಟುಕಟ್ಟಿ ಹಿಂದಿನ ಸ್ಥಾನದಲ್ಲಿ ಕೂಡಿಸಿಕೊಳ್ಳುವದು.	ಯಾವದೊಂದು ಪರಿಮಾಣದ ಬೇರಿಜು ಕೊಪ್ಪಟಕ ಸಂಖ್ಯೆಗಿಂತ ಹೆಚ್ಚಾದರೆ ಹೆಚ್ಚಿನ ಪರಿಮಾಣದ ರೂಪಕೊಟ್ಟು ಅವುಗಳಲ್ಲಿ ಕೂಡಿಸಿ ಕೊಳ್ಳುವದು.

ಸಾರಾಂಶವೇನೆಂದರೆ, ಸಾಮಾನ್ಯ ಸಂಖ್ಯೆಗಳಲ್ಲಿ ಬಿಡಿಕಾಳು, ಹತ್ತರ ಗಂಟು ನೂರರ ಗಂಟು, ಇತ್ಯಾದಿ ಬೇರೆ ಬೇರೆ ಗಂಟುಗಳು ಇದ್ದು, ಅವುಗಳ ಪರಸ್ಪರ ಸಂಬಂಧವನ್ನು ತೋರಿಸುವ ಸಂಖ್ಯೆಯು ಹತ್ತೇ ಇರುವದು. ಆದರೆ ವಿವಿಧ ಸಂಖ್ಯೆಗಳಲ್ಲಿ ಬೇರೆ ಬೇರೆ ಹೆಸರಿನ ವಿವಿಧಪರಿಮಾಣಗಳು ಇದ್ದು, ಅವುಗಳ ಪರಸ್ಪರ ಸಂಬಂಧವನ್ನು ತೋರಿಸುವ ಕೋಷ್ಟಕ ಸಂಖ್ಯೆಯು ಬೇರೆ ಬೇರೆ ಇರುವದು. ಈ ಭೇದವು ತಿಳಿದ ಮೇಲೆ ಆ ಕೃತಿಗಳಿಗೂ ಈ ಕೃತಿಗಳಿಗೂ ಹೆಚ್ಚಿಗೇನೂ ಭೇದವು ಉಳಿಯುವದಿಲ್ಲ.

ಈ ಮೇರೆಗೆ ವಿವಿಧ ಸಂಖ್ಯೆಗಳ ಸಂಬಂಧದ ಪ್ರಾರಂಭದ ನಾಲ್ಕೂ ಕೃತಿಗಳ ರೀತಿಗಳು ಬೆಲೆಯ ಪರಿಮಾಣಗಳ ಸಹಾಯದಿಂದಲೇ ಗೊತ್ತಾದಂತಾದವು. ಇವೇ ರೀತಿಗಳು ಇನ್ನೂ ಮುಂದೆ ಕಲಿಯತಕ್ಕ ಎಲ್ಲ ಜಾತಿಯ ವಿವಿಧ ಪರಿಮಾಣಗಳಿಗೂ ಹತ್ತುವವು. ಇನ್ನು ಮುಂದೆ ಆಯಾ ಸ್ಥಳದಲ್ಲಿ ಅಗತ್ಯವಿರುವ ಪ್ರಕಾರ ಒಂದೊಂದೇ ಜಾತಿಯ ವಿವಿಧ ಪರಿಮಾಣಗಳ ಯಥಾರ್ಥಜ್ಞಾನವನ್ನು ಮಾಡಿಕೊಡಲಿಕ್ಕೂ, ಆ ಪರಿಮಾಣಗಳ ಹೆಸರುಗಳೂ ಅವುಗಳ ಕೋಷ್ಟಕ ಸಂಖ್ಯೆಗಳೂ ವಿದ್ಯಾರ್ಥಿಗಳ ಲಕ್ಷದಲ್ಲಿ ಉಳಿದು ಅವು ಮನದಟ್ಟಾಗುವವರೆಗೆ ನಾನಾ ಪ್ರಕಾರದ ಉದಾಹರಣೆಗಳನ್ನು ಬಾಯಿಂದಲೂ ಪಾಟಿಯ ಮೇಲೆಯೂ ಮಾಡಿಸಲಿಕ್ಕೂ, ಬೇಕಾದಷ್ಟು ಅವಕಾಶವು ದೊರೆಯುವದು. ಈ ಪದ್ಧತಿಯಿಂದ ಕಲಿಸಿದ ವಿಷಯವು ದೃಢವಾಗಿಯೂ ಪಾಯಾಶುದ್ಧವಾಗಿಯೂ ಆಗುವದು.

ಹೊಸ ಹೊಸ ವಿವಿಧ ಪರಿಮಾಣಗಳನ್ನು ಕಲಿಸುವಾಗ ಆ ಪರಿಮಾಣಗಳ ವಿಷಯವಾಗಿ ಅಂಕಗಣಿತದಲ್ಲಿ ಕೊಟ್ಟ ಕೋಷ್ಟಕಗಳ ಪ್ರಕಾರ ಪ್ರತಿಯೊಂದು ಪರಿಮಾಣಕ್ಕೆ ಮುಖ್ಯತ್ವವನ್ನು ಕೊಡದೆ ವ್ಯವಹಾರದಲ್ಲಿ ಆಗಾಗ್ಗೆ ಅಗತ್ಯ ಬೀಳುವ ಒಂದೆರಡು ಸಣ್ಣ ಪರಿಮಾಣಗಳಿಗೂ ಒಂದೆರಡು ದೊಡ್ಡ ಪರಿಮಾಣಗಳಿಗೂ ಮುಖ್ಯತ್ವವನ್ನು ಕೊಟ್ಟು, ಉಳಿದ ಎಲ್ಲ

ಪರಿಮಾಣಗಳು ಅವುಗಳ ನಿಯಮಿತ ಸಂಖ್ಯೆಯು ಎಷ್ಟನೇ ಪಾಲುಗಳೂ ಪಟ್ಟುಗಳೂ ಆಗಿರುವವೆಂದು ಹೇಳಲಿಕ್ಕೆ ಬರುವಂತಿದ್ದರೆ, ವಿದ್ಯಾರ್ಥಿಗಳಿಗೆ ಬಹಳ ಹೊಸ ಸಂಖ್ಯೆಗಳನ್ನು ನೆನಪಿನಲ್ಲಿಡುವ ತೊಂದರೆಯು ಮತ್ತೂ ಸ್ವಲ್ಪ ಕಡಿಮೆಯಾಗುವದು. ಉದಾಹರಣಾರ್ಥವಾಗಿ, ತೂಕದ ಪರಿಮಾಣಗಳನ್ನು ಹೇಳತಕ್ಕದ್ದೆಂದು ತಿಳಿಯುವಾ. ಅಂಕಗಣಿತದಲ್ಲಿ ಕೊಟ್ಟ ಕೋಷ್ಟಕದಲ್ಲಿ ಹತ್ತು ಹನ್ನೆರಡು ಹೊಸ ಹೊಸ ಪರಿಮಾಣಗಳು ಇರುವವು. ನಾವು ಇವೆಲ್ಲವುಗಳಿಗೂ ಮಹತ್ವವನ್ನು ಕೊಡದೆ ತೊಲೆ, ಸೇರು, ಮಣ, ಹೇರು ಈ ನಾಲ್ಕೇ ಪರಿಮಾಣಗಳಿಗೆ ಮುಖ್ಯತ್ವವನ್ನು ಕೊಟ್ಟು, ತೊಲೆಯ ಅರ್ಧ-ಗಿರ್ಧಗಳು ಅರ್ಧ ತೊಲೆ, ಪಾವತೊಲೆಗಳಿಂತಲೂ, ಸೇರಿನ ಅರ್ಧ-ಗಿರ್ಧ-ಗಿರ್ಧದ ಅರ್ಧಗಳು ಕ್ರಮವಾಗಿ ಅಚ್ಚೇರು, ಪಾವ ಸೇರು, ನವಟಾಕುಗಳೆಂತಲೂ, ಗಿರ್ಧ ಮಣ ಅಂದರೆ ಧಡೆಯೆಂತಲೂ ಗಿರ್ಧದ ಅರ್ಧ ಅಥವಾ ಮಣದ ಅನೇ ಪಾಲು ಎಂದರೆ ಪಂಥೇರೆಂತಲೂ ಹೇಳಿದರೆ ಕೆಲಮಟ್ಟಿಗೆ ಸುಲಭವಾಗುವದು. ಉಳಿದ ಜಾತಿಯ ಪರಿಮಾಣಗಳಲ್ಲಿಯೂ ಅನುಕೂಲತೆಯ ಪ್ರಕಾರ ವ್ಯವಸ್ಥೆಯನ್ನು ಮಾಡಿಕೊಳ್ಳಬಹುದು.

ಕೋಷ್ಟಕ ಸಂಖ್ಯೆಗಳನ್ನು ನೆನಪಿನಲ್ಲಿಡಿಸಲಿಕ್ಕೆ ಕೈಮುಟ್ಟಿ ತೂಕವನ್ನಾಗಲಿ ಅಳತೆಯನ್ನಾಗಲಿ ಮಾಡಿಸುವದಲ್ಲದೆ ಬೇರೆ ಎರಡು ಸಾಧನಗಳನ್ನು ಕಲ್ಪಿಸಬಹುದು. ಗನೇದು. ಇತಿಹಾಸದೊಳಗಿನ ಅರಸರ ವಂಶಾವಳಿಗಳಂತೆ ಹೆಚ್ಚಿನ ಪರಿಮಾಣವು ಮೂಲ ಪುರುಷನೆಂತಲೂ ಅದಕ್ಕೂ ಸಣ್ಣ ಸಣ್ಣ ಪರಿಮಾಣಗಳು ಅವನ ಮಕ್ಕಳೆಂತಲೂ ಹೋಲಿಸಿ ವಂಶಾವಳಿಯನ್ನು ಸಿದ್ಧಮಾಡಿಸುವದು. ೨ನೇದು. ೫ ಇಂಚಿನ ಚಚ್ಚೌಕು ಮನೆಗಳುಳ್ಳ ಕಾಗದಗಳನ್ನು ಹುಡುಗರ ಕೈಯಲ್ಲಿ ಕೊಟ್ಟು, ಅದರೊಳಗಿನ ಒಂದು ಎರಡು ಮೂರು ಇತ್ಯಾದಿ ಚಚ್ಚೌಕು ಮನೆಗಳು ಕೂಡಿ ಒಂದು ಸಣ್ಣ ಪರಿಮಾಣವೆಂದು ತಿಳಕೊಳ್ಳಲಿಕ್ಕೆ ಹೇಳಿ, ಲೆಕ್ಕದ ಪ್ರಕಾರ ಉಳಿದ ಪರಿಮಾಣಗಳ ಚಚ್ಚೌಕು ಆಕೃತಿಗಳನ್ನು ಕೆಂಪು ಮಸಿಯಿಂದ ಸಿದ್ಧಮಾಡಿಸುವದು.

ಇನ್ನು ವಿಲಾಯತಿಯ ವಿವಿಧ ಪರಿಮಾಣಗಳನ್ನು ಕಲಿಸುವ ಬಗ್ಗೆ ಎರಡು ಸಂಗತಿಗಳನ್ನು ಹೇಳುವದು ಅವಶ್ಯವಾಗಿರುತ್ತದೆ. ಅಂಕಗಣಿ

ತಗಳನ್ನು ಬರೆದವರ ಉದ್ದೇಶವು ಆ ಪುಸ್ತಕಗಳು ವಿಲಾಯತಿಯಲ್ಲಿಯೂ ಈ ದೇಶದಲ್ಲಿಯೂ ಸರಿಯಾಗಿ ಉಪಯೋಗವಾಗಬೇಕೆಂದು ಒಂದು ವೇಳೆ ಇರಬಹುದು. ಅಥವಾ ಅವು ಕೇವಲ ಇಂಗ್ಲಿಷ್ ಗೃಹಸ್ಥರಿಂದ ಬರೆಯಲ್ಪಟ್ಟ ಪುಸ್ತಕಗಳ ಭಾಷಾಂತರವಾಗಿರಬಹುದು. ಯಾವ ಕಾರಣದಿಂದಲೇ ಆಗಲಿ, ಅವುಗಳಲ್ಲಿ ನಮ್ಮ ದೇಶದಲ್ಲಿ ಎಂದೂ ಉಪಯೋಗಿಸದಂಥ ಕೆಲವು ಪರಿಮಾಣಗಳೂ ಅವುಗಳ ಸಂಬಂಧದ ಲೆಕ್ಕಗಳೂ ಬಂದಿರುವಷ್ಟು. ಪರೀಕ್ಷಕರಾದರೂ ಒಮ್ಮೊಮ್ಮೆ ವಿಚಾರಮಾಡದೆ ಅವೇ ಉದಾಹರಣೆಗಳನ್ನು ಆರಿಸಿ ಹೇಳುವರು. ಅದರಿಂದ ಶಿಕ್ಷಕರು ಒಳ್ಳೇ ಶ್ರಮಬಟ್ಟು ಆ ಪದಗಳನ್ನು ಕಲಿಸುವರು; ವಿದ್ಯಾರ್ಥಿಗಳು ತಮ್ಮ ಎಲ್ಲ ಸಾಮರ್ಥ್ಯವನ್ನು ಆ ಪದಗಳನ್ನು ಪಾಠ ಮಾಡುವದರಲ್ಲಿ ಕಳಕೊಳ್ಳುವರು. ಆದರೆ ಅವುಗಳ ಪ್ರಯೋಜನವು ವಿದ್ಯಾರ್ಥಿಗಳ ಇಡೀ ಆಯುಷ್ಯದಲ್ಲಿ ಒಂದು ಸಾರೆ ನಡೆಯಗುವಂತೆ ಇರುವದಿಲ್ಲವಾದ್ದರಿಂದ ಅವುಗಳನ್ನು ಕಲಿಸುವದೂ ಅವುಗಳ ಸಂಬಂಧದ ಲೆಖ್ಖಗಳನ್ನು ಹೇಳುವದೂ ನಿಷ್ಪ್ರಯೋಜಕವು. ಆದರೆ ವಿಲಾಯತಿಯ ಕೆಲವು ಪರಿಮಾಣಗಳು ಈ ದೇಶದಲ್ಲಿ ರೂಢಿಯೊಳಗೆ ಬರಹತ್ತಿರುವವು. ಉದ್ದಳತೆಯನ್ನು ಅಳೆಯುವ ಫೂಟು, ಇಂಚು ಇತ್ಯಾದಿ ಪರಿಮಾಣಗಳು; ಕಾಲವನ್ನು ಅಳೆಯುವ ಮಿನೀಟು, ಸೇಕಂದ ಈ ಪರಿಮಾಣಗಳು ಬೆಲೆಯ ಪರಿಮಾಣಗಳಾದ ಪೌಂಡು, ಸಿಲಿಂಗು, ಪೇನಸುಗಳು ಇತ್ಯಾದಿ. ಈ ಪರಿಮಾಣಗಳನ್ನು ಕಲಿಸಲಿಕ್ಕೇ ಬೇಕು. ಇಂಥ ಪರಿಮಾಣಗಳನ್ನು ಕಲಿಸುವಾಗ ನಮ್ಮ ದೇಶದಲ್ಲಿ ಪ್ರಚಾರದಲ್ಲಿರುವ ಅದೇ ಜಾತಿಯ ಪರಿಮಾಣಗಳ ಕೂಡ ತುಲನೆಯನ್ನು ಮಾಡಿಸಿ ಕೊರಡುವ ಸಂಗತಿಗಳನ್ನು ಗೊತ್ತು ಮಾಡಿಕೊಡಲಿಕ್ಕೆ ಬೇಕು.

ತ. ನಾ. ಅವಿನಭಾವಿ.

ವನಸ್ಪತಿಗಳು ಸಜೀವಗಳೆಂಬ ವಿಷಯದಲ್ಲಿ ಪಾಶ್ಚಿಮಾತ್ಯರ ವಿಚಾರವು.

ವನಸ್ಪತಿಗಳು ಸಜೀವಗಳೆಂದು ಆಧುನಿಕ ಶಾಸ್ತ್ರಜ್ಞರು ನಿಶ್ಚಯೋಗವಾಗಿ ಸಿದ್ಧಮಾಡಿರುವರು. ಅವುಗಳಿಗೆ ಸುಖದುಃಖಾದಿಗಳ ಸಂವೇದನ

ನೆಯೂ ಉಂಟೆಂದು ಪ್ರೊ. ಜಗದೀಶಚಂದ್ರ ಬಸು ಮಹಾಶಯರು ಸಿದ್ಧ ಪಡಿಸಿರುವರು. ಈ ವಿಷಯದಲ್ಲಿ ಬಹು ಪ್ರಾಚೀನ ಕಾಲದಲ್ಲಿಯೇ ನಮ್ಮ ದೇಶದವರು ವಿಚಾರಮಾಡಿದ್ದರು. ಜೈನರು ಈ ವಿಷಯದಲ್ಲಿ ಹೆಚ್ಚಾಗಿ ವಿಚಾರಮಾಡಿರುವರು. ಈ ವಿಷಯದಲ್ಲಿ ಜೈನರ, ಮತ್ತು ನಮ್ಮವರ ವಿಚಾರವು ಏನಿರುವದೆಂಬದನ್ನು ಇಲ್ಲಿ ಸಂಕ್ಷೇಪವಾಗಿ ಹೇಳುವೆವು.

ಜೈನರು ಜೀವತತ್ವದಲ್ಲಿ ಮುಕ್ತಜೀವವೆಂದೂ, ಸಂಸಾರಿ ಜೀವವೆಂದೂ ಎರಡು ಭಾಗಗಳನ್ನು ಮಾಡುವರು. ಜನನಮರಣಕ್ಲೇಶವಿಲ್ಲದೆ ಯಾವಾಗಲು ಅನಂದಮಯವಾದ ಜೀವಗಳು ಮುಕ್ತಜೀವಗಳೆಸಿಸುವವು, ಉಳಿದವು ಸಂಸಾರಿ ಜೀವಗಳು. ಸಂಸಾರಿ ಜೀವಗಳಲ್ಲಿ ಸ್ಥಾವರವೆಂದೂ ಜಂಗಮವೆಂದೂ ಎರಡು ವಿಧಗಳು. ಜೈನದರ್ಶನದಲ್ಲಿ ಜಂಗಮ ಜೀವಗಳಿಗೆ 'ತ್ರಸ, (ತ್ರಸ) ಎಂದು ಹೆಸರು. 'ತ್ರಸ್' ಧಾತುವು ಕಂಪನಾರ್ಥದಲ್ಲಿಯೂ ಇರುವದು, ಕಂಪಿತವಾಗುವದು, ಇಲ್ಲವೆ ಚಲಿತವಾಗುವದೆಂದೇ ಜಂಗಮ ಜೀವಕ್ಕೆ 'ತ್ರಸ' ಎಂಬ ಹೆಸರು ಬಂದಿದೆ.

ಸ್ಥಾವರ ಜಂಗಮ ಜೀವಗಳಲ್ಲಿ ಪರ್ಯಾಪ್ತವೆಂದೂ ಅಪರ್ಯಾಪ್ತವೆಂದೂ ಮತ್ತೆ ಎರಡು ವಿಧಗಳು. ಆಹಾರ, ಶರೀರ, ಇಂದ್ರಿಯ, ಪ್ರಾಣ, ಭಾಷೆ, ಮನಸ್ಸು ಇವೆಲ್ಲಕ್ಕೆ 'ಪರ್ಯಾಪ್ತಿ' ಎಂದು ಹೆಸರು, ಆರೂ ಪರ್ಯಾಪ್ತಿಗಳಿದ್ದ ಜೀವವು ಪರ್ಯಾಪ್ತ ಜೀವವು, ಉಳಿದದ್ದು ಅಪರ್ಯಾಪ್ತ ಜೀವವು. ಏಕೇಂದ್ರಿಯ ಜೀವಗಳಿಗೆ ನಾಲ್ಕು, ವಿಕಲೇಂದ್ರಿಯ ಜೀವಗಳಿಗೆ ಐದು, ಪಂಚೇಂದ್ರಿಯ ಜೀವಗಳಿಗೆ ಆರು ಪರ್ಯಾಪ್ತಿಗಳಿರುವವು.

ಪೃಥಿವಿ, ಜಲ, ತೇಜಸ್ಸು, ವಾಯು, ವೃಕ್ಷ (ಉದ್ಭಿಜ್ಜ) ಎಂಬಿವು ಸ್ಥಾವರ ಜೀವಗಳು. ಮತ್ತು ಇವುಗಳಿಗೆ ಸ್ಪರ್ಶೇಂದ್ರಿಯವೊಂದು ಮಾತ್ರ ಇರುವುದರಿಂದ ಇವು ಏಕೇಂದ್ರಿಯಗಳೆಂದು ಹೇಳಲ್ಪಡುವವು. ಜಂಗಮ ಜೀವಗಳು ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ, ಪಂಚೇಂದ್ರಿಯಗಳಾಗಿ ಇರುವವು. ವೃಕ್ಷಗಳು ಏಕೇಂದ್ರಿಯಗಳೆಂಬ ವಿಷಯವನ್ನು ಅಭಿನವ ಪಂಪನು ತನ್ನ ಮಲ್ಲಿನಾಥ ಪುರಾಣದ ಪ್ರಸ್ತಾವ್ನಾಸ ದಲ್ಲಿ–"ವಾರಸ್ತ್ರೀಯರ ಸೋಂಕುವೆತ್ತನಿತರಿಂದೇಕೇಂದ್ರಿಯಕ್ಕಂ ಸ್ಮರೋ

ಪ್ರಾಕಾರಂ ಪೆರ್ಚಿದುದೆಂದೊಡೆ.....ಅದಂ ಪೂನವರಂ ತೆಮುಳ್ದಿತುಳಿಯೆರ್ ಪಂಚೇಂದ್ರಿಯಾಸಕ್ತರಂ" ಎಂದು ಚಮತ್ಕಾರವಾಗಿ ವರ್ಣಿಸಿರುವನು. ಈ ಸ್ಥಲದಲ್ಲಿ ಗ್ರಹಿಸತಕ್ಕ ವಿಷಯಗಳು ಎರಡು:—

(೧) ಜೈನದರ್ಶನಕಾರರು ಮಾಡಿದ ಜೀವವಿಭಜ್ಯೆಯ ವಿಚಾರವು, ಅಂದರೆ ಯಾವ ಯಾವ ಜೀವಗಳಿಗೆ ಎಷ್ಟೆಷ್ಟು ಇಂದ್ರಿಯಗಳಿರುತ್ತವೆಂಬುದನ್ನು ಕಂಡು ಹಿಡಿದದ್ದು ಸಾಮಾನ್ಯ ಶೋಧವಲ್ಲ. ಇದಕ್ಕಾಗಿ ಅವರು ಬಹು ಕಾಲ ಶ್ರಮಪಟ್ಟಿರುವರೆಂಬ ವಿಷಯದಲ್ಲಿ ಸಂಶಯವಿಲ್ಲ. ಅವರ ಸಿದ್ಧಾಂತವು ಎಷ್ಟರಮಟ್ಟಿಗೆ ನಿಜವಿರುತ್ತದೆಂಬುದನ್ನು ನಿರ್ಣಯಿಸುವದು ಈಗಿನ ವಿಜ್ಞಾನಶಾಸ್ತ್ರಜ್ಞರ ಕರ್ತವ್ಯವಾಗಿರುವದು.

(೨) ಜೈನದರ್ಶನಕಾರರು ಪೃಥ್ವೀ, ಜಲ ಮೊದಲಾದವು ಜೀವಗಳೆಂದು ಹೇಳುವರು. ಇದು ಲಕ್ಷಕೊಡತಕ್ಕ ವಿಷಯವಾಗಿದೆ. ಅವರು ಯಾವ ಯುಕ್ತಿಯಿಂದ ಇವು ಜೀವಗಳೆಂದು ಹೇಳಿರುವರು? ಅದರಲ್ಲಿ ಎಷ್ಟು ಮಟ್ಟಿಗೆ ನಿಜತ್ವವಿರುವದು? ಎಂಬುದು ದರ್ಶನಗಳಲ್ಲಿ ರಸಿಕರಾದವರು ಇಲ್ಲವೆ ಐತಿಹಾಸಿಕರು ಶೋಧಮಾಡತಕ್ಕದ್ದಾಗಿದೆ. ಪೃಥ್ವಿ ಮೊದಲಾದವು ಜೀವಗಳೆಂದು ಹೇಳುವಲ್ಲಿ ಅವರು ಯುಕ್ತಿಯನ್ನು ತೋರಿಸಿರುವರು. ಆದರೆ ಅದರಲ್ಲಿ ವೃಕ್ಷಗಳಿಗೆ ಜೀವವಿರುವದೆಂಬಲ್ಲಿ ತೋರಿಸಿದ ಯುಕ್ತಿಯು ರಮಣೀಯವಾಗಿರುವದು. ಇಲ್ಲಿ ವೃಕ್ಷಗಳಿಗೆ ಜೀವವಿರುವದೆಂಬ ವಿಷಯದಲ್ಲಿ ಅವರು ತೋರಿಸಿದ ಯುಕ್ತಿಗಳನ್ನು ಮಾತ್ರ ಸಂಕ್ಷೇಪವಾಗಿ ಸಂಗ್ರಹಿಸಿ ಬರೆಯುವೆವು. ಪೃಥ್ವಿ, ಮೊದಲಾದವುಗಳಿಗೆ ಜೀವವಿರುವದೆಂದು ಅವರು ಹೇಳಿದ್ದರ ಸ್ಥೂಲ ತಾತ್ಪರ್ಯವೇನೆಂದರೆ– ಅವುಗಳಲ್ಲಿ ಸ್ಪಷ್ಟಜೀವಲಕ್ಷಣಗಳಿಲ್ಲದಿದ್ದರೂ ಅಸ್ಪಷ್ಟ ಜೀವಲಕ್ಷಣಗಳು ಇರುವವು.

ವೃಕ್ಷಗಳು ಸಜೀವಗಳೆಂಬ ವಿಷಯದಲ್ಲಿ ಅವರು ಈ ಪ್ರಕಾರ ಹೇಳುತ್ತಾರೆ:—

ಮನುಷ್ಯನು ಸಚೇತನ ಪ್ರಾಣಿಯೆಂಬ ವಿಷಯದಲ್ಲಿ ಯಾರಿಗೂ ಸಂಶಯವಿಲ್ಲ. ಈ ಮನುಷ್ಯ ಪ್ರಾಣಿಯೊಡನೆ ವೃಕ್ಷಗಳಿಗೆ ಬಹಳ ಹೋಲಿಕೆಯಿರುವದು. ಮನುಷ್ಯ ಶರೀರವು ಬಾಲ್ಯ, ಕೌಮಾರ, ತಾರುಣ್ಯ ಮೊದಲಾದ ಅವಸ್ಥೆಗಳಲ್ಲಿ ಬೆಳವಣಿಗೆಯನ್ನು ಹೊಂದುತ್ತಿರುವಂತೆ

ವೃಕ್ಷಶರೀರವೂ ಮೊಳಕೆ, ಚಿಗುರು, ಕೊಂಬೆ ಮೊದಲಾದ ಭಾಗಗಳಿಂದ ಯಾವಾಗಲು ಬೆಳೆಯುತ್ತಿರುವದು. ಮನುಷ್ಯನಿಗೆ ನಿದ್ರಾವಸ್ಥೆ ಜಾಗ್ರದವಸ್ಥೆಗಳು ಇರುವಂತೆ ಚೊಗಚಿ, ಬನ್ನಿ, ನೆಲ್ಲಿ ಮೊದಲಾದ ಗಿಡಗಳಿಗೂ ಕಂಡುಬರುವದು. ಕೆಲವು ಬಳ್ಳಿಗಳು ಮುಟ್ಟಿದೊಡನೆ ಸಂಕೋಚಿತವಾಗುವವು; ಇನ್ನು ಕೆಲವು ಬಳ್ಳಿಗಳು ಉಲ್ಲಾಸ ಹೊಂದುವವು. ಬಳ್ಳಿಗಳು ಊರೆಯನ್ನು ಕೊಟ್ಟರೆ ಅದನ್ನಾಶ್ರಯಿಸಿ ಮೇಲಕ್ಕೇರುವವು. ಈ ಸಂಕೋಚ ವಿಕಾಸ ಮೊದಲಾದ ಕ್ರಿಯೆಗಳು ಚೇತನಗಳಲ್ಲಿಯೂ ಕಾಣುವವು. ಗಿಡದ ಯಾವದೊಂದು ಅವಯವವನ್ನು ಕಡಿಯಲು ಅದು ಬಾಡಿದಂತಾಗುವದು. ವೃಕ್ಷಗಳು ನಿಯಮಿತವಾದ ಆಹಾರವನ್ನು ತೆಗೆದುಕೊಳ್ಳುವವು. ಈ ಧರ್ಮಗಳು ಅಚೇತನಗಳಲ್ಲಿರುವದಿಲ್ಲ. ಮನುಷ್ಯನಿಗೆ ನಿಯಮಿತವಾದ ಆಯುಷ್ಯವಿರುವಂತೆ ವನಸ್ಪತಿಗಳಿಗೂ ಇರುವದು. ಇಷ್ಟವಾದ ಆಹಾರದಿಂದ ಮನುಷ್ಯ ಶರೀರವು ಪುಷ್ಟವಾಗುವದು; ಅನಿಷ್ಟಾಹಾರದಿಂದ ಸೊರಗುವದು. ಇದರಂತೆ ವೃಕ್ಷಗಳಿಗೂ ಆಗುವದು. ಮನುಷ್ಯನಿಗೆ ರೋಗಗಳು ಬರುವಂತೆ ವನಸ್ಪತಿಗಳಿಗೂ ಬರುವವು. ಚಿಕಿತ್ಸೆಯಿಂದ ರೋಗವಿಲ್ಲದಂತಾಗುವದು ಮನುಷ್ಯನಿಗೂ ವನಸ್ಪತಿಗೂ ಸಮಾನವೇ. ರಸಾಯನದಿಂದ ಮನುಷ್ಯಶರೀರದಲ್ಲಿ ವಿಶೇಷ ಪ್ರಕಾರದ ಬಲ-ಕಾಂತಿಗಳು ಬರುವಂತೆ ವೃಕ್ಷಶರೀರಕ್ಕೂ ಬರುವವು. ಹೆಂಗಸರು ದೋಹದದಿಂದ ಮಕ್ಕಳನ್ನು ಪಡೆವಂತೆ ವೃಕ್ಷಗಳೂ ದೋಹದದಿಂದ ಫಲಗಳನ್ನು ಕೊಡುವವು. ಆದ್ದರಿಂದ ಮನುಷ್ಯರಂತೆ ವೃಕ್ಷಗಳೂ ಸಚೇತನಗಳು. ಅವುಗಳಿಗೂ ಆತ್ಮವಿರುವದು.

ವೃಕ್ಷಗಳು ಚೇತನಜೀವಗಳೆಂಬ ವಿಷಯದಲ್ಲಿ ಮಹಾಭಾರತದಲ್ಲಿಯೂ ಉಲ್ಲೇಖವುಂಟು. (ಶಾಂತಿ—ಗಿಳಿ ಅಧ್ಯಾ. ೬ ಶ್ಲೋ-ದಿಂದ) ವೃಕ್ಷಗಳು ಚೇತನಜೀವಗಳೆಂಬ ವಿಷಯವು ಅಲ್ಲಿ ಯುಕ್ತಿಗಳಿಂದ ನಿರ್ಣಯಿಸಲ್ಪಟ್ಟಿರುವದು. ವೃಕ್ಷಶರೀರವು ಮನುಷ್ಯಶರೀರದಂತೆ ಪಂಚಭೂತಾತ್ಮಕವೆಂದೂ ಪ್ರತಿಪಾದಿಸಲ್ಪಟ್ಟಿದೆ. ಜೈನಶಾಸ್ತ್ರಕಾರರು ವೃಕ್ಷಗಳಿಗೆ ಒಂದೇ ಇಂದ್ರಿಯವೆಂದು ಹೇಳಿರುವರು. ಆದರೆ ಮಹಾಭಾರತದಲ್ಲಿ ಐದೂ ಇಂದ್ರಿಯಗಳಿರುವವೆಂದು ಉಲ್ಲೇಖವುಂಟು. ಮಹಾಭಾ

ರತದ ಆ ಭಾಗವನ್ನು ಕೆಳಗೆ ಉದ್ಧರಿಸಿ ಬರೆಯುತ್ತೇವೆ:—

ಉಷ್ಮತೋ ಮ್ಲಾಯತೇ ಪರ್ಣಂ ತ್ವಕ್ ಫಲಂ ಪುಷ್ಪಮೇವಚ ।
ಮ್ಲಾಯತೇ ಶೀರ್ಯತೇ ಚಾಪಿ ಸ್ಪರ್ಶಸ್ತೇನಾತ್ರ ವಿದ್ಯತೇ ॥
ವಾಯ್ವಗ್ನ್ಯಶನಿನಿರ್ಘೋಷೈಃ ಫಲಂ ಪುಷ್ಪಂ ವಿಶೀರ್ಯತೇ ।
ಶ್ರೋತ್ರೇಣ ಗೃಹ್ಯತೇ ಶಬ್ದಸ್ತಸ್ಮಾಚ್ಛೃಣ್ವಂತಿ ಪಾದಪಾಃ ॥
ವಲ್ಲೀ ವೇಷ್ಟಯತೇ ವೃಕ್ಷಂ ಸರ್ವತಶ್ಚೈವ ಗಚ್ಛತಿ ।
ನಹ್ಯದೃಷ್ಟೇಶ್ಚಮಾರ್ಗೋಸ್ತಿ ತಸ್ಮಾತ್ಪಶ್ಯಂತಿ ಪಾದಪಾಃ ॥
ಪುಣ್ಯಾಪುಣ್ಯೈಸ್ತಥಾಗಂಧೈರ್ಧೂಪೈಶ್ಚ ವಿವಿಧೈರಪಿ ।
ಅರೋಗಾಃ ಪುಷ್ಪಿತಾಃ ಸಂತ ತಸ್ಮಾಜ್ಜಿಘ್ರಂತಿ ಪಾದಪಾಃ ॥
ಪಾದೈಃ ಸಲಿಲಪಾನಾಚ್ಚ ವ್ಯಾಧೀನಾಂಚೈವ ದರ್ಶನಾತ್ ।
ವ್ಯಾಧಿಪ್ರತಿಕ್ರಿಯತ್ವಾಚ್ಚ ವಿದ್ಯತೇ ರಸನಾ ದ್ರುಮೇ ॥
ವ್ಯಕ್ತೇನೋಪಲನಾಲೇನ ಯಥೋರ್ಧ್ವಂ ಜಲಮಾದದೇತ್ ।
ತಥಾ ಪವನಸಂಯುಕ್ತಃ ಪಾದೈಃ ಪಿಬತಿ ಪಾದಪಃ ॥
ಸುಖದುಃಖಯೋಶ್ಚ ಗ್ರಹಣಾತ್ ಛಿನ್ನಸ್ಯಚ ವಿರೋಹಣಾತ್ ।
ಜೀವಂ ಪಶ್ಯಾಮಿ ವೃಕ್ಷಾಣಾಮಚೈತನ್ಯಂ ನ ವಿದ್ಯತೇ ।

ವೃಕ್ಷಗಳಿಗೆ ಜೀವವಿರುವದೆಂಬ ವಿಷಯವು ವೇದಕಾಲದಲ್ಲಿಯೂ ತಿಳಿದಿತ್ತು. ಛಾಂದೋಗ್ಯೋಪನಿಷತ್ತಿನಲ್ಲಿ (೬–೧೧–೧–೭) ಈ ಪ್ರಕಾರ ಉಲ್ಲೇಖವಿರುವದು. " ಹೇ ಸೌಮ್ಯ! ಯಾವನೊಬ್ಬನು ಈ ವೃಕ್ಷವ ಬೊಡ್ಡಿಗೆ ಕಚ್ಚು ಹಾಕಲು ಇದು ಜೀವಿತವಾಗಿದ್ದೇ ರಸವನ್ನು ಮಾತ್ರ ಬಿಡುವದು. ಯಾವನೊಬ್ಬನು ನಡುವೆ ಕಚ್ಚು ಹಾಕಲು ಆಗಲೂ ಜೀವಿತವಾಗಿದ್ದೇ ರಸಬಿಡುವದು. ಯಾವನೊಬ್ಬನು ತುದಿಯಲ್ಲಿ ಕಚ್ಚು ಹಾಕಿದರೆ ಆಗಲೂ ಜೀವಿತವಾಗಿದ್ದೇ ರಸಬಿಡುವದು. ಇದು ಜೀವರೂಪವಾದ ಆತ್ಮದಿಂದ ವ್ಯಾಪ್ತವಾಗಿರುವದು. ಮತ್ತು ಹೆಚ್ಚಾಗಿ ರಸವನ್ನು ಪಾನ ಮಾಡುತ್ತ ಸುಖವಾಗಿರುವದು. ಜೀವವು ಇದರದೊಂದು ಕೊಂಬೆಯನ್ನು ಬಿಟ್ಟರೆ ಆ ಕೊಂಬೆಯು ಒಣಗುವದು; ಮತ್ತೊಂದು ಕೊಂಬೆಯನ್ನು ಬಿಟ್ಟರೆ ಅದೂ ಒಣಗುವದು. ಮೂರನೆಯ ಕೊಂಬೆಯನ್ನು ಬಿಟ್ಟರೆ ಅದೂ ಒಣಗುವದು. ಸಂಪೂರ್ಣವಾಗಿ ಬಿಟ್ಟು ಹೋದರೆ ಮರವೆಲ್ಲ ಒಣಗುವದು.

ವೃಕ್ಷಗಳಲ್ಲಿ ಸ್ತ್ರೀ ಜಾತಿ, ಪುಂಜಾತಿ ವಿಭಾಗವನ್ನೂ ಪ್ರಾಚೀನರು ಮಾಡಿದ್ದರು. ಬೌದ್ಧರೂ ಉದ್ಭಿಜ್ಜಗಳಲ್ಲಿ ಜೀವವುಂಟೆಂಬದನ್ನು ಒಪ್ಪುವರು. ಆದ್ದರಿಂದ ಬ್ರಾಹ್ಮಣರು, ಜೈನರು ಬೌದ್ಧರು ಈ ಮೂರು ಸಮಾಜಗಳಲ್ಲಿಯೂ ಮರಗಳನ್ನು ಕಡಿಯಬಾರದೆಂದೂ, ಕಡಿದರೆ ಪಾಪವೆಂದೂ ಹಿರಿಯರು ಹೇಳುತ್ತಿರುವರು.

ತಾರೀಖು ೩—೩—೧೯೧೧ ಇಸವಿ ಮ. ಪ್ರ. ಪೂಜಾರ

ಪತ್ರವ್ಯವಹಾರವು.

ರಾ॥ ರಾ॥ ಶಾಲಾಪತ್ರಿಕೆಯ ಎಡಿಟರವರ ಸನ್ನಿಧಿಗೆ:—

ಪೂಜ್ಯರೇ ಕೆಳಗಿನ ಎರಡು ಉದಾಹರಣೆಗ ಸ್ಥಳದೊರೆಯೆಬೇಕೆಂದು ಆಶಿಸುತ್ತೇನೆ.

(೧) ಉದಾ:—ಅನು ಬನೆ ಹತ್ತಿರಿಂದ ೩೦೦ ರೂಪಾಯಿಗಳನ್ನು ಸಾಲಾ ಬಯ್ದನು, ಹಾಗೂ ಪ್ರತಿವರ್ಷ (೩೦೦) ಮುನ್ನೂರಂತೆ ಕೊಟ್ಟು ಹನ್ನೊಂದು ವರ್ಷದಲ್ಲಿ ಋಣಮುಕ್ತನಾದ (ಬಡ್ಡಿ, ಗಂಟುಕೊಟ್ಟ)ನು. ಅದರೆ ಬಡ್ಡಿಯದರವೇನು?

(೨) ಉದಾ:— ಒಬ್ಬನು ಪೇಟೆಗೆ ಹೋಗಿ ೬ ಸೀರೆಗಳನ್ನು ೩೦ ರೂಪಾಯಿಗೆ ಖರೀದಿ ಮಾಡಿದನು. ಹೇಗಂದರೆ— ಒಂದು ಸೀರೆಯ ಧಾರಣೆ ಮತ್ತೊಂದು ಸೀರೆಗೆ ಬೀಳಲಿಲ್ಲ; ಮತ್ತು ರೂಪಾಯಿ ಮುರಿಸ ಬೇಕಾಗಲಿಲ್ಲ. ಹಾಗಾದರೆ ಪ್ರತಿಯೊಂದು ಸೀರೆಯ ಕ್ರಯವೆಷ್ಟು?.

ಮನಗೋಳಿ
೧೫—೧—೧೯ ಇ॥

ತಮ್ಮ ವಿಧೇಯ
ಪಾ. ಮೋ. ಇನಾಮದಾರ ಧೇ. ಸ್ಕೂ. ಮಾಸ್ತರ

೧೯೧೧ನೇ ಇಸ್ವಿ ಫೇಬ್ರುವರಿಯ ಸಂಚಿಕೆಯಲ್ಲಿ ಪ್ರಸಿದ್ಧವಾದ ವಿ॥ ಪಾಟೀಲ ಇವರ ಪತ್ರಕ್ಕೆ ಉತ್ತರ:— ಅಥವಾ, "ಬೇರೆ ಬೇರೆ ದೇಶಗಳ ನಿವಾಸಿಗಳು ಬಹು ಮಾತ್ಸರ್ಯದಿಂದ ಒಬ್ಬರಿಗೊಬ್ಬರು ಜಗಳಾಡುತ್ತಾರೆ" ಈ ವಾಕ್ಯದ ವ್ಯಾಕರಣದ ಬಗ್ಗೆ ವಿಚಾರ:—

೧. ವ್ಯಾಕರಣ ಮಾಡುವಾಗ ಯಾವ ವಾಕ್ಯದ ವ್ಯಾಕರಣ ಮಾಡುವದಪೇಕ್ಷೋ ಅದು ಶುದ್ಧವಾಗಿದೆಯೋ ಇಲ್ಲವೋ ಎಂಬದನ್ನು ಮೊದಲು

ನೋಡಬೇಕು. ಪ್ರಕೃತ ವಾಕ್ಯದಲ್ಲಿ ಪದಶುದ್ಧಿಯು ಪೂರ್ಣವಾಗಿಲ್ಲ. ಅದರಿಂದ, ಮುಂಚೆ ಅದರ ಶುದ್ಧಿ ಮಾಡಿಕೊಳ್ಳಬೇಕಾಗಿದೆ. ಮೇಲಿನ ವಾಕ್ಯವು "ಬೇರೆ ಬೇರೆ ದೇಶಗಳ ನಿವಾಸಿಗಳು ಬಹು ಮಾತ್ಸರ್ಯದಿಂದ ಒಬ್ಬರಕೂಡೊಬ್ಬರು ಜಗಳಾಡುತ್ತಾರೆ ಹೀಗೆ ಇರಬೇಕು. "ಒಬ್ಬರಿಗೊಬ್ಬರು ಎಂಬ ಪದವಿದ್ದರೆ ಅರ್ಥವ್ಯತ್ಯಾಸವಾಗುತ್ತದೆ. ಅಂದರೆ ಒಬ್ಬರಿಗೋಸ್ಕರ ಒಬ್ಬರು ಎಂಬ ಅರ್ಥದ ಪ್ರತೀತಿಯಾಗುತ್ತದೆ. ಇದು ಇಲ್ಲಿ ಗ್ರಾಹ್ಯವಲ್ಲ. 'ಒಬ್ಬರಕೂಡೊಬ್ಬರು, ಒಬ್ಬರೊಂದಿಗೊಬ್ಬರು" ಎಂಬ ಅರ್ಥವು ಇಲ್ಲಿ ಇಷ್ಟವಾದದ್ದು.

೨. ಈಗ ವ್ಯಾಕರಣ ಮಾಡುವ ಕೆಲಸವು ಸುಲಭವಾಗುವದು. ಮೇಲೆ ಶುದ್ಧಮಾಡಿ ಹೇಳಿದ ವಾಕ್ಯದಲ್ಲಿ ಬೇರೆ ಬೇರೆ, ದೇಶಗಳ, ನಿವಾಸಿಗಳು, ಬಹು ಮಾತ್ಸರ್ಯದಿಂದ, ಜಗಳಾಡುತ್ತಾರೆ, ಈ ಪದಗಳ ವ್ಯಾಕರಣ ಮಾಡುವದು ಬಹು ಸರಳವಾಗಿದೆ. ಒಬ್ಬರ ಕೂಡೊಬ್ಬರು ಇದೊಂದು ಪದದ ವ್ಯಾಕರಣ ಹೇಳಿದರೆ ಮುಗಿಯಿತು. ಇದು ಸಂಸ್ಕೃತದಲ್ಲಿ ಅನ್ಯೋನ್ಯಂ, ಪರಸ್ಪರಂ ಎಂಬ ಪದಗಳಿಗೆ ಸಮಾನವಾದದ್ದು. ಇದರ ಅರ್ಥ ಅನ್ಯೋನ್ಯವಾಗಿ, ಪರಸ್ಪರವಾಗಿ ಎಂದಾಗುತ್ತದೆ. ಅಂದಮೇಲೆ ಏನೂ ಲೋಪ ಮಾಡದೆ ಈ ವಾಕ್ಯವನ್ನು "ಬೇರೆ ಬೇರೆ ದೇಶಗಳ ನಿವಾಸಿಗಳು ಬಹು ಮಾತ್ಸರ್ಯದಿಂದ ಒಬ್ಬರ ಕೂಡೊಬ್ಬರಾಗಿ ಜಗಳಾಡುತ್ತಾರೆ." ಎಂದು ಬರೆಯುವದು ಬಾಲಬೋಧ ಸ್ವರೂಪದ್ದಾಗುವದು. ಇಲ್ಲಿ 'ಒಬ್ಬರ ಕೂಡೊಬ್ಬರಾಗಿ' ಇದು ರೀ. ವಾ. ಕ್ರಿ. ವಿ. ಅ. ವಾಯಿತು ಮುಖ್ಯತಃ ಇಂಥಲ್ಲಿ ಲಕ್ಷದಲ್ಲಿಡತಕ್ಕ ಸಾಮಾನ್ಯವಚನ ಯಾವದೆಂದರೆ:- "ವಾಕ್ಯಗಳಲ್ಲಿ ಬಿವ್ಹೊಮ್ಮೆ ಪ್ರತ್ಯಯಗಳೂ ಪದಗಳೂ ಲೋಪ ಹೊಂದುತ್ತಿದ್ದರೂ ಅರ್ಥಕ್ಕೆ ಲೋಪವಿಲ್ಲ." ಉದಾಹರಣಾರ್ಥವಾಗಿ 'ಒಬ್ಬರ ಕೂಡೊಬ್ಬರು' ಎಂಬಲ್ಲಿ 'ಆಗಿ' ಎಂಬದು ಲೋಪವಾಗಿದೆ, ಎಂದು ತಿಳಿಯಬೇಕು. ಇನ್ನು ಈ ವಾಕ್ಯದಲ್ಲಿ 'ಬೇರೆ ಬೇರೆ' ಎಂಬದು ನಾನಾ ಎಂಬರ್ಥದ ವಿಶೇಷಣವು. ಮಾತ್ಸರ್ಯದಿಂದ ಎಂಬಲ್ಲಿ ಉಪಪದ ತೃತೀಯಾ. ಉದಾ:- ಸಿಟ್ಟಿನಿಂದ ಮಾತಾಡಿದನು. ಅಂದರೆ ಸಿಟ್ಟಿನಿಂದ ಯುಕ್ತನಾಗಿ ಮಾತಾಡಿದನು, ಎಂಬರ್ಥ. ಇಂಥಲ್ಲಿ ತೃತೀಯೆಗೆ ಕರಣಾರ್ಥವಿಲ್ಲ. ಈ ವಿಷಯದಲ್ಲಿ ಇದಕ್ಕೂ ವಿಶದವಾದ ಸ್ಪಷ್ಟೀಕರಣದ ಅವಶ್ಯಕತೆ ತೋರುವದಿಲ್ಲ.

ಮೂಡಗೇರಿ.
೧೨-೨-೧೯೧೪ಳ.

ವೆಂಕಟೇಶ ರಾ. ಪ್ರಭು, ಹೆಡ್‌ಮಾಸ್ತರ.

ದೇವರ ಸ್ತುತಿ.

॥ತ್ರಿಪುಡೆ॥

ಸ್ವಾಮಿ ದೇವನೆ! ಲೋಕಪಾಲನೆ! ನಿನ್ನಡಿಗೆ ನಾಂ ನವಿಪೆವು!।
ಪ್ರೇಮದಿಂದೀಕ್ಷಿಪುದು ನಮ್ಮನು ನಿನಗೆ ನಮಿಪೆವು! ನಮಿಪೆವು! ॥
ನೇಮಿಸೆಮ್ಮನು ಧರ್ಮ ಮಾರ್ಗದೆ ನಿನಗೆ ನಮಿಪೆವು! ನಮಿಪೆವು ।
ಕ್ಷೇಮದಿಂ ಪರಿಪಾಲಿಸೆಮ್ಮನು ಪ್ರೇಮದಿಂದಲಿ ನಮಿಪೆವು ॥೧॥

ದೇವ ದೇವನೆ! ದೀನಪಾಲನೆ! ಶರಣಜನಸಂತ್ರಾಣನೇ! ।
ನಾವು ಮಾಡಿದ ಪಾತಕಂಗಳ ಪರಿಹರಿಸು ನೀಂ ಬೇಗನೆ! ॥
ಕಾವುದೈ! ಮಾತ್ರಾಂಡರೂಪದೆ ಜಗವ ಬೆಳಗುವ ದೇವನೇ ।
ಜೀವಕೋಟಿಯು ನಿನ್ನ ಕಾಣದೆ ಬಾಳ್ವುದೇಂ ಜಗದೊಡೆಯನೇ ॥೨॥

ಕಾಯದಿಂ ವಚನಂಗಳಿಂ ಮೇಣ್ ಚಿತ್ತದಿಂ ಕರಣಂಗಳಿಂ ।
ನೋಯನುಡಿದೇನೇನನನ್ಯರಿಗೆಸಗಿದೆವೊ ಅಜ್ಞಾನದಿಂ ॥
ದಾಯತಪ್ಪಿದರಂಬು ಮುಳಿಯದೆ ಪ್ರೇಮದಿಂ ಕ್ಷಮಿಸುತ್ತೆ ನೀಂ ।
ಕಾಪೊ ದೇವನೆ, ದೀನರಕ್ಷಕನಲ್ತೆ ನಿನ್ನಯ ಶರಣರಂ ॥ ೩ ॥

ಇರುಳೊಳಂ ಪಗಲಲ್ಲಿಯುಂ ಮೇಣ್ ಸಂಜೆಯಲ್ಲಿಯುವೆತ್ತಲುಂ ।
ಪರರಿಗಹಿತವನೆಸಗಿದೆವೊ, ಹಿತವಾಚರಿಸಿದೆವೊ, ಕಾಣೆವು ॥
ಧರೆಗೆ ಕಣ್ಣಾಗಿರುವ ದೇವನೆ, ನಮ್ಮ ದುಷ್ಕೃತಮೆಲ್ಲಮುಂ ।
ಮರೆದು ಕಾಯ್ವೈ ಮರಳಿ ನಮಿಪೆವು, ತೊಲಗಿಸೆಮ್ಮಜ್ಞಾನಮುಂ ॥೪॥

ನೀನೆ ತಂದೆಯು ನೀನೆ ತಾಯ್ ಮೇಣ್ ನೀನೆ ಬಂಧುವು ಬಳಗವು ।
ನೀನೆ ಮಿತ್ರನು ನೀನೆ ಧಾತನು ನೀನೆ ರಕ್ಷಕನರಸನು ॥
ನೀನುಪಾಲಿಸದಿರ್ದೊಡೆಮ್ಮನು ಕಾವರಾರೀ ಜಗದೊಳು ।
ದೀನರಕ್ಷಕ ರಕ್ಷಿಸೆಮ್ಮನು ನಿನ್ನಡಿಯನಚ್ಚಿರ್ದೆವು ॥೫॥

ನಿನ್ನ ನುತಿಸದ ವದನ ವೇಸ್ಟ್ ಬಾಳ್ ವದನವೆನಿಪುದು ಲೋಕದೆ ।
ನಿನ್ನ ಪೂಜಿಸದಿರ್ಪ ಕರಗಳು ಪೊರಗಳೆಂಬುದು ಮಿಥ್ಯವೇ ॥
ನಿನ್ನನೀಕ್ಷಿಸದಿರ್ಪನೇತ್ರವು ಮುರಿದ ಪಾತ್ರವು ದೇವನೇ ।
ನಿನ್ನ ಜಾನಿಸದಿರ್ಪ ಚಿತ್ತವೆ ಹುತ್ತವೆಲೆ ಜಗದೀಕನೆ ॥ ೬ ॥

ವಿತ್ತವೆಂಬುದನರ್ಥಹೇತುವೆನುತ್ತೆ ತಿಳಿವುತೆ ಜಗದೊಳು।
ಮತ್ತರಾಗಿಹ ಕೃತ್ಯಕರಣದ ದೋಷದೊಳು ಮುಳುಗಿರ್ದೆವು ॥
ಉತ್ತಮರ ಸಂಗಡಲಿ ಸುಕೃತವ ಮಾಳ್ಪತೆರದಲಿ ಕರುಣಿಸಿ।
ಚಿತ್ತಶುದ್ಧಿಯ ನಿತ್ತುರಕ್ಷಿಪುದೆಮ್ಮನೆಲೆ ಜಗದೀಶನೆ ॥ ೭ ॥
ಕರಿಯಕಾಯ್ದ; ವಿಭೀಷಣನ ಪರಿಪಾಲಿಸಿದೆ; ಪಾಂಚಾಲಿಯ।
ಮೊರೆಯನಾಲಿಸಿ ಮಾನಭಂಗವ ತಪ್ಪಿಸಿದೆ; ಪ್ರಲ್ಹಾದನ ॥
ಕರುಳಾಳವ ಪರಿಹರಿಸಿ ಪೊರೆದೈ; ಧ್ರುವಗೆ ಪಟ್ಟವ ಗಟ್ಟಿದೆ; ।
ಶರಣಜನಪರಿಪಾಲನೆಂಬೀ ಬಿರುದು ಸಲ್ವುದು ನಿನ್ನೊಳು ॥ ೮ ॥
ಪುಟ್ಟಿದುದು ಮೊದಲಾಗಿ ಮಾಡುತಲಿರ್ಪ ಕಜ್ಜಗಳೆಲ್ಲವು।
ನೆಟ್ಟನೆಯೆ ಸೇರುವವು ನಿನ್ನನು ನಿನಗಗೋಚರವಾವುದು ॥
ಕೆಟ್ಟುವುಗಳಿಸಗಿರ್ಪವೆನುತಲಿ ಸಿಟ್ಟುಗೊಳ್ಳದೆ ಮನ್ನಿಸು।
ಸೃಷ್ಟಿಕರ್ತನೆ, ರಕ್ಷಕನೆ, ಲಯಕರ್ತನೇ ವಂದಿಸುವೆವು! ॥ ೯ ॥
ನೀನೆ ನಾರಾಯಣನು ಶಂಕರನಗ್ನಿಯರ್ಕನು ಬ್ರಹ್ಮನು।
ನೀನೆ ಲೋಕಕ್ಕೊಡೆಯನೆಂಬುದನರಿಯದೆಯೆ ಜನಜಾಲವು ॥
ಹೀನಬುದ್ಧಿಯ ಪೆಚ್ಚು ಕುಂದುಗಳಟ್ಟು ಭೇದವ ತಿಳಿವುತೆ।
ಭಾನುಕೋಟಿಪ್ರಕಾಶ ನಿನ್ನನು ನಂಬಿಯನುದಿನ ಭಜಿಪೆವು! ॥ ೧೦ ॥

8-3-1914.

T. L. HEGGADE,
School Master, Karki.

ಅಲಂಕಾರದರ್ಪಣ.

(ಕಳೆದ ತಿಂಗಳ ಸಂಚಿಕೆಯ ೨೩ನೆಯ ಪುಟದಿಂದ ಮುಂದೆ ಸಾಗಿದ್ದು.)

೭೦. ಅವಜ್ಞಾಲಂಕಾರವು. ಲಕ್ಷಣ:— ಬಂದರ ಗುಣದಿಂದ ಮತ್ತೊಂದಕ್ಕೆ ಗುಣವು ಇಲ್ಲವೆ ದೋಷದಿಂದ ದೋಷವು ಪ್ರಾಪ್ತವಾಗಲಿಲ್ಲವೆಂದು ವರ್ಣಿಸಿದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ ॥ ಅಂಬುಧಿಯು ಪೊಕ್ಕು ತಂದರು।
ತಂಬಿಗೆಯೊಳು ಬರುವುದಲ್ಪ ಜಲವದು ನಿಜದಿಂ ॥

ಇಲ್ಲಿ ಸಮುದ್ರದ ಜಲಸಮೃದ್ಧಿತ್ವಗುಣದಿಂದ ತಂಬಿಗೆಗೆ ಜಲಸಮೃದ್ಧಿತ್ವಗುಣವು ಪ್ರಾಪ್ತವಾಗಲಿಲ್ಲವೆಂದು ಹೇಳಿದೆ. ಮತ್ತೆ ಉದಾ:-

ಭಾವಿನಿ॥ ಅಲುಪನಿಗೆ ವಿದ್ಯೆಯದು ಪಂಡಿತ।
ರೊಳಗು ಬೆರೆತರು ಬಾರದೆಂಬುದ।
ಗೆಳೆಯ ಬುದ್ಧಿಯ ಕೋಟಿಯೇ ತಿಳಿ ನೀನು ನಿಶ್ಚಯದೆ॥
ಗಿಳಲಿನಲಿ ಬರುತಿಪ್ಪುದೇ, ಬಹು।
ಜಲವು ಹಾನಾ ಹೊಳೆಗೆ ಹೋದರು।
ಮುಳುಗಿದರು ಹಿಡುಕೊಂಡು ತಲೆಕೆಳಗಾಂಗಿ ನೀರೊಳಗೆ॥

ಇಲ್ಲಿ ಪಂಡಿತರ ಗುಣದಿಂದ ಅಲ್ಪ ಬುದ್ಧಿಯವನಿಗೆ ಸುವಿದ್ಯಾತ್ವಗುಣವೂ, ಹೊಳೆಯ ಜಲಸಮೃದ್ಧಿತ್ವಗುಣದಿಂದ ಗಿಳಲಿಗೆ ಜಲಸಮೃದ್ಧಿತ್ವಗುಣವೂ ಪ್ರಾಪ್ತವಾಗುವದಿಲ್ಲೆಂದು ಹೇಳಿದೆ. ಮತ್ತೆ ಉದಾ:—

ಭಾವಿನಿ॥ ಬುಧರ ಮನವನದೆನ್ನ ನುಡಿಗಳು।
ಸುಧಿಯ ಸೂಸಿದ ತೆರದೆ ನಂದದೆ।
ಮುದಿಸುತಿರಲಾನಂದ ಸಂದೋಹದ ಮರಂದದಲಿ॥
ಅದರಿನಿವುಗಳಿಗೇನದರಸರ*।
ಮದದ ಪಿಕನೆಗಳಿಂದ ರಮಣಿಯು।
ಮದಿಸಳ್ಕೈ, ಬಾಲಕರ ಮನವನು ಜನ್ನನಿಗರಂತೆ॥
(ಮಂಗಲಾಚರಣ ನೋಡು)

ಇಲ್ಲಿ ಕವಿತ್ವ ಹಾಗು ಕಾಂತೆಯರ ಗುಣಗಳಿಂದ ಅರಸಿಕ ಹಾಗು ಬಾಲಕರ ಹೃದಯೊಲ್ಲಾಸ ಗುಣವು ಪ್ರಾಪ್ತವಾಗುವದಿಲ್ಲೆಂದು ಹೇಳಿದೆ. ಇನ್ನು ದೋಷಾಭಾವವು ಹೇಗಂದರೆ:—

ಕಂದ॥ ಸರಸೀರುಹಗಳು ಮುಗಿಯಲು।
ಕೊರತೆಯದೇನಿಲ್ಲವಮೃತ ಕರಗಳದೆನಿತುಂ॥

ಇಲ್ಲಿ ಕಮಲಗಳ ಅವಿಕಾಸಿತ್ವ (ಮುಚ್ಚಿದ) ದೋಷದಿಂದ ಅಮೃತಕರಗಳ ಕೊರತೆಯ ದೋಷವು ಬರುವದಿಲ್ಲವೆಂದು ಹೇಳಿದೆ. (ಸೂರ್ಯನು ಮುಳುಗಲು ಕಮಲಗಳು ಮುಚ್ಚುವವು. ಆವಾಗಲೇ ಚಂದ್ರೋದಯವಾಗುವದು.) ಮತ್ತೆ ಉದಾ:—

---

* ಪಾಠಾಂತರ:- ಅದರಿನಿವುಗಳಿಗೇನು? ವಿರಸರ.

ಭೋಗ ॥ ನೀನು ವೃಷಭವನ್ನೇರ ।
ಲೀನು ಕೊರತೆಯಿಲ್ಲ ಗಜಕೆ ।
ಹಾನಿಯೇನು ಹೇಮಕಿನ್ನು ಹಾವು ಕರದಲಿ ॥
ನೀನು ಕಂಕಣಗಳ ಮಾಡೆ ।
ಭಾನುಗಳಿಗದೇನು ಕೊರತೆ ।
ಊನಚಂದ್ರನನ್ನು ಶಿರದೆ ಧರಿಸಲೀಶನೇ ॥

ಇಲ್ಲಿ ಈಶ್ವರನು ಕರಿ-ಕನಕ-ರವಿಗಳನ್ನು ಸ್ವೀಕರಿಸದ ದೋಷದಿಂದ ಅವುಗಳ ಕೊರತೆಯ ದೋಷವು ಜಗತ್ತಿನಲ್ಲಿ ಉಂಟಾಗಲಿಲ್ಲವೆಂದು ಹೇಳಿದೆ. ಮತ್ತೆ ಉದಾ:—

ಭಾಮಿನಿ ॥ ಜೋಳದಂಟುಗಳನ್ನು ದನಗಳು ।
ಕೋಳಿವಿಾನಗಳನ್ನು ಯವನರು ।
ತೋಳ ಮೊದಲಾದವುಗಳನು ವನಹುಲಿಯು ತಿನುತಿರಲು ॥
ಕೇಳು, ಹಿಂದೂಧರ್ಮದಿಂ ನೆರೆ ।
ಬಾಳುವವಗೆಂದೆಂದು ಬಾರದು ।
ಕಾಳುಗಳ ಕೊರತೆಯದು ನಿಶ್ಚಯವಾಗಿ ಭೂಮಿಯಲಿ ॥

ಇಲ್ಲಿ ದನ ಮೊದಲಾದವುಗಳು ಕಾಳುಗಳನ್ನು ಸ್ವೀಕರಿಸದ ದೋಷದಿಂದ ಹಿಂದೂ ಧರ್ಮಿಗಳಿಗೆ ಅವುಗಳ ಕೊರತೆಯ ದೋಷವುಂಟಾಗುವದಿಲ್ಲೆಂದು ಹೇಳಿದೆ. ಇದು ಪ್ರಥಮ-ದ್ವಿತೀಯ ಉಲ್ಲಾಸಗಳಿಗೆ ಪ್ರತಿದ್ವಂದ್ವವಾಗಿದೆ.

---

೭೧ ಅನುಜ್ಞಾಲಂಕಾರವು. ಲಕ್ಷಣ:—ಗುಣವುಳ್ಳ ದೋಷವನ್ನು ಬಯಸಿದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ ॥ ಬರಲೆನ್ನೊಳು ವಿಪದಂಗಳ್ ।
ಹರಿನಾಮವನೆಂತು ನೆನೆವೆ ಹಗಲಿರುಳುಗಳುಂ ॥

ಇಲ್ಲಿ ಹರಿಸಂಕೀರ್ತನ ವಿಪತ್ತುಳ್ಳ ದೋಷವನ್ನು ಬಯಸಿದ್ದು ಸ್ಪಷ್ಟವೇ ಅದೆ. ಮತ್ತೆ ಉದಾ:—

ಭಾಮಿನಿ ॥ ಎನ್ನ ದೇಹದೆ ಜೀರ್ಣವಾಗಲಿ ।
ನಿನ್ನಬಹಳುಪಕೃತಿಯು ಕಪಿಗಳ ।
ರನ್ನ, ಗುಣಿ, ಹಣುಮಣ್ಣ, ರಕ್ಕಸರುಕ್ಕುವುರಿದಣ್ಣ ॥

ಬನ್ನಗಳ ಕಂಪನ್ನರಾಗಲಿ ।
ಎನ್ನುವನು ತಾನನ್ಯರುಪಕೃತಿ ।
ಯನ್ನು ತೀರಿಸಲಿಚ್ಛಿಸುವ ನರ, ಮುನ್ನಿನುಪಕೃತರು ॥

ಇದು ಹನುಮಂತನಿಗೆ ರಾಮಚಂದ್ರನು ಅಡಿದ ವಾಕ್ಯವು. ಇಲ್ಲಿ ತಿರುಗಿ ಉಪಕಾರವಮಾಡದಿರುವದು ದೋಷದ ಅಂಗೀಕಾರವೆನಿಸುವದು, ಇದು ಹನುಮಂತನಿಗೆ ವಿಪತ್ತು ಬರಬಾರದೆಂಬ ಹೇತುವಿನ ಗುಣದಿಂದ ಕೂಡಿರುವದು. ಮತ್ತೆ ಉದಾ:—

ಭಾವಿನಿ ॥ ಸುರರ ಸಿರಿಯನದೇನು ಬಯಸಲಿ ।
ಬರುವೆ ನಾನು ಪಿಶಾಚರೂಪವ ।
ಧರಿಸಿಯಾದರು ಹರನೆ ನಿಮ್ಮಯ ಬದಿಗೆ ಪ್ರೇಮದಲಿ ॥
ಸುರಪತಿಯೆ ಮೊದಲಾದ ಸಕಲರು ।
ಬರುವರೈ ತಲೆಯೊಡೆದು ಕೊಂಡುದ ।
ನರಿಯದಲೆ ನಿಮ್ಮಡಿಗೆ ದ್ವಾರಾಧಿಪರ ಹೊಡೆತದೊಳು ॥

ಇಲ್ಲಿ ಪಿಶಾಚರೂಪವನ್ನು ಬಯಸಿದ್ದು ದೋಷದ ಅಂಗೀಕಾರವೆನಿಸುವದು. ಇದು ತನಗೆ ಸುಲಭವಾಗಿ ದೇವತೆಗಳಿಗಿಂತ ಹೆಚ್ಚಿನ ಸೌಖ್ಯವ ದೊರಕುವದೆಂಬ ಹೇತುವಿನ ಗುಣದಿಂದ ಕೂಡಿದೆ.

---

೭೨. ಲೇಶಾಲಂಕಾರವು. ಲಕ್ಷಣ:— ದೋಷಕ್ಕೆ ಗುಣವನ್ನಾಗಲಿ ಗುಣಕ್ಕೆ ದೋಷವನ್ನಾಗಲಿ ಕಲ್ಪಿಸಿದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ ॥ ಶುಕವೆ, ಮನದಂತೆ ಚರಿಸುವ ।
ಸಕಲದೆ ವನವಾಸ ಮೃಗವಿಹಂಗಮುಗಳಲಿ ॥
ಅಕಟ ಮೃದುವಚನದಿಂದಲೆ ।
ನಿಕಟದ ಬಂಧನವು ನಿನಗೆ ಬಂದುದು ನಿರುತಂ ॥

ಇದು ರಾಜನಿಗೆ ಪ್ರೀತಿಯವನಾದ ಹಾಗು ವಿದ್ವಾಂಸನಾದ ತನ್ನ ಮಗನು ಹಗಲೆಲ್ಲ ರಾಜಮಂದಿರದಲ್ಲಿರುತ್ತಿರಲು, ಅವನ ದರ್ಶನಕ್ಕೆ ಉತ್ಕಂಠಿತನಾದ ಹಾಗು ಮನೆಯಲ್ಲಿಯೇ ಇರುತ್ತಿದ್ದಂಥ ಅವನ ತಂದೆಯು, ಮಗನನ್ನುದ್ದೇಶಿಸಿ ಅಡಿದ ಅಪ್ರಸ್ತುತ ಪ್ರಶಂಸಾರೂಪವಾದ ವಾ

ಕ್ಯವು. ಇಲ್ಲಿ ಪೂರ್ವಾರ್ಧದಲ್ಲಿ, ಉಳಿದ ಪಕ್ಷಿಗಳ ಅವಕ್ಯತ್ವದೋಷವು ಶುಗಳಿಗೆ ಮನಸಿಗೆ ಬಂದಂತೆ ಚರಿಸಲಿಕ್ಕೆ ಅನುಕೂಲವಾಗಿರುವದರಿಂದ ಅದು ವಿದ್ಯಾಂಸನ ತಂದೆಯಿಂದ ಗುಣತ್ವವಾಗಿ ಕಲಿಸಲ್ಪಟ್ಟದೆ. ಉತ್ತರಾರ್ಧದಲ್ಲಿ, ಮಧುರ ಭಾಷಿತ್ವಗುಣವು ಪಂಜರದೊಳಗಿಡಲಿಕ್ಕೆ ಹೇತುವಾಗಿರುವದರಿಂದ ಅದು ದೋಷತ್ವವಾಗಿ ಕಲ್ಪಿಸಲ್ಪಟ್ಟದೆ. ಪುತ್ರದರ್ಶನೋತ್ಕಂಠಿತನಾದವನು ಹೀಗೆ ಕಲ್ಪನೆಗಳನ್ನು ಮಾಡುವದು ಸ್ವಾಭಾವಿಕವು. ಮತ್ತೆ ಉದಾ:—

ಭಾವಿನಿ ॥ ಸರಲವೃತ್ತಿಗೆ ಮೆಚ್ಚಿರುವ ಜನ।
ದಿರುವರ್ಕೆ ಲೋಕಾಪವಾದಕೆ।
ಧರೆಯೊಳೆಲ್ಲಿಯು ಭೀತಿಯಿಂ ಜೀವಿಸುತ ದುಃಖದಲಿ ॥
ಸರಸವಿರಸಗಳರಿದು ಚಿಂತಾ।
ತುರತೆಯನು ಸದಸತ್ಕೃತಿಗಳಿಂ।
ಧರಿಸದಲೆ ಜೀವಿಸುವ ಗ್ರಾವ್ಯನೆ ಧನ್ಯನೀಜಗದೆ ॥

ಇದು ಗ್ರಾವ್ಯನ ಸ್ವಾಚ್ಛಂದ್ಯವನ್ನು ನೋಡಿ ನುಡಿದ ಒಬ್ಬ ಸಾಧುವಿನ ಉದ್ಗಾರವು. ಇಲ್ಲಿ ಸದ್ವೃತ್ತಿಗುಣವು ಸ್ವಚ್ಛಂದಕ್ಕೆ ಅಡ್ಡಿಮಾಡುವದರಿಂದ ಅದು ದೋಷತ್ವವಾಗಿ ಕಲ್ಪಿಸಲ್ಪಟ್ಟದೆ. ಸರಸವಿರಸಗಳನ್ನು ತಿಳಿಯದ ಮೂಢತ್ವದೋಷವು ಸ್ವಚ್ಛಂದಕ್ಕೆ ಅನುಕೂಲವಾಗುವದರಿಂದ ಅದು ಗುಣತ್ವವಾಗಿ ಕಲ್ಪಿಸಲ್ಪಟ್ಟದೆ. ಮತ್ತೆ ಉದಾ:—

ಭಾವಿನಿ ॥ ಯುವನು ಬಹುಗುಣಯುತನುಕಾಮೋ।
ತ್ಸವದಕಿಂತಲು ರಣದೆ ಸಕ್ತನು।
ಇವ ನಿನಗೆ ಬಹುಯೋಗ್ಯನೂರ್ಜಿತರಾಜನಂ
ದೋಷವಾರ್ಜನೆಗಾಗಿ ಚಾಟುಲ।
ಭಾಷೆಯಭ್ಯಾಸವನು ಮಾಡಿದ।
ವೋಷ-ನಿರ್ದಯ-ಚಪಲಗುಣದವರಿಂದೆ ನನಗೇನು ॥

ಮೊದಲಿನ ಅರ್ಥವು ವರಾರ್ಥಿನಿಯಾದ ಕನ್ನಿಕೆಗೆ ಸಖಿಯು ಅಡಿದ ವಾಕ್ಯವು. ಇಲ್ಲಿ ರಾಜನ ವೀರ್ಯೋತ್ಕರ್ಷ ಗುಣವು ಕನ್ನಿಕೆಯ ನಿರಂತರ ಸಂಭೋಗಾಭಿಲಾಷೆಗೆ ಪ್ರತಿಬಂಧಕವಾಗಿದೆ. ಕಾರಣ ಅದು ಕನ್ನಿಕೆಗೆ ದೋಷತ್ವವುಳ್ಳದ್ದಾಗಿದ್ದರೂ ರಾಜನು ಶಿಷ್ಟಾಚಾರನೆಂದು ಅದನ್ನೇ

ಚತುರಳಾದ ಸಖಿಯು ಗುಣತ್ವವಾಗಿ ವರ್ಣಿಸಿದ್ದಾಳೆ. ಅಂದರೆ ರಾಜನ ಸ್ತೋತ್ರ ಮಾಡಿದಂತೆ ಮಾಡಿ, ಕನ್ನಿಕೆಗೆ ದೋಷವನ್ನು ಸೂಚಿಸಿದ್ದಾಳೆ. ಉತ್ತರಾರ್ಧದಲ್ಲಿ, ಗೆಳತಿಯರ ಮುರವತ್ತಿಗಾಗಿ, ರಾಜನಿಗೆ ಮೋದೇ ಎದುರಿಗೆ ಮಾತ್ರ ಮಾನಕೊಡುವದಕ್ಕಾಗಿ, ಕನ್ನಿಕೆಯಿಂದ ಅನ್ಯರ ವಾಕ್ಚಾಪಲ್ಯಾದಿ ಗುಣಗಳು ದೋಷತ್ವಗಳಾಗಿ ವರ್ಣಿಸಲ್ಪಟ್ಟಿವೆ. ಅಂದರೆ "ಅಂಥ ಗುಣದವರಿಂದೆ ನಸಗೇನು?" ಎಂಬ ಮಾತನ್ನು ಕೇಳಿದ ರಾಜನಿಗೆ ತಾನು ಇವಳ ಮನಸಿಗೆ ಬಂದೆನೆಂದು ತಿಳಿದರೂ ಸಖಿಯರಿಗೆ ಅವಳ ಮುಖ ವಿಕಾರದಿಂದ ಇವನಲ್ಲಿ ಇಂಥ ಗುಣಗಳು ಇಲ್ಲವೆಂಬ ಅರ್ಥವಾಗುವದು. (ಹೆಂಗಸರನ್ನು ಮೋಹಗೊಳಿಸಲಿಕ್ಕೆ ವಾಕ್ಚಾಪಲ್ಯವೂ ಮೋಸತ್ವವೂ ಸಾಧನಗಳಾಗಿರುವವು. ನಿರ್ದಯ-ಚಪಲತ್ವಗಳು ಸುರತಕಾಲೋಚಿತಗಳಾಗಿವೆ.)

ಇವೆಲ್ಲ ಉದಾಹರಣಗಳಲ್ಲಿ ಬೇರೆ ಜನರಿಗೆ ತಿಳಿಯುವಂತೆ ವ್ಯಕ್ತಿಗೆ ಸಂಬಂಧಿಸಿದ ನಿಂದಾಸ್ತುತಿಗಳು ಮಾಡಲ್ಪಟ್ಟವೆ. ಕಾರಣ ಇದು ವ್ಯಾಜಸ್ತುತಿಗಿಂತ ಬೇರೆತರವಾಗಿದೆ. ವ್ಯಾಜಸ್ತುತಿಗಳಲ್ಲಿ ದೋಷಗುಣಗಳಿಗೆ ಗುಣದೋಷೀಕರತ್ವವಿದ್ದರೂ ಅಂಥಲ್ಲಿ ಬೇರೆ ಗುಣಗಳ ಪ್ರತೀತಿಯಿರುವದು. ಹೇಗಂದರೆ:—

ಭಾವಿನಿ ॥ ಮುರಹರನು ಶಶಿಕಲೆಯು ಹರಗಲ।
ವಿರದೆ ಕರಿವಾಗಿರಲದಾವನು! ।
ಅರಸ, ನಿನ್ನಯ ಜಸವೆ ಬಿಳುಪಾಗಿಹುದು ಪೇಳೆನಗೆ ॥

ಇಲ್ಲಿ ಕೃಷ್ಣಾದಿಗಳನ್ನು ಬಿಳಿಪುಮಾಡದೆ ಇದ್ದ ಕೀರ್ತಿಯು ದೋಷದ ಗುಣತ್ವವನ್ನು ಹೊಂದುವದೆಂಬುದಷ್ಟೇ ಅಲ್ಲ, ಸರಿಸಂಖ್ಯಾರೂಪದಿಂದ ಇವುಗಳನ್ನು ಬಿಟ್ಟು ಉಳಿದವೆಲ್ಲವನ್ನು ಅದು ಬಿಳಿದು ಮಾಡಿತೆಂಬ ಬೇರೆ ಗುಣದ ಪ್ರತೀತಿಯಿರುವದು. ಕಾರಣ ಇದು ಲೇಶದಲ್ಲಿ ಬರುವದಿಲ್ಲ. ಮತ್ತೆ ಉದಾ:—

ಭಾವಿನಿ ॥ ಕೊಡಲಿಲ್ಲವರಿಗಳಿಗೆ ಬೆನ್ನನ।
ದಿಡಲಿಲ್ಲ ವಕ್ಷವನದನ್ಯರ।
ಮಡದಿಯರಿಗೆಂದೆಂದು ಕಿವಿಗೊಡಲಿಲ್ಲ ಪಿಶುನರಿಗೆ ॥

ಶಾಲಾಪತ್ರಿಕೆ.

ಪುಸ್ತಕ ೫೦. | ಮೇ ೧೯೧೪. | ಸಂಚಿಕೆ ೫.

ಸ್ಫುಟವಿಷಯಗಳು.

೧. ಪನಾಮಾ-ಪಾಸಿಪಿಕ್-ವಿಶ್ವಪ್ರದರ್ಶನ.

ಸುಯೇಝ್‌ನ ಕಾಲುವೆಯಾದಂದಿನಿಂದ ಜಗತ್ತಿನ ಇತಿಹಾಸದಲ್ಲಿ ಎಷ್ಟು ಮಹತ್ವದ ಹೆಚ್ಚು ಕಡಿಮೆಗಳಾಗಿರುವವೆಂಬದು ಎಲ್ಲರಿಗೂ ಗೊತ್ತುಂಟು. ಜಗತ್ತಿನ ಇತಿಹಾಸದ ಪ್ರವಾಹವು ಈಗ ಯಾವದಿಕ್ಕಿನಿಂದ ಹರಿಯುತ್ತಿರುವದೋ ಅದೇ ದಿಕ್ಕಿನಿಂದ ಹರಿಯುವದೆಂದು ಸುಯೇಝ್‌ನ ಕಾಲುವೆಯಾಗುವದಕ್ಕಿಂತ ಮುಂಚೆ ಯಾವ ಇತಿಹಾಸಕಾರರಿಗೂ ಹೇಳುವದಕ್ಕೆ ಅಸಾಧ್ಯವಾಗಿತ್ತು. ಸುಯೇಝ್‌ನ ಕಾಲುವೆಯಾಗದಿದ್ದರೆ ಹಿಂದುಸ್ತಾನ, ಯುರೋಪಗಳಿಗೆ ಈಗಿರುವ ಸಂಬಂಧವು ನಿಶ್ಚಯವಾಗಿ ಉಂಟಾಗುತ್ತಿದ್ದಿಲ್ಲ. ಭೂಕಂಪದಿಂದ ನದಿಗಳ ಪ್ರವಾಹಗಳು ಬದಲಾಗುವಂತೆ, ಜ್ವಾಲಾಮುಖಿಗಳಿಂದ ನೂತನ ಭೂಪ್ರದೇಶಗಳು ದೃಷ್ಟಿಗೋಚರವಾಗುವಂತೆ, ಮಾನವೀಪ್ರಾಣಿಗಳ ಪ್ರಸ್ತುತದಂಥ ಕೆಲವು ಪ್ರಚಂಡ ಕೃತಿಗಳಿಂದ ಜಗತ್ತಿನ ಇತಿಹಾಸದಲ್ಲಿ ವ್ಯಾಪಾರಸಂಬಂಧದಿಂದಲೂ ರಾಷ್ಟ್ರಸಂಬಂಧದಿಂದಲೂ ಭಯಂಕರವಾದ ಕ್ರಾಂತಿಯುಂಟಾಗುವದು.

ಡಿ ಲೆಸೆಪ್ಸ ಎಂಬ ಪ್ರಸಿದ್ಧ ಫ್ರೆಂಚ ಎಂಜಿನಿಯರನು ಪಿಶಿಯಾಯುರೋಪಖಂಡಗಳನ್ನು ಸುಯೇಝ್‌ಕಾಲುವೆಯಿಂದ ಕೂಡಿಸಿದನಷ್ಟೇ. ಈ ಗೃಹಸ್ಥನಿಗೆ ಅದೇಕಾಲಕ್ಕೆ ಪನಾಮಾಕಾಲುವೆಯ ಕಲ್ಪನೆಯೂ ಬಂದಿತ್ತು. ಮತ್ತು ಅದರಂತೆ ಅವನು ಪನಾಮಾಕ್ಕೆ ಹೋಗಿ ತನ್ನ ಕಲ್ಪನೆಗೆ ಮೂರ್ತ ಸ್ವರೂಪವನ್ನು ಕೊಡುವದರ ಸಲುವಾಗಿಯೂ ಹಲವು ಪ್ರಯತ್ನಗಳನ್ನು ಮಾಡಿದನು. ಇವನ ದೇಶದ, ಅಂದರೆ ಫ್ರಾನ್ಸಿನ ಸರಕಾರದವರಾದರೂ ಈ ಕಾಲುವೆಯ ಸಲುವಾಗಿ ಹಲವು ಪ್ರಯತ್ನಗಳನ್ನು ಮಾಡಿದರು. ಆದರೆ ಈ ಕೆಲಸವು ಸುಯೇಝ್‌ನ ಕಾಲುವೆಯಷ್ಟು ಸುಲಭಸಾಧ್ಯವಾಗಿದ್ದಿಲ್ಲ. ಅಲ್ಲದೆ, ಅಲ್ಲಿಯ ಗುಡ್ಡಗಾಡು ಪ್ರದೇಶವೂ ರೋಗದ ಹಾವಳಿಯೂ

ಈ ಕೆಲಸಕ್ಕೆ ವಿಘ್ನವನ್ನುಂಟುಮಾಡುತ್ತಿದ್ದವು. ಆದ್ದರಿಂದ ಇವನಿಗೂ ವನ ದೇಶದ ಸರಕಾರಕ್ಕೂ ಈ ಕೆಲಸದಲ್ಲಿ ಯಶಸ್ಸು ಬರಲಿಲ್ಲ. ಅ ಹ್ಯಾಗೇ ಇರಲಿ. ಯಾವ ಕಾರ್ಯದಲ್ಲಿ ಎಷ್ಟನೆಯವರಿಗೆ ಅಪಯಶಸ್ಸು ಉಂಟಾಯಿತೋ, ಯಾವ ಕಾರ್ಯದಲ್ಲಿ ಲಕ್ಷಾವಧಿ ಜನರು ಸಾವಿಗೀಡಾರೋ, ಯಾವ ಕಾರ್ಯವನ್ನು ಅಶಕ್ಯವೆಂದು ತಿಳಿದು ಇತರ ರಾಷ್ಟ್ರದವರು ಕೈಬಿಟ್ಟು ಬಿಟ್ಟರೋ, ಅಂಥ ಅಘಟಿತವಾದ ಕಾರ್ಯದಲ್ಲಿ ಅಮೇರಿಕದವರು ಕೈಹಾಕಿ ಅಪರಂಪಾರವಾದ ಖರ್ಚಿಗೆ ಹಿಂಜರಿಯದೆ, ಗುಡ್ಡದಂಥ ಎಡರುಗಳಿಗೆ ಎದೆಗುಂದದೆ, ಕೊನೆಗೆ ವಿಜಯವನ್ನು ಸಂಪಾದಿಸಿರುವರು. ಅ ಭಯಂಕರವಾದ ರೋಗಗಳಿಗೆ ಎದೆಗೊಟ್ಟು, ನದಿಗಳನ್ನು ಕೈದುಮಾಡಿ, ಅಡ್ಡಬಂದ ಪರ್ವತಗಳನ್ನು ಪದಚ್ಯುತವಮಾಡಿ ಪೆಸಿಫಿಕ್ ಮಹಾಸಾಗರದೊಡನೆ ಅಟಲಾಂಟಿಕ್ ಮಹಾಸಾಗರದ ಲಗ್ನವನ್ನು ಬಳಿಯಿಸಲಾರಂಭಿಸಿರುವರು. ಈ ಲಗ್ನಸಮಾರಂಭವು ೧೯೧೫ನೇ ಇಸ್ವಿಯ ಜನವರಿ ತಿಂಗಳ ೧೫ನೆಯ ತಾರೀಖಿಗೆ ಆಗತಕ್ಕದ್ದಿದ್ದು, ಅಮೇರಿಕವು ಪಾಲಕನೆಂಬ ಸಂಬಂಧದಿಂದ ಜಗತ್ತಿನ ಎಲ್ಲ ರಾಷ್ಟ್ರಗಳಿಗೆ ಈ ಅಪೂರ್ವ ಸಮಾರಂಭಕ್ಕೆ ಆಮಂತ್ರಣ ಕೊಡುತ್ತಾ ಇದೆ. ಇದಲ್ಲದೆ ಈ ಅದ್ವಿತೀಯವಾದ ಸಮಾರಂಭವು ಚಿರಸಂಸ್ಮರಣೀಯವಾಗಬೇಕೆಂದು ಅಮೇರಿಕದವರು ೧೯೧೫ನೇ ಇಸ್ವಿಯ ಫೆಬ್ರುವರಿ ತಿಂಗಳಲ್ಲಿ ಅಲ್ಲಿಯೇ ಒಂದು ವಿಶ್ವಪ್ರದರ್ಶನವನ್ನು ನಡೆಯಿಸತಕ್ಕವರಿದ್ದಾರೆ.

ವಿಶ್ವಪ್ರದರ್ಶನಗಳು ಹಿಂದೆ ಹಲವು ಆಗಿರುವವು. ಇನ್ನು ಮುಂದೆಯೂ ಹಲವು ಆಗಬಹುದು. ಆದರೆ ಈ ಅಮೇರಿಕದ ವಿಶ್ವಪ್ರದರ್ಶನದ ಸ್ವರೂಪವು ಕೆಲವೊಂದು ವಿಶೇಷಪ್ರಕಾರದ್ದಿರುವದು. ಹಿಂದೆ ಪಾರಿಸ್, ಲಂಡನ್, ಅಮೇರಿಕದಲ್ಲಿರುವ ಫಿಲಾಡೆಲ್ಫಿಯಾ, ಚಿಕಾಗೋ ಮೊದಲಾದ ಸ್ಥಳದಲ್ಲಿ ಪ್ರದರ್ಶನಗಳಾದವು. ಆದರೆ ಆ ಪ್ರದರ್ಶನಗಳ ಸ್ವರೂಪವನ್ನು ನಿಶ್ಚಯವಾಗಿ ವಿಶ್ವವ್ಯಾಪಕವಾಗಿಯೇ ಇತ್ತೆಂದು ಹೇಳಲಾಗದು. ಈ ಪ್ರದರ್ಶನಗಳೆಲ್ಲ ಆ ಆ ರಾಷ್ಟ್ರದ ಕೆಲವೊಂದು ವಿಶೇಷ ಸಂಗತಿಯ ದ್ಯೋತಕವಾಗಿದ್ದವು. ಆದರೆ ೧೯೧೫ನೇ ಇಸ್ವಿಯಲ್ಲಿ ಅಮೇರಿಕದಲ್ಲಾಗುವ ಪ್ರದರ್ಶನವು ನಿಜವಾಗಿ ವಿಶ್ವವ್ಯಾಪಕ ಸ್ವರೂಪವುಳ್ಳದ್ದಾಗಿರುತ್ತದೆಂದು ಹೇಳಬಹುದು. ಯಾಕಂದರೆ, ಇದರ ಹಿತಸಂಬಂಧಗಳು ಬರೆ ಅಮೇರಿಕದೊಡನೆ ಇರದೆ, ಇತರ ರಾಷ್ಟ್ರಗಳೊಡನೆಯೂ ಇರುವವು. ಈ ಕಾಲುವೆಯ ಮೇಲೆ

ಅಮೇರಿಕದ ಸ್ವಾಮಿತ್ವವಿರುವದು ನಿಜ. ಆದರೆ ಅದರಿಂದ ಬರೆ ಅಮೇರಿ
ಕ ಒಂದಕ್ಕೇ ಲಾಭವಾಗದೆ ಜಗತ್ತಿಗೆಲ್ಲ ಅದರ ಲಾಭವು ಸಿಗುವದು. ವಿ
ಶ್ವಬಂಧುತ್ವ-ವಿಶ್ವಶಾಂತಿಗಳು ಎಷ್ಟೇ ಅಶಕ್ಯವೆಂದು ತೋರಿದರೂ ಅವು
ಈ ಪ್ರದರ್ಶನದಿಂದ ಸ್ವಲ್ಪಮಟ್ಟಿಗಾದರೂ ಶಕ್ಯತೆಯ ಕ್ಷಿತಿಜದ ಮೇಲೆ
ತಂಗೊಳಿಸಬಹುದು. ಪೌರ್ವಾತ್ಯರಾಷ್ಟ್ರಗಳಿಗೆ ಅಮೇರಿಕದಂಥ ಅತ್ಯಂತ
ಪ್ರಾಗತಿಕ ದೇಶದೊಡನೆ ಸಂಬಂಧ ಉಂಟಾಗುವದರಿಂದ ಈ ರಾಷ್ಟ್ರಗಳ
ವಿಚಾರಗಳಲ್ಲಿ ಬಲವತ್ತರವಾದ ಕ್ರಾಂತಿಯುಂಟಾಗಬಹುದು. ಚೀನೆ-ಜ
ಪಾನಗಳು ಅಮೇರಿಕಕ್ಕೆ ಸವಿಾಪವಾಗುವದರಿಂದ ಈಗಲೇ ಮೇಲಿನ
ಮಾತಿನ ಪ್ರತ್ಯಂತರವು ಬರಲಾರಂಭಿಸಿದೆ. ಈ ಕ್ರಾಂತಿಯ ಪರಿಣಾಮವು
ಪೌರ್ವಾತ್ಯ ವ್ಯಾಪಾರದಲ್ಲಿಯೂ ಕಂಡುಬರಬಹುದು. ಹಿಂದುಸ್ತಾನ-ಚೀನೆ-
ಜಪಾನ ಮೊದಲಾದ ರಾಷ್ಟ್ರಗಳಿಗೆ ಇನ್ನು ಮುಂದೆ ಅಮೇರಿಕದೊಡನೆ
ವ್ಯಾಪಾರಮಾಡುವದಕ್ಕೆ ಹೆಚ್ಚು ಅನುಕೂಲತೆಯುಂಟಾಗಬಹುದು. ಸಾಂ
ಪ್ರತದಲ್ಲಿ ವ್ಯಾಪಾರದ ದೃಷ್ಟಿಯಿಂದ "ಗುರು" ವೆಂದು ಎಣಿಸಲ್ಪಡುವಂಥ
ಅಮೇರಿಕವು ಪೌರ್ವಾತ್ಯ ರಾಷ್ಟ್ರಗಳಿಗೆ ಕೆಲಮಟ್ಟಿಗೆ ಸವಿಾಪವಾಗು
ವದರಿಂದ, ಈ ರಾಷ್ಟ್ರಗಳಿಗೆ ಅಮೇರಿಕದ ವ್ಯಾಪಾರಪದ್ಧತಿಯ ಜ್ಞಾನ
ವನ್ನು ಮಾಡಿಕೊಳ್ಳಲು ಹೆಚ್ಚು ಅನುಕೂಲವಾಗಬಹುದು.

---

೨. ತ್ರಿಕೋಣಾಕೃತಿ ಲೋಲಕವಿಲ್ಲದ ಪ್ರಕಾಶಕಿರಣಗಳನ್ನು ಪೃಥಕ್ಕರಿಸಬಹುದು.

ಸೂರ್ಯಪ್ರಕಾಶದ ಬಿಳಿಯ ಬಣ್ಣವು ಒಂದೇ ಮೂಲವರ್ಣವಿರದೆ ಏಳು ಬಣ್ಣಗಳ ಮಿಶ್ರಣದಿಂದ ಉಂಟಾದದ್ದಿರುವದೆಂಬದನ್ನು ಎಲ್ಲರೂ ಬಲ್ಲರು. ಮತ್ತು ಕಾಜಿನ ತ್ರಿಕೋಣಾಕೃತಿಯ ಲೋಲಕದ ಸಹಾಯದಿಂದ ಸೂರ್ಯಪ್ರಕಾಶವನ್ನು ಹ್ಯಾಗೆ ಸುಲಭವಾಗಿ ಪೃಥಕ್ಕರಿಸಬಹುದೆಂಬದು ಕ್ರಮಿಕ ಏಳನೆಯ ಪುಸ್ತಕದಲ್ಲಿ ಚನ್ನಾಗಿ ವಿವರಿಸಲ್ಪಟ್ಟಿರುವದು. ಚುಮುರಿಗೆ ಹಚ್ಚುವ ಒಂದು ತ್ರಿಕೋಣಾಕೃತಿಯ ಲೋಲಕವನ್ನು ಸಂಗ್ರಹಿಸಿ ಇಡುವದು ಹಳ್ಳಿವಾಡದ ಮಾಸ್ತರರಿಗೂ ಅಸಾಧ್ಯವಿಲ್ಲ. ಆದರೂ ಕಿರಣಪೃಥಕ್ಕರಣದ ಕಲ್ಪನೆಯನ್ನು ಪ್ರತ್ಯಕ್ಷ ಪ್ರಯೋಗವಿಲ್ಲದೆ ಹುಡುಗರಿಗೆ ತಂದು ಕೊಡುವದಕ್ಕೆ ಯಾವ ಮಾಸ್ತರರೂ ಪ್ರಯತ್ನಿಸುತ್ತಿರುವದಿಲ್ಲವೆಂಬದನ್ನು ಮಾತ್ರ ಹೇಳುವಂತಿಲ್ಲ. ಈ ಲೋಲಕವು ಸಮಯಕ್ಕೆ ದೊರೆಯದ್ದರಿಂದ

ಪ್ರಯೋಗವಿಲ್ಲದೆಯೂ ಹಲವು ಜಾಣ ಶಿಕ್ಷಕರು ಈ ವಿಷಯವನ್ನು ಸಾ
ಸುವರು. ಈ ರೀತಿಯಾಗುತ್ತಿರುವದನ್ನು ನೋಡಿ ಲೋಲಕವಿಲ್ಲ
ಪ್ರಕಾಶಕಿರಣವನ್ನು ಪೃಥಕ್ಕರಿಸುವ ಪ್ರಯೋಗವನ್ನು ಇಲ್ಲಿ ಹೇಳುವ
ಇದಕ್ಕೆ ಬೇಕಾಗುವ ಉಪಕರಣಗಳು ಇಂಥಲ್ಲಿ ದೊರೆಯುವದಿಲ್ಲವೆಂ
ಹೇಳುವದಕ್ಕೆ ಆಗುವಂತೆಯೇ ಇಲ್ಲ.

ಉಪಕರಣಗಳು:—ಸಾದಾ ಸಣ್ಣ ಕನ್ನಡಿ, ತಾಬಾಣ, ನೀರು.

ಪ್ರಯೋಗ:—ಒಂದು ಕತ್ತಲೆಯ ಕೋಣೆಯಲ್ಲಿ ಒಂದು ಛಿದ್ರದೊ
ಗಿಂದ ಕಿರಣಶಲಾಕೆಯು ಒಳಗೆ ಬರುವಂತೆ ಮಾಡಬೇಕು. ಅದರ ಬೆಳಕ
ಬೀಳುವ ಸ್ಥಳದಲ್ಲಿ ತಾಬಾಣವನ್ನಿಟ್ಟು ಅದರಲ್ಲಿ ನೀರು ಸುರುವಬೇಕು
ಮತ್ತು ಕನ್ನಡಿಯನ್ನು ನೀರಲ್ಲಿ ಡೊಂಕಾಗಿ (ತಾಬಾಣದ ತಳಕ್ಕೆ ಕೆ
ಪೊಂದು ಕೋನವಾಡಿ) ಇಡಬೇಕು. ಈ ಕನ್ನಡಿಯ ಮೇಲೆ ಆ ಕಿರ
ಶಲಾಕೆಯ ಬೆಳಕು ಬಿದ್ದಿತೆಂದರೆ ಅದು ಪರಾವರ್ತನವಾಗಿ ಮತ್ತು ಕಿರಣ
ಪೃಥಕ್ಕರಣವಾಗಿ ಏಳು ಬಣ್ಣಗಳುಳ್ಳ ಕಿರಣಗಳ ಪಟ್ಟಿಗಳು ಗೋಡೆಯ
ಮೇಲೆ ಸಾಲಾಗಿ ಬೀಳುವವು. ಕೋಣೆಯಲ್ಲಿ ಕತ್ತಲೆಯು ಹೆಚ್ಚು ಇದ್ದಂ
ಈ ಬಣ್ಣಗಳು ನಿಚ್ಚಳವಾಗಿ ಕಾಣುವವು. ಕನ್ನಡಿಯಿಂದ ಗೋಡೆಯ
ರೆಗೆ ಏಳು ಬಣ್ಣಗಳ ಪಟ್ಟಿಗಳು ಹೋಗಿರುವವು. ಇವನ್ನು ನೋಡುವ
ದ್ದರೆ ೪ ಇಂಚು ಅಗಲವೂ ೫½ ಫೂಟು ಉದ್ದವೂ ಆದ ಬಿಂದು ಹ
ಗೆಯ ಮೇಲೆ ಬಿಳಿಯ ಸ್ವಚ್ಛ ಅರಿವೆಯನ್ನು ಮುದಡಿಯಾಗದಂತೆ ಅ
ಸಬೇಕು. ಈ ಹಲಿಗೆಯನ್ನು ಈ ಬಣ್ಣಗಳ ಪಟ್ಟಿಗಳು ಬಿದ್ದಿರು
ಕಡೆಗೆ ನಡುವೆ ಹಿಡಿಯ ಬೇಕು. ಅಂದರೆ ಆ ಹಲಿಗೆಯ ಮೇಲೆ ಏಳ
ಬಣ್ಣಗಳ ಪಟ್ಟಿಗಳು ಕಾಣುವವು. ಈ ಪ್ರಯೋಗವನ್ನು ಕತ್ತಲೆಯ
ಕೋಣೆಯನ್ನು ಬಿಟ್ಟು ತೆರೆದ ಕೋಣೆಯಲ್ಲಿ ಮಾಡಿದರೂ ನಡೆಯುವದು
ಆದರೆ ಬಣ್ಣಗಳು ಅಷ್ಟೊಂದು ಉಜ್ವಲವಾಗಿ ಮೂಡುವದಿಲ್ಲ.

---

೩. ಬಟ್ಟೆಗಳು. ಬೆಳಿ-ಬಿಸಿಲುಗಳು, ಗಾಳಿ-ಮಳೆಗಳು ಇವುಗಳಿಂ
ಶರೀರವನ್ನು ಕಾಪಾಡಿ ಕೊಳ್ಳುವದಕ್ಕಾಗಿಯೂ
ನಾಚಿಕೆಯನ್ನು ಕಳೆದುಕೊಳ್ಳುವದಕ್ಕಾಗಿಯೂ ಮನುಷ್ಯನಿಗೆ ಬಟ್ಟೆಗಳ
ಬೇಕು. ಇದಲ್ಲದೆ ಬಟ್ಟೆಗಳಿಂದ ಮನುಷ್ಯನ ಶರೀರವು ಚಂದವಾ

ಾಣುವದು, ಕೆಲವು ಪ್ರಸಂಗಗಳಲ್ಲಿ ಅಕಸ್ಮಿಕವಾದ ಆಘಾತಗಳಿಂದ ರಕ್ಷಣೆಯಾಗುವ ಸಂಭವವೂ ಉಂಟು. ಶರೀರವನ್ನು ಚಕಂದ ಕಾಣುವಂತೆ ನಾಡುವದು ಉಡುಪಿನ ಮುಖ್ಯ ಉದ್ದೇಶವಲ್ಲ. ಅದು ಗೌಣ ಉದ್ದೇಶವು. ಈ ಮಾತನ್ನು ಲಕ್ಷದಲ್ಲಿಟ್ಟರೆ ಬಟ್ಟೆಗಳ ಸಂಬಂಧದಿಂದ ಹಲವು ಪ್ರಸಂಗಗಳಲ್ಲಿ ನಾವು ಮಾಡುವ ವ್ಯರ್ಥವಾದ ವೆಚ್ಚವು ಕಡಿಮೆಯಾಗುವದು.

ಬೇಸಿಗೆಯಲ್ಲಿ ಬೆವರನಿಂದ ಮೈ ಮೇಲಿನ ಬಟ್ಟೆಗಳು ತೋಯುವವು. ಮೈಗೆ ಹತ್ತಿಕೊಂಡಿದ್ದ ಬಟ್ಟೆಯು ವಿಶೇಷವಾಗಿ ತೋಯುವದು. ಆದ್ದರಿಂದ ಅದು ಬೆವರನ್ನು ಹೀರಿಕೊಳ್ಳುವಂಥಾದ್ದು ಇರಬೇಕು. ಇಲ್ಲದಿದ್ದರೆ ಶೀತವಾಗುವ ಸಂಭವವುಂಟು. ಈ ಕಾಲದಲ್ಲಿ ಬಹಳ ಜನರು ಬಿಳಿಗೆ ಗಂಜಿಫ್ರಾಕನ್ನು ಹಾಕಿಕೊಳ್ಳುವದು. ಅದು ಈ ವಿಷಯದಲ್ಲಿ ಉಪಯುಕ್ತವಾದದ್ದೇ ಸರಿ. ಆದರೆ ಅದು ಹೊಲಸಾಗದಂತೆ ನೋಡಿಕೊಳ್ಳುತ್ತಿರಬೇಕು. ಹೊಲಸಾದ ಬಟ್ಟೆಯು ಮೈಗೆ ಹತ್ತಿಕೊಂಡಿದ್ದರೆ ಚರ್ಮದ ಸ್ವಾಭಾವಿಕ ಕ್ರಿಯೆಗೆ ಅಡ್ಡಿಯಾಗಿ ಹಲವು ರೋಗಗಳುಂಟಾಗುವವು.

ಆಟದ ಇಲ್ಲವೆ ವ್ಯಾಯಾಮದ ಕಾಲದಲ್ಲಿ ಹೆಚ್ಚಿಗೆ ಬೆವರು ಹೊರಡುವದರಿಂದ ಆ ಕಾಲದಲ್ಲಿ ಫ್ಲ್ಯಾನೆಲ್ಲಿನ ಅಂಗಿಯನ್ನು ಹಾಕಿಕೊಳ್ಳುವದು ಉತ್ತಮ. ರೇಶಿಮೆಯದಿದ್ದರೂ ಅಡ್ಡಿಯಿಲ್ಲ. ಫ್ಲ್ಯಾನೆಲ್ಲಿನಲ್ಲಿ "ಲಾನೋಲಿನ್" (Lanolin) ಎಂಬ ಒಂದು ತರದ ನೆಣದ ಜಾತಿಯ ಪದಾರ್ಥವಿರುವದು. ಅದರಿಂದಲೇ ಅದು ಈ ಪ್ರಕಾರ ಉತ್ಕೃಷ್ಟವಾದದ್ದೆಂದು ಹೇಳಲ್ಪಡುವದು. ಫ್ಲ್ಯಾನಲ್ ಬಟ್ಟೆಯನ್ನು ಕುದಿಯುವ ನೀರಲ್ಲಿ ತೋಯಿಸಿದರೆ ಅದರೊಳಗಿನ ಆ ದ್ರವ್ಯವೆಲ್ಲ ನಷ್ಟವಾಗಿ ಹೋಗುವದು.

ಬೇಸಿಗೆಯಲ್ಲಿ ಬಿಳಿಯ ಬಟ್ಟೆಗಳನ್ನು ಉಪಯೋಗಿಸಬೇಕು. ಕರಿಯ ಬಟ್ಟೆಗಳು ಸೂರ್ಯನ ಉಷ್ಣತೆಯನ್ನು ಅಧಿಕ ಪ್ರಮಾಣದಿಂದ ಶೋಷಿಸಿಕೊಳ್ಳುವವು. ಅದರಿಂದ ಆ ಬಟ್ಟೆಗಳು ಕೂಡಲೆ ಕಾಯುವವು. ಆದ್ದರಿಂದ ಅವು ಗ್ರೀಷ್ಮಕಾಲಕ್ಕೆ ತಕ್ಕವಲ್ಲ. ಚಳಿಗಾಲಕ್ಕೆ ಕರಿಯ ಬಟ್ಟೆಗಳ ತಕ್ಕವು. ಉಷ್ಣತೆಯನ್ನು ಶೋಷಿಸಿಕೊಳ್ಳುವ ಸಂಬಂಧದಿಂದ ಬಣ್ಣಗಳಲ್ಲಿ ಈ ಪ್ರಕಾರ ಕ್ರಮವನ್ನು ಹಚ್ಚಬಹುದು:-

(೧) ಕರಿಯ. (೨) ದಡಸಾದ ನೀಲಿ. (೩) ತಿಳಿಯಾದ ನೀಲಿ. (೪) ದಡಸಾದ ಹಸರು. (೫) ಕೆಂಪು. (೬) ತಿಳಿ ಹಸರು. (೭) ದಡಸಾದ ಹಳದಿ. (೮) ತಿಳಿ ಹಳದಿ. (೯) ಬಿಳಿದು.

ಮೈಗೆ ಹತ್ತಿಕೊಂಡಿರುವ ಬಟ್ಟೆಯು ಬಣ್ಣದ್ದಿರಬಾರದು. ಯಾಕ
ದರೆ ಬಣ್ಣದಲ್ಲಿ ವಿಷಯುಕ್ತ ಖನಿಜ ಪದಾರ್ಥಗಳು ಇರುವದರಿಂದ ಅಪ
ಯವಾಗುವ ಸಂಭವವುಂಟು.

ಎಲ್ಲ ಬಟ್ಟೆಗಳು ಯಾವಾಗಲು ಸ್ವಚ್ಛವಾಗಿರುವದು ಅವಶ್ಯವು. ಕೈ
ಲಸು ಹಿಡಿದ ರೇಶಿಮೆ ರುಮಾಲಕ್ಕಿಂತ ಸ್ವಚ್ಛವಾದ ನೂಲಿನ ರುಮಾಲ
ಉತ್ತಮವಾದದ್ದು.

ಪೆನಶನ್ ಪಡೆದ

ಮು॥ ರಾ॥ ರಾ॥ ಭಾಸ್ಕರರಾವ ಜಹಾಗೀರ ಬಿ. ಎ. ಇವರ ಚರಿತ್ರೆ.

ಧಾರವಾಡ ಪಾಯುಸ್ಕೂಲಿನ ಹೆಡ್ಡಮಾಸ್ತರರಾದ ಮು॥ ರಾ॥ ರಾ॥
ಭಾಸ್ಕರರಾವ ಯಶವಂತ ಜಹಾಗೀರ ಬಿ. ಎ. ಇವರು ಕಳೆದ ತಿಂಗಳ ೧೯ನೆ
ತಾರೀಖಿನಿಂದ ಪೆನಶನ್ ಪಡೆದು ತಮ್ಮ ಕೆಲಸದಿಂದ ನಿವೃತ್ತರಾದರು. ಧಾ
ವಾಡದಲ್ಲಿ ಹುಟ್ಟಿ, ಧಾರವಾಡದಲ್ಲಿ ಬೆಳೆದು, ಧಾರವಾಡದ ವಿದ್ಯಾಲಯದಲ್ಲಿ
ವಿದ್ಯಾಭ್ಯಾಸಮಾಡಿ, ಧಾರವಾಡದ ವಿದ್ಯಾಲಯಕ್ಕೇ ಮುಖ್ಯಾಧಿಕಾರಿಗಳಾಗಿ
ಬಂದು ನಿವೃತ್ತರಾದ ಈ ಮಹನೀಯರ ಅಲ್ಪಚರಿತ್ರವನ್ನು ಇಲ್ಲಿ ಕೊಡ
ತ್ತೇವೆ:—

ಜಹಾಗೀರ ಮನೆತನವು ಈ ಊರಲ್ಲಿ ಮೊದಲಿನಿಂದಲೂ ಘನವಂ
ವಾಗಿರುತ್ತದೆ. ಭಾಸ್ಕರರಾಯರ ಹಿರಿಯರಾದ ಯಶವಂತರಾಯರು ಕಳೆ
ಶತಮಾನದ ಮಧ್ಯಕಾಲದಲ್ಲಿ ಪ್ರಸಿದ್ಧ ವಕೀಲರಾಗಿದ್ದರು. ಅವರು ತಮ್
ವ್ಯವಸಾಯದಲ್ಲಿ ಬಹಳ ಕೀರ್ತಿಯನ್ನು ಸಂಪಾದಿಸಿ ಲಕ್ಷಾಂತರ ರೂಪಾಯಿ
ಯನ್ನು ಗಳಿಸಿದರು. ಇಂಥ ಸುಪ್ರಸಿದ್ಧ ಪುರುಷರ ಉದರದಲ್ಲಿ ಭಾಸ್ಕರರಾ
ಯರು ೧೮೫೮ನೇ ಇಸ್ವಿಯಲ್ಲಿ ಹುಟ್ಟಿದರು. ಇವರ ಪ್ರಾಥಮಿಕ ಶಿಕ್ಷಣ
ವು ಇಲ್ಲಿಯ ಮರಾಠೀ ಶಾಲೆಯಲ್ಲಿ ಮುಗಿದು, ಇವರು ಇಂಗ್ಲಿಷ ವಿದ್ಯಾ
ಭ್ಯಾಸಕ್ಕೆ ಸೇರುವ ಸುಮಾರಿಕ್ಕೆ ೧೮೭೯ ರಲ್ಲಿ ಇವರ ಹಿರಿಯರು ಸ್ವರ್ಗ
ಸ್ಥರಾದರು. ಆ ಕಾಲದಲ್ಲಿ ಭಾಸ್ಕರರಾಯರು ತೀರ ಚಿಕ್ಕ ವಯಸ್ಸಿನವರಿ
ದ್ದ ಕಾರಣ ಅವರ ಮಾತುಶ್ರೀಯವರ ಇಚ್ಛೆಯ ಪ್ರಕಾರ ಅವರ ಆಸ್ತಿಯ
ಆಡಳಿತವನ್ನು ಧಾರವಾಡದ ಕಲೆಕ್ಟರಸಾಹೇಬರವರು ವಹಿಸಿದರು. ಅದ
ರಿಂದ ಭಾಸ್ಕರರಾಯರ ಮಾತುಶ್ರೀಯವರ ಚಿಂತೆ ತಪ್ಪಿದ್ದಲ್ಲದೆ, ಭಾಸ್ಕರ
ರಾಯರಿಗೆ ಚಿಕ್ಕವಯಸ್ಸಿನಲ್ಲಿ ಮನೆತನದ ವ್ಯವಸೆಯ ಏನೊಂದು ಆತಂಕ

ವಿಲ್ಲದೆ ತಮ್ಮ ಯಾವತ್ತು ಮನಸ್ಸನ್ನು ಅಭ್ಯಾಸದಲ್ಲಿ ಹಾಕಿದವಕ್ಕೆ ಅನುಕೂಲವಾಯಿತೆನ್ನಲಿಕ್ಕೆ ಅಡ್ಡಿ ಇಲ್ಲ. ಭಾಸ್ಕರರಾಯರು ಮೊದಲಿನಿಂದಲೂ ಚುರುಕು ಬುದ್ಧಿಯುಳ್ಳವರೂ ಓಳ್ಳೇ ವ್ಯಾಸಂಗಮಾಡುವವರೂ ಇದ್ದುದರಿಂದ ಧಾರವಾಡ ಹಾಯಸ್ಕೂಲಿನಲ್ಲಿ ಅವರ ಅಭ್ಯಾಸವು ಚನ್ನಾಗಿ ಸಾಗಿ, ಅವರು ಗಣಿತಳನೇ ಇಸವಿಯಲ್ಲಿ ಮ್ಯಾಟ್ರಿಕ್ಯುಲೇಶನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಸಾತಾರೆಯಲ್ಲಿ ಈಗ ಪೆನ್‌ಶನರರಾಗಿದ್ದ ರಾವಬಹಾದೂರ ವಿಠ್ಠಲ ನಾರಾಯಣ ಪಾತಕರವರು ಆಗ ಇಲ್ಲಿಯ ಹಾಯಸ್ಕೂಲಿನ ಹೆಡ್‌ಮಾಸ್ತರರಾಗಿದ್ದರು. ಭಾಸ್ಕರರಾಯರ ಮುಂದಿನ ಅಭ್ಯಾಸವು ಪೆಕ್ಕನ್ಹಾಲೇಜದಲ್ಲಿ ಆಯಿತು. ಆಗ ಅಲ್ಲಿ "ತರ್ಕಶಾಸ್ತ್ರ-ನೀತಿಶಾಸ್ತ್ರಗಳ" (Logic and Moral Philosophy) ಗುರುಗಳಾದ ಡಾಕ್ಟರ ಸೆಲ್ಬಿಯವರು ಭಾಸ್ಕರರಾಯರು ಇಂಗ್ಲಿಷ ಬರಹದಲ್ಲಿ ಆಗಲೇ ಪಡೆದಿದ್ದ ಪ್ರಾವೀಣ್ಯವನ್ನು ನೋಡಿ ತಲೆದೂಗಿದರು. ಅದೇ ಕಾಲೇಜದಲ್ಲಿ ತಮ್ಮ ಅಭ್ಯಾಸವನ್ನು ಮುಗಿಸಿ ಭಾಸ್ಕರರಾಯರು ಗಣಿತಳನೆಯ ಇಸವಿಯಲ್ಲಿ "ಬಿ. ಎ." ಆದರು. ಧಾರವಾಡ ಹಾಯಸ್ಕೂಲಿನ ವಿದ್ಯಾರ್ಥಿಗಳಲ್ಲಿ "ಬಿ. ಎ." ಪದವಿಯನ್ನು ಇವರೇ ಮೊದಲು ಪಡೆದವರು. ಆದ್ದರಿಂದ, ಧಾರವಾಡದ ಹಾಯಸ್ಕೂಲಿನಿಂದ ಆಗುವ ಮೊದಲನೇ "ಬಿ. ಎ." "ಎಮ್. ಎ" ಗಳಿಗೋಸ್ಕರ ಆಗಿನ ಕಲೆಕ್ಟರರಾಗಿದ್ದ ಮೈ|| ರಾಬರ್ಟಸನ್‌ಸಾಹೇಬರು ಇಟ್ಟಿದ್ದ ಬೆಳ್ಳಿ ಬಂಗಾರದ ಪದಕಗಳಲ್ಲಿ ಮೊದಲನೆಯದು ಭಾಸ್ಕರರಾಯರಿಗೆ ದೊರೆಯಿತು. ಮುಂದೆ ಎಮ್. ಏ. ದ ಅಭ್ಯಾಸ ಮಾಡಬೇಕೆಂದು ಇವರು ಕೆಲವು ದಿವಸ ಕಾಲೇಜದಲ್ಲಿ ಫೆಲೋ ಆಗಿದ್ದರು. ಆದರೆ ಅವರ ಪ್ರಕೃತಿಯು ಸ್ವಲ್ಪ ಕೆಟ್ಟಿದ್ದರಿಂದ ಮುಂದಿನ ಅಭ್ಯಾಸವನ್ನು ಬಿಟ್ಟು ಕೊಟ್ಟು ಇವರು ಸ್ವಗ್ರಾಮಕ್ಕೆ ಮರಳಿ ಬಂದರು.

ಮುಂದೆ ವರ್ಷಾರು ತಿಂಗಳು ವಿಶ್ರಾಂತಿಯನ್ನು ಹೊಂದಿದ ಬಳಿಕ ಮುಂದಿನ ಆಯುಷ್ಕ್ರಮವನ್ನು ಗೊತ್ತುಪಡಿಸುವ ಭಾಗಬಿದ್ದು, ಅವರು ಧಾರವಾಡ ಹಾಯಸ್ಕೂಲಿನಲ್ಲಿಯೇ ಅ|| ಮಾಸ್ತರರಾಗಿ ಸರಕಾರೀ ನವಕರಿಯನ್ನು ಹಿಡಿದರು. ಸುಮಾರು ಗಳಿ ವರ್ಷಗಳ ವರೆಗೆ ಇಲ್ಲಿಯೇ ಗನೇ ಅಸಿಸ್ಟೆಂಟರಾಗಿದ್ದು ಗಣಿತ ನೇ ಇಸ್ವಿಯಲ್ಲಿ ವಿಜಾಪುರದ ಹಾಯಸ್ಕೂಲಿಗೆ ಹೆಡ್ಡಮಾಸ್ತರರಾಗಿ ಹೋದರು. ಸರಕಾರೀ ನವಕರಿಯಲ್ಲಿ ಆಗಿನಕಾಲಕ್ಕೆ ಗಳಿ ವರ್ಷಗಳ ವರೆಗೆ ಇವರ ಉಚ್ಚಪದಪ್ರಗತಿಯು ಕುಂಠಿತವಾಗಲಿಕ್ಕೆ ಇವರ ದೋಷಗಳಾವವೂ ಕಾರಣವಾಗದೆ ಇವರ ಕೌಟುಂಬಿಕ ಸುಸ್ಥಿ

ತಿಯೂ, ಅಲ್ಪಸಂತುಷ್ಟತೆಯೂ ಕಾರಣವಾದವು. ಆದರೂ ಧಾರವಾಡವನ್ನು ಬಿಡಬಾರದೆಂಬ ಅವರ ಸಂಕಲ್ಪವು ಇಲ್ಲಿಯ ಆಗಿನ ಕಾಲದ ಹಲವು ಕಾರಣಗಳ ಮೂಲಕ ಡಳವುಳಿಸಿ, ವಿಜಾಪುರದ ಹಾಯಸ್ಕೂಲಿಗೆ ಹೋಗಬೇಕಾಯಿತು. ಅಲ್ಲಿಯೂ ಹದಿನಾಲ್ಕು ವರ್ಷಗಳ ವರೆಗೆ ಹೆಡ್ಡಮಾಸ್ತರರಾಗಿದ್ದು ೧೯೦೬ರಲ್ಲಿ ಇಲ್ಲಿಯ ಹೆಡ್ಡಮಾಸ್ತರರಾಗಿ ಬಂದರು. ಈ ಕೆಲಸದಲ್ಲಿದ್ದಾಗ್ಗೆ ಇವರು ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರ ಕೆಲಸವನ್ನೂ ತ್ರಿಂಗಳೊಪ್ಪತ್ತು ಮಾಡಿದರು. ಈ ಪ್ರಕಾರ ಅವಿಚ್ಛಿನ್ನ ನೂರು ತಪಗಳವರೆಗೆ ಶಾಂತತೆಯಿಂದಲೂ ಸಮಾಧಾನದಿಂದಲೂ, ಸಂತುಷ್ಟತೆಯಿಂದಲೂ, ಕೆಲಸಮಾಡಿ ಈಗ ಯಥಾಯೋಗ್ಯವಾದ ವಿಶ್ರಾಂತಿಯನ್ನು ಹೊಂದಿರುತ್ತಾರೆ.

ಮ|| ರಾ|| ಭಾಸ್ಕರರಾಯರು ಮಾಡಿದಂಥ ಸರಕಾರೀ ನವಕರಿಯನ್ನು ಹಿಂದೆ ಅನೇಕರು ಮಾಡಿರುತ್ತಾರೆ; ಈಗ ಅನೇಕರು ಮಾಡುತ್ತಾರೆ. ಆದರೆ ಅವರ ಅಪೂರ್ವ ಮಾದರಿಯು ಇವರಲ್ಲಿ ಕಂಡು ಬರುವದೆಂದು ಹೇಳುವದಕ್ಕೆ ನನಗೆ ಅಭ್ಯಂತರ ತೋರುವದಿಲ್ಲ. ತಾವು ಅಂಗೀಕರಿಸಿದ ಶಿಕ್ಷಣವಿಷಯದಲ್ಲಿ ಮನಸ್ಸು ರಮಿಸುವಂತೆ ಕೆಲಸ ಮಾಡಿದ ಒಬ್ಬಿಬ್ಬರಲ್ಲಿ ಇವರ ಸಮಾವೇಶವಾಗುತ್ತದೆ. ಭಾಸ್ಕರರಾಯರ ಇಂಗ್ಲೀಷ ವಾಚನವ್ಯಾಸಂಗವು ಅತಿಶಯವಾಗಿದ್ದುದರಿಂದ ಇವರಿಗೆ ಇಂಗ್ಲೀಷ ಭಾಷೆಯು ಕರತಲಾಮಲಕವಾಗಿದ್ದು ಅದರ ಉಪಯೋಗವನ್ನು ತಮ್ಮಿಂದ ಶಿಕ್ಷಣ ಹೊಂದುವ ವಿದ್ಯಾರ್ಥಿಗಳಿಗೆ ಮಾಡಿಕೊಡುವದರಲ್ಲಿ ಇವರು ತತ್ಪರರಾಗಿದ್ದರು. ಅನಾಡಂಬರವೃತ್ತಿ, ಉದಾತ್ತವಿಚಾರ ಇವುಗಳ ಬಗ್ಗೆ ಇವರು ಮಾದರಿಯಾಗಿರುತ್ತಾರೆ. ಇವರ ಖಾಸಗೀ ವರ್ತನವು ಅತ್ಯಂತ ಸರಳವೂ ಅನುಕರಣೀಯವೂ ಆಗಿದೆ. ಹೀಗೆ ಎಲ್ಲ ರೀತಿಯಿಂದಲೂ ಸ್ಪೃಹಣೀಯವಾದ ಭಾಸ್ಕರರಾಯರ ಆಯುಷ್ಕ್ರಮವು ಇಷ್ಟು ದಿವಸ ಕೇವಲ ಸರಕಾರೀ ನವಕರಿಯಲ್ಲಿ ಹೋಗಿರುವದಾದರೂ ಈಗಿನ ದಿವಸಗಳಲ್ಲಿ ಬಹು ದುರ್ಲಭವಾಗಿ ದೊರೆಯುವ ತಮ್ಮ ವಿಶ್ರಾಮಕಾಲವನ್ನು ಇನ್ನು ಮುಂದೆ ಲೋಕಸೇವೆಗೆ ನಿನಿಯೋಗಿಸಿ ನಿರಂತರ ವಿದ್ಯಾವ್ಯಾಸಂಗದಿಂದ ಲಬ್ಧವಾದ ತಮ್ಮ ಜ್ಞಾನದ ಉಪಯೋಗವನ್ನು ಪ್ರೌಢಜನ ಸಮೂಹಕ್ಕೂ ಮಾಡಿಕೊಡುವರೆಂದು ಬಯಸುತ್ತೇವೆ. ಈ ಅಭಿಲಾಷೆಯು ಪೂರ್ಣವಾಗುವಂತೆ ದೇವರು ಇವರಿಗೆ ದೀರ್ಘಾಯುಷ್ಯವನ್ನು ಕೊಡಲೆಂದು ಪ್ರಾರ್ಥಿಸುತ್ತೇವೆ.

ಕನ್ನಡಭಾಷೆಯ ವಿಶೇಷ ವಿಷಯಗಳು.

(೧) ಗಮಕಸಮಾಸ.

ಶಬ್ದಮಣಿದರ್ಪಣದ ಸಮಾಪ್ತಿಸ್ಥಲದಲ್ಲಿ ಈ ಪದ್ಯವುಂಟು:—

"ಗಮಕಸಮಾಸದಿಂ ರಳಕುಳಕ್ಷಳದಿಂ ಶ್ರುತಿಸಹ್ಯ
ಸಂಧಿಯಿಂ।
ಸಮುಚಿತವಾಗಿ ಬರ್ಪ ಸತಿಸಪ್ತಮಿಯಿಂ ಸಮಸಂಸ್ಕೃ
ತೋಕ್ತಿಯಿಂ॥
ವಮ ಹಪಭೇದದಿಂ ವಿರಹಿತಾವ್ಯಯಸಂಸ್ಕೃತಲಿಂಗದಿಂ
ಪದೋ।
ತ್ತಮಶಿಥಿಲತ್ವದಿಂ ಯತಿವಿಲಂಘನದಿಂದರಿನಲ್ತೆ ಕನ್ನಡಂ"॥

ಇದರಲ್ಲಿ ಕನ್ನಡದಲ್ಲಿ ವಿಚಾರಣೀಯವಾಗಿರುವ ಮತ್ತು ವಿಲಕ್ಷಣವಾಗಿರುವ ಕೆಲವು ವಿಷಯಗಳು ಹೇಳಲ್ಪಟ್ಟಿರುವವು. ಅವು:—ಗಮಕಸಮಾಸ, ರಳಕುಳಕ್ಷಳಗಳು, ಶ್ರುತಿಸಹ್ಯಸಂಧಿ, ಸತಿಸಪ್ತಮಿಯ ಪ್ರಯೋಗ, ಸಮಸಂಸ್ಕೃತಶಬ್ದಗಳು, ವ, ಮ ಮತ್ತು ಪ, ಹ ಇವುಗಳಲ್ಲಿರುವ ಅಭೇದ, ಅವ್ಯಯಗಳನ್ನು ಬಿಟ್ಟುಳಿದ ಸಂಸ್ಕೃತಶಬ್ದಗಳ ವ್ಯವಹಾರ, ಶಿಥಿಲೋಚ್ಚಾರ, ಯತಿವಿಲಂಘನೆ ಎಂಬಿವು.

ದರ್ಪಣದಲ್ಲಿ ಪ್ರಾಯಶಃ ಈ ಎಲ್ಲ ವಿಷಯಗಳನ್ನು ಕುರಿತು ಸ್ವಲ್ಪ ವಿವೇಚನೆಯುಂಟು. ಈ ವಿಷಯಗಳು ಕನ್ನಡಭಾಷೆಯನ್ನೋದುವವರಿಗೆ ತಿಳಿದಿರುವದು ಅವಶ್ಯವಾಗಿದೆ.

ಆ ವಿಷಯಗಳಲ್ಲಿ ಮೊದಲನೆಯದು ಗಮಕಸಮಾಸವು. ಗಮಕ ಸಮಾಸದ ನಿರೂಪಣೆ ಮಾಡುವಾಗ ದರ್ಪಣದಲ್ಲಿಯೂ ಹೊಸಗನ್ನಡವ್ಯಾಕರಣಗಳಲ್ಲಿಯೂ ತೊಂದರೆಯುಂಟಾಗಿರುವದು. ಆ ತೊಂದರೆ ಏನೆಂದರೆ, ಗಮಕ-ಕರ್ಮಧಾರಯಗಳಿಗೆ ಪರಸ್ಪರ ಭೇದವನ್ನು ತೋರಿಸಿಲ್ಲ.

ಗಮಕಸಮಾಸಪರಿಭಾಷೆ.

ದರ್ಪಣ:— ಜನಿಯಿಸುಗುಂ ಸಂಖ್ಯಾಸ।
ರ್ವನಾಮ-ಗುಣವಚನ-ಕೃತ್ಪೂರ್ವಂ ಗಮಕಂ॥

ತನಗತ್ವಂ ಪೆರಗಿತ್ವಂ ।
ತನಗರಿಪದವಿಲ್ಲ ಕರ್ಮಧಾರಯಮದುವುಮ್ ॥

ವಿಶೇಷಣಗಳಾದ ಸಂಖ್ಯಾವಾಚಕ, ಸರ್ವನಾಮ, ಗುಣವಾಚಕ, ಕೃದಂತಗಳಲ್ಲಿ ಯಾವದೊಂದು ಪದವು, ವಿಶೇಷವಾದ ಉತ್ತರಪದದೊಡನೆ ಸಮಾಸವಾಗಲು ಅದು 'ಗಮಕ' ಸಮಾಸವೆನಿಸುವದು. ಈ ಸಮಾಸದಲ್ಲಿ ಅರಿಪದದೋಷವಿಲ್ಲ. ಇದು ಕರ್ಮಧಾರಯ ಸಮಾಸದಲ್ಲಿಯೇ ಸೇರುವದು.

ಉದಾಹರಣ:—ಇರ್ಪತ್ತೈದು; ಅವಮೊತ್ತ; ಅಸಿಯನೆದು; ಪಾಡುವ ತುಂಬಿ; ಬೀಸುವಚಾವುರಂ;

ನುಡಿಗಟ್ಟು:—ಪೂರ್ವಪದವು ಸಂಖ್ಯಾವಾಚಕ, ಗುಣವಾಚಕ, ಕೃದಂತ, ದಿಗ್ವಾಚಕ, ಸರ್ವನಾಮಕ ವಿಶೇಷಣಗಳಲ್ಲಿ ಯಾವದಾದರೊಂದು ಇದ್ದು ಪರಪದವು ನಾಮಪದವಿದ್ದರೆ ಗಮಕಸಮಾಸವಾಗುವದು.

ಉದಾ:—ಮೂರುಬಟ್ಟೆಗಳು, ಮೂವಟ್ಟೆ; ಮೂಕ ಹುಡುಗ; ದೊಡ್ಡಮನೆ; ಅಳುವಕೂಸು; ಈ ಪುನೆ.

ಶಬ್ದಾದರ್ಶ:—ಸಂಖ್ಯಾವಾಚಕ, ಸರ್ವನಾಮ, ಗುಣವಾಚಕ, ಕೃದಂತಗಳಲ್ಲಿ ಯಾವದೊಂದು ಪೂರ್ವಪದವಾಗಿದ್ದು ಸಂಬಂಧವಾದ ಉತ್ತರಪದದೊಡನೆ ಸಮಾಸವಾದರೆ ಅದು ಗಮಕಸಮಾಸವೆನಿಸುವದು. ಉತ್ತರಪದವು ಸಂಸ್ಕೃತವಾಗಿಯೂ ಇರಬಹುದು.

ಉದಾ:—ಇಪ್ಪತ್ತಾನೆಗಳು; ಆ ಮನುಷ್ಯ; ಬಿಳೀಬಟ್ಟೆ; ಓಡುವ ಹುಡುಗ.

ಈ ರೀತಿಯಾಗಿ ಈ ಮೂರು ವ್ಯಾಕರಣಗಳಲ್ಲಿ ಗಮಕಸಮಾಸದ ವ್ಯಾಖ್ಯೆಯುಂಟು. ವ್ಯಾಖ್ಯಾನುಸಾರವಾಗಿ ಉದಾಹರಣಗಳೂ ಉಂಟು. ಎಂದ ಬಳಿಕ ಈ ವಿಷಯದಲ್ಲಿ ಅಕ್ಷೇಪಣೆ ಏನು? ಎಂದು ಕೇಳುವಿರಲ್ಲವೆ?

ಈ ಮೂರೂ ವ್ಯಾಕರಣಗಳಲ್ಲಿ ಕರ್ಮಧಾರಯ ಸಮಾಸದ ವ್ಯಾಖ್ಯೆಯನ್ನು ಅದರ ಉದಾಹರಣಗಳನ್ನೂ ನೋಡಿರಿ.

ಕರ್ಮಧಾರಯ ಸಮಾಸವ್ಯಾಖ್ಯೆ.

ದರ್ಪಣ:—"ಪರಪದದೊಳರ್ಥವರ್ತನೆ ।
ಮಿರೆ ತತ್ಪುರುಷಂ ಸಮಂತದೇಕಾಶ್ರಯಮಾ ॥
ಗಿರೆ ಕರ್ಮಧಾರಯಂ"

ಉದಾ:—ಬೆಳ್ದಾವರೆ, ಮು.

ನುಡಿಗಟ್ಟು:—ವಿಶೇಷ್ಯ ವಿಶೇಷಣಗಳೂ (ಸಂಖ್ಯಾ ವಾಚಕ ವಿಶೇಷಣವಲ್ಲ. ಇದೇಕೋ ತಿಳಿಯದು) ಇಲ್ಲವೆ ಎರಡು ವಿಶೇಷಣಗಳು, ಅಥವಾ ಉಪಮಾನೋಪಮೇಯ ಮುಂತಾದವುಗಳು ಕೂಡಿ ಆಗುವ ಸಮಾಸಕ್ಕೆ ಕರ್ಮಧಾರಯವೆಂದು ಹೆಸರು.

ಉದಾ:—ಬೆಳ್ದಾವರೆ, ತಳಿರಡಿ, ಮುಂ.

ಶಬ್ದಾದರ್ಶ:—ಪೂರ್ವಪದವು ಉತ್ತರಪದಕ್ಕೆ ಲಿಂಗ-ವಚನ-ವಿಭಕ್ತಿಗಳಲ್ಲಿ ಸಮಾನವಾದ ವಿಶೇಷಣವಾಗಿದ್ದು ಸಮಾಸವಾದರೆ ಅದು ಕರ್ಮಧಾರಯ ಸಮಾಸವೆನಿಸುವದು.

ಉದಾ:—ಕಿರೀಮಗ, ಏರೆಗಣ್ಣ.

ಮೂರು ವ್ಯಾಕರಣಗಳಲ್ಲಿ ಹೇಳಿದ ಗಮಕ, ಕರ್ಮಧಾರಯ ಸಮಾಸಗಳ ವ್ಯಾಖ್ಯೆಗಳನ್ನೂ ಉದಾಹರಣಗಳನ್ನೂ ನೋಡಿರಿ. ಗಮಕಕ್ಕೂ ಕರ್ಮಧಾರಯಕ್ಕೂ ಏನಾದರೂ ಹೆಚ್ಚು ಕಡಿಮೆಯನ್ನು ಹೇಳಿದಂತಾಗಿದೆಯೇ?

ಶಬ್ದಾದರ್ಶಕಾರರು ದರ್ಪಣದ ವ್ಯಾಖ್ಯೆಯನ್ನನುಸರಿಸಿಯೇ ಬರೆದಿರುವರು. ನುಡಿಗಟ್ಟಿನಲ್ಲಿ ದರ್ಪಣ-ಶಬ್ದಾದರ್ಶಗಳಿಗಿಂತ ಗಮಕಸಮಾಸ ವ್ಯಾಖ್ಯೆಯ ವಿಷಯದಲ್ಲಿ ಹೆಚ್ಚು ಕಡಿಮೆಯೇನೆಂದರೆ:—ಗಮಕ ಸಮಾಸದಲ್ಲಿ ಗುಣವಾಚಕ ಮೊದಲಾದ ವಿಶೇಷಣಗಳಲ್ಲದೆ ದಿಗ್ವಾಚಕ ವಿಶೇಷಣವೂ ಪೂರ್ವಪದವಾಗಿರಬಹುದು. ಅದಕ್ಕೆ ತೆಂಕಣಗಾಳಿ ತೆಂಗಾಳಿ, ಎಂದು ಉದಾಹರಿಸಿರುವರು. 'ತೆಂಕಣ' ಎಂಬದು ವ್ಯಧಿಕರಣವಿಶೇಷಣವಿರುವದರಿಂದ ಇದು ಷಷ್ಠೀ ತತ್ಪುರುಷ ಸಮಾಸವಾಗುವದೆಂಬದು ಗ್ರಂಥಕಾರರ ಅವಗಾಹನೆಗೆ ಏಕೆ ಬರಲಿಲ್ಲವೊ? 'ಮೂವಟ್ಟೆ' ಮೊದಲಾದ ಕೆಲವು ದ್ವಿಗು ಸಮಾಸಕ್ಕೆ ಸೇರಿಸಬಹುದಾದ ಉದಾಹರಣೆಗಳನ್ನು ಗಮಕ ಸಮಾಸಕ್ಕೆ ಉದಾಹರಣೆಯಾಗಿ ಕೊಟ್ಟಿದ್ದಾರೆ. ಇದೆಲ್ಲವನ್ನು ನೋಡಲು, ಮತ್ತು ಕರ್ಮಧಾರಯ-ಗಮಕಗಳಿಗೆ ಏನೂ ಭೇದವನ್ನು ತೋರಿಸದೆ ಶಬ್ದಮಣಿದರ್ಪಣದಲ್ಲಿ ಗಮಕವೆಂಬ ಹೊಸ ಹೆಸರು ಬಂದಿರುವದರಿಂದ ಅದನ್ನು ಬಿಡಬಾರದೆಂಬ ಮೂಢಶ್ರದ್ಧೆಯಿಂದ ಬೇರೆ ಸಮಾಸವೆಂದು ಬರೆದದ್ದನ್ನೂ ನೋಡಲು ನುಡಿಗಟ್ಟಿನವರು ತಮ್ಮ ಗ್ರಂಥದ ಹಲವು ಸ್ಥಲಗಳಲ್ಲಿ ತೊಂದರೆಯನ್ನುಂಟುಮಾಡಿಕೊಂಡಂತೆ ಈ ವಿಷಯದಲ್ಲಿಯೂ

ತೊಂದರೆಯನ್ನುಂಟುಮಾಡುವಲ್ಲಿ ಹಿಂದೆ ಮುಂದೆ ನೋಡಿಲ್ಲವೆನಬೇಕಾಗುವದು.

ಇನ್ನು ಶಬ್ದಾದರ್ಶ-ದರ್ಪಣಗಳ ವ್ಯಾಖ್ಯೆಗಳು ಹಿಂದೇ ರೀತಿಯಾಗಿರುವವು. ಆ ಗ್ರಂಥಗಳಲ್ಲಿಯೂ ಕೂಡ ಕರ್ಮಧಾರಯ-ಗಮಕಗಳಿಗೆ ಭೇದವನ್ನು ತೋರಿಸಲಿಲ್ಲ.

ಹೀಗೆ ಗಮಕ ಸಮಾಸ ವಿಷಯದಲ್ಲಿ ತೊಂದರೆಯುಂಟಾದ ಕಾರಣವೇನು? 'ಗಮಕ'ವೆಂಬ ಹೆಸರಿನ ಉತ್ಪಾದಕನು ದರ್ಪಣಕಾರನು. ಇವನಿಗಿಂತ ಮೊದಲಿನವನಾದ ನಾಗವರ್ಮನ ವ್ಯಾಕರಣದಲ್ಲಿ ಈ ಹೆಸರು ಬಂದಿಲ್ಲ. 'ಗಮಕ'ವೆಂಬ ಶಬ್ದಕ್ಕೆ "ಜ್ಞಾಪಕ" "ತೋರಿಸುವ" "ಸಂಸ್ಕೃತ ಕನ್ನಡಗಳಿಗೆ ಸಮಾಸವುಂಟೆಂಬದನ್ನು ತೋರಿಸುವ" ಎಂದರ್ಥವಾಗುತ್ತದೆ. ಕನ್ನಡದಲ್ಲಿ, ಸಂಸ್ಕೃತ ಕನ್ನಡ ಶಬ್ದಗಳನ್ನು ಮಿಶ್ರಮಾಡಿ ಸಮಾಸ ಮಾಡಬಾರದೆಂದು ಸಾಮಾನ್ಯ ನಿಯಮವುಂಟು. ಆದರೆ ಸಂಸ್ಕೃತ ಕನ್ನಡಗಳಿಗೆ ಸಮಾಸವುಂಟೆಂಬದಕ್ಕೆ 'ಸುಖಬಟ್ಟುಂ' 'ಬೀಸುವ ಚಾಮರಂ,' ಮೊದಲಾದ ಉದಾಹರಣಗಳು ಗಮಕ (ನಿದರ್ಶಕ) ಗಳಾಗಿರುವವು. ಎಂದರೆ ಮೇಲಿನ ಸಾಮಾನ್ಯ ನಿಯಮಕ್ಕೆ ಕೆಲವು ಅಪವಾದಗಳುಂಟು. ಮೇಲೆ ಕೊಟ್ಟ ಎರಡು ಪ್ರಕಾರದ ಉದಾಹರಣಗಳೂ ಸಂಸ್ಕೃತ ಕನ್ನಡಗಳಿಗೆ ಸಮಾಸವುಂಟೆಂಬದಕ್ಕೆ ಗಮಕ (ನಿದರ್ಶಕ) ಗಳಾಗಿರುವದರಿಂದ ಇವೆರಡಕ್ಕೂ 'ಗಮಕ' ವೆಂಬ ಹೆಸರು ಸಲ್ಲಬೇಕಾಗಿತ್ತು. ಆದರೆ 'ಸುಖಬಟ್ಟುಂ" ಎಂಬ ದರಂತೆ ಇರುವ ಸಮಾಸಗಳು ಕ್ರಿಯಾವಾಚಕದೊಡನೆ ಕೂಡಿ ಆಗಿರುವದರಿಂದ, ಅವಕ್ಕೆ ಕ್ರಿಯಾಸಮಾಸವೆಂಬ ಬೇರೆ ಹೆಸರು ಬಂದಿತು. 'ಬೀಸುವ ಚಾಮರಂ' ಎಂಬ ತರದ ಸಮಾಸಗಳು ಕರ್ಮಧಾರಯ (ಬೀಸುವುದು ಚಾಮರಂ) ವರ್ಗಕ್ಕೆ ಸೇರುವವಾದರೂ ದರ್ಪಣಕಾರನು ಉತ್ತರ ಪದವು ಸಂಸ್ಕೃತವಾಗಿರುವದೊಂದು ವಿಶೇಷ ಲಕ್ಷಣವನ್ನವಲಂಬಿಸಿ ಅವನ್ನು ಕರ್ಮಧಾರಯದಲ್ಲಿಯೇ ಉಪಭೇದವೆಂದಂಗೀಕರಿಸಿ ಅವಕ್ಕೆ ಗಮಕವೆಂಬ ಹೆಸರನ್ನಿಟ್ಟಂತಾಗಿದೆ. ಉತ್ತರ ಪದವು ಸಂಸ್ಕೃತವಾಗಿರುವ ಕರ್ಮಧಾರಯ ಸಮಾಸಕ್ಕೆ ಗಮಕವೆನಬೇಕೆಂದು ದರ್ಪಣಕಾರನ ಅಭಿಪ್ರಾಯವು. ಮೇಲೆ ಕೊಟ್ಟ ದರ್ಪಣ ಸೂತ್ರದಲ್ಲಿ– "ಕರ್ಮಧಾರಯಮದುವುಂ" ಎಂದರೆ ಆ ಗಮಕ ಸಮಾಸವೂ ಕರ್ಮಧಾರಯವೇ, ಬೇರೆಯಲ್ಲ, ಎಂದೂ

ಇಲ್ಲಿ "ತನಗರಿಪದವಿಲ್ಲ" ಸಂಸ್ಕೃತದೊಡನೆ ಸಮಾಸವಾದರೆ ದೋಷವಿಲ್ಲ, ಎಂದೂ ಹೇಳಿದೆ. ಶಬ್ದಾನುಶಾಸನಕಾರನು "विशेषणमेकार्थेन" [ವಿಶೇಷಣವಾಚಕಪದವು ಸಮಾನಾಧಿಕರಣವಾದ ವಿಶೇಷ್ಯಪದದೊಡನೆ ಸಮಾಸವಾಗುವದು.] ಎಂಬ ಸೂತ್ರದಿಂದ ವ್ಯವಹಾರದಲ್ಲಿರುವ ಕರ್ಮಧಾರಯ ಸಮಾಸವನ್ನು ವಿಧಿಸಿರುವನು. ಈ ಸೂತ್ರದಲ್ಲಿ "कृत्सङ्ख्यादिगुणोक्तिः संस्कृतेनच" (ಕೃದಂತ, ಸಂಖ್ಯಾವಾಚಕ, ಸರ್ವನಾಮ, ಗುಣವಾಚಕಗಳು ಸಂಸ್ಕೃತದೊಡನೆಯೂ ಸಮಾಸವಾಗುವವು.) ಎಂಬ ಸೂತ್ರದ ಅಧಿಕಾರವಿರುವದರಿಂದ ವಿಶೇಷಣಗಳು ವಿಶೇಷ್ಯವಾದ ಸಂಸ್ಕೃತದೊಡನೆಯೂ ಸಮಾಸವಾಗುವವೆಂದು ಹೇಳಿದೆ. ಆದುದರಿಂದ ನಾವು ಗಮುಕನೆಂದು ಹೇಳುವ ಉದಾಹರಣಗಳೆಲ್ಲವು ಮೇಲಿನ ಸೂತ್ರಗಳಿಂದ ಸಿದ್ಧವಾಗುವವು. ಶಾಸನಕಾರನು "ಗಮುಕ"ದ ಪೆಸರನ್ನೆ ಎತ್ತಲಿಲ್ಲ. ಹೊಸಗನ್ನಡ ವ್ಯಾಕರಣಗಳಲ್ಲಿಯೂ ಈ ಪೆಸರನ್ನು ಬಿಟ್ಟರೆ ತೊಂದರೆಯಾಗುವ ಸಂಭವವಿಲ್ಲೆಂದು ನಮಗೆ ತೋರುವದು.

ಪೂಜಾರ.

ಅಲಂಕಾರದರ್ಪಣ.

(ಕಳೆದ ತಿಂಗಳ ಸಂಚಿಕೆಯ ೩೩ನೆಯ ಪುಟದಿಂದ ಮುಂದೆ ಸಾಗಿದ್ದು.)

೩೩. ಮುದ್ರಾಲಂಕಾರವು. ಲಕ್ಷಣ:— ಪ್ರಕೃತಾರ್ಥಕ್ಕೆ ಸಂಬಂಧಿಸಿದ ಪದಗಳಿಂದಲೇ ಸೂಚನೀಯವಾದ ಅರ್ಥವನ್ನು ಸೂಚಿಸಿದಲ್ಲಿ ಈ ಅಲಂಕಾರವಾಗುವದು. ಉದಾ:—

ಭಾವಿನಿ॥ ಮೂರು ವಿಷಮದೊಳ್ಕೈದು ಸಮದೊಳು ॥
ತೋರೆಗಣಗಳು ನಾಲ್ಕು ಮಾತ್ರೆಯ ।
ನಾರಿ, ಕಂದವು ನಾಲ್ಕು ಚರಣಗಳಿಂದೆ ಕೂಡಿರಲು ॥
ಮಂಗಗಳಿಂ ಮಂಜುಳಸ್ವರ ।
ವಂ ಗೈಯ್ಯುವಗಿಳಿಗಳಿಂದೆ ಕೋಗಿಲೆಯಿಂದಂ ॥

ತೊಂಗಲ್ಗಳಿಂದೆ ಕಾಯಿಂ।
ಕಂಗೆಸೆದುದು ಚಿಗುರಿನಿಂದೆ ಮಾಕಂದವದು ॥

ಇಲ್ಲಿ ಕವಿಯು ಪ್ರಕೃತಾರ್ಥವಾದ ಮಾವಿನ ಗಿಡದ ವರ್ಣನೆಗೆ ಸಂಬಂಧಿಸಿದ ಮಾಕಂದ ಪದದಿಂದ ಸೂಚ್ಯಾರ್ಥವಾದ 'ಕಂದವೃತ್ತದ ನಾಮವನ್ನು ಸೂಚಿಸಿದ್ದಾನೆ. ಮತ್ತೆ ಉದಾ:—

ಭಾಮಿನಿ ॥ ನೀತಿಯಿಂ ನಡೆವವಗೆ ತಿರ್ಯಗ।
ಜಾತಿಗಳು ಸಂಗಡಕೆ ಬರುವವು ।
ನೀತಿ ಮಾತನು ಮೀರಿ ದುರ್ಮಾರ್ಗವನು ಪಿಡಿದವನಂ ॥

ತಾತತವ್ಮಂದಿರುಗಳಾದರು ।
ಭೀತಿಯಿಂ ಬಿಡುತಿರ್ಪರವನು ।
ತಾಪತವನು ಹೊಂದುವನು ಹಿಂಬಾಲಿಸಿದ ಜನರೊಡನೆ ॥

ಇದು ನನ್ನಿಂದ ಚಿಕೀರ್ಷಿತವಾದ ರಾವಣವಧ ನಾಟಕದೊಳಗಿನ ಪದ್ಯವು. ಇದು ನಟೀ ಸೂತ್ರಧಾರರ ಪ್ರಕೃತಾರ್ಥಕ್ಕೆ ಸಂಬಂಧಿಸಿದ್ದರೂ ಮುಂದೆ ಹೇಳತಕ್ಕಂಥ ರಾಮ ರಾವಣ ವೃತ್ತಾಂತವಾದರೂ ಇದರಿಂದ ಸೂಚಿಸಲ್ಪಟ್ಟಿದೆ. ಮತ್ತೆ ಉದಾ:—

ಉತ್ಪಲ ॥ ಮುನ್ನಿನವೇಕದೀಕ್ಷಿಪುದಲಂಕೃತಿಕಾರರ ಪುಸ್ತಕಂಗಳಂ ॥
ಬನ್ನದಿನೇಕೆ, ಸಕ್ಕದವನೋದುವುದೆನ್ನವೆನಿನ್ನುಪೇಂದ್ರನು ॥
ಬಿನ್ನಣಮುಳ್ಳಲಂಕೃತಿಯ ದರ್ಪಣ ಮಾಳ್ಪನು
ಕನ್ನಡಕ್ಕೆ ನಾ ॥
ಕಿನ್ನರದಿಂದೆ ಮುನ್ನಿಸೆವು ಸಕ್ಕದ ಬಲ್ಲರನೆಲ್ಲ ನುಣ್ಣಗೆ ॥

ಇಹ್ಮ ಇದೇ ಗ್ರಂಥದ ಮಂಗಳಾಚರಣದ ಪದ್ಯವು. ಇಲ್ಲಿ "ನಾನು ಶ್ರಮಪಟ್ಟು ಸಕ್ಕದವನ್ನೋದಿ ಮುನ್ನಿನ ಎಲ್ಲಾ ಸಾಹಿತ್ಯಗ್ರಂಥಗಳನ್ನೀಕ್ಷಿಸಿ ಈ ಗ್ರಂಥವನ್ನು ಮಾಡುವೆನು" ಎಂಬ ಸೂಚನೀಯವಾದ ಅರ್ಥವು ಪ್ರಕೃತಾರ್ಥಕ್ಕೆ ಪ್ರತಿಪಾದ ಪದಗಳಿಂದಲೇ ಸೂಚಿಸಲ್ಪಟ್ಟಿದೆ. ಇದರಂತೆ ಪ್ರಕೃತಾರ್ಥಕ್ಕೆ ಸಂಬಂಧಿಸಿದ ಪದಗಳಿಂದ ಸೂಚನೀಯವಾದ ಅಪ್ರಾಕೃತ ರಗಳನ್ನು ಸೂಚಿಸಿದಲ್ಲಿಯೂ ಇದೇ ಅಲಂಕಾರವಾಗುವದು. ಹೇಗಂದರೆ:—

ಚಂಪಕ ॥ ಇಳೆಯೊಳಗಿರ್ಪಲಂಕೃತಿಯು ರನ್ನಗಳಾಕರವಾದುವೇಂದ್ರನ।
ಕಳೆಗಳ ಪುಂಜ ತೇಜಗಳ ರಂಜಣಿಯುಂ ಕವಿನೇತ್ರದೀ
ಪ್ತಿಯುಂ ॥
ಫಳಫಳ ರನ್ನಗನ್ನಡಿಯ ನೋಡದಗೇಂ ತಿಳಿಯಲ್ಕೆ
ಬಪ್ಪುದೇ।
ಕಳೆಗಳು ಸೂಸಿ ನಿಂತಿರುವ ಕನ್ನಡ ಕಾಂತೆಯ ಸುಸ್ವರೂ
ಪವು ॥

(ಮಂಗಲಾಚರಣ ನೋಡು)

ಇಲ್ಲಿ "ಇಲ್ಲಿ ಫಳ ಫಳ ರನ್ನಗಡಿಯ ನೋಡದಗೆ ಸ್ವರೂಪವು ತಿಳಿಯಲ್ಕೆ ಬಪ್ಪುದೇ" ಎಂಬ ಸೂಚನೀಯಮಾದ ಅರ್ಥಾಂತರವು ಪ್ರಕೃತಾರ್ಥಕ್ಕೆ ಸಂಬಂಧಿಸಿದ ಪದಗಳಿಂದಲೇ ಸೂಚಿಸಲ್ಪಟ್ಟಿದೆ.

---

೭೪. ರತ್ನಾವಲ್ಯಲಂಕಾ. ಲಕ್ಷಣ:— ಪ್ರಕೃತಾರ್ಥವನ್ನು ಪ್ರಸಿದ್ಧ ಕ್ರಮುಕ್ಕನುಸಾರವಾಗಿ ಉಲ್ಲೇಖಿಸಿದಲ್ಲಿ ಈ ಅಲಂಕಾರವಾಗುವದು.
ಉದಾ:—

ಕಂದ ॥ ಚತುರಾನನನೈ ಲಕ್ಷ್ಮೀ।
ಪತಿಯೈ ಸರ್ವಜ್ಞನಯ್ಯ, ಜಗದೊಳು ನೀನು ॥

ಇಲ್ಲಿ ಚತುರಾನನ ಮೊದಲಾದ ಪದಗಳಿಂದ ಬ್ರಹ್ಮ-ವಿಷ್ಣು-ರುದ್ರಾತ್ಮಕತೆಯನ್ನು ವರ್ಣನೀಯನಾದ ರಾಜನಿಗೆ ಹೇಳಿದ್ದಾನೆ. ಇಲ್ಲಿ ತ್ರಿಮೂರ್ತಿಗಳು ಪ್ರಸಿದ್ಧ ಕ್ರಮುಕ್ಕನುಸಾರವಾಗಿ ಉಲ್ಲೇಖಿಸಲ್ಪಟ್ಟಿದ್ದಾರೆ. ಮತ್ತೆ
ಉದಾ:—

ಭಾಮಿನಿ ॥ ಇಂದ್ರನಂತಿರೆ ಬಂಡರಾಂಗ್ಲರು।
ತಂದರಗ್ನಿಯರಥನ ನಾಯೆವು।
ನಂದದಲಿ ತೀರ್ಪುಗಳ ಮಾಳ್ಪರು ಹಿಂದು ಧರ್ಮದಲಿ
ಚಂದದಲಿ ರಾತ್ರಿಚರಪ್ಪತಿ।
ಗಂಧವಹರನು ವೆರಸಿವಿತ್ತಪ।
ನಂದನಲಿ ಸಂಪದರದ್ರೀಶನ ವಂದಿಪಂವಿರು

ಇಲ್ಲಿ ಪ್ರಕೃತವು ಇಂದ್ರಾದಿ ಅಷ್ಟದಿಕ್ಪಾಲಕರ ಪ್ರಸಿದ್ಧ ಕ್ರಮಕ್ಕನುಸಾರವಾಗಿ ವರ್ಣಿಸಲ್ಪಟ್ಟಿದೆ. (ರಾತ್ರಿಚರ = ನೈರುತಿ; ಅಪ್ಪತಿ = ವರುಣ ಗಂಧವಹ = ವಾಯು; ವಿತ್ತಪ = ಕುಬೇರ. ವರುಣನ ಶಕ್ತಿಯಿಂದ ಉಗೆ ಬಂಡಿಗಳಲ್ಲಿಯೂ, ವಾಯುವಿನ ಶಕ್ತಿಯಿಂದ ಕೂಡಿ ವಿಮಾನಗಳಲ್ಲಿಯೂ ರಾತ್ರಿಯಲ್ಲಿಯೂ ಕೂಡ ಚರಿಸುವದು ಪ್ರಸಿದ್ಧವೇ. ಮತ್ತೆ ಉದಾ:-

ಭಾಮಿನಿ॥ ನರನೆ ಹಿಡಿನೀನೊಂದ ಮಾರ್ಗವ ।
ನರಿದಿರೆರಡನು ಮೂರುಗುಣಗಳ ।
ಮೀರಿದೀಶನನರಿಯೊನಾಲ್ಕಂ ವೇದಗಳನೋದಿ ॥
ತೊರೆದು ಪಂಚೇಂದ್ರಿಯಗಳಿಚ್ಛೆಯ ।
ಜರೆಯಲರಿಷಡ್ವರ್ಗವನು ಬಳಿ ।
ಕಾರುತರದ ಸಾಧುತ್ವವನು ಹೊಂದುವಿಯೊ ನಿಶ್ಚಯದೆ ॥

ಇಲ್ಲಿ ಪ್ರಕೃತವಾದ ನೀತಿಮಾರ್ಗವು ಒಂದು ಎರಡು ಇತ್ಯಾದಿ ಕ್ರಮಾಂಕದಲ್ಲಿ ಹೇಳಲ್ಪಟ್ಟಿದೆ. ಪ್ರಸಿದ್ಧವಾದ ಕ್ರಮದ ವ್ಯತ್ಯಾಸವಾದಲ್ಲಿಯೂ ಇದೇ ಅಲಂಕಾರವಾಗುವದು. ಉದಾ:—

ಭಾಮಿನಿ:—ನೈರಿಯಲಿ ಸತ್ವವನು ತೋರ್ಪುದು ।
ಕ್ರೂರರಲಿ ತಾಮಸವ ತೋರ್ಪುದು ।
ನಾರಿಯಲಿ ರಾಜಸವ ತೋರ್ಪುದು ನರರಿಗುಚಿತವಿದು ॥

ಇಲ್ಲಿ ಪ್ರಕೃತವು ಸತ್ವ-ರಜ-ತಮಗಳ ವ್ಯತ್ಯಾಸಕ್ರಮದಿಂದ ವರ್ಣಿಸಲ್ಪಟ್ಟಿದೆ.

ಇದರಂತೆ ಪಂಚೇಂದ್ರಿಯ-ಅರಿಷಡ್ವರ್ಗ-ಸಪ್ತಶೈಲ-ಅಷ್ಟದಿಗ್ಗಜ-ನವರತ್ನಾದಿಗಳನ್ನು ಪ್ರಕೃತಾರ್ಥಕ್ಕೆ ಲಕ್ಷಿಸಿ ಉಲ್ಲೇಖಿಸಿದಲ್ಲಿಯೂ ಬೇರೆ ಪ್ರಸಿದ್ಧ ಕ್ರಮಗಳನ್ನು ಅನುಸರಿಸಿದಲ್ಲಿಯೂ ಇದೇ ಅಲಂಕಾರವಾಗುವದು. ಉದಾ:—

ವಾರ್ಧಿಕ॥ ಇವಳನಯನದ ವಿಶಾಲತೆಯು ಲೀಲಾಬ್ಜಗಳಿ ।
ಗವಸರದೆ ಬರಿಸಿಕೊಟ್ಟತು ಪತ್ರಮಂ ಕುಚಗ ।
ಳವು ಕುಂಭಗಳಿಗೆ ಸತ್ಪೂರ್ವ ಪಕ್ಷವಪಡಿದವು ಕಾಮನ
ಧನುವಿನ ॥

ಆವಿಭ್ರಮುಂಗಳಿಗೆ ತದನುಪಾದಂಗಳಂ ।
ಭೂವಿಭ್ರಮುಂಗಳವು ಮಾಡಿದವು ದೂಷಣೆಯ ।
ನಾವದನಜ್ಯೋತ್ಸ್ನೆಯದು ಚಕನ್ನಾಗಿನುಮಾತಿತ್ತೆ ಚಂದಿರನ
ರೋಚಿಗಳಿಗೆ ॥

ಇಲ್ಲಿ ಪತ್ರದಾನ-ಪೂರ್ವಪಕ್ಷೋಪನ್ಯಾಸ-ಅನುವಾದ-ದೂಷಣೆಗಳು ಪ್ರಸಿದ್ಧಕ್ರಮಕ್ಕನುಸಾರವಾಗಿ ಉಕ್ತವಾಗಿವೆ. (ಕಮಲಗಳಿಗಿಂತ ವಿಶಾಲವಾದ ನೇತ್ರಗಳೂ, ಕುಂಭಸ್ಥಳಗಳಿಗಿಂತ ಪೀನವಾದ ಕುಚಗಳೂ, ಕಾಮನ ಧನುಸ್ಸಿಗಿಂತ ಮನೋಹರವಾದ ಹುಬ್ಬುಗಳೂ ಚಂದ್ರನಕಾಂತಿಗಿಂತ ಹೆಚ್ಚಿನ ಮುಖಕಾಂತಿಯೂ ಇದ್ದವೆಂಬರ್ಥವು.)

---

೭೫. ತದ್ಗುಣಾಲಂಕಾರವು. ಲಕ್ಷಣ:—ತನ್ನ ಗುಣವನ್ನು ಬಿಟ್ಟು ಬೇರೊಂದರ ಗುಣವನ್ನು ವಹಿಸಿತೆಂದು ವರ್ಣಿಸಿದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ ॥ ನಾಸಾವಮೌಕ್ತಿಕವಧರದ ।
ಭಾಸದೆ ಪೊಲಿವದು ಪದ್ಮರಾಗದ ಮಣಿಯಂ ॥

ಇಲ್ಲಿ ಮುತ್ತು ತನ್ನ ಮೊದಲಿನ ಧವಲತ್ವವನ್ನು ಬಿಟ್ಟು ಅಧರದ ಕಾಂತಿಯನ್ನು ವಹಿಸಿತೆಂದು ಹೇಳಿದೆ ಮತ್ತೆ ಉದಾ:—

ಭಾಮಿನಿ ॥ ನೆಲದೆ ಹಾಸಿಗೆಯನ್ನುನೂಡಲು ।
ಎಲೆಗಳನು ತವವೈರಿರಾಜರ ।
ಲಲನೆಯರು ಮುಟ್ಟಲ್ಕೆ ಕರಗಳ ನಖದ ಕಾಂತಿಗಳಂ ॥
ಬಿಳಿಯಬಣ್ಣದವಾಗಿ ಕಾಣಲು ।
ಕೆಳಗೊಗೆದು ಬಿಡುತಿಹರದೊಣಗಿದ ।
ಎಲೆಗಳೀದೇಗಿಡಗಳಂ ಹರಿಹರಿದು ಕಾನನದೆ ॥

ಇಲ್ಲಿ ಚಿಗುರೆಲೆಗಳು ತಮ್ಮ ಅರುಣತೆಯನ್ನು ಬಿಟ್ಟು ನಖದ ಶುಭ್ರಕಾಂತಿಯನ್ನು ಧರಿಸಿದವೆಂದು ಹೇಳಿದೆ.

---

೭೬. ಪೂರ್ವರೂಪಾಲಂಕಾರವು. ಲಕ್ಷಣ:—ಬೇರೊಂದರ ಗುಣವನ್ನು ವಹಿಸಿದ ಮೇಲೆ, ತಿರುಗಿ ತನ್ನ ಮೊದಲಿನ ಕಾಂತಿಯನ್ನು ಮು

ತ್ತೊಂದರಿಂದ ಸಂಪಾದಿಸಿತು ಎಂದು ವರ್ಣಿಸಿದಲ್ಲಿ ಈ ಅಲಂಕಾರವಾಗ. ವದು. ಉದಾ:—

ಕಂದ ॥ ಹರಕಂಠಜಂಶು ಕವಿದರು ।
ನೆರೆಬಿಳುಪಾಗಿಹನು ಶೇಷ ನಿನ್ನಯ ಜಸದಿಂ ॥

ಇಲ್ಲಿ ಶಿವನ ಕಂಠದ ಕಾಂತಿಯಿಂದ ನೀಲವಾಗಿರುವ ಶೇಷನು ರಾಜನ ಯಶಸ್ಸಿನ ಧವಳಕಾಂತಿಯು ವ್ಯಾಪಿಸಲು ತಿರ.ಗಿ ತನ್ನ ಮೊದಲಿನ ಗುಣವನ್ನು ಹೊಂದಿದನೆಂದು ಹೇಳಿದೆ. ಮತ್ತೆ ಉದಾ:—

ಭಾವಿನಿ ॥ ಅರುಣನಿಂದರುಣತೆಯು ನಾಳ್ದಿಹ ।
ತರಣಿಯುಶ್ವಗಳಾಗ ಮೊದಲಿನ ।
ಹರಿತತೆಯು ಹೊಂದಿದವು ರೈವತ ರತ್ನರೋಚಿಗಳಿಂ ॥

ಇಲ್ಲಿ ಅರುಣನ ಕಾಂತಿಯಿಂದ ಕೆಂಪಾಗಿರುವ ಸೂರ್ಯನ ಕುದುರೆಗಳು, ರೈವತದ ಹರಿದ್ರತ್ನಗಳ ಕಾಂತಿಯಿಂದ ತಿರುಗಿ ತಮ್ಮ ಮೊದಲಿನ ಗುಣವನ್ನು ಹೊಂದಿದವೆಂದು ಹೇಳಿದೆ.

೨. ವರ್ಣ್ಯಮಾನವಾದ ವಸ್ತುವು ರೂಪಾಂತರ ಹೊಂದಲು, ಇಲ್ಲವೆ ನಾಶಹೊಂದಲು ಅಲ್ಲಿ ಮೊದಲಿನ ಸ್ಥಿತಿಯೇ ಇರುವದೆಂದು ವರ್ಣಿಸಿದಲ್ಲಿಯೂ ಇದೇ ಅಲಂಕಾರವಾಗುವದು. ಉದಾ:—

ಕಂದ ॥ ಈ ಪಟ್ಟಿಯ ರತ್ನಗಳಿಂ ।
ದೀಪವ ತೆಗೆದಿರಲು ಬೀಳ್ದುದತಿರವಿಯತ್ತಿಷಂ ।

ಇಲ್ಲಿ ದೀಪವ ತೆಗೆದಿದ್ದರೂ ಮೊದಲಿನಗಿಂತ ಹೆಚ್ಚಿನಕಾಂತಿಯು ಬಿದ್ದಿರುವದೆಂದು ಹೇಳಿದೆ. ಮತ್ತೆ ಉದಾ:—

ವಾರ್ಧಕ ॥ ದ್ವಾರವೆಲ್ಲವು ಖಡ್ಗವೃತವಾಗಿ ತೋರುವದು ।
ವಾರಣಗಳಿಂದೆ ಹೊರಭಾಗವದು ವ್ಯಾಪಿಸಿದೆ ।
ವಿಸಾರಿದಂತಃ ಸುರವು ವಿಸುವಸನ್ಮಣಿಗಳಂ ಧರಿಸಿರ್ಪ
ಕಂಚುಕಿಗಳಿಂ ॥
ಥೋರವುಷಿಪೀವೃತದೆ ಶಯನವದು ಶೋಭಿಸುದು ।
ವೀರಜಾರ್ಜರೆ ನಿಮ್ಮ ಶತ್ರುಗಳ ಮಂದಿರವು ।
ಯಾರೊಬ್ಬರಿಲ್ಲದಿದ್ದರು ತನ್ನ ಪೂರ್ವಶೊಭೆಯನಾಳ್ದು
ನಿಂತಿರುವದು ॥

ಇಲ್ಲಿ ರಾಜರುಗಳು ನಾಶವನ್ನು ಹೊಂದಿದ್ದರೂ ಆಗಿನ ಸ್ಥಿತಿಯೇ ಬೇರೊಂದರಿಂದ ಪ್ರಾಪ್ತವಾಗಿ ಈಗಲೂ ತೋರುವದು ಎಂದು ಹೇಳಿದೆ. (ಖಡ್ಗಿವೃತ = ಶಸ್ತ್ರಧಾರಿಗಳಿಂದ ಬಳಿಸಿನ್ದು; ಗಂಡಕಗಳಿಂದ ಸುತ್ತುಗಟ್ಟಿಲ್ಪಟ್ಟದ್ದು. ವಾರಣ = ಗಜ; ಕಂಚಕುಕಿ = ರಾಣೀವಾಸದಲ್ಲಿ ಚರಿಸುವವನು; ಸರ್ಪ; ಮಹಿಷೀವೃತ = ಪಟ್ಟದರಾಣಿಯರುಳ್ಳದ್ದು; ಎಮ್ಮೆಗಳುಳ್ಳದ್ದು).

ರೂಪಾಂತರದ ವಿಕಾರದ ಪುನರಾವೃತ್ತಿಯ ಉದಾಹರಣಗಳು ಮೊದಲೇ ಹೇಳಲ್ಪಟ್ಟಿವೆ. ವಿಶೇಷಾಲಂಕಾರದಲ್ಲಿ ಪ್ರಕೃತವಸ್ತುವು ಬೇರೊಂದು ಕಡೆಗೆ ಬಯ್ಯಲ್ಪಡುವದು. ಅದರೆ ಇಲ್ಲಿ ಬೇರೊಂದು ವಸ್ತುವಿನಿಂದ ಕಾರ್ಯಸಿದ್ಧಿಯು ವರ್ಣನೆಯಿರುವದು.

---

೭೭. ಅತದ್ಗುಣಾಲಂಕಾರವು. ಲಕ್ಷಣ:— ತನಗೆ ಸಂಬಂಧಿಸಿದ ಬೇರೆ ವಸ್ತುಗಳ ಗುಣಗಳನ್ನು ಇದು ಹೊಂದಲಿಲ್ಲವೆಂದು ವರ್ಣಿಸಿದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ॥ ನೆರೆ ರಾಗವುಳ್ಳ ಹೃದಯದೆ ।
ಚಿರಕಾಲಮನಿಟ್ಟಿರಿನ್ನು ರಂಜಿಸೆಯಲ್ಲೈ ॥

ಇಲ್ಲಿ ರಾಗವುಳ್ಳ ಹೃದಯದಲ್ಲಿಟ್ಟಿರೂ ರಾಗವುಳ್ಳವನಾಗವಲ್ಲಿ ಎಂದು ಹೇಳಿದೆ. (ರಾಗ = ಪ್ರೀತಿ; ಮಂಜಿಷ್ಠಾದಿ ರಂಜನ ದ್ರವ್ಯಗಳು) ಮತ್ತೆ ಉದಾ:—

ಭಾಮಿನಿ॥ ಬಿಳಿದು ಗಂಗೆಯು ಜಲವು ಯಮುನೆಯ ।
ಜಲವು ಕರಿದಾಗಿರಲಿವೆರಡೂ ।
ಸ್ಥಳಗಳಲಿ ಮಜ್ಜಿಸುತ ಹಂಸವೆ ತೋರುವಿಯೋ ಬಿಳಿದೇ॥

ಇಲ್ಲಿ ಗಂಗಾಯಮುನೆಗಳ ಶುಭ್ರತ್ವ ನೀಲತ್ವ ಗುಣಗಳು ಹಂಸಕ್ಕೆ ಪ್ರಾಪ್ತವಾಗಲಿಲ್ಲವೆಂದು ಹೇಳಿದೆ. ಮತ್ತೆ ಉದಾ:—

ಭಾಮಿನಿ॥ ಮದದೆ ದಿಗ್ಗಜಗಳಲಿ ಪಂಕೆಲ ।
ವಾದ ಗಂಡಂಗಳಲಿ ಚರಿಸುತ ।
ಸುದತಿಯುತ ನಯನಾಂಜನವನೊರಸಿದರು ವೈರಿಗಳ ॥
ವಿಧುಕರಗಳೊಳಗೈಕ್ಯವಾಗುತ ।
ಲದು ಸಕಲದಿಶಗಳಲಿ ಬುಧರಿಗೆ ।
ಸುಧಿಯನೀವುದು ನಿನ್ನ ಕೀರ್ತಿಯು ಜಾರ್ಜ ಭೂಮಿಪನೇ ॥

ಇಲ್ಲಿ ದಿಗ್ಗಜಗಳ ಗಂಡ ವೈರಿಸ್ತ್ರೀಯರ ನೇತ್ರಗಳ ಸಂಗದಿಂದ ಪಂಕೆಲತ್ವ-ಅಂಜನತ್ವಗಳು ಶ್ರೀ ಜಾರ್ಜರಾಜನ ಕೀರ್ತಿಗೆ ಪ್ರಾಪ್ತವಾಗಲಿಲ್ಲವೆಂದು ವರ್ಣಿಸಿದೆ. (ಪಂಕಿಲತ್ವ = ಕೆಸರುಳ್ಳದ್ದು; ಅಂಜನ = ಕಾಡಿಗೆ)

ಒಂದರಿಂದ ಬೇರೊಂದಕ್ಕೆ ಗುಣೋದಯ-ಅನುದಯಗಳು ಉಲ್ಲಾಸ-ಅವಜ್ಞೆಗಳಲ್ಲಿಯೂ ತದ್ಗುಣ-ಅತದ್ಗುಣಗಳಲ್ಲಿಯೂ ತೋರುತ್ತಿದ್ದರೆ. ಉಲ್ಲಾಸ-ಅವಜ್ಞಾಲಂಕಾರಗಳಲ್ಲಿ ಗುಣ ಶಬ್ದವು ದೋಷಪ್ರತಿಪಕ್ಷವಾಚಕವಾಗಿರುವದು. ಆದರೆ ತದ್ಗುಣ-ಅತದ್ಗುಣಗಳಲ್ಲಿ ಗುಣ ಶಬ್ದವು ರೂಪರಸಗಂಧಾದಿ ಗುಣವಾಚಕವಾಗಿರುವದು. ತದ್ಗುಣ-ಅತದ್ಗುಣಗಳ ಗುಣಗ್ರಹಣ-ಅಗ್ರಹಣಗಳು ಕೆಂಪು ಹಾಗು ಬಿಳಿಯ ಅರಿವೆಗಳಿಗೆ ಹತ್ತುವ ಮಲಿನತೆಗಳಂತೆ ಇರುವವು. ಇದು ಉದಾಹರಣಗಳಲ್ಲಿ ಸ್ಪಷ್ಟವೇ ಅದೆ ಇನ್ನು ಅವಜ್ಞಾಲಂಕಾರವೂ ಅತದ್ಗುಣಾಲಂಕಾರವೂ ವಿಶೇಷೋಕ್ತಿಯ ಅಂತರ್ಭೂತವಾದವುಗಳೇ. ಆದರೆ ಇವು ಉಲ್ಲಾಸ-ತದ್ಗುಣಗಳಿಗೆ ಪ್ರತಿದ್ವಂದ್ವಿಗಳಾಗಿರುವದರಿಂದ ಬೇರೆ ಅಲಂಕಾರಗಳೆಂದು ತಿಳಿಯಲ್ಪಟ್ಟವೆ.

(ಮುಂದೆ ಸಾಗುವದು.)

ಅಭಿನವ ಲಕ್ಷ್ಮೀಶ
ಉಪೇಂದ್ರಶರ್ಮಾ ತೋಳಮಟ್ಟಿ.

ಪತ್ರವ್ಯವಹಾರವು

ಗು॥ ರಾ. ಸಾ. ಕನ್ನಡ ಶಾಲಾ ಪತ್ರಿಕೆಯ ಎಡಿಟರ ಮಹಾರಾಯರ ಚರಣ ಸನ್ನಿಧಾನಕ್ಕೆ—

ಸಿ॥ ಸಾ॥ ನಮಸ್ಕಾರಗಳು ವಿ॥ ವಿ॥

ಚಾಲು ತಿಂಗಳ ಮಾಸಿಕ ಪತ್ರಿಕೆಯಲ್ಲಿ ಮಿ. ಪಟ್ಟೇದ ಇವರು ಯತಿಚ್ಛೇದವಿದ್ದಲ್ಲಿ ಉಸುರು ಬಿಡುವ ಬಗ್ಗೆ ಕೊಟ್ಟ ನಿರ್ಣಯಾತ್ಮಕ ಲೇಖದ ವಿಶೇಷ ವಿಚಾರದ ಬಗ್ಗೆ ಕೊಟ್ಟ ಕೆಳಗಿನ ನಾಲ್ಕು ಪಂಕ್ತಿಗಳಿಗೆ ತಮ್ಮ ಪತ್ರಿಕೆಯ ಬರುವ ಅಂಕದಲ್ಲಿ ಸ್ಥಳ ದೊರೆದೀತೆಂದು ಅಪೇಕ್ಷಿಸುತ್ತೇನೆ:—

ಸದರೀ ಲೇಖದಲ್ಲಿ ಮಿ. ಪಟ್ಟೇದ ಇವರು ಯತಿಚ್ಛೇದವಿದ್ದಲ್ಲಿ ಉಸುರು ಬಿಡದೆ, ಇರುವದರಿಂದ ಛಂದಸ್ಸಿನ ನೈಸರ್ಗಿಕ ಹಕ್ಕಿಗೆ ಬಾಧೆ

ಬರುವದರಿಂದ ಛಂದಃಶಾಸ್ತ್ರದ ನಿಯಮಕ್ಕೆ ಭಂಗ ಬರುವದೆಂತಲೂ, ಸ್ವರ-ತಾಲ-ಲಯ ಮುಂತಾದ ಪದ್ಯೋಚಿತ ಗಾನಾನಂದವು ಹಾಳಾಗುವ ದೆಂತಲೂ ಇವೇ ಮೊದಲಾದ ಆಕ್ಷೇಪಗಳನ್ನು ತೆಗೆದುಕೊಂಡಿರುವರು.

ಆದರೆ ಕನ್ನಡ ಕವಿಗಳಿಲ್ಲ ರಚನೆಗೆ ಕಷ್ಟವಾಗ.ವದೆಂದು ನಿರ್ಭ ಯದಿಂದ ಯತ್ಯುಲ್ಲಂಘನೆ ಮಾಡಿದಂತೆ ಪ್ರಾಸ ಗಣ ಮುಂತಾದ ನಿಯಮ ಗಳ ಉಲ್ಲಂಘನೆ ಮಾಡಿದ್ದು ಎಲ್ಲಿಯೂ ಕಂಡು ಬರುವದಿಲ್ಲ. ಇದರ ಮೇಲಿಂದ ಪ್ರಾಸ, ಗಣ ಮುಂತಾದವುಗಳಷ್ಟು ಯತಿಯ ನಿಯಮವು ಬಲಿ ಷ್ಠವಾದದ್ದಲ್ಲವೆಂದು ಅನ್ನಬೇಕಾಗುತ್ತದೆ.

ಇನ್ನು ಕನ್ನಡ ಮಹಾ ಕವಿಗಳಿಗೆಲ್ಲ ಯತಿಯ ಪಾಲನೆಗೆ ಮಾತ್ರ ಕಷ್ಟ ಬದಗಿದ್ದರಿಂದ ಅನಿವಾರ್ಯ ಪಕ್ಷಕ್ಕೆ ಕೈ ಬಿಟ್ಟರುವರೆಂದು ಕಲ್ಪಿ ಸಲು, ಗೌರವ ದೋಷವುಂಟಾಗುತ್ತದೆ; ಕಾರಣ ಹಾಗೆ ತಿಳಿಯದೆ ಯತಿ ಭಂಗ ದೋಷವು ಮಹತ್ವದ್ದಲ್ಲವೆಂದು ತಿಳಿಯಲು ಲಾಘವವಾಗಿದೆ. ಇದರ ಮೇಲಿಂದ ಯತಿಯ ಹಕ್ಕನ್ನು ಕನ್ನಡ ಕವಿಗಳು ಪಾಲಿಸಿಲ್ಲವೆಂದು ಸಿದ್ಧ ವಾಗುತ್ತದೆ. ಇಷ್ಟೇ ಅಲ್ಲ. "ಯತಿವಿಲಂಘನೆದಿಂದರಿದಲ್ತೆ ಕನ್ನಡಂ" ಎಂದು ಕೇಶಿರಾಜನು ತನ್ನ ದರ್ಪಣ (ಸವಮಾಂ ವಾಕ್ಯನ ಸೂ. ೫) ದಲ್ಲಿ ಹೇಳಿದ್ದರಿಂದ ಯತಿ ವಿಲಂಘನವೇ ಕನ್ನಡದ್ದೊಂದು ಮುಖ್ಯ ಲಕ್ಷಣವಾಗಿ ರುವದು. (ಆನೆ) "ನಡೆದುದೆ ಮಾರ್ಗಂ" ಎಂಬಂತೆ ದೊಡ್ಡವರು ಹಾಕಿ ಕೊಟ್ಟದ್ದು ಶಾಸ್ತ್ರವಲ್ಲವೆ?

ಯತಿಯೆಂದರೆ ವಿಶ್ರಾಂತಿಯ ಸ್ಥಳವು. ಗಾಯನೆ ಕಲಾಪಟುತ್ವದ ಮೇರೆಗೆ ಬೇಕಾದವರು (ಕನ್ನಡದಲ್ಲಿ ಯತಿಗೆ ಹಕ್ಕು ಇಲ್ಲದ ಮೂಲಕ) ಬೇಕಾದಲ್ಲಿ ನಿಲ್ಲಬಹುದು. ಇದೇ ಕಾರಣದ ಮೂಲಕ ಛಂದೋಪದ ಇಲ್ಲವೆ ಪದ್ಯವನ್ನು ಹಲವರು ಹಲವು ಬಗೆಯಾಗಿ ವಿಶ್ರಮಿಸಿ ಅನ್ನುವದನ್ನು ಕೇಳು ತ್ತೇವೆ. ಕಾಲೇಜದ ಕನ್ನಡ ಪಂಡಿತರೂ, ಇತರ ನಾಟಕಕಾರರೂ ಮನ ಸೋಕ್ತವಾಗಿ ಉಸುರು ಬಿಟ್ಟು, ಪದ್ಯಗಳನ್ನು (ಸ್ವರ-ತಾಲ-ಲಯಗಳನ್ನು ಬಿಡದೆ) ಬಹು ಸರಸವಾಗಿ ಅನ್ನುತ್ತಿರುವದನ್ನು ಕೇಳಿದ್ದರೆ, ವಿ॥ ಪಟ್ಟೇದ ಇವರು ಗಾನಾನಂದಾದಿಗಳು ತಪ್ಪುವವೆಂದು ಎಂದೂ ಬರೆಯುತ್ತಿದ್ದಿಲ್ಲ.

ಹಳೇ ಪದ್ಧತಿಯಲ್ಲಿ ದೋಷವಿದ್ದ ಹೊರ್ತು ಯಾವದೊಂದು ಹೊಸ ಪದ್ಧತಿಯು ಉದಯಕ್ಕೆ ಬರಲಾರದು. ನಾವು ಅನ್ನುತ್ತಿರುವ ಹಳೇ ಪದ್ಧತಿ (ಯತಿಚ್ಛೇದದಲ್ಲಿ ಉಸುರು ಬಿಡುವ) ಯಿಂದ ಕೇವಲ ಆರ್ಷಕ್ಕೆ

ತೊಂದರೆಯಾಗುತ್ತದಂತಲ್ಲ, ಕರ್ಣ ಕಠೋರವೂ, ಅಪಸ್ವರವೂ ಆಗುತ್ತಿರುವ ಮೂಲಕ ನಮ್ಮ ದಾಟಿಗೆ ಮೈಸೂರ ಜನರು ಅಪಹಾಸ ಮಾಡುತ್ತಾರಂತೆ! ಕಾರಣ ಈ ಅಪಹಾಸ ತಪ್ಪಿಸಬೇಕಾಗಿ, ಕೇವಲ ಕನ್ನಡ ಭಾಷೆಗೆ ಮಾತೃಭೂಮಿಯನಿಸಿದ ಮೈಸೂರ ಪದ್ಧತಿಯನ್ನು ಪ್ರಚಾರದಲ್ಲಿ ತರುವದು ಯುಕ್ತವೆಂದೆಣಿಸಿ ಕೆಲವು ಮಹನೀಯರು ಯತ್ನ ಮಾಡುತ್ತಿರುವರು.

ಸಾರಾಂಶ, ಕನ್ನಡದಲ್ಲಿ ಯತಿಗೆ ನೈಸರ್ಗಿಕ ಹಕ್ಕು ಇಲ್ಲದೆ ಇರುವದರಿಂದಲೂ, ಹೊಸ ಪದ್ಧತಿಯು (ಯತಿಚ್ಛೇದವಿದ್ದಲ್ಲಿ ಉಸುರು ಬಿಡದೇ ಅನ್ನುವ) ನಿರ್ದುಷ್ಟವಾದದ್ದೂ, ಶಿಷ್ಟ ಸಮ್ಮತವಾದದ್ದೂ ಇರುವದರಿಂದಲೂ, ಹಳೇ ಪದ್ಧತಿಯು ಅಯೋಗ್ಯವಾಗಿರುವದರಿಂದಲೂ, ಹೊಸಪದ್ಧತಿಯನ್ನು ಅಂಗೀಕರಿಸಲು ಪ್ರತ್ಯವಾಯವು ತೋರುವದಿಲ್ಲ.

ಆದರೆ ಬೇರೆ ಬೇರೆ ಜನರು ಬೇರೆ ಬೇರೆ ಸ್ಥಳದಲ್ಲಿ ವಿಶ್ರಮಿಸುವದರಿಂದಲೂ, ಬೇರೆ ಬೇರೆ ದಾಟಿಗಳನ್ನು ಹಚ್ಚುವದರಿಂದಲೂ, ಅನವಸ್ಥಾ ಪ್ರಸಂಗವು ಒದಗಿ ನಮ್ಮಂಥ ಗಾಯನಕಲಾನಭಿಜ್ಞರಿಗೆ, ವಿದ್ಯಾರ್ಥಿಗಳಿಗೆ ಕಲಿಸಲಿಕ್ಕೆ ಬಹು ಕಠಿಣವಾಗುತ್ತದೆಂಬದು ನಿಜವು. ಆವರೆ ನಮ್ಮ ಅಜ್ಞತೆಯ ಮೂಲಕ ಯೋಗ್ಯಪದ್ಧತಿಗೆ ಕುಂದಿಡಲು ನ್ಯಾಯವೆನಿಸದು. ಈ ಕಠಿಣತೆಯನ್ನು ತಪ್ಪಿಸಲಿಕ್ಕೆ ನಮ್ಮಂಥವರು ಯತಿಚ್ಛೇದವಿದ್ದಲ್ಲಿ ಉಸುರು ಬಿಟ್ಟೂಬಿಡದಂತೆ ಅನ್ನುವದು, ಯೋಗ್ಯವೆಂದು ತೋರುತ್ತದೆ.

ನಮ್ಮ ವ್ಯವಸಾಯಬಂಧುಗಳು ಈ ಬಗ್ಗೆ ಇನ್ನೂ ಹೆಚ್ಚಿಗೆ ಚರ್ಚೆ ಮಾಡಿಸಿ, ನಿಷ್ಕರ್ಷೆ ಮಾಡಿಕೊಳ್ಳಬೇಕಾಗಿ ವಿನಂತಿಯದೆ.

ಗುರುವರ್ಯ ಮಹಾರಾಯರೇ, ಪತ್ರವಿಸ್ತಾರಕ್ಕಾಗಿ ಕ್ಷಮೆ ಇರಲೆಂದು ಬೇಡಿಕೊಳ್ಳುತ್ತೇನೆ. ಇತಿ ವಿನ್ನಹ.

ಶಾಲಾ-ಮಲಿಮನ್ನೊಳ್ಳಿ
ತಾ॥ ಹುಕ್ಕೇರಿ ಜಿ॥ ಬೆಳಗಾವ
ತಾ॥ ೨೦-೩-೧೯೧೪

ನಮ್ರವಿಧೇಯ ವಿಷಯನಿಷ್ಕರ್ಷಾಭಿಲಾಷಿ,
ಶ್ರೀನಿವಾಸ ವ್ಯಂಕಟೇಶ ಜಿಮ್ಮಲಗಿ
ಹೆ॥ ಮಾಸ್ತರ.

ಶಾಲಾಪತ್ರಿಕೆಯ ಎಡಿಟರವರ ಸನ್ನಿಧಿಗೆ:—

ಸಾಷ್ಟಾಂಗ ನಮಸ್ಕಾರ ವಿ. ವಿ. ಕೆಳಗಿನ ಸಂಗತಿಯನ್ನು ತಮ್ಮ ಶಾಲಾಪತ್ರಿಕೆಯಲ್ಲಿ ದಯವಿಟ್ಟು ಮುದ್ರಿಸೋಣವಾಗಬೇಕೆಂದು ವಿಜ್ಞಾಪಿಸುವೆವು:—

ರಾವಸಾಹೇಬ ಡೆಪ್ಯುಟಿ ಎಜ್ಯುಕೇಶನಲ್ ಇನಸ್ಪೆಕ್ಟರ ಜಿಲ್ಲಾ ಧಾರವಾಡ ಇವರ ಸ್ವಾರಿಯು ಶಾಲೆಯ ತಪಾಸಣೆಯ ಸಲುವಾಗಿ ಮುಳಗುಂದಕ್ಕೆ ಬಂದಕಾಲದಲ್ಲಿ ಆ ಊರಲ್ಲಿ ತಾರೀಖು ೨೨-೩-೧೪ನೆಯ ದಿವಸ ರವಿವಾರ ಸಾಯಂಕಾಲ (೪) ಘಂಟೆಗೆ ಮಾಸ್ತರ ಜನರ ಆಲೋಚನಾ ಸಭೆ (Conference) ಯು ನೆರವೇರಿಸಲ್ಪಟ್ಟಿತು. ಈ ಸಭೆಗೆ ಸವಿಾಪದ ಮಾಸ್ತರ ಜನರೂ, ಮುಳಗುಂದ ಶಾಲೆಗಳ ಎಲ್ಲಮಾಸ್ತರ, ಮಿಸ್ಟ್ರೆಸ್ ಜನರೂ ಕೂಡಿದ್ದರು. ಸಭೆಯಲ್ಲಿ ಕಲಿಸುವಪದ್ಧತಿ, ಉಪಕರಣಗಳು, ಮಾಸ್ತರರ ನಡತೆ, ಊರಜನರ ಬಳಿಕೆಯ ಪದ್ಧತಿ, ಅಧಿಕಾರಸ್ಥರ ಕೂಡ ವರ್ತನೆ, ಆಫೀಸ ಕೆಲಸ, ಅಸಿಸ್ಟಂಟರ ಕೆಲಸ, ಈ ಮೊದಲಾದ ಎಲ್ಲ ವಿಷಯಗಳು ಚರ್ಚಿಸಲ್ಪಟ್ಟವು. ಕಡೆಗೆ ಧಾರ್ಮಿಕ ಮನಸ್ಸಿನವರಾದ ರಾ ಸಾ. ಬೆಂಡಿಗೇರಿಸಾಹೇಬರವರು ಅಧ್ಯಕ್ಷಸ್ಥಾನತೆಯಿಂದ ಮಾಡಿದ ಭಾಷಣದಲ್ಲಿ ಹೊರಟ ಮುಖ್ಯ ಸಂಗತಿಯನ್ನು ಶಿಕ್ಷಕ-ಶಿಕ್ಷಕಿಯರ ಉಪಯೋಗಕ್ಕಾಗಿ ಇದರಡಿ ಕೊಟ್ಟಿರುತ್ತೇವೆ:—

೧. ಮಾಸ್ತರರ ಕೆಲಸವು ಗೌರವವುಳ್ಳದ್ದೂ, ಮಹತ್ವದ್ದೂ ಇದ್ದು, ಇವು ಪ್ರಕಟವಾಗಬೇಕಾದರೆ ಮಾಸ್ತರರ ಆಚರಣೆಯೇ ಮುಖ್ಯ ಕಾರಣವು. ಅದರಿಂದ ಮಾಸ್ತರರು ಸದಾಚಾರಿಗಳಾಗಿರುವದು ಅತ್ಯವಶ್ಯವಿದೆ. ಇದರಿಂದ ವಿದ್ಯಾರ್ಥಿಗಳಿಗೂ ಕಲ್ಯಾಣವಾಗುವದು.

೨. ಮಾಸ್ತರ ಜನರು ಊರತನದ ಕೆಲಸದಲ್ಲಿ ಸರ್ವಥಾ ಕೈ ಹಾಕಬಾರದು. ವ್ಹಿಲೇಜ ಆಫೀಸರರ ಕೂಡ ಊರೊಳಗಿನ ಗೃಹಸ್ಥರ ಕೂಡ ಪ್ರೀತಿಯಿಂದ ನಡೆದು, ಶಾಲಾ ಸುಧಾರಣೆಗೆ ಅವರನ್ನು ಪ್ರೋತ್ಸಾಹಿಸುವದು ಮಾಸ್ತರರ ಕರ್ತವ್ಯವು.

೩. ಮಾಸ್ತರ ಜನರು ಶಾಲಾಪತ್ರಿಕೆಯನ್ನೂ, ಶಾಲೋಪಯೋಗಿ ವಿಷಯಗಳನ್ನೂ ಆಗಿಂದಾಗ್ಗೆ ಓದುತ್ತಿರಬೇಕು.

೪. ಮಾಸ್ತರರು ರಾಜನಿಷ್ಠರಾಗಿ ವರ್ತಿಸಿ, ವಿದ್ಯಾರ್ಥಿಗಳಿಗೂ ಊರ ಜನರಿಗೂ ರಾಜನಿಷ್ಠೆಯ ಬಗ್ಗೆ ಉಪದೇಶಿಸುತ್ತಿರಬೇಕು.

೫. ಡಿಸ್ಟ್ರಿಕ್ಟ್ ಸ್ಯಾನಿಟರಿ ಅಸೋಸಿಯೇಶನ್, ಸಹಾಯಕಾರಿ ಸಂಘ, ಒಕ್ಕಲತನದ ಸಂಘ ಮೊದಲಾದ ಲೋಕೋಪಯೋಗಿ ಸಂಘಗಳ ವಿಷಯವಾಗಿ ವಿದ್ಯಾರ್ಥಿಗಳಿಗೆ ತಿಳಿಯುವಂತೆ ಹೇಳಿ, ಇವುಗಳ ಮಹತ್ವದ ಕಡೆಗೆ ಅವರ ಲಕ್ಷವನ್ನು ಎಳೆಯಬೇಕು.

೬. ವಿದ್ಯಾರ್ಥಿಗಳ ಸದಾಚರಣೆಯ ಬಗ್ಗೆ ಎಚ್ಚರಗೊಳ್ಳುವದು ಮಾಸ್ತರರ ಮುಖ್ಯ ಕೆಲಸವು.

೭. ವರಿಷ್ಠರ, ಊರಜನರ, ವಿದ್ಯಾರ್ಥಿಗಳ ಪ್ರೇಮವು ಮಾಸ್ತರರ ಮೇಲೆ ಉಂಟಾಗಬೇಕಾದರೆ, ಅವರ ವಿದ್ವತ್ತೆ, ಸದಾಚಾರ, ಸದ್ಗುಣ ಇವುಗಳೇ ಕಾರಣವಲ್ಲದೆ, ಬೇರೆ ಯಾವವೂ ಕಾರಣವಾಗಲಾರವು. ಆದರಿಂದ ನಿಮ್ಮ ಮನಸ್ಸನ್ನು ಆ ಧರ್ಮ ಪ್ರವೃತ್ತಿಗೆ ಸರ್ವಥಾ ಹೋಗಗೊಡಬೇಡಿರಿ.

೮. ಫೀ ಸಂಬಂಧವಾಗಿ, ಆಫೀಸ ಕೆಲಸದ ಸಲುವಾಗಿ ಹೆಡ್ಡಮಾಸ್ತರ, ಅಸಿಸ್ಟಂಟರ ನಡುವೆ ಕಲಹ ಹುಟ್ಟಿದ್ದು, ಎಷ್ಟೋ ಕಡೆಗೆ ನಮ್ಮ ನಜರಿಗೆ ಬಂದಿದೆ. ಆದರೆ ಇದೇನೂ ಯೋಗ್ಯವಲ್ಲ. ಅಸಿಸ್ಟಂಟರು, ತಮ್ಮ ಕ್ಲಾಸುಗಳ ಹುಡುಗರ ಸಂಖ್ಯೆಯು ಕಡಿಮೆಯಾಗದಂತೆ ಎಚ್ಚರಗೊಂಡು, ಫೀ ಹಣವನ್ನು ಮುದ್ದತಿನೊಳಗೆ ವಸೂಲಮಾಡಿ, ಹೆಡ್ಡಮಾಸ್ತರರ ಕಡೆಗೆ ಕೊಡುವದೂ, ಹೆಡ್ಡಮಾಸ್ತರರಿಂದ ಒಪ್ಪಿಸಲ್ಪಟ್ಟ ಆಫೀಸಿನ ಕೆಲಸವನ್ನು ಸ್ಪಷ್ಟವಾಗಿ ಮಾಡುವದೂ, ಅಸಿಸ್ಟಂಟರ ಜವಾಬದಾರಿಯಾಗಿರುವದು.

೯. ವಾಚನ ಪಾಠದೊಳಗಿನ ವಿಷಯ–ಜ್ಞಾನಕ್ಕಾಗಿ ಉಪಕರಣಗಳ ಅವಶ್ಯಕತೆಯ ಬಗ್ಗೆ ಎಷ್ಟೋ ಮಾಸ್ತರ ಜನರ ಸೂಚನೆ ಬಂದಿರುವದು. ಆದರೆ ಎಷ್ಟೋ ಮಾಸ್ತರ ಜನರು ಇವುಗಳನ್ನು ಊರವರಿಂದ ದೊರಕಿಸಿಕೊಂಡಿದ್ದಾರೆ. ಆದರೂ ಆದಷ್ಟು ಉಪಕರಣಗಳನ್ನು ಒದಗಿಸಿ ಕೊಡುವ ವಿಷಯದಲ್ಲಿ ವಿಚಾರ ಮಾಡುವೆವು.

೧೦. ಮಾಸ್ತರ ಜನರ ಪಗಾರವಗೈರ ಮೊದಲಾದ ಉಪಯುಕ್ತ ಸಂಗತಿಗಳನ್ನು ಶಾಲಾಪತ್ರಕದಲ್ಲಿ ಕೊಡುವ ಬಗ್ಗೆ, ಎಷ್ಟೋ ಮಾಸ್ತರರು ಸೂಚಿಸಿರುವರು. ಆದರೆ ಈ ಸಂಗತಿಯ ವಿಷಯವಾಗಿ ರಾ. ಸಾ. ಪ್ರಿನ್ಸಿಪಾಲ ಟ್ರೇನಿಂಗ ಕಾಲೇಜ ಧಾರವಾಡ ಇವರ ಕೂಡ ಆಲೋಚಿಸಿದೆ, ಯಾವ ಮಾತನ್ನೂ ಹೇಳಲಿಕ್ಕೆ ಬರುವಂತಿಲ್ಲ.

೧೧. ಶಾಲಾ ರಿಕಾರ್ಡ ಬಹಳ ದಿವಸಗಳಿಂದ ಬೆಳೆಯುತ್ತ ಬಂದು, ತೊಂದರೆಯಾಗಹತ್ತಿದ್ದರಿಂದ ಇದರ ವ್ಯವಸ್ಥೆಯ ಬಗ್ಗೆ ಎಷ್ಟೋ ಮಾಸ್ತರರಿಗೆ ಹುಕುಮು ಕೊಟ್ಟಿದ್ದೇವೆ. ನಮ್ಮ ಅಸಿಸ್ಟಂಟ ಡಿಪ್ಯೂಟಿಯವರು ಪರಿಷ್ಪೆಗೆ ಬಂದಾಗ ಆ ಹುಕುಮಿನಂತೆ ವ್ಯವಸ್ಥೆ ಮಾಡುವರು.

ಇಂತೀ ವಿನಯ ವಿನಂತಿಗಳು.

ತಾರೀಖು ೨೩–೩–೧೯೧೫ ಕ್ಷ. ಚಾ. ಕುರ್ತಕೋಟಿ.
Head Master, Kurtkoti.

ಬಡೋದೆಯ ಹೊಸ ದಿವಾಣರಾದ ಶ್ರೀ ಪಿ. ಮಾಧವರಾವ ಸಿ. ಆಯ್. ಇ.

"ಮುಂಬಯಿಯಲ್ಲಿ ದಾಸಿಗಳೂ, ಬಂಗಾಲದಲ್ಲಿ ವಕ್ತೃತ್ವಶಾಲಿಗಳೂ ಮದ್ರಾಸದಲ್ಲಿ ಮುತ್ಸದ್ದಿಗಳೂ ಜನಿಸುವರು" ಎಂದು ಪ್ರಾಚೀನ ಕಾಲದಿಂದ ಬಂದು ನಾಣ್ನುಡಿ ಉಂಟಾಗಿದೆ. ಇದರ ಪ್ರತ್ಯಂತರವು ಈ ವರೆಗೆ ಅನೇಕ ಸಾರೆ ಬಂದದೆ. ಹಾಗೂ ಈ ಪರಂಪರೆಯು ಇನ್ನೂ ನಡೆದಿರುವದೆಂದು ತೋರುವದು. ಯಾಕಂದರೆ, ಬಡೋದೆಯ ಅಧಿಪತಿಗಳಾದ ಶ್ರೀ. ಸಯಾಜಿರಾಯರವರು ಬಹಳ ದಿವಸ ಶೋಧಮಾಡಿ ಕೊನೆಗೆ ಮದ್ರಾಸದ ಗೃಹಸ್ಥರನ್ನೇ ತಮ್ಮ ಸಂಸ್ಥಾನದ ದಿವಾಣರನ್ನಾಗಿ ಆರಿಸಿರುವರು. ನಿಜವಾಗಿ ನೋಡಿದರೆ, ಪಾಟಣಕರ ಮಾಧವರಾಯರು ಮಹಾರಾಷ್ಟ್ರೀಯರು. ಸುಮಾರು ೬೫ ವರ್ಷಗಳ ಹಿಂದೆ ಮಹಾರಾಷ್ಟ್ರ ಅರಸರ ದವಡು ದಕ್ಷಿಣಕ್ಕೆ ಹೋದಾಗ ಕೆಲವು ಮಹಾರಾಷ್ಟ್ರ ಕುಟುಂಬಗಳು ಮದ್ರಾಸ ಇಲಾಖೆಯಲ್ಲಿದ್ದ ತಂಜಾವರ ಪ್ರಾಂತಕ್ಕೆ ಹೋದವು. ಇವು ಬಹಳ ದಿವಸಗಳಿಂದ ಅಲ್ಲಿಯೇ ಇದ್ದದರಿಂದ ಸದ್ಯಕ್ಕೆ ಮಹಾರಾಷ್ಟ್ರಕ್ಕೆ ಪರಕೀಯಗಳಾಗಿ ತೋರುತ್ತವೆ. ಆದರೂ ಮಹಾರಾಷ್ಟ್ರ ಗೃಹಸ್ಥರು ಎಲ್ಲಿ ಹೋದರೂ ತಮ್ಮ ಮೂಲ ಆಚರಣೆಗಳನ್ನು ಬಿಡುವದಿಲ್ಲ. ಅದರಂತೆ ತಂಜಾವರ ಪ್ರಾಂತದಲ್ಲಿಯ ಮಹಾರಾಷ್ಟ್ರೀಯರು ಕೂಡಾ ಕನಿಷ್ಟಾಪೇಕ್ಷೆಗೆ ತಮ್ಮ ಮನೆಯೊಳಗಿನ ಆಚಾರ-ವಿಚಾರಗಳಲ್ಲಿಯೂ ಭಾಷೆಯಲ್ಲಿಯೂ ತಮ್ಮ ಮೂಲ ಪದ್ಧತಿಯನ್ನು ಬಿಟ್ಟಿಲ್ಲ. ಆದರೂ ಅವರು ೬೫ ವರ್ಷ ಮದ್ರಾಸ ಇಲಾಖೆಯಲ್ಲಿದ್ದದರಿಂದ ಮದ್ರಾಸದ ಜನರೂ ಅವರ ಗಣನೆಯನ್ನು ಅಭಿಮಾನಪುರಸ್ಸರವಾಗಿ ತಮ್ಮೊಳಗೆ ಮಾಡಿಹುದು.

ಈಗಿನ ಹೊಸ ದಿವಾಣರಾದ ಮಾಧವರಾಯರು ಬಡೋದೆಗೆ ಮದ್ರಾಸದ ಕಡೆಯಿಂದ ಬಂದ ದಿವಾಣರಲ್ಲಿ ಮೂರನೆಯವರು. ಈ ಸಂಸ್ಥಾನದಲ್ಲಿ ಇಂದಿನ ವರೆಗೆ ರಾಜಾ. ಸರ. ಟಿ. ಮಾಧವರಾವ ಮತ್ತು ಅಯ್ಯಂಗಾರ ಎಂಬ ಇಬ್ಬರು ಮದ್ರಾಸದ ಕಡೆಗಿನ ದಿವಾಣರು ಆಗಿ ಹೋಗಿರುವರು. ಇವರಲ್ಲಿ ಮೊದಲನೆಯವರನ್ನು ಬ್ರಿಟಿಶ್ ಸರಕಾರದ

ವರೂ ಎರಡನೆಯವರನ್ನು ಸಯಾಜಿರಾಯರೂ ನೇಮಿಸಿದ್ದರು. ವ್ಹಿ. ಪಿ. ಮಾಧವರಾಯರು ಬಡೋದೆಗೆ ಮದ್ರಾಸಿನ ಕಛೇರಿಯಿಂದ ಬಂದ ೩ನೆಯ ದಿವಾಣರಿರುವಂತೆ, ೩ನೇ ಸಂಸ್ಥಾನದ ದಿವಾಣರೂ ಎಂದು ಹೇಳಬಹುದು. ಅಂದರೆ, ಇಂದಿನ ವರೆಗೆ ಅವರು ತ್ರಾವಣಕೋರ-ಮೈಸೂರು ಸಂಸ್ಥಾನಗಳಲ್ಲಿ ದಿವಾಣಗಿರಿಯನ್ನು ಮಾಡಿರುವರು. ಮೊದಲು ತ್ರಾವಣಕೋರ, ಆಮೇಲೆ ಮೈಸೂರು, ತರುವಾಯ ಬಡೋದೆ ಈ ಪ್ರಕಾರ ಉತ್ತರೋತ್ತರವಾಗಿ ಹೆಚ್ಚು ಹೆಚ್ಚು ಪ್ರಗತಿಯುಳ್ಳ ಸಂಸ್ಥಾನಗಳ ದಿವಾಣಗಿರಿಗೆ ಮಾಧವರಾಯರ ಯೋಜನೆಯಾದದ್ದು ಲಕ್ಷ್ಯದಲ್ಲಿಡತಕ್ಕ ಸಂಗತಿಯಾಗಿದೆ.

ಮಾಧವರಾಯರ ಜನ್ಮವು ೧೮೫೫ ಇಸವಿಯಲ್ಲಿ ಕುಂಭಕೋಣಂದಲ್ಲಿ ಆಯಿತು. ೧೮೭೯ರಲ್ಲಿ ಇವರು ಮದ್ರಾಸ ವಿಶ್ವವಿದ್ಯಾಲಯದ ಪದವೀಧರರಾದರು. ೧೮೭೧ರಲ್ಲಿ ಮೈಸೂರ ಸಂಸ್ಥಾನದಲ್ಲಿ ನೌಕರಿಗೆ ಆರಂಭ ಮಾಡಿದರು. ಈ ಕೆಲಸದ ಮೇಲಿರುವಾಗಲೇ ಮಾಧವರಾಯರು ಕಾಯಿದೆಯನ್ನು ಅಭ್ಯಾಸಿಸಿದರು. ೧೮೮೧ರಲ್ಲಿ ಮೈಸೂರ ಸಂಸ್ಥಾನದ ಕಾರಭಾರವು ಬ್ರಿಟಿಶರಿಂದ ತಿರುಗಿ ಮೈಸೂರ ಸಂಸ್ಥಾನಕ್ಕೆ ಕೊಡಲ್ಪಟ್ಟಾಗ ಮಾಧವರಾಯರು ನ್ಯಾಯಾಧೀಶರಾಗಿದ್ದರು. ಮುಂದೆ ಮಾಧವರಾಯರು ದಿವಾಣಿ ಖಾತೆಯನ್ನು ಬಿಟ್ಟು ಮುಲಕೀ ಖಾತೆಯನ್ನು ಪ್ರವೇಶಿಸಿ, ಮೊದಲು ಶಿವಮೊಗ್ಗೆಯ ಕಲೆಕ್ಟರರಾದರು. ಈ ಕೆಲಸವನ್ನು ಅವರು ೧೦ ವರ್ಷಗಳವರೆಗೆ ಪ್ರಜೆಗಳಿಗೆ ಸುಖವಾಗುವಂತೆ ಮಾಡಿದರು. ೧೮೯೩ರಲ್ಲಿ ಪೋಲೀಸಖಾತೆಯ ಇನಸ್ಪೆಕ್ಟರ ಜನರಲ್‌ರಾದರು. ೧೮೯೪ರಲ್ಲಿ ಕೌನ್ಸಿಲಿನಲ್ಲಿ ನೇಮಿಸಲ್ಪಟ್ಟರು. ಈ ಸಮಯದಲ್ಲಿ ಪ್ಲೇಗಿನ ಹಾವಳಿಯಲ್ಲಿ ಅವರು ತಮ್ಮ ಕೆಲಸವನ್ನು ಉತ್ತಮ ರೀತಿಯಿಂದ ಮಾಡಿದ್ದರಿಂದ ಇವರಿಗೆ ಸಿ. ಆಯ್. ಇ. ಎಂಬ ಬಿರುದೂ, ಕೇಸರ ಇ. ಹಿಂದಿನ ಪದಕವೂ ಸಿಕ್ಕವು. ಈ ರೀತಿಯಾಗಿ ಮೈಸೂರ ಸಂಸ್ಥಾನದಲ್ಲಿ ೩೪ ವರ್ಷ ಕೆಲಸ ಮಾಡಿದರು. ತರುವಾಯ ೧೯೦೪ರಲ್ಲಿ ತ್ರಾವಣಕೋರದ ದಿವಾಣರಾದರು. ತ್ರಾವಣಕೋರದಲ್ಲಿದ್ದಾಗ ಇವರು "ಶ್ರೀಮೂಲಂ" ಲೋಕಸಭೆಯ ಸ್ಥಾಪನೆ ಎಂಬ ಮಹತ್ವದ ಕಾರ್ಯವನ್ನು ಮಾಡಿದರು. ಪ್ರಜಾಪ್ರತಿನಿಧಿಸಭೆಯ ಸ್ಥಾಪನೆಯನ್ನು ಮೊದಲು ಮಾಡಿದ

ಶ್ರೇಯಸ್ಸು ಮೈಸುರ ಸಂಸ್ಥಾನಕ್ಕೇ ಇರುತ್ತದೆಂಬದು ನಿಜ. ಅದರೆ ಮೈಸೂರಿನ ಪ್ರತಿನಿಧಿಸಭೆಗಿಂತ ತ್ರಾವಣಕೋರದ ಈ "ಶ್ರೀಮೂಲಂ" ಲೋಕಸಭೆಯ ರಚನೆಯೂ ಅಧಿಕಾರಗಳೂ ಜನರಿಗೆ ಹೆಚ್ಚು ಲಾಭದಾಯಕಗಳಾಗಿರುವವು. ಮಾಧವರಾಯರು ೨ ವರ್ಷಗಳವರೆಗೆ ಅಲ್ಲಿ ಇದ್ದು, ಎಲ್ಲ ಖಾತೆಗಳಲ್ಲಿ ಸುಧಾರಣೆಯನ್ನುಂಟು ಮಾಡಿದ ಮೇಲೆ ಮೈಸೂರಿನ ದಿವಾಣರಾದರು. ೧೯೦೬ನೇ ಇಸ್ವಿಯಿಂದ ೫ ವರ್ಷಗಳವರೆಗೆ ಮೈಸೂರ ಸಂಸ್ಥಾನದ ದಿವಾಣಗಿರಿಯನ್ನು ಉತ್ತಮ ರೀತಿಯಿಂದ ಮಾಡಿ ಪೆನಶನ್ ತೆಗೆದುಕೊಂಡು ಈಗ ೨-೩ ವರ್ಷ ಮನೆಯಲ್ಲಿ ಸ್ವಸ್ಥವಾಗಿರುತ್ತಿದ್ದರು. ಅದರೆ ಮಾಧವರಾಯರು ಸ್ವಭಾವತಃ ದಿಘೋರ್ದ್ಯೋಗಿಗಳಾದ್ದರಿಂದ ದಿವಾಣಗಿರಿಯನ್ನು ಬಿಟ್ಟ ಮೇಲೆ ಸುಮ್ಮನೆ ಕೂಡ್ರುವದು ಅವರಿಂದಾಗದೆ, ಸಾರ್ವಜನಿಕ ಕೆಲಸಗಳಲ್ಲಿ, ವಿಶೇಷವಾಗಿ, ಧಾರ್ಮಿಕ ಕೆಲಸಗಳಲ್ಲಿ ಮುಂದಾಳಾಗ ಹತ್ತಿದರು. ಹೋದವರುಷ ಮದ್ರಾಸ ತಿರುವಾದಿಯಲ್ಲಿ ಸಂಸ್ಕೃತ ಪಂಡಿತರ ಪರಿಷತ್ತು ಕೂಡಿತ್ತು. ಇದಕ್ಕೆ ಮಾಧವರಾಯರು ಅಧ್ಯಕ್ಷರಾಗಿದ್ದರು. ಸಾವಿರಾರು ಹರಿದಾರಿ ದೂರದಿಂದ ಎಷ್ಟೋ ಶಾಸ್ತ್ರಿಗಳೂ ಪಂಡಿತರೂ ಸಭೆಸೇರಿ ೧೦ ದಿವಸಗಳವರೆಗೆ ಎಷ್ಟೋ ವಿಷಯಗಳಲ್ಲಿ ವಾದವಿವಾದ ಮಾಡಿದರು. ಇಂಥ ಮಹತ್ವದ ಧಾರ್ಮಿಕ ಸಭೆಗೆ ಮಾಧವರಾಯರು ಅಧ್ಯಕ್ಷರಾಗಿದ್ದದರಿಂದ ಪರಿಷತ್ತು ನಿರ್ವಿಘ್ನದಿಂದ ನೆರವೇರಿತು. ಧರ್ಮಸುಧಾರಣೆಯ ಕೆಲಸದಲ್ಲಿ ಪ್ರಾಚೀನ ಶಾಸ್ತ್ರಕಾರರ ಬೆಂಬಲವು ಎಷ್ಟರ ಮಟ್ಟಿಗೆ ಆಗುವದೆಂಬದನ್ನು ನೋಡುವದರ ಸಲುವಾಗಿ ಈ ಪರಿಷತ್ತು ಕೂಡಿತ್ತು. ಮಾಧವರಾಯರು ಅಂಥಶ್ರದ್ಧೆಯುಳ್ಳವರಿರದೆ, ಸುಧಾರಣಾಪ್ರಿಯರಿದ್ದಾರೆ. ಆದರೂ ಅವರಿಗೆ ಪ್ರಾಚೀನ ಕಲ್ಪನೆಗಳನ್ನೆಲ್ಲ ಕೆತ್ತುಹಾಕುವ ಹೊಸ ಸುಧಾರಣೆಯು ಬೇಕಾಗಿಲ್ಲ. ಹಳೆ ಗಿಡವನ್ನು ಬೇರು ಸಹಿತವಾಗಿ ಕಿತ್ತುಹಾಕಿ, ಅದರ ಸ್ಥಳದಲ್ಲಿ ಎಂಥದಾದರೂ ಸಸಿಯನ್ನು ಊರಿದರೆ ಅದಕ್ಕೆ ಅವರು ಸುಧಾರಣೆ ಎನ್ನುವದಿಲ್ಲ. ಈ ಸಂಬಂಧದಲ್ಲಿ ಇವರು ಕೈ. ದಿ. ಬಾ. ಆರ್. ರಘುನಾಥರಾಯರ ಮತವುಳ್ಳವರಾಗಿದ್ದಾರೆ. ಸುದ್ದಿವರಿಂದ, ಮದ್ರಾಸ-ಮೈಸೂರಗಳಲ್ಲಿಯ ಸುಧಾರಕರು ಪೂರ್ಣ ವಿವೇಕಭ್ರಷ್ಟರಾಗಿಲ್ಲ. ಆದ್ದರಿಂದ ಅಲ್ಲಿಯವರು ಇಲ್ಲದ್ದೊಂದು ಕೆಲಸವನ್ನು ಮಾಡಿ ಅದನ್ನು ಸುಧಾರಣೆಯೆಂದು ಮೆರಿಸುವ ಗೋಜಿಗೆ ಹೋಗುವದಿಲ್ಲ.

ಮಾಧವರಾಯರು ಮಾಡಿದ ಧಾರ್ಮಿಕ ಕಾರ್ಯವೆಂದರೆ, ಶ್ರೀ ಶಂಕರಾಚಾರ್ಯರ ಜನ್ಮ ಭೂಮಿಯನ್ನು ಉದ್ಧಾರ ಮಾಡಿದ್ದು ಎಂದು ಹೇಳಬಹುದು. ಆಚಾರ್ಯರ ಜನ್ಮ ಭೂಮಿಯಾದ ಕಾಲಟೆ ಎಂಬ ಗ್ರಾಮವು ಕೆಲವು ಶತಮಾನಗಳ ವರೆಗೆ ಹಾಳು ಬಿದ್ದು ತರುವಾಯ ಅಲ್ಲಿಯ ಪ್ರದೇಶವು ಕ್ರಿಸ್ತೀ ಮಿಶನರಿಗಳ ವಶಕ್ಕೆ ಸೇರಿತ್ತು. ಇದು ಶಂಕರಾಚಾರ್ಯರ ಅನ್ನುಯಾಯಿಗಳಿಗೆ ಲಾಂಛನಾಸ್ಪದವಾದದ್ದಿಂದು ಕೆಲವು ವರ್ಷಗಳ ಹಿಂದೆ ತೋರ ಹತ್ತಿ ಜಾಗ್ರತೆಯುಂಟಾಯಿತು. ಇದೇ ಸಂಧಿಗೆ ಮಾಧವರಾಯರು ತ್ರಾವಣಕೋರದ ದಿವಾಣರಾಗಿ ಬಂದದ್ದರಿಂದ ಅವರ ಪರಿಶ್ರಮದಿಂದ ಶ್ರೀ ಶಂಕರಾಚಾರ್ಯರ ಜನ್ಮ ಭೂಮಿಯು ಉದ್ಧಾರವಾಗಿ ಕಾಲಟೆಯಲ್ಲಿ ಶಿವಮಂದಿರವು ಸ್ಥಾಪನೆಯಾಯಿತು. ಈ ಶಿವಾಲಯದ ಕಾರ್ಯವು ಪೂರ್ಣವಾಗುವ ವರೆಗೆ ಮಾಧವರಾಯರು ತ್ರಾವಣಕೋರದ ದಿವಾಣರಾಗಿದ್ದಿಲ್ಲ. ಸ್ವಲ್ಪ ದಿವಸಗಳಲ್ಲಿಯೇ ಅವರು ಮೈಸೂರಿನ ದಿವಾಣರಾದರು. ಆದರೂ ಅವರು ಶಿವಮಂದಿರದ ವ್ಯವಸ್ಥೆಯನ್ನು ಶೃಂಗೇರಿ ಮಠದ ಮುಖಾಂತರವಾಗಿ ಉತ್ತಮ ರೀತಿಯಿಂದ ಮಾಡಿದರು.

ಮಾಧವರಾಯರು ನಿರಲಸವೃತ್ತಿಯವರೂ, ಉದಾರರೂ, ಕರ್ತವ್ಯದಕ್ಷರೂ, ಲೋಕಪ್ರಿಯರೂ ಇರುವರು. ಅವರ ನಿತ್ಯದ ಆಯುಷ್ಯಕ್ರಮವು ನಿಯಮಿತವಾದದ್ದೂ ವ್ಯವಸ್ಥಿತವಾದದ್ದೂ ಇರುವದು. ಈ ಗುಣಗಳಿಂದ ಅವರು ಹೋದ ಹೋದಲ್ಲಿ ಲೋಕಪ್ರಿಯರಾಗುತ್ತ ಬಂದಿದ್ದಾರೆ. ಬಡೋದೆಯಲ್ಲಿಯೂ ಇವರ ಅಳಿಕೆಯು ಹಿತಕರವಾಗಲೆಂದೂ ಶ್ರೀಮಂತ ಸಯಾಜಿರಾಯರವರ ಗುಣಗ್ರಾಹಕತೆಯು ಉತ್ತಮವಾಗಿ ಫಲಪ್ರದವಾಗಲೆಂದೂ ನಾವು ತುಂಬಾ ಅಪೇಕ್ಷಿಸುತ್ತೇವೆ.

ಕೆಲವು ಪತ್ರಗಳ ಸಾರಾಂಶ, ಇತ್ಯಾದಿ.

ರಾವಸಾಹೇಬ ಏಡೀಟರ ಕನ್ನಡ ಶಾಳಾ ಪತ್ರಿಕತ್ರರ ಸನ್ನಿಧಿಗೆ:—

ತಮ್ಮ ಕರಕಮಲದಿಂದುದ್ಭವಿಸುವ ಸುಂದರವಾದ ಮಾಸ ಪತ್ರಿಕೆಯಲ್ಲಿ ಕೆಳಗಿನ ನಾಲ್ಕು ಪಂಕ್ತಿಗಳಿಗೆ ಇಂಬುಗೊಡುವಿರೆಂದು ನಾನು ನೆರೆ ನಂಬಿದ್ದೇನೆ:—

ಶಿರಸಾಷ್ಟಾಂಗ ನಮಸ್ಕಾರಗಳು. ವಿನಂತಿ.–ದೋಣಿ ತಾಲೂಕ ಸೂಡಿ ಕನ್ನಡ ಶಾಲೆಯಲ್ಲಿ ತಾ॥ ೧೪–೨–೧೯೧೧ಳನೇ ಇಸ್ವಿ ಶನಿವಾರ ದಿವಸ ಮೇಹರ್ಬಾನ ಡಿ. ಡಿ. ಕಲೇಕ್ಟರ ಸಾಹೇಬರಾದ ಬಾಳೇಕುಂದ್ರಿಯವರ ಅಧ್ಯಕ್ಷತೆಯ ಕೆಳಗೆ ಸಭೆಯು ನೆರವೇರಿಸಲ್ಪಟ್ಟಿತು. ಈ ದಿನದ ಸಭೆಗೆ ಶಾಲೆಯ ಸ್ಕೂಲ ಕವಿಾಟದಾರರೂ ಊರೊಳಗಿನ ಯಾವತ್ತೂ ಸಾವಕಾರ ಜನರೂ ಗೊತ್ತು ಪಡಿಸಿದ ವೇಳೆಗೆ ಸರಿಯಾಗಿ ಬಂದು ಕುಳಿತುಕೊಂಡಿದ್ದರು. ತರುವಾಯ ಸಾಹೇಬರು ಹುಡುಗರಿಗೆ ಸ್ಥಳದ ಅನನುಕೂಲತೆಯು ಬಹಳ ಇರುವದೆಂದು ನೆರೆದ ಸ್ಕೂಲ ಕವಿಾಟದಾರರಿಗೂ ಸಭ್ಯಗೃಹಸ್ಥರಿಗೂ ವಿದಿತ ಪಡಿಸಿದರು. ಅನಂತರ ಸಭೆಯಲ್ಲಿ ನೆರೆದ ಯಾವತ್ತೂ ಗೃಹಸ್ಥರು ಈ ಕೊರತೆಯನ್ನು ಪೂರೈಸುವದಕ್ಕಾಗಿ ವರ್ಗಣಿಯನ್ನು ಕೊಡುತ್ತೇವೆಂದು ವಾಗ್ದಾನ ಮಾಡಿದರು. ಅಧ್ಯಕ್ಷರವರು ತಮ್ಮ ಸ್ವಹಸ್ತದಿಂದಲೇ ಸಭೆಯವರ ಅನುಮತಿಯ ಪ್ರಕಾರಾ ವರ್ಗಣಿಯ ಯಾದಿಯನ್ನು ಮಾಡಿದರು. ಉದಾರ ಮನಸ್ಸಿನಿಂದ ವರ್ಗಣಿಯನ್ನು ಕೊಟ್ಟವರ ಹೆಸರುಗಳನ್ನು ಕೆಳಗೆ ವಿವರಿಸಿರುವದು :—

(೧) ೨೫ ರೂಪಾಯಿ ರಾವಸಾ॥ ಮಲ್ಹಾರ ಲಿಂಗೋ ಕುಲಕರ್ಣಿ, ಶೇತಕಿಖಾತೆಯ ಇನಸ್ಪೇಕ್ಟರ, ಧಾರವಾಡ.

(೨) ೧೦ ,, ರಾವಸಾ॥ ಅಡಿವೆಪ್ಪ ಚನವೀರಪ್ಪ ಸೆಟ್ಟರ, ಸ್ಕೂಲ ಕವಿಾಟದಾರ.

(೩) ೫೦ ,, ಮ. ರಾ. ರಾ. ಬಸಪ್ಪಾ ರುದ್ರಪ್ಪಾ ಬಿದರೂರ.

(೪) ೫೦ ,, ಮ. ರಾ. ಈಶ್ವರಪ್ಪಾ ಪಟ್ಟಣಸೆಟ್ಟಿ.

(೫) ೧೦ ,, ಮ. ರಾ. ರಾ. ಹೊನ್ನೋ ಮಾರ್ತಾಂಡ ಕುಲಕರ್ಣಿ.

(೬) ೧೦ ,, ಮ. ರಾ. ವಾ. ವೆಂಕನಗೌಡಾ ಅಯ್ಯನಗೌಡಾ ಪಾಟೀಲ

(೭) ೧೦ ,, ಮ. ರಾ. ರಾ. ಅಡಿವೆಪ್ಪ ಚನಮಲ್ಲಪ್ಪಾ ಗಡಿಗಿ.

(ಅ) ೧೦ ,, ಮ. ರಾ. ರಾ. ಅವಿಾರಸಾ॥ ವ॥ ಇವಾ
ಮ ಸಾ॥ ಮುಲ್ಲಾ.

ಈ ಪ್ರಕಾರಾ ಕೊಟ್ಟಿರುವರು. ಹೀಗೆ ಆದದ್ದು ನಮಗೆ ಬಹಳ ಸಂತೋಷವಾಯಿತೆಂದು ಅಧ್ಯಕ್ಷರವರು ಸಮಯೋಚಿತ ಭಾಷಣವನ್ನು ಮಾಡಿದರು. ಆಮೇಲೆ ತಾಂಬೂಲಾದಿಗಳನ್ನು ಕೊಟ್ಟು ಸಭೆಯು ವಿಸರ್ಜನೆ ಮಾಡಲ್ಪಟ್ಟಿತು.

ಮಹಾನುಭಾವರೇ ಪತ್ರವಿಸ್ತಾರಕ್ಕೆ ಕ್ಷಮೆ ಇರಲಿ.

ತವ ಆಜ್ಞಾಧಾರಕ

ತಾ॥ ರೋಣ
೧೮–೨–೧೯೧೧ಳ

ವಿರೂಪಾಕ್ಷ ಭೀಮಾಜಿ ಚನವಸನಹಳ್ಳಿ ಅ॥
ಮಾಸ್ತರ ಕನ್ನಡಶಾಳಾ ಸೂಡಿ.

ಮಿ. ಪಾಂಡುರಂಗ ಗೋಪಾಳ ಜಮಖಂಡಿ ಶಾಳಾಮಾಸ್ತರ ತೇಗೂರ ಇವರ ಪ್ರಶ್ನೆಗೆ ಉತ್ತರ:—ಎಕ್ಸರೇಜದ ಲಳಿಗೆಯಲ್ಲಿ ಫ್ಲೋರೆಸೆಂಟ ದ್ರವ್ಯವು ಇರುವದಿಲ್ಲ. ಆದರೆ ಎಕ್ಸರೇಜಗಳಲ್ಲಿ ಉಪಯೋಗಿಸಲ್ಪಡುವ ಸಣ್ಣ ಪರದೆ (the screen) ಯಲ್ಲಿ ಬೇರಿಯಮ್ ಪ್ಲಾಟಿನೋ ಸಾಯನಾಯಿಡ್ ಎಂಬ ಫ್ಲೋರೆಸೆಂಟ ದ್ರವ್ಯವು ಇರುವದು. ಮಾಲ್ಟೆಡ್ ಮಿಲ್ಕ, ಡ್ರಾಯಿಡ್ ಮಿಲ್ಕ ಕನ್ಡೆನ್ಸಡ್ ಮಿಲ್ಕ ಮುಂತಾದವುಗಳನ್ನು ತಯಾರಿಸುವ ರೀತಿಯನ್ನು ಶಾಲಾಪತ್ರಿಕದಂಥ ಸಣ್ಣ ಮಾಸಿಕ ಪುಸ್ತಕದಲ್ಲಿ ಪ್ರಸಿದಿಸುವದು ಅಸಾಧ್ಯವಾಗಿರುತ್ತದೆ.

ಮಿ. ಗೋ. ಕಾ. ಹವಾಲದಾರ ಹೆಡಮಾಸ್ತರ ಅನೇ ನಂಬರ ಶಾಳಾ ಹುಬ್ಬಳ್ಳಿ ಇವರು ಕರ್ನಾಟಕದ ಎಲ್ಲ ಶಾಲಾಮಾಸ್ತರರು ಕನಿಷ್ಠ ಒಂದೊಂದು ತಿಂಗಳ ಪಗಾರವನ್ನು ಕೊಟ್ಟು ಒಂದು ಫಂಡು ಕೂಡಿಸಿ ಅದಕ್ಕೆ ಸರಕಾರದ ಸಹಾಯವನ್ನು ಪಡಕೊಂಡು ಬಡ ಶಾಲಾಮಾಸ್ತರರ ಮಕ್ಕಳ ಅಭ್ಯಾಸದ ಬಗ್ಗೆ ಸ್ಕಾಲರ ಶಿಪ್ಪುಗಳನ್ನು ಕೊಡಬೇಕೆಂದು ಸೂಚಿಸುತ್ತಾರೆ. ಆದರೆ ಸಾಮಾನ್ಯವಾಗಿ ಶಾಲಾಮಾಸ್ತರರ ಬಡತನದ ಸ್ಥಿತಿಯನ್ನು ವಿಚಾರಿಸಲಾಗಿ ಕನಿಷ್ಟಪಕ್ಷಕ್ಕೆ ಒಂದು ತಿಂಗಳ ಪಗಾರ

ವನ್ನು ವರ್ಗಣೆಯಾಗಿ ಕೊಡುವದು ಬಹುಜನ ಮಾಸ್ತರರಿಗೆ ಅನುಕೂಲವಾದೀತೆಂದು ತೋರುವದಿಲ್ಲ.

ವಿ. ಪಾ. ಮೋ. ಹವಾಲದಾರ ಧೇ. ಸ್ಕೂ. ಮಾಸ್ತರ ವನಗೊಳಿ—ತಾಂಬೂಲ ಸಂಬಂಧದ ಪುರಾವೆಯೆಂದರೆ ಬರೇ ಅದರ ಗುಣವರ್ಣನೆ ಬೇಕಾಗಿರುವದಿಲ್ಲ. ಅದರಲ್ಲಿ ಸೇರುವ ಪ್ರತಿ ಒಂದು ಪದಾರ್ಥವನ್ನು ಶಾಸ್ತ್ರೀಯ ರೀತಿಯಿಂದ ಪೃಥಕ್ಕರಿಸಿ ಅದರಲ್ಲಿ ಕಂಡು ಬರುವ ದ್ರವ್ಯಗಳ ಗುಣಾವಗುಣಗಳ ವಿವೇಚನೆ ಬೇಕಾಗಿರುತ್ತದೆ.

ವಿ. ಹನುಮಂತ ಜೀವಾಜಿ ಕುಲಕರ್ಣಿ ಹೆ. ಮಾ. ಶಾಳಾ ಯವರ ಪುರವಿ ಇವರು ಕಳುಹಿಸಿದ ಕವಿತಾರಾಮಂಡಲವೆಂಬ ಪಟ್ಟಿಯೊಳಗಿನ ಕವಿಗಳ ಚರಿತ್ರಗಳನ್ನೂ ಬೇರೆ ಎಷ್ಟೋ ಕವಿಗಳಚರಿತ್ರಗಳನ್ನೂ ಕರ್ನಾಟಕ ಕವಿಚರಿತೆ ಎಂಬ ಪುಸ್ತಕದಲ್ಲಿ ನೋಡಿಕೊಳ್ಳಬಹುದು.

ಧಾರವಾಡ ಜಿಲ್ಲಾ ರೋಣ ತಾಲೂಕ ಹಾಲಗೇರಿ ಶಾಲೆಯ ವಿದ್ಯಾರ್ಥಿಗಳು ಆಡುವವರ ಸಲುವಾಗಿ, ಕೆಳಗೆ ಬರೆದ ಗೃಹಸ್ಥರು ಅವರ ಹೆಸರ ಮುಂದೆ ಕಾಣಿಸಿದ ವರ್ಗಣೆಯನ್ನು ಕೊಟ್ಟರೆಂದು ಆ ಶಾಲೆಯ ಒಬ್ಬ ವಿದ್ಯಾರ್ಥಿಯು ಬರೆಯುತ್ತಾನೆ:—

ರಾ. ರಾ. ಗಿರಿಯಪ್ಪಗೌಡಾ ಮುಳ್ಳಿ ಪಾಟೀಲ .... ೪ ರೂ.
ರಾ. ರಾ. ವೆಂಕನಗೌಡಾ ಪೋಲೀಸ ಪಾಟೀಲ .... ೪ ರೂ.
ರಾ. ರಾ. ನಾಗಪ್ಪ ಗುಂಡಪ್ಪ ಇನಾಮತಿ .... ೪ ರೂ.
ರಾ. ರಾ. ಹನುಮಂತ ಮೇಗೇರಿ ಬಿದ್ಲಿ ಕುಲಕರ್ಣಿ ೩ ರೂ.

ಅಂತು .... ೧೫ ರೂ.

ರಾಣೇಬಿನ್ನೂರ ತಾಲೂಕ ಕದರಮಂಡಲಗಿ ಶಾಲೆಯ ೪ ಜನ ಬಡ ವಿದ್ಯಾರ್ಥಿಗಳಿಗೆ ಹಿಡಿಯುವಷ್ಟು ಫೀಯನ್ನು ತಾವು ಆಜನ್ಮ ಕೊಡುವೆವೆಂದು ರಾ. ರಾ. ಶಿವನಗೌಡಾ ಕೊಟ್ರನಗೌಡಾ ಪಾಟೀಲ ಎಂಬವರು ಸದರಿ ಶಾಲೆ

ಯ ಬಕ್ಷಿಸ ಸವಾರಂಭದ ಸಭೆಯಲ್ಲಿ ವಾಗ್ದಾನ ಮಾಡಿದ್ದಲ್ಲದೆ ಅದರಂತೆ ವಿದ್ಯಾ ಖಾತೆಯ ವರಿಷ್ಠ ಅಧಿಕಾರಿಗಳಿಗೆ ಕರಾರು ಒರಕೊಟ್ಟಿರುವರೆಂದ ಆ ಶಾಲೆಯ ಅಸಿಷ್ಟಂಟರೊಬ್ಬರು ಬರೆಯುತ್ತಾರೆ.

ಹಾನಗಲ್ ಗ್ರಾಮದ ರಾಜನಿಷ್ಠರೂ ಶಾಲಾಭಿವೃದ್ಧಿಯನ್ನು ಬಯಸುವವರೂ ಆದ ಸದ್ಗೃಹಸ್ಥರು ಶ್ರೀಮದ್ದಯಾಳು ಏಳನೇ ಎಡ್ವರ್ಡ ಬಾದ ಶಹರವರ ಸ್ಮಾರಕವಾಗಿ ಅಲ್ಲಿಯ ಕನ್ನಡ ಶಾಲೆಯ ಎದುರಿಗೆ ಒಂದು ತಾಲೀಮುಖಾನೆಯನ್ನು ವರ್ಗಣಿಯಿಂದ ಕಟ್ಟಿಸಿರುವರೆಂತಲೂ ಅದರ ಬಾಗಿಲ ಹೇರೆಯುವ ಸವಾರಂಭವು ಕಳೆದ ದಶಂಬರ ತಿಂಗಳ ೧೬ನೇ ತಾರೀಖಿನ ದಿವಸ ಲೋಕಪ್ರಿಯ ಕಲೆಕ್ಟರರಾದ ಮೆ. ಮೆಕಾನಕಿ ಸಾಹೇಬರವರಿಂದ ನೆರವೇರಿಸಲ್ಪಟ್ಟಿತೆಂತಲೂ ಆ ಶಾಲೆಯ ಒಬ್ಬ ವಿದ್ಯಾರ್ಥಿಯು ಬರೆಯುತ್ತಾನೆ.

ವಿದ್ಯಾಖಾತೆಯ ನೋಟೀಸುಗಳು.

ಕೆಳಗಿನ ಪಟ್ಟಿಯಲ್ಲಿ ಕಾಣಿಸಿದ ಪುಸ್ತಕವನ್ನು ಪ್ರಾಥಮಿಕ ಶಾಲೆಗಳಿಗೋಸ್ಕರ ಮಂಜೂರು ಮಾಡಿರುತ್ತದೆ:—

ಅನುಕ್ರಮ ನಂಬರು.	ಪುಸ್ತಕದ ಹೆಸರು.	ಪುಸ್ತಕದ ಭಾಷೆ.	ಯಾತರ ಬಗ್ಗೆ ಮಂಜೂರು ಮಾಡಲ್ಪಟ್ಟಿದೆ.	ಕ್ರಯ. ರು.	ಆ.	ಪೈ.	ಶರಾ.
೧.	ಎಸ್. ಎಸ್. ಕುಲಕರಣಿ ನೆಗಳೂರ, ಧಾರವಾಡ ಇವರು ಬರೆದ— "ನಾಡ ನೆಲೆಗಾರ"	ಕನ್ನಡ.	ಕನ್ನಡ ಪ್ರಾಥಮಿಕ ಶಾಲೆಗಳಲ್ಲಿ ಇನಾಮುಗಳಿಗೂ, ಲಾಯಬ್ರರಿಗಳಿಗೂ.	೦	೪	೦	

ಪುಣೆ ಡಾಯರೆಕ್ಟರ ಅಫ್ ಪಬ್ಲಿಕ್ ಇನ್ಸ್ಟ್ರಕ್ಶನ್ ಇವರ ಆಫೀಸು.
ತಾ|| ೧೩–೩–೧೯೧೪.

(Sd) A. L. COVERNTON.
ಡೆಪುಟಿ ಡಾಯರೆಕ್ಟರ ಅಫ್ ಪಬ್ಲಿಕ್ ಇನ್ಸ್ಟ್ರಕ್ಶನ್.

ಶಾಲಾಪತ್ರಿಕೆ.

ಪುಸ್ತಕ ೫ನೇ. | ಜೂನ ೧೯೧೪. | ಸಂಚಿಕೆ ೬.

ಸ್ಫುಟವಿಷಯಗಳು.

೧. ನೀತಿಶಿಕ್ಷಣದ ಹೊಸ ಯೋಜನೆಯು.

ಶಾಲೆಗಳಲ್ಲಿ ಧರ್ಮ ಶಿಕ್ಷಣವನ್ನೂ ನೀತಿಶಿಕ್ಷಣವನ್ನು ಕೊಡಬೇಕೆಂದು ಕೆಲವರು ಅಭಿಪ್ರಾಯಪಡುವರು. ಆದರೆ ನೀತಿಯ ತತ್ವಗಳು ನಿಜವಾಗಿ ಸನಾತನವಾಗಿರುತ್ತವೆ; ಮತ್ತು ಅವು ಬಹುತರವಾಗಿ ಸುಧಾರಿಸಿದ ಎಲ್ಲ ಸಮಾಜಗಳಲ್ಲಿ ಸಾಮಾನ್ಯವಾಗಿ ಒಂದೇ ಇರುತ್ತವೆ. ಧರ್ಮದ ಮಾತು ಬೇರೆ. ಧರ್ಮದಲ್ಲಿ ಬಹುಶಃ ತಾತ್ವಿಕ ವಿಚಾರವು ತೀರ ಕಡಿಮೆ ಇದ್ದು, ಮೂಢ ಶ್ರದ್ಧೆಯ ಭಾಗವೇ ಬಹಳ ಇರುತ್ತದೆ. ಆದಕಾರಣ ಅನೇಕ ಧರ್ಮಗಳೂ ಅನೇಕ ಜಾತಿಗಳೂ ಇರುವ ಹಿಂದುಸ್ತಾನದಂಥ ದೇಶದಲ್ಲಿ ಧರ್ಮಶಿಕ್ಷಣವನ್ನೂ ನೀತಿಶಿಕ್ಷಣವನ್ನೂ ಒತ್ತಟ್ಟಿಗೆ ಸೇರಿಸಿಗೊಂದಲ ಮಾಡುವದರಲ್ಲಿ ಅರ್ಥವಿಲ್ಲ. ಸದಾಚಾರಣೆಯೂ ಶೀಲವೂ ಎಲ್ಲರಿಗೂ ಅತ್ಯಂತ ಮಹತ್ವದವಾಗಿರುತ್ತವೆ. ಆದ್ದರಿಂದ ಅವುಗಳ ಜಾಗೃತಿಯೂ ಬೆಳವಣಿಗೆಯೂ ಯೋಗ್ಯನೀತಿಯಿಂದ ಆಗುವಂತೆ ಈ ದೇಶದ ಶಿಕ್ಷಣಸಂಸ್ಥೆಗಳಲ್ಲಿ ವ್ಯವಸ್ಥೆಯಾದರೆ, ಆ ಸಂಸ್ಥೆಗಳ ಕೆಲಸವು ತೀರಿತು. ಇದರ ಮುಂದಿನ ಕೆಲಸವು ಧರ್ಮಶಿಕ್ಷಣದಿಂದ ಆಗತಕ್ಕದ್ದು. ಅದನ್ನು ಆಯಾ ಧರ್ಮದ ಅಥವಾ ಪಂಥದ ಮುಂದಾಳುಗಳಾಗಲಿ, ಸಮಾಜದವರಾಗಲಿ ತಪ್ಪು ತಮ್ಮ ಇಚ್ಛೆಯ ಮೇರೆಗೆ ಸ್ವತಂತ್ರ ರೀತಿಯಿಂದ ಮಾಡಿಕೊಳ್ಳತಕ್ಕದ್ದು. ಈ ದೇಶದಲ್ಲಿ ಧರ್ಮಶಿಕ್ಷಣದ ಪ್ರಶ್ನೆಯನ್ನು ಪ್ರತಿಯೊಂದು ಜಾತಿಯವರೂ, ಪಂಥದವರೂ ತಮ್ಮ ಮನೆಸಿಗೆ ಬಂದಂತೆ ಬಿಡಿಸತಕ್ಕದ್ದು. ನೀತಿಶಿಕ್ಷಣವು ಮಾತ್ರ ಸಾರ್ವತ್ರಿಕವಾಗಿರುವದರಿಂದ ಅದು ರಾಷ್ಟ್ರೀಯ ಸ್ವರೂಪದ್ದಿರುವದು. ಆದಕಾರಣ ಈ ಶಿಕ್ಷಣ ಕೊಡುವ ಜವಾಬುದಾರಿಯನ್ನು ಸರಕಾರದ ವಿದ್ಯಾಖಾತೆಯವರು ವಹಿಸತಕ್ಕದ್ದೆಂದು ಒಳಗಡೆಯಲ್ಲಿ ಚರ್ಚೆ ನಡೆದು, ಆ ಬಗ್ಗೆ ಇ. ಸ. ೧೯೧೦ನೇ

ವರ್ಷ ಮುಂಬಯಿಯಲ್ಲಿ ಒಂದು ಪರಿಷತ್ತು ಕೂಡಿತ್ತು. ತರುವಾಯ ಸರ ಕಾರದವರು ನೀತಿಶಿಕ್ಷಣದ ಬಗ್ಗೆ ಪುಸ್ತಕಗಳನ್ನು ಬರೆಯುವದಕ್ಕೋಸ್ಕರ ಮಿ. ಎಂಥೋವೆನ್‌ಸಾಹೇಬರನ್ನು ಸ್ಪೆಶಲ್‌ಡ್ಯೂಟಿಯ ಮೇಲೆ ನೇಮಿಸಿದರು. ಅದರಂತೆ ಮಿ. ಎಂಥೋವೆನಸಾಹೇಬರು ಈ ವಿಷಯವನ್ನು ಕುರಿತು ಒಂದು ಪುಸ್ತಕವನ್ನು ಬರೆದಿದ್ದಾರೆ. ಇತ್ತಲಾಗಿ, ಇಂಗ್ಲಂಡದಲ್ಲಿದ್ದ "ಪಾರಲ್ ಎಜ್ಯುಕೇಶನ್ ಲೀಗ" ಎಂಬ ನೀತಿಶಿಕ್ಷಣಸಂಬಂಧದ ಸಂಸ್ಥೆಯ ವ್ಯಾಖ್ಯಾ ನಕಾರರಲ್ಲಿ ಒಬ್ಬರಾದ ಮಿ. ಗೂಲ್ಡ ಎಂಬವರನ್ನು ಸರಕಾರದವರು ಈ ದೇಶಕ್ಕೆ ಕರೆಯಿಸಿ ಇಲಾಖೆಯೊಳಗಿನ ಕೆಲವು ಮುಖ್ಯಸ್ಥಳಗಳ ಲ್ಲಿ ವಿದ್ಯಾರ್ಥಿಗಳಿಗೆ "ನೀತಿ ಪಾಠವನ್ನು" ಹ್ಯಾಗೆ ಕಲಿಸಬೇಕೆಂಬ ಬಗ್ಗೆ ಕೆಲವು ಮಾದರಿಯ ಪಾಠಗಳನ್ನು ಕೊಡಿಸಿದರು. ಅದರಿಂದ ನೀತಿಶಿಕ್ಷಣದ ಪ್ರಶ್ನೆಕ್ಕೆ ಈಗ ಒಳ್ಳೇ ಸ್ವರೂಪ ಉಂಟಾಗಿರುವದು. ಸರಕಾರದವರು ಕಳೆದ ವರ್ಷದ ಜುಲೈ ತಿಂಗಳಲ್ಲಿ ಸಾರ್ವಜನಿಕ ಶಾಲೆಗಳಲ್ಲಿ ನೀತಿಶಿಕ್ಷಣವನ್ನು ಕೊಡುವ ವ್ಯವಸ್ಥೆಮಾಡಲ್ಪಡುವದೆಂದು ಠರಾವಿನ ಮೂಲಕ ಪ್ರಸಿದ್ಧಮಾಡಿದರು.

ಮಿ. ಗೂಲ್ಡ ಸಾಹೇಬರವರು ನೀತಿಶಿಕ್ಷಣದ ಬಗ್ಗೆ ಎಂಟು ಸೂಚ ನೆಗಳನ್ನು ಮಾಡಿರುವರು. ಅವುಗಳ ಪ್ರಾರಂಭದಲ್ಲಿ ಪ್ರಸ್ತಾವನೆಯ ರೂಪದಿಂದ ಅವರು ಹೇಳಿದ್ದೇನಂದರೆ:— ನೀತಿ ಶಿಕ್ಷಣವನ್ನು ಕೊಡು ವಾಗ ಯಾವ ಧರ್ಮದ ಹಾಗೂ ಪಂಥದ ಜನರ ಮನಸುಗಳನ್ನೂ ನೋಯಿಸದೆ ಇರುವ ಬಗ್ಗೆ ಪೂರ್ಣವಾಗಿ ಎಚ್ಚರ ಪಡತಕ್ಕದ್ದು. ಪ್ರತಿ ಯೊಂದು ವರ್ಗಕ್ಕೆ ವಾರದಲ್ಲಿ ಕೊಡತಕ್ಕ ನೀತಿ ಪಾಠವು ಕನಿಷ್ಟ ಪಕ್ಷಕ್ಕೆ ಹತ್ತು ಮಿನೀಟಿನಿಂದ ಅರ್ಧ ತಾಸಿನವರೆಗೆ ಕಲಿಸಲಿಕ್ಕೆ ಬರುವಷ್ಟು ಇರ ತಕ್ಕದ್ದು. ಇದು ಮಿ. ಗೂಲ್ಡ ಸಾಹೇಬರವರ ಮೊದಲನೆಯ ಸೂಚನೆಯಾ ಗಿರುತ್ತದೆ. ಈ ಸೂಚನೆಗೆ ಮೇಹರಬಾನ ಡಾಯರೆಕ್ಟರ ಸಾಹೇಬರ ವರು ಒಪ್ಪಿಕೊಂಡಿರುವರಲ್ಲದೆ, ಅದನ್ನು ಹ್ಯಾಗೆ ಅಮಲಿನಲ್ಲಿ ತರಬೇಕೆಂ ಬದನ್ನು ಸೂಚಿಸಿರುತ್ತಾರೆ. ಸದ್ಯಕ್ಕೆ ಯಾವ ಪ್ರಾಥಮಿಕ ಶಾಲೆಗಳಲ್ಲಿ ನೀತಿಶಿಕ್ಷಣವು ಕೊಡಲ್ಪಡುತ್ತಿರುವದೋ ಅದು ಹಾಗೇ ಮುಂದಕ್ಕೆ ಸಾಗ ತಕ್ಕದ್ದು. ಪ್ರಾಥಮಿಕ ಶಾಲೆಗಳ ಶಿಕ್ಷಕರನ್ನು ತಯಾರಿಸುವ ಟ್ರೇನಿಂಗ ಕಾಲೇಜಗಳಲ್ಲಿ ನೀತಿ ಶಿಕ್ಷಣವನ್ನು ಕೊಡತಕ್ಕದ್ದು. ಈ ತರದ ಶಿಕ್ಷಣ

ವನ್ನು ಹೊಂದಿದ ಹೊಸ ಶಿಕ್ಷಕರು ಡಿಪ್ಲೊಟ ಎಜ್ಯುಕೇಶನಲ್ ಇನಸ್ಪೆಕ್ಟರರ ಮೇಲ್ವಿಚಾರಣೆಯ ಕೆಳಗೆ ನೀತಿಪಾಠಗಳನ್ನು ಕಲಿಸತಕ್ಕದ್ದು. ಹಾಯಸ್ಕೂಲಗಳಲ್ಲಿ ಮಿ. ಗೂಲ್ಡ ಸಾಹೇಬರವರ ವಾಖ್ಯಾನಗಳನ್ನು ಪ್ರತ್ಯಕ್ಷವಾಗಿ ಕೇಳಿದ ಹಾಗು ಅವರು ಕೊಟ್ಟ ಮಾದರಿಯ ಪಾಠಗಳನ್ನು ಪ್ರತ್ಯಕ್ಷವಾಗಿ ನೋಡಿದ ಶಿಕ್ಷಕರೇ ನೀತಿ ಶಿಕ್ಷಣವನ್ನು ಕೊಡಲಿಕ್ಕೆ ಮೊದಲು ಪ್ರಾರಂಭ ಮಾಡತಕ್ಕದ್ದು. ಈ ಶಿಕ್ಷಕವರ್ಗದ ಸಲುವಾಗಿ ಮುಂಬಯಿಯಲ್ಲಿ ಸ್ಥಾಪಿಸಲ್ಪಟ್ಟ ಸೇಕಂಡರಿ ಟ್ರೇನಿಂಗ ಕಾಲೇಜದಲ್ಲಿ ಈ ವಿಷಯವು ಕಲಿಸಲ್ಪಡತಕ್ಕದ್ದು. ಅಲ್ಲಿ ಕಲಿತು ಹೊರಬಿದ್ದ ಶಿಕ್ಷಕರನ್ನು ಸಾಲೆಯಲ್ಲಿ ಈ ವಿಷಯವನ್ನು ಕಲಿಸಲಿಕ್ಕೆ ನಿಯಮಿಸತಕ್ಕದ್ದು. ನೀತಿ ಶಿಕ್ಷಣವನ್ನು ಕೊಡಲಿಕ್ಕೆ ಹೆಚ್ಚು ಹೆಚ್ಚು ಯೋಗ್ಯರಾದ ಶಿಕ್ಷಕವರ್ಗವು ಸಿದ್ಧವಾಗಲಿಕ್ಕೆ ಬೇಕು. ಯೋಗ್ಯರೀತಿಯಿಂದ ಶಿಕ್ಷಣ ಕೊಡುವವರಿಲ್ಲದೆ ಈ ವಿಷಯವನ್ನು ಪ್ರಾರಂಭಿಸುವ ಬಗ್ಗೆ ಅವಸರವನ್ನು ಮಾಡ ಕೂಡದು. ಡಾಯರೆಕ್ಟರ ಸಾಹೇಬರವರ ಈ ಅಭಿಪ್ರಾಯಗಳಿಗೆ ಸರಕಾರದವರೂ ಒಪ್ಪಿ ಕೊಂಡಿರುತ್ತಾರೆ.

ಮಿ. ಗೂಲ್ಡ ಸಾಹೇಬರವರ ೫ನೆಯ ಸೂಚನೆಯಿಂದ ೭ನೆಯ ಸೂಚನೆಯವರೆಗೆ ಆರು ಸೂಚನೆಗಳು ನೀತಿಶಿಕ್ಷಣವನ್ನು ಹ್ಯಾಗೆ ಕೊಡತಕ್ಕದ್ದು; ಅದಕ್ಕಾಗಿ ಬೇಕಾಗುವ ಸಾಮಗ್ರಿಗಳನ್ನು ಹ್ಯಾಗೆ ಕೂಡಿಸತಕ್ಕದ್ದು; ಅದರ ಮೇಲೆ ಮೇಲ್ವಿಚಾರಣೆಯು ಹ್ಯಾಗೆ ಮಾಡಲ್ಪಡತಕ್ಕದ್ದು; ಈ ಮೊದಲಾದ ಸಂಗತಿಗಳ ಬಗ್ಗೆ ಇರುತ್ತವೆ. ಆ ಎಲ್ಲ ಸೂಚನೆಗಳು ಸರಕಾರದವರಿಗೆ ಮಾನ್ಯವಾಗಿರುತ್ತವೆ. ೮ನೆಯ ಸೂಚನೆಯು ಯಾವದೆಂದರೆ– "ಈಗಿನ ಕಾಲದಲ್ಲಿ ರಾಜ್ಯಸಂಸ್ಥೆಗಳಿಗೆ ರಾಜ್ಯದೊಳಗಿನ ನಾಗರಿಕರ ಮನಃಪೂರ್ವಕವೂ ಸುವಿಚಾರಯುಕ್ತವೂ ಆದ ಸಹಕಾರಿತೆಯು ದೊರೆಯುವದು ಅತ್ಯಂತ ಅವಶ್ಯವಿರುತ್ತದೆಂಬ ಈ ಸಂಗತಿಯು ನೀತಿ ಶಿಕ್ಷಣಕ್ಕೆ ಸಂಬಂಧವಿದ್ದ ಪ್ರತಿಯೊಬ್ಬ ಮನುಷ್ಯನ ಹೃದಯದಲ್ಲಿ ಬಿಂಬಿಸಲಿಕ್ಕೆ ಬೇಕು." ಈ ಸೂಚನೆಯಾದರೂ ಸರಕಾರಕ್ಕೆ ಮಾನ್ಯವಿರುತ್ತದೆ. ದಿನ ದಿನಕ್ಕೆ ಸರಕಾರದವರ ಕರ್ತವ್ಯ ಕ್ಷೇತ್ರವು ಬೆಳೆಯ ಹತ್ತಿದ್ದರಿಂದ ರಾಜ್ಯಕಾರಭಾರಕ್ಕೂ ನಾಗರಿಕರಿಗೂ ಅತಿ ನಿಕಟ ಸಂಬಂಧವುಂಟಾಗ ಹತ್ತಿರುವದು. ಅದರಿಂದ ನಾಗರಿಕರ ಸಹಕಾರಿತೆಯು ಇದ್ದ ಹೊರತು ರಾಜ್ಯ

ಕಾರಭಾರವು ಚೆನ್ನಾಗಿ ನಾಗಲಾರದೆಂಬ ಸಂಗತಿಯು ಸರಕಾರಕ್ಕೂ ಮನವರಿಕೆಯಾಗಿರುವದು. ನೀತಿಶಿಕ್ಷಣ, ಚಾರಿತ್ರ್ಯವರ್ಧನ ಇವುಗಳ ಸಂಬಂಧದಿಂದ ವಿಶೇಷವಾಗಿ ಪ್ರಯತ್ನಗಳು ಮಾಡಲ್ಪಡತಕ್ಕದ್ದೆಂದು ಹಿಂದುಸ್ತಾನ ಸರಕಾರದವರು ಮೊನ್ನೆ ಮೊನ್ನೆ ತಮ್ಮದೊಂದು ತರಾವಿನಲ್ಲಿ ಜಾಹೀರ ಪಡಿಸಿದ್ದಾರೆ. ಅದಕ್ಕನುಸಾರವಾಗಿಯೇ ಮುಂಬಯಿ ಸರಕಾರದವರು ನೀತಿ ಶಿಕ್ಷಣದ ಈ ಹೊಸ ಯೊಜನೆಗೆ ಒಪ್ಪಿಕೊಂಡಿರುತ್ತಾರೆ. ಇದು ಯಶಸ್ವಿಯಾಗಿ ಫಲದಾಯಕವಾಗುವದಕ್ಕಾಗಿ ತಾಯಿತಂದೆಗಳೂ ಶಿಕ್ಷಕರೂ ಪ್ರಯತ್ನಪೂರ್ವಕವಾಗಿ ತಮ್ಮ ಸಂಗಡ ಕೆಲಸ ಮಾಡಬೇಕೆಂದು ಸರಕಾರದವರ ಇಚ್ಛೆಯುಂಟು.

ಮೆ|| ಡಾಯರೆಕ್ಟರ ಸಾಹೇಬರವರಿಗೆ ಈ ಕೆಲಸದಲ್ಲಿ ಅವ್ಯಾಲೋಚನೆಯನ್ನು ಹೇಳುವವದಕ್ಕಾಗಿ ಸರಕಾರದವರು ೨೫ ಗೃಹಸ್ಥರ ಒಂದು ಕಮಿಟಿಯನ್ನು ನೇಮಿಸಿದ್ದಾರೆ. ಆ ಕಮಿಟಿಯಲ್ಲಿ ಹಲವು ಸರಕಾರದ ಅಧಿಕಾರಿಗಳಲ್ಲದೆ ಕೆಳಗೆ ಬರೆದ ಖಾಸಗೀ ಗೃಹಸ್ಥರೂ ನೇಮಿಸಲ್ಪಟ್ಟಿರುವರು.

ನಾ. ಪಟ್ಟಣಿ, ಖಾ. ಬಾ. ಕಾದ್ರಿ, ನಾ. ಪರಾಂಜಪೆ, ನಾ. ಮ್ಯೊಲವಿ ರಫಿಉದ್ದೀನ ಅಹೆಮದ, ನಾಮದಾರ ಲಲ್ಲೂಭಾಯಿ ಶಾಮಳದಾಸ, ಸರ್ ಡಾಕ್ಟರ ರಾ. ಗೋ. ಭಾಂಡಾರಕರ, ರಾ. ರಾ. ಹರೀ ನಾರಾಯಣ ಅಪಟೆ, ರಾ. ರಾ. ನಾರಾಯಣ ಗುಣಾಜಿ ವೇಲಿಣಕರ, ಶ್ರೀ ಮಹಾ ಭಾಗವತ ಕುರ್ತಕೋಟಿ, ಮತ್ತು ಪ್ರೊಫೆಸರ ಹರಿ ಗೋವಿಂದ ಲಿಮಯೆ.

---

೨. ಇಂಗ್ಲಂಡ ವೇಲ್ಸ ಗಳಲ್ಲಿ ಪ್ರಾಥಮಿಕ ಶಾಲಾಧ್ಯಾಪಕರ ಸಂಬಳ.

ಲೋಕದಲ್ಲಿ, ತಮಗಿಂತ ಹೆಚ್ಚು ಅಥವಾ ತಮ್ಮಷ್ಟು ಕಷ್ಟವನ್ನು ಅನುಭವಿಸುವವರನ್ನು ಕಂಡು, ಮನುಷ್ಯನು ಕ್ಷಣಹೊತ್ತು ತನ್ನ ದುಃಖವನ್ನು ಮರೆತು ಒಂದು ಬಗೆಯ ಸಮಾಧಾನವನ್ನು ಹೊಂದುತ್ತಾನೆ. ಈ ಮನುಷ್ಯ ಸ್ವಭಾವವನ್ನನುಸರಿಸಿ ನಮ್ಮ ದೇಶದ ಪ್ರಾಥಮಿಕ ಶಾಲಾಧ್ಯಾಪಕರಿಗೆ ಇಂಗ್ಲಂಡ-ವೆಲ್ಸಗಳಲ್ಲಿಯ ಶಾಲಾಧ್ಯಾಪಕರ ಸಂಬಳವನ್ನು ಕೇಳಿ ತುಸು ಸಮಾಧಾನವೆನಿಸ ಬಹುದು. ಅಲ್ಲಿ ವರ್ಷಕ್ಕೆ ಹೆಡ್ ಮಾಸ್ತರರಿಗೆ ಸರಾಸರಿ ೧೬೦ ಪೌಂಡು ಸಂಬಳ ಸಿಗುವದು. ಉಪಶಿಕ್ಷಕರಿಗೆ ಇದಕ್ಕೂ ಕಡಿಮೆ. ೧೦೦ಕ್ಕೆ ೪೭ ಜನರಿಗೆ ಸರ ಟಫಿಕೇಟಿನಷ್ಟು ಸಂಬಳದಲ್ಲಿ ೧೦೦ಕ್ಕೆ ೩೩ರಂತೆ ಸಿಗುವದು. ಶಿಕ್ಷಕಿಯ

ರಲ್ಲಿ ೧೦೦ಕ್ಕೆ ೮೫ ಮಂದಿಗೆ ೧೬೦ ಪೌಂಡು. ಉಪಶಿಕ್ಷಕಿಯರಿಗೆ ೫೦ ಪೌಂಡಿಗಿಂತ ಕಡಿಮೆ ದೊರೆಯುವದು. ಇಂಗ್ಲಂಡದಲ್ಲಿ ಎಲ್ಲ ಪದಾರ್ಥಗಳೂ ತುಟ್ಟಿ ಇರುವದರಿಂದ ಪ್ರಪಂಚಕ್ಕೆ ನಮ್ಮ ಮೂರಪ್ಪ ವೆಚ್ಚವು ಬೇಕು. ಈ ಸಂಗತಿಗಳ ಮೇಲಿಂದ ಆ ದೇಶದ ಪ್ರಾಥಮಿಕ ಶಾಲಾಧ್ಯಾಪಕರ ಯೋಗಕ್ಷೇಮವು ಈ ದೇಶದ ಪ್ರಾಥಮಿಕ ಶಾಲಾಧ್ಯಾಪಕರ ಯೋಗಕ್ಷೇಮಕ್ಕಿಂತ ಹೆಚ್ಚಿ ಚನ್ನಾಗಿ ಇರಲಾರದೆಂಬದು ಸ್ಪಷ್ಟವದೆ.

---

೩. ಮನುಷ್ಯನ ಆಹಾರಕ್ಕೆ ಹಕುರು ಹುಲ್ಲನ್ನು ಉಪಯೋಗಿಸುವ ಪ್ರಯತ್ನ

"ಪಶುಗಳಂತೆ ಮನುಷ್ಯರಿಗೆ ಹಸುರು ಹುಲ್ಲು ಯಾಕೆ ಪಚನವಾಗಬಾರದು?" ಎಂಬ ಪ್ರಶ್ನೆಯು ಎಷ್ಟೋ ಜರ್ಮನ್ ಶಾಸ್ತ್ರಜ್ಞರ ತಲೆಯಲ್ಲಿ ಭ್ರಮಿಸ ಹತ್ತಿರುವದು. ಮನುಷ್ಯನಿಗೆ ಪಚನವಾಗ ಬಹಂಥ ಕೆಲವು ದ್ರವ್ಯಗಳನ್ನು ಹುಲ್ಲಿನೊಳಗಿಂದ ತೆಗೆದು ಹಾಕಲಾಗಿ ಉಳಿಯುವ ಸಂಶೋಧಿತವಾದ ಹುಲ್ಲು ಮನುಷ್ಯನ ಆಹಾರಕ್ಕೆ ಯೋಗ್ಯವಾಗುವದೆಂದು ಜರ್ಮನ್ ಶಾಸ್ತ್ರಜ್ಞರಾದ ಡಾ. ಫ್ರೀಡೆಂಥಾಲ್ ಎಂಬವರು ಕಂಡುಹಿಡಿದಿರುವರು. ಈ ಡಾಕ್ಟರರವರ ಪ್ರಯತ್ನದಿಂದ ಹುಲ್ಲನ್ನೂ ಗಿಡಗಳ ತೊಪ್ಪಲವನ್ನೂ ಮನುಷ್ಯರ ಆಹಾರವಾಗಿ ಉಪಯೋಗಿಸುವದಕ್ಕೆ ಒಂದರೆ ದುಷ್ಕಾಲದ ಕಠಿಣವಾದ ಪ್ರಶ್ನವು ಕನಿಷ್ಟ ಪಕ್ಷಕ್ಕೆ ಹುಲ್ಲು ದೊರೆಯದಂತಾಗುವವರೆಗಾದರೂ ಉದ್ಭವಿಸಲಿಕ್ಕಿಲ್ಲವೆಂದು ಹೇಳಬಹುದು.

ಸನ್ಯಾಸವು ಜನಾಂಗದ ಅವನತಿಯ ಒಂದು ಕಾರಣವು.

ಯುದ್ಧದಿಂದ ತರುಣರು ಅಕಾಲದಲ್ಲಿ ಮೃತ್ಯುಮುಖದಲ್ಲಿ ಬೀಳುವದರಿಂದ ಅವರ ವಂಶವು ಲೋಪವಹೊಂದುವದೆಂದೂ, ಅದರಿಂದ ಜನಾಂಗದ ಅವನತಿಯುಂಟಾಗುವದೆಂದೂ ಹಿಂದೆ ವಿವರಿಸಿದೆ. ಹಿಂದು ಜನಾಂಗದ ಅವನತಿಗೆ ಯುದ್ಧವು ಎಷ್ಟುಮಟ್ಟಿಗೆ ಕಾರಣವಾಯಿತೆಂಬದನ್ನು ವಾಚಕರು ಆಲೋಚಿಸಬೇಕು. ಕುರುಕ್ಷೇತ್ರದಲ್ಲಿ ಆದ ಮಹಾಯುದ್ಧಗಳು, ಮಧ್ಯಕಾಲದಲ್ಲಿ ಮುಸಲ್ಮಾನರಿಗೂ, ಮಹಾರಾಷ್ಟ್ರರು, ರಜಪೂತರು ಮೊದಲಾದ ಹಿಂದುಜನಾಂಗಗಳಿಗೂ ಆದ ಅನೇಕ ಯುದ್ಧಗಳು,

ಇವುಗಳಲ್ಲಿ ಎಷ್ಟೋ ಮಹಾಪುರುಷರು ತರುಣ ವಯಸ್ಸಿನಲ್ಲಿಯೇ ತಮ್ಮ ಜೀವವನ್ನು ಧಾರಾತೀರ್ಥದಲ್ಲಿ ಎರೆದು ತಾವು ವೀರಸ್ವರ್ಗವನ್ನು ಏದಿದರೂ ತಮ್ಮ ಜನ್ಮ ಭೂಮಿಯು ಅವನತಿಗೆ ಕಾರಣವಾದರೆಂಬ ವಿಷಯದಲ್ಲಿ ಸಂಶಯವಿಲ್ಲ. ಈಚೆಗೆ ಬ್ರಿಟಿಶ್ ಸರಕಾರದ ಶಾಂತತೆಯ ಆಳಿಕೆಯಲ್ಲಿ ನಮ್ಮ ದೇಶದಲ್ಲಿ ಯುದ್ಧದ ಪ್ರಸಂಗವು ಪ್ರಾಯಶಃ ಇಲ್ಲದಂತಾದ್ದರಿಂದ ಪ್ರತಿಭಾಶಾಲಿಗಳಾದ ಜನರು ಉದಯಿಸುವದಕ್ಕೂ ಅವರ ವಂಶವಿಸ್ತಾರವಾಗುವದಕ್ಕೂ ಅವಕಾಶವುಂಟಾಗಿದೆ.

ಹಿಂದು ಜನಾಂಗದ ಅವನತಿಗೆ ಯುದ್ಧಕ್ಕಿಂತ ಸನ್ಯಾಸವು ಬಹಳ ಮಟ್ಟಿಗೆ ಕಾರಣವಾಯಿತು. ಹಿಂದು ಜನಾಂಗದ ಅಧಃಪತನಕ್ಕೆ ಕಾರಣವಾದ ಸನ್ಯಾಸಪದ್ಧತಿಯು ನಮ್ಮ ದೇಶದಲ್ಲಿ ಹಬ್ಬಿದ್ದಕ್ಕೆ ಬೌದ್ಧಧರ್ಮವೇ ವಿಶೇಷವಾಗಿ ಕಾರಣವಾಯಿತು.

ಮನುವು ಹೇಳಿದ ಸನ್ಯಾಸವು ಸಮಾಜಕ್ಕೆ ಅಪಾಯಕರವಿರಲಿಲ್ಲ. ಅವನು ಐವತ್ತು ವರ್ಷ ವಯಸ್ಸಾದ ಬಳಿಕ ವನಕ್ಕೆ ತೆರಳಬೇಕೆಂದೂ ೭೫ ವರ್ಷಗಳಾದ ಬಳಿಕ ಸನ್ಯಾಸವನ್ನು ಸ್ವೀಕರಿಸಬಹುದೆಂದೂ ಹೇಳಿರುವನು. ಈ ಪ್ರಕಾರ ವಯಸ್ಸಾದಮೇಲೆ ಸನ್ಯಾಸವನ್ನು ತೆಗೆದುಕೊಂಡರೆ ಅವರ ವಂಶವು ಉಳಿಯುವದಕ್ಕೆ ಅಡ್ಡಿಯಾಗುವದಿಲ್ಲವೆಂಬದಿಷ್ಟೇ ಅಲ್ಲ; ಅಂಥ ಸನ್ಯಾಸಿಗಳಿಂದ ಸಮಾಜಕ್ಕೆ ಹಿತವೇ ಆಗುವದು. ಹಿಂದು-ತತ್ವಜ್ಞಾನದ ಹಲವು ಪ್ರಸಿದ್ಧಗ್ರಂಥಗಳನ್ನು ಈ ತರದ ಸನ್ಯಾಸಿಗಳೇ ಬರೆದಿರುವರು.

ಸನ್ಯಾಸವನ್ನು ಪ್ರಚಾರಪಡಿಸಿದ್ದರಿಂದ ಬೌದ್ಧಧರ್ಮವು ಭರತಖಂಡಕ್ಕೆ ಬಹಳ ಕೇಡನ್ನುಂಟುಮಾಡಿತು. ಬೌದ್ಧಧರ್ಮದ ಅಭಿವೃದ್ಧಿಯ ಕಾಲದಲ್ಲಿ ಬೌದ್ಧಭಿಕ್ಷು (ಸನ್ಯಾಸಿ)ಗಳ ಸಂಖ್ಯೆಗೆ ಮಿತಿಯೇ ಇರಲಿಲ್ಲ. ಅಶೋಕ ಮಹಾರಾಜನ ಕಾಲದಲ್ಲಿ ಅವನ ಮಗನಾದ ಮಹೇಂದ್ರನು ಧರ್ಮಪ್ರಸಾರಕ್ಕಾಗಿ ಸಿಂಹಲದ್ವೀಪಕ್ಕೆ ಹೋಗಿದ್ದನು. ಆಗ ಅಲ್ಲಿ ಆಳುತ್ತಿದ್ದ ತಿಷ್ಯನೆಂಬರಾಜನು ಮಹೇಂದ್ರನ ಮತ್ತು ಆತನ ಶಿಷ್ಯರ ಗೈರಿಕ ವಸ್ತ್ರಗಳನ್ನು ನೋಡಿ ಇದೇನೆಂದು ಕೇಳಿದನು. ಅದಕ್ಕೆ ಮಹೇಂದ್ರನು ಬೌದ್ಧಧರ್ಮದ ಸನ್ಯಾಸದೀಕ್ಷೆಯನ್ನೂ ಆ ವೇಷವನ್ನೂ ವಿಸ್ತರಿಸಿ ಹೇಳಿದನು. ಬಳಿಕ ತಿಷ್ಯನು ಭರತಖಂಡದಲ್ಲಿ ಈ ಪ್ರಕಾರದ ಸನ್ಯಾಸಿಗಳು ಎಷ್ಟು ಜನರಿರುವರು ? ಎಂದು ಕೇಳಿದನು. ಅದಕ್ಕೆ

ಮಹೇಂದ್ರನು—"ಎಲೈ ತಿಷ್ಯನೇ ! ಭರತಖಂಡವು ಗೈರಿಕ ವಸ್ತ್ರಗಳಿಂದ ಮುಚ್ಚಿಹೋಗಿದೆ. ಬುದ್ಧಶಿಷ್ಯರ ಸಂಖ್ಯೆಯು ಅಗಣಿತವಾಗಿರುವದು," ಎಂದು ಹೇಳಿದನು. ಈ ಸಂಗತಿಯು ಇತಿಹಾಸದಲ್ಲಿ ವರ್ಣಿತವಾಗಿರುವದು. ಈ ಅಶೋಕ ಮಹಾರಾಜನ ಕಾಲದಲ್ಲಿಯೇ ನೆರೆದ ಬೌದ್ಧ ಧರ್ಮದ ಮೂರನೆಯ ಮಹಾಸಭೆಯಲ್ಲಿ ತೊಂಬತ್ತು ಸಾವಿರ ಸನ್ಯಾಸಿಗಳು ಕೂಡಿದ್ದರೆಂದು ಮಹಾವಂಶವೆಂಬ ಬೌದ್ಧಗ್ರಂಥದಲ್ಲಿ ಹೇಳಿದೆ. ಇದರಿಂದ ಆ ಕಾಲದಲ್ಲಿ ಸನ್ಯಾಸವು ಎಷ್ಟು ಪ್ರಚುರವಾಗಿತ್ತೆಂಬದು ತಿಳಿಯುವದು.

ಬೌದ್ಧಧರ್ಮವು ಸನ್ಯಾಸಿಗಳ ಜೀವನವೇ ಶ್ರೇಷ್ಠ ಜೀವನವೆಂದು ಉಪದೇಶಿಸಿತು. ಆದ್ದರಿಂದ ಆ ಕಾಲದ ತರುಣರು ಗುಂಪು ಗುಂಪಾಗಿ ಸನ್ಯಾಸವನ್ನು ಸ್ವೀಕರಿಸಿದರು. ಕೆಲವು ಶತಕಗಳವರೆಗೆ ಈ ಕ್ರಮವು ಸಾಗಿತು. ಇದರಿಂದ ಯಾವ ವಂಶದಲ್ಲಿ ರಾಜನೀತಿಜ್ಞರು, ಸೇನಾಪತಿಗಳು, ಶಾಸ್ತ್ರಜ್ಞರು ಉದಯಿಸಬೇಕಾಗಿತ್ತೋ ಅಂಥ ಶ್ರೇಷ್ಠ ಜನರು ವಂಶರಕ್ಷಣವನ್ನಾಡುವ ಕಾರ್ಯದಲ್ಲಿ, ಅಂದರೆ ಸಂಸಾರಕರ್ಮದಲ್ಲಿ ವಿರಕ್ತರಾಗಿದ್ದರು. ಉಳಿದ ಕಡಿಮೆ ತರದ ಜನರ ವಂಶವು ವಿಸ್ತಾರವಾಯಿತು.

ಮುಂದೆ ಬೌದ್ಧಧರ್ಮವು ದೇಶವನ್ನು ಬಿಟ್ಟುಹೋಯಿತು. ಆದರೆ ಸನ್ಯಾಸಪದ್ಧತಿಯು ತಪ್ಪಲಿಲ್ಲ. ಶ್ರೀಶಂಕರಾಚಾರ್ಯರು ಬೌದ್ಧಧರ್ಮವನ್ನು ಈ ದೇಶದಿಂದ ಹೊರದೂಡಿದರೇ ಹೊರತು ಸನ್ಯಾಸ ಪದ್ಧತಿಯನ್ನು ಹೊರದೂಡಲಿಲ್ಲ. ಆದರೆ ಬೌದ್ಧಯುಗದ ಸನ್ಯಾಸಿಗಳ ಸಂಖ್ಯೆಗೂ, ಮುಂದಿನ ಕಾಲದ ಸನ್ಯಾಸಿಗಳ ಸಂಖ್ಯೆಗೂ ಹೋಲಿಸಿ ನೋಡಿದರೆ ಸಾವಿರದಲ್ಲೊಂದು ಬೀಳಲು ಸಹ ಇದ್ದಿಲ್ಲವೆಂದು ಕಾಣುಬರುವದು.

ಸನ್ಯಾಸದಿಂದ ಭರತಖಂಡಕ್ಕೆ ಏನು ಹಾನಿಯೊದಗಿತೋ ನೋಡೋಣ. ಸನ್ಯಾಸವನ್ನು ಸ್ವೀಕರಿಸುವವರು ಬಹುಶಃ ಪ್ರತಿಭಾಶಾಲಿಗಳೂ ಸುಶೀಲರೂ ಆದ ಜನರೇ ಇರುವರು. ಯಾಕಂದರೆ, ಜ್ಞಾನಮಾರ್ಗದಿಂದ ಮೋಕ್ಷವನ್ನು ಸಂಪಾದಿಸುವದು ಉಳಿದವರಿಗೆ ಸಾಧ್ಯವಿರುವದಿಲ್ಲ. ಅದರಲ್ಲಿಯೂ ಸಂಸಾರದಲ್ಲಿ ಪ್ರವೇಶಿಸಿದವರಿಗಿಂತ ಇನ್ನೂ ಸಂಸಾರದಲ್ಲಿ ಪ್ರವೇಶಿಸದ ತರುಣರು ಸನ್ಯಾಸಕ್ಕೆ ಹೆಚ್ಚಾಗಿ ಮೆಚ್ಚುವರು. ಬೌದ್ಧ ಧರ್ಮವು ಆರಂಭವಾಗುವದಕ್ಕೆ ಮುಂಚೆ ಪರದೇಶೀಯರಿಗೆ ಭರತಖಂಡದಲ್ಲಿ ಕಾಲಿಡು

ವದಕ್ಕೆ ಆಗಿರಲಿಲ್ಲ. ಮುಂದಿನ ಕಾಲದ ಇತಿಹಾಸವನ್ನು ನೋಡಿದರೂ ಕೂಡ ಈ ದೇಶದಲ್ಲಿ ಸೈನಿಕರೂ ಶಿಲ್ಪಿಗಳೂ ಒಕ್ಕಲಿಗರೂ ಮೊದಲಾದ ಮಧ್ಯಮ ವರ್ಗದ ಜನರ ಕೊರತೆಯಾಗಿತ್ತೆಂದು ಕಂಡು ಬರುವದಿಲ್ಲ. ಮುಸಲ್ಮಾನರೂ ಇಂಗ್ಲೀಷರೂ ಯುದ್ಧಗಳಲ್ಲಿ ಈ ದೇಶದ ಸೈನಿಕರನ್ನೇ ಬಹುಶಃ ಉಪಯೋಗಿಸಿಕೊಂಡರು. ಆ ಕಾಲದಲ್ಲಿ ಮುಖ್ಯವಾಗಿ ರಾಜ ನೀತಿಜ್ಞರು, ಮುತ್ಸದ್ದಿಗಳು, ಸೇನಾಪತಿಗಳು, ತತ್ವಜ್ಞರು ಮೊದಲಾದ ಉತ್ತಮ ವರ್ಗದ ಜನರ ಕೊರತೆಯುಂಟಾಗಿತ್ತೆಂದು ಕಂಡು ಬರುವದು.

ಪ್ರತಿಭಾಶಾಲಿಗಳು ಸಂಸಾರವನ್ನು ಬಿಟ್ಟು ವಿರಕ್ತರಾದರೆ ಎಷ್ಟು ಹಾನಿಯಾಗುವದೆಂಬದನ್ನು ಮುಂದೆ ಬರೆದ ಲೆಕ್ಕದಲ್ಲಿ ನೋಡಿಕೊಳ್ಳಬಹುದು.

ಮನುಷ್ಯರ ವಂಶವು ಸಾವಕಾಶವಾಗಿ ಬೆಳೆಯುವದೆಂದರೂ ಕೂಡ ೨೫ ವರ್ಷಗಳಲ್ಲಿ ಇಮ್ಮಡಿಯಾಗುವದೆಂದು ಹೇಳಬಹುದು. ಈ ಲೆಕ್ಕದಂತೆ ಹತ್ತು ಜನರ ವಂಶವು ೩೦೦ ವರ್ಷಗಳಲ್ಲಿ ಎಷ್ಟಾಗುವದೋ ನೋಡುವ:—

ಆರಂಭದಲ್ಲಿ	....	....	೧೦ ಜನರು
೨೫ ವರ್ಷಗಳಲ್ಲಿ	....	....	೨೧ ಜನರು
೫೦ ವರ್ಷಗಳಲ್ಲಿ	....	....	೪೦ ಜನರು

ಇದೇ ರೀತಿಯಿಂದ ೩೦೦ ವರ್ಷಗಳಲ್ಲಿ ೪೦,೯೬೦ ಜನರು.

ಇದರಿಂದ ಹತ್ತುಜನ ಪ್ರತಿಭಾಶಾಲಿಗಳು ಕಾರುಣ್ಯದಲ್ಲಿ ಸನ್ಯಾಸಿಗಳಾದರೆ ೩೦೦ ವರ್ಷಗಳಲ್ಲಿ ಅವರಿಂದ ಉಂಟಾಗ ಬಹುದಾದ ಸುಮಾರು ೫೦,೦೦೦ ಪ್ರಜೆಯು ಸಮಾಜಕ್ಕೆ ದೊರೆಯದಂತಾಗುವದು. ಇದಲ್ಲದೆ ಸಾಮಾನ್ಯ ವರ್ಗದ ಜನರ ಸಂತಾನವು ಯಥಾ ಪ್ರಕಾರವಾಗಿ ಬೆಳೆದು ಸಮಾಜದಲ್ಲಿ ಅವರ ಸಂಖ್ಯೆಯು ಹೆಚ್ಚಾಗುವದು. ವಿದ್ಯಾರಣ್ಯರಂಥ ಮಹಾನುಭಾವರ ವಂಶವು ಉಳಿದಿದ್ದರೆ ಸಮಾಜಕ್ಕೆ ಎಷ್ಟು ಕಲ್ಯಾಣವಾಗುತ್ತಿತ್ತೋ !

ಬೌದ್ಧಯುಗದ ಸನ್ಯಾಸದಿಂದ ಬದಗಿದ ಹಾನಿಯನ್ನು ಪೂರಯಿಸಿಕೊಳ್ಳುವದು ಹಿಂದು ಜನಾಂಗಕ್ಕೆ ಇದುವರೆಗೆ ಆಗಿಲ್ಲ.

ಮ. ಪ್ರ. ಪೂಜಾರ.

ಸಾಲೆಯ ತೋಟ.

ಸಾಧಾರಣವಾಗಿ ಪ್ರತಿಯೊಂದು ಸಾಲೆಯ ಅಧ್ಯಾಪಕರು ತಮಗಿದ್ದ ಸ್ಥಳಾನುಕೂಲತೆಯ ಮೇರೆಗೆ ಸಾಲೆಯ ಸುತ್ತು ಮುತ್ತು ಕೆಲವು ಹೂವಿನ ಗಿಡಗಳನ್ನೂ ಬಳ್ಳಿಗಳನ್ನೂ ಹಚ್ಚಿ ಶೋಭೆಯನ್ನುಂಟು ಮಾಡುವ ರೂಢಿಯುಂಟು. ಈ ಬಗೆಯ ಹೂದೋಟವನ್ನು ಬಹುಶಃ ವಿದ್ಯಾರ್ಥಿಗಳೇ ಮಾಡುವರು; ಬೇಸಿಗೆಯಲ್ಲಿ ಅವುಗಳಿಗೆ ಅವರೇ ನೀರು ಹಣಿಸುವರು. ಈ ಕೆಲಸಗಳನ್ನು ಅವರು ಒಳ್ಳೇ ಉತ್ಸಾಹದಿಂದಲೂ, ಪ್ರೀತಿಯಿಂದಲೂ ಮಾಡುವರು. ಇಂಥ ತೋಟಗಳಿಂದ ವಿದ್ಯಾರ್ಥಿಗಳಿಗೆ ಯಾವ ತರದ ಪ್ರಯೋಜನಗಳನ್ನು ಮಾಡಿಕೊಡಬಹುದೆಂಬ ಬಗ್ಗೆ ಆಲೋಚಿಸುವಾ.

ಪ್ರತ್ಯಕ್ಷವಾಗಿ ಕೈಕೆಲಸಗಳನ್ನು ಮಾಡುವದು ಕೀಳು ತನವೆಂದು ಕೆಲವು ಜನರ ತಿಳುವಳಿಕೆಯುಂಟು. ಆದರೆ ಹಾಗೆ ತಿಳಿಯುವದು ಸರಿಯಲ್ಲ. ಪ್ರತಿಯೊಂದು ಕೈಕೆಲಸದಲ್ಲಿ ಕೌಶಲ್ಯವಿರುವದು. ಅದರಲ್ಲಿ ಪ್ರಾವೀಣ್ಯವನ್ನು ಪಡೆದವರಿಗೆ ಗೌರವವುಂಟು. ಯಾವದೊಂದು ಕೆಲಸವನ್ನು ತಮ್ಮ ಕೈ ಮುಟ್ಟಿ ಮಾಡಿ ಮುಗಿಸಿ ಅದನ್ನು ನೋಡಿ ಆನಂದ ಪಡದವರನ್ನು ಕಾಣುವದು ಅಪರೂಪ. ಪ್ರತಿಯೊಬ್ಬ ಮನುಷ್ಯನಲ್ಲಿ ಈ ಒಲವು ಇದ್ದೇ ಇರುತ್ತದೆ. ಹುಡುಗರಲ್ಲಂತೂ ಇದು ವಿಶೇಷವಾಗಿ ಕಂಡು ಬರುತ್ತದೆ. ಈ ಒಲವಿಗೆ ಉತ್ತೇಜನವನ್ನು ಕೊಟ್ಟು, ಮೇಲೆ ಹೇಳಿದ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸಲಿಕ್ಕೆ ಸಾಲೆಯಲ್ಲಿ ಅನೇಕ ತರದ ಹಸ್ತವ್ಯವಸಾಯಗಳನ್ನು ಮಾಡಿಸುವದು ಅವಶ್ಯವು. ಆ ವ್ಯವಸಾಯಗಳಲ್ಲಿ ತೋಟದ ವ್ಯವಸಾಯವು ಬಂದಾಗಿದೆ. ಇದರಿಂದ ಶಾಲಾಶಿಕ್ಷಣಕ್ಕೆ ಬಹಳ ಮಟ್ಟಿಗೆ ಸಹಾಯವಾಗುತ್ತದೆ. ಶಿಕ್ಷಣದ ಉದ್ದೇಶವನ್ನು ಕೊನೆಗಾಣಿಸುವದಕ್ಕೆ ಇದೊಂದು ಸಾಧನವಾಗಿರುತ್ತದೆ.

ಹೊಸದಾಗಿ ಏರ್ಪಡಿಸಿದ ಚಿಕ್ಕ ಮಕ್ಕಳ ಅಭ್ಯಾಸ ಕ್ರಮದಲ್ಲಿ ಸೃಷ್ಟಿ ಜ್ಞಾನದ ಪಾಠಗಳು ಸೇರಿಸಲ್ಪಟ್ಟಿರುತ್ತವೆ. ನಾವು ಸೃಷ್ಟಿಯಲ್ಲಿಯೇ ವಾಸಿಸುತ್ತಿದ್ದು, ನಮ್ಮ ಆಯುಷ್ಯದಲ್ಲಿ ಈ ಸೃಷ್ಟಿಯೊಳಗಿನ ಅನೇಕ ಸಜೀವ ನಿರ್ಜೀವ ಪದಾರ್ಥಗಳ ಸಂಬಂಧವು ನಮಗೆ ಉಂಟಾಗುತ್ತದೆ. ಅವುಗಳ ವಿಷಯವಾಗಿ ನಮ್ಮ ಮನಸ್ಸಿನಲ್ಲಿ ಪ್ರೀತಿಯೂ ಆದರವೂ ಇರುವಸು

ಉತ್ತಮ ತರದ ಬಾಳುವೆಯ ಲಕ್ಷಣವಾಗಿರುತ್ತದ. ಈ ಪ್ರಕಾರದ ಪ್ರೀತ್ಯಾ
ಸರಗಳು ಉತ್ಪನ್ನವಾಗಬೇಕಾದರೆ ಅವುಗಳ ಉತ್ಪತ್ತಿ-ಸ್ಥಿತಿ-ಲಯಗಳನ್ನೂ
ಅವುಗಳ ಕಾರ್ಯಕಾರಣ ಸಂಬಂಧವನ್ನೂ ಅರಿತು ಕೊಳ್ಳುವದು ಅತ್ಯಾ
ವಶ್ಯವು. ಈ ಸೃಷ್ಟಿಯಲ್ಲಿ ಅನೇಕ ತರದ ಒಡವೆಗಳು ಇರುತ್ತವೆ. ಗಿಡ-
ಬಳ್ಳಿ, ಪಶು-ಪಕ್ಷಿ, ಕ್ರಿಮಿ-ಕೀಟಕ ಮೊದಲಾದವುಗಳು ಸಜೀವ ಪದಾರ್ಥ
ಗಳು; ಕಲ್ಲು, ಮಣ್ಣು, ಹವೆ, ನೀರು, ಗಾಳಿ, ಮಳೆ, ಮೋಡ, ಸೂರ್ಯ
ಚಂದ್ರ ಮೊದಲಾದವುಗಳೇ ನಿರ್ಜೀವ ಪದಾರ್ಥಗಳು. ಈ ಎಲ್ಲ ಬಗೆಯ
ಪದಾರ್ಥಗಳ ಶಾಸ್ತ್ರೀಯ ಜ್ಞಾನವನ್ನು ಮಾಡಿಕೊಳ್ಳಲಿಕ್ಕೆ ಸಾಲೆಯ ತೋ
ಟವು ಒಂದು ದೊಡ್ಡ ಸಾಧನವಾಗಿರುತ್ತದೆ.

ಚಿಕ್ಕ ಮಕ್ಕಳಿಗೆ ಓಡಾಡುವದೂ, ಜಿಗಿದಾಡುವದೂ ಸ್ವಾಭಾವಿಕ
ವಾಗಿಯೇ ಸೇರುತ್ತದೆ. ಅವರ ಈ ತರದ ಶಾರೀರಿಕ ಉತ್ಸಾಹವನ್ನು
ತೋಟ ಮಾಡುವ ಕೆಲಸದಲ್ಲಿ ನಿಯಮದಿಂದ ಉಪಯೋಗಿಸುವದರಿಂದ
ಅನಾಯಾಸವಾಗಿ ಶಾರೀರಿಕ ಶಿಕ್ಷಣದ ಕಾರ್ಯವಾಗುವದು. ಇಲ್ಲದಿದ್ದರೆ
ಅವರು ಆ ಶಕ್ತಿಯನ್ನು ಉಡಾಳತನದಲ್ಲಿ ಉಪಯೋಗಿಸಬಹುದು. ನೆಲ
ವನ್ನು ಸ್ವತಃ ಅಗಿಯುವದು, ಗಿಡಗಳಿಗೆ ನೀರು ಹಣಿಸುವದು, ಸ್ವಚ್ಛ
ತೆಯಲ್ಲಿ ಪ್ರತಿದಿವಸ ಕೆಲವು ಹೊತ್ತು ಓಡಾಡುವದು ಇವೇ ಮೊದ
ಲಾದ ಕಾರ್ಯಗಳಿಂದ ಅವರ ಬೇರೆ ಬೇರೆ ಅವಯವಗಳ ಸ್ನಾಯುಗಳು
ಸಿಳವಣಿಗೆ ಹೊಂದುವದಲ್ಲದೆ, ಅವರು ಆರೋಗ್ಯವಂತರಾಗುವರು. ಆರು
ವರ್ಷಕ್ಕಿಂತ ಕಡಿಮೆ ವಯಸ್ಸಿನ ಹುಡುಗರು ಸಾಲೆಯಲ್ಲಿ ಕಾಲಿಟ್ಟ
ಮೊದಲೆ ಅವರ ಕೈಯೊಳಗೆ ಪಾಟಿ-ಪುಸ್ತಕಗಳನ್ನು ಕೊಟ್ಟು ಒತ್ತಟ್ಟಿಗೆ
ಕೂಡ್ರ ಹೇಳುವದಕ್ಕಿಂತ ಇಂಥ ತೋಟದಲ್ಲಿ ಸಣ್ಣ ಪುಟ್ಟ ಕೆಲಸಗಳನ್ನು
ನೇಮಿಸಿ ಕೊಟ್ಟರೆ, ಅವರು ಅವುಗಳನ್ನು ಒಳ್ಳೇ ಆಸ್ಥೆಯಿಂದ ಮಾಡುವ
ದಲ್ಲದೆ ಸಾಲೆಯ ವಿಷಯವಾಗಿ ಅವರ ಮನಸ್ಸಿನಲ್ಲಿ ಪ್ರೀತಿಯು ಉತ್ಪನ್ನ
ವಾಗುವದು. ಅದರಿಂದ ಮುಂದಿನ ಶಿಕ್ಷಣದ ಕಾರ್ಯಕ್ಕೆ ಬಹಳ ಅನು
ಕೂಲವಾಗುವದು.

ಮಾನಸಿಕ ಶಕ್ತಿಗಳ ವಿಕಾಸಕ್ಕೆ ಇಂದ್ರಿಯಜನ್ಯ ಜ್ಞಾನವೇ ಮೂ
ಲಾಧಾರವಾಗಿರುತ್ತದೆ. ಈ ಮಹತ್ವದ ಜ್ಞಾನವು ತೋಟದ ಕೆಲಸದಿಂದ
ದೊರೆಯುವಷ್ಟು ಬೇರೆ ಯಾತರಿಂದಲೂ ದೊರೆಯುವದಿಲ್ಲೆಂದು ಹೇಳಬ

ಹುದು. ತೋಟದಲ್ಲಿ ನಾನಾ ಬಣ್ಣದ ನಾನಾ ಜಾತಿಯ ಎಲೆಗಳು, ಹೂಗಳು, ಆ ಹೂಗಳೊಳಗಿನ ಮಕರಂದವನ್ನು ಕುಡಿಯುವದಕ್ಕಾಗಿ ಬರುವ ಅಂದವಾದ ಕೀಟಕಗಳು, ಆಹಾರದ ಸಲುವಾಗಿ ಬರುವ ತರ ತರದ ಪಕ್ಷಿಗಳು ಇವುಗಳ ನೋಟದಿಂದ ಹುಡುಗರ ಮನಸಿನ ಮೇಲೆ ಅವರಿಗೆ ತಿಳಿಯದಲೇ ಪರಿಣಾಮವಾಗುತ್ತಿರುವದು; ಆ ಪಕ್ಷಿಗಳ ಮಂಜುಳವಾದ ಧ್ವನಿಯನ್ನೂ ತೆಂಗು-ತಾಡವೃಕ್ಷಗಳೊಳಗಿಂದ ಹಾಯ್ದು ಬರುವ ಗಾಳಿಯು ಇಂಪಾದ ಶಬ್ದವನ್ನೂ ಅವರು ಕೇಳುವರು. ಸ್ವತಃ ಶ್ರಮ ಬಟ್ಟು, ಬೀಜ ಬಿತ್ತಿ, ನೀರು ಹಣಿಸಿ, ಜೋಪಾನವಾಡಿ ಬೆಳೆಯಿಸಿದ ಕಾಯಿಪಲ್ಲೆಗಳ ಹಾಗು ಹಣ್ಣು ಹಂಪಲಗಳ ರುಚಿಯನ್ನು ನೋಡುವರು; ಹೂಗಳ ವಾಸನೆಯನ್ನು ತಕ್ಕೊಳ್ಳುವರು. ಇಷ್ಟೇ ಅಲ್ಲ; ಆ ತರದ ಸುಖದಲ್ಲಿ ತಮ್ಮ ಶಿಕ್ಷಕರೂ ತಾಯಿ ತಂದೆಗಳೂ ಪಾಲುಗಾರರಾಗುವಂತೆ ಮಾಡಿ, ಅವರ ವಿಷಯಕ್ಕೆ ತಮ್ಮ ಮನಸಿನಲ್ಲಿನ್ನ ಭಕ್ತಿಯನ್ನು ವ್ಯಕ್ತ ಪಡಿಸುವರು. ಈ ಪೇರೆಗೆ ಸಾಲೆಯಲ್ಲಿ ತೋಟ ಮಾಡಿಸುವದರಿಂದ ಹುಡುಗರ ಎಲ್ಲ ಇಂದ್ರಿಯಗಳಿಗೂ ಕೆಲಸವು ದೊರೆಯುವದಲ್ಲದೆ ಮನಸು ಪ್ರಫುಲ್ಲಿತವಾಗುವದು.

ಕೃಷಿಶಾಸ್ತ್ರವನ್ನಾಗಲಿ, ಉದ್ಭಿಜ್ಜಶಾಸ್ತ್ರವನ್ನಾಗಲಿ ಅಭ್ಯಾಸಮಾಡುವ ವಿದ್ಯಾರ್ಥಿಗಳಿಗೆ ಈ ತೋಟದ ವ್ಯವಸಾಯದಿಂದ ಅನೇಕ ತರದ ಜ್ಞಾನವನ್ನು ಸಪ್ರಯೋಗವಾಗಿ ದೊರಕಿಸಲಿಕ್ಕೆ ಅನುಕೂಲವಾಗುವದು. ಬೇರೆ ಬೇರೆ ಪೈರುಗಳಿಗೆ ಅವಶ್ಯಕವಾದ ಸಂಗತಿಗಳು, ಅವುಗಳ ರೋಗಗಳು, ಅವುಗಳ ನಿವಾರಣೋಪಾಯಗಳು, ನಾನಾ ತರದ ಗೊಬ್ಬರಗಳು ಇವುಗಳ ಬಗ್ಗೆ ಅನುಕೂಲತೆಯ ಪ್ರಕಾರ ಅನೇಕ ಪಾತಗಳನ್ನು ಅವರು ಕಲಿಯಬಹುದು. ಇದಲ್ಲದೆ ಬೇರೆ ಪ್ರಾಂತಗಳಲ್ಲಿಯೂ ಬೇರೆ ದೇಶಗಳಲ್ಲಿಯೂ ಬೆಳೆಯುವ ಪೈರುಗಳನ್ನೂ ಬೆಳೆದು ನೋಡಿ ಅನುಭವವನ್ನು ತಕ್ಕೊಳ್ಳಬಹುದು. ಈ ಪ್ರಕಾರ ಕೃಷಿ ಶಾಸ್ತ್ರದ ಅನೇಕ ತರದ ಪ್ರಯೋಗಗಳನ್ನು ಮಾಡಿ ನೋಡಬಹುದು. ಇದರಂತೆಯೇ ಉದ್ಭಿಜ್ಜಗಳ ವರ್ಗೀಕರಣ, ಅವುಗಳ ಜೀವನಕ್ರಮ, ಅವುಗಳ ಅವಯವಗಳ ಅಂತರರಚನೆ ಅಲ್ಲಿ ನಡೆಯುವ ಕಾರ್ಯಗಳು, ಅವುಗಳ ಪುನರುತ್ಪತ್ತಿ ಇವೇ ಮೊದಲಾದ ಉದ್ಭಿಜ್ಜ ಶಾಸ್ತ್ರದ ಸಂಗತಿಗಳನ್ನು ಪ್ರತ್ಯಕ್ಷವಾಗಿ ಅರಿತುಕೊಳ್ಳಬಹುದು.

ಇದಲ್ಲದೆ ವರ್ಷದ ಋತುಮಾನಗಳು, ಅವುಗಳಿಗೆ ತಕ್ಕಂತೆ ಹವೆಯ ವಾಸದಲ್ಲಿ ಆಗುವ ಹೆಚ್ಚು ಕಡಿಮೆಗಳು, ಅದರಿಂದುಂಟಾಗುವ ಸೃಷ್ಟಿಕಾರ್ಯಗಳು, ಪ್ರಾಣಿ-ವನಸ್ಪತಿಗಳ ಮೇಲೆ ಅವುಗಳಿಂದಾಗುವ ಪರಿಣಾಮಗಳು, ಮನುಷ್ಯಪ್ರಾಣಿಯ ಉದ್ಯೋಗವ್ಯವಸಾಯಗಳಲ್ಲಿ ಆಗುವ ಹೆಚ್ಚು ಕಡಿಮೆಗಳು ಇವೇ ಮೊದಲಾದ ವ್ಯಾವಹಾರಿಕ ಸಂಗತಿಗಳನ್ನೂ ನಿರೀಕ್ಷಿಸಲಿಕ್ಕೆ ಅನುಕೂಲವಾಗುವದು. ಈ ಸಂಗತಿಗಳಿಂದ ಮುಂದೆ ಅವರು ಕಲಿಯತಕ್ಕ ಬೇರೆ ಬೇರೆ ದೇಶಗಳ ಭೂಗೋಲ ಜ್ಞಾನಕ್ಕೂ ತಕ್ಕ ಮಟ್ಟಿಗೆ ಸಹಾಯವಾಗುವದು.

ಸಾರಾಂಶವೇನೆಂದರೆ, ಸಾಲೆಯ ತೋಟದಿಂದ ಎಲ್ಲ ಇದುತ್ತೆಯ ವಿದ್ಯಾರ್ಥಿಗಳಿಗೆ ವಸ್ತುತಿಗೆ ಸರಿಯಾಗಿ ಸೃಷ್ಟಿ ಜ್ಞಾನದ ಪಾಠಗಳನ್ನು ಕೊಡಲಿಕ್ಕೆ ಅನುಕೂಲವಾಗುವದಲ್ಲದೆ, ಕೃಷಿಶಾಸ್ತ್ರ, ಉದ್ಭಿಜ್ಜಶಾಸ್ತ್ರ, ಭೂಗೋಲ ಶಾಸ್ತ್ರಗಳ ಅಭ್ಯಾಸದ ಪ್ರಯೋಗಗಳಿಗೆ ಸಹಾಯವಾಗುವದು.

ಈ ವ್ಯವಸಾಯದಿಂದ ನೈತಿಕ ದೃಷ್ಟಿಯಿಂದಲೂ ವಿದ್ಯಾರ್ಥಿಗಳ ಮನಸಿನ ಮೇಲೆ ಅನೇಕ ಸುಪರಿಣಾಮಗಳಾಗುವವು. ತಾವು ನಿತ್ಯದಲ್ಲಿ ಹೊತ್ತು ಹೊತ್ತಿಗೆ ಅನ್ನ-ನೀರುಗಳನ್ನು ತಕ್ಕೊಳ್ಳುವಂತೆ ಗಿಡ-ಬಳ್ಳಿಗಳಿಗೂ ನೀರು ಬೇಕು. ನೀರು ಕೊಡದಿದ್ದರೆ ಅವು ಸತ್ತು ಹೋಗುವವು. ಬೇರು, ಬೊಡ್ಡೆ, ಎಲೆ, ಹೂವು ಕಾಯಿಗಳು ಕ್ರಮವಾಗಿ ಒಂದನ್ನೊಂದು ಹ್ಯಾಗೆ ಅವಲಂಬಿಸಿರುವವೆಂಬದೂ, ಮೊದಲಿನಿಂದ ಒಂದೊಂದೇ ಇಲ್ಲದಂತಾದರೆ ಉಳಿದವು ಹ್ಯಾಗೆ ಇಲ್ಲದಂತಾಗುವವೆಂಬದೂ ಅವರಿಗೆ ಗೊತ್ತಾಗುವದು; ಮತ್ತು ಈ ಉದ್ಭಿಜ್ಜಗಳಿಂದ ಪಶುಪಕ್ಷಿಗಳೂ ನಾವೂ ಜೀವಿಸುವೆವೆಂಬದೂ ತಿಳಿಯುವದು. ಇದೇ ಪ್ರಕಾರ ಕುಟುಂಬದೊಳಗಿನ ಬೇರೆ ಬೇರೆ ವ್ಯಕ್ತಿಗಳಲ್ಲಿಯೂ ರಾಷ್ಟ್ರದೊಳಗಿನ ಬೇರೆ ಬೇರೆ ಸಮಾಜಗಳಲ್ಲಿಯೂ ಪರಸ್ಪರಾವಲಂಬನವಿರಬೇಕಾಗುತ್ತದೆಂಬ ಸಂಗತಿಯು ಕಾಲಾಂತರದಿಂದ ಗೊತ್ತಾಗುವದು. ತೀರ ಸಣ್ಣ ಹುಡುಗರು ಚಿಲ್ಲೋ ಹೂಗಳನ್ನು ಕಂಡ ಕೂಡಲೆ ಅವುಗಳನ್ನು ನಿರ್ದಯತನದಿಂದ ಹರಿದು ಹಾಕುವರು; ಸಸಿಗಳನ್ನು ಕಿತ್ತಿ ಚಲ್ಲುವರು; ಹೀಚುಗಾಯಿಗಳನ್ನು ಹರಿಯುವರು. ಹೂಗಳ ಮೇಲೆ ಬಂದು ಕುಳಿತ ಪಾತರಗಿತ್ತಿಗಳನ್ನೂ ಬೋರಂಗಿಗಳನ್ನೂ ಹಿಡಿದು ಕೊಲ್ಲುವರು, ಆದರೆ ತಾನೇ ಬೀಜವನ್ನು ಬಿತ್ತಿ,

ದಿನಾಲು ನೀರು ಹಾಕಿ ಬೆಳೆಯಿಸಿ, ಮುಂದೇನಾಗುವದೆಂಬದನ್ನು ಪೂರ್ಣವಾಗಿ ನಿರೀಕ್ಷಿಸಿದ ಹುಡುಗನು ಎಂದೂ ಹಾಗೆ ಮಾಡಲಾರನು. ಅದೇ ಪ್ರಕಾರ ಪ್ರಾಣಿಗಳ ಜೀವನ ಕ್ರಮವನ್ನು ಅರಿತವನು ಕಠೋರ ಮನಸಿನವನಾಗಿ ಬುದ್ಧಿಪೂರ್ವಕವಾಗಿ ಅವುಗಳ ಮೇಲೆ ಕಾಲಿಟ್ಟು ಅವುಗಳನ್ನು ಕೊಲ್ಲಲಾರನು.

ಶಿಕ್ಷಣಶಾಸ್ತ್ರಜ್ಞನಾದ ಫ್ರೊಬೆಲ್ಲನು ಒಂದು ಕಡೆಗೆ ಆಂದದ್ದೇನಂದರೆ— "ಚಿಕ್ಕಮಕ್ಕಳು ಒಮ್ಮೊಮ್ಮೆ ಸಣ್ಣ ಪ್ರಾಣಿಗಳಿಗೂ ವನಸ್ಪತಿಗಳಿಗೂ ಕ್ರೂರತನವನ್ನು ತೋರಿಸಿದಂತೆ ಕಂಡು ಬರುತ್ತದೆ. ಆದರೆ ಮೊದಮೊದಲು ಅವರ ಮನಸ್ಸಿನಲ್ಲಿ ಅವುಗಳ ವಿಷಯವಾಗಿ ಕೇಡು ಬಗೆಯಬೇಕೆಂಬ ಇಚ್ಛೆಯು ಎಳ್ಳಷ್ಟು ಇರುವದಿಲ್ಲ. ಕೇವಲ ಕುತೂಹಲದ ಮೂಲಕವಾಗಿ ಅವರು ಆ ಕಾರ್ಯದಲ್ಲಿ ತೊಡಗಿರುತ್ತಾರೆ. ಆದರೆ ಆ ಸಮಯಕ್ಕೆ ಅವರಿಗೆ ತಿಳಿ ಹೇಳುವವರೂ ಮಾರ್ಗದರ್ಶಕರೂ ಇಲ್ಲದಿದ್ದರೆ, ಕಾಲಾಂತರದಿಂದ ಅವರ ಮನಸ್ಸು ಆ ಕ್ರೂರತನದಲ್ಲಿ ಪರಿಣಮಿಸಿ, ಅದು ಅವರಲ್ಲಿ ಸ್ಥಿರವಾಗಿ ನಿಲ್ಲುವದು." ಆದದರಿಂದ ಕರ್ತವ್ಯದಕ್ಷನಾದ ಶಿಕ್ಷಕನಿಗೆ ತನ್ನ ಕೈಕೆಳಗಿನ ವಿದ್ಯಾರ್ಥಿಗಳಲ್ಲಿ ಉತ್ತಮ ತರದ ಶೀಲನ್ನುಂಟು ಮಾಡಲಿಕ್ಕೆ ತೋಟದ ವ್ಯವಸಾಯದಲ್ಲಿ ಅನೇಕ ಪ್ರಸಂಗಗಳು ದೊರೆಯುವವು.

ಸೃಷ್ಟಿಕಾರ್ಯಗಳು ಕ್ರಮವಾಗಿಯೂ, ಸಾವಕಾಶವಾಗಿಯೂ ಆಗುತ್ತ ಹೋಗುವವು. ವನಸ್ಪತಿಗಳ ಬೆಳವಣಿಗೆಯಲ್ಲಿ ಅವಸರವು ಎಳ್ಳು ಮಾತ್ರಕ್ಕೂ ಇರುವದಿಲ್ಲ. ತೊಗರಿ, ಅವರೆ, ಕಡಲೆ ಮೊದಲಾದವುಗಳ ಕಾಯಿಗಳನ್ನು ಬಿಚ್ಚಿ ನೋಡಿದರೆ ಅವುಗಳ ಒಳಮುಗ್ಗಲು ಬೀಜಗಳು ಎಷ್ಟು ಅಚ್ಚುಕಟ್ಟಾಗಿಯೂ, ಹೊಂದಿಕೆಯಾಗಿಯೂ ಇಡಲ್ಪಟ್ಟಿರುವವೆಂಬದೂ ಪ್ರತಿಯೊಂದು ಕಾಳಿಗೆ ಪೋಷಕ ರಸವು ಸಿಗುವಂತೆ ಹ್ಯಾಗೆ ವ್ಯವಸ್ಥೆಯು ಮಾಡಲ್ಪಟ್ಟಿರುವದೆಂಬದೂ ಗೊತ್ತಾಗುವದು. ಈ ಎಲ್ಲ ಸಂಗತಿಗಳಿಂದ ಹುಡುಗರ ನಿತ್ಯದ ಆಚರಣೆಯ ಮೇಲೆ ಅಲ್ಪಾಂಶದಿಂದಾದರೂ ಪರಿಣಾಮವಾಗಲಿಕ್ಕೆ ಜೇಕು. ಮತ್ತೊಂದು ಮಹತ್ವದ ಸಂಗತಿಯು ಯಾವದೆಂದರೆ, ಹಿಂದೆ ಹೇಳಿದ ಅನೇಕ ತರದ ಸೂಕ್ಷ್ಮ ನಿರೀಕ್ಷಣೆಯಿಂದಲೂ, ವಿಚಾರಗಳಿಂದಲೂ ಹುಡುಗರಲ್ಲಿ ಸೃಷ್ಟಿಕರ್ತನ ಅಗಾಧ

ಮಹಿಮೆಯನ್ನು ಅರಿತುಕೊಳ್ಳುವ ಶಕ್ತಿಯು ಉಂಟಾಗುವದು. ಇದಕ್ಕೂ ಹೆಚ್ಚಿನ ಪ್ರಯೋಜನವು ಅದಾವದಿರುವದು?

ಈ ಮೇರೆಗೆ ತೋಟದ ಕೆಲಸದಿಂದ ವಿದ್ಯಾರ್ಥಿಗಳ ಶಾರೀರಿಕ-ಮಾನಸಿಕ-ನೈತಿಕ ಪುಷ್ಟಿಗಳಿಂದ ಅನೇಕ ಪ್ರಯೋಜನಗಳಾಗುವದಲ್ಲದೆ ವ್ಯಾವಹಾರಿಕ ಜ್ಞಾನವೂ ಆಗುವದು; ಮತ್ತು ಸೃಷ್ಟಿಕರ್ತನ ವಿಷಯವಾಗಿ ಪೂಜ್ಯ ಬುದ್ಧಿಯು ಉತ್ಪನ್ನವಾಗುವದು. ನಿಜವಾಗಿ ವಿಚಾರ ಮಾಡಿದರೆ, ಸಾಲೆಗೆ ಬಂದ ವಿದ್ಯಾರ್ಥಿಗಳು ಕೇವಲ ಪುಸ್ತಕಗಳನ್ನು ಓದಿ ಪರೀಕ್ಷೆಯಲ್ಲಿ ಪಾಸಾದರೆ ಶಿಕ್ಷಕರ ಕರ್ತವ್ಯವು ತೀರಲಿಲ್ಲ. ಅವರು ಯಾವದೊಂದು ಕೆಲಸವನ್ನು ವಿಚಾರ ಪೂರ್ವಕವಾಗಿ ಸ್ಥಿರಮನಸಿನಿಂದ ಮಾಡುವ ಯೋಗ್ಯತೆಯುಳ್ಳವರೂ ಆರೋಗ್ಯವಂತರೂ, ಸೃಷ್ಟಿಯೊಳಗಿನ ಗೂಢ ಸಂಗತಿಗಳನ್ನು ಅರಿತು ಕೊಳ್ಳಲಿಕ್ಕೆ ಹವಣಿಸುವವರೂ, ದೇವರ ಕೂಡಲೂ, ಗುರು ಹಿರಿಯರ ಕೂಡಲೂ ಭಯ ಭಕ್ತಿಯಿಂದ ನಡಕೊಳ್ಳುವವರೂ ಆಗತಕ್ಕದ್ದು. ಈ ಎಲ್ಲ ಗುಣಗಳನ್ನೂ ಹುಡುಗರಲ್ಲಿ ಉಂಟುಮಾಡಲಿಕ್ಕೆ ತೋಟದ ವ್ಯವಸಾಯವು ಒಂದು ದೊಡ್ಡ ಸಾಧನವಾಗಿರುವದು.

ತ. ನಾ. ಅವಿಜ್ಞಾನಭಾವಿ.

ಉಲ್ಕೆಗಳು ಅಥವಾ ಬೀಳುವ ತಾರೆಗಳು.

ಬೀಳುವ ತಾರೆಗಳ ವಿಷಯವಾಗಿ ಬೇರೆ ಬೇರೆ ದೇಶಗಳ ಜನರಲ್ಲಿ ಪುರಾತನಕಾಲದಿಂದ ಬೇರೆ ಬೇರೆ ಕಲ್ಪನೆಗಳು ಇರುವವು. ಯಾವದಾದರೊಂದು ದೊಡ್ಡ ತಾರೆಯು ಬೀಳುವದನ್ನು ನೋಡಿದರೆ, ಆ ಸಮಯದಲ್ಲಿ ಯಾವನಾದರೊಬ್ಬ ಸತ್ಪುರುಷನು ಹೋದನೆಂದು ತಿಳಿಯುವರು; ಅಥವಾ; ಯಾವನಾದರೊಬ್ಬ ಮನುಷ್ಯನು ಸ್ವರ್ಗದಿಂದ ಪತನಹೊಂದಿ ಮೃತ್ಯುಲೋಕದಲ್ಲಿ ಜನ್ಮತಾಳಿದನೆಂದು ತಿಳಿದುಕೊಳ್ಳುವರು.

೧೭ನೇ ಶತಮಾನದಲ್ಲಿ ಇಂಗ್ಲಂಡಿನ ಜನರು ಇವು ಬೇತಾಳನ ದೀಪಗಳೆಂದು ತಿಳಿಯುತ್ತಿದ್ದರು. ಆದರೆ ಸುಶಿಕ್ಷಿತರ ವಿಚಾರವು ಮಾತ್ರ ಹೀಗಿದ್ದಿಲ್ಲ. ಅವರು ಪೃಥ್ವಿಯ ವಾತಾವರಣದಲ್ಲಿ ಕೆಲವೊಂದು ಜ್ವಾಲಾಗ್ರಾಹಿ ವಾಯುವು ಇರುತ್ತಿದು, ಅದು ಉರಿಯುತ್ತಿರಬೇಕೆಂದು ತಿಳಿಯು

ತ್ತಿದ್ದರು; ಇಲ್ಲವೆ, ಆರೋರಾಬೋರಿಯಾಲಿಸ (ಉತ್ತರತೇಜ) ದಂತೆ ಇದಾನರೂ ಒಂದು ಪ್ರಕಾರದ ಪ್ರಕಾಶವಿರಬೇಕೆಂದು ತಿಳಿಯುತ್ತಿದ್ದರು. ಆದರೆ ಅವರ ಈ ತಿಳುವಳಿಕೆಗಳಾದರೂ ತಪ್ಪಾದವುಗಳಿಂದು ತುಸು ದಿವಸಗಳಲ್ಲಿಯೇ ನಿರ್ಣಯವಾಯಿತು. ಯಾಕಂದರೆ, ಅದೇ ಸುಮಾರಿಗೆ "ಹ್ಯಾಲೆ" ಎಂಬ ಸುಪ್ರಸಿದ್ಧ ಜ್ಯೋತಿಷಿಯು ಉತ್ಪನ್ನವಾದನು. ಅವನು ಉಲ್ಕೆಗಳಿಗೂ ಪೃಥ್ವಿಯ ವಾತಾವರಣಕ್ಕೂ ಏನೂ ಸಂಬಂಧವಿಲ್ಲೆಂದು ನಿರ್ಣಯಿಸಿದನು. ಇವು ಪೃಥ್ವಿಯ ವಾತಾವರಣದ ಹೊರಗಿನ ಕಲ್ಲುಗಳಿರಬೇಕೆಂದೂ, ಪೃಥ್ವಿಯ ಆಕರ್ಷಣಕ್ಕೊಳಗಾಗಿ ಪೃಥ್ವಿಯ ಮೇಲೆ ಬೀಳುತ್ತಿರಬೇಕೆಂದೂ, ಅವನು ಅಭಿಪ್ರಾಯಪಟ್ಟನು. ಆದರೆ ಇದನ್ನು ಸಿದ್ಧ ಮಾಡಿ ತೋರಿಸಲಿಕ್ಕೆ ಆಕಾಲದಲ್ಲಿ ಸಾಧನಗಳಿದ್ದಿಲ್ಲ. ಮುಂದೆ ೧೮೯೫ರ ಸುಮಾರಕ್ಕೆ ಆಗಿ ಹೋದ "ಕ್ಲಾಡನೀ" ಎಂಬ ಹೆಸರಿನ ಜ್ಯೋತಿಷಿಯೂ ಇದೇ ರೀತಿಯಾಗಿ ಪ್ರತಿಪಾದಿಸಿದನು. ಆದರೆ ಉಲ್ಕೆಗಳನ್ನು ಪ್ರತ್ಯಕ್ಷ ನಿರೀಕ್ಷಣೆ ಮಾಡಿ ಅವುಗಳ ಅಂತರ ಮೊದಲಾದವುಗಳನ್ನು ನಿರ್ಣಯಿಸುವ ಕೆಲಸವನ್ನು ಜರ್ಮನ್ ವಿಶ್ವವಿದ್ಯಾಲಯದೊಳಗಿನ ಇಬ್ಬರು ವಿದ್ಯಾರ್ಥಿಗಳು ಮಾಡಿದರು. ಅವರು ಬೇರೆ ಬೇರೆ ಸ್ಥಾನಗಳಿಂದ ಉಲ್ಕೆಗಳನ್ನು ನಿರೀಕ್ಷಿಸಿದರು. ಇದರ ಮೇಲಿಂದ ಈ ಪದಾರ್ಥಗಳು ಪೃಥ್ವಿಯ ವಾತಾವರಣದ ಹೊರಗಿರಬೇಕೆಂದು ಗೊತ್ತಾಯಿತು. ಉಲ್ಕೆಗಳ ವೇಗವು ಪ್ರತಿಸೇಕಂಡಿಗೆ ೩೫ ಮೈಲು ಇದ್ದು, ಅವು ಪೃಥ್ವಿಯ ವಾತಾವರಣವನ್ನು ಪ್ರವೇಶಿಸುವಾಗ ಹವೆಗೂ ಅವುಗಳಿಗೂ ಘರ್ಷಣ ಉಂಟಾಗಿ ಅಗ್ನಿಯು ಹುಟ್ಟಿ ಅವು ಸ್ಫುಟ್ಟು ಹೋಗುವವು. ಈ ಉಲ್ಕೆಗಳು ಉರಿಯುತ್ತಿರುವಾಗ ಅವುಗಳ ಉಷ್ಣಮಾನವು ೧,೯೩,೬೦೦ ಅಂಶ ಇರಬೇಕೆಂದು ಅವರು ಗಣಿತದಿಂದ ಸಿದ್ಧಮಾಡಿದರು. ಪೃಥ್ವಿಯ ಮೇಲೆ ಒಂದು ಕಡೆಯಲ್ಲಿ ನಿಂತು ನೋಡಿದರೆ ಕಾಣಿಸುವಷ್ಟು ಆಕಾಶಭಾಗದಲ್ಲಿ, ಪ್ರತಿಯೊಂದು ಮಿನಿಟಿಗೆ ಸರಾಸರಿ ೬ ತಾರೆಗಳು ಬೀಳುವದು ಕಾಣಿಸುವದು. ಈ ಮಾನದಿಂದ ನೋಡಲಾಗಿ ಒಂದು ಸ್ಥಳದಿಂದ ಒಂದು ದಿವಸದಲ್ಲಿ ೧೦ ಸಾವಿರಕ್ಕಿಂತ ಹೆಚ್ಚು ತಾರೆಗಳು ಬೀಳುವಂತೆ ಕಾಣಿಸುವವೆಂತಲೂ ಇಡೀ ಪೃಥ್ವಿಯ ಮೇಲೆ ಒಂದು ದಿವಸದಲ್ಲಿ ಬೀಳುವ ತಾರೆಗಳ ಸಂಖ್ಯೆಯು ೬೦ ಲಕ್ಷ ಇರುವದೆಂತಲೂ ಗೊತ್ತಾಗುವದು. ಈ ಎಲ್ಲ

ಕಲ್ಲುಗಳು ಪೃಥ್ವಿಯ ಮೇಲೆ ಪ್ರತಿನಿತ್ಯ ಪ್ರತ್ಯಕ್ಷವಾಗಿ ಬಂದು ಬೀಳುತ್ತಿದ್ದರೆ, ನಮ್ಮ ಮೇಲೆ ಯಾವಾಗಲೂ ಕಲ್ಲಿನ ದೊಡ್ಡದೊಂದು ಮಳೆಯು ಸುರಿಯುತ್ತಿದ್ದಂತಾಗಿ ಭೂಮಿಯು ಜನರ ವಾಸಕ್ಕೆ ತಕ್ಕದ್ದಾಗುತ್ತಿರ್ನಿಲ್ಲ. ಆದರೆ ಈ ತೊಂದರೆಯನ್ನು ನೀಗುವ ಉಪಾಯವನ್ನು ಸೃಷ್ಟಿಯು ಮೊದಲೇ ಮಾಡಿಬಿಟ್ಟಿರುವದು. ಈ ತಾರೆಗಳು ಸುಮಾರು ಅರ್ಧ ಮಾರ್ಗವನ್ನು ಕ್ರಮಿಸಿ ಬರುವಷ್ಟರೊಳಗೆ ಬಹುಶಃ ಸುಟ್ಟುಹೋಗುವವು ಈ ಯೋಜನೆಯಿಂದ ಇನ್ನೊಂದು ಲಾಭಕರವಾದ ಸಂಗತಿಯು ಸೃಷ್ಟಿಯಲ್ಲಿ ಬಿದಗುವದು. ಪೃಥ್ವಿಯ ವಾತಾವರಣದೊಳಗಿನ ಎಲ್ಲಕ್ಕೂ ಮೇಲ್ಗಡೆಯ ಹವೆಯ ಪರಮಾಣುಗಳಿಗೆ ಉಳಿದ ಪರಮಾಣುಗಳಿಂದ ಸದಾ ಆಘಾತವಾಗುತ್ತಿರುವದರಿಂದ, ಅವು ವಾತಾವರಣವನ್ನು ಬಿಟ್ಟು ಅಂತರಿಕ್ಷದಲ್ಲಿ ಹೋಗುತ್ತಿರುವವು. ಒಂದು ವೇಳೆ ಈ ಪರಮಾಣುಗಳು ಇದೇ ರೀತಿಯಾಗಿ ಬಂದೇಸವನೆ ಹೋಗಹತ್ತಿದರೆ ಪೃಥ್ವಿಯ ವಾತಾವರಣವು ದಿನದಿನಕ್ಕೆ ಕಡಿಮೆಯಾಗುತ್ತ ಹೋಗುವ ಸಂಭವವಿರುವದು. ಆದರೆ ಈ ಭೀತಿಯು ಉಲ್ಕಾಪತನದಿಂದ ದೂರವಾಗಿರುವದು. ಹ್ಯಾಗಂದರೆ ಈ ಹೊರಗಿನ ಕಲ್ಲುಗಳು ವಾತಾವರಣದಲ್ಲಿ ಬಂದು ಸುಡುವದರಿಂದ ಹುಟ್ಟುವ ಬೇರೆ ಬೇರೆ ವಾಯುಗಳು ವಾತಾವರಣದಲ್ಲಿ ಕೂಡಿಕೊಳ್ಳುವವು.

ಉಲ್ಕಾಪಾತವಾಗುವಂತೆ ಸೂರ್ಯನ
ಆಗುತ್ತಿರಬೇಕೆಂದು ಬಳಗಡೆಯಲ್ಲಿ ತರ್ಕಿಸಿದರು.

ನ ಉಷ್ಣತೆಯು ಸೂರ್ಯಗೋಲದ ಮೇಲೆ ಬಂದೇಸವನೆ ಬೀಳ್ಳುತ್ತಿರುವ ಹೊಸ ಹೊಸ ಅದರಿಂದ ಸೂರ್ಯಗೋಲದ ಉಷ್ಣತೆಯು ಕಡಿಮೆಯಾಗಿ ಅದು ಆರುವ ಭೀತಿಯು ಎಷ್ಟು ಮಾತ್ರವೂ ಇರುವದಿಲ್ಲ" ಎಂದು ಅವರು ಸಿದ್ಧ ಮಾಡಲಿಕ್ಕೆ ಯತ್ನಿಸಿದರು. ಆದರೆ ಅವರ ಈ ಹೇಳಿಕೆಯು ಗ್ರಾಹ್ಯವೆಂದು ಕಂಡು ಬರಲಿಲ್ಲ. ಯಾಕಂದರೆ ಪ್ರತಿನಿತ್ಯ ಖರ್ಚಾಗುವಷ್ಟು ಸೂರ್ಯನ ಉಷ್ಣತೆಯನ್ನು ಪೂರೈಸುವದಕ್ಕೆ ಬೇಕಾಗುವಷ್ಟು ತಾರೆಗಳು ಅವನ ಮೇಲೆ ಹೋಗಿ ಬೀಳುವದಿಲ್ಲೆಂಬದು ಗಣಿತದಿಂದ ಸ್ಪಷ್ಟವಾಗಿ ತಿಳಿದುಬರುವದು.

ಉಲ್ಕೆಗಳು ಎಲ್ಲಿಂದ ಬೀಳುವವೆಂಬದು ಆಗಿನ ಕಾಲದ ಜ್ಯೋತಿಷ ಶಾಸ್ತ್ರಜ್ಞರಿಗೆ ವಿಚಾರ ಮಾಡತಕ್ಕ ಗೂಢಪ್ರಶ್ನೆಯಾಗಿತ್ತು. ಈ ಪ್ರಶ್ನೆಯ ನಿರ್ಣಯವಾಗುವಂಥ ಒಂದು ದೈವಿಕ ಚಮತ್ಕಾರವು ಆಗಿನ ಕಾಲದಲ್ಲಿ ಸಂಭವಿಸಿತು. ೧೮೩೩ನೇ ಇಸ್ವಿಯ ನವಂಬರ ೧೩-೧೪ನೇ ತಾರೀಖುಗಳ ದಿವಸ ಉತ್ತರ ಅಮೇರಿಕದಲ್ಲಿ ಉಲ್ಕೆಗಳ ದೊಡ್ಡದೊಂದು ಮಳೆಯಾಯಿತು. ಸುಮಾರು ಒಂಭತ್ತು ತಾಸುಗಳ ವರೆಗೆ ಉಲ್ಕೆಗಳು ಒಂದೇ ಸವನಾಗಿ ಬೀಳುತ್ತಿದ್ದವು. ಈ ಉಲ್ಕೆಗಳು ಆಕಾಶದ ಒಂದೇ ವಿವಕ್ಷಿತ ಬಿಂದುವಿನಿಂದ ಹೊರಟಂತೆ ಕಂಡು, ಮುಂದೆ ನಾಲ್ಕೂ ಕಡೆಗೆ ಹಬ್ಬುತ್ತಿದ್ದವು. ಈ ಎರಡು ದಿವಸಗಳಲ್ಲಿ ಎಷ್ಟು ತಾರೆಗಳು ಬಿದ್ದವೆಂಬದನ್ನು ಎಣಿಸುವದು ಅಶಕ್ಯವೇ ಆಗಿತ್ತು. ಆದರೆ ಜ್ಯೋತಿಷಿಗಳು ಮಾಡಿದ ಅಂದಾಜಿನ ಮೇಲಿಂದ ಒಟ್ಟು ೯ ತಾಸುಗಳಲ್ಲಿ ಎರಡೂವರೆ ಲಕ್ಷ ತಾರೆಗಳು ಬಿದ್ದಿರಬಹುದೆಂದು ತಿಳಿಯುತ್ತದೆ. ಈ ಉಲ್ಕೆಗಳು ಪೃಥ್ವಿಯ ವಾತಾವರಣದೊಳಗಿನವಲ್ಲವೆಂದು ಈ ದೈವಿಕ ಚಮತ್ಕಾರದಿಂದ ಸಿದ್ಧವಾಯಿತು. ಆ ಮೇಲೆ ಇಂಥ ಚಮತ್ಕಾರವು ಅದಕ್ಕೂ ಹಿಂದೆ ಎಂದಾದರೂ ಸಂಭವಿಸಿತ್ತೋ ಹ್ಯಾಗೆಂಬದನ್ನು ಜ್ಯೋತಿಷಿಗಳು ಶೋಧಿಸತೊಡಗಿದರು. ಅವರು ಮಾಡಿದ ಶೋಧಗಳಿಂದ ಪ್ರತಿ ೩೩೪ ವರ್ಷಕ್ಕೊಮ್ಮೆ ಈ ತರದ ಉಲ್ಕಾಪಾತವಾಗುವದೆಂದು ತಿಳಿದುಬಂತು. ತರುವಾಯ ಉಲ್ಕೆಗಳು ಪರಸ್ಪರ ಸಮಾಂತರವಾಗಿ ಒಂದೇ ದಿಕ್ಕಿನಿಂದ ಮಾರ್ಗಕ್ರಮಣ ಮಾಡುತ್ತಿದ್ದು, ಅವು ಪೃಥ್ವಿಯ ಸಮೀಪಕ್ಕೆ ಬರಲಾಗಿ ಪೃಥ್ವಿಯ ಆಕರ್ಷಣಕ್ಕೆ ಬಿಳಗಾಗಿ ಪೃಥ್ವಿಯ ಕಡೆಗೆ ಬರುವವೆಂಬ ಸಿದ್ಧಾಂತವು ಅಸ್ತಿತ್ವಕ್ಕೆ ಬಂದಿತು. ಈ ಸಿದ್ಧಾಂತವು ಈಗ ಸರ್ವಮಾನ್ಯವಾಗಿದೆ.

ಮುಸಲ್ಮಾನರ ಆಳಿಕೆಯಲ್ಲಿ ವಿದ್ಯೆಯ ಮಹತ್ವವು

ಮುಸಲ್ಮಾನರ ಆಳಿಕೆಯಂದರೆ ತೀರ ಬೇಜಂದಾಯಿಯೆಂತಲೂ, ಕಾಡುತನದ ಪರಮಾವಧಿಯೆಂತಲೂ, ಎಷ್ಟೋ ಜನರ ತಿಳುವಳಿಕೆಯಿರುತ್ತದೆ. ಆದರೆ ವಸ್ತುಸ್ಥಿತಿಯು ಇದಕ್ಕೆ ತೀರ ಭಿನ್ನವಾಗಿತ್ತು. ಬಾಬು ಕುಮಾರ ನರೇಂದ್ರನಾಥ ಎಂಬ ಬಿಬ್ಬ ಬಂಗಾಲೀ ಗೃಹಸ್ಥರು ಮೊಹಮ್ಮದನ

ರವ್ಯೂಹ್ಯ ಎಂಬ ಮಾಸ ಪತ್ರಿಕೆಯಲ್ಲಿ ಮುಸಲ್ಮಾನರ ಕಾಲದ ಶಿಕ್ಷಣದ ವೃತ್ತಾಂತವನ್ನು ಬರೆಯುತ್ತಿದ್ದಾರೆ. ಅದರಲ್ಲಿ ಖಿಲಜಿ ಮನೆತನದ ಬಗ್ಗೆ ಬರೆದ ಲೇಖನವನ್ನು ಓದಿದರೆ ಬೇರೆ ಕೆಲವು ಇತಿಹಾಸಕಾರರು ತೆಗೆದ ಮುಸಲ್ಮಾನೀ ರಾಜ್ಯದ ಚಿತ್ರವು ಸರ್ವಾಂಶದಿಂದ ನಿಜವಾಗಿಲ್ಲೆಂದು ವಾಚಕರ ಲಕ್ಷಕ್ಕೆ ಬರುವದು.

ಖಿಲಜಿ ಮನೆತನವು ಗುಲಾಮ ಮನೆತನದ ತರುವಾಯ ಪ್ರಾರಂಭವಾಯಿತು. ಇ. ಸ. ೧೨೯೫ ರಿಂದ ೧೩೨೦ ವರೆಗೆ ಈ ಮನೆತನದ ಅರಸರು ಹಿಂದುಸ್ತಾನದಲ್ಲಿ ಆಳಿದರು. ಜಲಾಲುದ್ದೀನ ಖಿಲಜಿ ಎಂಬವನು ಈ ಮನೆತನದ ಗಾದಿಯನ್ನು ಸ್ಥಾಪಿಸಿದನು. ಇವನಿಗೆ ವಾಂಛ್ಯಾಯದಲ್ಲಿ ಅಭಿರುಚಿಯು ವಿಶೇಷವಾಗಿತ್ತು. ಇವನ ದರಬಾರವು ವಿದ್ವಾಂಸರಿಗೆ ತವರ ಮನೆಯಾಗಿತ್ತು; ಬಾದಶಹನು ಅವರ ಪರಾಮರ್ಷವನ್ನು ಚನ್ನಾಗಿ ತೆಗೆದುಕೊಳ್ಳುತ್ತಿದ್ದನು. ಅವನ ಸ್ನೇಹಿತರು ಬುದ್ಧಿವಂತರೂ ಧೈರ್ಯಶಾಲಿಗಳೂ ಆಗಿದ್ದದ್ದಲ್ಲದೆ, ಬಿಳ್ಳೇ ಚತುರರೂ ವಿನೋದಿಗಳೂ ಆಗಿದ್ದರು. ಆ ಕಾಲದಲ್ಲಿ ಬಿಳ್ಳೇ ಪೆಸರಾದ ಗ್ರಂಥಕಾರರಿಗೆ ಜಲಾಲುದ್ದೀನನ ಖಾಸಗಿ ದರಬಾರಗಳಲ್ಲಿ ಪಾಜರ ಇರುವದಕ್ಕೆ ನಿರಾಂತಕವಾದ ಅಪ್ಪಣೆಯಿತ್ತು. ಅಮೀರ ಖುಶ್ರು, ತಾಜುದ್ದೀನ ಇಟಾಕೀ, ಖೋಜಾ ಹಸನ ಇವರೇ ಮೊದಲಾದ ಕಾವ್ಯ-ಇತಿಹಾಸ-ಶಾಸ್ತ್ರಗಳ ಪಂಡಿತರು ಜಲಾಲುದ್ದೀನನ ದರಬಾರದಲ್ಲಿದ್ದರು. ಈ ಸರಸ್ವತಿಯ ಭಕ್ತರು ಬಿತ್ತಟ್ಟಿಗೆ ಕೂಡಿದರೆಂದರೆ ಬುದ್ಧಿವಾದದ ಆಶ್ಚರ್ಯಕಾರಕವಾದ ಅನೇಕ ಪ್ರಸಂಗಗಳು ಕಿವಿಗೆ ಬೀಳುತ್ತಿದ್ದವು. ಅದೇ ಪ್ರಕಾರ ಅಮೀರಖಾನಾ ಹಾಗು ಹಮೀದರಾಜಾ ಎಂಬ ಸಂಗೀತಕಲಾಪ್ರವೀಣರು, ಮಹಮ್ಮದಶಹಾ, ಹತ್ಕೀಫತ್ತೇಶದಾ, ನಸೀರಖಾನ ಇವರೇ ಮೊದಲಾದ ವಾದನಪಟುಗಳ ಸಹಾಯದಿಂದ ಆ ವಿದ್ವತ್ಸಭೆಯ ಮನಸ್ಸನ್ನು ರಂಜನಗೊಳಿಸುತ್ತಿದ್ದರು. ಅಮೀರ ಖುಶ್ರು ಎಂಬವನು ಶ್ರೇಷ್ಠ ಕವಿಯಾಗಿದ್ದನು. ಪ್ರತಿಯೊಂದು ಪ್ರಸಂಗದಲ್ಲಿ ಅವನ ಪ್ರತಿಭಾಶಕ್ತಿಯ ನವೀನತ್ವವು ದೃಷ್ಟಿಗೋಚರವಾಗುತ್ತಿತ್ತು. ಆ ಬಗ್ಗೆ ಅವನಿಗೆ ವಾರಿತೋಷಕವೂ ತತ್ಕಾಲಕ್ಕೆ ದೊರೆಯುತ್ತಿತ್ತು. ದಿಲ್ಲಿಯೊಳಗಿನ ಬಾದಶಾಹೀ ಗ್ರಂಥಸಂಗ್ರಹಾಲಯದ ವ್ಯವಸ್ಥೆಯ ಕೆಲಸವು ಅಮೀರ ಖುಶ್ರು ಈತನ ಕಡೆಗೇ ಇತ್ತು. ಈ ಕೆಲಸವು ಬಿಳ್ಳೇ ಮಾನಾರ್ಹ

ವಾದದ್ದೂ ಬಹಳ ಪ್ರಾಮ್ಯವುಳ್ಳದ್ದೂ ಇತ್ತು. ಇದಲ್ಲದೆ ಜಲಾಲುದ್ದೀನನು ಅವೂರ ಖುಶ್ರು ಈ ಕವಿಗೆ ಸರದಾರನ ಪದವಿಯನ್ನು ಕೊಟ್ಟು ಅರಸುಮನೆತನದೊಳಗಿನ ವ್ಯಕ್ತಿಯಂತೆ ಅವನನ್ನು ನಡಿಸಿಕೊಳ್ಳುತ್ತಿದ್ದನು.

ಜಲಾಲುದ್ದೀನನ ತರುವಾಯ ಅಲ್ಲಾಉದ್ದೀನನು ಪಟ್ಟಕ್ಕೇರಿದನು. ಈ ರಾಜಶ್ರೀಯವರು ಸರಸ್ವತಿಯ ಕಡುಹಗೆಗಳಾಗಿದ್ದರು. ಇವನ ಕಾಲಕ್ಕೆ ದರಬಾರದೊಳಗಿನ ವಿದ್ವಾಂಸರು ಹೊಡೆದೋಡಿಸಲ್ಪಟ್ಟರು. ಅವರ ಸ್ಥಳವನ್ನು ಹಾಸ್ಯಗಾರರೂ ಕೇಳರೂ ಆಕ್ರಮಿಸಿದರು. ಆದರೆ ಮುಂದೆ ಸ್ವಲ್ಪ ದಿವಸಗಳಲ್ಲಿ ಬಾದಶಹನಿಗೆ ತಾನು ಅಕ್ಷರಶತ್ರುವಾಗಿದ್ದ ಬಗ್ಗೆ ಬಹಳ ದುಃಖವಾಗಹತ್ತಿತು. ಆಗ ಅವನು ಖಾಸಗಿ ಶಿಕ್ಷಕರನ್ನು ಇಟ್ಟುಕೊಂಡು ಅವರ ಬಳಿಯಲ್ಲಿ ಫಾರಸಿ ಭಾಷೆಯನ್ನು ಚೆನ್ನಾಗಿ ಅಭ್ಯಸನವಾಡಿ ಕೆಲವು ಪ್ರಸಿದ್ಧ ಗ್ರಂಥಕಾರರ ಪರಿಚಯವನ್ನು ಮಾಡಿಕೊಂಡನು. ಆದರಿಂದ ಅವನಿಗೆ ವಿದ್ವಾಂಸರ ವಾದವಿವಾದವನ್ನು ಕೇಳಿ ಆನಂದವಾಗಹತ್ತಿತು. ಕಾಜಿ ಖಾನಿ, ಕಾಜಿ ಮೋಫಸುದ್ದೀನ ಈ ಇಬ್ಬರು ಪಂಡಿತರ ಮೇಲೆ ಅವನ ಮನಸು ಸುಪ್ರಸನ್ನವಾಗಿತ್ತು. ಆದರೆ ಅಲ್ಲಾ ಉದ್ದೀನನು ಬಹಳ ಸಿಡುಕತನದ ಸ್ವಭಾವದವನಿದ್ದದರಿಂದ ಅವನ ದರಬಾರದಲ್ಲಿ ವಿದ್ವಾಂಸರ ಬುದ್ಧಿಪ್ರಭಾವವು ಉಕ್ಕೇರಿ ಹೊರಬೀಳುತ್ತಿರಲಿಲ್ಲ. ಇತ್ತಿತ್ತಲಾಗಿ ಅವನಿಗೆ ವಿದ್ಯಾದೇವಿಯ ಪರಿಚಯವು ವಿಶೇಷವಾದದ್ದರಿಂದ ಅವನ ಸಿಡುಕತನವು ಕಡಿಮೆಯಾಗಹತ್ತಿತ್ತು. ಆದರೂ ಅವನು ತನ್ನ ಪ್ರೀತಿಗೆ ಪಾತ್ರರಾದ ವಿದ್ವಾಂಸರನ್ನೇ ಮುಂದೆ ಕರೆದು ಅವರ ಮೇಲೆಯೇ ಪ್ರೇಮದ ಮಳೆಗರೆಯುತ್ತಿದ್ದನು. ಕೇವಲ ತಮ್ಮ ವಿದ್ವತ್ತಿನಿಂದ ಬಾದಶಹನ ಮೆಚ್ಚಿಕೆಯನ್ನು ಪಡೆದ ವಿದ್ವಾಂಸರು ಯಾರೂ ಇದ್ದಿಲ್ಲ. ತನ್ನ ಮನಸು ಒಪ್ಪದಾಗ ಕೊಟ್ಟ ಇನಾಮುಗಳನ್ನು ಜಪ್ತಮಾಡುವದು, ಕಾಣಿಕೆಗಳನ್ನು ಹಿಂತಿರಿಗಿಸುವದು, ಇವೇ ಮೊದಲಾದ ವಿಧಾನಗಳು ಅವನ ಕಾಲಕ್ಕೆ ನಡೆಯುತ್ತಿದ್ದವು. ಹೀಗಿದ್ದರೂ ಈ ಕಾಲಕ್ಕೆ ವಿದ್ಯಾಕಲಾಕೌಶಲ್ಯಗಳ ಉದಯವಾಯಿತೆಂದು ಫೇರಿಸ್ತನು ಬರೆಸಿಟ್ಟಿದ್ದಾನೆ. ಅವನು ಅನ್ನುವದೇನೆಂದರೆ:— ಈ ಕಾಲಕ್ಕೆ ಎಷ್ಟೋ ದೊಡ್ಡ ದೊಡ್ಡ ವಿಶ್ವ

ವಿದ್ಯಾಲಯಗಳೂ ಸುಂದರವಾದ ಮಸೀದಿಗಳೂ ಉತ್ಕೃಷ್ಟವಾದ ಮಂದಿರಗಳೂ ಮಾಯದಿಂದ ಉತ್ಪನ್ನವಾಗುವಂತೆ ನಿರ್ಮಾಣವಾದವು ಇದೇ ಕಾಲಕ್ಕೆ ದಿಲ್ಲಿಯಲ್ಲಿ ಇಡೀ ಜಗತ್ತಿನೊಳಗಿನ ವಿದ್ವಾಂಸರು ನೆರೆದಿದ್ದರು. ಬೇರೆ ಬೇರೆ ಶಾಸ್ತ್ರಗಳಲ್ಲಿ ಪಾರಂಗತರಾದ ನಾಲ್ವತ್ತೈದು ವಿದ್ವದ್ರತ್ನಗಳು ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರ ಕೆಲಸವನ್ನು ಮಾಡುತ್ತಿದ್ದವು." ಫೇರಿಸ್ತನ ಈ ವರ್ಣನೆಯಿಂದ ಅಲ್ಲಾಉದ್ದೀನನಂಥ ಬಾದಶಹನ ಕಾಲಕೀರ್ದಿಯಲ್ಲಿ ಸಹ ವಿದ್ವಾಂಸರಿಗೆ ಎಷ್ಟು ಸನ್ಮಾನವಿತ್ತೆಂಬದು ಗೊತ್ತಾಗುವದು. ಅವನ ಕಾಲದಲ್ಲಿ ರಾಜಾಶ್ರಯವು ಇಲ್ಲದಿದ್ದರೂ ನೂರಾರು ಮಂದಿ ಕವಿಗಳೂ, ತತ್ವಜ್ಞಾನಿಗಳೂ, ಶಾಸ್ತ್ರಜ್ಞರೂ ಉದಯವಾದರು. ದೊಡ್ಡ ದೊಡ್ಡ ಸರದಾರರಿಗೆ ತಮ್ಮ ಮನೆಯಲ್ಲಿ ದೊಡ್ಡ ದೊಡ್ಡ ಗ್ರಂಥಗಳ ಸಂಗ್ರಹ ಮಾಡಿಡುವ ವಿಷಯದಲ್ಲಿ ಅಭಿಮಾನವೆನಿಸಹತ್ತಿತು. ಈ ಕಾಲಕ್ಕೆ ದಿಲ್ಲಿಯಲ್ಲಿದ್ದ ಪಂಡಿತರನ್ನು ಸರಿಗಟ್ಟುವ ವಿದ್ವಾಂಸರು ಬುಖಾರಾ, ಸಮರಕಂದ, ಬಗದಾದ, ಕೇಯರೋ, ದಮಾಸ್ಕಸ ಈ ಪಟ್ಟಣಗಳಲ್ಲಿಯೂ ಇದ್ದಿಲ್ಲೆಂದು ಬಾರ್ನಿ ಎಂಬ ಇತಿಹಾಸಕಾರನು ಬರೆಯುತ್ತಾನೆ. ಈ ಇತಿಹಾಸಕಾರನು ಇತಿಹಾಸ, ಕಾಯಿದೆ, ತರ್ಕಶಾಸ್ತ್ರ, ಈಶ್ವರಜ್ಞಾನ, ವ್ಯಾಕರಣ, ಕುರಾಣ ಈ ಬೇರೆ ಬೇರೆ ವಿಷಯಗಳಲ್ಲಿ ಪ್ರವೀಣರಾದ ನಾಲ್ವತ್ತಾರು ಜನ ಮಹಾಪಂಡಿತರ ಪೆಸರುಗಳನ್ನು ಕೊಟ್ಟಿದ್ದಾನೆ. ಮತ್ತು ಅವರು ಬರೆದ ಅನೇಕ ಗ್ರಂಥಗಳನ್ನು ವರ್ಣಿಸಿರುತ್ತಾನೆ ಅಲ್ಲಾ ಉದ್ದೀನನ ಕಾಲಕ್ಕೆ ವರ್ತಿಸಿದ ಇನ್ನೊಂದು ಮಹತ್ವದ ಸಂಗತಿಯು ಯಾವದೆಂದರೆ, ಹಿಂದೂ-ಮುಸಲ್ಮಾನರ ಪರಸ್ಪರ ವಾಙ್ಮಯಜ್ಞಾನದಿಂದ ಅವೆರಡು ಜಾತಿಯ ಜನರಲ್ಲಿ ಸಂಬಂಧವು ದಿನದಿನಕ್ಕೆ ಪೆಚ್ಚಾಗಹತ್ತಿತು. ಅಲ್ಲಾ ಉದ್ದೀನನ ತರುವಾಯ ಮುಬಾರಕನು ಪಟ್ಟವೇರಿದನು. ಅವನು ಅತ್ಯಂತ ದುರ್ಗುಣಿಯೂ, ನೀಚನೂ ಆಗಿದ್ದನು. ಅದರಿಂದ ಅವನ ಆಳಿಕೆಯಲ್ಲಿ ವಿದ್ಯೆಗೆ ಉತ್ತೇಜನವು ದೊರೆಯಲಿಲ್ಲ. ಆದರೆ ಮುಂದೆ ಅವನು ಕಸಕೊಂಡ ಇನಾಮುಗಳೂ ಕಾಣಿಕೆಗಳೂ ತಿರುಗಿ ಕೊಡಿಸಲ್ಪಟ್ಟದರಿಂದ ಖಾಸಗಿ ರೀತಿಯಿಂದ ವಿದ್ಯಾಭಿವೃದ್ಧಿಗೆ ಬಹಳ ಸಹಾಯವಾಯಿತೆಂಬ ಮಾತನ್ನು ಲಕ್ಷದಲ್ಲಿಡತಕ್ಕದ್ದು.

(ಕಳೆದ ತಿಂಗಳ ಸಂಚಿಕೆಯ ೨೦ನೆಯ ಪುಟದಿಂದ ಮುಂದೆ ಸಾಗಿದ್ದು.)

೭೮. ಅನುಗುಣಾಲಂಕಾರವು ಲಕ್ಷಣ:— ಬೇರೊಂದರಿಂದ ತನ್ನ ಮೊದಲಿನ ಗುಣವು ಉತ್ಕರ್ಷವನ್ನು ಹೊಂದಿತೆಂದು ವರ್ಣಿಸಿದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ ॥ ಕಡೆಗಣ್ಣಿಂದತಿಸೀಲವ ।
ಪಡೆದಿರುವವು ನಿನ್ನ ಕವಿಯ ನಿಲೋತ್ಪಲಗಳ್ ॥

ಇಲ್ಲಿ ಕಡೆಗಣ್ಣಿನ ಸಾನ್ನಿಧ್ಯದಿಂದ ನೀಲೋತ್ಪಲಗಳ ಗುಣೋತ್ಕರ್ಷವು ವರ್ಣಿಸಲ್ಪಟ್ಟಿದೆ. ಮತ್ತೆ ಉದಾ:—

ಭಾಮಿನಿ ॥ ಮೊದಲೆ ಮಂಗವು ಮಧ್ಯವನು ಮೇ ।
ಲದು ಕುಡಿಯೆ ಬಳಿಕೊಂದು ವೃಷ್ಟಿಕ ।
ವದು ಕುಡಿಯೆ ತರುವಾಯ ಭೂತವು ಕೂಡೆ ಪ್ರೀತಿಯಲಿ ॥
ಅದನು ಸಿಡಿವವರಾರು ಸರಸಿಜ ;
ವದನೆ ಜಗದಲಿ ಜನರು ತಮ್ಮಯ ।
ಸದನದಲಿ ಬಹುತ್ವರದೆ ಸೇರುತ ಬದುಕಿ ಕೊಳ್ಳುವರು ॥

ಇಲ್ಲಿ ಮದ್ಯಾದಿಗಳಿಂದ ಮಂಗನ ಸ್ವಾಭಾವಿಕ ಗುಣೋತ್ಕರ್ಷವು ವರ್ಣಿಸಲ್ಪಟ್ಟಿದೆ. ಸಮಾಧಿಯಲ್ಲಿ ಪರಸಾನಿಧ್ಯದಿಂದ ಕಾರ್ಯೋತ್ಪತ್ತಿಗೆ ತೀವ್ರತ್ವವು ಬರುವದು. ಅದರೆ ಇಲ್ಲಿ ಪರಸಾನ್ನಿಧ್ಯದಿಂದ ಸ್ವಗುಣಕ್ಕೆ ಉತ್ಕರ್ಷವು ಪ್ರಾಪ್ತವಾಗುವದು.

---

೭೯. ವಿಲಿತಾಲಂಕಾರವು. ಲಕ್ಷಣ:— ಸ್ವಾಭಾವಿಕ ಗುಣದಿಂದಾಗಲಿ ಆಗಂತುಕ ಗುಣದಿಂದಾಗಲಿ ಒಂದು ವಸ್ತುವು ಮತ್ತೊಂದರ ಸ್ವರೂಪವನ್ನು ಮುಚ್ಚಿತೆಂದು ವರ್ಣಿಸಿದಲ್ಲಿ ಈ ಅಲಂಕಾರವಾಗುವದು. ಉದಾ—

ಕಂದ ॥ ತೋರದು ಲಾಕ್ಷಾರಸವದು ।
ನಾರಿಯೆ ತವಚರಣ ಯುಗದೆ ಸಹಜಾರುಣದಿಂ ॥

ಇಲ್ಲಿ ಪಾದಗಳ ಸ್ವಾಭಾವಿಕವಾದ ಅರುಣತೆಯಲ್ಲಿ ಲಾಕ್ಷಾರಸದ ವಿಲನವಾಗಿದೆ (ವಿಲ್ = ಮುಚ್ಚು) ಮತ್ತೆ ಉದಾ:—

ಭಾವಿನಿ ॥ ಮಲ್ಲಿಗೆಯ ವರ್ಣ್ಯಗಳ ರೇಶ್ಮೆಯ ।
ಶಲ್ಯವನು ಹೊದ್ದಿರುವ ಗಂಧವ ।
ನೆಲ್ಲಕಡೆಯಲಿ ತೊಡೆದ ಮದದಿಯರಾಗ ಜೆಡಗಿನಲಿ ॥
ವಲ್ಲಭರ ಸಂಕೇತಸ್ಥಾನಕೆ ।
ನಿಲ್ಲದಲೆ ಗಮಿಸುವದು ಕಾಣಿಸ ।
ಲಿಲ್ಲವಾ ಬೆಳದಿಂಗಳೊಳಗಲ್ಲಲ್ಲಿ ಸರ್ವರಿಗೆ ॥

ಇಲ್ಲಿ ಬೆಳದಿಂಗಳ ಸ್ವಾಭಾವಿಕವಾದ ಪ್ರಕಾಶದಲ್ಲಿ ಮಲ್ಲಿಗೆಯ ವರ್ಣ್ಯಾದಿಗಳ ವಿಲಯನವು ಉಕ್ತವಾಗಿದೆ. ಮತ್ತೆ ಉದಾ:—

ಭಾವಿನಿ ॥ ತರಲವಾಗಿಹ ಕುಡಿಯ ನೋಟವು ।
ತರಲವಕ್ರಾಕ್ಷರದ ಗಿರಗಳು ।
ವಿರಲ ಗತಿಗಳು ಸರಳವಾಗಿಹ ಮುಖದ ಕಾಂತಿಗಳು ॥
ಹೊರಗೆ ಸ್ವಾಭಾವಿಕರೆ ತೋರುವ ।
ವರಕುವರಿಯಲಿ ಹರಯವದು ಬಂ ।
ದಿರಲು ಮೈಯಲಿ ತಿಳಿಯದಿದು ಸಕಲರಿಗು ನಿಶ್ಚಯದೆ ॥

ಇಲ್ಲಿ ಕುಮಾರಿಯ ದೇಹದ ಸ್ವಾಭಾವಿಕವಾದ ಧರ್ಮದಲ್ಲಿ ತಾರುಣ್ಯ ಧರ್ಮಗಳ ವಿಲನವು ಉಕ್ತವಾಗಿದೆ. (ತರಲ = ಚಂಚಲ; ತರಲವಕ್ರಾಕ್ಷರದ ಗಿರಗಳು = ಸತ್ವರೋಚ್ಚಾರಣದಿಂದ ವಕ್ರೋಕ್ತಿಗರ್ಭವಾದ ವರ್ಣಗಳುಳ್ಳ ವಾಕ್ಯಗಳು)

---

೮೦. ಸಾಮಾನ್ಯಾಲಂಕಾರವು. ಲಕ್ಷಣ.— ಭಿನ್ನ ಸ್ವರೂಪದ ಭಾಸವಾಗುತ್ತಿದ್ದರೂ ವ್ಯಾವರ್ತಕ ಧರ್ಮವು ತೋರದಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ ॥ ನಾರಿಯೆ ಸಿನ್ನೆಯ ಮೊಗವಿದು ।
ನೀರೇಜಾಕರದೆ ಬೇರೆ ತಿಳಿಯದು ನಿಜದಿಂ ॥

ಇಲ್ಲಿ ವಚನೆ-ಪ್ರತಿವಚನಾದಿಗಳು ಮೊಗದ ವ್ಯಾವರ್ತಕ ಧರ್ಮಗಳಾಗಿರುವವು. ಇವು ಇಲ್ಲದಿರಲು ಸಾದೃಶ್ಯದಿಂದ ಮುಖವಿಶೇಷವು ಕಮಲಗಳಲ್ಲಿ "ನೀರೆ ತಿಳಿಯದೆಂಬದು ಸಹಜವೇ. ಮತ್ತೆ ಉದಾ:—

ಭಾಮಿನಿ ॥ ಆರಾವ-ಪ್ರತಿರಾವ ರಾಕ್ಷಸ।
ವಾರದಿಂ ದೂತದಲಿ ಕೂಡುತ।
ಘೋರಲಂಕೇಶ್ವರನ ಸಭೆಯನು ನೋಡಲಾಕ್ಷಣದೆ ॥
ಆ ರನ್ನಗಂಬದಲಿ ತೋರುವ।
ನೂರಾರು ಪ್ರತಿಬಿಂಬದಲಿ ಸುರ।
ವೈರಿ ರಾವಣನರಿಯಲಿಲ್ಲವು ವಾಲಿತನುಜನಿಗೆ ॥

ಇಲ್ಲಿ ಪ್ರತಿಧ್ವನಿ-ಪ್ರತಿಬಿಂಬಗಳಿಂದ ವ್ಯಾಪಿಸಿದ ಸಭಾಮಂದಿರದಲ್ಲಿ ಸಾದೃಶ್ಯದಿಂದ ರಾವಣನೆಂಬ ವ್ಯಕ್ತಿಯ ಬೋಧವು ಅಂಗದನಿಗೆ ಆಗಲಿಲ್ಲ ವೆಂದು ಹೇಳಿದೆ. ವ.ತ್ತೆ ಉದಾ:—

ಭಾಮಿನಿ ॥ ಜನಿವರಗಳನು ಧರಿಸುತಲಿ ಬಹು।
ಜನರು ಚಂಡಿಕೆಗಳನು ಬಿಡಿಸಲು।
ನಿನಗೆ ಕಲಿಯುಲಿ ತಿಳಿಯದೈ ಮುನಿವರನೆ ಬ್ರಾಹ್ಮಣರು ॥

ಇಲ್ಲಿ ಬಹು ಜನರಿಗೆ ಚಂಡಿಕೆ-ಜನಿವಾರಗಳು ಸಾಧಾರಣವಾಗಿರು ವದರಿಂದ ಬ್ರಾಹ್ಮಣರೆಂಬ ವ್ಯಕ್ತಿಗಳ ಬೋಧವಾಗದೆಂದು ಹೇಳಿದೆ.

---

೮೧. ಉನ್ಮೀಲಿತಾಲಂಕಾರವೆ. ಲಕ್ಷಣ:— ಸಾದೃಶ್ಯದಿಂದ ಭೇದವು ತೋರದೆ ಇರುವಾಗ್ಗೆ ಯಾವದಾದರೊಂದು ಕಾರಣದಿಂದ ಭೇದವು ತಿಳಿ ಯಲು ಅಲ್ಲಿ ಈ ಅಲಂಕಾರವಾಗುವದು. ಇದು ವಿೂಲಿತಕ್ಕೆ ಪ್ರತಿದ್ವಂದ್ವ ವಾಗಿದೆ. ಉದಾ:—

ಕಂದ ॥ ತಿಳಿಯುವರು ಶೀತಲತ್ವದೆ।
ಮುಳುಗದ ಹಿಮನಗವ ನೃಪನೆ ನಿನ್ನಯ ಜಸದೊಳ್ ॥

ಇಲ್ಲಿ ಅರಸನ ಕೀರ್ತಿಯು ಆಗಂತುಕ ಧರ್ಮದಿಂದ ಎಲ್ಲವೂ ಬಿಳು ಪಾಗಿರಲು ಶೀತಲತ್ವದಿಂದ ಹಿಮಗಿರಿಯನ್ನು ತಿಳಿಯುವರೆಂದು ಹೇಳಿದೆ. ಮತ್ತೆ ಉದಾ:—

ತ್ರಿಪದಿ ॥ ಬಿಳಿಯ ತಾವರೆಗಳಲಿ ಕೂತಿಹ ರಾಜಹಂಸ ಸಮೂಹವು।
ತಿಳಿವುದಳಿಗಳು ಹಂಸಗಳ ಪಕ್ಕಗಳು ಚಲಿಸಲು ಜನರಿಗೆ ॥

ಇಲ್ಲಿ ಅಳಿಗಳು ಹಾರುತ್ತಿರಲು ತಾವರೆಗಳಿಂತಲೂ ಪಕ್ಕಗಳು ಚಲಿ ಸುತ್ತಿರಲು ಹಂಸಗಳಿಂತಲೂ ನಿಶ್ಚಯಿಸುವದೆಂದು ಹೇಳಿದೆ. ತದ್ಗುಣ

ರೀತಿಯಿಂದಲೂ ಭೇದವು ತಿಳಿಯದಲ್ಲಿಯೂ ಉನ್ಮೀಲಿತವು ತೋರುವದು ಹೇಗಂದರೆ:—

ಭಾಮಿನಿ ॥ ಹರನ ನೃತ್ಯದ ಹಾಸಗಳ ಸಹ ।
ಚರಿಗಳಾಗಿಹ ನಿನ್ನ ಕೀರ್ತಿ ವಿ ।
ಸರದೆ ಧವಳಿತವಾಗೆ ಸಕಲವು ಜಾರ್ಜಭೂಮಿಪನೇ ॥
ಪರಮಪುರುಷನಾಭೀ ಕಮಲ ಪರಿಮಲ ।
ವಿರದಿರಲು ತಿಳಿಯಲ್ಕೆ ಬರುವದೆ ।
ಸಿರಿಯ ಕಾಮುಕನನ್ನು ಸುಲಭದೆ ಸಕಲ ಸುರಜನಕೆ ॥

ಇಲ್ಲಿ ಶ್ರೀ ಜಾರ್ಜ ರಾಜರ ಕೀರ್ತಿಯಿಂದ ಸಕಲವೂ ಧವಳತ್ವವನ್ನು ಹೊಂದಲು, ದೇವತೆಗಳು ವಿಷ್ಣುವನ್ನು ಅವನ ನಾಭಿಯಲ್ಲಿರುವ ಕಮಲದ ವಾಸನೆಯಿಂದ ಬೇರೆ ತಿಳಿದರೆಂದು ಹೇಳಿದೆ.

---

೮೨. ವಿಶೇಷಕಾಲಂಕಾರವು. ಲಕ್ಷಣ:— ಅನೇಕ ವ್ಯಕ್ತಿಗಳಲ್ಲಿ ಸದೃಶತ್ವವಿರುವದರಿಂದ ಬಂದು ಬೇರೆ ತೋರದೆ ಇರುವಾಗ್ಗೆ ಯಾವದಾದ ರೊಂದು ಅಕಸ್ಮಿಕವಾದ ಕಾರಣದಿಂದ ಅದು ಬೇರೆ ತೋರಲು ಅಲ್ಲಿ ಈ ಅಲಂಕಾರವಾಗುವದು. ಇದು ಸಾಮಾನ್ಯಾಲಂಕಾರಕ್ಕೆ ಪ್ರತಿದ್ವಂದ್ವವಾಗಿದೆ. ಉದಾ:—

ಕಂದ ॥ ನೀರಜವುಂ ಸ್ತ್ರೀಮುಖವುಂ ।
ತೋರಿದವ್ವೆ ಬೇರೆ ಬೇರೆ ಶಶಿಯುದಯದಲಿ ॥

ಇಲ್ಲಿ ಚಂದ್ರನು ಉದಯವಾಗಲು ಸಂಕೋಚವಾದದ್ದನ್ನು ಕಮಲವೆಂತಲೂ, ಸಂಕೋಚವಾಗದ್ದನ್ನು ಮುಖವೆಂತಲೂ ತಿಳಿದರೆಂದು ಹೇಳಿದೆ. ಮತ್ತೆ ಉದಾ:—

ಭಾಮಿನಿ ॥ ಇರದು ಭೇದವು ಕಾಕಪಿಕಗಳ ।
ವೆರಡು ಕರಿದಾಗಿರುವ ಕಾರಣ ।
ಬರಲು ಚೈತ್ರವು ಬೇರೆ ತೋರ್ಪುದು ಪಿಕವು ಕಾಕಗಳಿಂ ॥

ಅರ್ಥ— ಚೈತ್ರವಾಸದಲ್ಲಿ ಮಂಜುಳ ಸ್ವರವನ್ನು ಗೈಯ್ಯಲು ಕೋಗಿಲೆಯು ಕಾಗೆಗಳಿಂದ ಬೇರೆ ತೋರುವದೆಂದು ಹೇಳಿದೆ. ಮತ್ತೆ ಉದಾ:—

ತ್ರಿಪುಡೆ ॥ ವಾರಣಾಸಿಯ ವಾಸಜನರಿಗೆ ಶಿರದೆ ಶಂಕರಲಾಂಛನಂ ।
ತೋರೆ ಸಾಧಾರಣದೆ ಪಾರ್ಥನ ವ್ರಣವು ತಿಳಿಸುವದೀಶನಂ ॥

ಅರ್ಥ—ಕಾಶಿಯಲ್ಲಿ ವಾಸಿಸುವವರಿಗೆಲ್ಲರಿಗೂ ಸಾಧಾರಣವಾಗಿ ತೃತೀಯಲೋಚನಾದಿ ಶಿವನ ಚಿಹ್ನೆಗಳು ತೋರುತ್ತಿದ್ದರೂ ಅರ್ಜುನನ ಪ್ರಹಾರದಿಂದ ಹಣೆಯಲ್ಲುಂಟಾದ ಕಚ್ಚು ಪೂರ್ವಕಾಲದ ಶಿವನು ಇವನೇ ಎಂದು ತಿಳಿಸುವದು ಎಂದು ಹೇಳಿದೆ. ಇಲ್ಲಿ ಅಗಂತುಕ ಸಾಮ್ಯವು ಉಕ್ತವಾಗಿದೆ. (ಕಾಶಿಯಲ್ಲಿರುವವನು ಶಿವಸಾರೂಪ್ಯ ಹೊಂದುವದರಿಂದ ಅವನ ಚಿಹ್ನೆಗಳು ಇವರಿಗೆ ಪ್ರಾಪ್ತವಾಗುವವೆಂದು ಅದ್ವೈತ ಸಿದ್ಧಾಂತವು)

---

೮೩. ಗೂಢೋತ್ತರಾಲಂಕಾರವು. ಲಕ್ಷಣ:—ಕೇಳಿದವನಿಗೆ ಏನಾದರೊಂದು ಅಭಿಪ್ರಾಯವನ್ನು ಗುಪ್ತವಿಟ್ಟು ಉತ್ತರಕೊಡಲು, ಅಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ ॥ ಮುಂದಿರುವ ಗಿಡದ ಹತ್ತರ।
ಚಂದದೆ ಹೊಳೆಯನ್ನು ದಾಟಬಾರ್ಯೆ ನೀನು।

ಅರ್ಥ— ಹೊಳೆಯನ್ನು ಎಲ್ಲಿ ದಾಟಬೇಕು? ಎಂದು ಕೇಳಿದ ಪಥಿಕನಿಗೆ ಕಾಮುಕಳಾದ ಒಬ್ಬ ಸ್ತ್ರೀಯಳ ಉತ್ತರವಿದು. ಇಲ್ಲಿ 'ಆ ಗಿಡದ ಹತ್ತರ ಮನಸಿಗೆ ಬಂದಂತೆ ಕ್ರೀಡಿಸಲಿಕ್ಕೆ ಅನುಕೂಲವಿದೆ' ಎಂಬ ಅಭಿಪ್ರಾಯವು ಗೂಢವಾಗಿದೆ. ಮತ್ತೆ ಉದಾ:—

ಭಾಮಿನಿ ॥ ಕುಶಲವಾಕೆಗ ? ಜೀವಿಸುವಳ್ಳೈ।
ಕುಶಲವನು ಕೇಳುವೆನು ಪ್ರಿಯ ಜೀ।
ವಿಸುವಳೆಂದೆನು ನಿನಗೆ ಕೇಳಿಸಲಿಲ್ಲವೇನೀಗ? ॥
ಬಿಸಗೊಂಡ ಸಂಗತಿಯನುಳಿಸುತ।
ಲುಸಿರುವಿಯೆ ತಿರುತಿರುಗಿಯದನೇ ?।
ಶ್ವಸಿಪಳನು ಮೃತಪಟ್ಟಳೆಂದೇ ಉಸಿರಲ್ಯೈ ನಿನಗೆ ॥

ಅರ್ಥ—ಮೊದಲು ನಿಟ್ಟಾಗಿ ಹಿಂದುಗಡೆ ಪಶ್ಚಾತ್ತಾಪದಿಂದ ನಾಯಕನ ಕಡೆಗೆ ದೂತಿಯನ್ನು ಕಳುಹಿದಾಗ ಅವಳಿಗೆ ನಾಯಕನು— 'ಕುಶಲವಾಕೆಗ? ಎಂದು ಪ್ರಶ್ನವಾಡಲು, ದೂತಿಯು— 'ಜೀವಿಸುವಳ್ಳೈ' ಎಂದು ಉತ್ತರ ಕೊಟ್ಟಳು. ಜೀವಿಸುವವಳಿಗೆ ಕುಶಲವೆಲ್ಲಿಯದೆಂದು ತಿಳಿದು, ಮತ್ತೆ ನಾಯಕನು— 'ಕುಶಲವನು ಕೇಳುವೆನು' ಎಂದು ಪ್ರಶ್ನ

ಮಾಡಲು, ಮತ್ತೆ ದೂತಿಯು– ಪ್ರಿಯ, ಜೀವಿಸುವಳೆಂದೆನು, ಈಗ ಕೇಳಿಸಲಿಲ್ಲವೇನು? ಎಂದು ಉತ್ತರಕೊಟ್ಟಳು. ಮತ್ತೆ ನಾಯಕನು– 'ಬೆಸಗೊಂಡ..... .....ತಿರುತಿರುಗಿಯದನೆ, ಎಂದು ಪ್ರಶ್ನವಾಡಲು, ಮತ್ತೆ ದೂತಿಯು– 'ಶ್ವಸಿಪಳು, ಮೃತ.....ನಿನಗ?' ಎಂದು ಉತ್ತರ ಕೊಟ್ಟಳು. "ಮೃತಿಯನ್ನು ಹೊಂದಲು ಅವಳಿಗೆ ಸುಖವಾಗುವದು; ಶ್ವಾಸವಾಡುವದನ್ನು ನಾನು ಬರುವಾಗ ನೋಡಿರಲು, ಸತ್ತಳೆಂದು ಹೇಗೆ ಹೇಳಲಿ?' ಎಂಬ ಅಭಿಪ್ರಾಯವು ಉತ್ತರದಲ್ಲಿ ಗೂಢವಾಗಿದೆ.

---

೮೪. ಚಿತ್ರೋತ್ತರಾಲಂಕಾರವು. ಲಕ್ಷಣ:— ಪ್ರಶ್ನದೊಳಗೇ ಉತ್ತರವಿರಲು, ಇಲ್ಲವೆ ಅನೇಕ ಪ್ರಶ್ನಗಳಿಗೆ ಒಂದೇ ಉತ್ತರವಿರಲು, ಅಲ್ಲಿ ಈ ಅಲಂಕಾರವಾಗುವದು ಉದಾ:—

ಕಂದ ॥ ಪಾರ್ವರ ರಕ್ಷಿಪನಾವಂ ।
ಪಾರ್ವದದೇಂ ನೀರ ನಾಮವಜ್ಞಗೆ ಮೋಡಂ ॥

ಇಲ್ಲಿ 'ಆವಂ ಪಾರ್ವರ ರಕ್ಷಿಪನು?' ಎಂಬ ಪ್ರಶ್ನಕ್ಕೆ 'ಆವಂ ರಕ್ಷಿಪನು ಪಾರ್ವರ ರಕ್ಷಿಪನು' ಎಂಬ ಉತ್ತರವು ಪ್ರಶ್ನದೊಳಗೇ ಇರುವದು; 'ನೀರ ಪಾರ್ವದು ಅದು ಏಂ? ಅಜ್ಞಗೆ ನಾಮವು ಏಂ?' ಎಂಬೆರಡು ಪ್ರಶ್ನಗಳಿಗೆ 'ಮೋಡಂ' ಎಂಬದೊಂದೇ ಉತ್ತರವಿರುವದು. (ಆವಂ = ಯಾವನು, ಆಕಳನ್ನು; ಗಾಂಪನೊಳು ಮೇಘದೊಳು ಮೋಡ ಮೆಂದು ತೋಂಟದಾರ್ಯನ ನಿಘಂಟು.)

ಕಂದ ॥ ಮೃಗರಾಜನಾವನೆನಿಪನು? ।
ಮೃಗಗಳಿಗೇನಸ್ತ್ರರೂಪವೆನಿಪುದು ನಿರುತಂ ॥
ನಗಿಸುತಲೆ ಜಗವನೆಲ್ಲಂ ।
ಮಿಗೆಯಾವಂ ಗೆಲ್ವನವನೆ ಸಿಂಗಂ ನಿಜಭಂ ॥

ಅರ್ಥ– ೧. ಆವಂ ಮೃಗರಾಜನೆನಿಪನು? ೨. ಮೃಗಗಳಿಗೆ ಅಸ್ತ್ರರೂಪವೆನಿಪುದು ಏಂ? ೩. ನಗಿಸುತಲೆ ಎಲ್ಲ ಜಗವನು ಆವಂ ಗೆಲ್ವನು? ಎಂಬ ಮೂರು ಪ್ರಶ್ನಗಳಿಗೂ 'ಸಿಂಗ" ಎಂಬದೊಂದೇ ಉತ್ತರವಿರುವದು. (ಶೃಂಗ ಕೇಸರಿಗಳೊಳ್ತಡನನಲ್ಲರಿಗೆ ಸಿಂಗಮದೆಂದು ತೋಂಟದಾರ್ಯನ ನಿಘಂಟು.)

ಭಾಮಿನಿ ॥ ಏನು ವಿಷಮವು ದೈವಗತಿಯೆದು ।
ಏನು ಸುಕಲತ್ರವದು ಸೌಖ್ಯವು ।
ಏನು ದುಃಖವು ಖಳರ ಸಹವಾಸವದು ಸುಜನರಿಗೆ ॥

ಇದು ಒಬ್ಬನ ಉದ್ಗಾರವು. ಇಲ್ಲಿ ಅವನು ಆಡಿದ ವಾಕ್ಯದೊಳಗೇ ಪ್ರಶ್ನ-ಉತ್ತರಗಳೆರಡೂ ಇರುವವು. ಹೇಗಂದರೆ:— "ಏನು ವಿಷಮವು?" ಎಂಬ ಪ್ರಶ್ನಕ್ಕೆ 'ದೈವಗತಿಯದು' ಎಂಬದು ಉತ್ತರವು. 'ಏನು ಸೌಖ್ಯವು?' ಎಂಬ ಪ್ರಶ್ನಕ್ಕೆ 'ಸುಕಲತ್ರವದು' ಎಂಬದು ಉತ್ತರವು. 'ಏನು ದುಃಖವು?' ಎಂಬದು ಪ್ರಶ್ನವು. 'ಸುಜನರಿಗೆ ಖಳರ ಸಹವಾಸವು' ಎಂಬದು ಉತ್ತರವು. (ದೈವಗತಿಯು ಎಂಥ ವಿಚಿತ್ರವಾದದ್ದು? ಸುಕಲತ್ರವು ಎಂಥ ಸೌಖ್ಯಕರವು? ಖಳರ ಸಹವಾಸವು ಎಂಥ ದುಃಖಕರವಾದದ್ದು? ಮೊದಲಾದವು ಬಾಹ್ಯಾರ್ಥಗಳು). ಮತ್ತೆ ಉದಾ:—

ಭಾಮಿನಿ ॥ ನಿಮ್ಮ ಕುದುರೆಯದೆಲ್ಲಿ ಪೋಗಿದೆ?
ಸುಮ್ಮನೆಮ್ಮಯ ತಕ್ಕಡಿಯ ಕೊಡು ।
ತಪ್ಪುನೀಕೇಳಯ್ಯ ದಂಡಿಗೆ ಪೋಗಿರುವದೀಗ ॥

ಇಲ್ಲಿ "ಕುದುರೆಯು ಎಲ್ಲಿ ಪೋಗಿದೆ?" "ನಮ್ಮ ತಕ್ಕಡಿಯ ಕೊಡು" ಎಂಬ ಭಿನ್ನ ವ್ಯಕ್ತಿಗಳ ಪ್ರಶ್ನಗಳಿಗೆ 'ದಂಡಿಗೆ ಪೋಗಿದೆ, ಎಂಬದೊಂದೇ ಉತ್ತರವಿರುವದು. (ದಂಡಿಗೆ = ಸೈನ್ಯಕ್ಕೆ; ತಕ್ಕಡಿಯ ಅವಯವ). ಮತ್ತೆ ಉದಾ:—

ಭಾಮಿನಿ ॥ ಏತರಿಂ ರೊಟ್ಟಿಗಳು ಕೆಡುವವು? ।
ಏತರಿಂ ಕುದುರೆಯದು ಕೆಡುವದು? ।
ಏತರಿಂ ವೀಳ್ಯಗಳು ಕೆಡುವವು? ಪೇಳು, ತಿರುವದಲೆ ॥

ಇಲ್ಲಿ ಮೂರು ಪ್ರಶ್ನಗಳಿಗೆ 'ತಿರುವದಲೆ' ಎಂಬದೊಂದೇ ಉತ್ತರವಾಗಿರುವದು. (ತಿರುವದಲೆ = ಹಂಚಿನ ಮೇಲೆ ತಿರುವಿಹಾಕದಿದ್ದರೆ; ತಿರುಗಾಡಿಸಿಕೊಂಡು ಬರದಿದ್ದರೆ; ಮೇಲೆ ಮೇಲೆ ಬರಸಿ ಇಡದಿದ್ದರೆ). ಮತ್ತೆ ಉದಾ:—

ತ್ರಿಪುಡೆ ॥ ಎಲ್ಲಿ ಕೂಡದೆ ಕೇಳಿಕೊಳ್ಳುತ ಬಂದೆ ನಾನಿಮ್ಮಲ್ಲಿಗೆ ॥
ಇಲ್ಲಿ ಕುಡಿಯುವೆ ನೀರುಗಳ ನೀನಾಗಿ ಕರದಲಿ ಹಣಿಸಿಲೌ ॥

ಅರ್ಥ– ಒಂದು ಊರಿನಲ್ಲಿ ಎಲ್ಲಿ, ಮುಲ್ಲಿ, ನಾಗಿ ಎಂಬ ಮೂವರು ಸ್ತ್ರೀಯರು ನೀರು ತುಂಬಿಕೊಳ್ಳುತ್ತಿದ್ದರು. ಅವರಿಗೆ ಒಬ್ಬ ಪಾದಿಕಾರನು ನೀರು ಹಣಿಸಿರೆಂದು ಕೇಳಲು, 'ನೀನು ನಮ್ಮ ಮೂವರ ಹೆಸರು ಬರುವಂತೆ ನಮ್ಮನ್ನು ಕೇಳು," ಎಂದು ಅವರು ನುಡಿದರು. ಅವರಿಗೆ ಪಥಿಕನು ಅಡಿದ ವಾಕ್ಯವು ಮೇಲಿನ ಪದ್ಯದಲ್ಲಿ ಹೇಳಿದೆ. ಕೇಳಿಸಿಕೊಳ್ಳಲ್ಪಟ್ಟ ಮೂವರ ಹೆಸರುಗಳೂ ಪಥಿಕನ ವಾಕ್ಯದಲ್ಲಿ ನಿಬದ್ಧವಾಗಿದೆ.

೮೫. ಸೂಕ್ಷ್ಮಾಲಂಕಾರವು. ಲಕ್ಷಣ:— ತನ್ನ ಅಭಿಪ್ರಾಯವು ಗೊತ್ತಿದ್ದವನಿಗೆ ಮಾತ್ರ ತಿಳಿಯುವಂತೆ ಸಾಭಿಪ್ರಾಯದ ಚೇಷ್ಟೆಗಳನ್ನು ಮಾಡಲು, ಅಲ್ಲಿ ಈ ಅಲಂಕಾರವಾಗುವದು. ಉದಾ:—

ಕಂದ ॥ ಅಚ್ಚಿಯೊಳವನಂ ನೋಡುತ ।
ಮುಚ್ಚಿಗಳ್ಕೈ ಕೇಶದಿಂದೆ ಚೂಡಾಮಣಿಯಂ ॥

ಕಾಮುಕನ ಮುಖವನ್ನು ನೋಡಿದ ಕೂಡಲೆ ಸಂಕೇತಕಾಲವು ನೆನಪಿಗೆ ಬರಲು ಅವಳು ಕಾಮುಕನಿಗೆ ಮಾಡಿದ ಚೇಷ್ಟೆಯಿದು. ಇಲ್ಲಿ 'ಸೂರ್ಯನು ಮುಳುಗಿದ ಕೂಡಲೆ ಬರಬೇಕು, ಎಂಬ ಅಭಿಪ್ರಾಯವು ಗೂಢವಾಗಿದೆ. ಮತ್ತೆ ಉದಾ:—

ಭಾಮಿನಿ ॥ ಕಂಕಿಸುತ ನಿಂತಿರುವ ವಿಟನಿಗೆ ।
ಸಂಕೇತವರುಹಿದಳು ಲೀಲಾ ।
ಪಂಕೇಜನನು ಮುಚ್ಚಿ ಬಿಂಕದ ಕೊಂಕು ದೃಷ್ಟಿಯಲ ॥

ಇಲ್ಲಿ 'ಕಮಲಗಳು ಮುಚ್ಚುವ ಸಮಯಕ್ಕೆ' ಅಂದರೆ ಸೂರ್ಯಾಸ್ತವಾದ ಮೇಲೆ ಬರಬೇಕು, ಎಂಬ ಅಭಿಪ್ರಾಯವು ಗೂಢವಾಗಿದೆ.

(ಮುಂದೆ ಸಾಗುವದು.)

ಉಪೇಂದ್ರ ಶರ್ಮಾ ತೋಳಮಟ್ಟಿ,

ವಿದ್ಯಾಖ್ಯಾತಿಯ ನೋಟೀಸು.

ತಾ॥ ೨೧ನೇ ನವಂಬರ ೧೯೦೭ನೇ ಇಸವಿಯ ಮುಂಬಯಿ ಸರಕಾರೀ ಗ್ಯಾಝೆಟಿನ ೧೫ನೇ ಭಾಗದ ೧೪೯೪ ರಿಂದ ೧೪೯೭ ರ ವರೆಗಿನ ಪುಟಗಳಲ್ಲಿ ಮುದ್ರಿಸಿದ ವ್ಹನ್ಯಾಕ್ಯುಲರ ಫಾಯನಲ್ (ಅಂದರೆ ದೇಶಭಾ

ಷೆಯ ಕಡೆಯ) ಪರೀಕ್ಷೆಯ ನಿಯಮಗಳನ್ನೂ ಅಭ್ಯಾಸಕ್ರಮವನ್ನೂ ಒಳಕೊಂಡ ಸರಕಾರದ ತಾರೀಖು ೧೨ ನೇ ನವ್ಹಂಬರ ೧೯೦೭ ನೇ ಇಸವಿಯ ಸರಕಾರೀ ನೋಟೀಸ ನಂಬರ ೧೯೪೫ ನೇದರ ಕೊನೆಯಲ್ಲಿ ಕೊಟ್ಟ "ಅ" ಮತ್ತು "ಬ" ಪುರವಣಿಗಳಲ್ಲಿ, ತಾರೀಖು ೨೩ ನೇ ದಿಶಂಬರ ೧೯೧೩ ನೇ ಇಸವಿಯ ಸರಕಾರದ ವಿದ್ಯಾಖಾತೆಯ ನೋಟೀಸ ನಂ. ೩೮೩೪ ನೇದರ ಮೇರೆಗೆ ಕೆಳಗೆ ಬರೆದ ತಿದ್ದುಪಡಿಗಳು ಮಾಡಲ್ಪಟ್ಟಿರುತ್ತವೆ:—

"ಅ" ಪುರವಣಿ

೧. ಈ ಪರೀಕ್ಷೆಯ ಅರ್ಜಿಯ ನಮೂನೆಯು ನಾಲ್ಕು ದೇಶಭಾಷೆಗಳಲ್ಲಿಯೂ ಊರ್ದೂದಲ್ಲಿಯೂ ಮುದ್ರಿಸಲ್ಪಡುವದು.

"ಬ" ಪುರವಣಿ.

೨. ಈ ಪರೀಕ್ಷೆಯ ಎಲ್ಲ ವಿಷಯಗಳ ಪರೀಕ್ಷೆಯು ಮರಾಠಿ, ಗುಜರಾಥಿ, ಕನ್ನಡ, ಸಿಂಧಿ, ಇಲ್ಲವೆ ಊರ್ದು ಭಾಷೆಯ ದ್ವಾರಾ ತೆಗದುಕೊಳ್ಳಲ್ಪಡುವದು.

೩. ಈ ಪರೀಕ್ಷೆಯ ೨ನೆಯ ಸದರಿನಲ್ಲಿ ಬರುವ ಊರ್ದು ಭಾಷಾ ವಿಷಯದ ಪುಸ್ತಕಗಳು ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬರವರಿಂದ ಕಾಲಕಾಲಕ್ಕೆ ನೇಮಿಸಲ್ಪಡುವವು.

೪. ಮೇಲೆ ಕೊಟ್ಟಂಥ ತಿದ್ದುಪಡಿ ಮಾಡಲ್ಪಟ್ಟ ನಿಯಮಗಳಿಗನುಸಾರವಾಗಿ ಊರ್ದು ಭಾಷೆಯ ದ್ವಾರಾ ಪರೀಕ್ಷಿಸಲ್ಪಡಲಿಚ್ಛಿಸುವ ಉಮೇದವಾರರು ಸನ್ ೧೯೧೫ ನೆ ಇಸವಿಯಿಂದ ಎಲ್ಲ ವಿಷಯಗಳಲ್ಲಿ ಊರ್ದು ಭಾಷೆಯಲ್ಲಿಯೇ ಪರೀಕ್ಷಿಸಲ್ಪಡುವರು. ೧೯೧೫ ನೇ ಇಸವಿಯ ಪರೀಕ್ಷೆಗೆ ಕೂಡ್ರುವ ಇಂಥ ಉಮೇದವಾರರ ಬಗ್ಗೆ ಊರ್ದು ಭಾಷೆಯ ಪುಸ್ತಕಗಳು ೧೯೧೫ ನೇ ಇಸವಿಯ ಫೇಬ್ರುವರಿ ತಿಂಗಳ ಕನ್ನಡ ಕಾಲಾಪತ್ರಕದ ೩೧ ನೆಯ ಪುಟದಲ್ಲಿ ೨ನೆಯ ಸದರಿಗೆ ಪ್ರತಿಯಾಗಿ ಪ್ರಸಿದ್ಧಿಸಲ್ಪಟ್ಟ ಊರ್ದು ಭಾಷೆಯ ಪುಸ್ತಕಗಳೇ ಇರುವವು.

೫. ಈಗಿನವರೆಗೆ ನಡೆದು ಬಂದಂತೆ ೨ನೆಯ ಸದರಿನಲ್ಲಿ ಮಾತ್ರ ಊರ್ದು ಭಾಷೆಯಲ್ಲಿ ಪರೀಕ್ಷಿಸಲಟ್ಟು, ಉಳಿದ ಎಲ್ಲ ವಿಷಯಗಳಲ್ಲಿ ದೇಶ ಭಾಷೆಯಿಂದಲೇ ಪರೀಕ್ಷಿಸಲ್ಪಡಬೇಕೆಂಬ ಉಮೇದವಾರರು ೧೯೧೫ ನೇ

ಇಸವಿಯ ಪೂರ್ತಿ ಮಾತ್ರ ಆ ಪ್ರಕಾರ ಪರೀಕ್ಷಿಸಲ್ಪಡುವರು. ೧೯೧೫ ನೇ ಇಸವಿಯಿಂದ ಉರ್ದೂ ಭಾಷಾವಿಷಯವನ್ನು ತೆಗೆದುಕೊಳ್ಳುವ ಎಲ್ಲ ಉಮೇದವಾರರು ಎಲ್ಲ ವಿಷಯಗಳಲ್ಲಿಯೂ ಊರ್ದುಭಾಷೆಯಿಂದಲೇ ಪರೀಕ್ಷಿಸಲ್ಪಡುವರು, ಮತ್ತು ಈ ವರೆಗಿನಂತೆ ೨ನೇ ಸದರಿಗೆ ಪ್ರತಿಯಾಗಿ ನೇಮಿಸಲ್ಪಡುವ ಉರ್ದುಭಾಷಾ ವಿಷಯದ ಅಭ್ಯಾಸಕ್ರಮವು ನಿಲ್ಲಿಸಲ್ಪಡುವದು.

೬. ಸನ್ ೧೯೧೫ ನೇ ಇಸವಿಯ ಪರೀಕ್ಷೆಗೆ ಊರ್ದು ಭಾಷಾವಿಷಯವನ್ನು ತೆಗೆದುಕೊಳ್ಳುವ ಉಮೇದವಾರರು ತಮ್ಮ ಅರ್ಜಿಯಲ್ಲಿ ತಾವು ಎಲ್ಲ ವಿಷಯಗಳಲ್ಲಿ ಊರ್ದು ಭಾಷೆಯಿಂದಲೇ ಪರೀಕ್ಷಿಸಲ್ಪಡಲಪೇಕ್ಷಿಸುವರೋ, ಅಥವಾ ೨ನೆಯ ಸದರಿನಲ್ಲಿ ಮಾತ್ರ ಊರ್ದು ಭಾಷೆಯಲ್ಲಿ ಪರೀಕ್ಷಿಸಲ್ಪಡಲಪೇಕ್ಷಿಸುವರೋ ಎಂಬದನ್ನು ಸ್ಪಷ್ಟವಾಗಿ ಬರೆಯಬೇಕು.

ಧಾರವಾಡ, ಎಜ್ಯುಕೇಶನಲ್ ಇನ್ಸಪೇಕ್ಟರರವರ ಆಫೀಸು. ತಾ॥ ೧೪-೫-೧೯೧೪

(Sd) P. Lory,
ಎಜ್ಯುಕೇಶನಲ್ ಇನ್ಸಪೆಕ್ಟರ
ದಕ್ಷಿಣಭಾಗ.

ಪತ್ರವ್ಯವಹಾರವು.

ವಾದೇ ವಾದೇ ಜಾಯತೇ ತತ್ವಬೋಧಃ

ಮಾ॥ ರಾ. ರಾ. ಕನ್ನಡ ಶಾಲಾಪತ್ರಿಕೆಯ ಎಡಿಟರ ಮಹಾಶಯರ ಸನ್ನಿಧಿಗೆ— ಸಾ. ನಮಸ್ಕಾರಗಳು ವಿನಂತಿ ವಿಶೇಷ:— ಯತಿಯ ವಿಷಯವಾಗಿ ಮಿ. ಚಿನ್ಮುಲಗಿಯವರು ಇದೇ ತಿಂಗಳ ಶಾಲಾಪತ್ರಿಕೆಯಲ್ಲಿ ಪ್ರಸಿದ್ಧಿಸಿದ ಲೇಖನವನ್ನು ನೋಡಿದೆನು. ಕೇಶಿರಾಜಕವಿ, ಕಾಲೇಜಿನ ಪಂಡಿತರು, ಮೈಸೂರಸರಣಿ ಮುಂತಾದವುಗಳನ್ನು ಮುಂದೆ ಮಾಡಿ, ಅವರು ನನ್ನ ಹಿಂದಿನ ಲೇಖನದ ಖಂಡನೆಯನ್ನು ಯಥಾಮತಿ ಮಾಡಲು ಯತ್ನಿಯಿಸಿರುವರು. ಆದರೆ ಅದರಿಂದ ನಿಜವಾಗಿ ಅದರ ಖಂಡನೆವಾಗದೆ ಮತ್ತಿಷ್ಟು ಮಂಡನವೇ ಆಯಿತೆಂದು ನಾನು ಎಣಿಸುತ್ತೇನೆ. ಆದ ಕಾರಣ ಈ ಲೇಖನವನ್ನೆಲ್ಲ ತಾವು ಒಮ್ಮೆ ಶಾಂತ ಚಿತ್ತದಿಂದ ಓದಿ ನೋಡಿ, ಸರಿ ಕಂಡರೆ ಮುಂದಣಂಕದಲ್ಲಿ ಹುಲುಬಿಸಬೇಕೆಂದು ವಿನ್ನಯಿಸುವೆನು.

೧. ಮೊದಲಿನಿಂದ ಕವಿಗಳು ಯತಿಯ ವಿಲಂಘನವನ್ನು ಮಾಡುತ್ತ ಬಂದಿರುವದನ್ನು ನೋಡಿಯೇ, ಕೇಶಿರಾಜನು ದರ್ಪಣದಲ್ಲಿ ಅದನ್ನು ಪರಿಗ್ರಹಿಸಿದನೆಂಬದು ನಿರ್ವಿವಾದವಾದ ಮಾತಷ್ಟೇ. ನಾನಾದರೂ ಆರಂಭದ ಲೇಖನದಲ್ಲಿ, ಮಹನೀಯರೂ ಪೂಜ್ಯರೂ ಆದ ಕವಿತ್ರಯರಿಂದನ ಕುಂದನೆಣಿಸಬಾರದೆಂತಲೇ ಪ್ರತಿಪಾದಿಸಿರುವೆನು. ಈಗ ಪುನಃ ಅದನ್ನೇ ಕೇಶಿರಾಜನ ಮಧ್ಯಸ್ಥಿಕೆಯಿಂದ ಮತ್ತೊಮ್ಮೆ ಹೇಳಿನೋಡಬೇಕೆಂದು ಆಲೋಚಿಸಿರುವೆನು. ಆದರೆ ಎಲ್ಲರ ಅಂತಃಕರಣದಲ್ಲಿ ಹೊಳೆದರೆ ಮಾತ್ರ ಅದು ಸಫಲವೆನಿಸುವದು.

೨. ಯತಿಯ ವಿಲಂಘನವೆಂದರೆ, ಕನ್ನಡದ ಪದ್ಯರಚನಾಕ್ರಮದೊಳಗೆ, ಯತಿಯ ಸ್ಥಳದಲ್ಲಿ (ಸಂಸ್ಕೃತದಂತೆ) ವಿಭಕ್ತಿಯು ಅವಶ್ಯವಾಗಿ ಇರಲೇ ಬೇಕೆಂಬ ನಿರ್ಬಂಧವಿಲ್ಲೆಂದರಿಯಬೇಕೇ ಹೊರ್ತು, ಸ್ವೇಚ್ಛೆಯಿಂದ ಮನಬಂದಲ್ಲಿ ವಿಶ್ರಮಿಸಬೇಕೆಂದು ಕಲ್ಪಿಸಲಾಗದು. ಅನ್ನುವಾಗ ವಿಭಕ್ತಿಯಿದ್ದಲ್ಲಿಯೇ ವಿಶ್ರಮಿಸುವೆವೆಂದು ಆಗ್ರಹ ತೊಟ್ಟರೆ, ಕವಿಗಳ ದೋಷವನ್ನು ಬುದ್ಧ್ಯಾ ಹೊರಗೆಡವಿದಂತೆ ಆಗುವಷ್ಟಲ್ಲದೆ "ಕುರುವಿನ ಮೇಲೆ ಬರೆಗುಡವೆಳೆದಂತೆ" ಮಹದನರ್ಥಕ್ಕೆ ಕಾರಣವೂ ಆಗುವದು. ಯಾಕಂದರೆ, ಕನ್ನಡ ಪದ್ಯಗಳ ವಿಶಿಷ್ಟಲಕ್ಷಣವಾಗಿರುವ ಕಷ್ಟತರ ಪ್ರಾಸವಿನ್ಯಾಸವನ್ನು ತುಚ್ಛೀಕರಿಸಲಿಕ್ಕೆಂದು, ಕವಿಗಳಿಗೆ ರಚನಾಕ್ರಮದಿಂದೆಳೆದು ಯತಿಯ ವಿಭಕ್ತಿಯ ಆಹುತಿಯನ್ನು ಹಾಕಬೇಕಾಯಿತು. ಹೀಗಿದ್ದು ವಿಭಕ್ತಿಯಿದ್ದಲ್ಲಿಯೇ ವಿಶ್ರಮಿಸುವೆವೆಂದು ನಾವು ಹಟ ಹಿಡಿದು ಪಠಿಸತೊಡಗಿದರೆ, ಚರಣಗಳ ಕಡೆಗಾಗುವ ಅಲಕ್ಷವು ದುರ್ನಿವಾರವಾಗುವದು; ಮತ್ತು ಸ್ವರ ತೆಗೆದು ಪೌರಾಣಿಕರು ವಚನಗಳನ್ನು ಓದಿದಂತೆ ತಾಳದೊಂದಿಗೆ ಗುಣಗುಟ್ಟಬೇಕಾಗುವದು. ಹೀಗಾದರೆ ಗದ್ಯ-ಪದ್ಯಗಳಲ್ಲಿ ಭೇದವೇನು ಉಳಿಯಿತು? ಇದೇ ಪದ್ಧತಿಯು ಮುಂದೆ ಸಾರ್ವತ್ರಿಕವಾದರೆ, ಕಾಲಾಂತರದಿಂದ ಮತ್ತೊಬ್ಬ ಕೇಶಿರಾಜನು ಉದಯವಾಗಿ "ಪದ(=ಚರಣ) ವಿಲಂಘನದಿಂದರಿದಲ್ತೆ ಕನ್ನಡಂ" ಎಂದು ಅಂಗೀಕರಿಸುವ ಅವಶ್ಯಕತೆಯು ಬೀಳದೆ ಇರಲಾರದು. ಇಂತು ನಾವು ಪ್ರಾಚೀನರ ಮೇಲೆ ಪೌರುಷ ಮಾಡಿದ್ದನ್ನು ಕಂಡು, "ಬಾಪಸೇ ಬೇಟಾ ಸವಾಯಿ" ಎಂಬ ನ್ಯಾಯವಿಡಿದು, ಮುಂದಿನ ಪೀಳಿಗೆಯವರು ಗಣವ್ಯತ್ಯಾಸವನ್ನು

ಸಹ ರಚನಾಕ್ರಮದಲ್ಲಿಯೇ ಯಾಕೆ ಮಾಡಬಾರದು? ಹೀಗಾಗಿ ಬರಬರುತ್ತ ಪದ್ಯದ ಮೂಲ ಸ್ವರೂಪವೇ ಮಾಯವಾಗಿ "ಮನುಷ್ಯನನ್ನು ಮಾಡುತ್ತಿರಲು, ಮರ್ಕಟೋತ್ಪತ್ತಿಯಾದಂತೆ" ವಿಚಿತ್ರವಾದ ಸ್ವರೂಪವು ಪ್ರಾಪ್ತವಾದರೆ, ಅದರಲ್ಲೇನೂ ಆಶ್ಚರ್ಯವಿಲ್ಲ.

೩. ಇದರಲ್ಲಿ ಮತ್ತು ಒಂದು ದೋಷವು ಹೊತ್ತು ಮೆರೆಯುವದು. ಪದ್ಯಗಳನ್ನು ಯತಿಗನುಸಾರವಾಗಿ ವಿಶ್ರಮಿಸಿ ಅಂದರೆ, ಆವುಗಳಿಗೆ ಒಂದೊಂದು ವಿಶಿಷ್ಟವಾದ ಹಕ್ಕಿನ ದಾಟಿಯುಂಟಾಗುತ್ತದೆ. ಈ ದಾಟಿಗಳು ಗಾಯನಕಲಾಭಿಜ್ಞರಿಗೂ ಸಹ ಸುಖಕರವಾಗಿರುವವೆಂದು, ತಮ್ಮ ಪತ್ರದ ಕೊನೆಯಲ್ಲಿ ಮಿ. ಚಿಮ್ಮಲಗಿಯವರಾದರೂ ಒಡಂಬಟ್ಟಿರುವರು. ನಾವು ಉಚ್ಛೃಂಖಲರಾಗಿ ವಿಶ್ರಮಿಸ ತೊಡಗಿದರೆ, ಈ ಸ್ವಾಭಾವಿಕ ದಾಟಿಗಳೆಲ್ಲ ನಷ್ಟವಾಗುವವಲ್ಲದೆ, ಪಾಠಕರಿಗ ವಿನಾಕಾರಣ ತೊಂದರೆಯುಂಟಾಗುವದು. ಈ ವಿಧವಾಗಿ ಆ ವೃತ್ತಗಳನ್ನು ಗತಿಗೆಡಿಸಿ ಪೀಡೆ ಮಾಡಿದ್ದಕ್ಕೆ ನಮಗೆ ಅವುಗಳ ಶಾಪವೂ ಪಾಪವೂ ಬರಲಾರವೇನು?

೪. ಮೇಲಿನ ವಿವರಣದಿಂದ ಕನ್ನಡದಲ್ಲಿ ಯತಿಗೆ ರಚನಾಕ್ರಮದಲ್ಲಿ ಹಕ್ಕಿ* ಲ್ಲದಿದ್ದರೂ, ಪಠನಕ್ರಮದಲ್ಲಿ ಅನಿವಾರ್ಯವಾಗಿ ಉಂಟೆಂಬದು ತಾನೇ ವ್ಯಕ್ತವಾಗುವದು. ಯತ್ಯುಲ್ಲಂಘನವಿದ್ದಲ್ಲಿ ವಿಶ್ರಮಿಸಿದರೆ, ಕರ್ಣಕಠೋರವೂ, ಅತಿಯಾದ ಅಪಸ್ವರವೂ ಉಂಟಾಗುವವೆಂದು ಮಿ. ಚಿಮ್ಮಲಗಿಯವರ ಮತ್ತೊಂದು ಆಕ್ಷೇಪವಿದೆ. ಆದರೆ ಅದು ನಿರುಪಾಯದ ಸಂಗತಿಯಾಗಿದೆ. ಮೂಲತಃ ರಚನೆಯಲ್ಲಿಯೇ ಇಲ್ಲದ ವ್ಯವಸ್ಥೆಯನ್ನು ನಡುವೇ ಪಠನದಲ್ಲಿ ಎಲ್ಲಿಂದ ತರಬೇಕು? "ಯತಿವಿಲಂಘನದಿಂದರಿದಲ್ತೆ ಕನ್ನಡಂ" ಎಂದು ಒಮ್ಮೆ ಸ್ವೀಕರಿಸಿದ ಮೇಲೆ ಅದರಿಂದ ನಿರರ್ಥಕವಾಗಿ ಕೆಡಕೆನ್ನಿಸಿಕೊಳ್ಳುವದು ಸರಿಯಾಗಲಾರದು; ಅಸ್ತು. ಒಂದು ವೇಳೆ ಕನ್ನಡದ ಸ್ವತ್ತಾಗಿರುವ ಮಾತ್ರಾವೃತ್ತಗಳಲ್ಲಿ ನಾವು ಬೇಕಾದ ಹಾಗೆ ವಿಶ್ರಮಿಸಿದರೂ ಬರ ಬಹುದೆಂದು ಕ್ಷಣ ಹೊತ್ತು ಕೈ ಕೊಳ್ಳುವಾ. ಇದಾದರೂ ಅಯೋಗ್ಯವೇ; ಆದರೂ ಅನಕಾ ಇರಲಿ. ಆದರೆ ಕನ್ನಡ ನುಡಿಯನ್ನು ಅಲಂಕರಿಸಿ, ಮನಃಕುತೂಹಲವನ್ನು ಪೂರಯಿಸಿ ಕೊಳ್ಳಬೇಕೆಂಬ ಹೇತು

---

* ಸಂಸ್ಕೃತದಲ್ಲಿ ಯತಿಯ ಹಕ್ಕುಗಳು ಎರಡು:— ೧. ರಚನಾಕ್ರಮದಲ್ಲಿ ವಿಭಕ್ತಿಯನ್ನಿಡುವದು; ೨. ಪಠನಕ್ರಮದಲ್ಲಿ ವಿಶ್ರಮಿಸುವದು.

ಶಾಲಾಪತ್ರಿಕೆ.

ಪುಸ್ತಕ ೫೦. | ಜಲ್ಲೆ ೧೯೧೫. | ಸಂಚಿಕೆ ೬.

ಸ್ಫುಟಪದ್ಯಗಳು

೧. ಸೂರ್ಯನ ಮೇಲಿನ ಕಲೆಗಳು.

ರ್ಯಲ್ ಅಸ್ಟ್ರನಾಮಿಕಲ್ ಸೊಸಾಯಿಟಿಯ ಪ್ರಸಿದ್ಧ ಪ್ರೋ ಟರ್ನರ್ ಎಫ್. ಆರ್. ಎನ್. ಎಂಬವರು ಸೂರ್ಯನ ಮೇಲಿನ ಕಲೆಗಳ ವಿಷಯವಾಗಿ ಹೊಸ ಉಪಪತ್ತಿಯನ್ನು ಹೇಳಿದರು. ಅವರು ಅನ್ನುವದೇನೆಂದರೆ, ಲಿಥಸಿಸ್ಫಿ ಎಂಬ ಪದಾರ್ಥದ ಉಲ್ಕಾಸಮೂಹವು ಒಂದು ಸೇಕಂದಿಗೆ ೪೦ ಮೈಲಿನ ವೇಗದಿಂದ ಹೋಗಿ ಸೂರ್ಯನ ಮೇಲೆ ಅಪ್ಪಳಿಸುವದು. ಆದರಿಂದ ಸೂರ್ಯನ ಪೃಷ್ಠಭಾಗದ ಮೇಲೆ ಕಲೆಗಳು ಬೀಳುವವು. ಪ್ರೋ. ಟರ್ನರ ಇವರ ಈ ಉಪಪತ್ತಿಯು ತೀರ ಹೊಸದಿದ್ದು, ಇಂದಿನ ವರೆಗೆ ಗೊತ್ತಾದ ಅನೇಕ ಸಂಗತಿಗಳಿಂದ ಆ ಉಪಪತ್ತಿಯು ನಿಜವೆಂದು ಪ್ರಸಿದ್ಧವಾಗುತ್ತದೆ. ಆದರೆ ಈ ಸಂಗತಿಯು ಸಂಪೂರ್ಣವಾಗಿ ಹೀಗೇ ಎಂದು ನಿಶ್ಚಯಿಸಲಿಕ್ಕೆ ಬರುವಂತೆ ಇಲ್ಲೆಂದು ಪ್ರೋ ಟರ್ನರ್ ಇವರೇ ಹೇಳಿದರು ಮಿ. ಮಾಂಡರ್ ಎಂಬ ಇನ್ನೊಬ್ಬ ಪಂಡಿತರು ಪ್ರೋ. ಟರ್ನರ್ ಇವರ ಭಾಷಣವನ್ನು ಸಮಗ್ರವಾಗಿ ಕೇಳಿಕೊಂಡು ಸೂರ್ಯನ ಮೇಲೆ ಕಲೆಗಳು ಬೀಳಲಿಕ್ಕೆ ಸೂರ್ಯನ ಶರೀರವ್ಯಾಪ್ತದಲ್ಲಿಯೇ ಕಾರಣವುಂಟೆಂಬ ತಮ್ಮ ಮೊದಲಿನ ಸಂಬಿಕೆಯು ದೃಢವಾಗಿರುವದೆಂದು ಹೇಳಿದರು. ಇನ್ನು ಪ್ರೋ. ಟರ್ನರ್ ಮತ್ತು ಮಿ. ಮಾಂಡರ ಇವರಿಬ್ಬರು ಜ್ಯೋತಿರ್ವಿದರು ತಮ್ಮ ತಮ್ಮ ಮತವನ್ನು ಪುಷ್ಟೀಕರಿಸುವ ಸಂಗತಿಗಳನ್ನು ಮುಂದೆ ತರುವರು. ಅವುಗಳಿಂದ ನಿಜವಾದ ಸಂಗತಿಯು ನಿರ್ಣಯವಾಗುವದು.

೨. ಹೂವುಗಳ ಬಣ್ಣ, ಮತ್ತು ಸುವಾಸನೆ ಇವುಗಳ ಪ್ರಮಾಣವು.

'ಶೊಪ್ಲರ್' ಮತ್ತು 'ಕೋಖಲೆರ್' ಎಂಬ ಇಬ್ಬರು ವನಸ್ಪತಿಶಾಸ್ತ್ರಜ್ಞರು ಸುಮಾರು ೪೦೦ ಜಾತಿಯ ಬೇರೆ ಬೇರೆ ವನಸ್ಪತಿಗಳ ನಿರೀಕ್ಷಣ ಮಾಡಿ ಅವುಗಳ ಹೂವುಗಳ ಬಣ್ಣಗಳು, ಮತ್ತು ಸುವಾಸನೆ ಇವುಗಳ ಪ್ರಮಾಣವನ್ನು ಕಂಡು ಹಿಡಿದಿರುವರು. ಅವರ

ಶೋಧವು ಮನೋಹರವಾಗಿಯೂ, ಜ್ಞಾನವರ್ಧಕವಾಗಿಯೂ ಇರುವದು. ನಿರೀಕ್ಷಣದಿಂದ ಅವರಿಗೆ ತಿಳಿದುಬಂದದ್ದೇನೆಂದರೆ, ಹೂಬಿಡುವ ವನಸ್ಪತಿಗಳಲ್ಲಿ ಬಿಳಿ ಹೂವಾಗುವ ವನಸ್ಪತಿಗಳು ಎಲ್ಲಕ್ಕೂ ಹೆಚ್ಚಿರುವವು; ಕೆಂಪು, ಹಳದಿ, ನೀಲಿ ಬಣ್ಣದ ಹೂವುಗಳನ್ನು ಬಿಡುವ ವನಸ್ಪತಿಗಳು ಇವುಗಳಿಗಿಂತ ಕಡಿಮೆ; ಇವುಗಳಿಗಿಂತಲೂ ನೇರಲ, ಹಸರು, ಕಿತ್ತಳೆ, ಊದಿ ಬಣ್ಣಗಳ ಹೂವಾಗುವ ವನಸ್ಪತಿಗಳು ಕಡಿಮೆ ಇರುವವು.

ಬೇರೆ ಬೇರೆ ಬಣ್ಣಗಳ ಹೂವುಗಳಲ್ಲಿ ಸುವಾಸನೆಯ ಹೂವುಗಳ ಸಂಖ್ಯೆಯ ಪ್ರಮಾಣವು ಎಷ್ಟು ಇರುತ್ತದೆಂಬದು ಕೆಳಗಿನ ಕೋಷ್ಟಕದಿಂದ ತಿಳಿಯುವದು:—

ಹೂವುಗಳ ಬಣ್ಣವು.		ನಿರೀಕ್ಷಿಸಲ್ಪಟ್ಟ ವನಸ್ಪತಿಗಳ ಸಂಖ್ಯೆ.			ಅವುಗಳಲ್ಲಿ ಸುವಾಸನೆಯ ಹೂವುಗಳ ಸಂಖ್ಯೆ.
ಬಿಳಿದು	....	೧೧೯೪	....	....	೧೮೩
ಕೆಂಪು	....	೯೩೩	....	....	೮೪
ಹಳದಿ	....	೯೫೦	....	....	೭೭
ನೀಲಿ	....	೫೯೪	....	....	೩೧
ನೇರಲ	....	೩೦೮	....	....	೧೩
ಹಸರು	....	೧೫೩	....	....	೨೪
ಕಿತ್ತಳೆ	....	೫೦	....	....	೩
ಊದಿ	....	೧೮	....	....	೧
		ಒಟ್ಟು ೪೭೦೦	....		ಒಟ್ಟು ೪೭೦

ಇದರ ಮೇಲಿಂದ ಒಟ್ಟು ವನಸ್ಪತಿಗಳಲ್ಲಿ ಹತ್ತರಲ್ಲೊಂದು ಪಾಲು ವನಸ್ಪತಿಗಳು ಸುವಾಸನೆಯ ಹೂವುಗಳನ್ನು ಬಿಡುವವೆಂದೂ, ಬಿಳಿ, ಕೆಂಪು, ಹಳದಿ ಬಣ್ಣಗಳ ಹೂವುಗಳ ಸಂಖ್ಯೆಯೇ ಹೆಚ್ಚಾಗಿರುವದೆಂದೂ, ಅವುಗಳಲ್ಲಿಯೂ ಬಿಳಿಯ ಹೂವುಗಳ ಸಂಖ್ಯೆಯು ಎಲ್ಲಕ್ಕೂ ಹೆಚ್ಚಿಗೆ ಇರುವದೆಂದೂ ಕಂಡು ಬರುವದು.

೩. ಸಭ್ಯತೆಯ ಲಕ್ಷಣಗಳು.

೧. ಗ್ರಾಮ್ಯ ಶಬ್ದಗಳನ್ನೂ ಬೀಭತ್ಸ ಶಬ್ದಗಳನ್ನೂ ಎಂದೂ ಉಚ್ಚರಿಸದಿರುವದು

೨. ದುರ್ಬ್ಯವಿಗಳನ್ನೂ ವ್ಯಂಗರನ್ನೂ ಕಂಡು ಕು ಚೇಷ್ಟೆ ಮಾಡದೆ ಅವರಿಗೆ ಸಹಾಯ ಮಾಡುವದು.

೩. ಸಿರಿಯರ ಮತ್ತು ಸ್ತ್ರೀಯರ ಮಾನಮರ್ಯಾದೆಯನ್ನು ಯಾವಾಗಲೂ ಕಾಪಾಡುವದು.

೪. ತಮ್ಮ ಮೈ ಕೈಗಳು, ಮೈಮೇಲಿನ ಬಟ್ಟೆಬರೆಗಳು, ಪಾತ್ರೆಗಳು ಮೊದಲಾದವನ್ನು ಯಾವಾಗಲೂ ಸ್ವಚ್ಛವಾಗಿ ಇಟ್ಟುಕೊಳ್ಳುವದು.

೫. ಪರರ ಮನಸ್ಸಿಗೆ ಹತ್ತುಬಹುದಾದ, ಮರ್ಮಭೇದಕವಾದ ಮಾತುಗಳನ್ನು ಆಡದೆ ಇರುವದು.

೬. ಎರಡನೆಯವರಿಗೆ ಅಪಮಾನವಾಗುವಂತೆ ಉದ್ಧಟತನದ ಇಲ್ಲವೆ ದಾಕ್ಷಿಣ್ಯಶೂನ್ಯವಾದ ವರ್ತನೆಯನ್ನು ಇಡದೆ ಇರುವದು.

೭. ಬೇಕಾದ ಸ್ಥಳದಲ್ಲಿ ಉಗುಳುವದು, ಎರಡನೆಯವರಿಗೆ ಅಸಹ್ಯವಾಗುವಂತೆ ಕೆಮ್ಮುವದು, ಇಲ್ಲವೆ ತೇಗುವದು, ಇಲ್ಲವೆ ಆಕಳಿಸುವದು ಮೊದಲಾದ ಕೆಟ್ಟ ಪದ್ಧತಿಗಳು ತಮ್ಮಲ್ಲಿ ಸೇರದಂತೆ ಎಚ್ಚರಗೊಳ್ಳುವದು.

೮. ಪರನಿಂದೆಯನ್ನು ಎಂದೂ ಮಾಡದಿರುವದು, ಮತ್ತು ಕೇಳದಿರುವದು.

ನೀತಿಯುಪಾಠ.

ಮನಸಿನ ಏಕಾಗ್ರತೆ.

ಕರೇ ಹಲಿಗೆಯ ಮೇಲೆ ಹುಡುಗರ ಪರಿಚಯದ ಹತ್ತು ಹನ್ನೆರಡು ಶಬ್ದಗಳನ್ನು ಬರೆದು ಓದಲಿಕ್ಕೆ ಹೇಳುವದು. ವಿದ್ಯಾರ್ಥಿಗಳು ಆ ಶಬ್ದಗಳನ್ನು ಒಂದೆರಡು ಸಾರ ಓದಿಕೊಂಡ ಮೇಲೆ ಇವುಗಳನ್ನು ನೆನಪಿನಲ್ಲಿಟ್ಟುಕೊಳ್ಳಿರಿ, ಎಂದು ಹೇಳಿ ಅವುಗಳನ್ನು ಅಳಿಸಿ ಆ ಎಲ್ಲ ಶಬ್ದಗಳನ್ನು ಕರೇ ಹಲಿಗೆಯ ಮೇಲೆ ಬರೆದ ಕ್ರಮದಂತೆ ಹುಡುಗರಿಗೆ ತಮ್ಮ ತಮ್ಮ ಟಪ್ಪಣಿಯ ಪುಸ್ತಕದಲ್ಲಿ ಬರೆಯ ಹೇಳುವದು. ಆಗ ಕೆಲವರಿಗೆ ಹೆಚ್ಚು ಶಬ್ದಗಳು, ಕೆಲವರಿಗೆ ಕಡಿಮೆ ಶಬ್ದಗಳು ನೆನಪಾಗುವವು. ಬೇರೆ ಕೆಲವರಿಗೆ

ಒಂದೆರಡು ಶಬ್ದಗಳ ಹೊರತು ಕಚ್ಚಿ ಶಬ್ದಗಳು ಸ್ಮರಿಸುವದಿಲ್ಲ. ಹೀಗಾಗಿ. ವ ಕಾರಣವನ್ನು ಕೇಳುವದು. ಇದಕ್ಕೆ ಮನಸಿನ ಏಕಾಗ್ರತೆಯೇ ಕಾರಣ ವೆಂದೂ 'ಮನಸಿನ ಏಕಾಗ್ರತೆ' ಯಂದರೆ ಮನಸ್ಸನ್ನು ಅನೇಕ ಕಡೆಗೆ ಹರಿ ಯಗೊಡದೆ ಒಂದೇ ಕಡೆಗೆ ಹಚ್ಚೋಣ, ಅಥವಾ ಸಂಪೂರ್ಣವಾಗಿ ಅದ ನ್ನು ಒಂದೇ ಸಂಗತಿಯಲ್ಲಿ ತೊಡಗಿಸೋಣವೆಂದು ಹೇಳಿ ವಿಷಯವನ್ನು ಪ್ರಾರಂಭಿಸುವದು. ಹಿಂದಕ್ಕೆ ಭೋಜ ರಾಜನ ಸಭೆಯಲ್ಲಿ ಏಕಪಾಠಿ, ದ್ವಿ ಪಾಠಿ, ತ್ರಿಪಾಠಿ ಕವಿಗಳು ಇದ್ದರಂತೆ. ಯಾರಾದರೂ ಒಂದು ಪದ್ಯವನ್ನು ಒಂದು ಸಾರೆ ಆಂದು ತೋರಿಸಿದ ಕೂಡಲೆ ಏಕಪಾಠಿಯಾದವರೂ, ಎರಡು ಸಾರೆ ಕೇಳಿದ ಕೂಡಲೆ ದ್ವಿಪಾಠಿಯಾದವರೂ ಅನ್ನುತ್ತಿದ್ದರಂತೆ. ಇದರ ತಾತ್ಪರ್ಯವೇನಂದರೆ, ಅವರಲ್ಲಿ ಮನಸ್ಸನ್ನು ಆ ಪದ್ಯದ ಕಡೆಗೇ ಸಂಪೂರ್ಣವಾಗಿ ಹಚ್ಚಿ ಆದನ್ನು ಸ್ಮರಣದಲ್ಲಿ ಹಿಡಿಯುವ ಸಾಮರ್ಥ್ಯವು ಇತ್ತು. ಮನಸ್ಸನ್ನು ಏಕಾಗ್ರದಲ್ಲಿ ತರುವ ಸಾಮರ್ಥ್ಯವಿಲ್ಲದವರು ಆ ಕವಿತೆಯನ್ನು ಹತ್ತಂಟು ಸಾರೆ ರೂ ಮಾಡಿ ಪಾಠ ಮಾಡಿದರೂ ಅವರ ಸ್ಮರಣದಲ್ಲಿ ನಿಲ್ಲುವದಿಲ್ಲ. ಮನಸಿನ ಏಕಾಗ್ರತೆಗೆ ಲಕ್ಷವೆಂತಲೂ ಅನ್ನುತ್ತೇವೆ.

ವಿದ್ಯಾರ್ಥಿಗಳು ವರ್ಗದಲ್ಲಿ ಪಾಠ ಕೇಳುವಾಗಲೂ, ಸ್ವಂತವಾಗಿ ಅಭ್ಯಾಸ ಮಾಡುವಾಗಲೂ ಲಕ್ಷ್ಯವು ಸಂಪೂರ್ಣವಾಗಿ ಬೇಕು. ಲಕ್ಷವಿಲ್ಲದಿ ದ್ದರೆ, ಶಿಕ್ಷಕರು ತಿಳಿಸಿಕೊಡುವ ಸಂಗತಿಗಳೆಲ್ಲ ಡಬ್ಬಿಗೊಡದಮೇಲೆ ನೀರು ಸುರಿದಿದಂತೆ ಆಗುವವು. ಈ ವಿಷಯವಾಗಿ ಒಂದು ಸಣ್ಣ ಕಥೆಯುಂಟು:—

"ಒಂದು ಊರಲ್ಲಿ ಒಬ್ಬ ಹುಡುಗನಿದ್ದನು. ಅವನು ಶಾಲೆಗೆ ಹೋಗುತ್ತಿದ್ದನು. ಒಂದಾನೊಂದು ದಿವಸ ಅವನ ತಾಯಿಯು ಕರ್ಚೀಕಾಯಿಗಳನ್ನು ಮಾಡುತ್ತಿದ್ದಳು. ಕರ್ಚೀಕಾಯಿಗಳು ಆ ಹುಡುಗನಿಗೆ ಬಹಳ ಸೇರುತ್ತಿದ್ದವು. ಕರಿಯುತ್ತಿರುವಾಗಲೇ ಅವನು ತನಗೊಂದು ಕರ್ಚೀಕಾಯಿಯನ್ನು ಕೊಡೆಂದು ತಾಯಿಗೆ ಗಂಟು ಬಿದ್ದನು. ಅವಳು ಕರಿಯುವ ಕೆಲಸವು ಮುಗಿದ ಮೇಲೆ ಎಲ್ಲರಿಗೂ ಕೊಡುವಾಗ ನಿನಗೂ ಕೊಡುವೆನು. ಈಗ ಶಾಲೆಯ ಪೊತ್ತಾಯಿತು, ಹೋಗಿಬಾ ಎಂದು ಹೇಳಿದಳು. ತಾಯಿಯ ಮಾತು ಮೂರಲಾರದೆ ಮನಸ್ಸಿನಲ್ಲಿ ನೊಂದುಕೊಂಡು ಕರ್ಚೀಕಾಯಿಯನ್ನೇ ನೆನಸುತ್ತ ಅವನು ಶಾಲೆಗೆ ಹೋದನು. ಮನಸ್ಸೆಲ್ಲ ಕರ್ಚೀಕಾಯಿಯ ಕಡೆಗೇ ಇತ್ತು. ಬೇಗ ಬೇಗ ಶಾಲೆಗೆ ಹೋಗಲಿಕ್ಕೆ ಕಾಲುಗಳೇ ಏಳಲೊ

ಲ್ಲವು. ವರ್ಗದಲ್ಲಿ ಹೋಗಿ ಕುಳಿತುಕೊಂಡರೂ ಯಾವ ಗೆಳೆಯನ ಸಂಗಡಲೂ ಮಾತಿಲ್ಲ, ಕಥೆಯಿಲ್ಲ. ಕೆಲ ಹೊತ್ತಿನ ಮೇಲೆ ಗುರುಗಳು ವಸ್ತುವನ್ನು ಕೇಳ ಹತ್ತಿದರು; ವರ್ಗದೊಳಗಿನ ಹುಡುಗರಿಗೆಲ್ಲ ಕೇಳುತ್ತ ಈ ಹುಡುಗನಿಗೆ ಮೂರುನಾಲ್ಕಲೇ ಎಟ್ಟು ಎಂದು ಕೇಳಲು, ಅವನು ಚಟ್ಟನೆ ಕರ್ಚಿಕಾಯಿಯೆಂದು ಉತ್ತರವನ್ನು ಕೊಟ್ಟು ಬಿಟ್ಟನು. ಅದನ್ನು ಕೇಳಿ ವರ್ಗದೊಳಗಿನ ಎಲ್ಲ ಹುಡುಗರು ಬೊಳ್ಳೆಂದು ನಕ್ಕರು."

(ಮಿ. ಸಿ. ಸೋ. ಕುಲಕರ್ಣಿ ಇವರ "ನನ್ನ ತಾಯಿ" ಎಂಬ ಪುಸ್ತಕದೊಳಗಿಂದ ತಕ್ಕೊಂಡದ್ದು.)

ಹೀಗೆ ಎಷ್ಟೋ ಹುಡುಗರು ಶಿಕ್ಷಕರು ಪಾಠ ಹೇಳುವಾಗ ಅದರ ಕಡೆಗೆ ಮನಸಿಲ್ಲದೆ ಇರುವರು. ಅದರ ಅನುಭವವು ಶಿಕ್ಷಕರಿಗೆ ಯಾವಾಗಲೂ ಬರುವದು. ಅಂಕಗಣಿತದ ಉದಾಹರಣೆಯನ್ನು ಕೇಳುವಾಗಲೂ, ಉಕ್ತಲೇಖನವನ್ನು ಕೇಳುವಾಗಲೂ ಎಷ್ಟೋ ಹುಡುಗರು ಆ ಎಂದು ಅಂದು, ಇಲ್ಲವೆ ಹೇಳಿದ ವಾಕ್ಯದ ಲವಂಭದ ಒಂದೆರಡು ಶಬ್ದಗಳನ್ನು ಅಂದು, ಶಿಕ್ಷಕರ ಮೋಲೆಯನ್ನು ನೋಡಹತ್ತುವರು. ಅದರಿಂದ ಶಿಕ್ಷಕರು ಹೇಳಿದ್ದನ್ನೇ ಮತ್ತೊಮ್ಮೆ ಕೇಳಬೇಕಾಗುವದು.

ಶಾರೀರಿಕ ಶಕ್ತಿಯನ್ನು ವಿಶ್ರಾಂತಿಯಿಂದ ಜೋಪಾಸಿದ ಸ್ಯಾಂಡೋ ಈತನು ತನ್ನ ಅನುಭವವನ್ನು ಹೇಳುವದೇನೆಂದರೆ:-ಯಾವ ಸ್ನಾಯುಗಳನ್ನು ಕೆಲಸಕ್ಕೆ ಹಚ್ಚತಕ್ಕದ್ದಿದ್ದಿ ಆ ಸ್ನಾಯುಗಳ ಕಡೆಗೆ ಲಕ್ಷವಿರದಿದ್ದರೆ ಅಂಥ ವ್ಯಾಯಾಮದಿಂದ ಆಗತಕ್ಕದ್ದು ಪ್ರಯೋಜನವಾಗುವದಿಲ್ಲ. ಈ ಮಾತಿಗೆ ಉದಾಹರಣಾರ್ಥವಾಗಿ ಪೋಸ್ಟಲ್‌ರನ್ನರನ ಕಾಲುಗಳನ್ನು ತೆಗೆದುಕೊಳ್ಳುವಾ. ಅವನು ನಿತ್ಯದಲ್ಲಿ ನಿಯಮದಿಂದ ಕಾಲಿನೊಳಗಿನ ಸ್ನಾಯುಗಳನ್ನು ಕೆಲಸಕ್ಕೆ ಹಚ್ಚುವನು. ಆದರೆ ಅವನ ಕಾಲುಗಳು ಎಂದೂ ಶಕ್ತಿಯುಳ್ಳವಗಳೂ ಪುಷ್ಟವಾದವುಗಳೂ ಆದಂತೆ ಕಂಡುಬರುವದಿಲ್ಲ. ಯಾಕೆಂದರೆ, ಓಡುವಾಗ ಅವನ ಲಕ್ಷವು ಕಾಲಿನ ಸ್ನಾಯುಗಳ ಕಡೆಗೆ ಇರುವದಿಲ್ಲ. ಲಕ್ಷಪೂರ್ವಕವಾಗಿ ಸ್ವಲ್ಪವೇ ಹೊತ್ತು ವ್ಯಾಯಾಮ ಮಾಡಿದರೂ ಬಹಳ ಪ್ರಯೋಜನವಾಗುವದೆಂದು ಅವನ ಅಭಿಪ್ರಾಯವಿರುವದು.

ಮನಸ್ಸು ಶಾಂತವಾಗಿದ್ದ ಹೊರತು ಅದನ್ನು ಏಕಾಗ್ರದಲ್ಲಿ ತರವದು ಶಕ್ಯವಿಲ್ಲ. ಒಂದೊಂದು ಹೊತ್ತಿನಲ್ಲಿ ಮನುಷ್ಯನ ಮೇಲೆ ಏಕಕಾಲ

ಕ್ಕೆ ಅನೇಕ ವಿಪತ್ತುಗಳು ಬರುವ ಸಂಭವವುಂಟು. ಆಗ ಮನಸಿನ ಶಾಂತಿಯು ಭಂಗವಾಗುವದು; ಮನಸ್ಸು ಚಂಚಲವಾಗಿ ಕಂಡ ಕಂಡ ಕಡೆಗೆ ಹರಿದಾಡಹತ್ತುವದು. ಆ ಕಾಲಕ್ಕೆ ಸಮಾಧಾನವನ್ನು ತಾಳಿ ಅದನ್ನು ಏಕಾಗ್ರದಲ್ಲಿ ತರುವ ಅಭ್ಯಾಸವನ್ನು ಯಾವಾಗಲೂ ಮಾಡುತ್ತಿರಬೇಕು. ರಣಧೀರರಾದ ನೆಪ್ರೋಲಿಯನ್ ಬೋನಾಪಾರ್ಟ, ಲಾರ್ಡ ಕ್ಲೈವ ಇವರು ವಿಶ್ರಾಂತಿಯು ಬೇಕಾದಾಗ, ಬೇಕಾದಷ್ಟು ಹೊತ್ತು ವಿಶ್ರಾಂತಿಯನ್ನು ತಕ್ಕೊಳ್ಳುತ್ತಿದ್ದರು. ಬಿಳ್ಳೇ ಯುದ್ಧ ಪ್ರಸಂಗಗಳು ಬಿದಗಿದಾಗ ಸಹ ಅವರಿಗೆ ಗಡದ್ದ ನಿದ್ದೆ ಹತ್ತುತ್ತಿತ್ತು. ಇ. ಸ. ೧೭೯೬ನೇ ಇಸವಿಯಲ್ಲಿ ಪ್ಲಾಸಿ ರಣಭೂಮಿಯಲ್ಲಿ ಕ್ಲೈವನ ಸಂಡೂ, ಸುರಾಜ ಉದ್ದೌಲನ ಸಂಡೂ ತಳವೂರಿದ್ದವು. ಇನ್ನು ಅರ್ಧ ತಾಸಿಗೆ ಯುದ್ಧವು ಪ್ರಾರಂಭವಾಗುವದಿರಲು, ಕ್ಲೈವನು ನಿಶ್ಚಿಂತೆಯಿಂದ ತನ್ನ ಡೇರೆಯಲ್ಲಿ ಮಲಗಿಕೊಂಡಿದ್ದನು. ಸಾಧಾರಣವಾಗಿ ಬಂದು ಲಗ್ನ ಮುಹೂರ್ತದ ಪ್ರಸಂಗವು ಬಿದಗಿದರೆ ಇಲ್ಲವೆ ಯಾರಿಗಾದರೂ ಅಸ್ವಸ್ಥವಾದರೆ, ಆ ಕಾರ್ಯವು ಸಾಂಗವಾಗುವವರೆಗೆ ಅಥವಾ ಬಂದ ವಿಪತ್ತು ದೂರಾಗುವ ವರೆಗೆ ರಾತ್ರಿ ಕಣ್ಣಿಗೆ ಕಣ್ಣು ಹತ್ತುವದಿಲ್ಲ. ಅಂದ ಮೇಲೆ ಯುದ್ಧದಂಥ ಪ್ರಸಂಗವು ಯಾರ ಮೇಲೆ ಬಂದಿರುವದೋ ಅವನು ಎಷ್ಟೋ ತರದ ವಿಚಾರಗಳನ್ನು ಮಾಡುವದು ಅವಶ್ಯವಿದ್ದಾಗ್ಯೂ ಅವನ್ನೆಲ್ಲ ಬದಿಗೊತ್ತಿ ಶಾಂತ ಮನಸಿನಿಂದ ನಿದ್ದೆ ಮಾಡುವದೆಂದರೆ, ಅವನು ತನ್ನ ಮನಸ್ಸನ್ನು ಏಕಾಗ್ರದಲ್ಲಿ ತರುವ ಶಕ್ತಿಯನ್ನು ವಿಲಕ್ಷಣವಾಗಿ ಬೆಳಿಸಿಕೊಂಡಂತಾಯಿತು. ಫೋನೋಗ್ರಾಫ, ತಂತಿಯಿಲ್ಲದೆ ಸುದ್ದಿಯನ್ನು ಕಳುಹುವ ಯಂತ್ರ ಇವುಗಳನ್ನು ಶೋಧಿಸಿ ತೆಗೆದು ಹೆಸರುವಾಸಿಯಾದ ಎಡಿಸನ್ನನು ಬಂದೇ ಸಮನೆ ೨೦ ತಾಸುಗಳವರೆಗೆ ಬಂದು ವಿಷಯದಲ್ಲಿ ಮನಸು ಹಾಕಿಕೊಂಡು ತನ್ನ ಪ್ರಯೋಗ ಶಾಲೆಯಲ್ಲಿ ಕೂಡ್ರುತ್ತಿರುವನು. ಆಗ ಅವನ ಊಟ ಉಡಿಗೆ ಮೊದಲಾದ ಕಾರ್ಯಗಳೆಲ್ಲ ಪ್ರಯೋಗ ಶಾಲೆಯಲ್ಲಿಯೇ ಆಗುತ್ತಿರುವವು.

ಈ ಮೇರೆಗೆ ಏಕಾಗ್ರಮನಸಿನಿಂದ ಕೆಲಸಮಾಡುವದರಿಂದ, ಅನೇಕ ಪ್ರಯೋಜನಗಳು ಆಗುವವು. ಮೊದಲನೇ ಎಲ್ಲಕ್ಕೂ ಹೆಚ್ಚಿನ ಪ್ರಯೋಜನವು ಯಾವದೆಂದರೆ, ವೇಳೆಯು ಉಳತಾಯವು. ಎಷ್ಟೋ ಹುಡುಗರು ಆಟದ ವೇಳೆಯನ್ನುಸಹ ಅಭ್ಯಾಸದಲ್ಲಿಯೇ ಹಾಕಿ ಓದುವರು, ಗಣಿತದ ಉದಾಹರಣೆಗಳನ್ನು ಬಿಡಿಸುವರು. ಆದರೆ ನಿಜವಾಗಿ ನೋಡಿದರೆ

ಅವರಿಗೆ ಇದರಿಂದ ಏನೂ ಪ್ರಯೋಜನವಾದದ್ದು ಕಂಡುಬರುವದಿಲ್ಲ. ಈ ಬಗ್ಗೆ ಕೆಳಗೆ ಕೊಟ್ಟ ಕಥೆಯು ಒಳ್ಳೇ ಬೋಧಪ್ರದವಾಗಿರುವದು.

ರಂಗನೆಂಬ ಒಬ್ಬ ಹುಡುಗನಿದ್ದನು; ಅವನು ಎನ್ನಡ ಐದನೇ ಇಯತ್ತೆಯನ್ನು ಕಲಿಯುತ್ತಿದ್ದನು. ರಾಮನೆಂಬವನು ಅವನ ಅಣ್ಣನು; ಅವನು ಇಂಗ್ಲಿಷ ಸಾಲೆಗೆ ಹೋಗುತ್ತಿದ್ದನು. ರಂಗನಿಗೆ ಭೀಮನೆಂಬ ಒಬ್ಬ ೨ ವರ್ಷದ ಚಿಕ್ಕ ತಮ್ಮನಿದ್ದನು. ರಂಗನು ದಿನಾಲು ಮುಂ ಜಾನೆ ಎದ್ದು ತನ್ನ ಅಣ್ಣನ ಬಳಿಯಲ್ಲಿ ಅಭ್ಯಾಸಕ್ಕೆ ಕೂಡ್ರುತ್ತಿದ್ದನು, ಮತ್ತು ಅವನ ಬಾಯಿ ಎಂದೂ ಸುಮ್ಮನಿರುತ್ತಿದ್ದಿಲ್ಲ. ಇತಿಹಾಸವನ್ನಾಗಲಿ ಭೂಗೋಲವನ್ನಾಗಲಿ ಪಾಠಮಾಡುತ್ತಿರುವದು, ಇಲ್ಲವೆ, ಹರಟೆ ಹೊಡೆಯುವದು ಇವುಗಳ ಹೊರತು ಅವನಿಗೆ ಬೇರೆ ವಿಷಯಗಳಲ್ಲಿ ಮನಸು ಇರುತ್ತಿದ್ದಿಲ್ಲ.

ಒಂದಾನೊಂದು ದಿವಸ ರಂಗನು ಅಭ್ಯಾಸಕ್ಕೆ ಕುಳಿತಾಗ– "ದಿಲ್ಲಿಯು ಈಗ ಹಿಂದುಸ್ತಾನದ ರಾಜಧಾನಿಯಾಗಿರುತ್ತದೆ" ಎಂಬ ವಾಕ್ಯವನ್ನು ಪಾಠಮಾಡುತ್ತಿದ್ದನು. ಅದು ಹ್ಯಾಗಂದರೆ–ದಿಲ್ಲಿಯು-ದಿಲ್ಲಿಯು ಬಿಲ್ಲಿಯು-ಹಿಂಸ್ತಾನದ-ಹಿಂದುಸ್ತಾನದ ದಿಲ್ಲಿಯು ಹಿಂದುಸ್ತಾನದ ಭೀಮು ಇಕೋ ಹಣ್ಣು ಹಿಡಿಬಾ.—ದಿಲ್ಲಿಯು-ದಿಲ್ಲಿಯು-ಹಿಂದುಸ್ತಾನದ ರಾಜಧಾನಿ ಹಿಂದುಸ್ತಾನದ ರಾಜಧಾನಿ—(ಸುಳ್ಳೇ ಹಣ್ಣನ್ನು ನೂರ ಬಗೆದಂತೆ ಮಾಟ), ಅಲ್ಲಿ ಹೋಯಿತು ನೋಡು ಹಣ್ಣು ತಕ್ಕೋ-ದಿಲ್ಲಿಯು-ದಿಲ್ಲಿಯು-ರಾಜಧಾನಿಯಾಗಿರುತ್ತದೆ.—ರಾಜಧಾನಿಯಾಗಿರುತ್ತದೆ."—

ಸಣ್ಣ ಹುಡುಗನು ಅತ್ತಹೋದ ಕೂಡಲೆ, ಇತ್ತ ತಮ್ಮ ಅಣ್ಣನ ಒಂದು ಇಂಗ್ಲೀಷ ಪುಸ್ತಕವನ್ನು ಅವನಿಗೆ ತಿಳಿಯದಂತೆ ತಕ್ಕೊಂಡು ದಿಲ್ಲಿಯು-ದಿಲ್ಲಿಯು-ಹಿಂದುಸ್ತಾನದ ದಿಲ್ಲಿಯು ಹಿಂದುಸ್ತಾನದ ಹೀಗೆ ಪಾಠಮಾಡುತ್ತ ಅದನ್ನು ಅಲ್ಲಿಯೇ ಇಟ್ಟಿದ್ದ ಹಾಸಿಗೆಯ ಸುರುಳಿಯ ಬುಡದಲ್ಲಿ ಮುಚ್ಚಿಟ್ಟು ಮೇಲೆ ಹೇಳಿದಂತೆ ಪಾಠ ಮಾಡುತ್ತ ಕುಳಿತುಕೊಂಡನು. ರಾಮನು ತನ್ನ ಕೈಯೊಳಗಿನ ಕೆಲಸವನ್ನು ತೀರಿಸಿ ತನ್ನ ಪುಸ್ತಕವನ್ನು ಹುಡುಕಹತ್ತಿದನು. ಅದನ್ನು ಕಂಡು ರಂಗನು ತನ್ನ ಪಾಠ ಅನ್ನುವ ವೇಗವನ್ನು ಮೊನಲಿಗಿಂತ ಹೆಚ್ಚು ಮಾಡಿ, ಮನಸಿನಲ್ಲಿಯೇ ನಗುತ್ತ ಅತ್ತಕಡೆಗೆ ಲಕ್ಷವಿದ್ದರೂ ಇಲ್ಲದಂತೆ ನಟಿಸಿ ಕುಳಿತಿದ್ದನು. ಕಡೆಗೆ ರಾಮನು ರಂಗಾ, ನನ್ನ ಪುಸ್ತಕವನ್ನು

ನೋಡಿದ್ದೀಯಾ? ಎಂದು ಕೇಳಲು, "ನನಗೇನು ಗೊತ್ತು?—ದಿಲ್ಲಿಯು-ದಿಲ್ಲಿಯು ರಾಜಧಾನಿಯಾಗಿರುತ್ತದೆ. ರಾಜಧಾನಿ ನನ್ನನ್ನು ಕಾಯ-ಲಿಕ್ಕೆ ಇಟ್ಟದ್ದಿ ಏನು? ದಿಲ್ಲಿಯು-ದಿಲ್ಲಿಯು ರಾಜಧಾನಿಯಾಗಿರುತ್ತದೆ." ಈ ಪ್ರಕಾರ ಒಂದು ತಾಸು ವೇಳೆಯು ಹೋಯಿತು. ಕಡೆಗೂ ರಾವಣ ಪುಸ್ತಕವು ಸಿಗಲಿಲ್ಲ. ರಂಗನು ಪಾಠಮಾಡುವದು ಮುಗಿಯಲಿಲ್ಲ.

ಈ ಕಥೆಯಿಂದ ಹೇಳತಕ್ಕದ್ದಿಷ್ಟೇ ಒಂದೆರಡು ನಿಮಿಷ ಮನಸುಗೊಟ್ಟು ಓದಿದ್ದರೆ ನೆನಪಿನಲ್ಲಿ ಉಳಿಯುವ ವಾಕ್ಯವು ಒಂದೂವರೆ ತಾಸಾದರೂ ರಂಗನ ಲಕ್ಷದಲ್ಲಿ ಉಳಿಯಲಿಲ್ಲ. ಪ ತ್ತು ಹೀಗೇ ಬೇಕಾದಷ್ಟು ಹೊತ್ತು ಪಾಠ ಮಾಡಿದರೂ ಉಳಿಯುತ್ತಿದ್ದಿಲ್ಲ.

ಏಕಾಗ್ರಮನಸಿನಿಂದ ಕೆಲಸಮಾಡುವವರಿಗೆ ಶ್ರಮವು ಕಡಿಮೆ ಹಿಡಿಯುವದು. ವರ್ಗದಲ್ಲಿ ನಡೆಯುವ ವಿಷಯಗಳನ್ನು ಲಕ್ಷಪೂರ್ವಕವಾಗಿ ಕೇಳಿಕೊಂಡು ಅವೊತ್ತಿನದು ಅವೊತ್ತೇ ಕಲಿತು ಬಿಟ್ಟರೆ ಪರೀಕ್ಷೆಯ ಕಾಲಕ್ಕೆ ವಿಶೇಷ ಶ್ರಮಬಡುವ ಕಾರಣವಿಲ್ಲ. ಕೈಕೊಂಡ ಕೆಲಸವನ್ನ ಮನಸುಗೊಟ್ಟು ಮಾಡಿಬಿಟ್ಟ ಮೇಲೆ ಮನಃ ಅದನ್ನು ಕಣ್ಣೆತ್ತಿನೋಡುವ ಪ್ರಸಂಗವು ಬರಬಾರದು. ಹಣದ ವ್ಯವಹಾರದಲ್ಲಿಯೂ, ರೇಲ್ವೆ ಸ್ಟಾವಾಸದಲ್ಲಿಯೂ, ಎಷ್ಟೋ ಸರಕಾರೀ ಕೆಲಸಗಳಲ್ಲಿಯೂ ಸ್ವಲ್ಪ ಅಲಕ್ಷದಿಂದ ಬಹಳ ಹಾನಿಯಾಗುವದು. (ಇದನ್ನ ಹಚ್ಚಿಗೆ ವಿವರಿಸಿ ಹೇಳಬಹುದು.) ಇನ್ನೊಂದು ಸಂಗತಿ ಯಾವದಂದರೆ, ಸಂಬಳವನ್ನು ತಕ್ಕೊಂಡು ಒಬ್ಬರ ನೌಕರನಾಗಿ ಅಲಕ್ಷದಿಂದ ಕೆಲಸ ಮಾಡಿದರೆ ಅವನ ಮೇಲೆ ಕಳವಿನ ಆರೋಪವು ಹೊರುವದು. ಹ್ಯಾಗಂದರೆ, ಸಂಬಳವನ್ನು ಕೊಡುವವರು ನಿಯಮಿತ ಹೊತ್ತಿನ ವರೆಗೆ ನಮ್ಮ ಶ್ರಮವನ್ನು ಕೊಂಡುಕೊಂಡಂತಾಗುವದು. ಅದನ್ನು ನಾವು ಅವರಿಗೆ ಪ್ರಾಮಾಣಿಕತನದಿಂದ ಕೊಡದೆ ಪೈಸೆ ಉಳಿಸಿಕೊಂಡರೆ, ಅವರು ಕೊಟ್ಟ ಹಣವನ್ನು ಕಳವು ಮಾಡಿದಂತಾಗುವದು.

ಮಕ್ಕಳಿರಾ, ಈ ಮಾತುಗಳನ್ನು ಲಕ್ಷದಲ್ಲಿಟ್ಟು ನೀವು ಶಾಲೆಯಲ್ಲಿರುವಾಗಲೂ, ಶಾಲೆಯನ್ನು ಬಿಟ್ಟಮೇಲೆಯೂ, ಆಗಾಗ್ಗೆ ಮಾಡತಕ್ಕ ಕೆಲಸಗಳನ್ನು ಮನಸುಗೊಟ್ಟು ಮಾಡಿರಿ. ಯಾವ ಕೆಲಸವೇ ಆಗಲಿ ಒಮ್ಮೆ ಮಾಡಿರಿ; ನಿಮ್ಮ ಕೈಯಿಂದಾದಷ್ಟು ಮನಸುಕೊಟ್ಟು ಮಾಡಿರಿ. ಅದರಿಂದ ನೀವು ಈ ಜಗತ್ತಿನಲ್ಲಿ ಯಶಸ್ವಿಗಳಾಗುವಿರಿ.

ಕ. ನಾ. ಅವಿನಭಾವಿ

ಗ್ರಹಗಳ ಮೇಲೆ ಮನುಷ್ಯರು ವಾಸಿಸುವರೊ? ಇಲ್ಲವೊ?

ಯಾವದೊಂದು ಗ್ರಹದ ಮೇಲೆ ಮನುಷ್ಯರ ವಸತಿಯು ಉಂಟೋ ಇಲ್ಲವೋ ಎಂಬದನ್ನು ಪ್ರತ್ಯಕ್ಷವಾಗಿ ನೋಡಿ ಹೇಳುವದು ಶಕ್ಯವಿಲ್ಲ. ಈ ಸಂಗತಿಯನ್ನು ನಾವು ಶಾಸ್ತ್ರೀಯ ಅನುಮಾನಗಳ ಸಹಾಯದಿಂದಲೇ ನಿರ್ಣಯಿಸಬೇಕಾಗಿದೆ. ನಮ್ಮಂಥ ಮನುಷ್ಯಪ್ರಾಣಿಗಳು ವಾಸಮಾಡಲಿಕ್ಕೆ ಯಾವ ಯಾವ ಪರಿಸ್ಥಿತಿಯು ಅವಶ್ಯಕತೆ ಇರುವದೋ ಆ ಎಲ್ಲ ಪರಿಸ್ಥಿತಿಯು ಬೇರೆ ಗ್ರಹಗಳ ಮೇರೆ ಇದೆಯೋ ಇಲ್ಲವೋ ಎಂಬದನ್ನು ನಾವು ಮೊದಲು ವಿಚಾರಮಾಡಲಿಕ್ಕೆ ಬೇಕು. ನಮ್ಮಿಂದ ಭಿನ್ನವಾದ ಗುಣಧರ್ಮಗಳುಳ್ಳ ಮನುಷ್ಯಪ್ರಾಣಿಗಳು ಬಿಡಿಬಿಡಿಕಿ ಆ ಗ್ರಹಗಳ ಮೇಲೆ ವಾಸಿಸುತ್ತಿದ್ದರೆ ಆ ಮಾತು ಬೇರೆ. ಆದರೆ ಈಗ ನಾವು ನಮ್ಮಂಥ ಮನುಷ್ಯಪ್ರಾಣಿಗಳ ವಸತಿಯು ಗ್ರಹಗಳ ಮೇಲೆ ಉಂಟೋ ಇಲ್ಲವೋ ಎಂಬದನ್ನು ಮಾತ್ರ ವಿಚಾರಿಸುತ್ತೇವೆ.

ಮನುಷ್ಯಪ್ರಾಣಿಗಳ ವಸತಿಯುಂಟಾಗಲಿಕ್ಕೆ ಅಲ್ಲಿ ಪ್ರಾಣಿವನಸ್ಪತಿಗಳು ಅತ್ಯವಶ್ಯವಾಗಿ ಬೇಕು; ಅಲ್ಲಿಯ ವಾತಾವರಣವು ತೀರ ವಿರಲವಾಗಿಯಾಗಲಿ, ಅತಿ ದಟ್ಟವಾಗಿಯಾಗಲಿ ಇರಕೂಡದು; ಅಲ್ಲಿಯ ಉಷ್ಣತಾಮಾನವಾದರೂ ಬೇಕಾದಷ್ಟು ಇದ್ದರೆ ನಡೆಯಲಿಕ್ಕಿಲ್ಲ. ಈ ಮೂರು ಸಂಗತಿಗಳ ಸಂಬಂಧವಿಂದ ಸೂರ್ಯಮಾಲೆಯೊಳಗಿನ ಗ್ರಹಗಳ ಪರಿಸ್ಥಿತಿಯು ಹ್ಯಾಗಿರುವದೆಂಬದನ್ನು ಆಲೋಚಿಸುವಾ:—

ಸುಮಾರು ೧೦೦ ಅಂಶ ಉಷ್ಣತಾಮಾನಕ್ಕೆ ನೀರು ಕುದಿಯುತ್ತದೆ. ಸೂರ್ಯನ ಉಷ್ಣತೆಯು ಸುಮಾರು ಏಳುಸಾವಿರ ಅಂಶವಿರುತ್ತದೆ ಇದರಿಂದ ಅಲ್ಲಿ ನೀರಿರುವ ಸಂಭವವಿಲ್ಲೆಂಬದಾತು ಸ್ಪಷ್ಟವದೆ. ನೀರಿಲ್ಲದಲ್ಲಿ ಮನುಷ್ಯನು ವಾಸಿಸಲಾರನೆಂಬದನ್ನು ಬೇರೆ ಹೇಳುವ ಕಾರಣವಿಲ್ಲ.

ಚಂದ್ರನ ತೂಕವು ತೀರ ಕಡಿಮೆ ಇರುವದರಿಂದ ಅದರಲ್ಲಿ ಗುರುತ್ವಾಕರ್ಷಣವಾದರೂ ಅತಿ ವಿರಲವಾಗಿಯೇ ಇರಲಿಕ್ಕೆ ಬೇಕು. ಅದಕಾರಣ ಅಲ್ಲಿ ಮನುಷ್ಯರ ವಸತಿಯು ಇರುವ ಸಂಭವವಿಲ್ಲ. ಮಂಗಳನ ಎರಡೂ ಧ್ರುವಗಳ ಮೇಲೆ ಬರ್ಫವಂಥ ಬಿಳೀ ಪ್ರದೇಶವು ಕಾಣುತ್ತದೆ.

ನಡುಭಾಗದಲ್ಲಿ ದೊಡ್ಡ ದೊಡ್ಡ ಕಾಲುವೆಗಳಿದ್ದಂತೆ ಗೆರೆಗಳು ಕಾಣುತ್ತವೆ. ಇದರಿಂದ ಅಲ್ಲಿ ಮನುಷ್ಯರ ವಸತಿಯು ಇರಬಹುದೆಂದು ಲೋಯೇಲಸಾ ಹೇಬರು ಅನುಮಾನ ಮಾಡಿದ್ದರು. ಆದರೆ ಅದು ತಪ್ಪೆಂದು ಈಗ ನಿರ್ಣಯವಾಗಿರುತ್ತದೆ. ಬರ್ಫದಂತೆ ಬೆಳ್ಳಗೆ ಕಾಣುವ ಬಣ್ಣವು ಕಾರ್ಬನ್ ಡಾಯ್ ಆಕ್ಸಾಯಿಡ್‌ದಿಂದ ಹುಟ್ಟಿರಬೇಕೆಂದು ಇತ್ತಿತ್ತಲಾಗಿ ಶೋಧವಾಗಿರುತ್ತದೆ. ಅಲ್ಲಿ ಹವೆಯು ತೀರ ವಿರಲವಾಗಿರುವ ಕಾರಣ ಮನುಷ್ಯಪ್ರಾಣಿಯು ವಾಸಿಸುವದು ಅಸಂಭವವು. ಬುಧ, ಶುಕ್ರ ಈ ಗ್ರಹಗಳ ಮೇಲೆ ಮನುಷ್ಯರ ವಸತಿಯಾಗುವಂತೆ ಪರಿಸ್ಥಿತಿಯು ಇರುವದಿಲ್ಲ. ಶುಕ್ರನ ಒಂದೇ ಮೈಯು ಸೂರ್ಯನ ಕಡೆಗೆ ಇರುತ್ತದೆ. ಬುಧನ ಮೇಲೆ ನೀರಿನ ಅಸ್ತಿತ್ವವಿಲ್ಲ. ಗುರುವು ಅತಿ ದೊಡ್ಡದಿದ್ದರಿಂದ ಅದರ ಮೇಲಿನ ವಾತಾವರಣವಾದರೂ ಬಹಳ ದಟ್ಟಾಗಿರಲಿಕ್ಕೆಬೇಕು. ಇದಲ್ಲದೆ ಅದು ಇನ್ನೂ ತಣ್ಣಗಾಗಿಲ್ಲ. ಶನಿಯ ಸ್ಥಿತಿಯಾದರೂ ಅದರಂತೆಯೇ ಇರುತ್ತದೆ. ವರುಣ (ಯುರೆನಸ್), ಪ್ರಜಾಪತಿ (ನೆಪ್ಚೂನ) ಈ ಗ್ರಹಗಳ ಸಂಬಂಧದಿಂದ ಹೆಚ್ಚು ಸಂಗತಿಗಳು ಉಪಲಬ್ಧವಾಗಿಲ್ಲ. ಆದರಿಂದ ಅವುಗಳ ಬಗ್ಗೆ ಹಚ್ಚಿಗೇನೂ ಹೇಳಲಿಕ್ಕಾಗುವದಿಲ್ಲ. ಈ ಮೇರೆಗೆ ಸೂರ್ಯಮಾಲೆಯೊಳಗಿನ ಯಾವ ಗ್ರಹದ ಮೇಲೆಯೂ ಮನುಷ್ಯನ ವಸತಿಯು ಇದ್ದಂತೆ ಕಾಣುವದಿಲ್ಲ. ನಮ್ಮ ಸೂರ್ಯಮಾಲೆಯ ಹೊರ್ತು ಆಕಾಶದಲ್ಲಿ ಭ್ರಮಣವಾಡುತ್ತಿರುವ ಬೇರೆ ಸೂರ್ಯಮಾಲೆಗಳಲ್ಲಿ ನಮ್ಮ ಪೃಥ್ವಿಯಂತೆ ಕೆಲವು ಗ್ರಹಗಳುಂಟು; ಅವುಗಳಮೇಲೆ ಮನುಷ್ಯರ ವಸತಿಯು ಅದೆಯೊ, ಇಲ್ಲವೊ ಯಾರಿಗೆ ಗೊತ್ತು?

ಸಾಲೆಯ ತೋಟ.

(ಕಳೆದ ತಿಂಗಳ ಸಂಚಿಕೆಯ ಗಳನೆಯ ಪುಟದಿಂದ ಮುಂದೆ ಸಾಗಿದ್ದು.)

ಹಿಂದಿನ ಸಂಚಿಕೆಯಲ್ಲಿ ತೋಟದ ಕೆಲಸದಿಂದ ಆಗುವ ಅನೇಕ ಪ್ರಯೋಜನಗಳನ್ನು ವಿವರಿಸಿದಂತಾಯಿತು. ಇನ್ನು ತೋಟವನ್ನು ಹ್ಯಾಗೆ ಮಾಡಿಸಬೇಕೆಂಬ ಬಗ್ಗೆ ಇಲ್ಲಿ ನಾಲ್ಕು ಮಾತುಗಳನ್ನು ಹೇಳುವಾ:—

ಸಾಧಾರಣವಾಗಿ ಸಾಲೆಯ ತೋಟಗಳಲ್ಲಿ ಮೂರು ಪ್ರಕಾರಗಳನ್ನು ಮಾಡಬಹುದು.

(೧) ಕಾಯಿಪಲ್ಲೆಗಳು, ಹಣ್ಣು ಹಂಪಲಗಳು ಇವುಗಳನ್ನು ಬೆಳಿಸುವ ತೋಟಗಳು. ಇವುಗಳಿಗೆ ನಮ್ಮ ಬೀಜೀ ಜನರ ತೋಟಗಳು ಉದಾಹರಣಗಳು.

(೨) ಕೃಷಿಶಾಸ್ತ್ರದ ಅಥವಾ ಉದ್ಭಿಜ್ಜಶಾಸ್ತ್ರದ ಪ್ರಯೋಗಗಳನ್ನು ಮಾಡುವ ತೋಟಗಳು. ಇವುಗಳಿಗೆ ಸರಕಾರದವರ ಫಾರ್ಮುಗಳೂ ಬೊಟ್ಯಾನಿಕಲ್ ಗಾರ್ಡನ್‌ಗಳೂ ಉದಾಹರಣಗಳು.

(೩) ಮನಸಿಗೆ ಆನಂದವಾಗುವಂಥ ನಾನಾ ತರದ ಹೂವಿನ ಗಿಡಗಳನ್ನೂ ಬೇರೆ ತರದ ಗಿಡಗಳನ್ನೂ ಹಚ್ಚಿ ತೋಟ ಮಾಡುವದು. ಇದಕ್ಕೆ ಬಂಗಲೆಗಳ ಸುತ್ತುಮುತ್ತು ಇರುವ ತೋಟಗಳೂ ಪಟ್ಟಣದ ನಾಗರಿಕರ ವಿನೋದದ ತೋಟಗಳೂ (ಉ. ಧಾರವಾಡದಲ್ಲಿ ಎಡ್ವರ್ಡ ಪಾರ್ಕ) ಉದಾಹರಣಗಳಾಗಿರುತ್ತವೆ.

ಉದಾಹರಣದ ಸಲುವಾಗಿ ಹೇಳಿದ ತೋಟಗಳನ್ನು ನಿರೀಕ್ಷಿಸಿದರೆ, ಇದೇ ಪ್ರಕಾರ ಸಾಲೆಯಲ್ಲಿ ಸಣ್ಣ ಪ್ರಮಾಣದಿಂದ ತೋಟಗಳನ್ನು ಮಾಡಿಸಲಿಕ್ಕೆ ಸಹಾಯವಾಗುವದು.

ಮೊದಲು ಸಾಲೆಯ ತೋಟದ ಸಲುವಾಗಿ ಕೊಡಲ್ಪಟ್ಟ ಭೂಮಿಯನ್ನು ನೇಗಿಲದಿಂದ ಚನ್ನಾಗಿ ಹರಗಿಸಿ ಪೊಳ್ಳು ಮಾಡಬೇಕು. ತರುವಾಯ ಇದರಲ್ಲಿ ೫ ಫೂಟು ಉದ್ದ ೩ ಫೂಟು ಅಗಲ ಈ ಅಳತೆಯ ಮಡಿಗಳನ್ನು ಮಾಡತಕ್ಕದ್ದು. ಪ್ರತಿ ಎರಡು ಮಡಿಗಳ ನಡುವೆ ಹಾಯ್ದಾಡಲಿಕ್ಕೆ ಗಟ್ಟಿ ಫೂಟು ಅಗಲವಾದ ದಾರಿಗಳನ್ನು ಮಾಡಬೇಕು. ಮಳೆಗಾಲದಲ್ಲಿ ಈ ದಾರಿಗಳು ಕೆಟ್ಟುಹೋಗದಂತೆಯೂ, ಕಾಲಿಗೆ ಕೆಸರು ಮೆತ್ತದಂತೆಯೂ ಮುರಮು ಹಾಕಿ ಬಡಮಣೆಯಿಂದ ಬಡಿದು ಗಟ್ಟಿಮಾಡಬೇಕು. ಪ್ರತಿ ಬಿಂದು ವರ್ಗಕ್ಕೆ ಮೇಲೆ ಹೇಳಿದ ಕೆಲವು ಮಡಿಗಳನ್ನು ಕೊಡತಕ್ಕದ್ದು. ಜವಾಬದಾರಿಯನ್ನು ಹೊತ್ತು ಕೆಲಸಮಾಡುವ ಯೋಗ್ಯತೆ, ಶ್ರಮವನ್ನು ಸಹಿಸುವ ಸಾಮರ್ಥ್ಯ ಇವುಗಳನ್ನು ಅವಲಂಬಿಸಿ ಬಿಂದೊಂದು ಮಡಿಯನ್ನು ಮೂರು ಅಥವಾ ನಾಲ್ಕು, ಇಲ್ಲವೆ ಹೆಚ್ಚು ಜನ ವಿದ್ಯಾ

ರ್ಥಿಗಳಿಗೆ ಕೂಡಿ ಕೆಲಸಮಾಡಲಿಕ್ಕೆ ಕೊಡಬೇಕು. ಆ ಪ್ರಾಡಿಯಲ್ಲಿ ಅವರು ಇಡೀ ವರ್ಷ ಕೆಲಸ ಮಾಡುತ್ತಿರಬೇಕು. ತೋಟದಲ್ಲಿ ಮಡಿಗಳು ಸಾಲದಿದ್ದರೆ ಬಾನಿಗಳಲ್ಲಿ ಗಿಡಗಳನ್ನು ಹಚ್ಚಿಕೊಟ್ಟು ಅವುಗಳನ್ನು ಜೋಪಾನವಾಡಲಿಕ್ಕೆ ಹೇಳಬಹುದು.

ಪ್ರತಿಯೊಂದು ವರ್ಗದ ವೇಳಾ ಪತ್ರಿಕೆಯಲ್ಲಿ ತೋಟದ ಕೆಲಸಕ್ಕಾಗಿ ನಿತ್ಯದಲ್ಲಿ ಅರ್ಧ ತಾಸು ಇಲ್ಲವೆ ೩೦ ಮಿನೀಟು ವೇಳೆಯನ್ನು ಕೊಟ್ಟರೆ ಸಾಕು. ಈ ವೇಳೆಯಲ್ಲಿ ಅವರು ನೆಲವನ್ನು ಅಗಿಯುವದು, ಬೀಜ ಬಿತ್ತುವದು, ಸಸಿಗಳಿಗೆ ನೀರು ಹೊಯ್ಸುವದು, ಹುಲ್ಲು ತೆಗೆಯುವದು, ಮೊದಲಾದ ಕೆಲಸಗಳನ್ನು ಮಾಡತಕ್ಕದ್ದು. ವಾರದಲ್ಲಿ ಅರ್ಧ ಅರ್ಧ ತಾಸಿನಂತೆ ಎರಡಾವರ್ತಿ ವಿಶೇಷ ತರದ ಪಾಠಗಳನ್ನು ಕೊಡುವ ಬಗ್ಗೆ ಗೊತ್ತುಮಾಡಬೇಕು. ಉದಾಹರಣಾರ್ಥವಾಗಿ, ಬೀಜದ ರಚನೆ, ಅದು ಮೊಳೆಯುವ ಕ್ರಮ, ಅದು ಮೊಳೆತು ಸಸಿಯಾಗಲಿಕ್ಕೆ ಅವಶ್ಯವಾದ ಸಂಗತಿಗಳು, ಸಸಿಯ ಬೇರೆ ಬೇರೆ ಅವಯವಗಳು, ಅವು ಮಾಡುವ ಕಾರ್ಯಗಳು ಇತ್ಯಾದಿ. ಅಂಯಾ ಸ್ಥಳದ ಅನುಕೂಲತೆ–ಅವಶ್ಯಕತೆಗಳ ಮೇರೆಗೆ ಒಂದೊಂದು ವರ್ಗಕ್ಕೆ ಒಂದು ವರ್ಷದಲ್ಲಿ ಇಂಥ ಹತ್ತು ಹನ್ನೆರಡು ಪಾಠಗಳನ್ನು ಆರಿಸಿಕೊಳ್ಳತಕ್ಕದ್ದು. ಕೆಳಗಿನ ವರ್ಗದ ಹುಡುಗರಿಂದ ತೋಟದಲ್ಲಿ ನಡೆಯುವ ಕಾರ್ಯಗಳ ನಿರೀಕ್ಷಣವನ್ನಷ್ಟೇ ಮಾಡಿಸಬೇಕು. ಬೀಜವು ಮೊಳೆತು ಸಸಿಯಾಗಿ ಗಿಡವಾಗುವವರೆಗೆ ನಿತ್ಯದಲ್ಲಿ ನಿರೀಕ್ಷಣ ಮಾಡಬೇಕಾಗುವದು. ಇದಕ್ಕಾಗಿ ಅಗಿಗಳನ್ನು ಪ್ರತಿದಿವಸ ಕಿತ್ತಿ ನೋಡಬೇಕಾಗುವದು; ತೋಟದೊಳಗಿನ ಅಗಿಗಳನ್ನು ಹೀಗೆ ಆಗಾಗ್ಗೆ ಕಿತ್ತಿ ನೋಡಲಿಕ್ಕೆ ಬರುವದಿಲ್ಲ. ಅದಕ್ಕಾಗಿ ಒಂದು ಮಣ್ಣಿನ ಪರಿವಾಣದಲ್ಲಿ ಕಟ್ಟಿಗೆಯ ಪುಡಿಯನ್ನು ತೋಯಿಸಿ ಹಾಕಿ ಅದರಲ್ಲಿ ಬೀಜಗಳನ್ನು ಮೊಳೆ ಹಾಕಬೇಕು. ಹೀಗೆ ಮಾಡುವದರಿಂದ ಮೊಳೆಯುವ ಬೀಜಗಳ ಮೇಲೆ ನೀರು ಹಪ್ಪೆ ಇವುಗಳ ಪರಿಣಾಮವು ಹ್ಯಾಗೆ ಆಗುತ್ತ ನಡೆದಿರುವದು, ಅವು ಯಾವ ಯಾವ ಸ್ವರೂಪವನ್ನೂ ಬಣ್ಣವನ್ನೂ ಹೊಂದುತ್ತಿರುವವು, ಅವುಗಳ ಯಾವ ಯಾವ ಅವಯವಗಳು ಯಾವ ಯಾವ ಕಾರ್ಯಗಳನ್ನು ಮಾಡುತ್ತಿರುವವು, ಇತ್ಯಾದಿ ಸಂಗತಿಗಳನ್ನು ಪ್ರತ್ಯಕ್ಷವಾಗಿ ನಿರೀಕ್ಷಿಸಲಿಕ್ಕೆ ಅನುಕೂಲವಾಗುವದು.

ಅಂಥ ಪರಿವಾಣಗಳಲ್ಲಿ ಬಂದನ್ನು ಕತ್ತಲೆಯ ಕೋಣೆಯಲ್ಲಿ ಕೆಲವು ದಿವಸಗಳ ವರೆಗೆ ಇಟ್ಟು ನಿರೀಕ್ಷಿಸಿದರೆ ವನಸ್ಪತಿಗಳಿಗೆ ಬೆಳಕಿನಿಂದಾಗುವ ಪ್ರಯೋಜನವು ಗೊತ್ತಾಗುವದು. ಇದೇ ಪ್ರಕಾರವಾಗಿ ಸಸಿಯು ಬೆಳೆಯುತ್ತಾ ಹೋದಂತೆ ಬೇರು ನೆಲದೊಳಗೆ ಇಳಿಯುತ್ತ ಹೋಗುವದು. ಬೊತ್ತೆಯು ಮೇಲಕ್ಕೆ ಬಂದು, ಅನೇಕ ಟೊಂಗೆಗಳು ಒಡೆದು, ಗಿಡವು ದೊಡ್ಡದಾಗುವದು; ಅಸಂಖ್ಯ ಹಚ್ಚಗಿನ ಎಲೆಗಳನ್ನು ಧರಿಸುವದು; ಮೊಗ್ಗೆಗಳಾಗುವವು; ಅವು ಅರಳಿ ಹೂಗಳಾಗುವವು ಅವು ಉದುರುತ್ತಾ ಬಂದ ಹಾಗೆ ಅವುಗಳ ಸಿಂಪಿ ಹೀಚುಗಾಯಿಗಳು ತಲೆಬೊರುವವು. ಅವು ಬಲಿತು ದೊಡ್ಡವಾಗಿ ಕಸಗಾಯಿಗಳೂ ಬಾಡಗಾಯಿಗಳೂ ಆಗಿ ಹಣ್ಣಾಗುವವು. ತದುವಾಯ ಅವು ಬಣಗಿ ಬೀಜಗಳಾಗವವು. ಬಂದು ವನಸ್ಪತಿಯ ಈ ಎಲ್ಲ ಸ್ಥಿತ್ಯಂತರಗಳನ್ನು ಹುಡುಗರು ಸೂಕ್ಷ್ಮವಾಗಿ ನಿತ್ಯದಲ್ಲಿಯೂ ನಿರೀಕ್ಷಿಸುತ್ತ ಹೋಗತಕ್ಕದ್ದು. ಶಿಕ್ಷಕರು ಅವರ ನಿರೀಕ್ಷಣಕ್ಕೆ ತಕ್ಕ ಪ್ರಶ್ನಗಳಿಂದ ಸಹಾಯಮಾಡತಕ್ಕದ್ದು. ಮೇಲಿನ ವರ್ಗದ ಹುಡುಗರಿಗೆ ಬೇರೆ ಬೇರೆ ಜಾತಿಯ ವನಸ್ಪತಿಗಳ ಜೀವನಕ್ರಮಗಳ ತುಲನೆಯನ್ನು ಮಾಡಲಿಕ್ಕೂ ಅವುಗಳನ್ನು ವರ್ಗೀಕರಿಸಲಿಕ್ಕೂ ಹೇಳಬೇಕು. ಈ ಎಲ್ಲ ಸಂಗತಿಗಳ ಸಂಪೂರ್ಣ ವಿವೇಚನವು ಮುಂದಕ್ಕೆ ಶಾಲಾಪತ್ರಕೆದಲ್ಲಿ " ಪ್ರಕೃತಿವಿಮರ್ಶೆ " ಎಂಬ ಶೀರ್ಷಿಕೆಯ ಕೆಳಗೆ ಅಚ್ಚಾಗಿರುತ್ತದೆ. ಅದರಿಂದ ಶಿಕ್ಷಕರಿಗೆ ಈ ವಿಷಯವನ್ನು ಕಲಿಸಲಿಕ್ಕೆ ಬಹು ಮಟ್ಟಿಗೆ ಸಹಾಯವಾಗುವದು.

ಹುಡುಗರು ಮೇಲೆ ಹೇಳಿದಂತೆ ವನಸ್ಪತಿಗಳ ಜೀವನಕ್ರಮವನ್ನು ನಿತ್ಯದಲ್ಲಿಯೂ ನಿರೀಕ್ಷಿಸಿ ಕಂಡುಬಂದ ಸ್ಥಿತ್ಯಂತರಗಳನ್ನು ಆಗಾಗ್ಗೆ ಬರೆದಿಡಬೇಕು. ಬರೆಯಲಿಕ್ಕೆ ಬಾರದ ವಿದ್ಯಾರ್ಥಿಗಳು ಬಣ್ಣದ ಸೀಸಪೇನ್ಸಿಲುಗಳಿಂದ ಚಿತ್ರಗಳನ್ನು ತೆಗೆಯಬೇಕು. ಆ ಚಿತ್ರಗಳಿಂದ ಹುಡುಗರ ಮನಸಿನೊಳಗಿನ ಕಲ್ಪನೆಗಳು ಸ್ಥೂಲವಾನದಿಂದ ತಿಳಿದರೂ ಸಾಕು. ಅವು ಚಿತ್ರಕಲೆಯ ನಿಯಮಗಳಿಗೆ ಅನುಸರಿಸದಿದ್ದರೂ ನಾಗವದು. ಎಲೆಗಳನ್ನೂ ಹೂವುಗಳನ್ನೂ ದೇಟುಗಳನ್ನೂ ದಪ್ಪನ ಬಿತ್ತಖರಡಿನಲ್ಲಿ ಹಾಕಿ, ಒಂದೆರಡು ದಿವಸಕ್ಕೊಮ್ಮೆ ಹಸಿಯಾದ ಬಿತ್ತಖರಡುಗಳನ್ನು ಬದಲಾಯಿಸುತ್ತಾ ನಾಲ್ಕಾರು ದಿವಸ ಹೇರಿ ಇಟ್ಟರೆ, ಅವುಗ

ಳೊಳಗಿನ ಆರ್ದ್ರತೆಯು ಇಲ್ಲದಂತಾಗಿ ಅವುಗಳ ಬಣ್ಣ ಕೆಡದೆ ಬಹ ದಿವಸದ ವರೆಗೆ ಉಳಿಯುವವು.

ವನಸ್ಪತಿಗಳ ಜೀವನಕ್ರಮದ ನಿರೀಕ್ಷಣದ ಸಂಗಡ ಹವೆ, ಹವೆಯ ಉಷ್ಣತಾವಮಾನ, ಗಾಳಿಯ ದಿಕ್ಕು, ಬಿಸಿಲು, ಮಳೆ ಮುಂತಾದ ಸಂಗತಿಗಳನ್ನು ಬೇರೆ ಬೇರೆ ವರ್ಗದವರಿಗೆ ನಿರೀಕ್ಷಿಸಲಿಕ್ಕೆ ಹಚ್ಚಬೇಕು; ಮತ್ತು ಅವುಗಳ ಟಿಪ್ಪಣಿಗಳನ್ನು ಬರೆಯಿಸಬೇಕು. ಈ ತರದ ಟಿಪ್ಪಣಿಗಳ ಪುನರಾವಲೋಕನದಿಂದ ಎಷ್ಟೋ ಹೊಸ ಹೊಸ ಸಂಗತಿಗಳ ಜ್ಞಾನವಾಗುತ್ತದೆ. ಉದಾಹರಣಾರ್ಥವಾಗಿ, ವರ್ಷದಲ್ಲಿ ಮಳೆಯು ಯಾವ ತಿಂಗಳಲ್ಲಿ ಹೆಚ್ಚು, ಯಾವ ತಿಂಗಳಲ್ಲಿ ಕಡಿಮೆ ಆಗುವದು? ವರ್ಷದಲ್ಲಿ ಸರಾಸರಿ ಎಷ್ಟು ಮಳೆಯಾಗುವದು ? ಪ್ರತಿ ತಿಂಗಳಲ್ಲಿ ಗಾಳಿಯು ಯಾವ ದಿಕ್ಕಿನಿಂದ ಬೀಸುವದು ? ಗಾಳಿಯ ದಿಕ್ಕಿಗೂ ಮಳೆಗೂ ಏನು ಸಂಬಂಧವಿರುವದು ? ಇತ್ಯಾದಿ ಅನೇಕ ಸಂಗತಿಗಳನ್ನು ತಿಳಿಸಲಿಕ್ಕೆ ಅನುಕೂಲವಾಗುವದು.

ಈ ಮೇರೆಗೆ ಹುಡುಗರು ಇಡೀ ವರ್ಷ ತೋಟದಲ್ಲಿ ಕೆಲಸ ಮಾಡಿ ಸಿದ್ಧಮಾಡಿದ ಬೆಳೆಗಳನ್ನು ನಿರೀಕ್ಷಿಸಿ ಟಿಪ್ಪಣಿಮಾಡಿದ ಟಿಪ್ಪಣಿಗಳನ್ನೂ, ತೆಗೆದ ಚಿತ್ರಗಳನ್ನೂ ಸಂಗ್ರಹಿಸಿದ ಎಲೆ, ಹೂವು, ಬೀಜಗಳನ್ನೂ ಸಾಲೆಯ ಒಂದು ಕೋಣೆಯಲ್ಲಿ ವ್ಯವಸ್ಥೆಯಿಂದ ಇಟ್ಟು, ಹುಡುಗರ ತಾಯಿತಂದೆಗಳನ್ನೂ ಊರೊಳಗಿನ ಸಭ್ಯಗೃಹಸ್ಥರನ್ನೂ ಕರೆದು ತೋರಿಸಿ, ಹೆಚ್ಚು ಶ್ರಮದಿಂದಲೂ, ಉತ್ಸಾಹದಿಂದಲೂ ಕೆಲಸಮಾಡಿದ ವಿದ್ಯಾರ್ಥಿಗಳಿಗೆ ಉತ್ತೇಜನವನ್ನು ಕೊಡತಕ್ಕದ್ದು. ಇದರಿಂದ ಹುಡುಗರಿಗೆ ಪ್ರದರ್ಶನದ ಕಲ್ಪನೆಯನ್ನು ಮಾಡಿಕೊಟ್ಟಂತಾಗುವದು.

ಈ ತರದ ಪ್ರದರ್ಶನದಲ್ಲಿ ಉತ್ತಮವೆಂದು ನಿರ್ಣಯವಾದ ವಸ್ತುಗಳನ್ನೂ ಚಿತ್ರಗಳನ್ನೂ ಅವುಗಳನ್ನು ತಯಾರಿಸಿದ ಹುಡುಗರ ಹೆಸರುಸಹಿತ ಸಾಲೆಯ ವಸ್ತುಸಂಗ್ರಹಾಲಯದಲ್ಲಿ ಇಡತಕ್ಕದ್ದು. ಅದರಿಂದ ಆ ಹುಡುಗರಿಗೆ ಹೆಚ್ಚು ಉತ್ತೇಜನ ಕೊಟ್ಟಂತಾಗುವದಲ್ಲದೆ, ಆ ವಸ್ತುಗಳು ಒಮ್ಮೊಮ್ಮೆ ಶಿಕ್ಷಣಕ್ಕೆ ಉಪಯೋಗವಾಗುವವು.

ತ. ನಾ. ಅವಿನಾಶಭಾವಿ.

ಯೋಗ್ಯವಾದ ಆಹಾರ.

(ಭಾಷಾಂತರ)

ಕಳೆದ ಫೆಬ್ರುವರಿ ತಿಂಗಳ ಸಂಚಿಕೆಯಲ್ಲಿ ಬ್ರಹ್ಮಚರ್ಯದ ಬಗ್ಗೆ ವಿವೇಚಿಸಿರುತ್ತದೆ. ಆಗ್ಗೆ ಶರೀರಸಂಪತ್ತಿಯನ್ನು ಕಾಯ್ದುಕೊಳ್ಳಲಿಕ್ಕೆ ವ್ಯಾಯಾಮವು ಅವಶ್ಯವಾದದ್ದೆಂತಲೂ, ಆ ವ್ಯಾಯಾಮಕ್ಕೆ ಬ್ರಹ್ಮಚರ್ಯ ಮತ್ತು ಯೋಗ್ಯವಾದ ಆಹಾರ ಇವುಗಳ ಅವಶ್ಯಕತೆಯುಂಟೆತಲೂ ಉಲ್ಲೇಖಿಸಿದೆ. ಅದರಂತೆ ಯೋಗ್ಯವಾದ ಆಹಾರದ ಬಗ್ಗೆ ಇಲ್ಲಿ ಸಂಕ್ಷಿಪ್ತ ವಿವರಣೆಯನ್ನು ಕೊಡುತ್ತೇವೆ:—

ಶರೀರದಲ್ಲಿ ನಿತ್ಯವಾಗಿ ಆಗುತ್ತಿರುವ ಸವಕಳಿಯು ಬೆವರು, ಮೂತ್ರ, ಉಚ್ಛ್ವಾಸ ಮುಂತಾದ ಮಲಗಳ ರೂಪದಿಂದ ಹೊರಟು ಹೋಗುತ್ತದೆ. ಅದರಲ್ಲಿ ಬಹಳ ಭಾಗವು ಕಾರ್ಬನದ್ದು; ಸ್ವಲ್ಪಭಾಗವು ನೈಟ್ರೋಜನದ್ದು; ಅದಕ್ಕೂ ಸ್ವಲ್ಪ ಭಾಗವು ಕ್ಷಾರದ್ದು ಇರುತ್ತದೆ. ಆದ್ದರಿಂದ ಈ ದ್ರವ್ಯ (ಘಟಕ) ಗಳ ಪೂರೈಕೆಗಾಗಿ ನಮ್ಮ ಆಹಾರದಲ್ಲಿ ಬಹಳ ಭಾಗ ಕಾರ್ಬನ್, ಸ್ವಲ್ಪಭಾಗ ನೈಟ್ರೋಜನ್, ತೀರ ಸ್ವಲ್ಪಭಾಗ ಕ್ಷಾರ ಕೂಡಿದ್ದು ಇರಬೇಕು.

ನಮ್ಮ ಶರೀರದಲ್ಲಿಯು ಮಾಂಸದಲ್ಲಿರುವಂಥ ಮುಖ್ಯವಾದ ಘಟಕವು ನೈಟ್ರೋಜನವು. ಈ ನೈಟ್ರೋಜನವನ್ನು ಪೂರೈಸುವ ದ್ರವ್ಯಗಳಿಗೆ ಮಾಂಸೋತ್ಪಾದಕ ದ್ರವ್ಯಗಳೆನ್ನುವರು. ಮತ್ತು ಯಾವ ಆಹಾರದಲ್ಲಿ ಈ ಘಟಕವು ವಿಶೇಷವಾಗಿರುವದೋ ಆ ಆಹಾರಕ್ಕೆ ಮಾಂಸೋತ್ಪಾದಕ ಆಹಾರವೆನ್ನುವರು.

ನಮ್ಮ ಶರೀರಕ್ಕೆ ಅವಶ್ಯವಾದಷ್ಟು ಉಷ್ಣತೆಯು ಉತ್ಪನ್ನವಾಗುವದಕ್ಕೂ ಬೇರೆ ಬೇರೆ ಭಾಗಗಳ ಚಲನವಲನಗಳಾಗುವದಕ್ಕೂ ಶರೀರದೊಳಗಿನ ಯಾವ ದ್ರವ್ಯವು ಸುಡುತ್ತಿರುವದೋ ಅದು ಮುಖ್ಯವಾಗಿ ಕಾರ್ಬನಮಯವಾಗಿರುತ್ತದೆ. ಆದ್ದರಿಂದ ಇಂಥ ಕಾರ್ಬನಮಯವಾದ ದ್ರವ್ಯವನ್ನು ಶರೀರಕ್ಕೆ ಪೂರೈಸುವ ಆಹಾರಕ್ಕೆ ಕಾರ್ಬನ್‌ಯುಕ್ತವಾದ ಆಹಾರ, ಅಥವಾ ಉಷ್ಣತೋತ್ಪಾದಕ ಆಹಾರವೆನ್ನುವರು.

ಯಾವ ಆಹಾರದಲ್ಲಿ ಮಾಂಸೋತ್ಪಾದಕ ಭಾಗವು ವಿಶೇಷವಿರುವದೋ ಆ ಆಹಾರಕ್ಕೆ ಮಾಂಸೋತ್ಪಾದಕ ಆಹಾರ, ಮತ್ತು ಯಾವ

ಆಹಾರದಲ್ಲಿ ಉಷ್ಣತೋತ್ಪಾದಕ ಭಾಗವು ವಿಶೇಷವಾಗಿರುವದೋ ಆ ಆಹಾರಕ್ಕೆ ಉಷ್ಣತೋತ್ಪಾದಕ ಆಹಾರವೆಂಬುವ ಹೆಸರಿದೆ. ಆದರೆ ಬಹುಶಃ ಪ್ರತಿಯೊಂದು ಆಹಾರದಲ್ಲಿ ಇವೆರಡೂ ಭಾಗಗಳು ಸ್ವಲ್ಪ ಕಡಿಮೆ ಪ್ರಮಾಣದಿಂದ ಇದ್ದೇ ಇರುತ್ತವೆಂಬ ಮಾತನ್ನು ಪೂರ್ಣವಾಗಿ ಲಕ್ಷದಲ್ಲಿಟ್ಟುಕೊಳ್ಳತಕ್ಕದ್ದು.

ಮಾಂಸೋತ್ಪಾದಕ (ಪ್ರೊಟೀನ್‌ಜನಿಟಿಕ್ಸ್) ವಾದ ಆಹಾರದಲ್ಲಿಯ ಮುಖ್ಯ ಪ್ರಕಾರಗಳು:—ಮಾಂಸ, ತತ್ತಿ, ಹಾಲು, ಎಲ್ಲ ದ್ವಿದಲಧಾನ್ಯಗಳು.

ಉಷ್ಣತೋತ್ಪಾದಕ (ಕಾರ್ಬನಸ್) ವಾದ ಆಹಾರದಲ್ಲಿಯ ಮುಖ್ಯ ಪ್ರಕಾರಗಳು:— (೧) ಎಲ್ಲ ಪಿಷ್ಟಮಯ ಧಾನ್ಯಗಳು:—ಅಕ್ಕಿ, ಗೋದಿ, ಜೋಳ, ಸಜ್ಜೆ, ರಾಗಿ, ಹೊಗಲಾದವು. (೨) ಎಲ್ಲ ಪಿಷ್ಟಮಯವಾದ ಗಡ್ಡೆ, ಬೇರುಗಳು, ಮತ್ತು ಅವುಗಳಿಂದ ತಯಾರಿಸಿದ ಪದಾರ್ಥಗಳು. ಉದಾಹರಣೆ:—ಬಟಾಟೆ, ಸಾಬೂದಿಕ್ಕಿ, ಗೆಣಸು ಮೊದಲಾದವು. (೩) ಶರ್ಕರಾಮಯವಾದ ಪದಾರ್ಥಗಳು. ಉದಾ:—ಸಕ್ಕರೆ ಮತ್ತು ಯಾವದರಲ್ಲಿ ಸಕ್ಕರೆ ಇರುವದೋ ಆ ಎಲ್ಲ ಪದಾರ್ಥಗಳು. (೪) ಎಲ್ಲ ಪ್ರಕಾರದ ಅಂಟು. (೫) ಸ್ನಿಗ್ಧಪದಾರ್ಥಗಳು. ಉದಾ:—ತುಪ್ಪ, ಚರಬಿ, ಎಲ್ಲ ತರದ ಎಣ್ಣೆ. ಕ್ಷಾರಮಯವಲ್ಲದವು:—ಉಪ್ಪು ಕೇವಲ ಕ್ಷಾರಮಯವಾಗಿರುತ್ತದೆ. ತೆನ್ನವ ಪದಾರ್ಥಗಳಲ್ಲಿ ಉಪ್ಪಿನಷ್ಟು ಕ್ಷಾರವಸ್ತುಗಳ ಜೋರ ಪದಾರ್ಥವಿಲ್ಲ. ಕ್ಷಾರವು ಸ್ವಲ್ಪ ಪ್ರಮಾಣದಿಂದ ಹಣ್ಣು ಹಂಪಲ, ತತ್ತಿ, ಮಾಂಸ, ಕಾಯಿಪಲ್ಲೆ, ಧಾನ್ಯ ಇವುಗಳಿಂದಲೂ ದೊರಕುತ್ತದೆ.

ಉಷ್ಣತೋತ್ಪಾದಕ ಆಹಾರಗಳಲ್ಲಿ ಸ್ನಿಗ್ಧ ಪದಾರ್ಥಗಳಿಂದ ಕೂಡಿದ ಆಹಾರದಿಂದ ಶರೀರಕ್ಕೆ ಉಷ್ಣತೆಯು ಪೂರ್ತೆಕೆಯು ಬಹು ಬೇಗ ಆಗುತ್ತದೆ. ಇವುಗಳ ತರುವಾಯ ಶರ್ಕರಾಮಯ ಪದಾರ್ಥಗಳಿಂದಾಗುತ್ತದೆ. ಆದ್ದರಿಂದ ಉಷ್ಣತೋತ್ಪಾದಕ ಆಹಾರದಲ್ಲಿ ಈ ಪ್ರಕಾರವು ವಿಶೇಷ ಮಹತ್ವವುಳ್ಳದ್ದಿರುತ್ತದೆ. ಈ ಕಾರಣದ ಮೂಲಕ ಈ ಭಾಗದ ನಿರ್ದೇಶವು ಬೇರೆಯಾಗಿ ಮಾಡಲ್ಪಟ್ಟಿದೆ.

ಬೇರೆ ಬೇರೆ ಪ್ರಕಾರದ ಆಹಾರಗಳಲ್ಲಿರುವ ಮಾಂಸೋತ್ಪಾದಕ ಭಾಗಕ್ಕೆ ಇಂಗ್ಲೀಷದಿಂದ ಬೇರೆಬೇರೆ ಪ್ರಕಾರದ ಹೆಸರುಗಳಿವೆ. ಅವುಗಳ ವಿವರ:—

ಗೋದಿಯೊಳಗಿನ ಮಾಂಸೋತ್ಪಾದಕ ಭಾಗಕ್ಕೆ } ಗ್ಲೂಟೆನ ಅನ್ನುತ್ತಾರೆ.

ಹಾಲಿನೊಳಗಿನ ,, ಕೇಸೀನ್ ,,
ಬೇಳೆಯೊಳಗಿನ ,, ಲೆಗ್ಯುಮೆನ್ ,,
ಮಾಂಸದೊಳಗಿನ ,, ಪ್ರೋಟೀಡ್ ,,
ತತ್ತಿಯೊಳಗಿನ ,, ಅಲ್‌ಬ್ಯೂಮೆನ್ ,,

ಜೀರೆ ಜೀರೆ ಪ್ರಕಾರದ ಆಹಾರದಲ್ಲಿರುವ ಘಟಕಗಳ ವಿವರ:—ಸಾಧಾರಣವಾಗಿ ತಿನ್ನುವದರಲ್ಲಿ ಬರುವ ಪದಾರ್ಥಗಳಲ್ಲಿಯು ಮಾಂಸೋತ್ಪಾದಕ ಭಾಗ, ಪಿಷ್ಟಮಯ ಭಾಗ, ಸ್ನಿಗ್ಧಭಾಗ, ಕ್ಷಾರ ಇವುಗಳ ನೂರರಲ್ಲಿಯ ಪ್ರಮಾಣ ಕೆಳಗೆ ಬರೆದಂತೆ:—

ಪದಾರ್ಥಗಳ ಹೆಸರು.	ನೀರಿನಭಾಗ.	ಮಾಂಸೋತ್ಪಾದಕ ಭಾಗ.	ಪಿಷ್ಟಮಯ ಭಾಗ.	ಸ್ನಿಗ್ಧಭಾಗ.	ಕ್ಷಾರ.
ಪಾಲು.	೮೬	೫	೪	೪	೧
ಗೋದಿ.	೪೦	೮	೪೯.೨	೧.೫	೧.೩
ಕಡಲೆ.	೧೫	೧೧	೭೦.೩	.೨	೧.೭
ಅಕ್ಕಿ.	೧೦	೫	೮೩.೨	.೮	.೫
ಗೊಂಜಾಳ.	೧೩.೫	೧೦	೬೪.೫	೬.೭	೧.೪
ಬಟಗಣ್ಣಿ.	೧೫	೨೨	೫೩	೨	೨.೪
ಹೆಸರು.	೧೧	೨೦	೫೪	೪	,,
ತೊಗರಿ.	೧೩	೧೭	೫೫	೨	,,
ಮೆಸರು.	೧೧	೨೩	೫೪	೨	,,
ಉದ್ದು.	೧೧	೨೩	೫೪	೨	,,
ಬಟಾಟಿ.	೭೪	೧.೫	೨೩.೪	.೧	೧
ಗಜ್ಜರಿ.	೮೫	.೬	೮.೪	.೨೫	.೭
ಕೊಬಿ.	೯೧	.೨	೫.೮	.೫	.೭

ಮನುಷ್ಯನ ಶರೀರದಿಂದ ಯಾವ ಪದಾರ್ಥಗಳು ಮಲಮೂತ್ರಾದಿಗಳಿಂದ ಹೊರಬೀಳುವವೋ ಅವುಗಳ ಪರೀಕ್ಷೆಯನ್ನು ರಸಾಯನ ದೃಷ್ಟಿಯಿಂದ ಮಾಡಿದರೆ, ಸ್ಥೂಲವಾನದಿಂದ ಮುಂದೆ ಬರೆದ ಪದಾರ್ಥಗಳಿರುತ್ತವೆಂದು ತಿಳಿಯುತ್ತದೆ. ಅವು ಯಾವವೆಂದರೆ:— ೪೪ಸಾವಿರ ಗ್ರೇನ ಕಾರ್ಬನ್, ಮತ್ತು ೩೦೦ ಗ್ರೇನ ನಾಯಟ್ರೋಜನ್.

ಬೇರೆ ಬೇರೆ ಪ್ರಕಾರದ ಆಹಾರದಲ್ಲಿ ಕಾರ್ಬನ್ ಮತ್ತು ನಾಯಟ್ರೋಜನ್ ಇವುಗಳ ಪ್ರಮಾಣವು ಹ್ಯಾಗಿರುತ್ತದೆಂಬ ಬಗ್ಗೆ ಮೇಲೆ ಕೊಟ್ಟ ವಿವರದಿಂದ ತಿಳಿದು ಬರುವದೆನೆಂದರೆ:— ಸರಿಯಾಗಿ ೪೪ ಸಾವಿರ ಗ್ರೇನ ಕಾರ್ಬನ್ ಮತ್ತು ೩೦೦ ಗ್ರೇನ ನೈಟ್ರೋಜನ್ ಸಿಗುವಂಥ ಪದಾರ್ಥವು ಒಂದೂ ಇಲ್ಲ. ಪದಾರ್ಥಗಳಲ್ಲಿರುವ ಕಾರ್ಬನ್, ನಾಯಟ್ರೋಜನ್ ಇವುಗಳಲ್ಲಿ ಒಂದನ್ನು ತಮಗೆ ಬೇಕಾಗುವಷ್ಟು ತಕ್ಕೊಂಡರೆ, ಎರಡನೇದು ಕಡಿಮೆಯಾಗಬಹುದು, ಇಲ್ಲವೆ ಹೆಚ್ಚಾಗಬಹುದು. ಉದಾಹರಣಾರ್ಥವಾಗಿ:— ಗೋದಿಯ ಚಪಾತಿಯಲ್ಲಿ ಕಾರ್ಬನ್ ಮತ್ತು ನಾಯಟ್ರೋಜನ್ ಇವುಗಳ ಪ್ರಮಾಣವು ೩೦ : ೧ ಇರುವದರಿಂದ ನಮಗೆ ಬೇಕಾಗುವಷ್ಟು ನಾಯಟ್ರೋಜನವು (೩೦೦ ಗ್ರೇನ ನಾಯಟ್ರೋಜನ್) ಸಿಗುವಷ್ಟು ಚಪಾತಿ ತಿಂದರೆ ೯೦೦೦ ಗ್ರೇನ್ ಕಾರ್ಬನವು ಹೊಟ್ಟೆಯಲ್ಲಿ ಸೇರುವದು. ಇದರ ಮೇಲಿಂದ ನಮಗೆ ಬೇಕಾಗುವಷ್ಟಕ್ಕಿಂತ ೪೪ ಸಾವಿರ ಗ್ರೇನ ಕಾರ್ಬನ್ ಹೆಚ್ಚು ಸೇರಿದಂತಾಯಿತು.

ಹೀಗೆಯೇ ಮಾಂಸದಲ್ಲಿ ಕಾರ್ಬನ್-ನಾಯಟ್ರೋಜನಗಳ ಪ್ರಮಾಣವು ೩ : ೧ ಇರುವದರಿಂದ, ೩೦೦ ಗ್ರೇನ ನಾಯಟ್ರೋಜನ ಸಿಗುವಷ್ಟು ಮಾಂಸ ತಿಂದರೆ, ೧೦೫೦ ಗ್ರೇನ ಕಾರ್ಬನ್ ಹೊಟ್ಟೆಯಲ್ಲಿ ಸೇರುವದು; ಅಂದರೆ, ಬೇಕಾಗುವಷ್ಟಕ್ಕಿಂತ ಅಜಮಾಸು ೪೪ ಸಾವಿರ ಗ್ರೇನ ಕಾರ್ಬನ್ ಕಡಿಮೆ ಸಿಕ್ಕಂತಾಯಿತು. ಇದರಂತೆಯೇ ಎಲ್ಲ ಪ್ರಕಾರದ ಆಹಾರಕ್ಕೂ ಈ ಮಾತು ಸರಿಬೀಳುತ್ತದೆ.

ಆಹಾರದಲ್ಲಿಯ ಎಷ್ಟು ದ್ರವ್ಯಗಳಿಂದ ರಕ್ತಮಾಂಸಗಳು ತಯಾರಾಗುವವೆಂಬ ಬಗ್ಗೆ ಕೆಲವೊಂದು ಮರ್ಯಾದೆಯು ಇರುತ್ತದೆ. ಅದರಿಂದ ಈ ಮರ್ಯಾದೆ ವಿಾರಿ ಯಾವ ದ್ರವ್ಯವು ಶರೀರದಲ್ಲಿ ಹೋಗುವದೋ ಅದನ್ನು

ಹೊರಗೆ ಹಾಕುವದಕ್ಕಾಗಿ ಶರೀರಕ್ಕೆ ವಿನಾಕಾರಣ ಶ್ರಮಬಟ್ಟು ಆಪಾಯವಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಶರೀರಕ್ಕೆ ಬೇಕಾಗುವಷ್ಟು ಬೇರೆ ಬೇರೆ ದ್ರವ್ಯಗಳು ಆಹಾರದಿಂದ ಸಿಗಬೇಕಾದರೆ ಅವುಗಳ ಮಿಶ್ರಣವನ್ನು ಯೋಗ್ಯ ರೀತಿಯಿಂದ ಮಾಡಬೇಕಾಗುತ್ತದೆ. ಈ ಕಾರಣದ ಮೂಲಕ ಪ್ರತಿ ದಿವಸದ ಆಹಾರದಲ್ಲಿ ಒಕ್ಕರಿ ಮತ್ತು ಅನ್ನ ೫೦ ರಿಂದ ೬೦ ತೊಲಿ, ಬೇಳೆ ೧೦ ತೊಲಿ, ತುಪ್ಪ ಇಲ್ಲವೆ ಎಣ್ಣೆ ೨ ರಿಂದ ೫ ತೊಲಿ, ಹಾಲು ಅಚ್ಚೇರು ಈ ಪ್ರಮಾಣದಿಂದ ಬೇರೆ ಬೇರೆ ಪದಾರ್ಥಗಳಿರುವದು ಯೋಗ್ಯವಿರುತ್ತದೆ.

ಬೇರೆ ಬೇರೆ ಆಹಾರಗಳ ಪಚನಗಳ ಬಗ್ಗೆ:— ಪ್ರತಿಯೊಂದು ಆಹಾರವು ಪಚನವಾಗುವ ಕಾಲವು ಸರಿಯಾಗಿರುವದಿಲ್ಲ. ಅಂದರೆ ಕೆಲ ಕೆಲವು ಆಹಾರಗಳಲ್ಲಿಯ ಘಟಕಗಳು ಜಡವಾಗಿರುವವು. ಉದಾಹರಣಾರ್ಥವಾಗಿ:— ಹಾಲಿನಲ್ಲಿಯ ಮಾಂಸೋತ್ಪಾದಕ ಭಾಗವು ಪಚನಕ್ಕೆ ಬಹಳ ಹಗುರಾಗಿರುವದು; ಆದರೆ ಬೇಳೆಯಲ್ಲಿರುವ ಮಾಂಸೋತ್ಪಾದಕ ಭಾಗವು ಪಚನಕ್ಕೆ ಬಹಳ ಜಡವಾಗಿರುವದು. ಇದರಂತೆ, ತುಪ್ಪವು ಪಚನಕ್ಕೆ ಹಗುರಾಗುವದು; ಆದರೆ ಎಣ್ಣೆಯು ಜಡವಾಗಿರುತ್ತದೆ. ಇನ್ನು ಶರೀರಕ್ಕೆ ಆಹಾರದಿಂದ ಲಾಭವಾಗುವದು ಆ ಅನ್ನದ ಯೋಗ್ಯ ಪಚನವನ್ನು ಅವಲಂಬಿಸಿರುತ್ತದೆ. ಆದ್ದರಿಂದ, ಯಾವದೋ೦ದು ಆಹಾರದಿಂದ ಶರೀರಕ್ಕೆ ಎಷ್ಟು ಲಾಭವಾಗುತ್ತದೆಂಬದು ಆ ಆಹಾರದಲ್ಲಿಯ ಪೋಷಕ ದ್ರವ್ಯಗಳ ಪಚನಕಾಲದ ವಿಚಾರದಿಂದ ತಿಳಿಯುತ್ತದೆ.

ಮಾಂಸೋತ್ಪಾದಕ ಭಾಗದ ಪಚನದ ಸಂಬಂಧವಾಗಿ ಬೇರೆ ಬೇರೆ ಪದಾರ್ಥಗಳ ನಂಬರುಗಳು:— ಹಾಲು, ಗೋದಿ, ಹೆಸರು, ಬಟಗಡ್ಲೆ, ಚನ್ನಂಗಿ, ಉದ್ದು, ಕಣ್ಲಿ, ತೊಗರಿ ಮೊದಲಾದವು. ಪಚನದ ಸಂಬಂಧವಾಗಿ ಸ್ನಿಗ್ಧ ಪದಾರ್ಥಗಳ ನಂಬರುಗಳು:— ತುಪ್ಪ, ಎಣ್ಣೆ, ಎಳ್ಳಿನ ಎಣ್ಣೆ, ಕುಸುಬೆಯ ಎಣ್ಣೆ, ಇತರ ಎಣ್ಣೆಗಳು.

ಪಚನಕ್ಕೆ ಹಗುರಾಗಿರುವ ಪದಾರ್ಥಗಳು:—ಹಾಲು, ಅಕ್ಕಿ, ಸಾಬು ಅಕ್ಕಿ, ಬಾದಾವಿ. ಸುಲಭವಾಗಿ ಪಚನವಾಗುವ ಹಣ್ಣುಗಳು:— ಸಪ್ಪರ ಚಂದ, ದ್ರಾಕ್ಷೆ, ದಾಳಿಂಬ.

ನಾಯಟ್ರೋಜನವಿಶಿಷ್ಟವಾದ ಪದಾರ್ಥಗಳು ವಿಪುಲವಾಗಿದ್ದರೂ ಪೌಷ್ಟಿಕತೆಗಾಗಿ ಮೇಲಿನ ಪದಾರ್ಥಗಳ ಉಪಯೋಗವನ್ನೇ ಮನುಷ್ಯರು ಯಾಕೆ ಮಾಡುತ್ತಾರೆಂಬ ಬಗ್ಗೆ ಮೇಲಿನ ವಿವರದಿಂದ ತಿಳಿದುಬರುವಂತಿದೆ.

ಅಗ್ಗವಾದ ಮತ್ತು ಪೌಷ್ಟಿಕವಾದ ಆಹಾರಗಳಲ್ಲಿ ಭಯಮೂಗದ ನಂಬರವು ಮೊದಲನೆಯದಾಗಿರುತ್ತದೆ. ಇದರ ತರುವಾಯ ಹೆಸರು, ಕಡ್ಲೆ ಈ ದ್ವಿದಲಧಾನ್ಯಗಳು ಪೌಷ್ಟಿಕಗಳಾಗಿವೆ. ಆದರೆ ಈ ಪದಾರ್ಥಗಳು ಪಚನಕ್ಕೆ ಜಡವಾಗಿರುವವು. ಆದರೂ ಯಾವ ಪಚನ ಶಕ್ತಿಯು ನೆಟ್ಟಗಿರುವದೋ, ಅಂಥ ಬಡ ಹುಡುಗರು ಇದರ ಉಪಯೋಗಮಾಡಿಕೊಳ್ಳಲಿಕ್ಕೆ ಅಡ್ಡಿ ಇಲ್ಲ. ಯಾರಿಗೆ ಬಡತನದ ಮೂಲಕ ಹಾಲು ತಕ್ಕೊಳ್ಳಲಿಕ್ಕಾಗುವದಿಲ್ಲವೋ ಅವರು ಈ ಪದಾರ್ಥದ ಉಪಯೋಗವನ್ನು ಅವಶ್ಯವಾಗಿ ಮಾಡಿಕೊಳ್ಳತಕ್ಕದ್ದು. ವ್ಯಾಯಾಮುಮಾಡಿ ನೆನೆಸಿನ ಕಡ್ಲೇ ಬೇಳೆ ತಿನ್ನುವ ರೂಢಿಯು ನಮ್ಮ ಕಡೆಯ ಜನರಲ್ಲಿ ಇದ್ದೇ ಇರುತ್ತದೆ. ಪಚನಕ್ಕೆ ಹಗುರಾಗಿರುವ ಸ್ನಿಗ್ಧ ಆಹಾರವೆಂದರೆ ಎಣ್ಣೆಯು. ಆದ್ದರಿಂದ ಯಾರಿಗೆ ಬಡತನದ ಮೂಲಕ ತುಪ್ಪವು ಸಿಗುವದಿಲ್ಲವೋ ಅವರು ಎಣ್ಣೆಯ ಉಪಯೋಗ ಮಾಡಿಕೊಳ್ಳಬೇಕು. ಕೊಬ್ಬರಿಯು ಪೌಷ್ಟಿಕ ಪದಾರ್ಥವಿರುತ್ತದೆ. ಆದರೆ ಅದು ಸ್ವಲ್ಪ ಜಡ, ಕಾರಣ ಚಲೋ ಪಚನಶಕ್ತಿಯುಳ್ಳ ಮನುಷ್ಯರು ಶಕ್ತಿಯು ಸಲವಾಗಿ ತಿನ್ನಬೇಕು.

ಆಹಾರ ಸಂಬಂಧವು ಕಿರುಕುಳ ಸಂಗತಿಗಳು:— ಸಾಕಷ್ಟಕ್ಕಿಂತ ಹೆಚ್ಚು ಬೆಂದ ಅನ್ನ, ಮತ್ತು ತುಪ್ಪ ಇಲ್ಲವೆ ಎಣ್ಣೆಯಲ್ಲಿ ಕರೆದ ಪದಾರ್ಥಗಳು ಪಚನಕ್ಕೆ ಜಡವಾಗಿರುವವು. ಆದ್ದರಿಂದ ಇಂಥ ಪದಾರ್ಥಗಳು ಊಟದಲ್ಲಿ ವಿಶೇಷವಾಗಿ ಬರಬಾರದು.

ಶರೀರಕ್ಕೆ ಬೇಕಾಗುವ ಮಹತ್ವದ ಪ್ರಕಾರವು ಕಾಯಿಪಲ್ಲೆಯಿಂದ ದೊರೆಯುತ್ತದೆ. ಇವನ್ನು ತಿನ್ನದಿದ್ದರೆ ರಕ್ತವು ಶುದ್ಧತ್ವವನ್ನು ಹೊಂದುವದಿಲ್ಲ. ಮತ್ತು ಬಹುಮ್ಮೆ ಸ್ಕರ್ವಿರೋಗವಾಗುವ ಸಂಭವವಿದೆ. ಆದ್ದರಿಂದ ತಾಜಾ ಕಾಯಿಪಲ್ಲೆಯನ್ನು ಅವಶ್ಯವಾಗಿ ತಿನ್ನುತ್ತ ಹೋಗಬೇಕು. ಕಾಯಿಪಲ್ಲೆಯು ಸಿಗದಿದ್ದರೆ ಕನಿಷ್ಟ ಪಕ್ಷಕ್ಕೆ ಚಿಕ್ಕಲಿಂಬಿಯು ಉಪಯೋಗವನ್ನಾದರೂ ಊಟದಲ್ಲಿ ಮಾಡಬೇಕು.

ಉಳ್ಳೀಗಡ್ಡಿ, ಬಟಾಟೆ, ಟೊಮೆಟೋ ಇವುಗಳ ಪಲ್ಲೆಯು ಶುದ್ಧಿಕಾರಕವಿರುತ್ತದೆ. ಟೊಮೆಟೋದ ಪಲ್ಲೆಯು ಸುಲಭವಾಗಿ ಪಚನವಾಗುತ್ತದೆ. ಆದ್ದರಿಂದ ಊಟದಲ್ಲಿ ಇವುಗಳ ಉಪಯೋಗವನ್ನು ಮಾಡಿಕೊಳ್ಳಬೇಕು. ಆದರೆ ಉಳ್ಳೀಗಡ್ಡೆಯು ಕಾಮೋತ್ತೇಜಕವಿದ್ದುದರಿಂದ ವಿದ್ಯಾರ್ಥಿಗಳೂ, ಬ್ರಹ್ಮಚಾರಿಗಳೂ ಉಪಯೋಗಮಾಡಬಾರದು.

ಹಣ್ಣು:—ಎಷ್ಟೋ ಹಣ್ಣುಗಳು ಪಚನಕ್ಕೆ ಹಗುರಾಗಿರುವವು; ಮತ್ತು ಇವುಗಳಿಂದ ಮಹತ್ವದ ಪ್ರಾಣವು ಶರೀರಕ್ಕೆ ಸಿಗುತ್ತದೆ. ಆದ್ದರಿಂದ ಆಹಾರದಲ್ಲಿ ಹಣ್ಣುಗಳು ಅವಶ್ಯವಾಗಿ ಬೇಕು. ಊಟವಾದ ಮೇಲೆ ಹಣ್ಣು ತಿನ್ನುವದು ಹಿತಕರವಾಗಿರುತ್ತದೆ. ಯಾಕಂದರೆ ಹಣ್ಣುಗಳಲ್ಲಿಯ ಎಷ್ಟೋ ಪಾಚಕ ರಸವು ಆಹಾರದಲ್ಲಿ ಸೇರಿ, ತಿಂದದ್ದರ ಪಚನವನ್ನು ಚನ್ನಾಗಿ ಮಾಡುತ್ತದೆ. ಎಷ್ಟೋ ಹಣ್ಣುಗಳಲ್ಲಿ ಮಲಶುದ್ಧಿಮಾಡುವ ಧರ್ಮವಿರುತ್ತದೆ. ಯಾರ ಪಚನ ಶಕ್ತಿಯು ಮಂದವಾಗಿರುವದೋ ಅಂಥವರು ಆಹಾರದಲ್ಲಿ ಹಣ್ಣುಗಳನ್ನು ವಿಶೇಷವಾಗಿ ಉಪಯೋಗಿಸಬೇಕು.

ಕೆಲವು ಹಣ್ಣುಗಳ ಗುಣಧರ್ಮಗಳು ಕೆಳಗೆ ಬರದಂತೆ ಇರುತ್ತವೆ:-

ಮಾವು:—ಬಹಳ ಪೌಷ್ಟಿಕವು, ಆದರೆ ಸ್ವಲ್ಪ ಜಡವಾಗಿರುವದು. ಯಾರಿಗೆ ಅಜೀರ್ಣದ ಬಾಧೆ ಇಲ್ಲವೋ ಅವರು ಇದನ್ನು ಅವಶ್ಯವಾಗಿ ತಿನ್ನಬೇಕು. ಮಾವು ತಿನ್ನುವದರಿಂದ ಒಬ್ಬನ ಕ್ಷಯರೋಗವು ನೆಟ್ಟಗಾಯಿತೆಂದು ತಿಳಿಯುತ್ತದೆ. ಕ್ಷೀಣವಾಡುವ ಅನೇಕ ರೋಗಗಳಿಗೆ "ಕ್ಷಯರೋಗ" ವೆಂದು ಸಾಮಾನ್ಯ ಜನರು ಅನ್ನುವರು, ಇಂಥ ರೋಗಗಳೊಳಗಿನದೇ ಈ ಮೇಲಿನ ಕ್ಷಯರೋಗವಿದ್ದಂತೆ ನಮಗೆ ತೋರುತ್ತದೆ. ನಿಜವಾದ ಕ್ಷಯರೋಗವು ಈ ರೀತಿಯಿಂದ ನೆಟ್ಟಗಾಗುವದು ಅಶಕ್ಯವಾಗಿರುತ್ತದೆಂಬ ಮಾತನ್ನು ಪೂರ್ಣ ಲಕ್ಷದಲ್ಲಿಡಬೇಕು

ಜಿಲ್ಲಾ ಬೆಳಗಾವ,
ತಾ. ೧೬-೫-೧೯೧೫ ಇಸವಿ.
ಪಾಟೀಲ ಪೂರ.

ಭಾಷಾಂತರಕಾರ
ಗೋಪಾಳ ನಾಗೇಶ ಜಿಕ್ಕೋಡಿ,
ಉಪಶಿಕ್ಷಕ ಶಾಲಾ ಪಾಟೀಲ್ಪೂರ, ಕನ್ನಡ.

ಪತ್ರವ್ಯವಹಾರವು.

ಮೆ. ರಾ. ರಾಜಶ್ರೀ ಕನ್ನಡ ಶಾಲಾಪತ್ರಿಕೆಯ ಎಡಿಟರ ದೊರೆಗಳವರ ಸನ್ನಿಧಿಗೆ:—

ಸಾ. ನೆ. ಗಳು. ಕೆಳಗೆ ಕೊಟ್ಟ ನಾಲ್ಕು ಪಂಕ್ತಿಗಳಿಗೆ ಯೋಗ್ಯ ಕಂಡಲ್ಲಿ ತಮ್ಮ ಅಂದವಾದ ಶಾಲಾಪತ್ರಿಕೆಯಲ್ಲಿ ಸ್ಥಳ ಕೊಡುವಿರೆಂದು ನಂಬಿದ್ದೇನೆ.

ಗ್ರಂಥಗಳಲ್ಲಿ ಸಾಧಾರಣವಾಗಿ ಗದ್ಯವೆಂತಲೂ ಪದ್ಯವೆಂತಲೂ ಎರಡು ಭೇದಗಳುಂಟು. ಗದ್ಯವನ್ನು ಓದುವಾಗ ಅರ್ಥಬೋಧವಾಗುವದಷ್ಟೇ ಮುಖ್ಯ ಉದ್ದೇಶವಿರುತ್ತದೆ. ಆದರೆ ಪದ್ಯದಲ್ಲಿ ಹಾಗಲ್ಲ; ಸುಲಭವಾಗಿ ಅರ್ಥಬೋಧವಾಗುವದು ಕವಿತೆಯ ಮುಖ್ಯ ಉದ್ದೇಶವಲ್ಲ. ಬರೇ ಅರ್ಥಸುಬೋಧತೆಯೇ ಬೇಕಾಗಿದ್ದರೆ ಗದ್ಯದಲ್ಲಿ ಗ್ರಂಥ ಬರೆಯಲಿಕ್ಕೆ ಏನೂ ಅಡ್ಡಿ ಇಲ್ಲ. ವಾಕ್ಯರಚನೆಗೆ ಎಷ್ಟೆಷ್ಟು ನಿರ್ಬಂಧಗಳನ್ನು ಮಾಡಬಹುದೋ ಅಷ್ಟಷ್ಟು ಅದು ದುರ್ಬೋಧವಾಗುವದು ಸ್ವಾಭಾವಿಕವು. ಗದ್ಯಗ್ರಂಥಗಳನ್ನು ಬರೆಯುವವನಿಗೆ ಬೇಕಾದ ಶಬ್ದಗಳನ್ನು ಹಾಕಲಿಕ್ಕೆ ಅಡ್ಡಿ ಇಲ್ಲ. ಆದರೆ ಪದ್ಯಗಳನ್ನು ಮಾಡುವಾಗ ಪ್ರಾಸ, ಯತಿ ಮೊದಲಾದ ಛಂದಃಶಾಸ್ತ್ರದ ನಿಯಮಗಳಿಗೆ ಅನುಸರಿಸಬೇಕಾಗಿ ತನ್ನ ಮನಸ್ಸಿಗೆ ಬಂದ ಶಬ್ದಗಳನ್ನು ಹಾಕುವದಕ್ಕೆ ಅಡ್ಡಿಯಾಗುವದರಿಂದ, ಕೆಲವು ಸ್ಥಳಗಳಲ್ಲಿ ದುರ್ಬೋಧ ಶಬ್ದಗಳನ್ನು ಹಾಕುವ ಪ್ರಸಂಗ ಬರುತ್ತದೆ. ಹೀಗಾಗಿ ಕವಿತೆಗಳು ಗದ್ಯಗಳಂತೆ ಸುಬೋಧವಾಗದಿರುವದು ಎಲ್ಲರಿಗೂ ಗೊತ್ತಿದ್ದ ಮಾತು. ಗದ್ಯದಲ್ಲಿದ್ದ ಗ್ರಂಥಗಳನ್ನು ಅರ್ಥ ತಿಳುಕೊಂಡು ಎಷ್ಟು ಪುಟಗಳನ್ನು ಓದಬಹುದೋ ಅಷ್ಟು ಪದ್ಯ ಗ್ರಂಥಗಳನ್ನು ಓದುವಹಾಗದು. ಇದರಿಂದ ಅರ್ಥಸುಬೋಧತೆಯಾಗುವದು ಪದ್ಯಗಳ ಮುಖ್ಯ ಉದ್ದೇಶವೆಂದು ಹೇಳಲಿಕ್ಕೆ ಬರುವದಿಲ್ಲ. ಅವು ತಮ್ಮ ತಮ್ಮ ಧಾಟಿಯಿಂದ ಅನ್ಯತಕ್ಕವುಗಳಾಗಿವೆ. ಯಾವ ವಾಕ್ಯಗಳು ಧಾಟಿಯಿಂದ ಅನ್ಯತಕ್ಕವುಗಳೋ ಅವೇ ಪದ್ಯಗಳು.

ಯತಿ, ಪ್ರಾಸ, ಗಣ ಮೊದಲಾದವುಗಳು ಕವಿತೆಯ 'ಅಂಗಗಳು' ಇವುಗಳಲ್ಲಿ ಯಾವದೊಂದನ್ನು ಬಿಡಲಿಕ್ಕೆ ಛಂದಃಶಾಸ್ತ್ರದಲ್ಲಿ ಅಧಿಕಾರವಿಲ್ಲದರಿಂದ ಯಾರಿಗೂ ಅಧಿಕಾರವಿಲ್ಲ.

ಯತಿಯು ಯೋಗ್ಯತೆಯು ಕವಿತೆಯಲ್ಲಿ ಮುಖ್ಯವಾದದ್ದು. ಯತಿಯ ನಿರ್ಬಂಧವೇ ಬೇಡಾಗಿದ್ದರೆ ಕವಿತೆಯೇ ಹುಟ್ಟುವದು ಅಶಕ್ಯವು. ಚರಣಾಂತ್ಯದಲ್ಲಿಯೂ ಪದ್ಯದ ಪೂರ್ವಾರ್ಧದ ಕಡೆಯಲ್ಲಿಯೂ ಉತ್ತರಾರ್ಧದ ಕಡೆಯಲ್ಲಿಯೂ ಯತಿಯು ಇದ್ದೇ ಇರುತ್ತದೆ. ಯತಿಯನ್ನೇ ಬಿಟ್ಟರೆ ಬರೇ ಉದ್ದಕ್ಕೆ ಓದಿದ್ದಿಲ್ಲ ಪದ್ಯವೇ ಆಗಬೇಕಾಯಿತು.

ದೊಡ್ಡವರು ಒಂದು ವೇಳೆ ಯತಿಭಂಗ ಮಾಡಿದರೂ ಅದನ್ನೇ ನಾವು ಮುಂದಿಟ್ಟುಕೊಂಡು, ಅದರಂತೆ ನಡೆಯಲಿಕ್ಕೆ ಪ್ರಯತ್ನಿಸುವದು ಯೋಗ್ಯವಲ್ಲ. ದೊಡ್ಡ ದೊಡ್ಡ ಕವಿಗಳ ಗ್ರಂಥಗಳಲ್ಲಿ ಸಹ ಒಂದರ್ಥ ದೋಷಗಳು ಏಕೋಹಿ ದೋಷೋ ಗುಣಸಂನಿಪಾತೇ ನಿಮಜ್ಜತೀಂದೋಃ ಕಿರಣೇಷ್ವಿವಾಙ್ಕಃ ಎಂಬಂತೆ ಭೂಷಣಾಸ್ಪದಗಳೇ ಆಗುವವು.

ಕನ್ನಡ ಭಾಷೆಯಲ್ಲಿ ಸಂಸ್ಕೃತ ಭಾಷೆಯಲ್ಲಿಯಂತೆ ಶಬ್ದಸಂಗ್ರಹ ವಿಶೇಷವಿಲ್ಲದಿರುವದರಿಂದ, ನಿರ್ವಾಹವಿಲ್ಲದೆ ಎಷ್ಟೋ ಸ್ಥಳಗಳಲ್ಲಿ ಯತಿಭಂಗ ಮಾಡುವ ಪ್ರಸಂಗಗಳು ದೊಡ್ಡ ಕವಿಗಳಿಗೆ ಬಂದರೂ, ಅವು ದೊಡ್ಡವರ ಗ್ರಂಥಗಳಲ್ಲಿದ್ದ ಕಾರಣದಿಂದ ನಿರ್ದೋಷವಾಗಿರುವವು. ಆದರೂ ಮುಂದೆ ಕವಿತೆ ಮಾಡುವವರು ಯತಿಯನ್ನು ಲಕ್ಷಿಸಬಾರದೆನ್ನಲಿಕ್ಕಾಗದು.

ಪದ್ಯದಲ್ಲಿರುವ ಅನೇಕ ದೋಷಗಳಲ್ಲಿ ಯತಿಭಂಗವೆಂಬದೊಂದು ದೋಷವಿರುತ್ತದೆ. ಇದು ಯಾಕೆ ದೋಷವಾಗಿದೆಯೆಂದರೆ, ಪದ್ಯವನ್ನು ಅದರ ಪದ್ಧತಿಯ ಪ್ರಕಾರ ಅನ್ನುತ್ತ ಹೋಗಲು ಯತಿಭಂಗವಿದ್ದ ಸ್ಥಳದಲ್ಲಿ ಅರ್ಥಬೋಧವಾಗುವದಕ್ಕೆ ಸ್ವಲ್ಪ ಜಡವಾಗುತ್ತದೆ. "ಕುವರಂ ವಂಶಕೆ ಭೂಷಣಂ ಸತಿಗೆ ಪಾತಿವ್ರತ್ಯವೇ ಭೂಷಣಂ" ಇದರಲ್ಲಿ "ಸತಿಗೆ ಪಾ" ಇದರ ಮುಂದೆ ಸ್ವಲ್ಪ ಹೆಚ್ಚು ವೇಳೆ ನಿಲ್ಲಬೇಕಾಗಿ ಮುಂದೆ ಬರೇ "ತಿವ್ರತ್ಯವೇ ಭೂಷಣಂ" ಎಂದು ಅನ್ನಬೇಕಾಗುವದು. ಇದರಿಂದ ಕನ್ನಡ ಭಾಷೆ ಅರಿಯದವರಿಗೆ ಒಂದು ವೇಳೆ ಪಾತಿವ್ರತ್ಯವೇ ಭೂಷಣಂ ಎಂದು ಅರ್ಥವಾಗುವದರ ಬದಲು "ತಿವ್ರತ್ಯವೇ ಭೂಷಣಂ" ಎಂದು ಕವಿಗೆ ಬಿದ್ದು "ತಿವ್ರತ್ಯ" ವೆಂದರೇನು? ಹೀಗೆ ಸಂಶಯ ಬರಬಹುದು. ಆದರೆ ಇದರಲ್ಲಿ ಯಾರದು ತಪ್ಪು? ಯತಿಭಂಗವಾದರೆ ಅರ್ಥಕ್ಕೆ ಸುಬೋಧತೆ ಹುಟ್ಟುವದಿಲ್ಲವೆಂದೇ ಯತಿಚ್ಛೇದವು ದೋಷಗಳಲ್ಲಿ ಎಣಿಸಲ್ಪಟ್ಟಿದೆ. ಯತಿ ಇದ್ದಲ್ಲಿ ನಿಂತರೆ ಅರ್ಥದುಬೋಧತೆಯಾಗುವ ಪ್ರಸಂ

ಗದಲ್ಲಿ, ನಿಲ್ಲದೆ ಅರ್ಥ ಸರಳವಾಗುವಂತೆ ಅನ್ನಲಿಕ್ಕೆ ಬರುತ್ತಿದ್ದರೆ; ಯತಿ ಭಂಗವು ದೋಷವೇ ಆಗಬಾರದಾಯಿತು. ಆದರೆ ಅದು ಛಂದಃಶಾಸ್ತ್ರದಲ್ಲಿ ದೋಷವಿದೆ.

ಯತಿಸ್ಥಾನದಲ್ಲಿ ಯತಿಯು ಶೋಭವಾಗುವಂತೆ ಸ್ವಲ್ಪ ನಿಂತ. ಮುಂದೆ ಅನ್ನಬೇಕೆಂಬುವ ಮಾತು ಸ್ಪಷ್ಟವಾದದ್ದೂ ಸಹಜಸಿದ್ಧವಾದದ್ದೂ ಅದೆ. ಇದಕ್ಕೆ ಎರಡನೆಯ ಆಧಾರವೇ ಬೇಡ. ಯತಿ ಶಬ್ದದ ಧಾತ್ವರ್ಥವೇ ಸಾಗದೆ.

ಈ ವಿಷಯದಲ್ಲಿ ಮತಭೇದವಿರುವ ಸಂಭವವಿರುವದರಿಂದ ನನ್ನ ಅಲ್ಪಮತಿಗೆ ತೋಚಿದಷ್ಟು ಬರೆದಿದ್ದೇನೆ. ವ್ಯವಸಾಯಬಂಧುಗಳು ಇದರಬಗ್ಗೆ ಪೂರ್ಣ ನಿರ್ಣಯ ಮಾಡುವರೆಂದು ಆಶಿಸುತ್ತೇನೆ.

ಮಹಾನುಭಾವರೇ ಪತ್ರವಿಸ್ತಾರಕ್ಕೆ ಕ್ಷಮೆ ಇರಲಿ. ಇಂತೀ ವಿನ್ನಹ.

ಶಾಖಾ ಐಗಳ
ತಾ|| ಅಥಣಿ ಜಿ|| ಬೆಳಗಾವ
ತಾ|| ೩೦-೫ ೧೯೧೪ ಇ.

ನಮ್ರ ವಿಧೇಯ
ದಾಸೋ ಮಹಿಪತಿ ಕುಲಕರ್ಣಿ,
ಅನೇ ಅ|| ವಾಸ್ತರ ಐಗಳ.

ಪ್ರೇಮ.

ವ್ಯಭಿಚಾರವು ಒಂದು ಪ್ರಕಾರದ ವ್ಯಸನವಿದ್ದಂತೆ ಪ್ರೇಮವಾದರೂ ಒಂದು ತರದ ವ್ಯಸನವಾಗಿರುತ್ತದೆ. ಆದರೆ ಇವೆರಡು ವ್ಯಸನಗಳು ಒಂದಕ್ಕೊಂದು ತೀರ ಭಿನ್ನವಾಗಿರುವವು. ವ್ಯಭಿಚಾರದ ವ್ಯಸನದಿಂದ ಭಯಂಕರವಾದ ಅನರ್ಥಗಳುಂಟಾಗುತ್ತವೆ; ಆದರೆ ಪ್ರೇಮದ ವ್ಯಸನದಿಂದ ಸುಖಶಾಂತಿಗಳು ಉದ್ಭವಿಸುತ್ತವೆ. ಪ್ರೇಮವು ಒಂದು ವಿಲಕ್ಷಣವಾದ ವಸ್ತುವು. ಇದು ಕಣ್ಣಿಗೆ ಕಾಣಿಸುವಂಥಾದ್ದಲ್ಲ. ಆದರೆ ಎಲ್ಲ ತರದ ಸುಖದ ಮೂಲವಾಗಿರುವುದರಿಂದ ಅದರ ಪರಿಣಾಮವು ಮಾತ್ರ ಸ್ಪಷ್ಟ ಕಾಣಿಸುತ್ತದೆ. ಪ್ರೇಮವು ಎಲ್ಲ ಸ್ಥಳಗಳಲ್ಲಿಯೂ ಇರುವುದು; ಪ್ರೇಮವಿಲ್ಲದ ಸ್ಥಳವೇ ಇಲ್ಲ. ಪ್ರತಿಯೊಂದು ಪ್ರಾಣಿಮಾತ್ರದ ಹೃದಯದಲ್ಲಿ ತುಸು ಹೆಚ್ಚು ಕಡಿಮೆ ಪ್ರಮಾಣದಿಂದ ಈಶ್ವರನು ಪ್ರೇಮವನ್ನು ಇಟ್ಟೇ ಇಟ್ಟಿರುವನು.

ಯಾವ ಪದಾರ್ಥವೇ ಇರಲಿ, ಅದರ ಮೇಲೆ ಯಾವ ಪ್ರೇಮವಾದರೂ ಇದ್ದೇ ಇರುತ್ತದೆ. ಮಾಯೆ, ಮಮತೆ, ಪ್ರಣಯ, ಪ್ರೇಮ, ಪ್ರೀತಿ ಇವೇ ಮೊದಲಾದ ಮನೋವಿಕಾರಗಳನ್ನು ಜಗತ್ತಿನ ಕಲ್ಯಾಣಕ್ಕೋಸ್ಕರ ಪರಮೇಶ್ವರನು ಮನುಷ್ಯನಿಗೆ ಕೊಟ್ಟಿರುವನು. ಈ ಮನೋವಿಕಾರಗಳನ್ನು ದೇವರು ಬಂದು ಮೇಲೆ ಇಲ್ಲದಂತೆ ಮಾಡಿದರೆ, ಅವು ನಾಶವಾದ ಕ್ಷಣವೇ ಎಲ್ಲ ಜಗತ್ತು ರಾಕ್ಷಸಮಯವಾಗುವುದು. ಜನರು ನರಭಕ್ಷಕರಾಗಿ ಎತ್ತ ನೋಡಿದತ್ತ ಹಾಹಾಕಾರವುಂಟಾಗುವುದು. ಈ ಲೋಕದಲ್ಲಿ ಪ್ರೇಮವೊಂದನ್ನು ಬಿಟ್ಟರೆ ಅದಕಂಥ ಸುಂದರವಾದಂಥ ಉಪಯುಕ್ತವಾದಂಥ ಜೀರೆಯಾವುದೂ ದೊರೆಯಲಾರದು. ಪ್ರೇಮವು ಜಗಜ್ಜೀವನವಾಗಿರುತ್ತದೆ. ಯಾವ ಹೃದಯದಲ್ಲಿ ಪ್ರೇಮವಿಲ್ಲ, ಪ್ರೀತಿಯಿಲ್ಲ, ಪ್ರಣಯವಿಲ್ಲ ಅಂಥ ಹೃದಯವು ಜೀವಚ್ಛವವು ಇಷ್ಟೇ ಅಲ್ಲ; ಅದು ಮರಣಕ್ಕಿಂತಲೂ ಹೆಚ್ಚು ತಾಪದಾಯಕವಾಗಿರುತ್ತದೆ. ಮಾಯೆ, ಮಮತೆ, ಆತ್ಮೀಯತೆ ಇವು ಇಲ್ಲವಾದರೆ, ಜಗದೊಳಗಿನ ಒಳ್ಳೇತನವು ಅಳಿದು ಹೋಗುವುದೆಂದೆನ್ನಲಿಕ್ಕೆ ಏನೂ ಪ್ರತ್ಯವಾಯವಿಲ್ಲ.

ಅಡವಿಯಲ್ಲಿ ಸಿಗುವ ಕಂದ ಮೂಲಾದಿಗಳನ್ನು ತಿಂದು ನಿರ್ವಾಹ ಮಾಡಿಸಿದರೂ, ಕಟ್ಟಿ ಕಾವಿ ಬಟ್ಟೆಯನ್ನು ಧರಿಸಿದರೂ, ತಪಶ್ಚರ್ಯಕ್ಕೋಸ್ಕರ ಯಾವಾಗಲೂ ನಿರ್ಜನವಾದ ಅರಣ್ಯದಲ್ಲಿರಹತ್ತಿದರೂ, ಈ ಸಂಸಾರದಲ್ಲಿ ಪೂರ್ಣ ತಿರಸ್ಕಾರಬುದ್ಧಿಯುಂಟಾಗಿ ಸನ್ಯಾಸವನ್ನು ಕೈಕೊಂಡರೂ, ಎಂಥ ತಪಸ್ವಿಯು ಕೂಡ ಪ್ರೇಮಶೂನ್ಯಹೃದಯನಾಗುವುದು ಅಸಾಧ್ಯವು. ಕಲವೊಂದು ದೃಷ್ಟಿಯಿಂದ ಈ ಪ್ರೇಮವನ್ನು ವೈರ್ತ್ಯನಿಗೆ ಹೋಲಿಸಬಹುದು. ಎಲ್ಲಿ ಹೋದರೂ, ಏನು ಮಾಡಿದರೂ, ಯಾವ ಹೊರೆ ಹೊಕ್ಕರೂ ಪ್ರೇಮವು ಯಾವಾಗಲೂ ಅವನನ್ನಗಲಿ ಹೋಗುವದಿಲ್ಲ. ಸಂಸಾರದಲ್ಲಿ ಪ್ರೇಮಜನಕವಪದಾರ್ಥವಾದ ಹೆಂಡತಿಯು ಇರದಿದ್ದರೂ, ಜಗತ್ತಿನ ಕೂಡ ಎಲ್ಲ ವ್ಯವಹಾರಗಳಲ್ಲಿ ಪ್ರೇಮವಿಂದಲೇ ನಡೆಯಬೇಕಾಗುತ್ತದೆ. ಪ್ರೇಮವಿಲ್ಲದ ಹೃದಯವು ವಜ್ರಕ್ಕಿಂತ ಕಠಿಣವಾದದ್ದು. ಮನುಷ್ಯನ ಹೃದಯಕ್ಕೆ ಪ್ರೇಮವೇ ಮುಖ್ಯಾಲಂಕಾರವು. ಸದ್ಗುಣಗಳು ವೃದ್ಧಿಂಗತವಾಗಬೇಕಾದರೆ ಪ್ರೇಮವು ಒಂದು ಸಾಧನವಾಗಿರುವದು. ಹಿಂಸೆ ಆಗಿ ಹೋದ ಸಾಧು ಸತ್ಪುರುಷರು, ಸಜ್ಜನರು, ವೀರರು, ಕವಿಗಳು, ಗ್ರಂಥ

ಕರ್ತರು ಮೊದಲಾದವರ ಹೃದಯವು ಪ್ರೇಮಮಯವಾಗಿತ್ತೆಂದು ನಿಶ್ಚಯವಾಗಿ ಹೇಳಲಿಕ್ಕಾಗುವುದು. ಸ್ವಲ್ಪದರಲ್ಲಿ ಹೇಳಬೇಕಾದರೆ, ಎಲ್ಲ ಜಗತ್ತು ಪ್ರೇಮಮಯವಾಗಿರುತ್ತದೆಂದರೂ ಸಲ್ಲುವುದು. ಮನುಷ್ಯನೊಬ್ಬನಲ್ಲಿಯೇ ಏಕೆ? ಎಲ್ಲ ಜೀವಕೋಟಿಯಲ್ಲಿಯೂ ಈಶ್ವರನು ಪ್ರೇಮವನ್ನಿಟ್ಟಿದ್ದಾನೆ. ಭಯಂಕರವಾದ ಕ್ರೂರ ಮೃಗಗಳಿಗೂ ಸಹ ಪ್ರೇಮವನ್ನು ಕೊಟ್ಟಿದ್ದಾನೆ. ಆದರೆ ಪ್ರೇಮವನ್ನು ಯಾರೊಬ್ಬರ ಕಡೆಯಿಂದ ಅಥವಾ ಯಾವದೊಂದರ ಕಡೆಯಿಂದ ಸಂಪಾದಿಸಿಕೊಳ್ಳಬೇಕಾಗುವದು. ಅಡವಿಯ ಕ್ರೂರ ಪ್ರಾಣಿಯ ಪ್ರೇಮವನ್ನು ದೊರಕಿಸಿಕೊಂಡರೆ, ಅದು ನಿಮ್ಮ ಕೂಡ ಆಡುವದು, ನೀವು ಹೇಳಿದಂತೆ ಕೇಳುವದು, ಮತ್ತು ನಿಮ್ಮ ಸಹವಾಸದಲ್ಲಿ ಅದಕ್ಕೆ ಬಹಳ ಆನಂದವು ಸಹ ಉಂಟಾಗುವುದು. ಆಂದ್ರೋಕ್ಲೀಜ ಮತ್ತು ಸಿಂಹ ಇವರಲ್ಲಿ ತುಸು ವೇಳೆಯ ಸಹವಾಸದಿಂದ ಹುಟ್ಟಿದ ಪ್ರೇಮವು ಕಡೆತನಕ ಸ್ಥಿರವಾಗಿ ನಿಂತಿತು; ಯಾವ ಸಿಂಹದಿಂದ ಆಂದ್ರೋಕ್ಲೀಜನ ಪ್ರಾಣವು ನಾಶವಾಗುವುದೆಂದು ಜನರು ನಂಬಿದ್ದರೋ, ಅದೇ ಸಿಂಹವು ಅವನ ಮೈಯನ್ನು ನೆಕ್ಕುತ್ತ ಸಾಕಿದ ನಾಯಿಯಂತೆ ಅವನ ಕಾಲಮೇಲೆ ಉರುಳಾಡಹತ್ತಿತು; ಇದಾದರೂ ಪ್ರೇಮದ ಪರಿಣಾಮವಲ್ಲವೇ?

ಮಹಾ ಭಗವದ್ಭಕ್ತನಾದ ಪ್ರಹ್ಲಾದನಿಗೆ ಹರಿನಾಮೋಚ್ಚಾರಣೆಯಲ್ಲಿ ಪ್ರೇಮ ಉಂಟಾಗಿದ್ದರಿಂದ ಅವನಿಗೆ ಎಲ್ಲ ಜಗತ್ತು ತುಚ್ಛವೆನಿಸಿತ್ತಿತ್ತು. ಈಶ್ವರಭಕ್ತಿಯ ದೆಸೆಯಿಂದ, ಈಶ್ವರಪ್ರೇಮದ ದೆಸೆಯಿಂದ, ಅವನು ತನ್ನ ತಂದೆಯ ವೈರತ್ವವನ್ನು ಸಂಪಾದಿಸಿದನು.! ಅದೇ ನಿಸ್ಸೀಮ ಪ್ರೇಮದ ಮೂಲಕ ತನ್ನ ತಾಯಿಯ ಕೈಯಿಂದ ವಿಷ ಕುಡಿಯುವ ಪ್ರಸಂಗವು ಬಂದೊದಗಿತು! ಪಾಪ !! ಚಿಕ್ಕತನದಲ್ಲಿ ಅವನನ್ನು ಸಮುದ್ರದಲ್ಲಿ ಹಾಕಿ ಬಿಟ್ಟರು!! ಅವನ ತಂದೆಯೇ ಅವನನ್ನು ಅಗ್ನಿಕುಂಡದಲ್ಲಿ ನುಗಿಸಿ ಕೊಟ್ಟನು. !!! ಆದಾಗ್ಯೂ ಪ್ರಹ್ಲಾದನು ದೇವರ ಮೇಲಿನ ತನ್ನ ಭಕ್ತಿ-ವಿಶ್ವಾಸಗಳನ್ನು ಮಾತ್ರ ಬಿಟ್ಟರಲಿಲ್ಲ. ಈ ಪ್ರಕಾರದ ನಿಷ್ಕಪಟ ಪ್ರೇಮವು ಅವನ ಹೃದಯದಲ್ಲಿ ನೆಲೆಯಾಗಿದ್ದರಿಂದಲೇ ಅವನು ಈ ಕೊತ್ತಿನ ವರೆಗೂ ಜಗಕ್ಕೆಲ್ಲ ವಂದ್ಯನಾಗಿರುತ್ತಾನೆ. ನಿರ್ಮಲ ಪ್ರೇಮವು ಜಿಮ್ಮೆ ಮನಸ್ಸನ್ನು ಆಕ್ರಮಿಸಿತೆಂದರೆ, ಯಾವ ವಸ್ತುವಿನ

ಮೇಲೆ ಆ ಪ್ರೇಮವಿರುತ್ತದೆಯೋ ಆ ವಸ್ತುವು ಪ್ರಾಣಕ್ಕಿಂತಲೂ ಮಹತ್ವದ್ದಾಗಿ ಕಾಣಿಸುತ್ತದೆ. ಇಷ್ಟೇ ಅಲ್ಲ. ಅದರ ಬೆಸೆಯಿಂದ ಬಹ್ಮೋಮ್ಮೆ ಮನುಷ್ಯನು ಪ್ರಾಣ ಕೊಡುವುದಕ್ಕೆ ಸಹ ಹಿಂದುಮುಂದು ನೋಡುವುದಿಲ್ಲ; ಮಹಾಕವಿಯಾದ ಶೇಕ್ಸಪೀಯರನ ನಾಟಕದ ಅಭ್ಯಾಸ ಮಾಡಿದವರಿಗೆ ರೋಮಿಯೋ ಮತ್ತು ಜ್ಯುಲಿಯಟ್ ಇವರ ಇತಿಹಾಸವು ಗೊತ್ತಿರ ಬಹುದು. ಇವರು ಬೇರೆ ಬೇರೆ ಜಾತಿಯವರಿದ್ದರೂ ವಿಲಕ್ಷಣ ಪ್ರೇಮದ ಮೂಲಕ ಇಬ್ಬರೂ ಬಂದೇ ಸಮಾಧಿಯಲ್ಲಿ ಅಡಗಿಕೊಂಡರು.

ಮೇಲಿನ ಈ ವಿವೇಚನೆಯಿಂದ ಪ್ರೇಮವು ಎಷ್ಟು ವಿಲಕ್ಷಣವಾಗಿರುತ್ತದೆಂಬದರ ಕಲ್ಪನೆಯು ಸಹಜವಾಗಿ ಮನಸ್ಸಿನಲ್ಲಿ ಬರಬಹುದು. ಆದರೆ ಪ್ರೇಮವೆಂಬದರ ಅರ್ಥವು ಮೋಹ, ಪ್ರೀತಿ, ಮಮತೆ ಮುಂತಾದ ಶಬ್ದಗಳ ಅರ್ಥದಿಂದ ಭಿನ್ನವಾಗಿರುವದೆಂಬದನ್ನು ಮಾತ್ರ ಮರೆಯ ಕೂಡದು.

Nagur,
6th May 1914.

ತಮ್ಮ ವಿಧೇಯ ಶಿಷ್ಯ
A. B. Joshi.

ಪತ್ರವ್ಯವಹಾರವು

ರಾವಸಾ. ಕನ್ನಡ ಶಾಲಾಪತ್ರಕರ್ತರ ಸನ್ನಿಧಿಗೆ:

ಸಾ: ನಮಸ್ಕಾರ ವಿನಂತಿಗಳು— ಆರ್ಯರೇ, ಸಾಂಪ್ರತದಲ್ಲಿ ವಿದ್ಯಾಖಾತೆಯಲ್ಲಿ ಕೆಲಸ ಮಾಡುತ್ತಿರುವ ಟ್ರೇಂಡ ಮಾಸ್ತರರೂ ಸೆಂಟ್ರಲ್ ಕ್ಲಾಸ ವಿದ್ಯಾರ್ಥಿಗಳೂ ವಿಷಯಗಳನ್ನು ಕಲಿಸುವ ಪದ್ಧತಿಗಳನ್ನು ಅರಿತುಕೊಂಡಿದ್ದರೂ, ಅವರಿಗೆ ಮೇಲೆ ಮೇಲೆ ಜಾಗ್ರತೆಕೊಡುವದು ಡಿಪೂಟೀ ಇನ್ಸಪೆಕ್ಟರರ ಮುಖ್ಯ ಕರ್ತವ್ಯವಾಗಿರುತ್ತದೆಂಬದೂ, ಸರಕಾರದ ಲಕ್ಷವು ಇದರ ಕಡೆಗೆ ಈಗ ವಿಶೇಷವಾಗಿರುತ್ತದೆಂಬದೂ, ಕಳೆದ ಎರಡು ವರ್ಷದಿಂದ ನಮ್ಮ ಭಾಗದಲ್ಲಿ ಡಿಪೂಟೀ ಇನ್ಸಪೆಕ್ಟರರು ಮೇಲೆ ಮೇಲೆ ಬರುತ್ತಿರುವದನ್ನೂ, ಶಿಕ್ಷಕರ ಸಂಗಡ ಇರುವ ಅವರ ವರ್ತನೆಯನ್ನೂ ನೋಡಿ, ನಮ್ಮ ಮನವರಿಕೆಯಾಯಿತು. ಇದೇ ಉದ್ದೇಶವನ್ನು ಅನುಸರಿಸಿ ನಿನ್ನಿನ ದಿವಸ ಅನಗವಾಡಿಯ ಮುಕ್ಕಾಮಿನಲ್ಲಿ ರಾವಸಾ. ಗನೇ ಅ. ಡಿ. ಎ. ಇನಸ್ಪೆಕ್ಟರರಾದ ಎಚ್. ಕೆ. ಗೋಖಲೇಸಾಹೇಬರ ಅಧ್ಯಕ್ಷತೆಯ ಕೆಳಗೆ ಒಂದು ಸಭೆಯು ಕೂಡಿತ್ತು. ಸದರ ಸಭೆಯ

ಪ್ರಾರಂಭದಲ್ಲಿ ಅಧ್ಯಕ್ಷರವರು ವಿಷಯಗಳನ್ನು ಹೇಗೆ ಟೀಕಿಸಬೇಕೆಂಬ ಬಗ್ಗೆ, ಅಂದರೆ:—

೧. ಉಪೋದ್ಘಾತವನ್ನು ಸರಿಯಾಗಿ ಮಾಡುವದು,
೨. ಸರಿಯಾದ ಪ್ರಶ್ನೋತ್ತರಗಳು,
೩. ಗೊತ್ತಿದ್ದದರಿಂದ ಗೊತ್ತಿಲ್ಲದಕ್ಕೆ ಪಾಗುವದು,
೪. ಕಲಿಸುವ ಪದ್ಧತಿಗಳು,
೫. ಸೊಚಕ ಪ್ರಶ್ನೆಗಳು,
೬. ವರ್ಗದ ಎಲ್ಲ ಹುಡುಗರ ಲಕ್ಷವನ್ನು ಎಳಕೊಳ್ಳುವದು,
೭. ಹುಡುಗರು ಕೊಟ್ಟ ಉತ್ತರಗಳ ಉಪಯೋಗ ಮಾಡಿಕೊಳ್ಳುವದು,
೮ ಉಪಕರಣಾಗಳನ್ನು ಸರಿಯಾಗಿ ಉಪಯೋಗಿಸುವದು,
೯. ಕರೀ ಹಲಿಗೆಯ ಉಪಯೋಗ,
೧೦. ವಿಷಯಾಂತರದ ದೋಷ,

ಇವೇ ಮೊದಲಾದ ದೋಷಗಳನ್ನು ಮುಖ್ಯವಾಗಿ ಕಂಡು ಹಿಡಿಯಲಿಕ್ಕೆ ತಿಳುಹಿಸಿದ ಮೇಲೆ, ಮುಂದಾಗಿ ಸೂಚನೆಯನ್ನು ಕೊಟ್ಟ ಮೇರೆಗೆ ಟ್ರೇಂಡ ಹಾಗು ಅಂಟ್ರೇಂಡ ಮಾಸ್ತರರು ಕವಿತೆ, ಭೂಗೋಲ, ಜನಾ ಖರ್ಚು ಮೊದಲಾದವುಗಳ ಮಾಡರಿಯ ಪಾಠಗಳನ್ನು ಕಲಿಸಿದ ಮೇಲೆ ಅವುಗಳ ದೋಷನಿವರಣೆಯಾಯಿತು. ಸದರ ಸಭೆಗೆ ೨ ಹರದಾರಿಯೊಳಗಿನ ಎಲ್ಲ ಸರಕಾರೀ ಹಾಗು ಗಾಯತೀ ಶಾಲೆಗಳ ಮಾಸ್ತರರೂ ನೋಡಲಿಚ್ಛಿಸುವ ಬೇರೆ ಸಭ್ಯಗೃಹಸ್ಥರೂ ಬಂದಿದ್ದರು ಅಧ್ಯಕ್ಷರವರು ಇನ್ನೂ ಅನೇಕ ಮಹತ್ವದ ಸಂಗತಿಗಳನ್ನು ಉಪದೇಶಿಸಿದರು. ಅದರ ಅವೆಲ್ಲ ವುಗಳನ್ನು ಬರೆದರೆ ಪತ್ರವು ವಿಸ್ತಾರವಾಗಬಹುದು. ಇರಲಿ. ಇವೇ ಮಾಡರಿಗಳು ಎಲ್ಲ ಕಡೆಗಳಲ್ಲಿ ಅನುಸರಿಸಲ್ಪಟ್ಟರೆ ಟ್ರೇನಿಂಗ ಕಾಲೇಜದ ಪದ್ಧತಿಯೇ ಎಲ್ಲ ಕಡೆಯಲ್ಲಿ ತೀವ್ರವಾಗಿ ಪ್ರಸಾರವಾಗುವದೆಂಬದಕ್ಕೆ ಏನೂ ಸಂದೇಹವಿಲ್ಲ. ನಾನು ಬಾಲ್ಯದಲ್ಲಿ ಗಿಳಿಯೋದಿಸಿದಂತೆ ಕಲಿತ ಕೆಲವು ಸಂಗತಿಗಳ ವರ್ಣನೆಯನ್ನು ಈ ಮಾಡರಿಯ ಪಾಠಗಳಲ್ಲಿ ಅರಿತುಕೊಂಡು ಕೃತಜ್ಞತೆಯುಳ್ಳವನಾಗಿ ತಮಗೆ ಈ ಸಂಗತಿಯನ್ನು ಅರುಹಿದ್ದೇನೆ.

ಕಾ ಇಂ ೫-೧೪ ಇಸ್ಪಿ | ಪ್ರೇಕ್ಷಕ ಶಿವಪ್ಪಾ ಜೋಗಿಶರ
ಮುದನಾಳ. ತಾ ಬಾಗಲಕೋಟ

ವಿದ್ಯಾಖಾತೆಯ ನೋಟೀಸುಗಳು.

"ರಾಷ್ಟ್ರೀಯ ಗೀತದ" ಕೆಳಗೆ ಕೊಡಲ್ಪಟ್ಟಂಥ ಬಾ. ಪ್ರ. ಸಾವಕಾರ ಇವರು ಮಾಡಿದ ಕನ್ನಡ ಭಾಷಾಂತರವು ಮೈ. ಡಾಯರೆಕ್ಟರ ಆಫ್ ಪಬ್ಲಿಕ್ ಇನ್ಸ್ಟ್ರಕ್ಶನ ಸಾಹೇಬರವರಿಂದ ಮಂಜೂರು ಮಾಡಲ್ಪಟ್ಟಿರುತ್ತದೆ. ಅದನ್ನು ಬಾದಶಹರವರ ಜನ್ಮೋತ್ಸವದ ದಿವಸದಲ್ಲಿಯೂ ಇತರ ಸಮಾರಂಭಗಳ ದಿವಸಗಳಲ್ಲಿಯೂ ವಿದ್ಯಾಖಾತೆಯ ಅಧಿಕಾರಕ್ಕೊಳಗಾದ ಎಲ್ಲ ಶಾಲೆಗಳಲ್ಲಿ ಹಾಡತಕ್ಕದ್ದು. ಅದನ್ನು ಹಾಡುವ ದಾಟಿಯನ್ನು ಗಂಡಸರ ಮತ್ತು ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜಗಳಲ್ಲಿ ಕಲಿಸುವರು. ಹೊಸದಾಗಿ ಟ್ರೇಂಡರಾದ ಮಾಸ್ತರರು ಆ ದಾಟಿಯನ್ನು ಇತರ ಮಾಸ್ತರರಿಗೆ ಕಲಿಸುವರೆಂದು ನಾವು ನಿರೀಕ್ಷಿಸುತ್ತೇವೆ.

ಧಾರವಾಡ
೩೦ ಜೂನ ೧೮೧೫ } *Sd/.* P. Lory.
ಎಜ್ಯುಕೇಶನಲ ಇನ್ಸಪೆಕ್ಟರ ದಕ್ಷಿಣಭಾಗ

ದೇವರು ನಮ್ಮ ಚಕ್ರವರ್ತಿಗಳನ್ನು ರಕ್ಷಿಸಲಿ

ಪದ. ರಾಗ: ಶಂಕರಾಭರಣ. ತಾಳ: ರೂಪಕ.

*

ಗಾಡ್ ಸೇವ್ ದೀ ಕಿಂಗ (GOD SAVE THE KING) ಎಂಬ ಇಂಗ್ಲೀಷ ರಾಷ್ಟ್ರೀಯ ಗೀತನ ಅರ್ಥವುಳ್ಳದ್ದು. ದಾಟಿಯೂ ಅದೇ ಗೀತದಂತೆ. ಪ್ರತಿ ಆರು ಮಾತ್ರೆಗಳ ಗಣದಲ್ಲಿ ೧,೩,೫ನೇ ಮಾತ್ರೆಗಳಿಗೆ ತಾಳ ಹೊಡೆಯುತಕ್ಕದ್ದು.

I ಸ ಸ ರಿ | ನಿ ಸ ರಿ | ಗ ಗ ಮ | ಗ ರಿ ಸ |
ದೇ ವ ರು | ನ ಮ್ಮ | ಈ ಧೀ ರೋ | ದಾ ತ್ತ ವ ರ

God save our gracious King
Long live our noble King,
God save the King.

II ರಿ ಸ ನಿ ಪ | ಸ | ಪ ಪ ಪ | ಪ ಮಂ ಗ |
ಭೂ ವ ರ ಸಂ ರ ಕ್ಷಿ ಸ ಲಿ ಸ ದಾ

III ಮಾ ಮಾ ಮಾ | ಮಾ ಗರಿ | ಗ ಮಂ ಗರಿ ಸಂ | ಗ ಮಂ ಪ
ಈ ಜ ಸು ಧೀ ಶ ನು ಆ ವ ಗಂ ಬಾ ಳ ಲಿ

ಪ ಮಂ ಗರಿ | ಸ
ಸಾ ಖ್ಯ ವಾ ಗಿ || ಪಲ್ಲ ||

I ಜ ಯ ವು ಳ್ಳ ವ ನು ಮೈ ಭ ವ ಕಾ ಲಿ ಯು
II ಆ ತ ನಾ ಗಿ ಆ ವ ಗಂ ನ ಮ್ಮ ನು
III ಆ ಳು ವ ಪಾ ಗೆ ಸೀ ರ ಷ್ಟಿ ಸು ದೇ ವ ರೇ
ರಾ ಜ ನ ನು || ೧ ||

Send him victorius,
Happy and glorious,
Long to reign over us,
God save the King.

O Lord our God arise,
Scatter his enemies,
And make them fall,
Confound their politics,,
Frustrate their knavish tricks,
On Thee our hopes we fix
God save us all.

Thy choicest gifts in store,
On him be pleased to pour,
Long may he reign.
May he defend our laws,
And ever give us cause
To sing with heart and voice
God Save the King

I ಪ್ರಭು ವೆ ದೇ ವ ರೇ ಏ ಳು ವೃ ದ್ಧಿ ಗ ಡ
II ಅ ರ ಸ ನ ಹ ಗೆ ಗ ಳ ನ್ನು ನೀಂ
III ಚ ದ ರಿ ಸೈ ಯ ವ ರ್ ಸೋ ಲು ವ ಹಾ ಗೆ ನೀಂ
ಮಾ ಳ್ಪ ದೆ ಲ್ಲೆ ॥ ೨ ॥

I ಅ ವ ರ ತಂ ತ್ರ ಗ ಳ್ ಕೆ ಡು ವ ಹಾ ಗೆ ನೀಂ
II ಮಾ ಡು ವು ದು ಅ ವ ರ ಮೋ ಸ ವ
III ಹಂ ಚಿ ಕೆ ಗ ಳ ನು ಬ ಯ ಲು ಮಾ ಡಿ ಲ್ಲೆ
ದೇ ವ ರೇ ನೀಂ ॥ ೩ ॥

I ನ ಮ್ಮೆ ಲ್ಲ ರಾ ಶೆ ಯು ನಿ ನ್ನ ನಾ ಶ್ರೈ ಸಿ ಯೇ
II ಇ ರು ವ ದು ನ ಮ್ಮೆ ಲ್ಲ ರ ನ್ನು ನೀಂ
III ಕ ರು ಣ ದಿಂ ದ ಲಿ ಸೋ ಡು ತ ದೇ ವ ರೇ
ರ ಕ್ಷಿ ಸಿ ಲ್ಲೆ ॥ ೪ ॥

I ಆ ತ ಗೆ ನಿ ನ್ನ ಯ ವ ರ ಗ ಳ ಲ್ಲಿ ಯ
I ಅ ತ್ಯು ತ್ತ ಮ ವ ರ ಗ ಳ ನ್ನು ನೀ
II ದ ಯ ಪಾ ಲಿ ಸು ಆ ವ ಗಂ ಅ ಳ ಲಿ
ನ ಮ್ಮ ನ್ನಾ ಪ ॥೫॥

I ಅ ವ ನು ನ ಮ್ಮ ಯ ಕಾ ಯಿ ದೆ ಗ ಳ ನು
I ಕಾ ಪಾ ಡ ಲಿ ದೇ ವ ರು ಆ ತ ನ
I ಕಾ ಯ ಲಿ ಯ ನ್ನು ತ ಪ್ರಾ ರ್ಥ ನೆ ಮಾ ಡು ವಾ
ಮೋ ದ ದಿಂ ದ ॥೬॥

I ಮಾ ನ ಸ ದಿಂ ದ ಲೂ ಉ ಚ್ಚ ಸ್ವ ರ ದಿ ಯೂ
II ನಾ ವೆ ಲ್ಲ ರು ಪ್ರೊ ಗ ಳ್ವಂ ತಾ ತ ನಿಂ
III ಕಾ ರ್ಯ ಗ ಳಾ ಗ ಲಿ ರಾ ಜ ನಂ ದೇ ವ ರು
ರ ಕ್ಷಿ ಸ ಲಿ ॥೭॥

ಸೂಚನೆಗಳು:—

೧. ಪದ್ಯದಲ್ಲಿ ತೋರಿಸಿದ ಈ ಕಂಸವು ಎರಡು ಸ್ವರಗಳನ್ನು ಕೂಡಿಸಿದ ಚಿಹ್ನವಿರುತ್ತದೆ.

೨ (ಆ). ಗನೇ ನಂಡಿಯಲ್ಲಿ ಸ್ವರಗಳ ಬಲಕ್ಕೆ ಕೆಳಬದಿಗ ಬರೆದ ಅಂಕಿಯು ಆ ಸ್ವರವನ್ನು ಅವ್ವ ಮಾತ್ರೆಗಳ ತನಕ ಎಳೆಯಬೇಕೆಂಬದನ್ನು ಸೂಚಿಸುತ್ತದೆ.

(ಇ). ಈ ಗುರ್ತು ಕೋಮಲ ಅಥವಾ ಶುದ್ಧ ಸ್ವರವನ್ನು ಸೂಚಿಸುವದು.

(ಈ). ಸ್ವರದ ಕೆಳಗೆ ಇದ್ದ – ಈ ಗುರುತು ಮಂದರ ಸಪ್ತಕದ ಸ್ವರವನ್ನು ಸೂಚಿಸುವದು

೩. ಪಲ್ಲವಿಯೊಳಗಿನ ಪ್ರತಿಯೊಂದು ಚರಣದ ಸ್ಥಾನಗಳ ಮೇಲೆ ಹಾಕಿದ ಸ್ವರಗಳೂ, ಗುರ್ತುಗಳೂ ಉಳಿದ ವಿಳಂ ನಂಡಿಗಳ ಪ್ರತಿಯೊಂದು ಚರಣದ ಮೇಲೆ, ಅವಾ ಸ್ಥಾನಗಳಲ್ಲಿ ಅಷ್ಟೇ ಮಾತ್ರೆಗಳಿಂದ ಕೂಡಿಕೊಂಡು ಇರುವವೆಂದು ತಿಳಿಯಬೇಕು.

ಮೆಟ್ರಿಕ್ಯುಲೇಶನ್ ಫಾಯನಲ್ ಪರೀಕ್ಷೆಯು.

ದಕ್ಷಿಣಭಾಗ

ಈ ನೋಟೀಸಿನಿಂದ ತಿಳಿಸುವದೇನಂದರೆ.–ಸನ್ನ ೧೯೦೭ನೇ ಇಸವಿಯ ತಾ|| ೨೧ನೇ ನವಂಬರ ತಿಂಗಳ ಮುಂಬಯಿ ಗವ್ಹರ್ನಮೆಂಟ ಗ್ಯಾಝೆಟಿನ ೧ನೇ ಭಾಗದ ೧೮೯೫ರಿಂದ ೧೮೯೭ನೇ ಪುಟಗಳಲ್ಲಿ ಪ್ರಸಿದ್ಧ ಮಾಡಿದ ನಿಯಮಗಳಿಗನುಸಾರವಾಗಿ ಮೆಟ್ರಿಕ್ಯುಲೇಶನ್ ಫಾಯನಲ್ ಪರೀಕ್ಷೆಯು ಸೋಮವಾರ ತಾರೀಖು ೨೧ನೇ ಸಪ್ಟಂಬರ ೧೯೧೧ ದಿವಸ ಹಾಗೂ ತದುತ್ತರ ದಿವಸಗಳಲ್ಲಿ ದಕ್ಷಿಣಭಾಗದ ಕೆಳಗೆ ಕಾಣಿಸಿದ ಸೆಂಟರುಗಳಲ್ಲಿ ನಡೆಯುವದು:–

ಧಾರವಾಡ.	ವಿಜಾಪುರ.
ಬೆಳಗಾವ.	ಕಾರವಾರ.

೨ ಪ್ರತಿಯೊಂದು ಸೆಂಟರಿನಲ್ಲಿ ಈ ಪರೀಕ್ಷೆಯು ಒಂದು ಕಮಿಟಿಯ ಮುಖಾಂತರವಾಗಿ ನಡೆಯುವದು; ಮತ್ತು ಧಾರವಾಡ, ಬೆಳಗಾವ, ವಿಜಾಪುರ, ಕಾರವಾರ ಹಾಯಸ್ಕೂಲುಗಳ ಹೆಡ್‌ಮಾಸ್ತರರು ಸದರೀ ಪರೀಕ್ಷಾ ಕಮಿಟಿಗಳ ಅಧ್ಯಕ್ಷರಿರವರು.

ಶಾಲಾಪತ್ರಿಕೆ.

ಪುಸ್ತಕ ೫ನೇ. | ಅಗಷ್ಟ ೧೯೧೬. | ಸಂಚಿಕೆ ೮.

ಸ್ಫುಟವಿಷಯಗಳು.

೧. ಶಾರೀರಿಕಶ್ರಮವೂ ಮಾನಸಿಕ ಶ್ರಮವೂ.

ಮನುಷ್ಯನು ಶಾರೀರಿಕ ಮಾನಸಿಕ ಇವೆರಡೂ ಪ್ರಕಾರದ ಶ್ರಮವನ್ನು ಮಾಡಬೇಕಾಗುತ್ತದೆ. ಇವುಗಳಲ್ಲಿ ಹೆಚ್ಚು ಕಷ್ಟಕರವಾದದ್ದು ಯಾವ ದೆಂಬದು ವಿಚಾರ ಮಾಡತಕ್ಕ ಸಂಗತಿಯಾಗಿರುತ್ತದೆ. ಈ ವಿಷಯವಾಗಿ ಉಭಯ ಶಾಸ್ತ್ರಜ್ಞರು ಶಾರೀರಿಕಶ್ರಮಕ್ಕಿಂತ ಮಾನಸಿಕ ಶ್ರಮವೇ ಹೆಚ್ಚು ಕಷ್ಟಕರವಾದದ್ದೆಂತಲೂ ಮನುಷ್ಯನು ಎಷ್ಟು ಹೊತ್ತಿನವರೆಗೆ ಮಾನಸಿಕ ಶ್ರಮವನ್ನು ಮಾಡಲು ಶಕ್ತನಿರುವನೋ, ಅದಕ್ಕಿಂತ ಬಹಳ ಹೆಚ್ಚು ಹೊತ್ತಿನವರೆಗೆ ಶಾರೀರಿಕಶ್ರಮವನ್ನು ಮಾಡಲು ಸಮರ್ಥನಿರುವನೆಂತಲೂ ಅಭಿಪ್ರಾಯ ಪಡುತ್ತಾರೆ. ಮಾನಸಿಕಶ್ರಮದಿಂದ ಮನುಷ್ಯನು ಬೇಗ ದಣಿಯುತ್ತಾನೆ. ಅದೇ, ಶಾರೀರಿಕಶ್ರಮದಿಂದ ಅಷ್ಟು ಬೇಗ ದಣಿಯುವದಿಲ್ಲ. ಮೂರು ತಾಸು ಒಂದೇಸವನೆ ಮಾನಸಿಕಶ್ರಮವನ್ನು ಮಾಡುವದರಿಂದ ಶರೀರವು ಎಷ್ಟು ಸವಿಯುವದೋ ಅಷ್ಟು ಹಗಲೆಲ್ಲ ಶಾರೀರಿಕಶ್ರಮವನ್ನು ಮಾಡುವದರಿಂದ ಸವಿಯುವದಿಲ್ಲೆಂದು ಒಬ್ಬ ಶಾಸ್ತ್ರಜ್ಞನು ಸಿದ್ಧ ಮಾಡಿದ್ದಾನೆ. ಮಾನಸಿಕಶ್ರಮವನ್ನು ಮಾಡುವಾಗ್ಗೆ ಮಿದುಳಿನ ಸಂಗಡ ಶರೀರದ ಬೇರೆಭಾಗಗಳೂ ಕೆಲವು ಕಷ್ಟವನ್ನು ಸಹಿಸಬೇಕಾಗುವದು. ಹಾಗೇನೂ ಶಾರೀರಿಕಶ್ರಮವನ್ನು ಮಾಡುವಾಗ್ಗೆ ಆಗುವದಿಲ್ಲ. ಸಾರಾಂಶವೆನೆಂದರೆ, ಮಾನಸಿಕ ಶ್ರಮವು ಹೆಚ್ಚು ಕಷ್ಟಕರವಾದದ್ದೆಂಬ ಮಾತಿನಲ್ಲಿ ಸಂದೇಹವಿಲ್ಲ.

೨ ಟೀಕೆಯು ಶಿಕ್ಷಣದ ಸಾಧನವಲ್ಲ.

ಟೀಕೆಯು ಶಿಕ್ಷಣದ ಸಾಧನವಾಗುವದಿಲ್ಲ. ಯಾಕಂದರೆ, ಟೀಕೆಯಲ್ಲಿ ವಾದಗ್ರಸ್ತವಿಷಯಗಳು ವಿಶೇಷವಾಗಿರುತ್ತವೆ. ಈ ಸಂಗತಿಗಳು ಹೊಸದಾಗಿ ಶಿಕ್ಷಣಕಲೆಯನ್ನು ಸಂಪಾದಿಸಲಿಚ್ಛಿಸುವವರ ಮನಸ್ಸನ್ನು ಸಂಶಯದಲ್ಲಿ ಕೆಡವುತ್ತವೆ. ಆದಕಾರಣ, ಶಿಕ್ಷಣಕಲೆಯ ಜ್ಞಾನಕ್ಕೆ ಟೀಕೆಯು ನಿರುಪಯುಕ್ತವಾದ ಸಾಧನವಾಗಿರುತ್ತದೆ. ಟೀಕೆಯಿಂದ ಶಿಕ್ಷಣಜ್ಞಾನವಾಗುವದಿಲ್ಲ. ಆದಕಾರಣ ಬರೇ ಟೀಕೆಗಳನ್ನು ಓದಿ ಶಿಕ್ಷಣಕಲೆಯ ಜ್ಞಾನವನ್ನು ಸಂಪಾದಿಸಲು ಯತ್ನಮಾಡುವವನು, ಮಾರ್ಗತಪ್ಪಿಸುವನೆಂದು ಖಂಡಿತವಾಗಿ ತಿಳಿಯತಕ್ಕದ್ದು. ಅತ್ಯುತ್ಕೃಷ್ಟವಾದ ಮಾದರಿಯ ಪಾಠಗಳೇ ಶಿಕ್ಷಣದ ನಿಜವಾದ ಸಾಧನಗಳಾಗಿರುತ್ತವೆ. ಉತ್ತಮ ಶಿಕ್ಷಕನಾಗಬೇಕೆಂಬುವವನು ಪ್ರತಿಯೊಂದು ವಿಷಯದ ಬಗ್ಗೆ ಉತ್ತಮವಾದ ಮಾದರಿಯ ಪಾಠಗಳನ್ನು ಕಣ್ಣುಟ್ಟಿ ನೋಡಿ ಲಕ್ಷಪೂರ್ವಕವಾಗಿ ಅವುಗಳನ್ನು ಅಭ್ಯಾಸಿಸಲಿಕ್ಕೆಬೇಕು. ಆ ಮಾದರಿಗಳು ಶಕ್ಯನಿದ್ದಷ್ಟುಮಟ್ಟಿಗೆ ಉತ್ತಮವಾದವುಗಳೂ ನಿರ್ದೋಷವಾದವುಗಳೂ ಇರತಕ್ಕದ್ದು. ಅವುಗಳ ಅವಲೋಕನದಿಂದಲೂ ಅನುಕರಣದಿಂದಲೂ ಶಿಕ್ಷಣಕಲೆಯನ್ನು ಸಂಪಾದಿಸಲು ಯತ್ನಿಸಿದರೆ ನಿಶ್ಚಯವಾಗಿ ಯಶ ದೊರೆಯುವದು. ಉತ್ಕೃಷ್ಟವಾದ ಮಾದರಿಗಳಿಗಿಂತ ಟೀಕೆಯ ಕಡೆಗೆ ಲಕ್ಷವು ಹೆಚ್ಚು ಎಳೆಯುತ್ತದೆ. ಮತ್ತು ಮಾರ್ಮಿಕ ಟೀಕೆಯು ಪ್ರಬುದ್ಧ ಜನರು ಮನನಮಾಡಲಿಕ್ಕೆ ತಕ್ಕ ವಿಷಯವಾಗಿರುತ್ತದೆ. ಆದರೆ ಹೊಸದಾಗಿ ಕಲಿಯತಕ್ಕವರಿಗೆ ಮಾದರಿಯ ಪಾಠಗಳೇ ಅಭ್ಯಾಸಕ್ಕೆ ತಕ್ಕವಿಷಯಗಳಾಗಿರುತ್ತವೆ.

---

೩. ಸಾಲೋಮನ್ ರಾಜನು.

ಪೂರ್ವಕಾಲದಲ್ಲಿ ಪ್ರಚಂಡವಾದ ಭಟನು ಎಂದು ಕೀರ್ತಿಯನ್ನು ಸಂಪಾದಿಸಿದ್ದರಿಂದ ಅಲೆಕ್‌ಗ್ಯಾಂಡರನಿಗೆ "ಥಿ ಗ್ರೇಟ್" ಎಂಬ ಪದವಿಯು ದೊರೆತಿತ್ತು. ಅದರಂತೆ ಸಾಲೋಮನ್ನನಿಗೆ ಅತನ ಸಾಧುವರ್ತನದಿಂದ "ಥಿ ವಾಯಸ್ಮೆಸ್ಟ" ಎಂದು ಜನರು ಕರೆಯುತ್ತಿದ್ದರು.

ಸಾಲೋಮನ್ನನು ಕ್ರಿ. ಪೂ. ೯೭೧ನೆಯ ವರ್ಷ ಹುಟ್ಟಿದನು. ೨೦ನೆಯ ವರ್ಷದ ವಯಸಿನಲ್ಲಿ ಅವನಿಗೆ ರಾಜ್ಯಾಧಿಕಾರವು ದೊರೆಯಿತು.

ಇವನ ಅರಸೊತ್ತಿಗೆಯ ಆರಂಭದಲ್ಲಿ ಜನರು ಇವನಿಗೆ "ಥಿ ಪೀಸಫುಲ್" ಅಂದರೆ "ಶಾಂತವೃತ್ತಿಯುಳ್ಳವ" ಎಂದು ಅನ್ನುತ್ತಿದ್ದರು. ಆದರೆ ಸಾಲೋಮನ್ನನೆಂಬ ಶಬ್ದದ ಅರ್ಥವು ದೇವತೆಗಳಿಗೆ ಪ್ರಿಯನು ಎಂದು ಇರುವದು.

ಸಾಲೋಮನ್ನನು ಮೊದಲು ಒಂದು ವ್ಯಾಜ್ಯದಲ್ಲಿ ಜಾಣತನದ ತೀರ್ಮಾನವನ್ನು ಮಾಡಿದಂದಿನಿಂದ ಜನರು ಅವನು ಜಾಣನೆಂದು ಹೇಳಹತ್ತಿದರು. ಆ ವ್ಯಾಜ್ಯದ ವಿಷಯವು ನಮ್ಮ ಕೇಳಿಕೆಯಲ್ಲುಂಟು. ಒಂದು ಕೂಸಿನ ವಿಷಯವಾಗಿ "ನನ್ನದು" "ನನ್ನದು" ಎಂದು ಇಬ್ಬರು ಹೆಂಗಸರು ನ್ಯಾಯಮಾಡುತ್ತ ಇವನ ದರಬಾರಿಗೆ ಬಂದರು. ಸಾಲೋಮನ್ನನು ಆ ಕೂಸನ್ನು ಕೊಯ್ದು ತುಂಡು ಮಾಡಿ ಬಿಡಬೇಕೆಂದು ತನ್ನ ಕೈಕೆಳಗಿನವರಿಗೆ ಅಪ್ಪಣೆ ಮಾಡಿದನು. ಆಗ್ಗೆ ಒಬ್ಬಳು ಸುಮ್ಮನೆ ನಿಂತುಬಿಟ್ಟಳು. ಆದರೆ ನಿಜವಾಗಿ ಕೂಸಿನ ತಾಯಿಯಾದವಳು ರಾಜನನ್ನು ಕುರಿತು, "ಜೀಯಾ ಕೂಸನ್ನು ಕೊಲ್ಲಿಸುವದೇಕೆ? ಯಾರ ಬಳಿಯಲ್ಲಿದ್ದರೂ ನನ್ನ ಮಗುವು ಜೀವಂತವಾಗಿದ್ದರೆ ಸಾಕು", ಎಂದು ಬೇಡಿಕೊಂಡಳು. ಅವಳ ಈ ಪಾರ್ಥನೆಯನ್ನು ಕೇಳಿ, ಸಾಲೋಮನ್ನನು ಅವಳಿಗೆ ಆ ಕೂಸನ್ನು ಕೊಟ್ಟು ಇನ್ನೊಬ್ಬಳನ್ನು ಹೊರಗೆ ದೂಡಿಸಿದನು.

ಈ ಮಾತಿನಿಂದ ಸಾಲೋಮನ್ನನ ತೀಕ್ಷ್ಣ ಚಾತುರ್ಯವು ವ್ಯಕ್ತವಾಗುವದು. ಸಾಲೋಮನ್ನನು ಅತ್ಯಂತ ದೇವಭಕ್ತನಾಗಿದ್ದನು. ಆತನು ಹಲವು ಗುಡಿಗಳನ್ನು ಕಟ್ಟಿಸಿದನು. ಈತನು ೪೦ ವರ್ಷ ರಾಜ್ಯವಾಳಿದನು. ೬೦ ವರ್ಷ ಬದುಕಿದ್ದನು. ಕ್ರಿ. ಪೂ. ೯೧೧ನೆಯ ವರ್ಷ ಮರಣ ಹೊಂದಿದನು. ಅವನ ಕೆಲವು ವಚನಗಳನ್ನು ಇಲ್ಲಿ ಕೊಡುತ್ತೇವೆ:—

ಸಾಲೋಮನ್ನನ ಕೆಲವು ವಚನಗಳು.

೧. ಪರಮೇಶ್ವರನ ಭಯವನ್ನಿಟ್ಟುಕೊಳ್ಳುವದೇ ಜ್ಞಾನದ ಆರಂಭವು. ಪರಮೇಶ್ವರನನ್ನು ನಂಬಿಸುವವರು ಬೇಕಾದದ್ದು ಮಾಡಲು ಹಿಂಜರಿಯುವದಿಲ್ಲ.

೨. ಮೂರ್ಖರು ಶಿಕ್ಷಣವನ್ನು ತಿರಸ್ಕರಿಸುತ್ತಾರೆ. ಇಷ್ಟೇ ಅಲ್ಲ. ತಮಗೆ ಉಪದೇಶಿಸ ಬಂದವರನ್ನೂ ತಿರಸ್ಕರಿಸುತ್ತಾರೆ.

೩. ಯಾರಾದರೂ ನಿಮ್ಮನ್ನು ಮರುಳುಗೊಳಿಸಿ ಮೋಹದಲ್ಲಿ ಹಾಕುತ್ತಿದ್ದರೆ, ಅವರಿಗೆ ಯಾವದೊಂದು ಕೆಲಸ ಮಾಡುತ್ತೇವೆಂದು ವಚನ ಕೊಡಬೇಡರಿ. ಯಾಕಂದರೆ, ಅವರು ನಿಮ್ಮಿಂದ ದುಷ್ಕೃತ್ಯ ಮಾಡಿಸುವದಕ್ಕಾಗಿ ಮೊದಲೇ ನಿಮ್ಮನ್ನು ಮಾತಿನಲ್ಲಿ ಹಿಡಿದಿಡುತ್ತಾರೆ.

೪. ನಿನ್ನ ತಿಳುವಳಿಕೆಯಂತೆಯೇ ನಡೆಯಬೇಡ. ಭಗವಂತನ ವಚನಕಡೆಗೆ ಲಕ್ಷವಿಡು. ಇದರಿಂದ ದುಃಖವೆಂಬದು ಆಗುವದಿಲ್ಲ. ನಿನ್ನ ತಿಳುವಳಿಕೆಯು ಸಂದಿಗ್ಧವಿರುತ್ತದೆ. ಆದರೆ ಪರಮೇಶ್ವರನ ವಚನದಲ್ಲಿ ಸತ್ಯತತ್ವವಿರುತ್ತದೆ.

೫. ಪರಮೇಶ್ವರನ ಶಾಪವು ದುಷ್ಟಜನರ ಮನೆಯಲ್ಲಿರುತ್ತದೆ. ಯಾಕಂದರೆ, ದುಷ್ಟ ಜನರ ವಿಚಾರವು ಯಾವಾಗಲು ದುಷ್ಟವಾದದ್ದಿರುತ್ತದೆ.

೬. ಸತ್ಯಕ್ಕೆ ಜಯವಾಗುತ್ತದೆ; ಮತ್ತು ಅದರಲ್ಲಿಯೇ ನಿಜವಾದ ಸೌಖ್ಯವಿರುವಂಟು.

೭. ಯಾರು ನನ್ನ ಹುಡುಕುವರೋ ಅವರಿಗೇ ನಾನು ಕಾಣಿಸಿಕೊಳ್ಳುತ್ತೇನೆ.

೮. ಬುದ್ಧಿವಂತನಾದ ಮಗನು ತಂದೆಗೆ ಆನಂದವನ್ನೀಯುತ್ತಾನೆ.

೯. ಕೆಟ್ಟ ಮನುಷ್ಯನ ಅಪಕೀರ್ತಿಯೂ ಕೂಡ ಅಮರವಿರುವದಿಲ್ಲ.

೧೦. ಗರ್ವವು ಮೈಯಲ್ಲಿ ಸೇರುವದಕ್ಕೆ ಆರಂಭವಾಗಲು ಅಪಕೀರ್ತಿಯ ಸಮಿಾಪಿಸತೊಡಗುತ್ತದೆ.

೧೧. ಸಾಧುಗಳು ಹಿಡಿದ ದಾರಿಯಿಂದ ಹೋಗುವದರಲ್ಲಿಯೇ ಕಲ್ಯಾಣವಿರುವಂಟು.

೧೨. ಸಿಟ್ಟು ಕಡಿಮೆಯಿರುವವನಲ್ಲಿ ವಿಚಾರಕ್ಕೆ ಆಸ್ಪದವಿರುತ್ತದೆ.

೧೩. ನನ್ನ ಮೇಲೆ ಪ್ರೇಮವಾಡುವವರಲ್ಲಿ ನಾನು ಪ್ರೇಮವಿಡುತ್ತೇನೆ.

೧೪. ಸುಳ್ಳುಸಾಕ್ಷಿ ಹೇಳುವವನಿಗೂ, ಸುಳ್ಳಾಡುವವನಿಗೂ ಅವಶ್ಯವಾಗಿ ಶಿಕ್ಷೆಯಾಗತಕ್ಕದ್ದು.

೧೫. ತರುಣ ವಯಸ್ಸಿನಲ್ಲಿ ಪರಮೇಶ್ವರನ ಚಿಂತನವನ್ನು ಎಡೆಬಿಡದೆ ಮಾಡಬೇಕು. ಯಾಕಂದರೆ ಆ ಕಾಲದಲ್ಲಿಯೇ ಮನುಷ್ಯನು ದಾರಿಯ ತಪ್ಪುವನು.

೧೬. ನಿಂಗೆ ನಿನ್ನ ದಿವಸ ಈಪ್ರಕಾರವಾದೀತೆಂದು ಈ ದಿವಸ ಹೇಳುತ್ತ ಕೂಡ್ರಬೇಡ. ನಿನ್ನ ತರ್ಕಕ್ಕೂ ಆಗುವ ಸಂಗತಿಗೂ ಬಹಳ ಅಂತರವಿರುತ್ತದೆ.

೧೭. ನೀವು ಎರಡನೆಯವರ ಮೇಲೆ ಪ್ರೇಮ ಮಾಡಿದರೆ ತಿರುಗಿ ಅವರಿಂದ ನಿಮಗೆ ಪ್ರೇಮದ ಮುಯ್ಯವು ದೊರೆಯುವದು. ನೀವು ಎರಡನೆಯವರ ಮೇಲೆ ಹೊಟ್ಟೇಕಿಚ್ಚು ಮಾಡಿದರೆ ಅದಕ್ಕೆ ನಿಮ್ಮದು ನಿಮಗೇ ಶಿಕ್ಷೆಯಾಗುವದು.

೧೮. ಸೊಖವೂ ದುಃಖವೂ ಮನುಷ್ಯನ ಸ್ವಭಾವವನ್ನೂ ಅವನ ಆಚರಣವನ್ನೂ ಅವಲಂಬಿಸಿರುತ್ತವೆ.

---

೪. ಸಾಕ್ರೆಟಿಸನ ಬಗ್ಗೆ ಒಂದು ಕಥೆ.

ಗ್ರೀಕ-ತತ್ವಜ್ಞಾನಿಯಾದ ಸಾಕ್ರೆಟಿಸನೆಂಬವನು ಬಂಡಾನೊಂದು ಕಾಲದಲ್ಲಿ ತನ್ನ ಮನೆಯನ್ನು ಕಟ್ಟಹತ್ತಿದ್ದನು. ಆ ಮನೆಯು ಬಹಳೇ ಸಣ್ಣದಿತ್ತು. ಆಗ ಅತನ ಮಿತ್ರನೊಬ್ಬನು–"ನಿನ್ನಂಥ ನಾಮಾಂಕಿತರಾದ ದೊಡ್ಡ ಮನುಷ್ಯರಿಗೆ ಈ ಮನೆಯು ಸ್ವಲ್ಪವೂ ಒಪ್ಪುವಂತೆ ಇಲ್ಲ. ನಿನ್ನ ಕೀರ್ತಿಯಂತೆ ಮನೆಯು ದೊಡ್ಡದೇ ಇರಬೇಕು," ಎಂದು ಆಕ್ಷೇಪಿಸಿದನು. ಅವನಿಗೆ ಸಾಕ್ರೆಟಿಸನು–"ಅಯ್ಯಾ ಮನೆಯು ಸಣ್ಣದೂ, ಸಂಕುಚಿತವೂ ಇದ್ದರೂ, ದೊಡ್ಡದೂ ಪ್ರಶಸ್ತವೂ ಆದ ಮನಸ್ಸುಳ್ಳ ಜನರಿಂದ ತುಂಬಿದ್ದರೆ ಅದು ನನಗೆ ಸಾಕಾಗುತ್ತದೆ," ಎಂದು ಉತ್ತರವಿತ್ತನು.

---

೫. ವಿವಿಧ ವಿಷಯಗಳು.

೧. ರೇಲ್ವೆ ಇಂಜನಿಗೆ ೬೦೦೩ ತುಂಡುಗಳು ಕೂಡಿದಾಗ ಅದಕ್ಕೆ ಇಂಜನಿನ ಸ್ವರೂಪವು ಬರುತ್ತದೆ.

೨. ಜಗತ್ತಿನಲ್ಲಿ ಗಂಡಸರು ಹೆಂಗಸರು ಇವರ ಪ್ರಮಾಣವು ೧೦೦ಕ್ಕೆ ೧೦೯ ಇರುತ್ತದೆ.

೩. ಅತಿಶಯವಾಗಿ ಕಾಫಿಯನ್ನು ಕುಡಿಯುವದರಿಂದ ಕುರುಡತನವು ಬರುತ್ತದೆಂದು ಬಬ್ಬ ಡಾಕ್ಟರರು ಸೋದಾಹರಣವಾಗಿ ಹೇಳುತ್ತಾರೆ.

೪. ಬೇರೆ ಬೇರೆ ಬಣ್ಣಗಳ ಒಂದೇ ತರದ ಶಕ್ತಿಯ ಪಾತ್ರೆಗಳಲ್ಲಿ ಬಿಸಿನೀರು ಹಾಕಿಟ್ಟರೆ ಕರಿಯ ಬಣ್ಣದ ಪಾತ್ರೆಯೊಳಗಿನ ನೀರು ಮೊದಲು ಆರುವದು.

೫. ಗಾಯನದಿಂದ ಮನುಷ್ಯನ ಹೃದಯಕ್ಕೂ ಶ್ವಾಸಕೋಶಕ್ಕೂ ಪುಷ್ಟಿ ಬರುವದು. ಹೃದ್ರೋಗವಿರುವವರು ಗಾಯನವನ್ನು ಅಭ್ಯಾಸಿಸ ಬೇಕೆಂದು ಡಾ. ಹೇರಿಕೆಂಪವೇಲರು ಹೇಳುತ್ತಾರೆ.

೬. ಐದು ವರ್ಷಗಳಿಗೊಮ್ಮೆ ಮೈಲಿಯ ತೆಗಿಸಬೇಕೆಂದು ಜಪಾನದಲ್ಲಿ ಕಾಯದೆ ಇರುವದು.

ವಿದ್ಯಾಖಾತೆಯ ನೋಟೀಸುಗಳು.

ಧಾರವಾಡ ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಯು ಸಪ್ಟಂಬರ ತಿಂಗಳ ೩೦ನೇ ತಾರೀಖಿನ ದಿವಸ ಮುಂಜಾನೆ ೧೧॥ ಘಂಟೆಗೆ ಪ್ರಾರಂಭವಾಗುವದು. ಪರೀಕ್ಷೆಗೆ ಕೂಡ್ರಲಿಚ್ಛಿಸುವ ವಿದ್ಯಾರ್ಥಿನಿಯರು ಸಪ್ಟಂಬರ ತಿಂಗಳ ೧೫ನೇ ತಾರೀಖಿನೊಳಗಾಗಿ ತಮ್ಮ ಅರ್ಜಿಗಳನ್ನು ತಮ್ಮ ಜಿಲ್ಹೆಯ ಡಿವೂಟ ಎಜ್ಯುಕೇಶನಲ್ಲ ಇನ್‌ಸ್ಪೇಕ್ಟರವರ ಮುಖಾಂತರ ನಮ್ಮ ಕಡೆಗೆ ಕಳಿಸಬೇಕು. ಅರ್ಜದಾರಳು ತನ್ನ ನಡತೆಯೂ ಸ್ವಭಾವವೂ ನೆಟ್ಟಗಿರುವ ಬಗ್ಗೆ ಮಹತ್ವದ ಸರಕಾರಿ ನವಕರಿಯಲ್ಲಿರುವ ಸಭ್ಯಗ್ರಹಸ್ಥನ ಅಥವಾ ಶಾಳಾ ಖಾತೆಯ ಅಮಲದಾರನ ಸಹಿ ಇರುವ ಒಂದು ಸರಟೀಫಿಕೇಟನ್ನು ತನ್ನ ಅರ್ಜಿಯಸಂಗಡ ಕಳಿಸಬೇಕು.

ಟ್ರೇನಿಂಗ ಕಾಲೇಜ
ಫಾರ ವೀಮೆನ್, ಧಾರವಾಡ.
ತಾ. ೨೦ನೇ ಜುಲೈ ೧೯೧೪.

F. L. McAfee.
ಲೇಡೀ ಸುಪರಿಂಟಿಂಡೆಂಟ.

ನೋಟೀಸು.

ಧಾರವಾಡ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜದ ತಯಾರಿ ವರ್ಗದ ಪ್ರವೇಶ ಪರೀಕ್ಷೆಯು (ಹೆಣ್ಣು ಮಕ್ಕಳ ೪ನೇ ಇಯತ್ತೆಯಂತೆ) ಸಪ್ಟಂಬರ

ವಾಗುವದು. ವಿದ್ಯಾರ್ಥಿನಿಯರು ತಮ್ಮ ಅರ್ಜಿಯನ್ನೂ ಅದರ ಸಂಗಡ ಗಂಡನ ಇಲ್ಲವೆ ಪಾಲಕನ ಕಬೂಲಿ ಪತ್ರಿಕೆಯನ್ನೂ ವಯಸ್ಸಿನ ದಾಖಲೆಯನ್ನೂ ತಮ್ಮ ಶಾಲೆಯ ಹೆಡ್ ಮಿಸ್ಟ್ರೆಸ್ ಹಾಗೂ ತಮ್ಮ ಜಿಲ್ಲೆಯ ಡೆಪ್ಯೂಟಿ ಎಜ್ಯುಕೇಶನಲ್ಲ ಇನ್‌ಸ್ಪೇಕ್ಟರವರ ಮುಖಾಂತರ ತಾ॥ ೧೫ನೇ ಸಪ್ಟಂಬರ ೧೯೧೪ನೇ ಇಸ್ವಿಯ ಒಳಗಾಗಿ ಕೆಳಗೆ ಸಹಿ ಮಾಡಿದವರ ಕಡೆಗೆ ಕಳಿಸ ತಕ್ಕದ್ದು. ಅರ್ಜಿದಾರಳು ತನ್ನ ನಡತೆಯೂ ಸ್ವಭಾವವೂ ನೆಟ್ಟಗಿರುವ ಬಗ್ಗೆ ಮಹತ್ವದ ಸರಕಾರೀ ನೌಕರಿಯಲ್ಲಿರುವ ಸಭ್ಯ ಗೃಹಸ್ಥನ ಅಥವಾ ಶಾಳಾ ಖಾತೆಯ ಅಮಲದಾರನ ಸಹಿ ಇರುವ ಒಂದು ಸರಟೀಫಿಕೇಟನ್ನು ತಿಂಗಳ ೩೦ನೇ ತಾರೀಖಿನ ದಿವಸ ಮುಂಜಾನೆ ೧೧॥ ಗಂಟೆಗೆ ಪ್ರಾರಂಭ ತನ್ನ ಅರ್ಜಿಯ ಸಂಗಡ ಕಳಿಸಬೇಕು. ಮುಂದೆ ಈ ಅರ್ಜಿಯ ವಿಚಾರ ವಾಗಿ ಸಪ್ಟಂಬರ ತಿಂಗಳ ೩೦ನೇ ತಾರೀಖಿನ ದಿವಸ ಪರೀಕ್ಷೆಗೆ ಬಂದು ಹಾಜರ ಆಗಲಿಕ್ಕೆ ತಿಳಸಲಾದೀತು.

ಟ್ರೇನಿಂಗ ಕಾಲೇಜ
ಫಾರ ವೀಮೆನ್, ಧಾರವಾಡ.
ತಾ. ೨ನೇ ಜುಲೈ ೧೯೧೪.

F. L. McAfee.

ಲೇಡೀ ಸುಪರಿಂಟೆಂಡೆಂಟ

೧೯೧೪ನೇಯ ಇಸವಿಯ

ವರ್ಷ ಪ್ರಾಯಿಕ್ಷೆಯು,

ಕನ್ನಡದಲ್ಲಿ ಅಗತಕ್ಕ ವರ್ಷಪ್ರಾಯಿಕ್ಷೆಯನ್ನು ೧೯೧೪ನೇಯ ಇಸವಿಯ ದಶಂಬರ ತಿಂಗಳ ೧೪ ನೆಯ ತಾರೀಖು, ಸೋಮವಾರ ದಿವಸದಿಂದ, ಕೆಳಗೆ ಸಹಿ ಮಾಡಿದವರ ಕಡೆಯಿಂದ ೧೯೧೫ನೇಯ ಇಸವಿಯ ಫೇಬ್ರುವರಿ ತಿಂಗಳ ಕನ್ನಡ ಶಾಳಾಪತ್ರಿಕೆಯ ೩೯–೪೦ನೇ ಪುಟಗಳಲ್ಲಿ ಪ್ರಕಟಿಸಲ್ಪಟ್ಟ ನಿಯಮಗಳಿಗನುಸರಿಸಿ, ಧಾರವಾಡ ಟ್ರೇನಿಂಗ ಕಾಲೇಜದಲ್ಲಿ ತೆಗೆದುಕೊಳ್ಳಲಾಗುವದು. ಸದರೀ ಪರೀಕ್ಷೆಯಲ್ಲಿ ೪೦ ರೂಪಾಯಿಯ ಬಕ್ಷೀಸು ಒಂದು, ೩೦ ರೂಪಾಯಿಯ ಬಕ್ಷೀಸು ಒಂದು ಈ ಪ್ರಕಾರ ಎರಡು ಬಕ್ಷೀಸುಗಳಿರುವವು. ಪರೀಕ್ಷೆಗೆ ಬರತಕ್ಕ ಉಮೇದ್ವಾರರು ತಮ್ಮ ತಮ್ಮ ಅರ್ಜಿಗಳನ್ನು ಕೆಳಗೆ ಸಹಿ ಮಾಡಿದವರ ಕಡೆಗೆ

ತೀರ ತಡವಾಡಿಯಾದರೆ, ೧೯೧೪ನೆಯ ದಿಶಂಬರ ೧ ನೆಯ ತಾರೀಖಿಗಾಗಲಿ ಅಥವಾ ಅದರ ಪೂರ್ವದಲ್ಲಿಯಾಗಲಿ ತಪ್ಪದೆ ಮುಟ್ಟುವಂತ ಕಳಿಸಬೇಕು. ಪರೀಕ್ಷೆಯು ನೇಮಿಸಿದ ದಿವಸ ೧೧॥ ಘಂಟೆಗೆ ಪ್ರಾರಂಭವಾಗುವದು.

V. B. JOSHI.

ಅಕ್ಟಿಂಗ ಎಜ್ಯುಕೇಶನಲ್ ಇನಸ್ಪೇಕ್ಟರ,
ದಕ್ಷಿಣಭಾಗ.

ಧಾರವಾಡ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜದ ಸರ್ಟಿಫಿಕೇಟ ಪರೀಕ್ಷೆಯು ಸೋಮವಾರ ತಾ॥ ೫ ಅಕ್ಟಂಬರ ೧೯೧೪ನೇ ದಿವಸ ಪ್ರಾರಂಭವಾಗುವದು.

ಧಾರವಾಡ ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಯು ಶುಕ್ರವಾರ ತಾ. ೪ ದಿಶಂಬರ ೧೯೧೪ನೆಯ ದಿವಸ ಪ್ರಾರಂಭವಾಗುವದು.

ಪ್ರಕೃತಿಯ ವರ್ಣವೈಚಿತ್ರ್ಯ.

(೨೪-೬-೧೯೧೧ ಬುಧವಾರ ದಿವಸ ಟ್ರೇ. ಕಾ. ದಲ್ಲಿ ಉಪನ್ಯಾಸ ಮಾಡಿದ್ದು)

ಆಕಾಶವು ನೀಲವರ್ಣದ್ದು; ಹುಲ್ಲು-ಗಿಡ-ಬಳ್ಳಿಗಳು ಹಸರು ಬಣ್ಣದವು; ಪಶುಪಕ್ಷಿ ಮೊದಲಾದವು ಚಿತ್ರವಿಚಿತ್ರವಾದ ಬಣ್ಣದವು. ಈ ನಾನಾಪ್ರಕಾರದ ಬಣ್ಣಗಳಿಂದ, ಪೃಥ್ವಿಯು ಮನೋಹರವಾಗಿರುವದು. ಈ ವರ್ಣವೈಚಿತ್ರ್ಯವು ಇಲ್ಲದಿದ್ದರೆ, ಭೂಲೋಕದ ಕೆಲವೊಂದು ಆನಂದವೂ ಸೌಂದರ್ಯವೂ ಕಡಿಮೆಯಾಗುತ್ತಿದ್ದವು.

ಜಲ-ಸ್ಥಲ-ಭೂಮಿ-ಆಕಾಶ-ಪ್ರಾಣಿ-ವನಸ್ಪತಿ ಮೊದಲಾದವೆಲ್ಲವು ಬರ್ಫದಂತೆ, ಬಿಳಿಯವಾಗಿ ಇಲ್ಲವೆ ಸಮುದ್ರದಂತೆ ಕರಿಯವಾಗಿ ಪೃಥ್ವಿಯೆಲ್ಲ ಒಂದೇ ಬಣ್ಣದ್ದಿತ್ತೆಂದು ಕಲ್ಪಿಸಿರಿ. ಆಗ ಈ ಒಂದೇ ತರದ ಬಣ್ಣದಿಂದ ನಮ್ಮ ಕಣ್ಣಿಗೆ ಎಷ್ಟು ತೊಂದರೆಯಾಗುತ್ತಿತ್ತೆಂಬದನ್ನು ಸಹಜವಾಗಿ ಊಹಿಸಬಹುದು. ಫೋಟೋಗ್ರಾಫಿನಲ್ಲಿ ಪ್ರಕೃತಿಯ ಚಿತ್ರವು ನಿಜವಾಗಿ ಹೊರಡುತ್ತದೆ. ಇನ್ನು ನಿಪುಣನಾದ ಚಿತ್ರಕಾರನು ಅದೇ ಪ್ರಕೃತಿಯನ್ನು ಕಲ್ಪನೆಯಿಂದ ಆಯಾಬಣ್ಣಗಳಿಂದ ಬರೆಯುವನು. ಆದರೆ ಪ್ರೇಕ್ಷಕನು ನಿಜವಾಗಿ ಹೊರಟ ಫೋಟೋಗ್ರಾಫಿಗಿಂತ ಬಣ್ಣಗಳಿಂದ ಬರೆದ ಚಿತ್ರವನ್ನೇ ಆದರಲ್ಲಿ ಕುಂದು-ಕೊರತೆಗಳು ಸ್ವಲ್ಪವಿದ್ದರೂ ಪ್ರೀತಿಸುವನು. ಇದು ಪ್ರೇಕ್ಷಕನ ಮೂಢತನವೆಂದು ಹೇಳಲಾಗುವದಿಲ್ಲ. ನಮ್ಮ ಕಣ್ಣುಗಳು ಬಣ್ಣಗಳ ವಿಲಾಸವನ್ನು ನೋಡುವಲ್ಲಿ ಕುತೂಹಲವುಳ್ಳವಿರುತ್ತವೆಂಬದೇ ಅದರ ಕಾರಣವು. ಫೋಟೋಗ್ರಾಫಿನಲ್ಲಿ ಒಂದೇ ಬಣ್ಣವು. ಚಿತ್ರದಂತೆ ನಾನಾತರದ ಬಣ್ಣಗಳಿರುವದಿಲ್ಲ. ಆದ್ದರಿಂದಲೇ ಚಿತ್ರಕ್ಕಿಂತ ಅದರ ಮೇಲೆ ಆದರವು ಕಡಿಮೆ. ಮನುಷ್ಯನ ಕಣ್ಣಿಗೆ ಆನಂದವನ್ನೀಯುವ ಈ ವರ್ಣವಿಲಾಸವು ಪ್ರಕೃತಿಯಲ್ಲಿ ಎಷ್ಟು ವಿಸ್ತರಿಸಿರುವದೆಂಬದನ್ನು ನೋಡಿರಿ. ಮನುಷ್ಯಜಾತಿಯಲ್ಲಿ ಒಂದು ಜನಾಂಗವು ಬಿಳಿದು; ಇನ್ನೊಂದು ಕರಿಯಬಣ್ಣದ್ದು; ಮತ್ತೊಂದು ಅರಿಸಿನ ಬಣ್ಣದ ಜನಾಂಗವು. ಪಶುಪಕ್ಷಿಗಳಲ್ಲಿ ಆನೆ ಕರಿದು, ಒಂಟೆ ಕಂದುಬಣ್ಣದ್ದು, ದನಗಳು ಹಲವು ಬಣ್ಣದವು, ಗಿಳಿಯು ಹಸಿರು ಬಣ್ಣದ್ದು, ಕಾಗೆ ಕರಿದು. ಹೂಗಳಲ್ಲಿ ಒಂದು ಹೂ ಕೆಂಪದು, ಇನ್ನೊಂ

ದು ಬಿಳಿದು. ಹೀಗೆ ಒಂದೊಂದು ಜಾತಿಯಲ್ಲಿ ಒಂದೊಂದು ವಿಧವಾದ ಬಣ್ಣವಿರುವದು. ಇನ್ನು ಒಂದೇ ವರ್ಗದಲ್ಲಿ ನೋಡಿರಿ. ಗೊರಟಿಗೆ ಎಂಬ ಜಾತಿಯಲ್ಲಿ ಕೆಂಪು, ಬಿಳಿದು, ನೀಲಿ, ಊದು ಮೊದಲಾದ ನಾನಾ ಪ್ರಕಾರದ ಬಣ್ಣದ ಹೂಗಳಾಗುವವು. ಮಧ್ಯಾಹ್ನಮಲ್ಲಿಗೆ ಇಲ್ಲವೆ ದಾಸಾಳ ಜಾತಿಯಲ್ಲಿ ಕೆಂಪು, ಬಿಳಿದು, ಹಳದಿ ಬಣ್ಣಗಳ ಹೂಗಳು ಕಂಡುಬರುವವು. ಈ ಪ್ರಕಾರ ಒಂದೊಂದು ವಸ್ತುವಿನಲ್ಲಿ ಒಂದೊಂದು ತರದ ಬಣ್ಣವನ್ನು ಉಂಟು ಮಾಡಿದ್ದರಲ್ಲಿ ಪ್ರಕೃತಿ ದೇವಿಯ ಯಾವ ಬಯಕೆಯು ನೆರವೇರುವದು? ಈ ವರ್ಣವಿಲಾಸವನ್ನು ತೋರ್ಪಡಿಸುವಲ್ಲಿ ಪ್ರಕೃತಿಯ ಉದ್ದೇಶವೇನು?

ಈ ಪ್ರಶ್ನೆಯ ಉತ್ತರವನ್ನು ಸುಲಭವಾಗಿ ಹೇಳುವದಕ್ಕಾಗುವದಿಲ್ಲ. ವರ್ಣಶಾಸ್ತ್ರ, ಪ್ರಕಾಶಶಾಸ್ತ್ರ ಈ ವಿಷಯಗಳನ್ನೆ ತೆಗೆದುಕೊಂಡು ತಮ್ಮ ಆಯುಷ್ಯವನ್ನೆಲ್ಲ ವೆಚ್ಚ ಮಾಡಿ ವಿಚಾರ ಮಾಡುತ್ತಿರುವ ಶಾಸ್ತ್ರಜ್ಞರೂ ಕೂಡ ಈ ವಿಷಯದಲ್ಲಿ ನಮೆರ್ಪಕವಾದ ಉತ್ತರವನ್ನು ಹೇಳುವದಿಲ್ಲ. ಬಣ್ಣಗಳ ಉತ್ಪತ್ತಿಯ ವಿಷಯದಲ್ಲಿ ಪ್ರಕಾಶಶಾಸ್ತ್ರಜ್ಞರು ಹೇಳುವದೇನೆಂದರೆ, ನಾವು ನೋಡುವ ಸೂರ್ಯಪ್ರಕಾಶವು ಒಂದು ವರ್ಣದ ಪ್ರಕಾಶವಲ್ಲ. ಕೆಂಪು, ಕಿತ್ತಳೆ ಬಣ್ಣ, ಅರಿಸಿನ ಬಣ್ಣ, ಹಸಿರು, ಶ್ಯಾಮ, ನೀಲ, ಊದಿ ಎಂಬೀ ಏಳು ಮೂಲ ವರ್ಣಗಳ ಕಿರಣಗಳು ಕೂಡಿಕೊಂಡು ಈ ಶುಭ್ರ ಕಿರಣಗಳು ಉಂಟಾಗಿರುವವು. ಸೂರ್ಯನಿಗೆ "सप्ताश्वः" ಎಂಬ ಹೆಸರನ್ನು ಪ್ರಾಚೀನರು, ಈ ಏಳು ಬಣ್ಣಗಳ ಕಿರಣಗಳಿಗೇ ಅಶ್ವಗಳೆಂದು ರೂಪಣವಾಡಿ ಇಟ್ಟರಬಹುದೆಂದು ತೋರುತ್ತದೆ. ತ್ರಿಕೋಣಾಕೃತಿ ಲೋಲಕದ ಮೇಲೆ ಸೂರ್ಯಪ್ರಕಾಶವನ್ನು ಕೆಡವಿದರೆ ಆ ಮೂಲ ವರ್ಣಕಿರಣಗಳು ಬೇರೆ ಬೇರೆಯಾಗಿ ತೋರುವವು. ಸೂರ್ಯಪ್ರಕಾಶದಿಂದಲೇ ಪದಾರ್ಥಗಳು ಬೇರೆ ಬೇರೆ ಬಣ್ಣವಾಗಿ ತೋರುತ್ತವೆ. ಹೇಗಂದರೆ, ಪದಾರ್ಥಗಳಲ್ಲಿ ಸೂರ್ಯಪ್ರಕಾಶದ ಕೆಲವು ವರ್ಣಗಳ ಕಿರಣಗಳು ಇಂಗುತ್ತವೆ. ಉಳಿದ ಕಿರಣಗಳು ಪರಾವರ್ತನ ಹೊಂದುತ್ತವೆ. ಇನ್ನು ಯಾವದೊಂದು ಪದಾರ್ಥವು ಕೆಂಪು ಬಣ್ಣದ್ದಿರುವದೆಂದು ತಿಳಿಯಿರಿ. ಆ ಪದಾರ್ಥಕ್ಕೆ ಆ ಬಣ್ಣವು ಹೇಗ ಬಂತೆಂದರೆ, ಅದು ಶುಭ್ರವಾದ ಸೂರ್ಯಪ್ರಕಾಶವನ್ನು ಪೃಥಕ್ಕರಿಸಿ ಅದರೊಳಗಿನ ಕೆಂಪು ಕಿರಣಗಳನ್ನು ಮಾತ್ರ ಹೊರಗೆ ಬಿಡುವದು. ಉಳಿದ ಎಲ್ಲ ಬಣ್ಣಗಳ ಕಿರ

ಣಗಳನ್ನು ನುಂಗಿ ಲೋಪವಾಡಿ ಬಿಡುವದ. ಇದರಿಂದ ಹೊರಗೆ ಬಿಟ್ಟ ಕೆಂಪು ಬಣ್ಣದ ಕಿರಣಗಳಿಂದ ಆ ಪದಾರ್ಥವು ನಮಗೆ ಕೆಂಪದಾಗಿ ತೋರುವದು. ನೀಲ ಬಣ್ಣದ ಪದಾರ್ಥವು ಇದೇ ಪ್ರಕಾರ ಸೂರ್ಯ ಪ್ರಕಾಶದ ನೀಲ ಕಿರಣಗಳನ್ನು ಮಾತ್ರ ಹೊರಗೆ ಬಿಟ್ಟು ಉಳಿದ ಕಿರಣಗಳನ್ನು ನುಂಗಿ ಬಿಡುವದು. ಇದರಿಂದ ಅದು ನೀಲವಾಗಿ ತೋರುವದು. ಕರಿಯ ಪದಾರ್ಥವು ಬಹಳ ಸ್ವಾರ್ಥದ್ದು. ಅದು ಎಲ್ಲ ಕಿರಣಗಳನ್ನು ನುಂಗಿ ಬಿಡುವದು. ಬಿಳಿದು ಬಲು ನಿಸ್ಪೃಹವಾದದ್ದು. ಅದು ಯಾವ ಕಿರಣವನ್ನೂ ನುಂಗುವದಿಲ್ಲ; ಎಲ್ಲ ಕಿರಣಗಳನ್ನು ಬಿಟ್ಟುಬಿಡುತ್ತದೆ. ಯಾವದೊಂದು ಪದಾರ್ಥಕ್ಕೆ ನಿಜವಾಗಿ ಬಣ್ಣವಿಲ್ಲ. ಅದು ಸೂರ್ಯ ಪ್ರಕಾಶದಲ್ಲಿ ಬಂದಾಗ ಯಾವ ಬಣ್ಣದ ಕಿರಣಗಳನ್ನು ಹೊರಗೆ ಬಿಡುವದೋ ಆ ಬಣ್ಣವು ಆ ಪದಾರ್ಥಗಳಿಗೆ ಉಂಟಾಗುವದು.

ಬಣ್ಣಗಳ ಉತ್ಪತ್ತಿಯ ವಿಷಯವಾದ ಈ ಶಾಸ್ತ್ರೀಯ ಸಿದ್ಧಾಂತದಿಂದ ಕೆಂಪು, ನೀಲಿ ಮುಂತಾದ ಬಣ್ಣಗಳ ಉತ್ಪತ್ತಿಯು ಮಾತ್ರ ತಿಳಿಯುವದು. ಆದರೆ ಗುಲಾಬಿಯ ಜಾತಿಯಲ್ಲಿ ಬಿಂದರ ಹೂವು ಕೆಂಪು ಬಣ್ಣದ್ದು ಯಾತರಿಂದಾಯಿತು.? ಇನ್ನೊಂದರ ಬಣ್ಣವು ಬೆಳುಪು ಯಾಕೆ? ಎಂಬ ಪ್ರಶ್ನೆಯ ಉತ್ತರವನ್ನು ಪ್ರಕಾಶಶಾಸ್ತ್ರವು ಸ್ಪಷ್ಟಗೊಳಿಸಿರುವದಿಲ್ಲ. ಮತ್ತು ಬಿಂದರ ಬಣ್ಣವನ್ನು ಕೆಂಪದಾಗಿಯೂ, ಇನ್ನೊಂದರ ಬಣ್ಣವನ್ನು ಬಿಳುಪಾಗಿಯೂ ಮಾಡುವಲ್ಲಿ ಪ್ರಕೃತಿಯ ಯಾವ ಉದ್ದೇಶವು ಈಡೇರುತ್ತದೆ? ಎಂಬದೂ ಗೊತ್ತಾಗುವದಿಲ್ಲ. ಇನ್ನು-ಈ ಜೀವಲೋಕವನ್ನು ಸುಂದರವಾಗಿ ಮಾಡುವ ವಿಷಯದಲ್ಲಿ ಪ್ರಕೃತಿಯು ಯಾವಾಗಲು ಮಾಡುತ್ತಿರುವ ಹಲವು ಉಪಾಯಗಳಲ್ಲಿ ಈ ವರ್ಣವಿಲಾಸವೂ ಒಂದಾಗಿರುವದೆಂದು ಸಾಮಾನ್ಯವಾಗಿ ಹೇಳಬಹುದು. ಆದರೆ ಈ ಉತ್ತರವು ಶಾಸ್ತ್ರಜ್ಞರಿಗೆ ಸಮ್ಮತವಾಗಲಾರದು.

ನಮ್ಮ ಶರೀರದಲ್ಲಿ ಇಷ್ಟೊಂದು ಯಂತ್ರಮಯವಾದ ರಚನೆ ಯಾಕಿರಬೇಕು? ಶರೀರವು ಸುರಕ್ಷಿತವಾಗಿರಬೇಕೆಂದು ಈ ಪ್ರಕಾರದ ರಚನೆಯಿರುವದೆಂದು ಹೇಳಿದರೆ ಸಾಕಾದೀತೇ? ಮೆದುಳಿನ ಕೆಲಸವೇನು? ಕರುಳು ಯಾತಕ್ಕಿರಬೇಕು? ಇವೇ ಮೊದಲಾದ ವಿಚಾರಗಳನ್ನು ಸ್ಪಷ್ಟ ಪಡಿಸಿದ ಹೊರತು ನಮಗೆ ಸಮಾಧಾನವಾಗುವದಿಲ್ಲ.

ಈ ವರ್ಣವೈಚಿತ್ರ್ಯದ ಉದ್ದೇಶದ ಶೋಧವು ಇನ್ನೂ ಪೂರ್ಣವಾಗಿ ಆಗಿರುವದಿಲ್ಲ. ವನಸ್ಪತಿಗಳ ಬೀಜಗಳ ಪುನರುತ್ಪತ್ತಿಯಲ್ಲಿ ಈ ವರ್ಣವಿಲಾಸದ ಉಪಯೋಗವು ಕೆಲವು ಕಡೆಯಲ್ಲಿ ಆಗುವದು. ಬೀಜಗಳ ಪುನರುತ್ಪತ್ತಿಯು ಹೇಗ ಆಗುತ್ತದೆ? ವನಸ್ಪತಿಗಳ ಪುಷ್ಪಗಳಲ್ಲಿ ಪುಂಕೇಸರ, ಸ್ತ್ರೀಕೇಸರ ಎಂಬ ಎರಡು ಅವಯವಗಳು ಬೀಜಗಳನ್ನು ಹುಟ್ಟಿಸುವ ಕೆಲಸದಲ್ಲಿ ಮುಖ್ಯವಾದಂಥವು. ಸ್ತ್ರೀಕೇಸರವು ಹದಕ್ಕೆ ಬಂದಾಗ ಪುಂಕೇಸರದಲ್ಲಿಯ ಪರಾಗವು ಅದರ ಮೇಲೆ ಬೀಳಲು, ಮುಂದೆ ಬೀಜಕೋಶದಲ್ಲಿ ಬೀಜಗಳು ಉತ್ಪನ್ನವಾಗುವವು. ಕೆಲವು ವನಸ್ಪತಿಗಳ ಪುಷ್ಪಗಳಲ್ಲಿ ಪುಂಕೇಸರ, ಸ್ತ್ರೀಕೇಸರಗಳು ಒತ್ತಟ್ಟಿಗೆ ಇರುವದಿಲ್ಲ. ಅಂದರೆ, ಪುಂಕೇಸರವು ಒಂದು ಪುಷ್ಪದಲ್ಲಿದ್ದರೆ ಸ್ತ್ರೀಕೇಸರವು ಇನ್ನೊಂದು ಪುಷ್ಪದಲ್ಲಿ ಇರಬಹುದು. ಕುಂಬಳ ಬಳ್ಳಿಯಲ್ಲಿ ಈ ಪ್ರಕಾರ ಪುಂಕೇಸರ ಮಾತ್ರವುಳ್ಳ ಹೂವು ಬೇರೆ, ಸ್ತ್ರೀಕೇಸರ ಮಾತ್ರವುಳ್ಳ ಹೂ ಬೇರೆ ಆಗುವವು. ಅವಕ್ಕೆ ಗಂಡು ಹೂವು, ಹೆಣ್ಣು ಹೂವು ಎಂದು ಹೇಳುವೆವು. ಗೋವಿನ ಜೋಳದಲ್ಲಿ ಗಂಟಿಗೆ ಹೊಂದಿ ಹೊರಟ ತೆನೆಯ ಮುಂದುಗಡೆಯಲ್ಲಿ ಸ್ತ್ರೀಕೇಸರಗಳಿರುವವು. ಸಂಟಿನ ತುದಿಯಲ್ಲಿ ಹೊರಟ ತುರಾಯಿಯಲ್ಲಿ ಪುಂಕೇಸರಗಳಿರುವವು. ಈ ರೀತಿ ಪುಂಕೇಸರ-ಸ್ತ್ರೀಕೇಸರಗಳ ಸ್ಥಾನವು ಕೆಲವು ವನಸ್ಪತಿಗಳಲ್ಲಿ ಬೇರೆ ಬೇರೆಯಾಗಿರುವದುಂಟು. ಇಂಥ ಸ್ಥಳಗಳಲ್ಲಿ ಪುಂಕೇಸರ-ಸ್ತ್ರೀಕೇಸರಗಳ ಸಂಯೋಜನಕಾರ್ಯವನ್ನು ವಾರುತನು ಮಾಡಿಸಿಕೊಂಡಿರುತ್ತಾನೆ. ಅದರೆ ಈ ಮಹಾಕಾರ್ಯವನ್ನು ತುಂಬಿಗಳು, ಕ್ರಿಮಿಗಳು, ಪಾತರಗಿತ್ತಿಗಳು ಮೊದಲಾದ ಅಲ್ಪ ಪ್ರಾಣಿಗಳೂ ನೆರವೇರಿಸುವದುಂಟು. ಈ ಪ್ರಾಣಿಗಳು ಒಂದು ಹೂವಿನಿಂದ ಇನ್ನೊಂದು ಹೂವಿಗೆ ಹಾರಾಡುತ್ತಿರುವಾಗ ಪುಂಕೇಸರವುಳ್ಳ ಹೂವಿನಲ್ಲಿ ಕುಳಿತಾಗ ಅದರ ರೆಕ್ಕೆಗಳಿಗೆ ಪುಂಕೇಸರದ ಪರಾಗವು ಹತ್ತಿಕೊಂಡಿದ್ದು, ಸ್ತ್ರೀಕೇಸರವುಳ್ಳ ಹೂವಿಗೆ ಬಂದಾಗ ಅದು ಆ ಹೂವಿನ ಸ್ತ್ರೀಕೇಸರದ ಮೇಲೆ ಬೀಳುವದು. ಈ ರೀತಿ ಅಲ್ಲಿ ಬೀಜೋತ್ಪತ್ತಿಯಾಗುವದು. ಮನೋಹರವಾದ ಬಣ್ಣಗಳಿದ್ದ ಹೂಗಳಲ್ಲಿ ಈ ಪ್ರಾಣಿಗಳು ಸಂಚರಿಸುವದು ಹೆಚ್ಚು. ಪಾತರಗಿತ್ತಿಗಳಂತು ಹೆಚ್ಚಾಗಿ ಮಕರಂದವುಳ್ಳ ಹೂವುಗಳಿಗಿಂತ ಮನೋಹರವಾದ ಬಣ್ಣವುಳ್ಳ ಹೂಗಳಲ್ಲಿ ಕಡಿಮೆ ಮಕರಂದವಿದ್ದರೂ

ಅವುಗಳನ್ನೇ ಪ್ರೀತಿಸುವವು. ಹೂದೋಟಗಳಲ್ಲಿ ಪಾತರಗಿತ್ತಿಗಳು ಚಂಡು ಹೂವು, ವಿಲಾಯತಿ ಚಂಡು ಹೂವು ಮೊದಲಾದ ಮನೋಹರವಾದ ಬಣ್ಣವುಳ್ಳ ಹೂಗಳ ಮೇಲೆಯೇ ಹೆಚ್ಚಾಗಿ ಹಾರಾಡುವದನ್ನು ನೋಡಬಹುದು. ಇವು ಬಣ್ಣಕ್ಕೆ ಮರುಳಾಗುವ ಪ್ರಾಣಿಗಳಾದ್ದರಿಂದಲೇ ಹೀಗಾಗುವದು. ಸ್ತ್ರೀಕೇಸರ-ಪುಂಕೇಸರಗಳು ಬೇರೆ ಬೇರೆ ಕಡೆಯಲ್ಲಿದ್ದು ಅಂಥ ಹೂಗಳಲ್ಲಿ ಮನೋಹರವಾದ ಬಣ್ಣವಿದ್ದರೆ ಅಂಥ ಸ್ಥಳದಲ್ಲಿ ಈ ಪಾತರಗಿತ್ತಿ ಮೊದಲಾದ ಪ್ರಾಣಿಗಳಿಂದ ಬೀಜೋತ್ಪತ್ತಿಗೆ ಸಹಾಯವಾಗುವದುಂಟು. ಈ ಪ್ರಕಾರ ವರ್ಣವೈಚಿತ್ರ್ಯವು ವನಸ್ಪತಿಗಳ ಬೀಜಗಳ ಪುನರುತ್ಪತ್ತಿಯ ಕೆಲಸದಲ್ಲಿ ಕೆಲವು ಮಟ್ಟಿಗೆ ನೆರವಾಗುವದುಂಟು.

ಇನ್ನು ಪ್ರಾಣಿವರ್ಗದಲ್ಲಿ, ಪಶುಪಕ್ಷಿ ಕ್ರಿಮಿಕೀಟಕ ಮೊದಲಾದವುಗಳ ವರ್ಣವೈಚಿತ್ರ್ಯದ ಉದ್ದೇಶವನ್ನು ಗೊತ್ತು ಹಚ್ಚುವಲ್ಲಿ ಶಾಸ್ತ್ರಜ್ಞರು ಹಲವು ತರದ ವಿಚಾರಗಳನ್ನು ಪ್ರಕಟಿಸಿರುತ್ತಾರೆ. ಪ್ರಸಿದ್ಧ ಶಾಸ್ತ್ರಜ್ಞನಾದ ಡಾರ್ವಿನ್ನನು ಹೇಳಿದ್ದೇನೆಂದರೆ—" ಜೀವಜಂತುಗಳಲ್ಲಿರುವ ನಾನಾ ವರ್ಣಗಳ ಸಮಾವೇಶವು ಗಂಡು ಹೆಣ್ಣುಗಳು ಪರಸ್ಪರ ಕೂಡುವ ಆಶೆಯನ್ನುಂಟು ಮಾಡುವ ಒಂದು ಉಪಾಯವಿರುತ್ತದೆ. ಆದರೆ ಬಾಲ್ಯಾವಸ್ಥೆಯ ಕೀಟಗಳಲ್ಲಿಯೂ ಗಂಡು ಹೆಣ್ಣುಗಳ ಸಂಯೋಗವಿಲ್ಲದೆ ಸಂತಾನೋತ್ಪತ್ತಿಯಾಗುವ ಕ್ರಿಮಿಕೀಟಕಗಳಲ್ಲಿಯೂ ಕೂಡ ಬಣ್ಣಗಳಿರುವದನ್ನು ನೋಡಿ ಈ ಮತವನ್ನು ಅವನು ಬಿಡಬೇಕಾಯಿತು. ಈ ವಿಷಯದಲ್ಲಿವಾಲೇಸನೆಂಬ ಇನ್ನೊಬ್ಬ ಪಂಡಿತನು ಹೇಳಿದ್ದೇನೆಂದರೆ, ಜೀವಜಂತುಗಳ ಮೈಮೇಲಿನ ಬಣ್ಣಗಳ ರಚನೆಯು ಅವುಗಳ ಭಕ್ಷಕ ಶತ್ರುಗಳಿಗೆ ಎಚ್ಚರ ಕೊಡುವ ನಿಶಾನೆಯಂತೆ ಉಪಯೋಗವಾಗುತ್ತದೆ; ಅಂದರೆ, ಯಾವ ಪ್ರಾಣಿಯು ವಿಚಿತ್ರವಾದ ಬಣ್ಣವುಳ್ಳದ್ದೋ ಅದು ತಿನ್ನುವದಕ್ಕೆ ಅಯೋಗ್ಯವಾದದ್ದು ಎಂಬದಾಗಿ ಪ್ರಕೃತಿಯ ಸಂಕೇತವು. ಆದರೆ, ಫೇಯಾರ್ ಮೊದಲಾದ ಶಾಸ್ತ್ರಜ್ಞರು ಹಲವು ಪರೀಕ್ಷೆಗಳನ್ನು ಮಾಡಿ ಕೊನೆಗೆ ಪಶುಪಕ್ಷಿಗಳು, ಕೀಟಕ-ಪತಂಗಗಳು ಮೊದಲಾದ ಪ್ರಾಣಿಗಳ ಮೈಮೇಲೆ ತೋರುವ ನಾನಾ ಪ್ರಕಾರದ ಬಣ್ಣಗಳ ರಚನೆಯು ಆ ಪ್ರಾಣಿಗಳನ್ನು ಅವುಗಳ ಶತ್ರುಗಳಿಂದ ಕಾಪಾಡುವದಕ್ಕಾಗಿ ಪ್ರಕೃತಿಯು ಮಾಡಿದ ಒಂದು ಉಪಾಯವಿರುತ್ತದೆ, ಎಂಬ ಮತವನ್ನು ಪ್ರಕಟಿಸಿದರು. ಉದಾಹರಣಾರ್ಥವಾಗಿ, ಗುಬ್ಬಿ ಮೊದಲಾದ ಹಕ್ಕಿಗಳ

ತೀಕ್ಷ್ಣ ದೃಷ್ಟಿಯನ್ನು ತಪ್ಪಿಸುವದಕ್ಕೆಗಿ ಹಸಿರು ಹುಲ್ಲಿನ ಪ್ರದೇಶದ ಲ್ಲಿರುವ ಶಿವನಕುದುರೆ, ಕೀಡಿ ಇವುಗಳ ಬಣ್ಣವು ಹಸಿರು; ಒಣ ಹುಲ್ಲಿನ ಪ್ರದೇಶದಲ್ಲಿರುವ ಶಿವನ ಕುದುರೆ, ಕೀಡಿ ಇವುಗಳ ಬಣ್ಣವು ಒಣ ಹುಲ್ಲಿನ ಬಣ್ಣವಾಗಿರುತ್ತದೆ. ತೋಳ, ಹುಲಿ ಮೊದಲಾದ ಹಿಂಸ್ರ ಪಕುಗಳ ತೀಕ್ಷ್ಣ ದೃಷ್ಟಿಯನ್ನು ತಪ್ಪಿಸಿ ನಿರುಪದ್ರವಿಗಳಾದ ಮೊಲಗಳನ್ನು ಕಾಪಾಡುವದಕ್ಕಾಗಿಯೇ ಪ್ರಕೃತಿಯು ಅವುಗಳ ದೇಹವನ್ನು ಸುತ್ತ ಲಿನ ಪರಿಸ್ಥಿತಿಯಂತೆ ಒಣಹುಲ್ಲಿನ ಬಣ್ಣವುಳ್ಳದ್ದನ್ನು ಮಾಡಿರುತ್ತದೆ. ಬಿಮ್ಮೆ ಒಣ ಹುಲ್ಲಿನ ಪ್ರದೇಶದಲ್ಲಿ ಅಡಗಿತೆಂದರೆ ಆ ಮೊಲವು ಮನು ಷ್ಯನಿಗಾಗಲಿ, ಬೇಟೆಯ ಮೃಗಕ್ಕಾಗಲಿ ಕಾಣುವದೇ ಇಲ್ಲ. ಅಡವಿ ಗುಬ್ಬಿಗಳು ಹೊಲದಲ್ಲಿ ಬಿದ್ದ ಸಣ್ಣ ಸಣ್ಣ ಕಲ್ಲುಗಳಂತೆ ತೋರುವವು. ಸವಿಾಪದಲ್ಲಿ ಹೋದರೆ ಬಿಮ್ಮೆಲಿ ಹಾರಿ ಹೋಗಲು, ನಾವು ಜೆಚ್ಚಿ ಬೀಳು ವೆವು. ದೂರಿಂದ ನಮ್ಮ ಕಣ್ಣಿಗೆ ಅವು ಕಾಣುವದೇ ಇಲ್ಲ. ಜೀವಜಂ ತುಗಳಲ್ಲಿರುವ ವರ್ಣವೈಚಿತ್ರ್ಯವನ್ನು ಪ್ರಕೃತಿಯು ಉಂಟು ಮಾಡಿತೆಂದು ಹೇಳುವದಕ್ಕಿಂತ ವರ್ಣವೈಚಿತ್ರ್ಯವು ಜೀವನಸಂಗ್ರಾಮದಲ್ಲಿರುವ ಜೀವ ಜಂತುಗಳು ಬದುಕಿಕೊಂಡಿರುವದಕ್ಕೆ ಒಂದು ಸಹಾಯವಾಗಿರುತ್ತ ದೆಂದು ಹೇಳಬಹುದು. ಅಂದರೆ, ವರ್ಣವೈಚಿತ್ರ್ಯವು ಮೊದಲು. ಮುಂದೆ, ಆ ಬಣ್ಣಗಳ ಸಹಾಯದಿಂದ ಕೆಲವು ಕತೆಯಲ್ಲಿ ಆ ಪ್ರಾಣಿಗಳ ಜೀವರಕ್ಷಣೆಯಾಗಹತ್ತಿತು. ಇನ್ನು ಶತ್ರುಗಳ ಕೈಯಿಂದ ತಪ್ಪಿಸಿಕೊ ಳ್ಳುವದಕ್ಕಾಗಿ ಕೆಲವು ಪ್ರಾಣಿಗಳಿಗೆ ಅವುಗಳ ಬಣ್ಣವು ಉಪಯುಕ್ತವಾ ಗುತ್ತದೆ, ಎಂಬ ಸಂಗತಿಯನ್ನು ಒಪ್ಪ ಬೇಕಾಗುವದು. ಆದರೆ, ಇಷ್ಟ ರಿಂದ ಬಣ್ಣವುಳ್ಳ ಎಲ್ಲ ಪ್ರಾಣಿಗಳ ಮೈಬಣ್ಣವು ಅವುಗಳ ಆತ್ಮ ರಕ್ಷಣೆಗಾಗಿಯೇ ಇರುತ್ತದೆಂದು ಹೇಳಲಾಗುವದಿಲ್ಲ. ಗಿಳಿ, ಕೋಗಿಲೆ, ನವಿಲು, ಹಂಗ, ಕರಿಗುಬ್ಬಿ ಮೊದಲಾದ ಹಕ್ಕಿಗಳ ಗರಿಗಳ ಬಣ್ಣವು ಅವುಗಳಿಗೆ ವೈರಿಯಾಗಿರುವದು. ಪ್ರಕೃತಿಯಲ್ಲಿ ಕೆಲವು ಪ್ರಾಣಿಗಳು ಕ್ಷಣ ಕ್ಷಣಕ್ಕೆ ತಮ್ಮ ಬಣ್ಣವನ್ನು ಬದಲಿಸುತ್ತಿರುತ್ತವೆ. ಇದಕ್ಕೆ ವರ್ಣವಿಪರ್ಯಾಸವೆನ್ನಬಹುದು. ಬಹುರೂಪಿಗಳಾದ ಸರಟುಗಳೂ (ಪಿತಿಕಾಟಗಳು) ಕೆಲವು ಜಾತಿಯ ಕಪ್ಪೆಗಳೂ ಈ ಪ್ರಕಾರ ಬಣ್ಣ ವನ್ನು ಬದಲಿಸುವ ಪ್ರಾಣಿಗಳು ಈ ವಿಷಯದಲಿ ಸಾಪೇಕ್ಷವಾದ ವಿಚಾರ

ವನ್ನು ಮಾಡಿರುವದೇನೆಂದರೆ, ಪ್ರಾಣಿಗಳ ಚರ್ಮದಲ್ಲಿ ಬಂದು ಪ್ರಕಾರದ ವರ್ಣಕೋಶಗಳಿರುತ್ತವೆ. ಆ ಕೋಶಗಳಲ್ಲಿ ಯಾವ ಬಣ್ಣವು ಸಂಗ್ರಹವಾಗಿ ಇರುವದೋ ಆ ಬಣ್ಣವೇ ಚರ್ಮಕ್ಕೆ ಬರುವದು. ನಮ್ಮ ಮೈಬೊಗಲಿನ ವರ್ಣಕೋಶಗಳ ಬಣ್ಣವು ಸ್ವಲ್ಪ ಕಪ್ಪಿನ ಮೇಲೆ ಇರುವದು. ಅದರಿಂದ ನಮ್ಮ ಬಣ್ಣವು ಕಪ್ಪು. ಶೀತಕಟಿಬಂಧದ ಜನರ ವರ್ಣಕೋಶಗಳ ಬಣ್ಣವು ಬಿಳುಪು. ಅದರಿಂದ ಅವರ ಮೈಬಣ್ಣವು ಬಿಳಿದು. ಆದರೆ, ಬಹುರೂಪಿಗಳಾದ ಸರಟುಗಳು ತಮ್ಮ ಬಣ್ಣವನ್ನು ಬದಲಿಸುವ ವಿಷಯದಲ್ಲಿ ಪ್ರಾಚೀನ ಶಾಸ್ತ್ರಜ್ಞರು ಈ ಪ್ರಕಾರ ಹೇಳುತ್ತಿದ್ದರು. ಈ ಪ್ರಾಣಿಯು ಯಾವದೊಂದು ಬಣ್ಣವುಳ್ಳ ಪದಾರ್ಥದ ಹತ್ತರಕ್ಕೆ ಬರಲು ನಾಲ್ಕು ಕಡೆಯ ಬಣ್ಣವು ಅದರ ಮೈಯಲ್ಲಿ ಪ್ರತಿಬಿಂಬಿತವಾಗುತ್ತದೆ. ಆದರಿಂದ ಅದರ ವರ್ಣಕೋಶಗಳ ಬಣ್ಣವು ಬದಲಾಗಿ ಸುತ್ತಲಿನ ಪದಾರ್ಥಗಳ ಬಣ್ಣದಂತೆ ಅದರ ಬಣ್ಣವಾಗುತ್ತದೆ. ಆದರೆ ಈಗಿನ ಶಾಸ್ತ್ರಜ್ಞರು ಈ ಮಾತನ್ನು ಒಪ್ಪುವದಿಲ್ಲ. ಇವರು ಹೇಳುವದೇನೆಂದರೆ, ಬಹುರೂಪಿಯಾದ ಸರಟವು ತನ್ನ ಕಣ್ಣುಗಳಿಂದ ಯಾವ ಬಣ್ಣವನ್ನು ನೋಡುವದೋ ಆ ಬಣ್ಣದಿಂದ ಅದರ ಮೆದುಳಿನ ಒಂದು ಭಾಗಕ್ಕೆ ಉತ್ತೇಜನವು ದೊರೆಯುತ್ತದೆ. ಬಳಿಕ ಈ ಉತ್ತೇಜನವು ನ್ಯಾಯುಗಳಿಂದ ಕ್ರಮವಾಗಿ ವರ್ಣಕೋಶಗಳ ವರೆಗೆ ಬರಲು, ಅವುಗಳ ಬಣ್ಣವು ಬದಲಾಗುತ್ತದೆ. ಈ ಸಿದ್ಧಾಂತವು ನಿಜವಾನದ್ದೆಂಬದನ್ನು ಡಾ. ವೇರ ಎಂಬ ಪ್ರಸಿದ್ಧ ಶಾಸ್ತ್ರಜ್ಞರು ಹಲವು ಜಾತಿಯ ಬಹುರೂಪಿ ಸರಟುಗಳ ದೇಹವನ್ನು ಕೊಯ್ದು ಮನಗಂಡಿರುತ್ತಾರೆ. ಇವರು ವಿಷ ಪ್ರಯೋಗಮಾಡಿ, ಕೆಲವು ಸರಟುಗಳ ಮೆದುಳನ್ನು ನಿಸ್ಸಾರವಾಗಿ ಮಾಡಿದರು. ಇದರಿಂದ ಆ ಸರಟುಗಳಲ್ಲಿ ಬಣ್ಣ ಬದಲಿಸುವ ಶಕ್ತಿಯು ಇಲ್ಲದಂತಾಯಿತು. ಇದಲ್ಲದೆ, ಯಾವ ಸರಟುಗಳ ದೃಷ್ಟಿಶಕ್ತಿಯು ಕಡಿಮೆಯಾಗಿರುವದೋ ಅವು ಸುಲಭವಾಗಿ ತಮ್ಮ ಬಣ್ಣವನ್ನು ಬದಲಿಸಲಾರವೆಂಬದನ್ನೂ ಅವರು ಕಂಡು ಹಿಡಿದಿರುವರು. ಆದ್ದರಿಂದ ನಾಲ್ಕೂ ಕಡೆಯ ಬಣ್ಣಗಳ ಕಿರಣಗಳು ಕಣ್ಣಿಗೆ ತಗಲಲು, ಅದರಿಂದ ಮೆದುಳಿನ ಒಂದು ವಿಶಿಷ್ಟಸ್ಥಾನದಲ್ಲಿ ಉತ್ತೇಜನ ಉಂಟಾಗಿ ಅದೇ ಎಲ್ಲ ಶರೀರದಲ್ಲಿ ಪಸರಿಸಲು, ಬಹುರೂಪಿಗಳ ಶರೀರದ ಬಣ್ಣವು ಬದಲಾಗುತ್ತದೆಂಬ ಸಿದ್ಧಾಂತವನ್ನು ಒಪ್ಪಬೇಕಾಗಿರುವದು.

ಹಲವು ಪ್ರಯೋಗಗಳಿಂದಲೂ, ಶೋಧಗಳಿಂದಲೂ ಈ ಸಿದ್ಧಾಂತವು ಹೊರಟಿದ್ದರೂ ಕೂಡ, ಇದು ಕೆಲವು ಪ್ರಾಣಿಗಳ ವಿಷಯದಲ್ಲಿ ಮಾತ್ರ ಹತ್ತುವದು. ಪತಂಗ ಅಥವಾ ಪಾತರಗಿತ್ತಿಯ ಜಾತಿಯ ಪ್ರಾಣಿಗಳು ಮೊದಲು ಕೀಡಿಗಳಿದ್ದು ರೆಕ್ಕೆ ಬರುವದಕ್ಕೆ ಮುಂಚೆ ಕೆಲವು ದಿವಸ ತಾವು ರಚಿಸಿಕೊಂಡ ಒಂದು ಪ್ರಕಾರದ ಕೋಶದಲ್ಲಿ ಸಮಾಧಿ-ಅವಸ್ಥೆಯಲ್ಲಿ ಇರುತ್ತವೆ. ಈ ಅವಸ್ಥೆಯಲ್ಲಿ ಅವುಗಳ ದೇಹವು ಬಳಗೇ ವಿಕಾರವನ್ನು ಹೊಂದುತ್ತಿರಲು ಕೊನೆಗೆ ಅವು ಪಾತರಗಿತ್ತಿಯಾಗಿ ಹೊರಬೀಳುವವು. ಈ ಸಮಾಧಿ-ಅವಸ್ಥೆಯಲ್ಲಿಯೂ ಅವುಗಳ ಬಣ್ಣವು ಬದಲಿಸುತ್ತಿರುವದೆಂಬದನ್ನು ಪರೀಕ್ಷಿಸಿ ಕಂಡು ಹಿಡಿದಿರುವರು. ಈ ಅವಸ್ಥೆಯಲ್ಲಿ ಆ ಪಾತರಗಿತ್ತಿಗಳ ದೃಷ್ಟಿಶಕ್ತಿಯು ಇರುವದಿಲ್ಲವೆಂಬದನ್ನು ಹೇಳಬೇಕಾಗಿಲ್ಲ. ಅಂದಬಳಿಕ, ಅವು ಹೊರಗಿನ ಬಣ್ಣದಂತೆ ತಮ್ಮ ಬಣ್ಣವನ್ನು ಬದಲಿಸಿಕೊಳ್ಳುವ ವಿಷಯದಲ್ಲಿ ಮೇಲಿನ ಸಿದ್ಧಾಂತವು ಸರಿ ಬೀಳುವದಿಲ್ಲ.

ಇನ್ನು ಜೀವಜಂತುಗಳು ಸ್ಥಳದ ಪರಿಸ್ಥಿತಿಯಂತೆ ತಮ್ಮ ಬಣ್ಣವನ್ನು ಬದಲಿಸುತ್ತವೆಂದು ತಿಳಿದರೆ, ಧ್ರುವ ಪ್ರದೇಶಗಳಲ್ಲಿರುವ ಜೀವಜಂತುಗಳ ಬಣ್ಣವು ಬಹುತರ ಬಿಳುಪೇ ಇರುತ್ತದೆ. ಹಾಗಾದರೆ ಅವು ಸುತ್ತಲಿನ ಹಿಮದೊಡನೆ ತಮ್ಮ ಬಣ್ಣವನ್ನು ಒಂದೇ ಮಾಡಿಕೊಳ್ಳುವ ಉದ್ದೇಶದಿಂದ ಬಿಳಿಯ ಬಣ್ಣದವಾದವೊ?

ಈ ವಿಷಯದಲ್ಲಿ ಶಾಸ್ತ್ರಜ್ಞರು ಬೇರೆ ವಿಧವಾಗಿ ಹೇಳುತ್ತಾರೆ. ಏನಂದರೆ, ಸೂರ್ಯಪ್ರಕಾಶವೇ ಪ್ರಾಣಿವನಸ್ಪತಿಗಳ ಶರೀರದಲ್ಲಿ ಬಣ್ಣವನ್ನು ಉಂಟು ಮಾಡುತ್ತದೆ. ಕತ್ತಲೆಯ ಕೋಣೆಯಲ್ಲಿ ಒಂದು ಗಿಡವನ್ನು ಇಡಿರಿ. ಕೆಲವು ದಿವಸಗಳಲ್ಲಿ ಅದರ ಎಲೆಗಳ ಬಣ್ಣವು ಬೆಳುಪಾಗುವದು. ಇದರಿಂದ ಸೂರ್ಯಪ್ರಕಾಶವೇ ಬಣ್ಣಕ್ಕೆ ಕಾರಣವೆಂದು ಸಿದ್ಧವಾಗುತ್ತದೆ. ಈ ತತ್ವವನ್ನು ಅವಲಂಬಿಸಿ ಪ್ರಾಣಿಶಾಸ್ತ್ರಜ್ಞರು ಧ್ರುವಪ್ರದೇಶದ ಆಕಾಶವು ಯಾವಾಗಲು ಮೋಡಗಳಿಂದ ಇಲ್ಲವೆ ಹಿಮದಿಂದ ತುಂಬಿಕೊಂಡಿರುವದರಿಂದ ಅಲ್ಲಿ ಸೂರ್ಯಪ್ರಕಾಶವಿರುವದಿಲ್ಲ. ಆದ್ದರಿಂದ ಅಲ್ಲಿಯ ಜೀವಜಂತುಗಳ ಬಣ್ಣವು ಬೆಳುಪಾಗುತ್ತದೆ, ಎಂದು ಹೇಳುತ್ತಾರೆ. ಆದರೆ, ಈ ತತ್ವವನ್ನು ಕೂಡ ಎಲ್ಲಕಡೆಯಲ್ಲಿ ಅನ್ವಯಿಸಲಾಗುವದಿಲ್ಲ. ಆಳವಾದ ನೀರಿನಲ್ಲಿ ಸೂರ್ಯಪ್ರಕಾಶವು ಪ್ರವೇಶಿಸುವದಿಲ್ಲ. ಆದರೆ ಅಲ್ಲಿ ಇ

ರುವ ಮೀನು ಮೊದಲಾದ ಪ್ರಾಣಿಗಳು ವಿಚಿತ್ರವಾದ ಉಜ್ವಲ ವರ್ಣದಿಂದ ಶೋಭಿಸುತ್ತಿರುತ್ತವೆ. ಪ್ರಾಣಿಗಳ ರಕ್ತವು ಕೆಂಪು ಬಣ್ಣದ್ದು ಇರುವದು. ಆದರೆ ಅದು ಎಂದೂ ಸೂರ್ಯಪ್ರಕಾಶವನ್ನು ನೋಡಿರುವದಿಲ್ಲ. ನಿರ್ಜೀವ ವಸ್ತುಗಳಲ್ಲಿ ಖನಿಜಗಳನ್ನು (ಚಿನ್ನ, ಬೆಳ್ಳಿ, ಮಾಣಿಕ, ಪಚ್ಚ ಮೊದಲಾದವನ್ನು) ನೋಡಿರಿ. ಅವು ಭೂಮಿಯ ಗರ್ಭದಲ್ಲಿ ಎಷ್ಟೋ ದೂರದಲ್ಲಿದ್ದರೂ ವಿಚಿತ್ರವಾದ ಬಣ್ಣವನ್ನು ಹೊಂದುವವು. ಆಳವಾದ ಭೂಸ್ತರಗಳಲ್ಲಿ ಸೂರ್ಯಪ್ರಕಾಶವು ಪ್ರವೇಶಿಸುವದಿಲ್ಲ. ಕೆಲವು ಧಾನ್ಯಗಳ ಬೀಜಗಳು ಅಜನ್ಮ ಕಾಯಿಗಳ ಕೊಗಟೆಯ ಒಳಭಾಗದಲ್ಲಿ ಇದ್ದರೂ ವಿಚಿತ್ರವಾದ ಬಣ್ಣವನ್ನು ಹೊಂದುತ್ತವೆ.

ಆದರೆ ಇಂಥ ಸ್ಥಳದಲ್ಲಿ ಸೂರ್ಯಪ್ರಕಾಶವು ಬಣ್ಣವನ್ನು ಉಂಟು ಮಾಡುವದೆಂಬ ನಿಯಮವು ಸರಿಹೋಗದಿದ್ದರೂ ಆಯಾ ವಸ್ತುಗಳು ಸೂರ್ಯಪ್ರಕಾಶದಲ್ಲಿ ಬಂದಾಗ ಅವುಗಳಿಗೆ ಆಯಾ ಬಣ್ಣಗಳು ಬರುತ್ತವೆಂದು ಹೇಳುವದು ಸಯುಕ್ತಿಕವಾಗಿರುತ್ತದೆ. ಭೂಸ್ತರಗಳಲ್ಲಿರುವ ಮಾಣಿಕ, ಪಚ್ಚ ಮೊದಲಾದ ವಸ್ತುಗಳೆಲ್ಲ ಸೂರ್ಯಪ್ರಕಾಶದಲ್ಲಿ ಬಂದಾಗಲ್ಲವೆ, ನಮಗೆ ಅವು ಇಂಥ ಬಣ್ಣದವೆಂದು ಕಂಡು ಬರುತ್ತವ! ಇದಾದರೂ ವರ್ಣೋತ್ಪತ್ತಿ ವಿಷಯಕವಾಗಿ ಹೇಳಿದ ಮಾತೇ ಹೊರತು ಈ ವರ್ಣವೈಚಿತ್ರ್ಯದ ಉದ್ದೇಶದ ವಿಷಯವಾಗಿ ಹೇಳಿದ ಮಾತಲ್ಲ. ಪ್ರಾಣಿವರ್ಗದಲ್ಲಿ ಕೆಲವುಗಳ ವರ್ಣವೈಚಿತ್ರ್ಯದ ವಿಷಯವಾಗಿ ಶತ್ರುಗಳ ಕೈಯಿಂದ ತಪ್ಪಿಸಿಕೊಳ್ಳುವ ಒಂದು ಉಪಾಯವಿರುತ್ತದೆಯೆಂದು ಹೇಳಿದ ಸಂಗತಿಯೊಂದು ಒಪ್ಪಬೇಕಾದದ್ದು. ಇದರಂತೆ ವನಸ್ಪತಿಗಳಲ್ಲಿ ಕೆಲವು ಪುಷ್ಪಗಳ ವರ್ಣವೈಚಿತ್ರ್ಯದ ವಿಷಯವಾಗಿ ಹೇಳಿದ್ದು ಒಪ್ಪಬೇಕಾದದ್ದೇ. ಆದರೆ ಇದರ ಹೊರತು ಎಲ್ಲ ಕಡೆಗಳಲ್ಲಿರುವ ಸಮಗ್ರ ವರ್ಣವೈಚಿತ್ರ್ಯವು ಇನ್ನುವರೆಗೆ ರಹಸ್ಯವೆಂಬ ಪರದೆಯ ಒಳಗೇ ಇರುವದು. ಇನ್ನುವರೆಗೆ ಶಾಸ್ತ್ರಜ್ಞರಿಗೆ ಶೋಧವಾಗದೆ ಉಳಿದಿರುವ ಹಲವು ವಿಷಯಗಳಲ್ಲಿ ವರ್ಣವೈಚಿತ್ರ್ಯವೂ ಒಂದಾಗಿರುವದು.

ಎಮ್. ಪಿ. ಪೂಜಾರ.

ಕೈಕೆಲಸವೂ ಅಂಕಗಣಿತದಲ್ಲಿ ಅವರ ಉಪಯೋಗವೂ.

ಮಗ್ಗಿಯ ಪಾಠ.

—(೦)—

"ಯಾವದೊಂದು ಹಸ್ತವ್ಯವಸಾಯವೊಡನೆ ಶಿಕ್ಷಣವು ಸಾಗತಕ್ಕದ್ದು" (Learn by Doing) ಎಂದು ಶಿಕ್ಷಣದ ಬಂದು ತತ್ವವಿರುತ್ತದಷ್ಟೆ. ಈ ತತ್ವವು ಮುಖ್ಯವಾಗಿ ಶಾಸ್ತ್ರೀಯ ಪಾಠಗಳಲ್ಲಿ ಪ್ರಯೋಗಗಳಿಂದಲೂ, ಭೂಗೋಲದಲ್ಲಿ ನಕಾಶಗಳಿಂದಲೂ, ಸಂಪೂರ್ಣವಾಗಿ ಉಪಯೋಗವಾಗುವದು. ಅಂಕಗಣಿತದಲ್ಲಿಯಾದರೂ, ಈ ತತ್ವದ ಪ್ರಕಾರ ಮಣಿಗಳನ್ನು ಕೋರಿಸುವದು, ಗಂಟುಗಳನ್ನು ಕಟ್ಟುವದು, ಕಾಗದಗಳನ್ನು ಮಡಿಚುವದು, ಕತ್ತರಿಸುವದು ಈ ಮೊದಲಾದ ಕೆಲಸಗಳನ್ನು ಮಾಡುತ್ತ ಅಂಕಗಣಿತದ ಎಷ್ಟೋ ತತ್ವಗಳು ಕಲಿಸಲ್ಪಡುತ್ತವೆ. ಅದರಂದ ವಿಷಯಕ್ಕೆ ಮೂರ್ತಸ್ವರೂಪವುಂಟಾಗಿ ಹೇಳತಕ್ಕ ಸಂಗತಿಯು ಹುಡುಗರ ಮನಸಿನಲ್ಲಿ ಚನ್ನಾಗಿ ಜಿಂಬಿಸುವದು; ಮತ್ತು ಅದು ಎಂದೂ ಮರೆಯದಂತೆ ದೃಢವಾಗಿ ಉಳಿಯುವದು.

ಅಂಕಗಣಿತದಲ್ಲಿ ಕಾಗದದ ಪಟ್ಟಿಗಳು ಬಹಳ ಉಪಯುಕ್ತವಾದ ಉಪಕರಣಗಳಾಗಿರುತ್ತವೆ. ಬಹುಶಃ ಅಂಕಗಣಿತದ ಪ್ರತಿಯೊಂದು ಪಾಠವನ್ನು ಕಲಿಸುವಾಗ ಇಂಥ ಪಟ್ಟಿಗಳ ಉಪಯೋಗ ಆಗುವದು. ಚಿಕ್ಕಬಾಲಕರ ವರ್ಗಕ್ಕೆ ಮಗ್ಗಿಗಳನ್ನು ಕಲಿಸುವಾಗ ಇವುಗಳ ಉಪಯೋಗವನ್ನು ಹ್ಯಾಗೆ ಮಾಡಬೇಕೆಂಬ ಬಗ್ಗೆ ನಾಲ್ಕು ಮಾತುಗಳನ್ನು ಹೇಳುವಾ.

ಮಗ್ಗಿಯ ಪಾಠವನ್ನು ಶಿಕ್ಷಣದ ಹೊಸ ಪದ್ಧತಿಗೆ ಅನುಸರಿಸಿ ಕಲಿಸುವಲ್ಲಿ ಮಗ್ಗಿಯನ್ನು ರಚಿಸಿಕೊಳ್ಳುವದು, ಬರೆದು ಕೊಳ್ಳುವದು, ಓದುವದು, ಆ ಮಗ್ಗಿಯ ಮೇಲಿನ ಬಾಯಿಲೆಕ್ಕಗಳನ್ನು ಮಾಡುವದು ಈ ಮೇರೆಗೆ ನಾಲ್ಕು ಮೆಟ್ಟಿಲುಗಳು ಮಾಡಿಕೊಳ್ಳಲ್ಪಡುವವು.

ಮೊದಲನೇ ಮೆಟ್ಟಿನಲ್ಲಿ ಚಕಚ್ಕಾರು ಮನೆಗಳುಳ್ಳ ರಟ್ಟಿನ ಮೇಲೆ ಮಣಿಗಳನ್ನಾಗಲಿ ಬೀಜಗಳನ್ನಾಗಲಿ ಕಡ್ಡಿಗಳನ್ನಾಗಲಿ ೧ನೆ ಸಾರೆ ಎರಡು ಸಾರೆ, ಮೂರು ಸಾರೆ ಇತ್ಯಾದಿ ಇಡಿಸಿ, ಎಷ್ಟಾಗುವವೆಂಬದನ್ನು ಹುಡುಗರ ಅನುಭವಕ್ಕೆ ತಂದು ಕೊಡುವ ವಾಡಿಕೆಯುಂಟು. ಆರು ಸಾರೆ, ಏಳು

ಸಾರೆ, ಎಂಟು ಸಾರೆ ಚಿಟ್ಟ ಮಣಿಗಳನ್ನೆಲ್ಲ ಕೂಡಿಸಿ ಕೊಳ್ಳದೆ ಎಷ್ಟಾಯಿ ತೆಂಬದನ್ನು ಚಟ್ಟನೆ ಹೇಳಲಿಕ್ಕಾಗುವದಿಲ್ಲ. ಈ ಅಡಚಣೆಯು ಕೆಳಗೆ ವಿವರಿಸಿದ ಪದ್ಧತಿಯಿಂದ ದೂರಾಗುವದು.

ಪ್ರತಿಯೊಬ್ಬ ಹುಡುಗನಿಗೆ ೧೨ ಇಂಚು ಚಚ್ಚೌಕಾಸ ಬಿಂದು ರಟ್ಟನ್ನು ಕೊಡುವದು. ಅದರ ಸುತ್ತುಮುತ್ತು ೧ ಇಂಚು ಸ್ಥಳಬಿಟ್ಟು, ಮಧ್ಯದಲ್ಲಿ ಬಿಂದು ಇಂಚಿನ ಚಚ್ಚೌಕು ಮನೆಗಳಾಗುವಂತೆ ರೂಲು ಹಾಕಿರ ಬೇಕು. ಅಂದರೆ, ಆ ರಟ್ಟಿನ ಮಧ್ಯದಲ್ಲಿ ೧೦×೧೦ = ೧೦೦ ಚಚ್ಚೌಕು ಮನೆಗಳು ಇರತಕ್ಕದ್ದು. ಇಷ್ಟೇ ಅಳತೆಯ ಮತ್ತು ಹೀಗೇ ರೂಲು ಹಾಕಿದ ಬಿಂಬೊಂದು ಬಿಳೀ ಕಾಗದವನ್ನು ಬಬ್ಬೊಬ್ಬ ಹುಡುಗನಿಗೆ ಕೊಡುವದು; ಈ ಕಾಗದಗಳ ಬಿಂದು ಮಗ್ಗಲು ಕೆಂಪು ಅಥವಾ ಬೇರೆ ಯಾವದಾದರೂ ಬಣ್ಣವನ್ನು ಹುಡುಗರಿಂದ ಕೊಡಿಸುವದು; ಇಲ್ಲವೆ ಮೊದಲೇ ಸಿದ್ಧಮಾಡಿದ ಕಾಗದಗಳನ್ನು ಕೊಡುವದು.

ತರುವಾಯ ಹುಡುಗರಿಗೆ ಆ ಬಿಳೀ ಕಾಗದವನ್ನು ತಕ್ಕೊಂಡು ಯಾವ ಮಗ್ಗಿಯನ್ನು ಕಲಿಸಬೇಕಾಗಿರುವದೋ ಅಷ್ಟನ್ನು ಚಚ್ಚೌಕು ಮನೆಗಳನ್ನು ಎಣಿಸಿ ಪಟ್ಟಿಗಳನ್ನು ಕತ್ತರಿಸಿಕೊಳ್ಳಲಿಕ್ಕೆ ಹೇಳುವದು. ಉದಾಹರಣಾರ್ಥವಾಗಿ, ೬ರ ಮಗ್ಗಿಯನ್ನು ಕಲಿಸಬೇಕಾಗಿದೆ ಎಂದು ತಿಳಿದರೆ, ೬ ಮನೆಗಳ ಬಿಂದೊಂದು ಪಟ್ಟಿಯಂತೆ ಹತ್ತು ಪಟ್ಟಿಗಳನ್ನು ಕತ್ತರಿಸಿ ಕೊಳ್ಳಲಿಕ್ಕೆ ಹೇಳುವದು. ಈ ಪಟ್ಟಿಗಳನ್ನು ಹಾಕಲಿಕ್ಕೂ ಉಳಿದ ಕಾಗದವನ್ನು ಇಡಲಿಕ್ಕೂ ಕತ್ತರಿಯನ್ನೂ ಪಿನ್ನು ಅಥವಾ ಟಾಚಣಿಗೆಗಳನ್ನೂ ಇಡಲಿಕ್ಕೂ ಬಬ್ಬೊಬ್ಬರಿಗೆ ಬಿಂದೊಂದು ಕಾಗದದ ಪೆಟ್ಟಿಗೆಯನ್ನು ಕೊಟ್ಟ ರಬೇಕು.

ಇನ್ನು ಬಿಂದೊಂದೇ ಪಟ್ಟಿಯನ್ನು ತೆಗೆದುಕೊಂಡು ರಟ್ಟಿನ ಮೇಲೆ ಹಚ್ಚುವದು; ಅಂಟಿನಿಂದ ಅಥವಾ ಸರಿಯಿಂದ ಹಚ್ಚಿದರೆ ರಟ್ಟು ಹೊಲ ಯಾಗಿ ಮತ್ತೊಮ್ಮೆ ಉಪಯೋಗಕ್ಕೆ ಬಾರದಂತಾಗುವದು. ಆದಕಾರಣ ಟಾಚಣಿಗೆಗಳನ್ನಾಗಲಿ, ಡ್ರಾಯಿಂಗ ಪಿನ್ನುಗಳನ್ನಾಗಲಿ, ಉಪಯೋಗಿಸು ವದು ನೆಟ್ಟಗೆ.

ಒಂದು ಪಟ್ಟಿಯನ್ನು ಒಂದು ಸಾರೆ ತೆಗೆದುಕೊಂಡು ರಟ್ಟಿಗೆ ಅಂಟಿಸಿದರೆ ಅದರೊಳಗಿನ ಆರು ಮನೆಗಳು ಮುಚ್ಚುವವು. ಒಂದು ಸಾರೆ ಬಿಳಿ ಬಣ್ಣವನ್ನೂ ಒಂದು ಸಾರೆ ಕೆಂಪು ಬಣ್ಣವನ್ನೂ ಮೇಲೆ ಮಾಡಿ ಪಟ್ಟಿಗಳನ್ನು ಹಚ್ಚಬೇಕು. ಅಂದರೆ, ಎಷ್ಟು ಸಾರೆ ತೆಗೆದುಕೊಂಡಂತಾಯಿತೆಂದು ಒಡೆದು ಕಾಣಿಸುವದು. ಎರಡನೇ ಪಟ್ಟಿಯನ್ನು ಹಚ್ಚಿದರೆ ರಟ್ಟಿನ ಮೇಲಿನ ಮೊದಲನೇ ಸಾಲಿನೊಳಗಿನ ಕಡೆಯ ನಾಲ್ಕು ಮನೆಗಳು ಮುಚ್ಚಿ ಎರಡು ಮನೆಗಳು ಹೆಚ್ಚಾದವು. ನಾಲ್ಕು ಮನೆಗಳನ್ನು ಮಾತ್ರ ಹಚ್ಚಿ ಹೆಚ್ಚಿನ ಭಾಗವನ್ನು, ಅಂದರೆ ಎರಡು ಇಂಚಿನ ತುಂಡನ್ನು ಕತ್ತರಿಸಿಕೊಂಡು, ಎರಡನೇ ಸಾಲಿನಲ್ಲಿ ಅದೇ ಬಣ್ಣ ಮೇಲೆ ಮಾಡಿ ಹಚ್ಚಬೇಕು. ಈಗ ಆರಾವರಂತೆ ತೆಗೆದುಕೊಂಡಂತಾಯಿತು. ಈ ಸರತಿಯನ್ನು ತೋರಿಸುವ ಅಂಕೆಯನ್ನು ಪ್ರತಿಯೊಂದು ಪಟ್ಟಿಯು ಮುಗಿಯುವ ಸ್ಥಳದಲ್ಲಿ ಬರೆಯಿಸಬೇಕು.

ಆರಾರು ಮನೆಗಳುಳ್ಳ ಪಟ್ಟಿಗಳನ್ನು ಎರಡುಸಾರೆ ತೆಗೆದುಕೊಂಡರೆ ಎಷ್ಟು ಆಯಿತು? ಈ ಪ್ರಶ್ನೆಯ ಉತ್ತರವನ್ನು ಕೊಡುವದು ಅವರಿಗೆ ತೀರ ಸುಲಭವಾಗಿರುತ್ತದೆ. ಯಾಕಂದರೆ, ಒಂದು ಹತ್ತರ ಸಾಲು ಪೂರ್ಣವಾಗಿ ತುಂಬಿ ಎರಡು ಬಿಡಿ ಮನೆಗಳು ಹೆಚ್ಚಾದದ್ದು ಅವರ ಕಣ್ಣ ಮುಂದೆ ಇರುವದು. ಅದರಿಂದ ಆಯಾಸವಿಲ್ಲದೆ ಒಂದು ಹತ್ತು, ಮೇಲೆ ಎರಡು, ಅಂದರೆ ಹನ್ನೆರಡು ಎಂದು ಹೇಳುವರು. ಮತ್ತು ಬರೆಯುವದಾದರೂ ಸುಲಭವಾಗುವದು.

ಇದೇ ರೀತಿಯಿಂದ ಇನ್ನೊಂದು ಪಟ್ಟಿಯನ್ನು ತೆಗೆದುಕೊಂಡು ಹಚ್ಚಿದರೆ ಆರು ಮೂರು ಸಾರೆ ತೆಗೆದುಕೊಂಡಂತಾಯಿತು. ಅದರಿಂದ ಹದಿನೆಂಟು ಮನೆಗಳು ತುಂಬುವವು. ರಟ್ಟಿನ ಮೇಲಿನ ಎರಡು ಹತ್ತರ ಸಾಲುಗಳು ಪೂರ್ಣವಾಗಲಿಕ್ಕೆ ಎರಡು ಮನೆಗಳು ಕಡಿಮೆ ಇದ್ದದ್ದು ಒಡೆದು ಕಾಣುವದು. ಇದೇ ಮೇರೆಗೆ ಆರರ ಮಗ್ಗಿಯನ್ನು

ಕಡೆತನಕ ಈಗದದ ಪಟ್ಟಿಗಳನ್ನು ಹಚ್ಚಿಸಿ ಸಿದ್ಧ ಮಾಡಿಸಿದರೆ, ಕೆಳಗೆ ಕೊಟ್ಟ ಆಕೃತಿಯಂತೆ ಆಗುವದು.



ಇಷ್ಟಾನರೆ ಮಗ್ಗಿಯ ರಚನೆಯ ಕಾರ್ಯವು ಮುಗಿದಂತಾಯಿತು. ಇನ್ನು ಮಗ್ಗಿಯನ್ನು ಬರಕೊಳ್ಳುವದು. ಪುನಃ ಮೇಲಿನಂತೆ ಆರರ ಪಟ್ಟಿಯನ್ನು ಐದು ಸಾರೆ ತೆಗೆದುಕೊಂಡರೆ ಎಷ್ಟು? ಎಂದು ಪ್ರಶ್ನಗಳನ್ನು ಮಾಡಿ ಹುಡುಗರಿಂದ ರಟ್ಟಿನ ಸಹಾಯದಿಂದ ಉತ್ತರ ಗಳನ್ನು ತೆಗೆದುಕೊಂಡು ಬರೆಯಿಸಿದರೆ ಬರಹದ ಕಾರ್ಯವು ಪೂರ್ಣ ವಾಗುವದು.

ಹುಡುಗರು ಎರಡು ಮೂರು ಮಗ್ಗಿಗಳನ್ನು ಪಾಠ ಅನ್ನಲಿಕ್ಕೆ ಕಲಿತ ಮೇಲೆ ಮುಂದಿನ ಮಗ್ಗಿಗಳನ್ನು ಪದ್ಧತಿಯ ಪ್ರಕಾರ ತಾವೇ ಸಿದ್ಧವರು.

ಇನ್ನು ಈ ಮಗ್ಗಿಯು ಮನದಟ್ಟಾಗಿ ಸ್ಮರಣದಲ್ಲಿ ಉಳಿಯು ವಂತೆ ಅನೇಕ ಪ್ರಕಾರದ ವ್ಯವಹಾರದ ಉದಾಹರಣಗಳನ್ನು ಕೇಳು ವದು ಕಡೆಯ ಮೆಟ್ಟಾಗಿದೆ. ಇಂಥ ಬಾಯಿಲೆಕ್ಕಗಳನ್ನು ಮಾಡು ವಾಗಲೂ ಪ್ರಾರಂಭದಲ್ಲಿ ಹುಡುಗರು ಈಗ ಸಿದ್ಧ ಮಾಡಿದ ರಟ್ಟನ್ನು ತಮ್ಮ ಮುಂದೆ ಇಟ್ಟುಕೊಂಡೇ ಉತ್ತರಗಳನ್ನು ಕೊಡುತ್ತಿರಬೇಕು. ಅದರಿಂದ ಅವರಿಗೆ ಶ್ರಮವು ಕಡಿಮೆಯಾಗಿ ಅಭ್ಯಾಸವು ನೆಟ್ಟಗಾ ಗುವದು.

೧ ನೇ ಪ್ರಕಾರದ ಉದಾ:— ೧ ದುಡ್ಡಿಗೆ ೬ ಬಾಳೇಹಣ್ಣುಗಳಾ ದರೆ ೪ ದುಡ್ಡಿಗೆ ಎಷ್ಟು?

ಇಲ್ಲಿ ೬ ಬಾಳೇ ಹಣ್ಣಿನ ಗುಂಪುಗಳನ್ನು ೪ ಸಾರೆ ತಕ್ಕೊಂಡರೆ ಎಷ್ಟಾಗುವನೆಂಬದನ್ನು ರಟ್ಟಿನ ಮೇಲೆ ನೋಡಿದರೆ, ಹತ್ತರ ಸಾಲ್ಕು ಸಾಲುಗಳು ತುಂಬಿ ಮೇಲೆ ಎಂಟು ಮನೆಗಳು ಇರುವವೆಂ ಬದು ಗೊತ್ತಾಗುವದು. ಅದರಿಂದ ಆರು ಬಾಳೇ ಹಣ್ಣಿನ ಗುಂಪು ಗಳನ್ನು ಎಂಟು ಸಾರೆ ತಕ್ಕೊಂಡರೆ ೪೮ ಹಣ್ಣುಗಳು ಬರುವವು ಎಂಬಂತಾಯಿತು.

೨ ನೇ ಪ್ರಕಾರದ ಉದಾ:—ದುಡ್ಡಿಗೆ ೬ ಹಣ್ಣುಗಳಂತೆ ೪೮ ಹಣ್ಣುಗಳು ಎಷ್ಟು ದುಡ್ಡು ಕೊಟ್ಟರೆ ಬರುವವು?

ಚಿಕ್ಕ ಮಕ್ಕಳಿಗೆ ಈ ಪ್ರಶ್ನವು ಮೇಲಿನ ಪ್ರಶ್ನಕ್ಕಿಂತ ಹೆಚ್ಚು ಕಠಿಣವಾಗುವದು. ಇದರ ಉತ್ತರವನ್ನು ಹೊರಡಿಸಿಕೊಳ್ಳುವದಕ್ಕೆ ಕೆಳಗೆ ಕೊಟ್ಟಂತೆ ಪ್ರಶ್ನಗಳನ್ನು ಮಾಡಬಹುದು:—

೪೮ ರಲ್ಲಿ ಎಷ್ಟು ಹತ್ತರ ಗಂಟುಗಳು, ಎಷ್ಟು ಬಿಡಿಕಾಳುಗಳು ಇರುವವು? ಈಗ ಸಿದ್ಧ ಮಾಡಿದ ರಟ್ಟಿನ ಮೇಲೆ ನಾಲ್ಕು ಹತ್ತರ ಸಾಲುಗಳು ತುಂಬಿ ಎರಡು ಬಿಡಿ ಮನೆಗಳು ಹೆಚ್ಚಾಗಲ್ಲಿ ಯಾವ ಅಂಕೆ ಇರುವದು? ಅಂದರೆ, ಆರು ಮನೆಗಳ ಪಟ್ಟಿಯನ್ನು ಎಷ್ಟು ಸಾರೆ ತಕ್ಕೊಂಡಂತಾಯಿತು? ಅಂದಮೇಲೆ, ಆರು ಹಣ್ಣಿನ ಏಳು ಗುಂಪು ಗಳು ಎಷ್ಟು ದುಡ್ಡು ಕೊಟ್ಟರೆ ಬರುವವು?

ಇದೇ ಪ್ರಕಾರ ಅನೇಕ ಉದಾಹರಣಗಳ ಉತ್ತರಗಳನ್ನು ಹೊರಡಿಸಿಕೊಳ್ಳುವದರಿಂದ ಹುಡುಗರು ರಟ್ಟಿನ ಸಹಾಯವಿಲ್ಲದೆ ಉತ್ತರ

ಗಳನ್ನು ಕೊಡಲಿಕ್ಕೆ ತಕ್ಕವರಾಗುವರು; ಮತ್ತು ಈ ರೀತಿಯಿಂದ ಕಲಿಸಿದ ಪಾಠವು ಬಹಳ ಮನನಮಟ್ಟಾಗುವದಿಷ್ಟೇ ಅಲ್ಲ. ಮುಂದೆ ಗುಣಾಕಾರ ಭಾಗಾಕಾರಗಳನ್ನು ಪದ್ಧತಿಗೆ ಸರಿಯಾಗಿ ಕಲಸಲಿಕ್ಕೆ ಬಹಳ ಸಹಾಯವಾಗುವದು.

ತ. ನಾ. ಅವಿನಾಸಭಾವಿ.

ಪತ್ರವ್ಯವಹಾರವು.

ಕನ್ನಡ ಭಾಷೆಯೂ ಪ್ರಾಥಮಿಕ ಶಾಲೆಗಳೂ.

ಸಜ್ಜನ ನಮ್ಮ ಕನ್ನಡ ನುಡಿಯನ್ನು ವಿಚಾರಿಸಲು ಅದು ಬಿರಬಿರುತ್ತ ವಿಕೃತ ರೂಪವನ್ನು ಹೊಂದುತ್ತ ನಡೆದಿರುವದೆಂದು ಗೊತ್ತಾಗುವದು. ಇದಕ್ಕೆ ಅನ್ಯಭಾಷಾಸಂಪರ್ಕವೂ ಅಂತಸ್ಥ ಭಾಷಾದೋಷಗಳನ್ನು ಸುಧಾರಿಸುವ ವಿಷಯದಲ್ಲಿ ಕಂಡು ಬರುವ ಅಜಾಗ್ರತೆಯೂ ಕಾರಣಗಳೆಂದು ಹೇಳಬಹುದು. ಸ್ವಂತ ವಿಚಾರದಿಂದ ಬರೆದ ಲೇಖನಗಳು ಮಹತ್ವವುಳ್ಳವುಗಳೂ, ರಸಭರಿತವಾದವುಗಳೂ, ಭಾಷಾಸ್ಥಿತಿಯಿಂದ ಸುಧಾರಿಸಿದವುಗಳೂ, ಅಭಿಮಾನಸೂಚಕಗಳೂ ಇರುತ್ತವೆ. ಆದರೆ ನಮ್ಮ ಕನ್ನಡ ನುಡಿಯು ಮಹಾರಾಷ್ಟ್ರ ಮೊದಲಾದ ಅನ್ಯ ಭಾಷೆಗಳಿಂದ ಪರಿವರ್ತಿಸಲ್ಪಡುವ ಲೇಖನಗಳಲ್ಲಿಯು ಗೂಢಾರ್ಥವುಳ್ಳ ವಾಕ್ಯಗಳಿಂದಲೂ, ಭಾಷಾಪದ್ಧತಿಗೆ ವಿರುದ್ಧವಾದ ಪ್ರಯೋಗಗಳಿಂದಲೂ, ಎಷ್ಟು ರೂಪಾಂತರ ಹೊಂದುತ್ತ ನಡೆದಿರುತ್ತದೆಂಬದು ಕೈ ವಾ. ತುರಮರಿ, ಮತ್ತು ಕಟ್ಟಿ ಕೃತ ಗ್ರಂಥಗಳನ್ನು, ಈಗಿನ ಭಾಷಾಂತರ ಮಾಡಲ್ಪಟ್ಟ ಗ್ರಂಥಗಳನ್ನೂ ಹೋಲಿಸಿ ನೋಡಿದರೆ ಮನವರಿಕೆಯಾಗದಿರದು. ಗ್ರಂಥಕರ್ತರೆನ್ನಿಸಿಕೊಳ್ಳುವ ಉತ್ಕಟೇಚ್ಛೆಯುಳ್ಳ ವ್ಯವಸಾಯ ಬಂಧುಗಳು ಮಹಾರಾಷ್ಟ್ರ ಭಾಷೆಯೊಳಗಿನ ಕಾದಂಬರಿಗಳನ್ನೇ ಕನ್ನಡಕ್ಕೆ ಪರಿವರ್ತಿಸುವ ಕೆಲಸವನ್ನು ಭರದಿಂದ ನಡೆಯಿಸಿರುವದು. ಈ ತರಸ ಭಾಷಾಂತರವ ಕೆಲಸವು ಭಾಷಾಭಿವೃದ್ಧಿಗೆ ಕಾರಣವಾದರೂ ಅನ್ಯ ಗ್ರಂಥಗಳಲ್ಲಿಯ ಭಾವ-ರಸಗಳನ್ನು ಕನ್ನಡದೊಳಗೆ ತರುವ ಭರದಲ್ಲಿ ಅನಂ

ಬದ್ಧವಾದ ವಾಕ್ಯಗಳೂ ಹೊಸ ಹೊಸ ತರದ ಪ್ರಯೋಗಗಳೂ ಉಂಟಾಗುತ್ತ ನಡೆದಿರುವವು. ಇದಲ್ಲದೆ ತಾವು ಪಂಡಿತರೆನ್ನಿಸಿಕೊಳ್ಳುವ ಅಪೇಕ್ಷೆಯಿಂದಲೋ ಏನೋ ಹಲಕೆಲವು ಹಳೆಗನ್ನಡದ ಪ್ರಯೋಗಗಳನ್ನು ನಡು ನಡುವೆ ಸೇರಿಸುವರು. ಇದರಿಂದ ಅನ್ಯ ಭಾಷಾಗ್ರಂಥಗಳನ್ನು ಭಾಷಾಂತರಿಸಲೇ ಬಾರದೆಂದು ತಿಳಿಯಲಾಗದು. ಕೈಲಾದಮಟ್ಟಿಗೆ ಭಾಷಾ ಶೈಲಿಯನ್ನು ಅಂದಗೆಡಿಸದೆ ರೂಪಾಂತರಿಸಿದರೆ ಈ ದೋಷವು ದೂರಾಗ ಬಹುದು. ಈ ಪ್ರಕಾರ ಅನೇಕ ತರಹಗಳಿಂದ ನವ್ಯಾ ಕನ್ನಡನುಡಿಯು ಹಿಂದು, ಮುಸಲಮಾನ, ಗುಜರಾಥಿ, ಆಂಗ್ಲ ಮೊದಲಾದ ಹಲವು ಬಗೆಯ ಉಡುಪುಗಳನ್ನು ಒಮ್ಮೆಲೇ ಧರಿಸಿ ನಟಿಸುವ ಪ್ರಮದೆಯಂತೆ ವಿಕಾರವಿಲಸಿತವಾದರೂ ವಾಚಕರಲ್ಲಿ ಒಂದು ಬಗೆಯ ಅಸಹ್ಯತೆಯನ್ನು ಉಂಟು ಮಾಡುತ್ತ ನಡೆದಿರುವದೆಂಬುದರಲ್ಲಿ ಸಂಶಯವಿಲ್ಲ. ಈ ಪ್ರಕಾರ ಭಾಷಾ ಸ್ಥಿತಿಯನ್ನು ಅಂದಗೆಡಿಸಿ ಮಹಾರಾಷ್ಟ್ರ, ಗುಜರಾಥಿ ಮೊದಲಾದವುಗಳಲ್ಲಿಯ ಕಾದಂಬರಿಗಳನ್ನು ಭಾಷಾಂತರಿಸುವ ಕೆಲಸದಲ್ಲಿ ಶ್ರಮ ಬಡುತ್ತಲಿರುವ ನನ್ನ ವ್ಯವಸಾಯ ಬಂಧುಗಳು, ಅಲ್ಪವಾದರೂ, ಸ್ವತಂತ್ರ ಲೇಖಗಳನ್ನು ಬರೆಯುವದರಲ್ಲಿಯೂ ಭಾಷಾಂತರ ಮಾಡುವದರಲ್ಲಿಯೂ ಕರ್ನಾಟಕ ಭಾಷಾಶೈಲಿಯನ್ನು ಮಾತ್ರ ಬಿಡಬಾರದು; ಮತ್ತು ಸಿಕ್ಕಹಾಗೆ ಹರಿಬೀಳುತ್ತಿರುವ ಕನ್ನಡ ನುಡಿಯ ಶೈಲಿಯನ್ನು ತಿದ್ದುವದರಲ್ಲಿ ಪ್ರಯತ್ನವನ್ನು ಇಡಬೇಕು.

ಇನ್ನು ಭಾಷೆಯನ್ನು ತಿದ್ದುವದೆಂದರೆ ಭಾಷಾಪ್ರವಾಹವನ್ನೇ ಬದಲು ಮಾಡಬೇಕೆಂತಲ್ಲ. ಅದು ಆಗದ ಮಾತು. ಆದರೆ ಪ್ರಚಲಿತ ಭಾಷೆಗನುಸರಿಸಿ ಲಾಕ್ಷಣಿಕ ಗ್ರಂಥಗಳನ್ನು ತಿದ್ದುವದರಿಂದಾಗಲಿ ಕನ್ನಡದಲ್ಲಿ ಉಪಯೋಗಿಸಲ್ಪಡುವ ಅನ್ಯ ಭಾಷಾ ಪ್ರಯೋಗಗಳ ಸಂಬಂಧದ ಚರ್ಚೆಗಳಿಂದಾಗಲಿ ವ್ಯಾಕರಣ ವಿಷಯದ ಲೇಖಗಳನ್ನು ಬರೆಯುವದರಿಂದಾಗಲಿ ಕನ್ನಡದ ಶೈಲಿಯನ್ನು ಸುಧಾರಿಸಬಹುದು? ಕವಿ ಶಿರೋಮಣಿ ಸೋಮನಾಥನ "ಹಿಡಿಯೊಳ್ ತುಂಬಿರೆ ಪಂಕ ಮೇಲೆ ತೊಳೆಯಲ್ ತಾಂ ಶುದ್ಧಮೇನಪ್ಪುದೇ" ಎಂಬ ಉಕ್ತಿಯಂತೆ ಶೈಲಿಯಲ್ಲಿರುವ ಅಂತರ್ದೋಷಗಳನ್ನು ಇಟ್ಟುಕೊಂಡು ಭಾಷೆಯನ್ನು ತಿದ್ದಲು ಯತ್ನಿಸಿ

ದರೆ ಅದು ಸುಧಾರಿಸುವದೆ? ಆದದರಿಂದ ಕನ್ನಡ ನುಡಿಯ ಕಟ್ಟಭಿಮಾನಿಗಳೆಂದು ನಟಿಸುವ ವ್ಯವಸಾಯಬಂಧುಗಳು ಯಾವದೊಂದು ಗ್ರಂಥವನ್ನು ಕನ್ನಡಕ್ಕೆ ಪರಿವರ್ತಿಸಿ "ಭಾಷಾಸೇವೆಯು ಪವಿತ್ರ ಕಾರ್ಯವನ್ನು ಮಾಡಿ ಧನ್ಯತೆಯನ್ನು ಹೊಂದಿದೆವು" ಎಂದು ಭಾವಿಸುವದು ಎಷ್ಟು ಮಾತ್ರವೂ ಸರಿಯಲ್ಲ. ಕನ್ನಡ ವಾಙ್ಮಯವು ಅತ್ಯಲ್ಪವಿರುವದರಿಂದ ನಿಜವಾದ ಭಾಷಾಸೇವೆಯ ಕೆಲಸವು ಉತ್ತಮೋತ್ತಮವಾದ ಗ್ರಂಥಗಳನ್ನು ಬರೆಯುವದಿರುವದು; ಬರೇ ಕಾದಂಬರಿಯಂಥ ಗ್ರಂಥಗಳನ್ನು ಪ್ರಕಟಿಸುವದಲ್ಲ. ಯಾಕಂದರೆ, ಇದರಿಂದ ಹಿಂದೆ ಹೇಳಿದಂತೆ ಭಾಷೆಯು ಅಂದಗೆಡುವದಲ್ಲದೆ, ನಮ್ಮ ಪ್ರಾಂತದ ಅಥವಾ ದೇಶದ ಪದ್ಧತಿಗನುಸರಿಸಿದ ನಡೆನುಡಿಗಳುಳ್ಳ ನೈತಿಕ ಹಾಗೂ ಸ್ವಂತ ವಿಚಾರದ ಕಾದಂಬರಿಗಳಿಂದಾಗುವಷ್ಟು ಪರಿಣಾಮವು ಅನ್ಯದೇಶದ ಶೃಂಗಾರಚೇಷ್ಟೆಗಳುಳ್ಳ ಕಾದಂಬರಿಗಳನ್ನು ಪ್ರಕಟಿಸಿ, ಅಸಹ್ಯವಾದ ಭಿನ್ನ ಭಿನ್ನ ನಡೆನುಡಿಗಳನ್ನು ನಮ್ಮಲ್ಲಿ ತರಲಿಕ್ಕೆ ಯತ್ನಿಸುವದರಿಂದ ಎಷ್ಟು ಮಾತ್ರವೂ ಆಗದು. ಆದದರಿಂದ ನಿಜವಾದ ಗ್ರಂಥಕರ್ತೃಗಳನ್ನಿಸಿಕೊಳ್ಳಬೇಕೆಂಬ ಅಭಿಮಾನವುಳ್ಳ ವ್ಯವಸಾಯಬಂಧುಗಳು ಕನ್ನಡ ನುಡಿಯ ಏಳಿಗೆಗೆ ಮೊದಲನೇ ಮೆಟ್ಟಿಲಾದ ಪ್ರಾಥಮಿಕಶಾಲೆಗಳಲ್ಲಿ ನಡೆಯುತ್ತಿರುವ ಭಾಷಾಸ್ಥಿತಿಯ ಕಡೆಗೆ ಗಮನಿಸತಕ್ಕದ್ದು.

ಸದ್ಯಕ್ಕೆ ಪ್ರಾಥಮಿಕ ಶಾಲೆಗಳಲ್ಲಿ ಭಾಷಾವಿಷಯವು ಅನೇಕ ಸಂಶಯಗಳುಳ್ಳದ್ದಾಗಿ ಕಲಿಸಲ್ಪಡುತ್ತದೆ. ಯಾಕಂದರೆ, ಸದ್ಯದ ಪ್ರಾಥಮಿಕ ಪುಸ್ತಕಗಳಲ್ಲಾಗಲಿ ಬಳಿಕೆಯ ಭಾಷೆಯಲ್ಲಾಗಲಿ ನಾನಾ ಪ್ರಕಾರದ ಸಂಶಯಾತ್ಮಕ ಪ್ರಯೋಗಗಳೂ ಕಥಾಭಾಗಗಳೂ ಕಂಡು ಬರುವವು. ಹಲಕೆಲವು ಶಂಕೆಗಳ ಬಗ್ಗೆ ನನಗಿಂತ ಬಲ್ಲವರಾದ ಸಹವ್ಯವಸಾಯಿಗಳನ್ನು ಕೇಳಲು ಅವಕ್ಕೆ ಸರಿಯಾದ ಸಮಾಧಾನವಾಗಲಿಲ್ಲ. ಅಲ್ಲದೆ, ಅವರೂ ನನ್ನ ಮುಂದೆ ಕೆಲವು ಶಂಕೆಗಳನ್ನು ಇಟ್ಟರು. ಇದರ ಮೇಲಿಂದ ವಿಚಾರಿಸಲು, ನನ್ನ ವ್ಯವಸಾಯಬಂಧುಗಳೆಲ್ಲರಲ್ಲಿಯೂ ಸಾಧಾರಣವಾಗಿ ಒಂದಿಲ್ಲೊಂದು ಬಗೆಯ ಶಂಕೆಗಳು ಮನೆ ಮಾಡಿಕೊಂಡಿರುವವೆಂತಲೂ ಅಕಸ್ಮಾತ್ ಚಾಣಾಕ್ಷ ವಿದಾರ್ಥಿಯು ಯಾವದೊಂದು ಶಂಕೆಯನ್ನು ಕೇಳಲು, ಪ್ರಾಚೀನ ಕವಿಗಳನ್ನು ದೂಷಿಸಿಯಾಗಲಿ ಅಪ

ರಚಿತವಾದ ಶಬ್ದಮಣಿದರ್ಪಣ ಮೊದಲಾದ ಉದ್ಗ್ರಂಥಗಳನ್ನು ಮುಂದೆ ಮಾಡಿಯಾಗಲಿ ಏನೇನೋ ಹೇಳಿ ಆಗಿನ ಕಾಲವನ್ನು ನೂಕಿ ಅಭಿಮಾನವನ್ನು ಕಾಯ್ದುಕೊಳ್ಳುವೆವೆಂತಲೂ ಹೇಳಬಹುದು. ಇದು ಮಾತ್ರ ಶೋಚನೀಯವಾದ ಸ್ಥಿತಿಯು. ಇಂಥ ಸ್ಥಿತಿಯೇ ಭಾಷಾವನತಿಗೆ ಕಾರಣವು. ಭಾಷೆಯು ಸುಧಾರಿಸುವದೆಂದರೆ, ನಮ್ಮೂರ ಹಾಗೂ ನಮ್ಮಲ್ಲಿ ಅಧ್ಯಯನ ಮಾಡುವ ಭಾವೀ ಭಾಷಾಭಿಮಾನಿಗಳಾದ ವಿದ್ಯಾರ್ಥಿಗಳಿಂದಲ್ಲವೆ? ಆದರೆ ನಮ್ಮಲ್ಲಿಯೇ ಶಂಕೆಗಳನ್ನು ಬಚ್ಚಿಟ್ಟುಕೊಂಡು ವಿದ್ಯಾರ್ಥಿಗಳಿಗೆ ಅಪೂರ್ಣವಾದ ಜ್ಞಾನವಾಡಿಕೊಡುತ್ತ ನಡೆದಿರುವದರಿಂದ ಭಾಷೆಯು ಹೇಗೆ ಸುಧಾರಿಸಬೇಕು? ಈ ಭಯಂಕರವಾದ ಸ್ಥಿತಿಯು ಕೆಲವು ಕಾಲ ನಡೆಯಲು ೧ ರಸಾಯನ ಮಿಶ್ರಣವನ್ನು ಹೊಂದಿದ ಮೂಲ ಘಟಕಗಳು ತಮ್ಮ ಗುಣಧರ್ಮಾದಿಗಳನ್ನು ಕಳಕೊಂಡು ಭಿನ್ನರೂಪದಿಂದ ಗೋಚರವಾಗುವಂತೆ" ನಮ್ಮ ಭಾಷಾಸ್ವರೂಪದ ಅವಸ್ಥೆಯಾಗುವದೆಂದು ಹೇಳಿದರೆ ಬಹಳ ತಪ್ಪಾಗಲಿಕ್ಕಿಲ್ಲ.

ಭಾಷಾವನತಿಯ ಇಂಥ ನಿಜಸ್ಥಿತಿಯನ್ನು ಲಕ್ಷಕ್ಕೆ ತಂದು ಅಧಿಕಾರವಿಲ್ಲದಿದ್ದರೂ ವಿನಂತಿರೂಪದಿಂದ ಬಂದು ಅಲ್ಪ ಸೂಚನೆಯನ್ನು ಸುಜ್ಞರಾದ ವ್ಯವಸಾಯಬಂಧುಗಳ ಮುಂದೆ ತಂದ ಹೊತ್ತಿಗೆ ಸಮಾಧಾನವಾಗದು. ಅದು ಯಾವದೆಂದರೆ, ಎಲ್ಲ ವ್ಯವಸಾಯಬಂಧುಗಳು ಬಾಲಬೋಧಿನಿ ಮೊದಲುಗೊಂಡು ಎಲ್ಲ ಕ್ರಮಿಕ ಪುಸ್ತಕಗಳನ್ನು ಚನ್ನಾಗಿ ಓದಿ ಸಂಶಯದ ಉತ್ಪತ್ತಿಗಳನ್ನೂ ನುಡಿಗಟ್ಟಿನ ವಿರುದ್ಧವಾದ ಪ್ರಯೋಗಗಳನ್ನೂ ಈಗ ಬಳಿಕೆಯಲ್ಲಿಯ ಭಾಷೆಯಿಂದ ಗ್ರಂಥಗಳಲ್ಲಿ ಪ್ರಯೋಗಿಸಲ್ಪಡುವ ವಾಕ್ಯಗಳಿಗೆ ಸಮಾಧಾನದ ಲಕ್ಷಣಗಳನ್ನೂ ಪದಪದ್ಯಗಳಲ್ಲಿಯ ಅರ್ಥ, ಭಾವ, ಹಾಗು ಪೂರ್ವಾಪರ ಸಂಬಂಧಗಳನ್ನೂ ಇನ್ನೂ ಅನೇಕ ತರದ ಶಂಕೆಗಳನ್ನೂ ತೆಗೆದಿಡುವದು ಮೊದಲನೇ ಕೆಲಸವು. ಇನ್ನು ಮುಂದಿನ ಕೆಲಸವು ಆಯಾ ಜಿಲ್ಲೆಗಳ ಮಹನೀಯರಾದ ವರಿಷ್ಠಾಧಿಕಾರಿಗಳನ್ನು ಅವಲಂಬಿಸಿರುವದು. ಪ್ರತಿಯೊಂದು ಜಿಲ್ಲೆಯ ವಿದ್ಯಾಧಿಕಾರಿಗಳು ತಮ್ಮಲ್ಲಿಯ ಒಂದೆರಡು ಸ್ಥಳಗಳಲ್ಲಿ ಅಥವಾ ಒಂದೊಂದು ಭಾಗದಲ್ಲಿ ಶಿಕ್ಷಕರ ಸಮ್ಮೇಲನವನ್ನು ಮಾಡಿ, ಬಲ್ಲಂಥ ಶಿಕ್ಷಕರನ್ನು ಆಮಂತ್ರಿಸಿ, ಭಾಷಾ ವಿಷಯದಲ್ಲಿ ಬರುವ ಶಂಕೆಗಳನ್ನು ವಿಮರ್ಶಿಸಿದರೆ, ಭಾಷಾಸ್ಥಿತಿಯು ಕಿಂಬಹುನಾ

ಭಾವೀ ಪ್ರಜೆಗಳ ಸ್ಥಿತಿಯು ಸುಧಾರಿಸಲಿಕ್ಕೆ ಅಡ್ಡಿಯಿಲ್ಲೆಂದು ಹೇಳಬಹುದು. ಈ ಸಮ್ಮೇಲನದಲ್ಲಿ ಶಾಲೆಯಲ್ಲಿ ಕಲಿಸಲ್ಪಡುವ ಇತರ ವಿಷಯಗಳಲ್ಲಿಯ ಶಂಕೆಗಳ ಪರಿಹಾರವೂ ಆಗುವದೆಂದು ಬೇರೆ ಹೇಳುವ ಕಾರಣವಿಲ್ಲ. ಈ ವಿನಂತಿಯು ಸರಿಕಂಡಲ್ಲಿ ಪ್ರತಿಯೊಂದು ಜಿಲ್ಹೆಯ ವಿದ್ಯಾಧಿಕಾರಿಗಳು ತಕ್ಕ ವ್ಯವಸ್ಥೆಯನ್ನು ಮಾಡಿ ಹೀನ ಸ್ಥಿತಿಯನ್ನು ಹೊಂದಿದ್ದ ಹಾಗೂ ಹೊಂದುತ್ತ ನಡೆದಿರುವ ಕನ್ನಡ ನುಡಿಯನ್ನು ಸುಧಾರಿಸಿ ಶ್ರೇಯಸ್ಸನ್ನು ಹೊಂದಬೇಕೆಂದು ವಿನಯಪೂರ್ವಕವಾಗಿ ಬೇಡಿಕೊಳ್ಳುತ್ತೇನೆ.

ತಾ.ಲೂಕ ಖಾನಾಪುರ,
ತಾ ॥ ೬-೭-೧೯೧೪ಳ. } ಮಲ್ಲೇಶ ಫಕೀರಪ್ಪ ಗಚ್ಚಾಚಾರ್ಯ,
ಹಲಸಿ ಶಾಳಾ ಪ್ರಥಮೋಪಶಿಕ್ಷಕ

ವಿದ್ಯಾಖಾತೆಯ ನೋಟೀಸುಗಳು.

ಹಾಯಸ್ಕೂಲುಗಳಲ್ಲಿ ದೊರೆಯುವ ಮೊಹಮಡನ್ ಬರ್ಸರಿ ಫಂಡಸ್ಕಾಲರಶಿಪ್ಪಿನ ಬಗ್ಗೆ ನೋಟೀಸು.

ಇದರ ಮೂಲಕ ನೋಟೀಸು ಕೊಡುವದೇನಂದರೆ:- ತಾ॥ ೩೦ನೇ ದಿಸೆಂಬರ ಸನ ೧೯೦೮ ಇಸವಿಯ ಮುಂಬಯಿ ಗ್ಯಾಝೆಟ್ ಭಾಗ ೧ನೆಯ ೨೦೬೫ ರಿಂದ ೨೦೬೬ನೇ ಪುಟಗಳಲ್ಲಿ ಪ್ರಸಿದ್ಧ ಮಾಡಿದ ನಿಯಮಗಳ ಪ್ರಕಾರ ಧಾರವಾಡ ಜಿಲ್ಹೆಯಲ್ಲಿ ಮೊಹಮಡನ್ ಬರ್ಸರಿ ಫಂಡದಿಂದ ಒಂದು ಸ್ಕಾಲರಶಿಪ್ಪು ಕೊಡುವ ಬಗ್ಗೆ ಪರೀಕ್ಷೆಯು ಧಾರವಾಡ ಸೆಂಟರಿನಲ್ಲಿ ಧಾರವಾಡ ಹಾಯಸ್ಕೂಲಿನಲ್ಲಿ ಸೋಮವಾರ ತಾ॥ ೭ನೇ ಸಪ್ಟಂಬರ ೧೯೧೪ನೇ ದಿವಸ ಬೆಳಗಿನ ೧೧ ಘಂಟೆಗೆ ಪ್ರಾರಂಭವಾಗುವದು.

೨. ಈ ಸ್ಕಾಲರಶಿಪ್ಪ ಪರೀಕ್ಷೆಗೆ ಧಾರವಾಡ ಜಿಲ್ಹೆಯೊಳಗಿನ ಶಾಳಾ ಖಾತೆಯಿಂದ ಮಾನ್ಯಮಾಡಲ್ಪಟ್ಟ ಬೇಕಾದ ಶಾಲೆಯ ಮುಸಲಮಾನ ಹುಡುಗರು ಬರಬಹುದು. ಆದರೆ ಅವರು ತಾವು ನಿಜವಾಗಿ ಧಾರವಾಡ ಜಿಲ್ಹೆಯ ವಾಸಸ್ಥರೆಂಬ ಬಗ್ಗೆಯೂ ಹಾಯಸ್ಕೂಲಿನಲ್ಲಿ ಇಂಗ್ಲಿಷ ಕಲಿಯಲಿಕ್ಕೆ ತಾಗುವ ಖರ್ಚನ್ನು ಮಾಡುವದಕ್ಕೆ ಆಗದಷ್ಟು ಬಡವರಿದ್ದ ಬಗ್ಗೆಯೂ

ಇಬ್ಬರು ಪ್ರಸಿದ್ಧ ಸಂಭಾವಿತ ಗೃಹಸ್ಥರ ಸರಟಿಫಿಕೇಟನ್ನು ಹಾಜರ ಮಾಡಲಿಕ್ಕೆ ಬೇಕು.

೩. ಪರೀಕ್ಷೆಯು ಕನ್ನಡದಿಂದ ಆಗುವದು.

೪. ಪರೀಕ್ಷೆಯು ಒಂದು ಕಮಿಟಿಯ ಮುಖಾಂತರವಾಗಿಆಗುವದು. ಆ ಕಮಿಟಿಗೆ ಧಾರವಾಡ ಸರಕಾರೀ ಹಾಯಸ್ಕೂಲಿನ ಹೆಡ್‌ಮಾಸ್ತರರು ಪ್ರೆಸಿಡೆಂಟರಿರುವರು. ಈ ಪರೀಕ್ಷೆಯ ಬಗ್ಗೆ ಮಾಡತಕ್ಕ ಅರ್ಜಿಗಳನ್ನು ಮಿಡಲ್‌ಸ್ಕೂಲ ಸ್ಕಾಲರಶಿಪ್ಪಪರೀಕ್ಷೆಗೆ ಕೂಡ್ರುವ ಪರವಾನಗಿಯ ಬಗ್ಗೆ ಅರ್ಜಿಯನ್ನು ಮಾಡತಕ್ಕ ಛಾಪೀ ನಮೂನೆಯಲ್ಲಿ ತಕ್ಕ ಬದಲಾವಸೆಗ ಳನ್ನು ಮಾಡಿ ಅದರ ಮೇಲೆಯೇಮಾಡತಕ್ಕದ್ದು. ಈ ನಮೂನೆಗಳು ಕೆಳಗೆ ಸಹೀ ಮಾಡಿದವರ ಕಡೆಗೆ ಅಥವಾ ಪರೀಕ್ಷಾ ಕಮಿಟಿಯ ಅಧ್ಯಕ್ಷರ ಕಡೆಗೆ ಖರ್ಚು ಬೀಳದೆ ಸಿಗುವವು. ಪರೀಕ್ಷೆಯ ಬಗ್ಗೆ ಅರ್ಜಿಗಳನ್ನು ಪರೀಕ್ಷಾ ಕಮಿಟಿಯ ಅಧ್ಯಕ್ಷರ ಕಡೆಗೆ ತಾ॥ ೧೫ನೇ ಅಗಷ್ಟ ೧೯೧೧ನೇ ದಿವಸ ಅಥವಾ ಅದಕ್ಕೂ ಮೊದಲು ತಲಪುವಂತೆ ಕಳಿಸಲಿಕ್ಕೆ ಬೇಕು. ಆ ನಂತರ ಬಂದ ಅರ್ಜಿಗಳು ಹಿಡಿಯಲ್ಪಡಲಿಕ್ಕಿಲ್ಲ.

೫. ಈ ಪರೀಕ್ಷೆಗೆ ಬರಲಪೇಕ್ಷಿಸುವ ಉಮೇದವಾರರ ವಯಸ್ಸು, ಪರೀಕ್ಷೆಗಳ ವಿಷಯ, ಸ್ಕಾಲರಶಿಪ್ಪನ್ನು ಕೊಡೋಣ, ಮತ್ತು ಬಂದ ಮಾಡೋಣ, ಸ್ಕಾಲರಶಿಪ್ಪ ದೊರೆದ ಉಮೇದವಾರನ ಹೆಸರು ಪ್ರಸಿದ್ಧ ಮಾಡೋಣ, ಸ್ಕಾಲರಶಿಪ್ಪಿನ ರಕಮು ಮತ್ತು ಅವಧಿ, ಶಾಲೆಯ ಫೀ ಬಗ್ಗೆ ನಿಯಮ ಇವೆಲ್ಲವುಗಳೂ ಮಿಡಲ್‌ಸ್ಕೂಲ ಸ್ಕಾಲರಶಿಪ್ಪುಗಳಂತೆಯೇ ಇರು ವವು. ಆದರೆ ಈ ಸ್ಕಾಲರಶಿಪ್ಪ ಪರೀಕ್ಷೆಗೆ ಪರೀಕ್ಷಾ ಫೀ ಮಾತ್ರ ತೆಗೆದು ಕೊಳ್ಳಲ್ಪಡಲಿಕ್ಕಿಲ್ಲ.

ಧಾರವಾಡ.
ಜುಲಯೀ ಜೂನ ೧೯೧೧ } V. B. JOSHI.
ಅ. ಎ. ಇನಸ್ಪೇಕ್ಟರ, ದಕ್ಷಿಣಭಾಗ.

ಧಾರವಾಡ ಟ್ರೇನಿಂಗ ಕಾಲೇಜದ ಪ್ರ್ಯಾಕ್ಟಿಸಿಂಗ ಸ್ಕೂಲಿನಲ್ಲಿ ಮಹ ಮ್ಮದನ್ ಬರ್ಸರೀ ಫಂಡದ ಒಂದು ಸ್ಕಾಲರಶೀಪು ಕೊಡುವ ಬಗ್ಗೆ ಮುಂಬ ಯಿ ಸರಕಾರೀ ಗ್ಯಾಝೆಟ್ ತಾರೀಖು ೩೦ನೇ ದಿಸೆಂಬರ ೧೯೦೯ ಭಾಗ ೧ ಪುಟ ೨೦೬೫ ರಿಂದ ೨೦೬೬ ರಲ್ಲಿ ಕೊಟ್ಟ ನಿಯಮಗಳ ಪ್ರಕಾರ ಸದರೀ ಸ್ಕಾಲರಶೀಪಿನ ಬಗ್ಗೆ ಪರೀಕ್ಷೆಯು ಧಾರವಾಡ ಗಂಡು ಮಕ್ಕಳ ಟ್ರೇನಿಂಗ

ಕಾಲೇಜದಲ್ಲಿ ಬುಧವಾರ ತಾ॥ ೧೬ನೇ ಸಪಟಂಬರ ೧೯೧೪ ನೇ ದಿವಸ ೧೧ ಘಂಟೆಗೆ ಪ್ರಾರಂಭವಾಗುವದು.

೨. ಶಾಳಾಖಾತೆಯಿಂದ ಮಾನ್ಯವಾದ ಧಾರವಾಡ ಜಿಲ್ಹೆಯೊಳಗಿನ ಬೇಕಾದ ಶಾಲೆಯ ಮುಸಲ್ಮಾನ ವಿದ್ಯಾರ್ಥಿಗಳು ಈ ಪರೀಕ್ಷೆಗೆ ಬರ ಬಹುದು. ಆದರೆ ಅವರು ತಾವು ನಿಜವಾಗಿ ಧಾರವಾಡ ಜಿಲ್ಹೆಯಲ್ಲಿ ವಾಸ ಮಾಡುವವರೆಂಬ ಬಗ್ಗೆಯೂ, ಧಾರವಾಡ ಟ್ರೇನಿಂಗ ಕಾಲೇಜದ ಪ್ರ್ಯಾಕ್ಟಿಸಿಂಗಸ್ಕೂಲಿನಲ್ಲಿ ಇದ್ದು ದೇಶಭಾಷೆಯ ಅಭ್ಯಾಸ ಮಾಡಲಿಕ್ಕೆ ತಾಗುವ ಖರ್ಚನ್ನು ಕೊಡಲಿಕ್ಕೆ ಆಗದಷ್ಟು ಬಡವರಿದ್ದ ಬಗ್ಗೆಯೂ ಇಬ್ಬರು ಸಂಭಾವಿತ ಗೃಹಸ್ಥರ ಸರಟೀಫೀಕೇಟನ್ನು ಹಾಜರ ಮಾಡಲಿಕ್ಕೆ ಬೇಕು. ಆದರೆ ಪರೀಕ್ಷೆಯ ಮೊದಲು ಕನಿಷ್ಟ ೧೬ ತಿಂಗಳ ವರೆಗೆ ಶಾಲೆಯಲ್ಲಿ ನಿಜವಾಗಿ ಇರಜಂಥ ಉಮೇದವಾರರನ್ನು ಈ ಪರೀಕ್ಷೆಗೆ ಕೂಡ್ರಗೊಡಲಿಕ್ಕಿಲ್ಲ.

೩. ಮೇಲಿನ ೨ನೇ ನಿಯಮದಲ್ಲಿ ಹೇಳಿದ ಶರ್ತುಗಳಿಗನುಸಾರವಾಗಿ ತಿಂಗಳಿಗೆ ೪ರೂಪಾಯಿ ಬೆಲೆಯುಳ್ಳ ಎರಡು ವರ್ಷಗಳ ವರೆಗೆ ನಡೆಯು ವಂಥ ಒಂದು ಸ್ಕಾಲರಶೀಪು ಕೆಳಗೆ ಬರೆದ ಶರ್ತುಗಳ ಪ್ರಕಾರ ಧಾರವಾಡ ಪ್ರ್ಯಾಕ್ಟಿಸಿಂಗಸ್ಕೂಲಿನಲ್ಲಿ ಕೊಡಲ್ಪಡುವದು.

(೧) ಉಮೇದವಾರನ ವಯಸ್ಸು ೧೫ ವರ್ಷಕ್ಕಿಂತ ಹೆಚ್ಚು ಇರ ಬೇಕು.

(೨) ಕನ್ನಡ ಅಥವಾ ಉರ್ದು ೪ನೇ ಇಯತ್ತೆಯ ಪ್ರಕಾರ ತೆಗೆದು ಕೊಂಡ ಪರೀಕ್ಷೆಯಲ್ಲಿ ಅವನು ಎಲ್ಲರಲ್ಲಿ ಹೆಚ್ಚು ಗುಣಗಳನ್ನು ದೊರಕಿಸಬೇಕು, ಮತ್ತು ಹೆಚ್ಚು ಚುರುಕತನವನ್ನು ತೋರಿ ಸಬೇಕು.

(೩) ಅವನು ಪ್ರ್ಯಾಕ್ಟಿಸಿಂಗಸ್ಕೂಲಿಗೆ ತಪ್ಪಿಸದೆ ಹೋಗಬೇಕು; ಮತ್ತು ಅವನ ನಡತೆಯೂ, ಅಭ್ಯಾಸವೂ ಸಮಾಧಾನಕರ ವಾಗಿರಬೇಕು.

(೪) ಅವನು ವ್ಹರ್ನ್ಯಾಕ್ಯೂಲರ ಫೈಯನಲ್ ಪರೀಕ್ಷೆಯನ್ನು ಪಾಸಾ ದ ನಂತರ ಧಾರವಾಡ ಟ್ರೇನಿಂಗ ಕಾಲೇಜದಲ್ಲಿ ಕಲಿತು ಟ್ರೇಂಡ ಶಿಕ್ಷಕನಾಗಲಿಕ್ಕೂ ಮತ್ತು ಆ ಪ್ರಕಾರ ಯೋಗ್ಯ ಜಾಮೀನುಗಳನ್ನು ಕೊಟ್ಟು ಕರಾರಪತ್ರ ಬರಕೊಡಲಿಕ್ಕೂ ಕಬೂಲ ಇರಬೇಕು.

೪. ಈ ಪರೀಕ್ಷೆಯು ಬಂದು ಕವಿಗಾಟಿಯ ಮುಖ್ಯಾಂತರ ತೆಗೆದು ಕೊಳ್ಳಲ್ಪಡುವದು ಆ ಕವಿಗಾಟಿಗೆ ಧಾರವಾಡ ಟ್ರೇನಿಂಗಕಾಲೇಜದ ಪ್ರಿನ್ಸಿಪಾಲರು ಪ್ರೆಸಿಡೆಂಟರಿರುವರು. ಈ ಪರೀಕ್ಷೆಗೆ ಕೂಡ್ರುವದಕ್ಕೆ ಪರವಾನಗಿಯ ಒಗ್ಗೆ ಮಾಡತಕ್ಕ ಅರ್ಜಿಯನ್ನು ವ್ಹರ್ನ್ಯಾಕ್ಯೂಲರ ಫಾಯನಲ್ ಪರೀಕ್ಷೆಯು ಛಾಪಿಸಿದ ನಮೂನೆಯಲ್ಲಿ ತಕ್ಕ ಬದಲಾವಣೆಗಳನ್ನು ಮಾಡಿ ಅದರ ಮೇಲೆ ಮಾಡತಕ್ಕದ್ದು. ಈ ನಮೂನೆಯ ಪ್ರತಿಗಳು ಮೆ|| ಎಜ್ಯುಕೇಶನಲ್ ಇನಸ್ಪೇಕ್ಟರ ಸಾಹೇಬರವರ ಕಡೆಯಿಂದ ಅಥವಾ ಪರೀಕ್ಷಾ ಕವಿಗಾಟಿಯ ಪ್ರೆಸಿಡೆಂಟರ ಕಡೆಯಿಂದ ಕಿಮ್ಮತ್ತು ಬೀಳದೆ ದೊರೆಯುವವು. ಪರೀಕ್ಷೆಯ ಅರ್ಜಿಗಳನ್ನು ಪ್ರೆಸಿಡೆಂಟರ ಕಡೆಗೆ ೧೦ನೇ ಸಪ್ಟಂಬರ ೧೯೧೪ನೇ ದಿವಸ ಅಥವಾ ಅದಕ್ಕೂ ಪೂರ್ವದಲ್ಲಿ ಮುಟ್ಟುವಂತೆ ಕಳಿಸ ಬೇಕು. ಆ ನಂತರ ಬಂದ ಅರ್ಜಿಗಳು ಹಿಡಿಯಲ್ಪಡಲಿಕ್ಕಿಲ್ಲ.

V. B. Joshi,
ಅ ಎಜ್ಯುಕೇಶನಲ್ ಇನಸ್ಪೇಕ್ಟರ, ದಕ್ಷಿಣಭಾಗ.

ಧಾರವಾಡ ಟ್ರೇನಿಂಗ ಕಾಲೇಜಿನ ಸರಟೀಫಿಕೇಟ ಪರೀಕ್ಷೆಯು ಮಂಗಳವಾರ ತಾ|| ೯ನೇ ಸಪ್ಟಂಬರ ೧೯೧೪ನೇ ಇಸವಿ ದಿವಸ ಪ್ರಾರಂಭವಾಗುವದು. ಈ ಪರೀಕ್ಷೆಯ ಡ್ರಾಯಿಂಗ ಪರೀಕ್ಷೆಯು ಸೋಮವಾರ ತಾ|| ೭ನೇ ಸಪ್ಟಂಬರ ೧೯೧೪ನೇ ದಿವಸ ಪ್ರಾರಂಭವಾಗುವದು. ಹೊರಗಿನಿಂದ ಪರೀಕ್ಷೆಗೆ ಬರುವವರು ಮೆ|| ಎಜ್ಯುಕೇಶನಲ್ ಇನಸ್ಪೇಕ್ಟರ ಸಾ|| ಬಾ|| ದಕ್ಷಿಣಭಾಗ ಇವರ ಅಪ್ಪಣೆಯನ್ನು ಪಡೆದುಕೊಂಡು ಪರೀಕ್ಷೆಗೆ ಕೂಡ್ರಬಹುದು. ಹಾಗೂ ಹೊರಗಿನಿಂದ ೧ನೇ ವರ್ಷದ ಸರ್ಟಿಫಿಕೇಟಿನ ಪರೀಕ್ಷೆಗೆ ಬರುವವರು ತಮ್ಮ ಮುಲ್ಕೀ ಅಥವಾ ವ್ಹರ್ನ್ಯಾಕ್ಯೂಲರ ಫಾಯನಲ್ ಪರೀಕ್ಷೆಯ ಸರ್ಟಿಫಿಕೇಟನ್ನು ತಮ್ಮ ಸಂಗಡ ತರಬೇಕು. ಈ ಸರ್ಟಿಫಿಕೇಟನ್ನು ಹಾಜರ ಮಾಡದವರು ಪರೀಕ್ಷೆಗೆ ಕೂಡ್ರಗೊಡಲ್ಪಡಲಿಕ್ಕಿಲ್ಲ.

V. B. Joshi.
ಅ. ಎಜ್ಯುಕೇಶನಲ್ ಇನ್ಸ್ಪೆಕ್ಟರ, ದಕ್ಷಿಣಭಾಗ.

ಮಿಡಲ್‌ಸ್ಕೂಲ ಸ್ಕಾಲರಶಿಪ್ಪು ಪರೀಕ್ಷೆಯು
ದಕ್ಷಿಣಭಾಗ

——೫(೦)೫——

೧೭ನೇ ಜನವರಿ ೧೯೦೭ನೇ ಇಸವಿಯ ಮುಂಬಯಿ ಗವ್ಹರ್ನ್‌ಮೆಂಟ ಗ್ಯಾಝೆಟಿನ ಒಂದನೇ ಭಾಗದ ೧೫, ೧೬ನೇ ಪಾನಿನೆಲ್ಲಿ ಛಾಪಿಸಿದಂತೆ, ಪ್ರತಿ ಒಂದು ಜಿಲ್ಹೆಗೆ ಆರು ಮಿಡಲ್‌ಸ್ಕೂಲ ಸ್ಕಾಲರಶಿಪ್ಪುಗಳನ್ನು ಕೊಡುವ ಸಂಬಂಧದ ಪರೀಕ್ಷೆಯು ಸೋಮವಾರ ತಾ|| ೨ನೇ ಸಪ್ಟಂಬರ ೧೯೧೪ನೇ ಇಸವಿಯ ದಿವಸ ಮತ್ತು ತದುತ್ತರ ದಿವಸಗಳಲ್ಲಿ ಸ್ಟಾಂಡರ್ಡ ಕಾಲವಾನದ ೧೧ ಗಂಟೆಗೆ ಸರಿಯಾಗಿ ಕೆಳಗೆ ನಮೂದಿಸಿದ ಪ್ರತಿ ಒಂದು ಸೆಂಟರಿನಲ್ಲಿ ಪ್ರಾರಂಭವಾಗುವದು. ಸೆಂಟರುಗಳು ಯಾವವೆಂದರೆ:—

೧. ಧಾರವಾಡ ಹೈಸ್ಕೂಲ, ಬೆಳಗಾವ ಹೈಸ್ಕೂಲ, ವಿಜಾಪೂರ ಹೈಸ್ಕೂಲ, ಕಾರವಾರ ಹೈಸ್ಕೂಲ, ಅಲೀಬಾಗ ಜಾನ್ ಎಲ್‌ಫಿನೆಸ್ಟನ್ ಹೈಸ್ಕೂಲ.

೨. ಈ ಆರು ಸ್ಕಾಲರಶಿಪ್ಪುಗಳಲ್ಲಿ ಎರಡು ಎಲ್ಲ ಉಮೇದವಾರರಲ್ಲಿ ಮೇಲಾದವರಿಗೆ ಸಿಗುವವು. ಎರಡು ಇಂಗ್ಲಿಷ ಅಭ್ಯಾಸದಲ್ಲಿ ಹಿಂದುಳಿದ ಬೀನಿ ಇಸ್ರಾಯೆಲ್, ಕುಣಬಿ, ಕೂಲಿಕಾರ ಮುಂತಾದ ಜಾತಿಯವರಿಗಾಗಿ ಕಾದಿಟ್ಟಂಥವು, ಆ ಜಾತಿಯಲ್ಲಿ ಉತ್ಕೃತರಾದ ವಿದ್ಯಾರ್ಥಿಗಳಿಗೆ ಸಿಗುವವು. ಮತ್ತು ಎರಡು ಸ್ಕಾಲರಶಿಪ್ಪುಗಳು ಮುಸಲಮಾನರಿಗಾಗಿ ಕಾದಿಡಲ್ಪಡುವವು.

೩. ಮೇಲಿನ ಸ್ಕಾಲರಶಿಪ್ಪುಗಳ ಹೊರ್ತು ಶಾಲಾಖಾತೆಯ ಸರಕಾರ ಠರಾವ ಸ, ೧೮೮೬ ತಾ|| ೧೬ನೇ ಜುಲೈ ೧೯೧೭ರ ಪ್ರಕಾರ ತಿಂಗಳಿಗೆ ೫ ರೂಪಾಯಿ ಬೆಲೆಯ ಮತ್ತೊಂದು ಹೊಸ ಸ್ಕಾಲರಶಿಪ್ಪು ಮಂಜೂರು ಮಾಡಲ್ಪಟ್ಟಿರುವದು. ಈ ಸ್ಕಾಲರಶಿಪ್ಪು ಕೀಳುಜಾತಿಯ ಉಮೇದವಾರರಿಗೋಸ್ಕರವೇ ಇರುವದು. ಮಿಡಲ್ ಮತ್ತು ಸ್ಪೆಶಲ್‌ಸ್ಕೂಲ ಸ್ಕಾಲರಶಿಪ್ಪ ಪರೀಕ್ಷೆಯ ಸಂಬಂಧವಾಗಿ ಈಗ ಅಮಲಿನಲ್ಲಿರುವ ನಿಯಮಗಳೇ ಈ ಸ್ಕಾಲರಶಿಪ್ಪಿಗೂ ಇರುವವು.

೪. ಈ ಪರೀಕ್ಷೆಯು ಒಂದು ಕವಿತಾಟಿಯ ಮುಖಾಂತರ ತೆಗೆದು ಕೂಳ್ಳಲ್ಪಡುವದು ಆ ಕವಿತಾಟಿಗೆ ಧಾರವಾಡ ಟ್ರೇನಿಂಗಕಾಲೇಜದ ಪ್ರಿನ್ಸಿಪಾಲರು ಪ್ರೆಸಿಡೆಂಟರಿರುವರು. ಈ ಪರೀಕ್ಷೆಗೆ ಕೂಡ್ರುವದಕ್ಕೆ ಪರವಾನಗಿಯ ಒಗ್ಗೆ ಮಾಡತಕ್ಕ ಅರ್ಜಿಯನ್ನು ವ್ಹರ್ನ್ಯಾಕ್ಯೂಲರ ಫಾಯನಲ್ ಪರೀಕ್ಷೆಯ ಥಾಪಿಸಿದ ನಮೂನೆಯಲ್ಲಿ ತಕ್ಕ ಬದಲಾವಣೆಗಳನ್ನು ಮಾಡಿ ಅದರ ಮೇಲೆ ಮಾಡತಕ್ಕದ್ದು. ಈ ನಮೂನೆಯ ಪ್ರತಿಗಳು ಮೆ॥ ಎಜ್ಯೂಕೇಶನಲ್ ಇನಸ್ಪೇಕ್ಟರ ಸಾಹೇಬರವರ ಕಡೆಯಿಂದ ಅಥವಾ ಪರೀಕ್ಷಾ ಕವಿತಾಟಿಯ ಪ್ರೆಸಿಡೆಂಟರ ಕಡೆಯಿಂದ ಕಿಮ್ಮತ್ತು ಬೀಳದೆ ದೊರೆಯುವವು. ಪರೀಕ್ಷೆಯ ಅರ್ಜಿಗಳನ್ನು ಪ್ರೆಸಿಡೆಂಟರ ಕಡೆಗೆ ೧೦ ನೇ ಸಪ್ಟಂಬರ ೧೯೧೪ ನೇ ದಿವಸ ಅಥವಾ ಅದಕ್ಕೂ ಪೂರ್ವದಲ್ಲಿ ಮುಟ್ಟುವಂತೆ ಕಳಿಸಬೇಕು. ಆ ನಂತರ ಬಂದ ಅರ್ಜಿಗಳು ಹಿಡಿಯಲ್ಪಡಲಿಕ್ಕಿಲ್ಲ.

V. B. Joshi,
ಅ ಎಜ್ಯುಕೇಶನಲ್ ಇನಸ್ಪೇಕ್ಟರ, ದಕ್ಷಿಣಭಾಗ.

ಧಾರವಾಡ ಟ್ರೇನಿಂಗ ಕಾಲೇಜಿನ ಸರಟೀಫಿಕೇಟ ಪರೀಕ್ಷೆಯು ಮೆಂಗಳವಾರ ತಾ॥ ೪ ನೇ ಸಪ್ಟಂಟರ ೧೯೧೪ನೇ ಇಸವಿ ದಿವಸ ಪ್ರಾರಂಭವಾಗುವದು. ಈ ಪರೀಕ್ಷೆಯ ಡ್ರಾಯಿಂಗ ಪರೀಕ್ಷೆಯು ಸೋಮವಾರ ತಾ॥ ೩೧ನೇ ಸಪ್ಟಂಬರ ೧೯೧೪ ನೇ ದಿವಸ ಪ್ರಾರಂಭವಾಗುವದು. ಹೊರಗಿನಿಂದ ಪರೀಕ್ಷೆಗೆ ಬರುವವರು ಮೆ॥ ಎಜ್ಯೂಕೇಶನಲ್ ಇನಸ್ಪೇಕ್ಟರ ಸಾ॥ ಬಾ॥ ದಕ್ಷಿಣಭಾಗ ಇವರ ಅಪ್ಪಣೆಯನ್ನು ಪಡೆದುಕೊಂಡು ಪರೀಕ್ಷೆಗೆ ಕೂಡ್ರಬಹುದು. ಹಾಗೂ ಹೊರಗಿನಿಂದ ೧೧ ನೇ ವರ್ಷದ ಸರ್ಟಿಫಿಕೀಟಿನ ಪರೀಕ್ಷೆಗೆ ಬರುವವರು ತಮ್ಮ ಮುಲ್ಕೀ ಅಥವಾ ವ್ಹರ್ನ್ಯಾಕ್ಯೂಲರ ಫಾಯನಲ್ ಪರೀಕ್ಷೆಯ ಸರ್ಟಿಫಿಕೀಟನ್ನು ತಮ್ಮ ಸಂಗಡ ತರಬೇಕು. ಈ ಸರ್ಟಿಫೀಕೀಟನ್ನು ಹಾಜರ ಮಾಡದವರು ಪರೀಕ್ಷೆಗೆ ಕೂಡ್ರಗೊಡಲ್ಪಡಲಿಕ್ಕಿಲ್ಲ.

V. B. Joshi.
ಅ. ಎಜ್ಯುಕೇಶನಲ್ ಇನ್ಸ್ಪೇಕ್ಟರ, ದಕ್ಷಿಣಭಾಗ.

ಮಿಡಲ್‌ಸ್ಕೂಲ ಸ್ಕಾಲರಶಿಪ್ಪು ಪರೀಕ್ಷೆಯು
ದಕ್ಷಿಣಭಾಗ.

——೫೫(೦)೫೫——

೧೩ನೇ ಜನವರಿ ೧೯೦೩ನೇ ಇಸವಿಯ ಮುಂಬಯಿ ಗವ್ಹರ್ನ ಮೆಂಟ ಗ್ಯಾಝೆಟಿನ ಒಂದನೇ ಭಾಗದ ೯೫, ೯೬ನೇ ಪಾನಿನಲ್ಲಿ ಛಾಪಿಸಿ ದಂತೆ, ಪ್ರತಿ ಒಂದು ಜಿಲ್ಲೆಗೆ ಆರು ಮಿಡಲ್‌ಸ್ಕೂಲ ಸ್ಕಾಲರಶಿಪ್ಪುಗಳನ್ನು ಕೊಡುವ ಸಂಬಂಧದ ಪರೀಕ್ಷೆಯು ಸೋಮವಾರ ತಾ॥ ೩ನೇ ಸಪ್ಟಂಬರ ೧೯೦೪ನೇ ಇಸವಿಯ ದಿವಸ ಮತ್ತು ತದುತ್ತರ ದಿವಸಗಳಲ್ಲಿ ಸ್ಟಾಂಡರ್ಡ ಕಾಲವಾನದ ೧೧ ಗಂಟೆಗೆ ಸರಿಯಾಗಿ ಕೆಳಗೆ ನಮೂದಿಸಿದ ಪ್ರತಿ ಒಂದು ಸೆಂಟರಿನಲ್ಲಿ ಪ್ರಾರಂಭವಾಗುವದು. ಸೆಂಟರುಗಳು ಯಾವವೆಂದರೆ:—

೧. ಧಾರವಾಡ ಹೈಸ್ಕೂಲ, ಬೆಳಗಾವ ಹೈಸ್ಕೂಲ, ವಿಜಾಪೂರ ಹೈಸ್ಕೂಲ, ಕಾರವಾರ ಹೈಸ್ಕೂಲ, ಅಲೀಬಾಗ ಜಾನ್ ಎಲ್‌ಫಿನಸ್ಟನ್ ಹೈಸ್ಕೂಲ.

೨. ಈ ಆರು ಸ್ಕಾಲರಶಿಪ್ಪುಗಳಲ್ಲಿ ಎರಡು ಎಲ್ಲ ಉಮೇದವಾರರಲ್ಲಿ ಮೇಲಾದವರಿಗೆ ಸಿಗುವವು. ಎರಡು ಇಂಗ್ಲಿಸ ಅಭ್ಯಾಸದಲ್ಲಿ ಹಿಂದುಳಿದ ಬೇನಿ ಇಸ್ರಾಯೆಲ್, ಕುಣಬಿ, ಕೂಲಿಕಾರ ಮುಂತಾದ ಜಾತಿಯವರಿಗಾಗಿ ಕಾದಿಟ್ಟಂಥವು, ಆ ಜಾತಿಯಲ್ಲಿ ಉತ್ಕೃತರಾದ ವಿದ್ಯಾರ್ಥಿಗಳಿಗೆ ಸಿಗುವವು. ಮತ್ತು ಎರಡು ಸ್ಕಾಲರಶಿಪ್ಪುಗಳು ಮುಸಲಮಾನರಿಗಾಗಿ ಕಾದಿಡಲ್ಪದುವವು.

೩. ಮೇಲಿನ ಸ್ಕಾಲರಶಿಪ್ಪುಗಳ ಹೊರ್ತು ಶಾಲಾಖಾತೆಯ ಸರಕಾರ ತರಾವ ಸ, ೧೯೦೬ ತಾ॥ ೧೬ನೇ ಜುಲೈ ೧೯೧೩ ರ ಪ್ರಕಾರ ತಿಂಗಳಿಗೆ ೫ ರೂಪಾಯಿ ಬೆಲೆಯ ಮತ್ತೊಂದು ಹೊಸ ಸ್ಕಾಲರಶಿಪ್ಪು ಮಂಜೂರು ಮಾಡಲ್ಪಟ್ಟಿರುವದು. ಈ ಸ್ಕಾಲರಶಿಪ್ಪು ಕೀಳುಜಾತಿಯ ಉಮೇದವಾರರಿಗೋಸ್ಕರನೇ ಇರುವದು. ಮಿಡಲ್ ಮತ್ತು ಸ್ಪೆಶಲ್‌ಸ್ಕೂಲ ಸ್ಕಾಲರಶಿಪ್ಪ ಪರೀಕ್ಷೆಯ ಸಂಬಂಧವಾಗಿ ಈಗ ಅಮಲಿನಲ್ಲಿರುವ ನಿಯಮಗಳೇ ಈ ಸ್ಕಾಲರಶಿಪ್ಪಿಗೂ ಇರುವವು.

೪. ಈಗ ಖಾಲೀ ಬಿದ್ದಿರುವ ಕೆಳಗೆ ಕಾಣಿಸಿದ ಮಿಡಲ್‌ಸ್ಕೂಲ ಮತ್ತು ಸ್ಪೆಶಲ್‌ಸ್ಕೂಲ ಸ್ಕಾಲರಶಿಪ್ಪುಗಳೂ ಪರೀಕ್ಷೆಯಲ್ಲಿ ಮೇಲು ಪಡೆಯುವವರಿಗೆ ದೊರೆಯುವಂತೆ ಇವೆ: —

ನಂಬರು	ಜಿಲ್ಲಾ.	ಯಾವ ಸ್ಕಾಲರಶಿಪ್ಪುಗಳು.	ಎಷ್ಟು ಕಾಲ ನಡೆಯುವದು:	
			ಯಾವ ತಾರೀಖಿನಿಂದ	ಯಾವ ತಾರೀಖಿನ ವರೆಗೆ.
೧	ಧಾರವಾಡ.	ಹಿಂದುಳಿದ ಹಿಂದೂಗಳಿಗೋಸ್ಕರ ಕಾದಿಟ್ಟದ್ದು.	೧ನೇ ಸಪಟಂಬರ ೧೯೧೪	೩೧ ನೇ ದಶಂಬರ ೧೯೧೬
೨	ವಿಜಾಪೂರ	ಸದರ	ಸದರ	ಸದರ
೩	ಧಾರವಾಡ.	ಕೇಳಜಾತಿಯವರಿಗೋಸ್ಕರ ಕಾದಿಟ್ಟದ್ದು.	ಸದರ	೩೧ ನೇ ದಿಸಂಬರ ೧೯೧೫
೪	ಬೆಳಗಾವ.	ಸದರ	ಸದರ	ಸದರ
೫	ವಿಜಾಪುರ	ಸದರ	ಸದರ	ಸದರ
೬	ಕಾನಡಾ.	ಸದರ	ಸದರ	ಸದರ

ಇವು, ಮೇಲೆ ಹೇಳಿದ ಪೂರ್ಣ ಅವಧಿಯ ಸ್ಕಾಲರಶಿಪ್ಪುಗಳು ದೊರೆತ ಉಮೇದವಾರರಲ್ಲಿ ಕಡೆಯ ನಂಬರಿನವನ ಕೆಳಗೇ ಯಾವ ಯೋಗ್ಯರಾದ ಉಮೇದವಾರರ ನಂಬರಗಳು ಬರುವವೋ ಅವರಿಗೆ ಕೊಡಲ್ಪಡುವವು.

೫. ಬೆಳಗಾವ ಸೆಂಟರಿನಲ್ಲಿ ಪರೀಕ್ಷೆಯು ಕನ್ನಡ ಹಾಗೂ ಮರಾಠಿ ಭಾಷೆಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು. ಧಾರವಾಡ, ವಿಜಾಪೂರ ಮತ್ತು ಕಾರವಾರ ಸೆಂಟರುಗಳಲ್ಲಿ ಕನ್ನಡ ಭಾಷೆಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು.

೬. ಪ್ರತಿ ಒಂದು ಸೆಂಟರಿನಲ್ಲಿ ಪರೀಕ್ಷೆಯು ಒಂದು ಕವಿತಾಟಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು. ಅಲ್ಲಲ್ಲಿಯ ಹೈಸ್ಕೂಲ ಹೆಡ್

ಮಾ ಚೆ ನಾ ಲ
ಬೊ ರ ಬಂ

ಶಾಲಾಪತ್ರಕ.

ಪುಸ್ತಕ ೫೦ | ಅಕ್ಟೋಬರ ೧೯೧೪. | ಸಂಚಿಕೆ ೧೦.

ನೋಲ್ಟನ್ ಸಾಹೇಬರ ಉಪದೇಶ.

ರಾವಳಪಿಂಡಿಯಲ್ಲಿ ತಾ|| ೩೦ನೇ ಎಪ್ರಿಲ ೧೯೧೪ಗಳನೇ ಇಸವಿಯ ದಿವಸ ಅಲ್ಲಿಯ ನಾರ್ಮಲ್ ಸ್ಕೂಲದ ಬಕ್ಷಿಸ ಸಮಾರಂಭವು ನೆರವೇರಿತು. ಆ ಕಾಲಕ್ಕೆ ಅಧ್ಯಕ್ಷರಾಗಿದ್ದ ಮಿ. ನೋಲ್ಟನ್ ಆಯ್. ಸಿ. ಎಸ್. ಇವರು ಉರ್ದು ಭಾಷೆಯಲ್ಲಿ ಉದಾತ್ತ ವಿಚಾರಗಳಿಂದ ಪರಿಪೂರ್ಣವಾದ ಸರಸ ಭಾಷಣವನ್ನು ಮಾಡಿದರು. ಅದರ ಸಾರಾಂಶವು:—

"ಈಗ ನಿಮ್ಮಲ್ಲಿ ಕೆಲವರು ಇನಾಮುಗಳನ್ನು ಹೊಂದಿದರು. ನಾನು ಅವರ ಅಭಿನಂದನ ಮಾಡುತ್ತೇನೆ. ಇನಾಮುಗಳನ್ನು ಪಡೆಯದವರು ವಿಷಾದ ಪಡದೆ ಹೆಚ್ಚು ಉತ್ಸಾಹದಿಂದ ಅಭ್ಯಾಸಮಾಡಿ ಮುಂದಿನ ವರ್ಷ ಇಂಥ ಇನಾಮುಗಳನ್ನು ಸಂಪಾದಿಸುವರೆಂದು ನಾನು ಮನಃ ಪೂರ್ವಕವಾಗಿ ಇಚ್ಛಿಸುತ್ತೇನೆ.

ಇಂದಿಗೆ ನೀವು ಈ ಸಾಲೆಯಲ್ಲಿ ಮಾಡತಕ್ಕ ಅಭ್ಯಾಸವು ಮುಗಿಯಿತು. ಇನ್ನು ಮೇಲೆ ನೀವು ಬೇರೆ ಬೇರೆ ಹಳ್ಳಿಗಳಿಗೆ ಶಿಕ್ಷಕರ ಕೆಲಸಕ್ಕೂ ವಿದ್ಯಾಪ್ರಸಾರ ಮಾಡುವದಕ್ಕೂ ಹೋಗತಕ್ಕವರು. ಈಗ ನೀವು ನಿಮ್ಮ ಮನಸ್ಸಿನಲ್ಲಿಟ್ಟುಕೊಳ್ಳತಕ್ಕ ಮುಖ್ಯೋದ್ದೇಶವು ಯಾವದಿರತಕ್ಕದ್ದು? ಇನಸ್ಪೆಕ್ಟರ ಸಾಹೇಬರವರ ಮನವೊಲಿಸಿಕೊಂಡು ಉತ್ಕೃಷ್ಟ ಶರಾ ದೊರಕಿಸಿಕೊಂಡರೆ ನಿಮ್ಮ ಕೆಲಸವು ಪೂರ್ಣವಾಗುವದಿಲ್ಲ; ನಿಮ್ಮ ಕೈಕೆಳಗೆ ಬಂದ ವಿದ್ಯಾರ್ಥಿಗಳು ಮುಂದೆ ಯಾವದೊಂದು ಕೆಲಸವನ್ನು ಚನ್ನಾಗಿ ಮಾಡಲಿಕ್ಕೆ ಸಮರ್ಥರಾಗುವಂತೆ ನಿಮ್ಮ ಶಿಕ್ಷಣವೂ, ವರ್ತನವೂ, ಇರತಕ್ಕದ್ದು.

ಇನ್ನು, ಈ ಜಗತ್ತಿನಲ್ಲಿ ಉತ್ತಮ ಕೆಲಸಗಳನ್ನು ಮಾಡುವವರು ಯಾವ ರೀತಿಯಿಂದ ಸಿದ್ಧರಾಗುವದೆಂಬದನ್ನು ವಿಚಾರ ಮಾಡೋಣ. ಎಲ್ಲಕ್ಕೂ ಮೊದಲು ಅವರ ಶರೀರವು ಸುದೃಢವೂ, ನಿರೋಗಿಯೂ ಆಗಿರ

ಲಿಕ್ಕೆ ಬೇಕು. ಇದಕ್ಕಾಗಿ ನೀವು ನಿಮ್ಮ ವಿದ್ಯಾರ್ಥಿಗಳ ಆರೋಗ್ಯರಕ್ಷಣೆಕ್ಕಾಗಿಯೂ, ಶಾರೀರಿಕ ಸಾಮರ್ಥ್ಯದ ಬೆಳವಣಿಗೆಯ ಸಲುವಾಗಿಯೂ ಯೋಗ್ಯರೀತಿಯಿಂದ ಎಚ್ಚರ ಪಡಿರಿ. ಸ್ವಚ್ಛವಾಗಿಯೂ, ಅಚ್ಚುಕಟ್ಟಾಗಿಯೂ ಇರಲಿಕ್ಕೆ ಅವರಿಗೆ ಉತ್ತೇಜನವನ್ನು ಕೊಡಿರಿ. ಅವರ ಅಭ್ಯಾಸ ಮಾಡುವ ಕೋಣೆಗಳು ಸ್ವಚ್ಛವಾಗಿರುವಂತೆಯೂ, ಅವುಗಳಲ್ಲಿ ಅಪ್ರತಿಬಂಧವಾಗಿ ಗಾಳಿಯಾಡುವಂತೆಯೂ ವ್ಯವಸ್ಥೆಯನ್ನು ಮಾಡಿರಿ. ಸಾರಾಂಶವೇನಂದರೆ, ಶಾಲೆಯ ಎಲ್ಲ ಕೆಲಸಗಳೂ, ಪರಿಸ್ಥಿತಿಯೂ, ವಿದ್ಯಾರ್ಥಿಗಳ ಶಾರೀರಿಕ ಸಾಮರ್ಥ್ಯದ ಬೆಳವಣಿಗೆಗೆ ಕುಂದು ತಾರದಂಥವುಗಳಾಗಿರತಕ್ಕದ್ದು.

ಎರಡನೆಯ ಸಂಗತಿಯು ಯಾವದೆಂದರೆ, ನೀವು ನಿಮ್ಮ ವಿದ್ಯಾರ್ಥಿಗಳನ್ನು ಜಾಣರನ್ನಾಗಿ ಅಥವಾ ಬುದ್ಧಿವಂತರನ್ನಾಗಿ ಮಾಡತಕ್ಕದ್ದು. ನೀವು ಅವರಿಗೆ ಬಹಳ ಸಂಗತಿಗಳನ್ನು ಕಲಿಸಲಾರಿರೆಂಬದನ್ನು ನಾನು ಬಲ್ಲೆನು; ಮತ್ತು ಬಹಳ ಸಂಗತಿಗಳು ಅವರಿಗೆ ಬೇಕಾಗಿಯೂ ಇಲ್ಲ. ಯಾವದೊಂದು ದೇಶಭಾಷೆಯ ಪುಸ್ತಕವನ್ನು ಅಸ್ಖಲಿತವಾಗಿ ಓದುವದು, ಸರ್ವ ಸಾಧಾರಣ ವ್ಯವಹಾರಕ್ಕೆ ಬೇಕಾಗುವ ಲೆಕ್ಕಗಳನ್ನು ತಪ್ಪದೆ ಬೇಗ ಮಾಡುವದು, ಈ ಎರಡು ಕೆಲಸಗಳನ್ನು ಮಾಡುವ ಸಾಮರ್ಥ್ಯವು ವಿದ್ಯಾರ್ಥಿಗಳಲ್ಲಿ ನಿರಂತರವಾಗಿ ಉಳಿದರೆ, ನೀವು ಬಹು ದೊಡ್ಡ ಕೆಲಸ ಮಾಡಿದಿರೆಂದು ಹೇಳಬಹುದು. ಮೇಲೆ ಹೇಳಿದ ರೀತಿಯಿಂದ ಓದಲಿಕ್ಕೆ ಕಲಿತವರು ಹಿಂದಿನಿಂದ ತಮ್ಮ ಸುಧಾರಣೆಯನ್ನು ಮಾಡಿಕೊಳ್ಳಬಹುದು. ಆದರೆ ಪ್ರಾರಂಭದಲ್ಲಿ ಅವರಾಗಿಯೇ ಸುಧಾರಣೆಯನ್ನು ಮಾಡಿಕೊಳ್ಳಲಾರರ. ಅವರಿಗೆ ಜ್ಞಾನದ ಸವಿ ಹತ್ತಲಿಕ್ಕೆ ಬೇಕು. ಈ ತರದ ಸವಿ ಹತ್ತಬೇಕಾದರೆ ಅದರ ಉಪಯೋಗವು ಅವರಿಗೆ ಗೊತ್ತಾಗಲಿಕ್ಕೆ ಬೇಕು. ಆದಕಾರಣ ನೀವು ಯಾವದೊಂದು ವಿಷಯವನ್ನು ಕಲಿಸುತ್ತಿರುವಾಗ ಅದರಿಂದಾಗುವ ಪ್ರಯೋಜನವನ್ನು ತಿಳಿಸಿಕೊಡಲಿಕ್ಕೆ ಯತ್ನ ಮಾಡಿರಿ. ಮತ್ತು ಹುಡುಗರು ತಮಗಾದ ಜ್ಞಾನವನ್ನು ತಮ್ಮ ನಿತ್ಯಕಾರ್ಯಗಳಲ್ಲಿ ಆಗಾಗ್ಗೆ ಉಪಯೋಗಿಸಿಕೊಳ್ಳುವಂತೆ ಮಾಡಿರಿ; ನೀವು ನಿಮ್ಮ ಪಾಠಗಳಲ್ಲಿ ನಿತ್ಯದ ವ್ಯವಹಾರಗಳಲ್ಲಿ ಆಗಾಗ್ಗೆ ದೃಷ್ಟಿಗೆ ಬೀಳುವ ಸಂಗತಿಗಳನ್ನು ದೃಷ್ಟಾಂತಗಳಾಗಿ ಉಪಯೋಗಿಸಿರಿ. ಅದರಿಂದ ಹುಡುಗರು ತಾವಾಗಿಯೇ ಹೆಚ್ಚು ಹೆಚ್ಚು ಕಲಿಯಲಿಕ್ಕೆ ಅಪೇಕ್ಷಿಸುವರು.

ಮೂರನೆಯ ಸಂಗತಿಯು, ನಿಮ್ಮ ವಿದ್ಯಾರ್ಥಿಗಳು ಉದ್ಯೋಗಿಗಳಾಗು ವಂತೆ ಯತ್ನವಮಾಡಿರಿ. ಈ ಜಗತ್ತಿನಲ್ಲಿ ಕೆಲಸವಮಾಡುವ ಜನರ ಕೊರತೆಯು ಇರುವದು. ಕೂತು ಮಾತಾಡುವವರು ಬಹುಜನರು; ಅವರು ನಮಗೆ ಬೇಡ. ನೀವು ನಿಮ್ಮ ವಿದ್ಯಾರ್ಥಿಗಳಿಗೆ ಗಿಡದ ವಿಷಯವಾಗಿ ಅನೇಕ ಸಂಗ ತಿಗಳನ್ನು ಹೇಳಿ ಗಿಳಿಗಳಂತೆ ನೆನಪಿನಲ್ಲಿಡಲಿಕ್ಕೆ ಹಚ್ಚಬೇಡಿರಿ. ಅವರು ತಮ್ಮ ಕೈಮುಟ್ಟ ಅನೇಕ ತರದ ಪ್ರಯೋಗಗಳನ್ನು ಮಾಡಿ ಹೊಸ ಹೊಸ ಸಂಗತಿಗಳನ್ನು ತಾವಾಗಿಯೇ ಹುಡುಕಿ ತೆಗೆದು ಕಲಿತುಕೊಳ್ಳಲಿ. ಬೇರೆ ಬೇರೆ ತರದ ಅಗಿಗಳನ್ನು ಹಚ್ಚಿ ನೀರು ಹಣಿಸಿ ಜೋವಾನವಮಾಡಲಿ. ಕ್ಷೇತ್ರಫಲ-ಘನಫಲಗಳನ್ನು ತೆಗೆಯುವ ನಿಯಮಗಳನ್ನು ಪಾಠವಮಾಡಿಸಿ ಅನೇಕ ಉದಾಹರಣೆಗಳನ್ನು ಬಿಡಿಸಲಿಕ್ಕೆ ಹಚ್ಚಬೇಡಿರಿ. ನಿಯಮಗಳನ್ನು ಡ್ರಾಯಿಂಗದ ಆಕೃತಿಗಳಿಂದ ಸಿದ್ಧವಮಾಡಿ ತೋರಿಸಿರಿ. ವಿದ್ಯಾರ್ಥಿಗಳಿಂದ ಲೂ ಆಕೃತಿಗಳನ್ನು ತೆಗೆಯಿಸಿರಿ. ನಿಮ್ಮ ಸಾಲೆಯ ಹೊಂದಿಗೆ ಒಂದು ಸಣ್ಣ ತೋಟವು ಇರಲಿ. ಸಾಧಾರಣ ವಸ್ತುಪಾಠಗಳಿಗೆ ಬೇಕಾಗುವ ಗಿಡ ಬಳ್ಳಿಗಳನ್ನು ಆ ತೋಟದಲ್ಲಿ ಹುಡುಗರಿಂದ ಹಚ್ಚಿಸಿರಿ. ನಾನಾಪ್ರಕಾರದ ಒಡವೆಗಳನ್ನು ತೋರಿಸಿ ಮಣ್ಣಿನಿಂದ ಅಂಥ ಒಡವೆಗಳನ್ನು ಮಾಡಲಿಕ್ಕೆ ಉತ್ತೇಜನವನ್ನು ಕೊಡಿರಿ. ಸಾರಾಂಶವೇನೆಂದರೆ, ಹುಡುಗರು ಪ್ರತಿಯೊಂದು ವಿಷಯವನ್ನು ಕಲಿಯುವಾಗ ಏನಾದರೂ ಕೆಲಸವನ್ನು ಮಾಡಲಿ. ಅವರು ಮಾತಾಡುವ ಗಿಳಿಗಳಾಗುವ ಅವಶ್ಯಕತೆ ಇಲ್ಲ.

ನಾಲ್ಕನೆಯ ಸಂಗತಿ. ಹುಡುಗರಿಗೆ ದೇಶಾಭಿಮಾನವನ್ನು ಕಲಿಸಿರಿ. ಬಾಯಿಂದ ಬಡಬಡಿಸುವದು ಅಥವಾ ಕೈಯಲ್ಲಿ ನಿಶಾನೆಗಳನ್ನು ಹಿಡಿದು ಕೊಂಡು ತಿರುಗುವದು ನಿಜವಾದ ದೇಶಾಭಿಮಾನವಲ್ಲ. ಈ ಗುಣವು ಔದಾ ರ್ಯದಂತೆ ಇರುವದು. ಅದರ ಪ್ರಾರಂಭವು ಎಲ್ಲಕ್ಕೂ ಮೊದಲು ತಮ್ಮಲ್ಲಿಯೇ ಆಗುವದು. ಹ್ಯಾಗಂದರೆ:—ತಾವು ಯಾರ ಕೂಡ ನಡೆಯುವ ಪ್ರಸಂಗವು ಪ್ರಾಪ್ತವಾಗುವದೋ, ಅಂದರೆ ತಮಗೆ ಯಾರ ಸಂಬಂಧವು ಒದಗುವದೋ ಅವರಿಗೆ ಮನಃಪೂರ್ವಕವಾಗಿ ಸಹಾಯಮಾಡುವದು, ಹಾಗು ತಮ್ಮ ಜೀವನ ಕ್ರಮವನ್ನು ಹೆಚ್ಚು ಸುಖಕರವಾಗುವಂತೆ ಮಾಡಿಕೊಳ್ಳುವದು, ಇದೇ ದೇಶಾಭಿಮಾನವು. ಪರರು ಉನ್ನತಸ್ಥಿತಿಯನ್ನು ಹೊಂದುವಂತೆ ಮಾಡುವದಾದರೂ ದೇಶಾಭಿಮಾನದಲ್ಲಿ ಎಣಿಸಲ್ಪಡುವದು. ವಿದ್ಯಾರ್ಥಿಗಳ

ತಾಯಿತಂದೆಗಳ ಸ್ನೇಹವನ್ನು ಸಂಪಾದಿಸಿರಿ. ಯಾವ ಹಳ್ಳಿಯಲ್ಲಿ ನೀವು ಕೆಲಸಮಾಡುವ ಪ್ರಸಂಗವು ಬರುವದೋ ಆ ಹಳ್ಳಿಯ ಹಿತದ ಸಲುವಾಗಿ ಯತ್ನಮಾಡುವವರಲ್ಲಿ ನೀವು ಒಬ್ಬರಾಗಿರಿ. ಕೇವಲ ಸಾಲೆಯ ಕೆಲಸದಲ್ಲಿಯೇ ಮನಸುಹಾಕಿಕೊಂಡು ಕೂಡ್ರಬೇಡಿರಿ. ಆ ಹಳ್ಳಿಯ ಜನರನ್ನು ಸುಧಾರಿಸುವದಕ್ಕೂ ಯತ್ನಮಾಡಿರಿ.

೫ನೆಯ ಸಂಗತಿ. ಹುಡುಗರಿಗೆ ಸಭ್ಯತನವನ್ನು ಕಲಿಸಿರಿ. ಇತ್ತಿತ್ತಲಾಗಿ ಹುಡುಗರು ಅಸಭ್ಯರೂ, ಉಡಾಳರೂ ಆಗುತ್ತಿರುವರೆಂದು ಅನೇಕ ಜನರು ಆಗಾಗ್ಗೆ ಟೀಕೆಯನ್ನು ಮಾಡುವದು ನಮ್ಮ ಕಿವಿಗೆ ಬರುವದು. ನಿಮ್ಮ ವಿದ್ಯಾರ್ಥಿಗಳು ಮಾತ್ರ ಇಂಥ ಟೀಕೆಗೆ ಆಸ್ಪದರಾಗದಂತೆ ಎಚ್ಚರ ಪಡಿರಿ. ಹುಡುಗರು ತಮ್ಮ ಶಿಕ್ಷಕರಿಗೂ, ಹಿರಿಯರಿಗೂ ಮಾನಕೊಡಲಿಕ್ಕೇ ಬೇಕೆಂದು ಆಗ್ರಹದಿಂದ ಹೇಳಿರಿ. ಕಾಲೊಳಗಿನ ಜೋಡುಗಳನ್ನು ಹೊರಗೆ ಕಳೆದು ಒಳಗೆ ಹೋಗುವದು, ಯಾರಾದರೂ ಪರಗೃಹಸ್ಥರು ಮನೆಗೆ ಬಂದರೆ ಉತ್ಥಾಪನವನ್ನು ಕೊಡುವದು, ಎರಡನೆಯವರಿಂದ ಪಾಟ, ಪುಸ್ತಕ, ಪೆನ್ಸಿಲುಗಳನ್ನು ಇಸಕೊಂಡರೆ ಕೊಟ್ಟವರ ಆಭಾರ ಮನ್ನಿಸುವದು, ಯಾರಾದರೂ ತಮ್ಮ ತೊಂದರೆಯನ್ನು ದೂರ ಮಾಡಿದರೆ ಅವರ ಉಪಕಾರ ನೆನಿಸುವದು, ಇಹೇ ಮೊದಲಾದ ಸಭ್ಯತನದ ನಡಾವಳಿಗಳು ಹುಡುಗರ ಮನಸಿನಲ್ಲಿಯೂ, ವರ್ತನದಲ್ಲಿಯೂ ಸ್ಪಷ್ಟವಾಗಿ ಬಿಂಬಿಸುವಂತೆ ಮಾಡತಕ್ಕದ್ದು.

೬ನೆಯ ಸಂಗತಿ. ಪೇಟೆಯಲ್ಲಿಯೂ, ನಾಟಕಶಾಲೆಯಲ್ಲಿಯೂ, ಮನಸ್ಸಿಗೆ ಉಂಟಾಗುವ ಸುಖಕ್ಕಿಂತ ಸುವ್ಯವಸ್ಥಿತವಾದ ಮನೆಯಲ್ಲಿ ಎಷ್ಟೋ ಪಾಲು ಹೆಚ್ಚು ಸುಖವು ದೊರೆಯುವದೆಂಬದು ಹುಡುಗರಿಗೆ ಚನ್ನಾಗಿ ತಿಳಿಯುವಂತೆ ಮಾಡಿರಿ.

೭ನೆಯ ಸಂಗತಿ. ಈ ಸಾಲೆಯಲ್ಲಿ ನೀವು ಎಷ್ಟೋ ಕಲಾಕೌಶಲ್ಯಗಳನ್ನೂ ಕೆತ್ತಿಗೆಯ ಕೆಲಸಗಳನ್ನೂ ಅತ್ಯುತ್ತಮವಾದ ಮಾದರಿಗಳನ್ನೂ ಮೋಹಕವಾದ ತಸಬೀರುಗಳನ್ನೂ ಹೆಸರಾದ ಗ್ರಂಥಕಾರರ ಗ್ರಂಥದೊಳಗಿನ ಅತ್ಯುತ್ಕೃಷ್ಟ ಅವತರಣಗಳನ್ನೂ ನೋಡಿ ಆನಂದಪಡಲಿಕ್ಕೆ ಕಲಿತಿರುವಿರಿ. ಅದೇ ಪ್ರಕಾರ ನಿಮ್ಮ ವಿದ್ಯಾರ್ಥಿಗಳ ಹೃದಯದಲ್ಲಿಯೂ ಜಗತ್ತಿನೊಳಗಿನ ಸುಂದರ ವಸ್ತುಗಳ ವಿಷಯವಾಗಿಯೂ, ಉದಾತ್ತ ವಿಚಾರಗಳ

ವಿಷಯವಾಗಿಯೂ ಪ್ರೇಮವನ್ನು ಹುಟ್ಟಿಸಲಿಕ್ಕೆ ಯತ್ನಮಾಡಿರಿ. ಅತ್ಯುತ್ತಮವಾದ ವಸ್ತುಗಳನ್ನು ಆರಿಸಲಿಕ್ಕೆ ಕಲಿಸಿರಿ. ಓದಲಿಕ್ಕೆ ತಕ್ಕವುಗಳಾದ ಪುಸ್ತಕಗಳು ಯಾವವೆಂಬದನ್ನು ಅವರಿಗೆ ಸೂಚಿಸಿರಿ.

ಉತ್ತಮೋತ್ತಮವಾದಂಥ ನಿಸರ್ಗಜನ್ಯವಾದ ಬಡವೆಗಳೂ, ಮನುಷ್ಯಕೃತಿಯ ಬಡವೆಗಳೂ ಅವರ ದೃಷ್ಟಿಗೆ ಬೀಳುವಂತೆ ವ್ಯವಸ್ಥೆಯನ್ನು ಮಾಡಿರಿ. ಮತ್ತು ಅವುಗಳ ವಿಷಯವಾಗಿ ಅವರ ಮನಸಿನಲ್ಲಿ ಕೌತುಕವು ಉಂಟಾಗುವಂತೆ ಯತ್ನಮಾಡಿರಿ.

ಆನೆಯೆ, ಅಥವಾ ಕಟ್ಟಕಡೆಯ ಸಂಗತಿಯು ಧರ್ಮವು ಧರ್ಮದಿಂದಲೆ ಮನುಷ್ಯನ ಅಂತಃಶುದ್ಧಿಯು ಆಗುವದು. ಧರ್ಮದಿಂದಲೆ ಅತನ ನಿಜವಾದ ಉನ್ನತಿಯು ಆಗುವದು. ಈ ಮಾತನ್ನು ನೀವು ಎಂದೂ ಮರೆಯಬೇಡಿರಿ. ಧಾರ್ಮಿಕಶಿಕ್ಷಣವನ್ನು ಸಾಲೆಗಳ ಅಭ್ಯಾಸಕ್ರಮದಲ್ಲಿ ಸೇರಿಸಬೇಕೆಂದು ಎಷ್ಟೋ ಜನರು ವಾದಿಸುವದನ್ನು ನಾವು ಕೇಳುತ್ತೇವೆ. ಆದರೆ ಈ ಅಭಿಪ್ರಾಯದಲ್ಲಿ ನನ್ನ ವಿಶ್ವಾಸವಿರುವದಿಲ್ಲ. ಧರ್ಮ ಗ್ರಂಥಗಳಲ್ಲಿ ಏನು ಬರೆದಿರುವದೆಂಬದನ್ನು ತಿಳಕೊಳ್ಳುವ ಅವಶ್ಯಕತೆಯು ಇದ್ದಂತೆ ತೋರುವದಿಲ್ಲ. ಆದರೆ ಅವಶ್ಯವಿದ್ದ ಮುಖ್ಯ ಸಂಗತಿಯು ಯಾವದೆಂದರೆ:-ದೇವರಿಗೂ ತನ್ನ ಗೂ ಇರುವ ಸಂಬಂಧವನ್ನು ಯೋಗ್ಯರೀತಿಯಿಂದ ಅರಿತುಕೊಂಡು, ಅದರಂತೆ ನಡೆಯುವದು. ಧಾರ್ಮಿಕ ಶಿಕ್ಷಣದಿಂದ ಏನೂ ಪ್ರಯೋಜನವಿಲ್ಲ; ಆದರೆ ಧಾರ್ಮಿಕ ಪರಿಸ್ಥಿತಿಯು ಮಾತ್ರ ಬಹಳ ಪ್ರಯೋಜನಕರವಾಗಿರುವದು. ಅಗರಂತೆಯೇ ಧಾರ್ಮಿಕ ಶಿಕ್ಷಣವು ನಮಗೆ ಬೇಕಾಗಿಲ್ಲ; ಆದರೆ ಧಾರ್ಮಿಕ (ವಾಪಕ್ಕೆ ಹೆದರಿ ನಡೆಯುವ) ಶಿಕ್ಷಕರು ಮಾತ್ರ ಬೇಕಾಗಿರುವರು. ಧರ್ಮಗ್ರಂಥಗಳಲ್ಲಿ ಹೇಳಿದ ಸಂಗತಿಗಳ ಬಗ್ಗೆ ಬಡಬಡಿಸುವವರೂ ವಾದವಿವಾದವನ್ನು ಮಾಡುವವರೂ ನಮಗೆ ಬೇಕಾಗಿಲ್ಲ; ಆದರೆ ಧರ್ಮನಿಷ್ಠೆಯಿಂದ ನಡೆಯುವ ಮಹನೀಯರು ಬೇಕಾಗಿರುವರು.

ಸರಿ. ಜಗತ್ತಿನಲ್ಲಿ ನಡೆಯುವಾಗ ನಿಮ್ಮ ಮನಸಿನಲ್ಲಿ ಯಾವ ಯಾವ ಧ್ಯೇಯಗಳನ್ನು ಇಟ್ಟುಕೊಂಡು ನಡೆಯತಕ್ಕದ್ದೆಂಬದನ್ನು ನಿಮ್ಮ ಮುಂದೆ ಇಟ್ಟಿದ್ದೇನೆ. ಶಿಕ್ಷಣವೆಂದರೆ ತಮ್ಮ ತಮ್ಮ ಪರಿಸ್ಥಿತಿಯನ್ನು ಅರಿತು ಅದಕ್ಕೆ ತಕ್ಕಂತೆ ನಡೆಯುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳಲ್ಲಿ ಉಂಟುಮಾಡು

ವದು. ಈ ಮಾತನ್ನೂ ಹಿಂದೆ ಹೇಳಿದ ಎಂಟು ಸಂಗತಿಗಳನ್ನೂ ಧ್ಯೇಯವಾಗಿಟ್ಟುಕೊಂಡು ನೀವು ನಿಮ್ಮ ಕೆಲಸವನ್ನು ಮನಃಪೂರ್ವಕವಾಗಿ ಮಾಡಲು ಯತ್ನಿಸಿದರೆ ನಿಶ್ಚಯವಾಗಿ ನಿಮಗೆ ಯಶವು ದೊರೆಯುವದು; ಹಾಗು ಅದರಲ್ಲಿ ಆದ ಸುಧಾರಣೆಗಳನ್ನು ಕಂಡು ನಿಮಗೇ ಆಶ್ಚರ್ಯವಾಗುವದು."

ಸಕ್ಕರೆಯೂ ಸರಾಯಿಯೂ.

ವಿಲಾಯತಿಯೊಳಗಿನ ಪ್ರತಿಯೊಂದು ಕುಟುಂಬಕ್ಕೆ ಇತ್ತಿತ್ತಲಾಗಿ ಸಕ್ಕರೆಯು ಹೆಚ್ಚು ವೆಚ್ಚವಾಗಹತ್ತಿರುವದು. ಪ್ರತಿಯೊಂದು ಕುಟುಂಬಕ್ಕೆ ವರ್ಷಕ್ಕೆ ಸರಾಸರಿಯಿಂದ ೩೬ ಪೌಂಡಗಳಿಂದ ಳಗಿಂ ಪೌಂಡುಗಳ ವರೆಗೆ ಸಕ್ಕರೆಯು ಹಿಡಿಯುವದೆಂದು ಲೆಕ್ಕದಿಂದ ಹೊರಟಿರುತ್ತದೆ. ತಿಂಬುಂಬುವ ಪದಾರ್ಥಗಳನ್ನು ಮಾರುವ ಅಂಗಡಿಗಳಲ್ಲಿ ಸೀ ಪದಾರ್ಥಗಳ ಮಾರಾಟವು ಬಳಕೆಯಾಗುವದು. ಚಹಾ ಕಾಫಿ ಪಾನವಂತೂ ಮಿತಿ ಮೀರಿ ಬೆಳೆಯಹತ್ತಿರುವದು. ಇದರಿಂದ ಬಂದು ಅತ್ಯುತ್ಕೃಷ್ಟವಾದಂಥ ಹಿತಕರವಾದ ಪರಿಣಾಮವಾದದ್ದು ಕಂಡು ಬರುತ್ತದೆ; ಅದು ಯಾವದೆಂದರೆ, ಸಕ್ಕರೆಯನ್ನು ತಿನ್ನುವ ಚಟವು ಹೆಚ್ಚಿದಷ್ಟು ಬೆಳೆದಂತೆ ಮದ್ಯಪಾನಪ್ರವೃತ್ತಿಯು ಕಡಿಮೆ ಕಡಿಮೆ ಆಗುತ್ತಿರುವದು. ಆ ದೇಶಗಳಲ್ಲಿ ಹೆಂಗಸರು ಸರಾಯಿಯನ್ನು ಕುಡಿಯುವದು ಕಡಿಮೆ. ಅದರಿಂದ ಅವರಿಗೆ ಸೀ ಪದಾರ್ಥಗಳು ಹೆಚ್ಚು ಬೇಕಾಗುವವು. ಸಕ್ಕರೆಯನ್ನು ತಿನ್ನುವ ಚಟವು ಹೆಚ್ಚಿದ ಬೆಳೆದಂತೆ, ಆ ಪ್ರಮಾಣದಿಂದ ಸರಾಯಿಯನ್ನು ಕುಡಿಯುವ ಪ್ರವೃತ್ತಿಯು ಕಡಿಮೆಯಾಗುವದೆಂಬ ಅನುಭವವು ಪ್ರಸಿದ್ಧವಾಗಹತ್ತಿರವದು. ಇದು ಒಳ್ಳೇ ಸಂಗತಿಯು! ಈ ಸಂಗತಿಯು ಮದ್ಯಪಾನವನ್ನು ಬಿಡಿಸುವಬಗ್ಗೆ ಯತ್ನಿಸುವವರ ಲಕ್ಷದಲ್ಲಿಡಲಿಕ್ಕೆ ತಕ್ಕದ್ದಾಗಿರುವದು. ಈ ದುರ್ವ್ಯಸನವನ್ನು ಬಿಡಿಸುವದಕ್ಕಾಗಿ ಆ ಜನರಿಗೆ ಸಕ್ಕರೆಯನ್ನು ತಿನ್ನಲಿಕ್ಕೆ ಹಚ್ಚುವ ಈ ಉಪಾಯವು ಸುಲಭವಾಗಿರುವದು.

ಸರ್ಪದಂಶದ ಮೇಲೆ ಹೊಸ ಉಪಾಯವು.

ಈ ಉಪಾಯವು ಪರಳ ಮತ್ತು ಕಸಾವಲಿ ಎಂಬ ಸ್ಥಳಗಳಲ್ಲಿಯ ಸರಕಾರಿ ಪ್ರಯೋಗಶಾಲೆಗಳಲ್ಲಿ ನಡೆದಿರುವದು. ಅದು ಕೆಳಗೆ ಬರೆದಂತೆ:-

ಮುಂಬಯಿಯ ಪರಳ ಲ್ಯಾಬೋರೇಟರಿಯಲ್ಲಿ ಹಲವು ತರದ ಸರ್ಪಗಳನ್ನಿಟ್ಟಿರುವರು. ಪ್ರಯೋಗಕ್ಕಾಗಿ ಅವುಗಳ ವಿಷವನ್ನು ತೆಗೆಯುವದು ಹ್ಯಾಗಂದರೆ, ಸರ್ಪವನ್ನಿಟ್ಟ ಡಬ್ಬಿಯ ಮುಚ್ಚಳವನ್ನು ತೆಗೆದೊಡನೆ ಒಳಗಿದ್ದ ಸರ್ಪವು ಬಾಯಿ ತೆರೆದು ಹೆಡೆ ತೆಗೆದು ಫೂತ್ಕರಿಸ ಹತ್ತುವದು. ಕೂಡಲೆ ಅದರ ಕುತ್ತಿಗೆಯನ್ನು ಮುಷ್ಟಿಯಿಂದ ಹಿಡಿದು ಅದನ್ನು ಡಬ್ಬಿಯ ಹೊರಗೆ ಎಳೆದು ತೆಗೆದು ಅದರ ಬಾಲದ ಮೇಲೆ ಕಾಲಿಟ್ಟು ಹಾಗೆಯೇ ಕೆಲ ಹೊತ್ತು ಹಿಡಿದಿಡುವರು. ಬಳಿಕ ತೆಳ್ಳನ್ನ ಅರಿವೆ ಹೊದಿಸಿದ ಒಂದು ಕಾಜಿನ ಗ್ಲಾಸನ್ನು ಅದರ ಬಾಯಿಗೆ ಹಿಡಿಯುತ್ತಾರೆ. ಆಗ ಸಿಟ್ಟಿಗೆದ್ದ ಆ ಸರ್ಪವು ಆ ಗ್ಲಾಸಿನ ಅಂಚಿಗೆ ಕಡಿಯ ಹತ್ತುವದು. ಅದರ ಮುಂದಿನ ಸೂಲದ ಹಲ್ಲುಗಳು ಆ ಅರಿವೆಯೊಳಗಿಂದ ಪಾರಾಗಿ ಕೆಳಗೆ ಹೋಗುವವು, ಮತ್ತು ಗ್ಲಾಸಿಗೆ ಹತ್ತಿ ಆ ಹಲ್ಲುಗಳೊಳಗಿಂದ ಅದರ ವಿಷವು ಆ ಗ್ಲಾಸಿನಲ್ಲಿ ಇಳಿದು ಅಲ್ಲಿ ಒಟ್ಟಾಗುವದು. ಬಳಿಕ ಆ ಸರ್ಪಕ್ಕೆ ಪಿಚಕಾರಿಯಿಂದ ಆಹಾರವನ್ನು ಹಾಕಿ ಅದನ್ನು ಡಬ್ಬಿಯಲ್ಲಿಡುವರು. ಮುಂದೆ ಹತ್ತು ದಿವಸಕ್ಕೆ ಮತ್ತೆ ಇದೇ ಪ್ರಕಾರ ಅದರ ವಿಷವನ್ನು ತೆಗೆಯುವರು. ಈ ಪ್ರಕಾರ ಸರ್ಪವಿಷವನ್ನು ತೆಗೆಯುವವರು ಬಹಳ ಚಪಲರಿರಬೇಕಾಗುವದೆಂಬದನ್ನು ಹೇಳುವ ಅವಶ್ಯವಿಲ್ಲ. ಯಾಕಂದರೆ ಸರ್ಪದ ಕುತ್ತಿಗೆಯನ್ನು ಹಿಡಿಯುವಾಗ ಸ್ವಲ್ಪ ತಪ್ಪಿದರೆ ಜೀವಕ್ಕೇ ಎರವಾಗ ಬೇಕಾಗುವದು. ಈ ಪ್ರಕಾರ ತೆಗೆದ ಸರ್ಪವಿಷವನ್ನು ಪರಳದಲ್ಲಿ ಸುಣ್ಣದ ಕಾವಿನಮೇಲೆ ಬಿಣಗಿಸಿ ಅದನ್ನು 'ಕಸಾವಲಿ'ಗೆ ಕಳಿಸುವರು. ಅಲ್ಲಿ ಅದನ್ನು ಉಪ್ಪಿನ ನೀರಲ್ಲಿ ಕರಗಿಸಿ ಬಹಳ ಸ್ವಲ್ಪ ಪ್ರಮಾಣದಿಂದ ಕುದುರೆಯ ಮೈಯೊಳಗೆ ಪಿಚಕಾರಿಯಿಂದ ಸೇರಿಸುವರು. ಅದು ಬಹಳ ಸ್ವಲ್ಪ ಪ್ರಮಾಣದಿಂದ ಇರುವದರಿಂದ ಆ ಕುದುರೆಗೆ ಅದರಿಂದ ಏನೂ ಅಪಾಯವಾಗುವದಿಲ್ಲ. ಈ ವಿಷದ ಪ್ರಮಾಣವನ್ನು ಕ್ರಮವಾಗಿ ಹೆಚ್ಚು ಹೆಚ್ಚು ಮಾಡುತ್ತ ಹೋಗುವರು. ಎರಡು ವರ್ಷಗಳಲ್ಲಿ ಆ ಕುದುರೆಯ ಮೈಯು ಸರ್ಪವಿಷದ ಆಟವು ಏನೂ ಸಾಗದಂತೆ ಆಗುತ್ತದೆ. ಆಗ ಮೊದಲಿನ ೨೦೦ ಪಟ್ಟು ವಿಷವು ಅದರ ಮೈಯಲ್ಲಿ ಭೇದಿಸಿದರೂ ಅದಕ್ಕೆ ಏನೂ ಅಪಾಯವಾಗುವದಿಲ್ಲ. ಇಂಥ ಕುದುರೆಯ ರಕ್ತದಿಂದ ಸರ್ಪ ವಿಷದ ಮೇಲೆ ಉಪಾಯವನ್ನು ಯೋಜಿಸಿರುವರು. ಆ ಕುದುರೆಯ ರಕ್ತದೊಳಗಿನ ಸೂಕ್ಷ್ಮ

ಪಿಂಡಗಳನ್ನು ತೆಗೆದ ಬಳಿಕ ಉಳಿಯುವ ನೀರಿನಂಥ ದ್ರವರೂಪ ಪದಾರ್ಥವನ್ನು ಸರ್ಪವು ಕಡಿದ ಮನುಷ್ಯನ ಮೈಯಲ್ಲಿ ಕೂಡಲೆ ಪಿಚಕಾರಿಯಿಂದ ಸೇರಿಸಿದರೆ, ಆವನಿಗೆ ವಿಷದ ಬಾಧೆಯು ಆಗುವದಿಲ್ಲ. ಮುಂಬಯಿಯ "ಖಂಬಾಲಾ" ಮರಡಿಯ ಮೇಲಿರುವ ಕೆಲವು ಮಾಳೀ ಜನರಲ್ಲಿ ಇದರ ಅನುಭವವು ಚನ್ನಾಗಿ ಬಂದಿರುವದು. ಅವರಲ್ಲಿ ಕೆಲವರಿಗೆ ಹಾವು ಕಡಿದೊಡನೆ ಅವರ ಮೈಯಲ್ಲಿ ಪಿಚಕಾರಿಯಿಂದ ಈ ರಕ್ತ ದ್ರವವನ್ನು ಹಾಕಿದ ಬಳಿಕ ಅವರಿಗೆ ವಿಷದ ಬಾಧೆಯಾಗದೆ ಒಳ್ಳೆಯ ಗುಣವು ಬಂದಿತು. ಈ ಉಪಾಯವು ಗುಣಕಾರಿಯೆಂಬ ವಿಷಯದಲ್ಲಿ ಈ ಪ್ರಕಾರ ಅನುಭವವು ಬಂದಿದ್ದರೂ ಇದರಲ್ಲಿ ಬಂದು ಕೊರತೆಯು ಇರುವದು. ಯಾವ ಜಾತಿಯ ಸರ್ಪದ ವಿಷವನ್ನು ತೆಗೆದುಕೊಂಡು ಆ ರಕ್ತ ದ್ರವವನ್ನು ಸಿದ್ಧಮಾಡಿರುವದೋ ಆ ಜಾತಿಯ ಹಾವು ಕಡಿದಾಗಲೇ ಆ ರಕ್ತ ದ್ರವದ ಉಪಯೋಗವಾಗುವದು. ಬೇರೆ ಜಾತಿಯ ಹಾವುಗಳ ವಿಷಕ್ಕೆ ಅದರ ಉಪಯೋಗವಾಗುವದಿಲ್ಲ. ಅಂದರೆ ಪ್ರತಿಯೊಂದು ಜಾತಿಯ ಸರ್ಪದ ವಿಷಯವಾಗಿ ಈ ದ್ರವವನ್ನು ಬೇರೆ ಬೇರೆ ಮಾಡಬೇಕಾಗುವದು. ಮತ್ತು ಮನುಷ್ಯನಿಗೆ ಹಾವು ಕಡಿದೊಡನೆ ಆ ಹಾವು ಯಾವ ಜಾತಿಯದೆಂಬದು ತಿಳಿದ ಹೊರತು ಈ ಉಪಾಯವನ್ನು ಮಾಡಲಿಕ್ಕಾಗುವದಿಲ್ಲ.

ಓದಿ ವಿಚಾರಮಾಡತಕ್ಕ ಮಾತುಗಳು.

೧. ಪ್ರವಾಸಿಮನುಷ್ಯನಿಗೆ ದಾರಿಯಲ್ಲಿ ದೊಡ್ಡ ದೊಡ್ಡ ಗುಡ್ಡಗಳು ಕಾಣುವಂತೆ ಮನುಷ್ಯನ ಜೀವನಯಾತ್ರೆಯಲ್ಲಿ ಸಂಕಟಗಳು ಕಾಣಿಸಿಕೊಳ್ಳುವವು. ಅವು ದೂರದಿಂದ ಬಹಳ ದೊಡ್ಡವಾಗಿಯೂ, ದುರ್ಗಮವಾಗಿಯೂ ಕಂಡರೂ ಸವಿಾಪಿಸಿದಂತೆ ಅವುಗಳ ಆ ಗುಣವು ಕಡಿಮೆಯಾಗುತ್ತದೆ.

೨ ನಿರುದ್ಯೋಗಿಗಳು ಉದ್ಯೋಗಿಗಳ ವೇಳೆಯನ್ನು ನಾಚಿಕೆಯಿಲ್ಲದೆ ಕಳೆಯುತ್ತಾರೆ. ಅವರು ಉದ್ಯೋಗಿಗಳ ವೇಳೆಯನ್ನು ಅವರ ಕಣ್ಣಿದುರಿಗೇ ಕವಿಯುತ್ತಾರೆಂದು ಹೇಳಬಹುದು. ತಿರುಕನು ಮನೆ ಮನೆಗೆ ತಿರುಗಿ ರೊಟ್ಟಿಯ ತುಣುಕುಗಳನ್ನು ಸಂಗ್ರಹ ಮಾಡುವಂತೆ ನಿರುದ್ಯೋಗಿಯು ಎರಡನೆಯವರ ವೇಳೆಯ ಮೇಲೆ ತನ್ನ ಕಾರ್ಯಭಾಗವನ್ನು ಪೂರೈಸಿಕೊಳ್ಳುವನು.

ಶಿವಾಜಿಯೂ ಅಲೆಗ್ಝಾಂಡರನೂ.

(ಭಾಷಾಂತರ).



ಜಗತ್ತಿನಲ್ಲಿ ಇಂದಿನವರೆಗೆ ಆಗಿ ಹೋದ ಅತಿವಿಖ್ಯಾತರೂ ವಿಜಯಿಗಳೂ ಆದ ವೀರರಲ್ಲಿ ಅಲೆಗ್ಝಾಂಡರನೂ ಶಿವಾಜಿಯೂ ಪ್ರಮುಖರೆಂದು ಎಣಿಸಲ್ಪಡುವರು. ತನ್ನ ೩೨ ವರ್ಷದ ಆಯುಃಕ್ರಮದಲ್ಲಿ, ಅದರಲ್ಲಿಯೂ ೧೩ ವರುಷಗಳ ಅಡಳಿತದಲ್ಲಿ ಯುರೋಪದೊಳಗಿನ ದಾನ್ಯೂಬ ನದಿಯಿಂದ ಹಿಂದುಸ್ತಾನದೊಳಗಿನ ಬಿಯಾ ನದಿಯವರೆಗೆ, ಅದರಂತೆಯೇ ಮಧ್ಯ ಏಶಿಯದೊಳಗಿನ ಸಮುರ್ಕಂದ ಶಹರದಿಂದ ದಕ್ಷಿಣದಲ್ಲಿ ಕರಾಚಿಯ ವರೆಗೆ ಹಬ್ಬಿರುವ ಅಖಂಡ ಭೂಭಾಗವನ್ನು ಸ್ವತಃ ಗೆದ್ದಂಥ ಶಿಕಂದರಬಾದಶಹನಲ್ಲಿ ಕೆಲವು ಲೋಕೋತ್ತರವಾದ ಗುಣಗಳು ಇರಲಿಕ್ಕೆ ಬೇಕೆಂಬದು ಸ್ಪಷ್ಟವಾದ ಸಂಗತಿಯೇ ಸರಿ.

ಶಿಕಂದರನು ಹಿಂದುಸ್ತಾನದ ಮೇಲೆ ದಂಡೆತ್ತಿ ಬಂದು ಏಶಿಯಾ ಯುರೋಪ ಖಂಡಗಳ ನಡುವಿನ ವ್ಯವಹಾರವನ್ನು ಬೆಳೆಸಿದನು. ಹಾಗೂ ಪರಸ್ಪರರಿಗೆ ಪರಸ್ಪರರ ಸುಧಾರಣೆಗಳನ್ನು ಒದಗಿಸಿ ಕೊಟ್ಟನು. ಇಪ್ಪತ್ತೈರಡು ನೂರು ವರ್ಷಗಳ ಪೂರ್ವದಲ್ಲಿ ಪ್ರಯಾಸಕ್ಕೆ ಯಾವ ತರದ ಅಡಚಣಿಗಳಿದ್ದವು, ಆಗಿನ ಕಾಲದಲ್ಲಿ ನೂರಿನ್ನೂರು ಮೈಲುಗಳ ಅಂತರದಲ್ಲಿರುವ ಪ್ರದೇಶಗಳ ಸಂಬಂಧದಿಂದ ಜನರಲ್ಲಿ ಎಷ್ಟು ಅಜ್ಞಾನವಿತ್ತು, ಎಂಬ ಸಂಗತಿಗಳನ್ನು ಲಕ್ಷಕ್ಕೆ ತಂದರೆ, ಶಿಕಂದರನ ಕೃತ್ಯಗಳು ಅತ್ಯಂತ ಆಶ್ಚರ್ಯಕರವಾಗಿ ತೋರುವವು. ಶಿವಾಜಿಯು ಒಂದು ವೇಳೆ ಶಿಕಂದರನಂತೆ ವಿಸ್ತಾರವಾದ ಭೂಭಾಗವನ್ನು ಗೆದಿಯದೆ ಇದ್ದರೂ, ಅವನ ಕೃತಿಗಳು ಶಿಕಂದರನ ಕೃತಿಗಳಿಗಿಂತ ಕಡಿಮೆ ತರದವೆಂದು ಹೇಳುವಂತಿಲ್ಲ. ರಾಜ್ಯವನ್ನು ವಿಸ್ತರಿಸುವದಕ್ಕಿಂತ ಅದನ್ನು ಸ್ಥಾಪಿಸುವದು ನೂರು ಪಟ್ಟು ಕಠಿಣವಾಗಿರುವದು. ಮೇಲಾಗಿ ಮೊದಲಿನ ರಾಜ್ಯಗಳು ಹೀನಾವಸ್ಥೆಗೆ ಬಂದಿದ್ದು ಶತ್ರುಗಳು ದುರ್ಬಲರಾಗಿದ್ದಾಗ ಹೊಸ ರಾಜ್ಯವನ್ನು ಸ್ಥಾಪಿಸುವ ಮಾತು ಬೇರೆ; ಮೊಗಲ ಸಾಮ್ರಾಜ್ಯದಂಥ ಅತ್ಯಂತ ಪ್ರಬಲವಾದ ದೃಢಮೂಲವಾದ ಸಾಮ್ರಾಜ್ಯವನ್ನು ಔರಂಗಜೇಬನಂಥ ಕರ್ತೃತ್ವಶಾಲಿಯೂ ವೀರನೂ

ಆದ ಬಾದಶಹನು ಆಳುತ್ತಿರುವಾಗ ಅವನನ್ನು ಲಕ್ಷಕ್ಕೆ ತರದೆ ಸ್ವತಂತ್ರವಾದ ಸ್ವರಾಜ್ಯವನ್ನು ಸ್ಥಾಪಿಸುವ ಮಾತು ಬೇರೆ. ಇಂಥ ಮಹತ್ಕಾರ್ಯವನ್ನು ಜರುಗಿಸಿದಂಥ ಶಿವಾಜಿಯಲ್ಲಿಯಾದರೂ ಅಂಥವೇ ಕೆಲವು ಅಸಾಧಾರಣವಾದ ಗುಣಗಳು ಇರಲಿಕ್ಕೆ ಬೇಕೆಂಬದು ಸಹಜವು.

ದುರ್ಗಮವಾದ ಮಾರ್ಗಗಳ ಹಾಗೂ ಬೇರೆ ಬೇರೆ ಸ್ಥಳಗಳ ಅಜ್ಞಾನದ ಮೂಲಕವಾಗಿ ಶಿಕಂದರನ ಜಯದ ವಿಷಯಕ್ಕೆ ಮಹತ್ವವುಂಟಾದಂತೆ, ಮೊಗಲ ಸಾಮ್ರಾಜ್ಯದಂಥ ವಿಸ್ತೀರ್ಣವಾದ ಪರರಾಜ್ಯ, ಔರಂಗಜೇಬನಂಥ ಪ್ರಬಲನಾದ ವೈರಿ ಈ ಸಂಗತಿಗಳ ಮೂಲಕವಾಗಿ ಶಿವಾಜಿಯ ಕಾರ್ಯಕ್ಕಾದರೂ ಅಲೌಕಿಕತ್ವವು ಪ್ರಾಪ್ತವಾಗಿರುವದು. ಶಿವಾಜಿಯ ಹಾಗೂ ಶಿಕಂದರನ ಚರಿತ್ರಗಳನ್ನು ಅವಲೋಕನ ಮಾಡಿದರೆ, ಅವುಗಳಲ್ಲಿ ಆ ಮಹಾ ಪುರುಷರ ವಿಶಿಷ್ಟ ಗುಣಗಳೂ ಕರ್ತೃತ್ವ ಶಕ್ತಿಯೂ ಅಡಿಗಡಿಗೆ ಗೋಚರವಾಗುವವು. ಆ ವೀರಪುರುಷರ ಚರಿತ್ರಗಳೊಳಗಿನ ಕೆಲ ಕೆಲವು ಪ್ರಸಂಗಗಳಂತೂ ಬಹು ಮಟ್ಟಿಗೆ ಒಂದನ್ನೊಂದು ಹೋಲುವವು. ಅದರಿಂದ ಅಂಥ ಪ್ರಸಂಗಗಳನ್ನಷ್ಟೇ ಅವಲೋಕನ ಮಾಡಿದರೂ ಸಹ ಆ ಇಬ್ಬರಲ್ಲಿ ಇದ್ದ ವಿಶಿಷ್ಟ ಗುಣಗಳೂ ಅವರ ಯೋಗ್ಯತೆಯೂ ಗೊತ್ತಾಗಬಹುದು; ಹಾಗೂ ವಾಚಕರು ಅವುಗಳನ್ನು ತುಲನೆ ಮಾಡಲು ಸಮರ್ಥರಾಗಬಹುದು. ಆದ್ದರಿಂದ ಅಂಥ ಕೆಲವು ಪ್ರಸಂಗಗಳನ್ನಷ್ಟೇ ಇಲ್ಲಿ ಹೇಳುವೆವು.

೧. ದಾದೋಜಿ ಕೊಂಡದೇವನೆಂಬ ಅತ್ಯಂತ ನಿಯಮಿತತನವುಳ್ಳವನೂ ವರ್ಚಸ್ಸುಳ್ಳವನೂ ಆದ ಗುರುವಿನಿಂದ ಶಿವಾಜಿಗೆ ಶಿಕ್ಷಣವು ದೊರೆಯಿತು. ಶಿಕಂದರನ ಬಾಲ್ಯದ ಗುರುವಾದ ಲಿಟಿನಿಡಾಸನಾದರೂ ಹಾಗೆಯೇ ವರ್ಚಸ್ಸುಳ್ಳವನೆಂದು ಹೆಸರಾಗಿದ್ದನು. ಲಿಟಿನಿಡಾಸನು ಶಿಕಂದರನ ತಾಯಿಗೆ ದೂರದ ಸಂಬಂಧಿಕನಾಗಿದ್ದನು. ದಾದೋಜಿ ಕೊಂಡದೇವನಿಗೂ ಜಿಜಾಬಾಯಿಗೂ ಆ ತರದ ಪ್ರತ್ಯಕ್ಷ ಆಪ್ತತ್ವವಿಲ್ಲದಿದ್ದರೂ ಆಕೆಗೆ ಅವನು ಮಲತಮ್ಮನಿಗಿಂತ ಹೆಚ್ಚು ಸವಿಾಪದ ಸಂಬಂಧಿಕನಾಗಿದ್ದನೆಂಬದಕ್ಕೆ ಸಂಶಯವಿಲ್ಲ. ಆ ಇಬ್ಬರೂ ಗುರುಗಳು ತಮ್ಮ ಶಿಷ್ಯರ ಲಕ್ಷವನ್ನು ಚಿಕ್ಕಂದಿನಿಂದಲೇ ಆಯಾ ದೇಶಗಳೊಳಗಿನ ಪ್ರಾಚೀನ ವೀರರಸಪ್ರಧಾನವಾದ ಕಾವ್ಯಗಳ ಕಡೆಗೆ ಒಲಿಸಿ ಬಿಟ್ಟಿದ್ದರು. ಈ ರೀತಿಯಾಗಿ ಗುರುಗಳ ಗುಣಗಳ ಹಾಗೂ ಅವರು

ಕೊಟ್ಟು ಶಿಕ್ಷಣದ ಸಂಬಂಧದಿಂದ ಶಿವಾಜಿಗೂ ಶಿಕಂದರನಿಗೂ ಬಹು ಮಟ್ಟಿಗೆ ಸಾಮ್ಯವಿರುವದು.

೨. ರಾಮಾಯಣ ಮಹಾಭಾರತಗಳೆಂಬ ವೀರರಸಪ್ರಧಾನವಾದ ಕಾವ್ಯಗಳ ಶ್ರವಣದಿಂದ ಶಿವಾಜಿಗೆ ಬಾಲ್ಯದಲ್ಲಿಯೇ ತಾನಾದರೂ ವೀರ ಕೃತ್ಯಗಳನ್ನು ಮಾಡಬೇಕೆಂಬ ಇಚ್ಛೆಯುಂಟಾಗಿತ್ತು. ಹಾಗೂ ಶಿವಾಜಿಯ ತಾಯಿಯಾದ ಜಿಜಾಬಾಯಿಯು ಭಾರತೀಯ ಯುದ್ಧದೊಳಗಿನ ಪ್ರಖ್ಯಾತ ಸೂತ್ರಚಾಲಕನಾದ ದೇವಾಧಿದೇವನಾದ ಶ್ರೀಕೃಷ್ಣನ ವಂಶದಲ್ಲಿ ಹುಟ್ಟಿದ್ದಳು; ಮತ್ತು ತಂದೆಯಾದ ಶಹಾಜಿಯು ರಾಮಾಯಣದೊಳಗಿನ ಮಹಾ ವೀರನಾದ ಶ್ರೀರಾಮಚಂದ್ರನ ವಂಶಜನಾಗಿದ್ದನು. ಈ ರೀತಿಯಿಂದಾಗಿ ಮಹಾ ಭಾರತ-ರಾಮಾಯಣಗಳೆಂಬ ವೀರರಸಪ್ರಧಾನವಾದ ಎರಡು ಪ್ರಾಚೀನ ಹಿಂದೂ ಕಾವ್ಯಗಳ ನಾಯಕರಾದ ರಾಮಕೃಷ್ಣರ ರಕ್ತವು ಶಿವಾಜಿಯಲ್ಲಿ ಏಕತ್ರವಾಗಿ ಕೂಡಿದ್ದಿತು. ಮತ್ತು ಈ ಸಂಗತಿಯ ತಿಳುವಳಿಕೆಯೂ ದರೂ ಅವನಿಗೆ ಬಾಲ್ಯದಲ್ಲಿಯೇ ಆಗಿತ್ತು. ಆದ್ದರಿಂದ ತನ್ನ ಪೂರ್ವ ಜರಂತೆ ಪರಾಕ್ರಮದ ಮಹತ್ಕೃತ್ಯಗಳನ್ನು ಜರುಗಿಸಬೇಕೆಂಬ ಸ್ಫೂರ್ತಿಯು ಶಿವಾಜಿಯಲ್ಲಿ ಬಾಲ್ಯದಲ್ಲಿಯೇ ಉಂಟಾದದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಶಿಕಂದರನ ಕುಲಪರಂಪರೆಯಾದರೂ ಇದೇ ರೀತಿಯಾಗಿ ಪ್ರಸಿದ್ಧವಾದದ್ದೇ ಇತ್ತು. ಆತನ ಪಿತೃಕುಲಪರಂಪರೆಯು ಅರ್ಗಾಸದ ಪ್ರಖ್ಯಾತವಾದ ರಾಜಕುಟುಂಬಕ್ಕೆ ಸಂಬಂಧಿಸಿರುವದು. ಹಾಗೂ ತಾಯಿಯು ಅಪಾಲೋ ಎಂಬ ಗ್ರೀಕದೇವತೆಯ ಅವತಾರವಾದ ಅಕೀಲೀಜನ ವಂಶದಲ್ಲಿ ಜನ್ಮಿಸಿದ್ದಳು. ಈಲಿಯಡವು ಗ್ರೀಕಭಾಷೆಯೊಳಗಿನ ಅತಿ ಪ್ರಾಚೀನ ಕಾವ್ಯವು. ನಮಗೆ ರಾಮಾಯಣ ಮಹಾಭಾರತಗಳಂತೆ ಈಲಿಯಡವು ಗ್ರೀಕರಿಗೆ ಪೂಜ್ಯವೆನಿಸುತ್ತಿತ್ತು. ಶಿಕಂದರನಿಗೆ ವೀರತ್ವದ ಕೃತ್ಯಗಳನ್ನು ಮಾಡಬೇಕೆಂಬ ಇಚ್ಛೆಯುಂಟಾಗಲಿಕ್ಕೆ ಈ ಗ್ರಂಥದೊಳಗಿನ ವೀರತ್ವದ ಕಥಾಶ್ರವಣವೇ ಕಾರಣವಾಗಿತ್ತು. ಹಾಗೂ ತಾನು ಇಂಥ ರಾಜ್ಯಕಾವ್ಯದ ನಾಯಕನ ವಂಶಜನಾಗಿರುವೆನೆಂಬ ವಿಚಾರವು ಮನಸ್ಸಿನಲ್ಲಿ ಭ್ರಮಿಸುತ್ತಿದ್ದದರಿಂದ ಶಿಕಂದರನಿಗೆ ಅತಿಶಯ ಸ್ಫೂರ್ತಿಯೂ ಆತ್ಮವಿಶ್ವಾಸವೂ ಉಂಟಾಗಲಿಕ್ಕೆ ಕಾರಣವಾಗಿದ್ದಿತು. ಸಾರಾಂಶವೇನೆಂದರೆ,–ಪೌರಾಣಿಕ ಮಹಾವೀರರ ಸಂಬಂಧ, ಹಾಗೂ ಆ ಕಾವ್ಯಗಳ ಶ್ರವಣದಿಂದ ಬಾಲ್ಯದಲ್ಲಿ ಮನಸ್ಸಿನಲ್ಲಿ ಆದ ಪರಿಣಾಮ ಎಂಬ ಎರಡು ಮಾತುಗಳಲ್ಲಿ ಶಿವಾಜಿಯ

ಹಾಗೂ ಶಿಕಂದರನ ಚರಿತ್ರೆಗಳಲ್ಲಿ ಸಂಪೂರ್ಣ ಸಾಮ್ಯವುಂಟಾಗಿರ ವದು.

೩. ಶ್ರೀಸಮರ್ಥ ರಾಮದಾಸರ ಭೆಟ್ಟಿಯ ಸಲುವಾಗಿ ಶಿವಾಜಿಯು ಎಷ್ಟು ಉತ್ಸುಕನಾಗಿದ್ದನೆಂಬದು ಎಲ್ಲರಿಗೂ ಗೊತ್ತಿದ್ದ ಸಂಗತಿಯೇ ಸರಿ. ಸ್ವಾಮಿಗಳ ದರ್ಶನವಾದ ಮೇಲೆ ಒಂದು ಸಾರೆ ಶಿವಾಜಿಯು ತನ್ನ ಯಾವ ತ್ತು ರಾಜ್ಯವನ್ನು ಅವರ ಪಾದಕ್ಕೆ ಅರ್ಪಿಸಿ ತಾನೂ ಅವರಂತೆ ಸನ್ಯಾಸಿ ಯಾಗಬೇಕೆಂಬ ಉತ್ಕಟ ಇಚ್ಛೆಯುಳ್ಳವನಾಗಿದ್ದನು. ಇದರ ಮೇಲಿಂದ ಸಾರ್ವಭೌಮನಾದ ಅರಸನಿಗಿಂತಲೂ ರಾಮದಾಸ ಸ್ವಾಮಿಗಳಂಥ ಸಾಧು ಗಳ ಯೋಗ್ಯತೆಯು ಹೆಚ್ಚಿನದೆಂದೂ ಸಾರ್ವಭೌಮನಾಗಲಪೇಕ್ಷಿಸುವದ ಕ್ಕಿಂತಲೂ ಸಾಧುಗಳ ದಾಸನಾಗಬೇಕೆಂಬ ಮಹತ್ವಾಕಾಂಕ್ಷೆಯುಳ್ಳವನಾ ಗುವದು ಹೆಚ್ಚು ಸ್ಪೃಹಣೀಯವಾದದ್ದೆಂದೂ ಶಿವಾಜಿಯು ದೃಢವಾಗಿ ನಂಬಿ ದ್ದನೆಂದು ತಿಳಿದುಬರುತ್ತದೆ. ಈ ವಿಷಯದಲ್ಲಿ ಶಿಕಂದರನ ಅಭಿಪ್ರಾಯವು ಯಾವ ಪ್ರಕಾರದ್ದಿತ್ತೆಂಬದನ್ನು ಚನ್ನಾಗಿ ವ್ಯಕ್ತಪಡಿಸುವಂಥ ಇಂಥದೇ ಒಂದು ಪ್ರಸಂಗವು ಆತನ ಚರಿತ್ರೆಯಲ್ಲಿ ಬಂದಿರುವದು. ಆದರೆ ಆ ಪ್ರಸಂ ಗವನ್ನು ವಿವರಿಸುವದಕ್ಕಿಂತ ಮೊದಲು ಆ ಸಮಯದಲ್ಲಿ ಗ್ರೀಸಿನ ಸ್ಥಿತಿಯು ಯಾವ ಪ್ರಕಾರವಾಗಿತ್ತೆಂಬದನ್ನು ಸ್ವಲ್ಪದರಲ್ಲಿ ಹೇಳಿದರೆ ಒಳ್ಳೆಯದಾಗು ವದು. ಆ ಸಮಯದಲ್ಲಿ ಗ್ರೀಸದೊಳಗಿನ ಅಥೆನ್ಸಿನಂಥ ಪ್ರಬಲವಾದ ರಾಜ್ಯ ವೂ ಸಹ ತೀರ ಅವನತ ಸ್ಥಿತಿಗೆ ಬಂದಿತ್ತು. ಹಾಗೂ ಗ್ರೀಕರು ಕಾಡು ಜನರೆಂದು ತಿಳಿಯುತ್ತಿದ್ದ ಮಾಸಿಡೋನಿಯನ್ ಜನರ ಅರಸನೂ ಶಿಕಂದ ರನ ತಂದೆಯೂ ಆದ ಫಿಲಿಪನು ಗ್ರೀಕರಾಜ್ಯದ ಮೇಲೆ ತನ್ನ ಅಧಿಕಾರವ ನ್ನು ಸ್ಥಾಪಿಸಿದ್ದನು. ಮುಂಚೆ ಕ್ರಿ. ಶ. ಪೂ. ೩೩೬ ರಲ್ಲಿ ಫಿಲಿಪನ ಕೊಲೆ ಯಾದಾಗ ಈ ಮಾಸಿಡೋನಿಯನ್ ರಾಜವಂಶವು ದುರ್ಬಲವಾದದ್ದರಿಂದ ತಮ್ಮ ಸ್ವತಂತ್ರವನ್ನು ಸಾಧಿಸಿಕೊಳ್ಳಲಿಕ್ಕೆ ಇದೇ ಸುಸಂಧಿಯೆಂದು ತಿಳಿದು ಗ್ರೀಸದೊಳಗಿನ ಯಾವತ್ತು ಅರಸರು ಸ್ವತಂತ್ರರಾಗುವ ಆಲೋಚನೆಯ ನ್ನು ನಡಿಸಿದರು. ಅಥೆನ್ಸಿದೊಳಗಿನ ಪ್ರಖ್ಯಾತ ವಕ್ತೃವಾದ ಡೆಮಾಸ್ಥಿನೀಸ ನಂತೂ ಫಿಲಿಪನ ಮರಣದ ದಿನವು ಸಾರ್ವಜನಿಕ ಉತ್ಸವದ ದಿವಸವೆಂದು ಯಾವತ್ತು ಜನರಿಂದ ಸಾದರ ಮಾಡಿದನು. ಆದರೆ ಆ ಸಮಯದಲ್ಲಿ ಶಿಕಂದರನು ಕೇವಲ ೧೯ ವರ್ಷದವನಾಗಿದ್ದರೂ ತನ್ನ ಅತುಲವಾದ ತೇಜ

ಸ್ನನ್ನು ಪ್ರಕಟಿಸಿ ತುಸು ದಿನಗಳಲ್ಲಿಯೇ ಯಾವತ್ತು ಜನರನ್ನು ತನ್ನ ಅಂಕಿತರನ್ನಾಗಿ ಮಾಡಿಕೊಂಡನು. ಅಥೆನ್ಸಿನವರೂ ಸಹ ಅತನನ್ನು ಸಮಾಧಾನಗೊಳಿಸುವದಕ್ಕಾಗಿ ವಕೀಲನನ್ನು ಕಳುಹಿಸಿದರು; ಹಾಗೂ ಶಿಕಂದರನು ಅವನನ್ನು ಚಿನ್ನಾಗಿ ಸತ್ಕರಿಸಿದನು. ಮುಂದೆ ತುಸು ದಿವಸಗಳಲ್ಲಿಯೇ ಕಾರಿಂಥದಲ್ಲಿ ಯಾವತ್ತು ಗ್ರೀಕ ಅರಸರ ಪ್ರತಿನಿಧಿಗಳು ದೊಡ್ಡ ಸಭೆ ಗೂಡಿ ಅದರಲ್ಲಿ ಇರಾಣದ ಸಂಗಡ ಯುದ್ಧ ಮಾಡುವದಕ್ಕಾಗಿ ಯಾವತ್ತು ಗ್ರೀಸದೇಶದ ಪಕ್ಷದಿಂದ ಶಿಕಂದರನನ್ನು ಮುಖ್ಯ ಸೇನಾಪತಿಯಾಗಿ ಆರಿಸಿದರು. ಈ ಪ್ರಸಂಗದಲ್ಲಿ ಶಿಕಂದರನನ್ನು ಅಭಿನಂದಿಸುವದಕ್ಕಾಗಿ ಸುತ್ತು ಮುತ್ತಲಿನ ಯಾವತ್ತು ಪ್ರಸಿದ್ಧ ಪುರುಷರೂ ಮುತ್ಸದ್ದಿಗಳೂ ಕವಿಗಳೂ ವಿದ್ವಾಂಸರೂ ಸಾವುಕಾರರೂ ನೆರೆದಿದ್ದರು. ಆದರೆ ಕಾರಿಂಥದ ನೆರೆಯಲ್ಲಿದ್ದ ಒಂದು ಹಳ್ಳಿಯಲ್ಲಿ ಇರುತ್ತಿದ್ದ ಡಾಯೋಜಿನಸನೆಂಬ ಸತ್ಪುರುಷನು ಮಾತ್ರ ಬಂದಿದ್ದಿಲ್ಲ. ಅದರಿಂದ ಶಿಕಂದರನು ಸ್ವತಃ ಆ ಏಕಾಂತಪ್ರಿಯನಾದ ಸಾಧುವಿನ ದರ್ಶನಕ್ಕೆ ಹೋಗಬೇಕೆಂದು ಆಲೋಚನೆ ಮಾಡಿದನು. ಆ ಸಾಧುವಿಗೆ ತನ್ನ ವೈಭವವನ್ನು ತೋರಿಸಬೇಕೆಂಬ ಉದ್ದೇಶದಿಂದ ಶಿಕಂದರನು ದೊಡ್ಡದೊಂದು ಸೈನ್ಯದ ಭಾಗವನ್ನು ತನ್ನ ಸಂಗಡ ಕರೆದುಕೊಂಡು ಹೋಗಿದ್ದನು. ಶಿಕಂದರನು ಅಲ್ಲಿಗೆ ಮುಟ್ಟಿದಾಗ ಆ ಸಾಧುವು ತನ್ನ ಗುಡಿಸಲಿನ ಮುಂದೆ ಬಿಸಿಲು ಕಾಸುತ್ತ ಕುಳಿತುಕೊಂಡಿದ್ದನು. ಶಿಕಂದರನೂ ಅವನ ಜನರೂ ತನ್ನನ್ನು ಸುತ್ತರಿದು ನಿಂತುಕೊಳ್ಳಲು ಆ ಸಾಧುವು ಕೂತಲ್ಲಿಯೇ ಇದ್ದು ತಲೆಯನ್ನು ಸ್ವಲ್ಪ ಮೇಲಕ್ಕೆತ್ತಿ ಶಿಕಂದರನ ಕಡೆಗೆ ನೋಡಿದನು. ಆಗ ಶಿಕಂದರನು, "ಮಹಾರಾಜ ನಾನು ತಮ್ಮ ಯಾವ ಪ್ರಕಾರದ ಸೇವೆಯನ್ನು ಮಾಡಬೇಕೆಂಬದನ್ನು ಆಜ್ಞಾಪಿಸಿರಿ" ಎಂದನು. ಅದನ್ನು ಕೇಳಿ ಆ ನಿಸ್ಪೃಹಿಯಾದ ಸಾಧುವು ಸಿಡಿಕುತನದಿಂದ "ನನ್ನ ಮೇಲೆ ಹೀಗೆ ನೆರಳು ಕೆಡವಿ ನಿಂತುಕೊಳ್ಳಬೇಡಿರಿ, ಅಂದರೆ ತೀರಿತು. ನನಗೆ ಎರಡನೇ ಯಾವ ತರದ ಉಪಕಾರವನ್ನೂ ಮಾಡಬೇಕಾಗಿಲ್ಲ" ಎಂದು ನುಡಿದನು. ಈ ಉದ್ಗಾರವನ್ನು ಕೇಳಿ ಶಿಕಂದರನ ಅಧಿಕಾರಿಗಳು ಆ ಸಾಧುವಿನ ಉಪಹಾಸ ಮಾಡಹತ್ತಿದರು. ಆಗ ಶಿಕಂದರನು ಅವನಿಗೆ ಗಾಂಭೀರ್ಯದಿಂದ "ನಾನು ಶಿಕಂದರನಾಗದೆ ಬೇರೊಬ್ಬನಾಗಿದ್ದರೆ, ಡಾಯೋಜಿನಸನಾಗಬೇಕೆಂದು ಅಪೇಕ್ಷಿಸುತ್ತಿದ್ದೆನು" ಎಂದು ನುಡಿದನು.

ಶಿಕಂದರನ ಈ ವರ್ತನದಿಂದ ಆತನ ಮನಸ್ಸಿನ ಉದಾತ್ತತೆಯು ವ್ಯಕ್ತವಾಗುವದು. ಆದರೆ ಶಿವಾಜಿಯ "ಸಾಧುತ್ವದ ಮುಂದೆ ಸಾರ್ವಭೌಮತ್ವವು ತುಚ್ಛವಾದದ್ದು" ಎಂಬ ಭಾವನೆಯೂ, ಗುರುಚರಣದಲ್ಲಿ ಸರ್ವಸ್ವವನ್ನೂ ಅರ್ಪಿಸಿ, ಮೈಗೆ ಬೂದಿಯನ್ನು ಬೊಳಿದುಕೊಳ್ಳಲು ಸಿದ್ಧನಾಗುವ ವಿಚಾರವೂ ಎಲ್ಲಿ? ಸಾರಾಂಶವೇನೆಂದರೆ, ಸದ್ವೃತ್ತಿಯ ಸಂಬಂಧದಲ್ಲಿ ಶಿವಾಜಿಯು ಶಿಕಂದರನಿಗಿಂತಲೂ ಹೆಚ್ಚಿ ಉಚ್ಚಕೋಟಿಯಲ್ಲಿ ಗಣನೀಯನಾಗುವನು.

೪. ಶಿವಾಜಿಯು ತುಕಾರಾಮಸ್ವಾಮಿಯ ಸಾಧುತ್ವದ ಕೀರ್ತಿಯನ್ನು ಕೇಳಿ ಆತನ ಕಡೆಗೆ ಕಾಣಿಕೆಗಳನ್ನು ಕಳುಹಿಸಿ ಕೊಡಲು ಆ ಜೀತೇಚ್ಛನಾದ ಸಾಧುವು ಅದನ್ನು ಸ್ವೀಕರಿಸುವದಿಲ್ಲೆಂದು ಸ್ಪಷ್ಟವಾಗಿ ಹೇಳಿ ತಿರುಗಿ ಕಳುಹಿಸಿದ ಸಂಗತಿಯು ಸರ್ವಶ್ರುತವಾದದ್ದಿರಬಹುದು. ಇಂಥದೇ ಒಂದು ಪ್ರಸಂಗವು ಅಲೇಗ್ಝಾಂಡರನ ಚರಿತ್ರದಲ್ಲಿಯೂ ಒದಗಿತ್ತು. ಆದರ ಪೂರ್ವ ವೃತ್ತಾಂತವೇನೆಂದರೆ:— ಕಾರಿಂಥದಲ್ಲಿ ಸಭೆಯು ನೆರೆದ ಬಳಿಕ ತುಸು ದಿವಸಗಳಲ್ಲಿಯೇ ಶಿಕಂದರನು ದಾನ್ಯೂಬ ನದಿಯ ದಂಡೆಯ ಪ್ರದೇಶದಲ್ಲಿ ಎದ್ದಿರುವ ಬಂಡಾಯವನ್ನು ಮೆಟ್ಟಿಯುವದಕ್ಕಾಗಿ ಹೋದನು. ಇತ್ತಕಡೆಗೆ ಗ್ರಿಸನ ದಕ್ಷಿಣ ಭಾಗದಲ್ಲಿ ಅವನು ಸತ್ತನೆಂಬ ಸುದ್ದಿಯು ಹಬ್ಬಿದ್ದರಿಂದ ಅಲ್ಲಿಯ ಸಂಸ್ಥಾನಿಕರು ಸ್ವತಂತ್ರತೆಯ ಧ್ವಜಗಳನ್ನು ನಿಲ್ಲಿಸಿದರು. ಹಾಗು ಅಥೆನ್ಸದೊಳಗಿನ ಡೆಮಾಸ್ಥಿನೀಸನೇ ಮೊದಲಾದ ವ್ಯಕ್ತಿಗಳು ಅವರಿಗೆ ಮತ್ತಿಷ್ಟು ಉತ್ತೇಜನ ಕೊಟ್ಟರು. ಆದರೆ ಇಷ್ಟರಲ್ಲಿ ಶಿಕಂದರನು ಉತ್ತರದ ಕಡೆಯ ಬಂಡುಗಾರರನ್ನು ದಾನ್ಯೂಬ ನದಿಯ ಆಚೆಯ ದಂಡೆಗೆ ಹಿಡಿಸಿಬಿಟ್ಟು ವಿದ್ಯುದ್ವೇಗದಿಂದ ದಕ್ಷಿಣ ಗ್ರಿಸಕ್ಕೆ ಬಂದು ಮುಟ್ಟಿ ಅಲ್ಲಿಯ ದಂಗೆಗಾರರನ್ನು ಭಯಂಕರವಾಗಿ ಶಿಕ್ಷಿಸಿದನು. ಹಾಗು ಈ ದಂಗೆಗೆ ಮೂಲಕಾರಣರಾದ ಅಥೆನ್ಸದೊಳಗಿನ ಎಂಟು ಹತ್ತು ವಾಂಛಿತ ವಕ್ತಾರರನ್ನು ಸಿಡಿದೊಯ್ದನು. ಅವರಿಗೆ ದೇಹಾಂತ ಶಿಕ್ಷೆಯು ಆಗತಕ್ಕದ್ದಿತ್ತು. ಆದರೆ ಅವರನ್ನು ಉಳಿಸುವದಕ್ಕಾಗಿ ಫೋನಿಕಸನೆಂಬ ಸತ್ಪುರುಷನು ಕೆಲವು ಮಾತುಗಳನ್ನು ಹೇಳಲು ಶಿಕಂದರನು ಆ ಸಾಧುವಿನ ಆದರಕ್ಕಾಗಿ ತನ್ನ ಮನಸ್ಸಿನ ವಿರುದ್ಧವಾಗಿ ಅವರನ್ನು ಬಿಡಜೀಕಾಯಿತು ಈ ಫೋನಿಕಸ ಸಾಧುವಿನ ವಿಷಯವಾಗಿ ಒಂದು ಕಥೆಯಿರುವದು ಒಂದು

ಸಾರೆ ಶಿಕಂದರನು ಫೋನಿಕಸನ ಬಳಿಗೆ ಬಹಳ ಹಣವನ್ನು ಕಳುಹಿಸಿ ಕೊಡಲು, ಅವನು ತೆಗೆದುಕೊಂಡು ಬಂದ ಸೇವಕರನ್ನು ಕುರಿತು ಫೋನಿಕಸನು "ಶಿಕಂದರನು ನನಗೆ ಈ ದ್ರವ್ಯವನ್ನು ಯಾತರ ಸಲುವಾಗಿ ಕಳುಹಿಸಿರುವನು?" ಎಂದು ಕೇಳಿದನು. ಆಗ ಆ ದೂತರು "ತಾವು ನ್ಯಾಯವಂತರೂ, ಧರ್ಮಶೀಲರೂ ಇರುವಿರೆಂದು ಶಿಕಂದರನು ತಿಳಿದಿರುವನೆಂದು ಕಳುಹಿಸಿರುವನು," ಎಂದು ಹೇಳಿದರು. ಅದನ್ನು ಕೇಳಿ ಆ ಸತ್ಪುರುಷನು "ಸೇವಕರೇ, ಹೀಗಾದರೆ ಶಿಕಂದರನ ಈ ಅಭಿಪ್ರಾಯವು ಸ್ಥಿರವಾಗಿ ಉಳಿಯುವದೇ ಒಳ್ಳೇದು. ನಾನು ಈ ದ್ರವ್ಯವನ್ನು ಸ್ವೀಕರಿಸಲಾರೆನು. ನೀವು ಇದನ್ನು ಹಾಗೆಯೇ ತಿರುಗಿ ತೆಗದುಕೊಂಡು ಹೋಗಿರಿ" ಎಂದು ಸವಾಭಿಮಾನದಿಂದ ನುಡಿದನು. ದೂತರು ಈ ಕಾಣಿಕೆಯನ್ನು ತಿರಸ್ಕರಿಸುವ ಅಕಿಂಚನನಾದ ಸಾಧುವು ಮನೆತನದ ಸ್ಥಿತಿಯಲ್ಲಿ ಅತ್ಯಂತ ದರಿದ್ರನಾಗಿದ್ದರೂ ಶಿಕಂದರನಿಗಿಂತಲೂ ಶ್ರೀಮಂತನಾಗಿರುವನೆಂದು ತಿಳಿದುಕೊಂಡರೂ ಇರಲಿ. ಈ ರೀತಿಯಾಗಿ ಶಿಕಂದರನು ಸತ್ಪುರುಷರ ಪರಾಮರ್ಶವನ್ನು ತೆಗದುಕೊಳ್ಳುತ್ತಿದ್ದನೆಂಬದೇನೋ ನಿಜ. ಆದರೆ ಕಾಣಿಕೆಯನ್ನು ತಿರುಗಿ ಕಳುಹಿಸಿದ ನಂತರ ಶಿವಾಜಿಯು ತುಕಾರಾಮ ಸ್ವಾಮಿಯ ದರ್ಶನಕ್ಕಾಗಿ ಅತ್ಯುತ್ಸುಕನಾಗಿದ್ದು, ಅವರ ವಚನಾಮೃತವನ್ನು ಪಾನ ಮಾಡುವದಕ್ಕಾಗಿ ಅವನು ತನ್ನ ಮೇಲೆ ಎಷ್ಟೋ ಸಾರೆ ಗಂಡಾಂತರಗಳನ್ನು ತಂದುಕೊಂಡಂಥ ಪ್ರಸಂಗವು ಬಿದಗಿದ್ದು ಶಿಕಂದರನ ಚರಿತ್ರೆಯಲ್ಲಿ ಎಲ್ಲಿಯೂ ಪ್ರಸಿದ್ಧವಿಲ್ಲ.

೫. ಶಿವಾಜಿಯು ದಿಲ್ಲಿಗೆ ಔರಂಗಜೇಬನ ಭೆಟ್ಟಿಗೆ ಹೊರಟಾಗ ತನ್ನ ಕೈಕೆಳಗಿನ ಯಾವತ್ತು ಅಧಿಕಾರಿಗಳಿಗೂ ಶಿಪಾಯರಿಗೂ ಅಸಂಖ್ಯ ದ್ರವ್ಯವನ್ನು ಹಂಚಿ ಉದಾರತನವನ್ನು ತೋರಿಸಿದ ಸಂಗತಿಯು ಎಲ್ಲರಿಗೂ ಗೊತ್ತಿರುವದು. ಶಿಕಂದರನು ಇರಾಣಕ್ಕೆ ದಂಡೆತ್ತಿ ಹೋಗುವ ಮೊದಲು ತನ್ನ ಖಜಾನೆಯೊಳಗಿನ ಯಾವತ್ತು ದ್ರವ್ಯವನ್ನು ತನ್ನ ಮಿತ್ರರಿಗೆ ಹಂಚಿ ಕೊಟ್ಟು ಬಿಟ್ಟನು. ಈ ಪ್ರಸಂಗದಲ್ಲಿ ಆತನ ಪ್ರಿಯಮಿತ್ರನೊಬ್ಬನು "ಶಿಕಂದರಾ! ನೀನು ಯಾವತ್ತು ದ್ರವ್ಯವನ್ನು ಎರಡನೆಯವರಿಗೆ ಹಂಚಿ ಕೊಟ್ಟು ಬಿಟ್ಟು; ಆದರೆ ಸ್ವಂತದ ಸಲುವಾಗಿ ಏನು ಉಳಿಸಿಕೊಂಡಿರುವೆ?" ಎಂದು ಕೇಳಿದನು. ಅದಕ್ಕೆ ಶಿಕಂದರನು "ಮೈಯೊಳಗಿನ ಸ್ಫೂರ್ತಿಯನ್ನು

ಉಳಿಸಿಕೊಂಡಿರುವೆನು" ಎಂದು ಉತ್ತರ ಕೊಟ್ಟನು. ಇದರ ಮೇಲಿಂದ ಶಿಕಂದರನಲ್ಲಿಯಾದರೂ ಶಿವಾಜಿಯ.ಂತೆಯೇ ಉದಾರತೆಯು ಇತ್ತೆಂಬದು ವ್ಯಕ್ತವಾಗುವದು.

೬. ಶಿಕಂದರನಿಗ ಕಿಟ್ಟಿಸನೆಂಬ ಜೀವದಗೆಳೆಯನಿದ್ದನು. ಏಶಿಯಾ ಮೈನರದೊಳಗಿನ ಒಂದು ಕಾಳಗದಲ್ಲಿ ಆತನು ಶಿಕಂದರನ ಪ್ರಾಣವನ್ನು ರಕ್ಷಿಸಿದ್ದನು. ಏಶಿಯಾ ಮೈನರದಿಂದ ಹಿಂದೂ ಕುಶ ಪರ್ವತದವರೆಗೆ ಹಬ್ಬಿದ ಯಾವಶ್ತು ಇರಾಣೀ ಸಾಮ್ರಾಜ್ಯವನ್ನು ಗೆದ್ದುಕೊಂಡ ಬಳಿಕ ಶಿಕಂದರನು ಸಮುರ್ಕಂದ ಪ್ರಾಂತವನ್ನು ಗೆಲ್ಲುತ್ತ ನಡೆದನು. ಮತ್ತು ಕಿಟ್ಟಿಸನನ್ನು ಆ ಭಾಗದ, ಅಂದರೆ ಬಾಕ್ತ್ರಿಯಾದ ಅಧಿಕಾರಿಯಾಗಿ ನೇಮಿಸಿದನು. ಆ ಮೇಲೆ ಶಿಕಂದರನು ಸಿಂಧುಸ್ತಾನವನ್ನು ಗೆಲ್ಲುವದಕ್ಕಾಗಿ ಸ್ವತಃ ಹೊರತಕ್ಕವನಿದ್ದನು. ಅಷ್ಟರಲ್ಲಿ ಒಂದು ಚಮತ್ಕಾರವಾದ ಸಂಗತಿಯು ಸಂಭವಿಸಿತು. ಅಲೇಗ್ಝಾಂಡರನು ಅಲ್ಲಿಂದ ಹೊರಡಜೀಕೆಂದು ಗೊತ್ತಾದ ದಿನದ ಮೊದಲಿನ ದಿವಸ ರಾತ್ರಿಯಲ್ಲಿ ಯಾವದೋ ಒಂದು ಹೆಬ್ಬುವಿದ್ದದರಿಂದ ಆತನು ತನ್ನ ಯಾವತ್ತು ಸರದಾರರಿಗೆ ಒಂದು ಔತಣವನ್ನು ಕೊಟ್ಟನು. ಆಗ ಸೆರೆಯನ್ನು ಸೂರೆಮಾಡಿ ಬಿಟ್ಟಿದ್ದನು. ಆ ಸಮಯದಲ್ಲಿ ಮುಖಸ್ತುತಿಯನ್ನು ಮಾಡುವ ಗುಣವುಳ್ಳ ಕೆಲವರು ಶಿಕಂದರನ ಧೈರ್ಯ-ಶೌರ್ಯಾದಿಗುಣಗಳನ್ನು ಮಿತಿಮೀರಿ ವರ್ಣಿಸಹತ್ತಿದರು. ಇದು ಸಹನವಾಗದೆ ಇದ್ದದರಿಂದಲೂ ಸೆರೆಯ ಗ.ಂಗಿನಲ್ಲಿದ್ದದರಿಂದಲೂ ಕ್ಲಿಟಸನು ಒಮ್ಮಿಂದೊಮ್ಮೆ ಶಿಕಂದರನ ಕಡೆಗೆ ತನ್ನ ಬಲಗೈಯನ್ನು ನೀಡಿ "ಶಿಕಂದರಾ, ನನ್ನ ಈ ಕೈಯು ಗ್ರಾನಿಕಸದೊಳಗಿನ ಯುದ್ಧದಲ್ಲಿ ನಿನ್ನ ಜೀವವನ್ನು ಉಳಿಸಿದುವದು" ಎಂದು ನುಡಿದನು. ಶಿಕಂದರನಾದರೂ ಸೆರೆಯ ಅಮಲಿನಲ್ಲಿ ಇದ್ದನಾದ್ದರಿಂದ ಕ್ಲಿಟಸನ ಈ ಮಾತುಗಳು ಸಹನವಾಗದೆ, ಒಮ್ಮಿಂದೊಮ್ಮೆ ಅವನ ಮೈಮೇಲೆ ಬಿದ್ದನು. ಶಿಕಂದರನನ್ನು ತಡೆಯಬೇಕೆಂದು ಅನೇಕರು ಯತ್ನ ಮಾಡಿದರು. ಆದರೂ ಅವನು ವಿಲಕ್ಷಣ ಆವೇಶದಿಂದ ತನ್ನನ್ನು ಬಿಡಿಸಿಕೊಂಡು ಕ್ಲಿಟಸನ ಮೈಮೇಲೆ ಹೋಗಿ ಭಾಲೆಯನ್ನು ಚುಚ್ಚಿ ಅವನನ್ನು ಕೊಂದನು. ಸೆರೆಯ ಅಮಲು ಇಳಿದ ನಂತರ ಶಿಕಂದರನಿಗೆ ತನ್ನ ಈ ಕೃತ್ಯದ ಬಗ್ಗೆ ಬಹಳ ಪಶ್ಚಾತ್ತಾಪವಾಗಿ ತನ್ನ ಮಿತ್ರನ ಸಲುವಾಗಿ ಬಹಳ ಚಿಂತಿಸಿದನು. ಆದರೆ ಅದರಿಂದ ಉಪಯೋಗವೇನು?

ಈ ಪ್ರಸಂಗವನ್ನು ಅಕ್ಷರಶಃ ಹೋಲುವ ಪ್ರಸಂಗವು ಶಿವಾಜಿಯು ಚಂದ್ರಸೇನಲ್ಲಿಯಾದರೂ ಬಂದಿತ್ತೆಂದು ಐತಿಹ್ಯವಿರುವುದು. ಹಜಾಮನಾದ ಜೀವಾಜಿಯು ಶಿವಾಜಿಯ ಬಾಲ್ಯದ ಮಿತ್ರನಾಗಿದ್ದು ಜೀಜಾಬಾಯಿಯಾದರೂ ಅವನನ್ನು ಪ್ರೀತಿಸುತ್ತಿದ್ದಳು. ಆತನ ಶೌರ್ಯಧೈರ್ಯಗಳ ವಿಷಯವಾಗಿ ಶಿವಾಜಿಗೆ ಅತ್ಯಂತ ವಿಶ್ವಾಸವಿದ್ದುದರಿಂದಲೇ ಶಿವಾಜಿಯು ಅಫಜಲ್‌ಖಾನನಿಗೆ ಏಕಾಂತವಾಗಿ ಭೇಟ್ಟಿಯಾಗುವ ಪ್ರಸಂಗದಲ್ಲಿ ಆತನನ್ನು ತನ್ನ ಸಂಗಡ ಕರೆದುಕೊಂಡು ಹೋಗುವದಕ್ಕಾಗಿ ಅರಿಸಿಕೊಂಡಿದ್ದನು. ಅಲ್ಲಿ ಶಿವಾಜಿಗೆ ಪ್ರಾಣಸಂಕಟವು ಒದಗಿತ್ತು. ಆದರೆ ಈ ಜೀವಾಜಿಯು ಒಳ್ಳೇ ಶೌರ್ಯದಿಂದ ಆತನನ್ನು ರಕ್ಷಿಸಿದನು. ಅಲ್ಲಿಂದ ತಿರುಗಿ ಬಂದ ಮೇಲೆ ಜೀವಾಜಿಯು ಒಳ್ಳೇ ಅಹಂಕಾರದಿಂದ "ಜೀವಾಜಿಯು ಇದ್ದನೆಂದು ಶಿವಾಜಿಯು ಬದುಕಿದನು" ಎಂದು ಜೀಜಾಬಾಯಿಗೆ ಹೇಳಿದನು. ಶಿವಾಜಿಯು ಇದನ್ನು ಕೇಳಿದ ಕೂಡಲೇ ಅವನಿಗೇ ತತ್‌ಕ್ಷಣದಲ್ಲಿ ದೇಹಾಂತ ಶಿಕ್ಷೆಯನ್ನು ವಿಧಿಸಿದನು. ಎಂತಹ ಶೌರ್ಯದ ಕೃತಿಯನ್ನು ಮಾಡಿದರೂ ಅದನ್ನು ಮಾಡಿದ ಮೇಲೆ "ಮಹಾರಾಜರ ಮಾನದ ಪುಣ್ಯದ ಪ್ರತಾಪವು" ಎಂದು ಮಹಾರಾಷ್ಟ್ರ ಸರದಾರರು ವಿನಯದಿಂದ ಹೇಳುವ ಪದ್ಧತಿಯು ಆ ಕಾಲದಲ್ಲಿ ಪ್ರಚಾರದಲ್ಲಿ ಇದ್ದುದರಿಂದಲೂ, ನಿಜವಾದ ಇಂತಹ ಭಾವನೆಯು ಆಗಿನ ಕಾಲದಲ್ಲಿ ಅತ್ಯಾವಶ್ಯಕವಿದ್ದುದರಿಂದಲೂ ಜೀವಾಜಿಯಂಥ ಕ್ಷುದ್ರ ಮನಸ್ಸಿನವೀರನ ಇಂತಹ ಅಹಂಕಾರದ ಮಾತಿನ ಸಲುವಾಗಿ ಅವನಿಗಾದ ಪ್ರಾಯಶ್ಚಿತ್ತವಿದೆಯಾವತ್ತು. ಮಹಾರಾಷ್ಟ್ರ ಸರದಾರರ ಮನಸ್ಸಿನಮೇಲೆ ಉತ್ತಮ ಪರಿಣಾಮವಾಗಿದ್ದೀತು. ಈ ಉದಾಹರಣೆಯಿಂದ ಶಿವಾಜಿಯ ಹಾಗು ಶಿಕಂದರನ ಉತ್ಕಟವಾದ ಸ್ವಾಭಿಮಾನವು ಸರಿಯಾಗಿ ಕಂಡು ಬರುವದೆಂದು ಹೇಳಬಹುದು.

೭. ಜೆಹಲಮ ನದಿಯ ದಂಡೆಯಲ್ಲಿ ಶಿಕಂದರನಿಗೂ ಕ್ಷತ್ರಿಯರಾಜನಾದ ಪೋರಸನಿಗೂ ಘನಘೋರವಾದ ಸಂಗ್ರಾಮವು ನಡೆಯಿತು. ಪೋರಸನ ಕಡೆಯ ಆನೆಗಳು ಹುಗಿಬಿದ್ದು ಅವು ತಮ್ಮ ಪಕ್ಷದ ಸೈನಿಕರನ್ನೇ ಕೊಂದವು. ಹಾಗೂ ಶಿಕಂದರನು ಪಾರಸನ ಗಜ ಸಾವಿರ ಸೈನಿಕರನ್ನು ಸೆರೆಹಿಡಿದು, ಜಯಶಾಲಿಯಾದನು. ೩॥ ಘಂಟು ನಿಲುವಿಕೆಯುಳ್ಳ ಪೋರಸನು ಮಹಾಗಜಾರೂಢನಾಗಿ ರಾತ್ರಿಯಾಗುವ ವರೆಗೆ ಒಬ್ಬನೇ ಹೋರಾ

ಡುತ್ತಿದ್ದನು. ಕಡೆಗೆ ದಣುವು-ಬಾಯಾರಿಕೆಗಳಿಂದ ಕೆಳಗೆ ಬಿದ್ದ ಮೇಲೆ ಪೋರಸನು ಗ್ರೀಕರ ವಶವಾದನು. ಪೋರಸನ ಶೌರ್ಯ-ಧೈರ್ಯಗಳನ್ನು ನೋಡಿ, ವಿಶೇಷತಃ ನೆರೆಸಿಕ್ಕ ಮೇಲೆಯೂ ಸಹ ಅತನ ಮುಖದ ಮೇಲಿನ ರಾಜತೇಜವೂ ವೀರಶ್ರೀಯೂ ತಿಲಮಾತ್ರವೂ ಕುಂದದೆ ಇದ್ದದ್ದನ್ನು ನೋಡಿ ಶಿಕಂದರನು ಚಕಿತನಾದನು. ಹಾಗೂ ಅವನು "ಅರಸೇ ನಿನ್ನನ್ನು ಯಾವ ರೀತಿಯಿಂದ ನಡೆಸಿಕೊಳ್ಳಬೇಕೆಂದು ನೀನು ಇಚ್ಛಿಸುತ್ತೀ?" ಎಂದು ಕೇಳಲಾಗಿ ಪೋರಸನು "ಅರಸನಂತೆ" ಎಂದು ಉತ್ತರಕೊಟ್ಟನು. ಆಲೆಗ್ಝಾಂಡರನು ಪುನಃ, "ನಿನಗೆ ಮತ್ತೇನಾದರೂ ಇಚ್ಛೆ ಇರುವದೋ" ಎಂದು ಕೇಳಲು, ಪೋರಸನು "ಅರಸನಂತೆ" ಎಂಬ ಒಂದೇ ಶಬ್ದದಲ್ಲಿ ಯಾವತ್ತು ಸಂಗತಿಗಳು ಬಂದು ಹೋಗಿರುವವು, ಎಂದು ಹೇಳಿದನು. ಈ ಉತ್ತರವನ್ನು ಕೇಳಿದ್ದರಿಂದಂತೂ ಶಿಕಂದರನು ದಂಗುಬಡಿದು ನಿಂತನು. ಶಿಕಂದರನು ಪೋರಸನ ಯಾವತ್ತು ರಾಜ್ಯವನ್ನು ತಿರುಗಿಕೊಟ್ಟದ್ದಲ್ಲದೆ ತಾನು ಗೆದ್ದಿರುವ ನೆರೆಹೊರೆಯ ಪ್ರದೇಶಗಳನ್ನೆಲ್ಲ ಅತನಿಗೆ ಕೊಟ್ಟು, ಅತನ ಸಂಗಡ ಸ್ಥಿರವಾದ ಸಖ್ಯವನ್ನು ಬೆಳೆಸಿದನು.

ವೈರಿಯ ಮೈಯೊಳಗಿನ ಉತ್ತಮಗುಣಗಳ ಸಲುವಾಗಿ ಅದರ ತೋರಿಸುವದೂ ಅವನಿಗೆ ಯೋಗ್ಯ ಮಾನ ಕೊಡುವದೂ ಉದಾರ ಪುರುಷರ ಸಹಜಗುಣವು. ಹಿರಡಸ-ಮಾವಳಪ್ರಾಂತವನ್ನು ಸ್ವಾಧೀನ ಮಾಡಿಕೊಳ್ಳುವಾಗ ಅಲ್ಲಿದ್ದ ಬಾಂದಲ ದೇಶಮುಖನ ದಿವಾಣನಾದ ಬಾಜೀ ಪ್ರಭು ಎಂಬವನು ತನ್ನ ವಿಲಕ್ಷಣವಾದ ಶೌರ್ಯದಿಂದಲೂ ಸಮರಚಾತುರ್ಯದಿಂದಲೂ ಹೋರಾಡಿ ಶಿವಾಜಿಗೆ ಬಳ್ಳೀ ಪ್ರತಿಬಂಧವನ್ನುಂಟು ಮಾಡಿದನು. ಆದರೆ ಇದರ ಸಲುವಾಗಿ ಶಿವಾಜಿಯು ಅತನಿಗೆ ಎಂಥ ಶಿಕ್ಷೆಯನ್ನು ಮಾಡಿದನು? ಅತನು ಬಾಂದಲನ ಕಡೆಯಿಂದ ಆ ಬಾಜಿಪ್ರಭುವನ್ನು ಬೇಕೆಂದು ತೆಗೆದುಕೊಂಡು ಬಹುಮಾನಮಾಡಿ ಅವನನ್ನು ದೊಡ್ಡ ಸರದಾರನನ್ನು ಮಾಡಿದನು. ಇದರ ಮೇಲಿಂದ ಶತ್ರುವಿನ ಗುಣಗಳನ್ನು ನೋಡಿ ಕೌತುಕಪಡುವ, ಹಾಗು ಅವನನ್ನು ಮನ್ನಿಸುವ ಬುದ್ಧಿಯು ಶಿವಾಜಿಯಲ್ಲಿಯೂ ಶಿಕಂದರನಲ್ಲಿಯೂ ಸರಿಯಾಗಿ ಇತ್ತೆಂದು ಯಾರು ಹೇಳಲಿಕ್ಕಿಲ್ಲ?

೮. ಕ್ರಿ. ಶ. ಪೂ. ೩೨೭ ರಲ್ಲಿ ಶಿಕಂದರನು ಮುಲ್ತಾನದ ಭದ್ರವಾದ ಕೋಟೆಯ ಮೇಲೆ ಸಾಗಿಹೋದನು. ಆಗ ಅತನ ಅನಾನುಷ್ಠೇಯವಾದ

ವೀರತ್ವವು ಉತ್ಕೃಷ್ಟ ರೀತಿಯಿಂದ ವ್ಯಕ್ತವಾಯಿತು. ಆ ಕೋಟೆಯನ್ನೇರಿ ಹೋದ ಗ್ರೀಕರಲ್ಲಿ ಶಿಕಂದರನೇ ಮೊದಲನೆಯವನಾಗಿದ್ದನು. ಶಿಕಂದರನೂ ನಾಲ್ವರು ಸರದಾರರೂ ಮೇಲೆ ಹೋಗಿ ಮುಟ್ಟಿದ ಕೂಡಲೆ ಜನರು ಕೆಳಗಿನಿಂದ ಏರಿಬರುವ ಹಗ್ಗವನ್ನು ಹರಿಯಿತು. ಆದರಿಂದ ಕೋಟೆಯೊಳಗೆ ಸಾವಿರಾರು ದಂಡಾಳಿಗಳ ಸಂಗಡ ಹೋರಾಡುವ ಪ್ರಸಂಗವು ಶಿಕಂದರನಿಗೆ ಒದಗಿತು. ಪ್ರಸಂಗವು ಕಠಿಣವಾಗುತ್ತ ಹೋದಂತೆ, ವೀರಪುರುಷರ ವೀರತ್ವವು ವೃದ್ಧಿಯನ್ನೈದುವದು. ಹಗ್ಗವು ಹರಿದದ್ದನ್ನು ನೋಡಿದ ಕೂಡಲೆ ಶಿಕಂದರನ ಧೈರ್ಯವು ತಿಲಮಾತ್ರವೂ ಕುಂದದೆ ಅವನು ಒಮ್ಮಿಂದೊಮ್ಮೆ ಕೋಟೆಯೊಳಗೆ ಹಾರಿ ಗೋಡೆಗೆ ಬೆನ್ನುಹಚ್ಚಿ ನಿಂತು ತನ್ನ ಖಡ್ಗವನ್ನು ಝಳಪಿಸುತ್ತ ಶತ್ರುಗಳನ್ನು ಸಿಂಜರಿಸಿ ಆತ್ಮರಕ್ಷಣ ಮಾಡಿಕೊಳ್ಳಹತ್ತಿದನು. ಮೇಲೆ ಏರಿಬಂದ ಇಬ್ಬರು ಶತ್ರುಪಕ್ಷದವರನ್ನು ಶಿಕಂದರನು ಕೆಳಗೆ ಉರುಳಿಸಿದನು. ಆದರೆ ಇಷ್ಟರಲ್ಲಿ ಬಂದು ಬಾಣವು ಅತನ ಕವಚವನ್ನು ಹರಿದು ತಲೆಯಲ್ಲಿ ಸೇರಿದ್ದರಿಂದ ಅವನು ಎಚ್ಚರದಪ್ಪಿ ಬಿದ್ದನು ಕೂಡಲೆ ಗೋಡೆಯ ತುದಿಯಲ್ಲಿದ್ದ ಆತನ ಇಬ್ಬರು ಸರದಾರರು ಅವನ ಎರಡು ಮಗ್ಗಲಿಗೆ ಧುಮ್ಮಿಕ್ಕಿದರು. ಹಾಗೂ ಗ್ರೀಕ ಸೈನಿಕರು ಹೊಸ ಹಗ್ಗವನ್ನು ಹಚ್ಚಿ ಮೇಲಕ್ಕೇರಿ ಬರುವ ವರೆಗೆ ಆ ಇಬ್ಬರು ಸರದಾರರು ಒಳ್ಳೇ ಸಾಹಸದಿಂದ ಶಿಕಂದರನನ್ನ ಸಂರಕ್ಷಿಸಿದರು. ಆ ಮೇಲೆ ಗ್ರೀಕ ಸೈನಿಕರು ಕೋಟೆಯೊಳಗೆ ಸೇರಿ ಒಳಗಿನ ಸೈನಿಕರನ್ನು ಒಬ್ಬೊಬ್ಬರನ್ನಾಗಿ ಕಡಿದು ಚಲ್ಲಿದರು.

ಶಿವಾಜಿಯು ಇಂಥ ಧೈರ್ಯದ ಕೃತ್ಯಗಳನ್ನು ನೂರಾರು ಸಾರೆ ಮಾಡಿದ್ದನು. ಅದರೆ ಸುದೈವದಿಂದ ಅತನಿಗೆ ಎಚ್ಚರದಪ್ಪಿಬಿದ್ದ ಎರಡನೆಯವರಿಂದ ರಕ್ಷಿಸಿಕೊಳ್ಳುವಂಥ ಪ್ರಸಂಗವು ಒದಗಲಿಲ್ಲ. ಇಂಥ ಪ್ರತಿಯೊಂದು ಸಮಯದಲ್ಲಿ ಶಿವಾಜಿಯು ಕೇವಲ ಸ್ವಪರಾಕ್ರಮದಿಂದ ಆತ್ಮರಕ್ಷಣೆಯನ್ನು ಮಾಡಿಕೊಂಡದ್ದಲ್ಲದೆ ಎರಡನೆಯವರನ್ನು ಸಂರಕ್ಷಿಸಿದನು. ಕೇವಲ ಸ್ವಲ್ಪ ಜನರೊಂದಿಗೆ ಸ್ವತಃ ಅಸಂಖ್ಯ ಸೈನಿಕರ ಮಧ್ಯದಲ್ಲಿ ಸೇರಿ, ಶಾಹಿಸ್ತೇಖಾನನ ತಂಬುವನ್ನು ಪ್ರವೇಶಿಸಿ, ಅತನ ಬೆರಳನ್ನು ಕಡಿದ ಶಿವಾಜಿಯ ಪರಾಕ್ರಮವು ಶಿಕಂದರನ ಪರಾಕ್ರಮಕ್ಕಿಂತ ಕಡಿಮೆತರದ್ದಲ್ಲವೆಂಬುದನ್ನು ಎಲ್ಲರೂ ಒಪ್ಪಿಕೊಳ್ಳುವರು.

೯. ಸಿಂಧೂ ನದಿಯ ಮುಖದಿಂದ ತಿರುಗಿ ಶಿಕಂದರನು ಸ್ವದೇಶಕ್ಕೆ ಹೊರಟಾಗ ದಕ್ಷಿಣ ಇರಾಣದೊಳಗಿನ ವಾಲುಕಾಮಯವಾದ ಪ್ರದೇಶದಲ್ಲಿ ಅತನ ಸೈನಿಕರಿಗೆ ಅತ್ಯಂತ ಕಷ್ಟವಾಯಿತು. ಈ ಕಷ್ಟದಲ್ಲಿ ಶಿಕಂದರನು ಸ್ವತಃ ಅವರ ಪಾಲುಗಾರನಾಗಿದ್ದನು. ಸೈನಿಕರಿಗೆ ವಿಲಕ್ಷಣ ಕಷ್ಟವಾಗುವದನ್ನು ನೋಡಿ ಶಿಕಂದರನು ಯಾವ ತರದ ವಾಹನವನ್ನೂ ಏರದೆ ಸಾಮಾನ್ಯರಾದ ಶಿಪಾಯರ ಸಂಗಡ ನಡೆಯುಹೊತ್ತಿದನು. ಈ ರೀತಿಯಾಗಿ ೬೦ ದಿವಸ ಪ್ರವಾಸಮಾಡಿದ ಮೇಲೆ ಅವರು ಅರ್ಮಾನಿಯಾಕ್ಕೆ ಹೋಗಿ ಮುಟ್ಟಿದರು. ಈ ರೀತಿಯಾಗಿ ಸೈನಿಕರ ಕಷ್ಟದಲ್ಲಿ ಪಾಲುಗಾರನಾಗುವ ಸೇನಾಪತಿಯ ಮೇಲೆ ಅವರ ವಿಶ್ವಾಸವು ದೃಢವಾಗಿ ಕೂಡ್ರುವದೆಂಬ ತತ್ವವನ್ನು ಶಿಕಂದರನು ತಿಳಿದಿದ್ದನು. ಅದರಂತೆ ಶಿವಾಜಿಗಾದರೂ ಈ ತತ್ವವು ಗೊತ್ತಿದ್ದಿತು. ಶಿಕಂದರು ಸೈನಿಕರಿಗೆ ಕಠಿಣ ಪ್ರಸಂಗವು ಬಂದಾಗ ಕೆಲ ಕೆಲವು ಸಾರೆ ಮಾತ್ರ ಅವರ ಕಷ್ಟದಲ್ಲಿ ಪಾಲುಗಾರನಾಗುತ್ತಿದ್ದನು. ಆದರೆ ಶಿವಾಜಿಯು ಪ್ರತಿಯೊಂದು ದಾಳಿಯಲ್ಲಿಯೂ ಪ್ರತಿಯೊಂದು ಪ್ರಸಂಗದಲ್ಲಿಯೂ ಒಬ್ಬ ತೀರ ಸಾಮಾನ್ಯ ಶಿಪಾಯಿಗಿಂತಲೂ ಹೆಚ್ಚು ಶಾರೀರಿಕ ಕಷ್ಟವನ್ನು ಸಹಿಸುತ್ತಿದ್ದನು. ಹಾಗೂ ತೀರ ಸಾದಾ ರೀತಿಯಿಂದ ಇರುತ್ತಿದ್ದನು. ಶಿವಾಜಿಯಂತೆ ಹಸಿವೆ ಬಾಯಾರಿಕೆಗಳ ಕಷ್ಟವನ್ನು ಸಂತೋಷದಿಂದ ಸಹಿಸಬಲ್ಲ ಎರಡನೇ ಸೇನಾನಾಯಕನು ತೀರ ಕ್ವಚಿತ್ತಾಗಿ ದೊರೆಯಬಹುದು.

ಮೇಲಿನ ವಿವರಣೆಯಿಂದ ತಿಳಿದು ಬರುವದೇನಂದರೆ, ಧೈರ್ಯ-ಶೌರ್ಯಾದಿ ಕ್ಷತ್ರಿಯೋಚಿತ ಗುಣಗಳಲ್ಲಿಯೂ ಅವುಗಳಿಗೆ ಸಂಬಂಧಿಸಿರುವ ಔದಾರ್ಯ, ಸರಳತೆ ಮುಂತಾದ ಗುಣಗಳಲ್ಲಿಯೂ ಶಿವಾಜಿಯೂ ಶಿಕಂದರನೂ ಒಬ್ಬರನೊಬ್ಬರು ಹೋಲುವರು.

ಮರಾಠೀ ಶಿಕ್ಷಕ.

ಈಗಿನ ಕಾಲದ ಕೆಲವು ಲಕ್ಷಣಗಳು.

(ಡಾಕ್ಟರ ಸರ್ ಭಾಂಡಾರಕರರವರ ಮಾತುಗಳು)

ಕಾಲಚಕ್ರವು ತಿರುಗಿದಂತೆ ಸಮಾಜಘಟನೆಯಲ್ಲಿಯೂ, ವ್ಯವಹಾರದಲ್ಲಿಯೂ ಕೆಲವು ತಪ್ಪುಗಳಂತಾವೆ ಬದಲಾವಣೆಗಳು ಆಗುತ್ತಿರುತ್ತವೆ.

ಅವು ಯಾರ ಸ್ವಾತಂತ್ರ್ಯದವಲ್ಲವಾದರೂ ಅವನ್ನು ಯೋಗ್ಯವಾದ ದಾರಿಗೆ ಹಚ್ಚುವದು ಶಿಷ್ಟಜನರ ಕೈಯಲ್ಲಿರುವದು. ಮತ್ತು ಆ ಬದಲಾವಣೆಗಳು ಇತರರಿಗಿಂತ ಪ್ರಬುದ್ಧ ಜನರಿಗೆ ಚಕನ್ನಾಗಿ ಕಾಣುವವು. ಆದ್ದರಿಂದ ಆ ಬದಲಾವಣೆಗಳ ಬಗ್ಗೆ ಆ ಶಿಷ್ಯರು ಏನು ಅಭಿಪ್ರಾಯಪಡುತ್ತಾರೆಂಬದನ್ನು ತಿಳಿದುಕೊಳ್ಳುವದಕ್ಕೆ ವಿವೇಕಿಗಳು ಯಾವಾಗಲು ಪ್ರಯತ್ನಿಸುತ್ತಿರುತ್ತಾರೆ. ಈಗ ಮಹಾರಾಷ್ಟ್ರ ದೇಶದಲ್ಲಿ ವಿದ್ಯೆ, ಆಚಾರ-ವಿಚಾರ, ಸಭ್ಯತನ ಇವುಗಳಿಂದ ಶ್ರೇಷ್ಠರೆನಿಸಿಕೊಂಡ ಸತ್ಪುರುಷರಲ್ಲಿ ಡಾಕ್ಟರ್, ಸರ್ ರಾವು ಕೃಷ್ಣ ಗೋಪಾಳ ಭಾಂಡಾರಕರವರು ಅಗ್ರಗಣ್ಯರಾಗಿರುವರು. ಆ ಮಹನೀಯರ ಹತ್ತರಕ್ಕೆ ಹೋಗಿ ಅವರೊಡನೆ ಸಂಭಾಷಣಮಾಡಿ ಅದರಲ್ಲಿ ಹೊರಟ ಅವರ ಮತಗಳನ್ನು ಈಚೆಗೆ ವಿ.ನೋದರಂಜನ ವಾಸಪತ್ರಿಕೆಯ ಸಂಪಾದಕರು ಬಹಳ ಪ್ರಯತ್ನದಿಂದ ಪ್ರಕಟಿಸಿರುವರು. ಅದರೊಳಗಿನ ಕೆಲವು ಮತಗಳು ತಾಯಿತಂದೆಗಳು, ಗುರುಗಳು, ವಿದ್ಯಾರ್ಥಿಗಳು ಈ ಮೂರು ವರ್ಗದ ಜನರಿಗೂ ಬಹಳ ಬೋಧಪ್ರದವಾಗಿರುವವು. ಆದ್ದರಿಂದ ಆ ಮಹನೀಯರ ಉತ್ತರದೊಳಗಿನ ಆ ಸಂಬಂಧದ ಮಾತುಗಳನ್ನು ಮಾತ್ರ ಇಲ್ಲಿ ಅನುವಾದಿಸುವೆವು. ಅವು ಯಾವ ಪ್ರಶ್ನೆಗಳ ಉತ್ತರಗಳಾಗಿರಬೇಕೆಂಬದನ್ನು ವಾಚಕರು ಸಹಜವಾಗಿ ಊಹಿಸಬಹುದು.

"ಸಾಧಾರಣವಾಗಿ ನಾನು ಬೆಳಗಿನಲ್ಲಿ ಆರುವರೆ ಘಂಟೆಗೆ ಏಳುತ್ತೇನೆ. ಏಳರಿಂದ ಹನ್ನೊಂದರ ವರೆಗೆ ಸುಮಾರು ನಾಲ್ಕು ತಾಸುಗಳನ್ನು ವಾಚನ, ಲೇಖನ, ಮತ್ತು ಮೂಲಗ್ರಂಥಗಳನ್ನು ನೋಡಿ ಯಾವದೊಂದು ಶೋಧವನ್ನು ಗೊತ್ತುಮಾಡುವದು, ಗಂ ಹೊಡೆಯುವ ಕಾಲಕ್ಕೆ ಭೋಜನ ಮಾಡುವದು ನನ್ನ ನಿತ್ಯಕ್ರಮವಾಗಿರುವದು. .... ಸ್ನಾನವಾದ ಬಳಿಕ ಪರಮೇಶ್ವರನ ಭಜನ-ಮನನ-ಪ್ರಾರ್ಥನೆಗಳಲ್ಲಿ ಕೆಲವು ಕಾಲವನ್ನು ಕಳೆಯುವೆನು. ಈ ರೀತಿ ದೇವರ ಪ್ರತ್ಯಕ್ಷ ಸಹವಾಸನಲ್ಲಿ ಕೆಲವು ಕಾಲವನ್ನು ಕಳೆದ ಹೊರತು ಮನಸ್ಸಿಗೆ ಸ್ವಾಸ್ಥ್ಯವು ದೊರೆಯುವದಿಲ್ಲ, ಮತ್ತು ಏನೋ ತಪ್ಪಿ ನಡೆದಂತೆ ಅನಿಸುತ್ತದೆ. .... ಸುಮಾರು ಎರಡುವರೆ ಘಂಟೆಗೆ ವಾಮ ಕುಕ್ಷಿಮಾಡಿ ಏಳುತ್ತೇನೆ. ಬಳಿಕ ಮತ್ತೆ ನನ್ನ ವಾಚನ, ಲೇಖನ ಮೊದಲಾದ ಕೆಲಸಗಳು ನಡೆಯುವವು. .... ಈಶ್ವರನಿರ್ಮಿತವಾದ ಈ ಸುಂದರ ಸೃಷ್ಟಿಯನ್ನು ನೋಡುವಾಗ ನನ್ನ ಮನೋವೃತ್ತಿಗಳು ಉಲ್ಲಾಸ

ಹೋದುತ್ತವೆ, ಮತ್ತು ವಿಚಾರಗಳಿಗೆ ಸ್ಫೂರ್ತಿ ಯುಂಟಾಗುತ್ತದೆ. ಆಗ ವಿವಿಧ ವಿಷಯಗಳನ್ನು ಏಕಾಂತದಲ್ಲಿ ಚಿಂತನೆಮಾಡಿ, ಪ್ರಸನ್ನ ಮನಸ್ಸಿನಿಂದ ಸಾಯಂಕಾಲದ ಎಂಟುವರೆ ಘಂಟೆಗೆ ಮನೆಗೆ ಬರುವೆನು. ಸುಮಾರು ೮॥, ೯ ಹೊಡೆಯುವರೆಗೆ ನನ್ನ ಪ್ರೀತಿಯ ವಿಷಯದವಾಚನ, ಲೇಖನ, ಮೂಲದೊಳಗಿನ ಅಧ್ಯಾಯಗಳನ್ನು ನೋಡುವದು ಮುಂತಾದ ಕೆಲಸಗಳನ್ನು ಮಾಡುವೆನ. ಸುಮಾರು ೧೦ ಘಂಟೆಗೆ ಮಲಗುವೆನು.

ಊಟದಲ್ಲಿ ಅನ್ನ, ಗೋದಿಯರೊಟ್ಟಿ, ಎರಡು ಪಲ್ಯಗಳು ಇರುವವು. ಪಕ್ವಾನ್ನಗಳನ್ನೂ ಜಡಪದಾರ್ಥಗಳನ್ನೂ ನಾನು ಬಹುತರ ತಿನ್ನುವದಿಲ್ಲ. ನನ್ನ ಪ್ರಕೃತಿಯ ವಿಷಯದಲ್ಲಿ ನಾನು ಬಹಳ ಎಚ್ಚರಗೊಳ್ಳುವೆನು. ಯಾವ ತರದಿಂದಲೂ ಪ್ರಕೃತಿಯು ಕೆಡದಂತೆ ನಡೆಯುವೆನು. ವೈದ್ಯಕದ ಮೂಲತತ್ವಗಳ ಜ್ಞಾನವನ್ನು ನಾನು ಬಹಳ ಮಟ್ಟಿಗೆ ಸಂಪಾದಿಸಿರುವೆನು. ಇದಲ್ಲದೆ ಪ್ರತಿದಿವಸ ಎರಡು ತಾಸು ಬೈಲು ಹವೆಯಲ್ಲಿ ತಿರುಗಾಡುವ ನನ್ನ ನಿತ್ಯಕ್ರಮವು ತಪ್ಪದೆ ಸಾಗುತ್ತ ಬಂದಿರುವದು. .... (ನನ್ನಂತೆಯೆ) ನೀವು ಈ ಪ್ರಕಾರ ಸಾಧುಸಂತರ ವಚನಗಳ ಮನನಮಾಡಿ ದೃಢಮನಸ್ಸಿನಿಂದ ಆತ್ಮಸಂಯಮನ ಮಾಡಿದರೆ, ಮತ್ತು ಈ ಆತ್ಮಸಂಯಮನದ ಬಲವುಂಟಾಗುವದಕ್ಕೆ ಅನನ್ಯಭಾವದಿಂದ ದೇವರನ್ನು ಪ್ರಾರ್ಥಿಸಿದರೆ ಆ ಪರಮಾತ್ಮನು ನಿಮ್ಮ ಹೊರೆಯನ್ನಾದರೂ ಕೇಳಿ ಬಿಡಿ ಬರುವನು. ಹುಡುಗರಿಗೆ ಬಾಲ್ಯದಿಂದ ಸತ್ಯ ಪ್ರೀತಿಯನ್ನು ಹುಟ್ಟಿಸುವ ವಿಷಯದಲ್ಲಿ ನಾನು ಬಹಳ ಎಚ್ಚರಗೊಳ್ಳುತ್ತಿದ್ದೆನು. ಅವರು ಮೋಸಮಾಡಿದರೆ, ಇಲ್ಲವೆ ಎರಡನೆಯವರ ಕುಚೇಷ್ಟೆಮಾಡಿದರೆ, ಇಲ್ಲವೆ ಇದೇ ಪ್ರಕಾರದ ಯಾವದೊಂದು ಕೆಟ್ಟ ಕೆಲಸವನ್ನು ಮಾಡಿದರೆ ಅವುಗಳ ಕಡೆಗೆ ನಾನು ಎಂದೂ ಅಲಕ್ಷ್ಯ ಮಾಡುತ್ತಿರಲಿಲ್ಲ. ಹುಡುಗರ ನಡತೆಯ ವಿಷಯದಲ್ಲಿ ನಾನು ಬಹಳ ಉಗ್ರತೆಯನ್ನು ಇಟ್ಟಿದ್ದೆನು. ಅವರ ಹಟವನ್ನು ಎಂಥ ನಡೆಯುಗೊಡುತ್ತಿದ್ದಿಲ್ಲ. ಮತ್ತು ನನಗ ಇಷ್ಟವಾಗಿ ತೋರುವದನ್ನು ಅವರಿಂದ ಮಾಡಿಸಿಕೊಳ್ಳುವವರೆಗೆ ಎಂದಿಗೂ ಅವರ ಮೇಲೆ ಮಮತೆಯನ್ನು ತೋರಿಸುತ್ತಿರಲಿಲ್ಲ. ಗಣಿತ, ಭೂಗೋಲ, ರಸಾಯನಶಾಸ್ತ್ರ ಮೊದಲಾದ ವಿಷಯಗಳಂತೆ ನೀತಿ ಶಿಕ್ಷಣವೂ ಒಂದು ವಿಷಯವೆಂದು ತಿಳಿದು ಶಿಕ್ಷಕರು ವಿದ್ಯಾರ್ಥಿಗಳಿಗೆ ಕಲಿಸಿದರೆ ಅದರಿಂದ ಒಳ್ಳೆಯ ಪರಿಣಾಮವಾದೀತೆಂದು ನನಗೆ ತೋರುವದಿಲ್ಲ.

ನೀತಿ ಶಿಕ್ಷಣವನ್ನು ಕೊಡುವ ಶಿಕ್ಷಕನ ನೈತಿಕ ವರ್ತನೆವು ಅತ್ಯಂತ ಶುದ್ಧವಾಗಿಯೂ, ದೃಷ್ಟಾಂತರೂಪವಾಗಿಯೂ ಇರಬೇಕು, ಅವರ ಶೀಲವು ಉತ್ತಮವಿರಬೇಕು. ಮತ್ತು ತಾವು ಈ ಶಿಕ್ಷಣ ಕೊಡುವ ವಿದ್ಯಾರ್ಥಿಗಳ ಶೀಲವು ಸುಧಾರಿಸಬೇಕೆಂಬ ವಿಷಯದಲ್ಲಿ ಅವರಿಗೆ ನಿಜವಾದ ಅಪೇಕ್ಷೆಯಿರಬೇಕು. ಸದ್ಭಾವದಲ್ಲಿ ಅವರ ನಿಷ್ಠೆಯಿರಬೇಕು. ಮತ್ತು ಅವರು ತಮ್ಮ ಕರ್ತವ್ಯವನ್ನು ಚನ್ನಾಗಿ ತಿಳಿದಿರಬೇಕು. ಕೇವಲ ಜ್ಞಾನಸಂಪಾದನೆಗಾಗಿಯೇ, ವಿದ್ಯಾರ್ಜನೆ ಮಾಡಬೇಕೆಂಬ ಪ್ರವೃತ್ತಿಯು ಈಗಿನ ವಿದ್ಯಾರ್ಥಿಗಳಲ್ಲಿ ಬಹಳ ಕಡಿಮೆಯಾಗಿರುವದು. ಯಾವದೊಂದು ವಿಶಿಷ್ಟವಾದ ಉದ್ದೇಶದಿಂದ ವಿದ್ಯಾರ್ಜನೆ ಮಾಡುವವರೇ ಬಹಳ. ನಮ್ಮ ಕಾಲದ ಸ್ಥಿತಿಗೂ ಈಗಿನಸ್ಥಿತಿಗೂ ಬಹಳ ಹೆಚ್ಚು ಕಡಿವೆ.ಯಾಗಿದೆ. ನನ್ನ ಉದಾಹರಣವನ್ನೇ ಹೇಳುತ್ತೇನೆ. ಆ ಕಾಲಕ್ಕನುಸರಿಸಿ ನಾನು ಇನ್ನೂ ವಿದ್ಯಾಭ್ಯಾಸ ಮಾಡಬೇಕೆಂದು ನಮ್ಮ ಮನೆಯವರಿಗೂ ಊರವರಿಗೂ ಇಚ್ಛೆಯಿರಲಿಲ್ಲ. ಆದರೆ ರತ್ನಾಗಿರಿಯ ರಾ. ನಾ. ವಿಶ್ವನಾಥ ನಾರಾಯಣ ಮಂಡಲಿಕ ಮೊದಲಾದವರು ಮುಂಬಯಿಗೆ ಹೋಗಿ ದೊಡ್ಡ ವಿದ್ವಾಂಸರಾದ ಉದಾಹರಣಗಳು ನನ್ನ ಎದುರಿಗೆ ಇದ್ದವು. ಅವರಂತೆ ನಾನೂ ಕಲಿತು ದೊಡ್ಡ ವಿದ್ವಾಂಸನಾಗಬೇಕು; ಹೊಸ ಹೊಸ ಸಂಗತಿಗಳ ಜ್ಞಾನವನ್ನು ಸಂಪಾದಿಸಬೇಕು, ಎಂದು ನನಗೆ ಉತ್ಕಟ ಇಚ್ಛೆಯು ಉತ್ಪನ್ನವಾಯಿತು. ಮತ್ತು ಮನೆಯವರ ಮನಸ್ಸನ್ನು ಒಲಿಸಿ ಸಿರಿಯವರ ಅಪ್ಪಣೆಯಿಂದ ಸನ್ ೧೮೮೩ ರಲ್ಲಿ ಮನೆಯ ಬೋಟಿನಿಂದ ೪೫೦ ದಿವಸದ ಬಹಳ ಕಷ್ಟಕರವಾದ ಪ್ರವಾಸವನ್ನು ಮಾಡಿ ಮುಂಬಯಿಗೆ ಬಂದೆನು. ಮತ್ತು ಬೇರೆ ಯಾವ ವಿಚಾರವನ್ನೂ ಮನಸ್ಸಿನಲ್ಲಿ ತಾರದೆ ಕೂಡಲೆ ಜ್ಞಾನ ಸಂಪಾದನೆಯ ಮಾರ್ಗಕ್ಕೆ ಹತ್ತಿದೆನು. ಗುರುಜನರ ಅನಾದರ ಮಾಡುವಲ್ಲಿ ಈಗಿನ ಹುಡುಗರ ಮತ್ತು ತರುಣರ ಪ್ರವೃತ್ತಿಯು ಇರುತ್ತದೆ. ಮತ್ತು ಮುಖ್ಯವಾಗಿ ಎಷ್ಟೋ ವರ್ತಮಾನ ಪತ್ರಕಾರರು, ಸಭೆಯೊಳಗಿನ ವಕ್ತಾರರು, ಮತ್ತು ಪ್ರಮುಖರು ತಮ್ಮ ಪಕ್ಷವನ್ನು ಸಮರ್ಥಿಸುವದರಲ್ಲಿ ವಿಚಾರವಿಲ್ಲದವರಾಗಿ ತಮ್ಮ ವಿಷಮಯವಾದ ಲೇಖಣಿಯಿಂದ, ವಾಣಿಯಿಂದ ಮತ್ತು ನಿಂದ್ಯವಾದ ಆಚರಣದಿಂದ ಅಯುಕ್ತವಾದ ಕೃತಿಗಳನ್ನು ಇದುವರೆಗೆ ಮಾಡುತ್ತ ಬಂದಿರುತ್ತಾರೆ. ಅವರ ಭಯಂಕರ ಪಾಪವು ಸಮಾಜವನ್ನು ಆವರಿಸಿರುವದು.

ಎಲ್ಲ ನೋಡಿದಲ್ಲಿ ನಡತೆಯು ಚನ್ನಾಗಿ ಕಾಯಲ್ಪಡದಿರುವದರಿಂದ ಈ ದೋಷವು ಸಮಾಜದಲ್ಲಿ ಸೇರಿರುವದು. ಅದನ್ನು ಹೋಗಲಾಡಿಸುವದಕ್ಕೆ ನಡತೆಯನ್ನು ಒಳ್ಳೇ ರೀತಿಯಿಂದ ಪಾಲಿಸಲೇ ಬೇಕು. ನಮ್ಮಲ್ಲಿ ಮುಖ್ಯವಾಗಿ ಐದು ದೋಷಗಳಿರುವವು:—(೧) ವ್ಯಕ್ತಿಹಿತದ ಹಿಂದೆ ಸ್ವಾರ್ಥದ ಸಂಬಂಧವಿಲ್ಲದ ರಾಷ್ಟ್ರಹಿತದ ಕಡೆಗೆ ನಾವು ಹಣಿಕಿ ಕೂಡ ನೋಡುವದಿಲ್ಲ. ಇಷ್ಟೇ ಅಲ್ಲ ಸ್ವಲ್ಪವಾದ ಸ್ವಾರ್ಥಕ್ಕಾಗಿ ಇಡಿ ರಾಷ್ಟ್ರದ ಅಹಿತವನ್ನು ಮಾಡುವದಕ್ಕೂ ನಾವು ಹಿಂದು ಮುಂದೆ ನೋಡುವದಿಲ್ಲ. ಅಂದರೆ, ಸ್ವಾರ್ಥದ ಆಚೆಯ ರಾಷ್ಟ್ರಹಿತವು ನಮಗೆ ಗೊತ್ತೇ ಇಲ್ಲ. (೨) ಒಬ್ಬರಿಗೊಬ್ಬರಲ್ಲಿ ನಂಬಿಗೆ ಕಡಿಮೆ. ನಂಬಿಗೆಯನ್ನುಂಟು ಮಾಡುವ ಆಕರ್ಷಣೆಯೂ ಕಡಿಮೆ. (೩) ನಮ್ಮಲ್ಲಿ ನಿಯಮಿತತನವು ಸ್ವಲ್ಪವೂ ಇಲ್ಲ. ೧೨ ಹೊಡೆಯುವ ಕಾಲಕ್ಕೆ ಊಟದ ಸಮಾರಂಭವಿದ್ದರೆ ಯಜಮಾನನು ೯ ಹೊಡೆಯುವ ಸಮಯಕ್ಕೆ ಬರಬೇಕೆಂದು ಆಮಂತ್ರಣ ಹೇಳಿದನು. ಊಟಕ್ಕೆ ಬರುವವರೂ ಮೂರು ಹೊಡೆಯುವದಕ್ಕೆ ಮುಂಚೆ ಬರುವದಿಲ್ಲ. (೪) ಏಕನಿಷ್ಠೆಯಿಂದಲೂ, ದೃಢವಾದ ಪ್ರಯತ್ನದಿಂದಲೂ ಯಾವ ದೊಂದು ಕಾರ್ಯವನ್ನು ಕೊನೆಗಾಣಿಸುವ ಸಾಮರ್ಥ್ಯವು ನಮ್ಮಲ್ಲಿಲ್ಲ. (೫) ಪರಸ್ಪರ ಕಲಹದಿಂದ ಅತಿಶಯವಾದ ರಾಷ್ಟ್ರಹಾನಿಯಾಗುತ್ತಿರುವದನ್ನು ಪ್ರತ್ಯಕ್ಷವಾಗಿ ನೋಡುತ್ತಿದ್ದರೂ ರಾಷ್ಟ್ರಹಿತಕ್ಕಾಗಿ ಆ ಕಲಹವನ್ನು ಬಿಡುವದಕ್ಕೆ ನಾವು ಸಿದ್ಧರಾಗಿಲ್ಲ.

ರಾಜಾಶ್ರಯವಿದ್ದರೆ ನಾವು ಹಾಗ ಮಾಡುತ್ತಿದ್ದೆವು, ಹೀಗೆ ಆಗುತ್ತಿತ್ತು, ಎಂಬ ನಮ್ಮ ಗ್ರಹಿಕೆಯು ಭ್ರಮೆಯೇ ಸರಿ. ನಿಜವಾದ ಕರ್ತೃತ್ವವು ಕಂಡು ಬರಬೇಕಾದರೆ ಮನಸ್ಸಿನ ಆಸ್ಥೈಂದು ನಿಶ್ಚಯ, ದೃಢಪ್ರಯತ್ನ, ಸತತ ಉದ್ಯೋಗ, ಕರ್ತವ್ಯನಿಷ್ಠೆ ಈ ಗುಣಗಳು ನಮ್ಮಲ್ಲಿ ಚನ್ನಾಗಿ ನೆಲೆಗೊಳ್ಳಬೇಕು. ಈ ಗುಣಗಳಿರುವ ಮನುಷ್ಯನ ಕರ್ತೃತ್ವವು ಜಗತ್ತಿನ ಎದುರಿಗೆ ಬಾರದೆ ಎಂದೂ ಇರುವದಿಲ್ಲ. ಇದ್ದ ಸ್ಥಿತಿಯಲ್ಲಿಯೇ ನಾವು ಪ್ರಯತ್ನಮಾಡಬೇಕು. ನಮ್ಮ ಕೈಯಲ್ಲಿಲ್ಲದ ಸಂಗತಿಗಳನ್ನೂ ಬದಲಿಸಲಿಕ್ಕೆ ಬಾರದ ಪರಿಸ್ಥಿತಿಯನ್ನೂ ಮುಂದೆ ಮಾಡಿ, ಅವುಗಳ ಮೇಲೆಯೇ ಎಲ್ಲ ದೋಷಗಳನ್ನು ಇಟ್ಟು, ನಾವು ಬದಿಗಾಗುವದೂ, ತಮ್ಮ ಕರ್ತವ್ಯಗಳನ್ನು ಮರೆತು ಬಿಡುವದೂ ನಿಜವಾದ ಮನುಷ್ಯನ ಲಕ್ಷಣಗಳಲ್ಲ. ರಾಜಾಶ್ರಯವು

ದೊರೆತರೆ ಮಾತ್ರ ನೀವು ಯಾವದೊಂದು ಕೆಲಸವನ್ನು ಮಾಡುವವರು, ಇಲ್ಲವಾದರೆ ಸುಮ್ಮನೆ ಕುಳಿತುಕೊಳ್ಳುವವರಲ್ಲವೆ? ನಿರ್ಣಯಸಾಗರ ಪ್ರೆಸ್ಸಿನ ಜಾವಜಿ ದಾದಾಜಿಯವರಿಗೆ ರಾಜಾಶ್ರಯವು ದೊರೆತಿತ್ತೆ? ಅವರು ದೀರ್ಘಪ್ರಯತ್ನದಿಂದಲೂ, ಸತತೋದ್ಯೋಗದಿಂದಲೂ ತಮ್ಮ ಕರ್ತೃತ್ವವನ್ನು ತೋರ್ಪಡಿಸಿದರಲ್ಲವೆ?

ನಮ್ಮಲ್ಲಿ ನಿಜವಾದ ಉತ್ಸುಕತೆ ಇಲ್ಲ, ಉತ್ಕಟೇಚ್ಛೆ ಇಲ್ಲ, ನಿಜವಾದ ಆಸ್ಥೆಯಿಲ್ಲ, ನಿಜವಾದ ಆಸಕ್ತಿಯಿಲ್ಲ, ದೃಢನಿಶ್ಚಯವಿಲ್ಲ, ಸ್ವಾರ್ಥತ್ಯಾಗವಿಲ್ಲ. ಈ ಗುಣಗಳನ್ನು ಸಂಪಾದಿಸಿ ಏಕನಿಷ್ಠೆಯಿಂದ ಕಾರ್ಯವನ್ನು ಮಾಡಿದರೆ ಈಪ್ರೊತ್ತಿಗೆ ಎಷ್ಟೋ ಕೆಲಸಗಳನ್ನು ಮಾಡಬಹುದಾಗಿತ್ತು.

" आपुलें स्वहित करावें पैं आधीं । विचारूनि बुद्धिसमाधान ।
नये मार्गें पाहों वाटफिरोनियां । दुसरा संगिया साहाकारी ॥
आपुलियां बळें चालावी हे कास । न येणेंचो आस आणिकाचि " ॥

(ಭಾವಾರ್ಥ:—ತನ್ನ ಮನಸ್ಸಿಗೆ ಸಮಾಧಾನವಾಗುವ ರೀತಿಯಲ್ಲಿ ತನ್ನ ಹಿತವನ್ನು ಸಾಧಿಸಬೇಕು. ಬೇರೆ ಸಹಾಯಕನನ್ನು ದಾರಿಯಲ್ಲಿ ನಿಂತಿರುಗಿ ನೋಡಬಾರದು. ಸ್ವಸಾಮರ್ಥ್ಯದಿಂದಲೇ ಬೊಂಕಕಟ್ಟಿ ನಿಂತುಕೊಳ್ಳಬೇಕು, ಮತ್ತೊಬ್ಬರ ಸಹಾಯದ ಆಶೆಯನ್ನು ಮಾಡಬಾರದು.)

ಸಂತ ತುಕಾರಾಮನು ಈ ಅಭಂಗಗಳಲ್ಲಿ ಹೇಳಿದ್ದನ್ನು ಸ್ಮರಣದಲ್ಲಿಡಬೇಕು. ಅಂದರೆ ಸಮಾಜಿಕಸುಧಾರಣೆಯ ವಿಷಯದಲ್ಲಿ ವ್ಯಕ್ತಿಶಃ ಪ್ರಯತ್ನವು ಹ್ಯಾಗೆ ಆಗಬೇಕೆಂಬದು ನಿಮ್ಮ ಲಕ್ಷದಲ್ಲಿ ಬರುವದು .... ನಮ್ಮ ಪೂರ್ವಜರಲ್ಲಿ ಎಲ್ಲ ಗುಣಗಳೂ, ಎಲ್ಲ ವಿದ್ಯೆಗಳೂ, ಕಲೆಗಳೂ ಇದ್ದವೆಂಬ ನೆಲೆಯಿಂದು ಘಾತುಕವಾದ ದುರಭಿಮಾನವು ನಮ್ಮ ರಕ್ತದಲ್ಲಿ ಸಹ ಸೇರಿ ಹೋಗಿದೆ. ಇದರಿಂದ ನಮಗೆ ಬಹಳೇ ಹಾನಿಯಾಗಿದೆ. .... ಜ್ಞಾನಾರ್ಜನೆಗಾಗಿಯೇ ವಿದ್ಯಾರ್ಜನವನ್ನೂ, ಜ್ಞಾನಾರ್ಜನೆಗಾಗಿಯೇ ಪುರಾಣ-ಭಾಷಾ-ಇತಿಹಾಸ-ಸಂಶೋಧನಪ್ರಯತ್ನವನ್ನೂ, ಜ್ಞಾನಾರ್ಜನೆಗಾಗಿಯೇ ತಮ್ಮ ಎಲ್ಲ ಆಯುಷ್ಯವನ್ನೂ ವಿನಿಯೋಗಿಸಬೇಕು. "

ಡಾಕ್ಟರ ಸಾಹೇಬರವರ ಭಾಷಣದಲ್ಲಿ ಬಾಲಕರಿಗೂ, ತರುಣರಿಗೂ ತಿಳಿಯಲಾಗದ ಭಾಗಗಳನ್ನು ಬಿಟ್ಟು ಉಳಿದ ಭಾಗಗಳನ್ನು ಮಾತ್ರ ಇಲ್ಲಿ ಕೊಟ್ಟಿದೆ. ಎಲ್ಲ ಮಾತುಗಳು ಗ್ರಾಹ್ಯವಾದಂಥವೂ, ಲಕ್ಷ್ಯದಲ್ಲಿಡಬೇಕಾ

ದಂಥವೂ ಇರುವವು. ಅದರಲ್ಲಿಯೂ ವಿಶೇಷವಾಗಿ ಈ ಕಾಲದ ತರುಣ ಜನರ ನಡತೆಯ ವಿಷಯದಲ್ಲಿ ಹೇಳಿದ್ದು ಶಬ್ದಶಃ ನಿಜವಾಗಿರುವದು. "ಗುರು ಜನರ ಅನಾದರ ಮಾಡುವದರ ಕಡೆಗೆ ಈಗಿನ ಕಾಲದ ಹುಡುಗರ ಮತ್ತು ತರುಣರ ಪ್ರವೃತ್ತಿಯಿರುತ್ತದೆ." ಈ ದುರ್ಗುಣವು ಎಷ್ಟೋ ದಿವಸಗಳಿಂದ ನಮ್ಮಲ್ಲಿಯ ಬುದ್ಧಿವಂತರ ಲಕ್ಷದಲ್ಲಿ ಬಂದಿರುವದು. ಈ ದುರ್ಗುಣಕ್ಕೆ ಕಾರಣವು ಒಂದೇ ಅಲ್ಲ. ಒಟ್ಟಿಗೆ ಪರಿಸ್ಥಿತಿಯೇ ಕಾರಣವಾಗಿರುವದು.

ಹುಡುಗರ ನಡತೆಯ ವಿಷಯವಾಗಿ ಹೇಳಿದ ಉಪಾಯಗಳೆಲ್ಲ ಚನ್ನಾಗಿರುವವು. ತಂದೆತಾಯಿಗಳೂ, ಶಿಕ್ಷಕರೂ, ಆ ಉಪಾಯಗಳ ಯೋಜನೆ ಮಾಡಿದರೆ, ಅದರಿಂದ ಒಳ್ಳೆಯ ಉಪಯೋಗವಾಗುವ ವಿಷಯದಲ್ಲಿ ಸಂಶಯವಿಲ್ಲ. ಮತ್ತೊಂದೇನಂದರೆ, ತಮ್ಮ ಹುಡುಗರಲ್ಲಿಯೂ, ವಿದ್ಯಾರ್ಥಿಗಳಲ್ಲಿಯೂ, ಯಾವ ಯಾವ ಗುಣಗಳು ಬರಬೇಕೆಂದು ತಾಯಿತಂದೆಗಳೂ, ಗುರುಗಳೂ, ಅಪೇಕ್ಷಿಸುತ್ತಾರೋ ಆ ಗುಣಗಳನ್ನು ತಾವು ಅತಿಶಯವಾಗಿ ಪ್ರಯತ್ನಿಸಿ ಸಂಗ್ರಹಿಸಬೇಕು. ಬಳಿಕ ಅವುಗಳನ್ನು ಹುಡುಗರ ಮತ್ತು ವಿದ್ಯಾರ್ಥಿಗಳ ಅನುಭವಕ್ಕೆ ತಂದು ಕೊಡಬೇಕು. ಆಂದರೆ, ಕಾರ್ಯವಾಗುವದು.

ಈ ವಿಷಯದಲ್ಲಿ ಕೈ. ವಿಶ್ವನಾಥ ನಾರಾಯಣ ಮಂಡಲಿಕ ಇವರು ಬಹುಜನರಿಗೆ ಗೊತ್ತಿದ್ದ ಉಜ್ವಲ ದೃಷ್ಟಾಂತವಾಗಿದ್ದರು. ಅವರು ಇದೇ ಪ್ರಕಾರ ನಿಯಮಿತತನದಿಂದಲೂ, ನಿಸ್ಪೃಹತೆಯಿಂದೂ, ನಿರ್ದಾಕ್ಷಿಣ್ಯದಿಂದಲೂ, ತಮ್ಮ ಎಲ್ಲ ವ್ಯವಹಾರಗಳಲ್ಲಿ ವರ್ತಿಸುತ್ತಿದ್ದರು ಈ ವಿಷಯದಲ್ಲಿ ಅವರ ಒಳ್ಳೇ ಪ್ರಸಿದ್ಧಿಯಿತ್ತು. ರಾ. ಸಾ. ಮಂಡಲಿಕರವರು ಅಧ್ಯಕ್ಷರಿದ್ದ ಸಭೆಗೆ ಕೌನ್ಸಿಲದಾರರಂಥ ದೊಡ್ಡ ದೊಡ್ಡ ಅಧಿಕಾರಿಗಳೂ ಕೂಡ, ನಿಯಮಿತ ವೇಳೆಗಿಂತ ಮುಂಚೆಯೇ ಬರುವ ವಿಷಯದಲ್ಲಿ ಎಚ್ಚರಗೊಳ್ಳುತ್ತಿದ್ದರು. ಇನ್ನೂ ಎಷ್ಟೋ ದೊಡ್ಡ ದೊಡ್ಡ ಸರಕಾರಿ ಅಧಿಕಾರಿಗಳು ಇವರಿಗೆ ಬೆಟ್ಟಿಯಾಗುವದಕ್ಕೆ ಗೊತ್ತು ಮಾಡಿಕೊಂಡ ವೇಳೆಗಿಂತ ಒಂದೆರಡು ಮಿನಿಟು ತಡವಾದರೂ ಕೂಡ ಭೆಟ್ಟಿಯ ವಿಷಯದಲ್ಲಿ ನಿರಾಶರಾಗಿ ಹಿಂದಿರುಗಿ ಹೋದ ಉದಾಹರಣೆಗಳುಂಟು. ಈ ಪ್ರಕಾರ ಅವರ ವರ್ತನವಿದ್ದದರಿಂದ ಅನರೊಡನೆ ವೇಳೆಯನ್ನನುಸರಿಸಿ ನಡೆಯುವದಕ್ಕೆ ಎಲ್ಲರೂ ಎಚ್ಚರ

ಗೊಳ್ಳುತ್ತಿದ್ದರು. ಎಂದೂ ಒಂದು ಕ್ರಣ ಸಹ ತಡವಾಡುತ್ತಿದ್ದಿಲ್ಲವೆಂಬದು ಎಲ್ಲರ ಪ್ರತ್ಯಕ್ಷ ಅನುಭವಕ್ಕೆ ಬಂದ ಸಂಗತಿಯು. ಇದರಿಂದ ಒಬ್ಬ ವ್ಯಕ್ತಿಯಿಂದ ಅವರಿಗೆ ಸಂಬಂಧಪಟ್ಟವರೆಲ್ಲ ನಿಯಮಿತತನದಿಂದ ನಡೆಯುಬೇಕಾಗಿತ್ತೆಂದ ಮೇಲೆ ತಾಯಿತಂದೆಗಳೂ, ಗುರುಗಳೂ, ದೃಢನಿಶ್ಚಯದಿಂದ ತಮ್ಮ ಎಲ್ಲ ವ್ಯವಹಾರಗಳಲ್ಲಿ ನಿಯಮಿತತನದಿಂದ ನಡೆದರೆ, ಅವರ ಮಕ್ಕಳೂ, ವಿದ್ಯಾರ್ಥಿಗಳೂ, ಅವರಂತೆ ನಿಯಮಿತತನವುಳ್ಳವರಾಗುವರೆಂಬ ವಿಷಯದಲ್ಲಿ ಸಂಶಯವಿಲ್ಲ. ಬಹಳ ಹೇಳುವದೇನು? ಉಗೆಬಂಡಿಗಳು, ಉಗೆಹಡಗಗಳು, ಪೋಸ್ಟಆಫೀಸುಗಳು, ಇವುಗಳ ವೇಳೆಗಳು ನಿಯಮಿತವಿರುವದರಿಂದ ಇವುಗಳಿಂದಲೂ ಜನರಲ್ಲಿ ನಿಯಮಿತತನವುಂಟಾಗುವದಕ್ಕೆ ಅವಕಾಶವಾಗಿದೆಯೆಂಬದು ಎಲ್ಲರ ಲಕ್ಷ್ಯದಲ್ಲಿಯೂ ಬರಬಹುದಾಗಿದೆ. ಆದ್ದರಿಂದ ಹುಡುಗರಲ್ಲಿ ಈ ಗುಣಗಳನ್ನು ಹುಟ್ಟಿಸುವದು ತಂದೆತಾಯಿಗಳ ಮತ್ತು ಗುರುಗಳ ಕೈಯ್ಯಲ್ಲಿರುವದೆಂಬದನ್ನು ವಿವರಿಸಲಾಗದು.

ಪತ್ರವ್ಯವಹಾರ.

——:o:——

ಗುರುವರ್ಯ ರಾವಸಾ॥ ಕನ್ನಡ ಶಾಳಾಪತ್ರಿಕದ ಎಡಿಟರ ಮಹಾಶಯರ ಸನ್ನಿಧಿಗೆ:—

ಶಿರಸಾ॥ ನಮಸ್ಕಾರಗಳು ವಿನಂತಿ:—

ಮಾರ್ಚ ತಿಂಗಳ ಮಾಸಪತ್ರಿಕೆಯಲ್ಲಿ ಮಿ. ಪಟ್ಟೇದ ಇವರು ಯತಿಯವಿಷಯದಲ್ಲಿ ಒಂದು ನಿರ್ಣಯಾತ್ಮಕ ಲೇಖ ಬರೆದದ್ದನ್ನೂ ಅದರ ಮೇಲೆ ಮಿ. ಚಿವ್ಮಲಗಿಯವರು ಟೀಕಾರೂಪವಾಗಿ ಬರೆದ ಮೇಲೆ ತಿಂಗಳ ಅಂಕದಲ್ಲಿಯು ವಿವರವನ್ನೂ ಹಾಗೂ ಪುನಃ ಜೂನ ತಿಂಗಳಲ್ಲಿ ಮಿ. ಪಟ್ಟೇದವರವರು ಮಿ. ಚಿವ್ಮಲಗಿಯವರ ಅಭಿಪ್ರಾಯದ ಖಂಡನವು ಯಥಾಮತಿಯಾಗುವಂತೆ ವರ್ಣಿಸಿ, ತಮ್ಮ ಅಭಿಪ್ರಾಯವನ್ನೇ ಸಿದ್ಧ ಮಾಡಲು ಯತ್ನಿಸಿದ್ದನ್ನೂ ಸಮಗ್ರವಾಗಿ ಓದಿ ನೋಡಿದೆನು. ಆದರೆ ಈ ವಾದಗ್ರಸ್ತ ವಿಷಯದಲ್ಲಿ ನನಗಾದರೂ ತೋರಿದ ನಾಲ್ಕು ಮಾತುಗಳನ್ನು ಹೇಳಿ, ವ್ಯವಸಾಯ ಬಂಧುಗಳ ವಿಚಾರದಿಂದಲೂ ಗುರುವರ್ಯರ ವಿಚಾರದಿಂದಲೂ ಈ ವಿಷಯದ ನಿರ್ಣ

ಯವಾಗುವ ಬಗ್ಗೆ, ಕೆಳಗಿನ ನಾಲ್ಕು ಪಂಕ್ತಿಗಳನ್ನು ತಮ್ಮ ಸನ್ನಿಧಿಯಲ್ಲಿ ಕಳಿಸಿರುವೆನು. ಅದಕ್ಕೆ ಬರುವ ಅಂಕದಲ್ಲಿಯೇ ಸ್ಥಳ ದೊರೆದೀತೆಂದು ತುಂಬಾ ಆಶಿಸುತ್ತೇನೆ.

ನನ್ನ ಅಭಿಪ್ರಾಯವೆಂದರೆ ಮಿ. ಚಿಮ್ಮಲಗಿ ಇವರ ಅಭಿಪ್ರಾಯದ ಪುನರುಚ್ಚಾರಣೆಯೇ ಇರುವದು. ಅವರು ಆದರೆ ಸಂಕ್ಷೇಪವಾಗಿ ಹೇಳಿದ ವಿಷಯವನ್ನು ಕೆಲ ಮಟ್ಟಿಗ ವಿಸ್ತರಿಸಿ ಹೇಳಲು ಈಗ ಉದ್ಯುಕ್ತನಾಗಿದ್ದೇನೆ.

ಮಿ. ಪಟ್ಟೇದರವರು ಮಿ. ಚಿಮ್ಮಲಗಿಯವರ ಅಭಿಪ್ರಾಯದ ಖಂಡನ ಮಾಡುವ ಕಾಲಕ್ಕೆ ಕೇಶಿರಾಜಕವಿ, ಕಾಲೇಜದ ಕನ್ನಡ ಪಂಡಿತರು, ಮೈಸೂರಸರಣಿ, ಇವೇ ಮೊದಲಾದ ಅವಶ್ಯಕವಾದ ಮಾತುಗಳನ್ನು ಮೂಲೆಗೊತ್ತಿ ತಮಗೆ ಅನುಕೂಲವಾಗುವಂತೆ "ಯತಿವಿಲಂಘನವೆಂದರೆ ಕನ್ನಡ ಪದ್ಯ ರಚನಾಕ್ರಮದೊಳಗೆ ಯತಿಯು ಸ್ಥಳದಲ್ಲಿ ವಿಭಕ್ತಿ ಇಲ್ಲದಿರುವದಾಗಿ ತಿಳಿಯಬೇಕೆಂದೂ ಪಠನಕ್ರಮದಲ್ಲಿ ಅವಶ್ಯವಾಗಿ ಯತಿಯ ಹಕ್ಕು ಉಂಟೆಂದು ತಿಳಿಯಬೇಕೆಂದೂ ಅನೇಕ ವಿವರಣೆಯಿಂದ ವ್ಯಕ್ತಮಾಡಲು ಯತ್ನಿಸಿರುವರು. ಹಾಗೂ ಅವರ ಇನ್ನೇ ಕಲವಿನ ಅಭಿಪ್ರಾಯದ ಮೇಲಿಂದ ಕೇಶಿರಾಜನ ವಿಷಯಕ್ಕೆ ವಿಶೇಷ ಪೂಜ್ಯತೆ ಇಟ್ಟಂತೆ ಕಂಡು ಬರಲಿಲ್ಲ. ಇದು ಯಾವ ಕಾರಣದಿಂದಲೋ ತಿಳಿಯದು. ಕೇಶಿರಾಜನು 'ಯತಿ ವಿಲಂಘನ ವೆಂದರಿದಲ್ತೆ ಕನ್ನಡಂ' ಎಂದು ಹೇಳಿದ್ದು ಪೂರ್ವದ ಕವಿಗಳ ಮಾರ್ಗವನ್ನು ಅನುಸರಿಸಿ ಹೇಳಿದ್ದರೂ ಹೇಳಿರಬಹುದು. ಇದ್ದದ್ದನ್ನು ಯಥಾಸ್ಥಿತವಾಗಿ ಹೇಳಿದರೆ ಅವನಲ್ಲಿ ದೋಷವೇನು? ಇದಲ್ಲದೆ ಅವನು ರಚಿಸಿದ ತಮ್ಮ ಹಳೆಗನ್ನಡದ ಶುದ್ಧಾಶುದ್ಧತೆಗೆ ಬಹು ಮಟ್ಟಿಗೆ ಸಾಧನವಾದ 'ಶಬ್ದ ಮಣಿದರ್ಪಣವು' ಬಹುತರ ಎಲ್ಲರಿಗೂ ಎಲ್ಲ ವಿಷಯದಲ್ಲಿ ಮಾನ್ಯವಿದ್ದರೂ ಈ ಯತಿಯ ವಿಷಯವಾಗಿ ಹೇಳಿದ್ದು ಮಾತ್ರ ಅಪ್ರಿಯವಾಯಿತೇ? ಪೂರ್ವದವರು ಮಾಡಿದ ಎಲ್ಲ ಸಂಗತಿಗಳೂ ದೋಷರಹಿತವಾದವುಗಳೆಂದು ನಮ್ಮ ಪಟ್ಟೇದರವರು ಯಾವ ಆಧಾರದಿಂದ ಸಿದ್ಧಮಾಡುವರು? ಅದು ಒತ್ತಟ್ಟಿಗಿರಲಿ. "ಈಸ ಬಲ್ಲವನೇ ನೀರಿನಲ್ಲಿ ಮುಳುಗುವ ಸಂಭವ ಹೆಚ್ಚು" ಎಂಬ ಮಾತು ನಮ್ಮ ಪಟ್ಟೇದರವರಿಗೆ ಗೊತ್ತಿಲ್ಲವೆ? ಹೀಗಿದ್ದು ಅವರು ಈ ವಿಷಯದಲ್ಲಿ ಇಷ್ಟು ಆಗ್ರಹ ತೊಡಲು ಕಾರಣವೇನು?

ಯತಿವಿಲಂಘನವೆಂದರೆ ವಿಭಕ್ತಿ ಇಡದಿರುವದೆಂದು ನಮ್ಮ ಪಟ್ಟೇದ ರವರು ಒಪ್ಪುತ್ತಾರಷ್ಟೇ! ಹೀಗಿದ್ದು ಆ ಸ್ಥಳದಲ್ಲಿ ನಿಲ್ಲಲಿಕ್ಕೆ ಆಗ್ರಹವೇಕೆ? ಕಾಲೇಜದ ಪಂಡಿತರು ಯತಿಯೆಂದರೆ ವಿಶ್ರಾಂತಿಯ ಸ್ಥಳವೆಂದು ಇಟ್ಟು ಕೊಂಡು, ವಿಭಕ್ತಿ ಇದ್ದಲ್ಲಿ ವಿಶ್ರಮಿಸಿ, ಬಹು ಮಟ್ಟಿಗೆ ಅರ್ಥವು ಸುಬೋಧ ವಾಗುವಂತೆಯೂ ಕರ್ಣಕ್ಕೆ ಇಂಪಾಗುವಂತೆಯೂ ಆಂದು ತೋರಿಸುತ್ತಿರುವದು ಈಗಿನ ನವೆಮ್ಮಲ್ಲ ಟ್ರೇಂಡ ವ್ಯವಸಾಯ ಬಂಧುಗಳಿಗೆ ಅರಿದಾದ ಸಂಗತಿಯೆಲ್ಲ. ಯತಿಯ ಸ್ಥಳದಲ್ಲಿ ವಿಭಕ್ತಿ ಇದ್ದರೆ ನಿಲ್ಲಲಿಕ್ಕೆ ನಮ್ಮದೇನೂ ಪ್ರತಿಬಂಧವಿಲ್ಲ. ಆದರೆ ವಿಭಕ್ತಿಯಿಲ್ಲದೆ ಅಲ್ಲಿ ನಿಲ್ಲುವದರಿಂದ ಕರ್ಣಕ್ಕೆ ಕಠೋರವಾಗುವಂತೆ ತೋದರೂ ಅಲ್ಲಿಯೇ ವಿಶ್ರಾಂತಿ ತೆಗೆದುಕೊಳ್ಳ ಬೇಕೆಂದು ಹೇಳುವದು ದುರಾಗ್ರಹವೆಂದೇ ಹೇಳಬೇಕಲ್ಲದೆ ಅನ್ಯಪರಿಹಾರ ವಿಲ್ಲ.

ಇನ್ನು ಮಿ. ಪಟ್ಟೇದರವರ ಅಭಿಪ್ರಾಯವೇ ಗ್ರಾಹ್ಯವೆಂದು ಒಂದು ವೇಳೆ ಒಪ್ಪಿದರೂ ಪೂರ್ವದ ಮಹಾಕವಿಗಳು ಯತಿಯ ವಿಷಯಕ್ಕೆ ಇದ್ದ ನಿರ್ಬಂಧವನ್ನು ಏಕೆ ಪಾಲಿಸಲಿಲ್ಲವೆಂಬದನ್ನು ಅವರನ್ನೇ ಕೇಳಬೇಕಾಗಿದೆ. ಒಬ್ಬ ಮಹಾ ಕವಿಯು ಯತ್ಯುಲ್ಲಂಘನ ಮಾಡಿದ್ದರೆ ಅನ್ಯ ಬಹು ಕವಿಗಳ ಸಮ್ಮತಿಯಿಂದ ಮಿ. ಪಟ್ಟೇದರವರ ಅಭಿಪ್ರಾಯವನ್ನು ಶಿರಸಾ ಮಾನ್ಯ ಮಾಡುತ್ತಿದ್ದೆವು. ಆದರೆ ಈ ಸಂಗತಿಯಲ್ಲಿ ಎಲ್ಲ ಮಹನೀಯರ ದುರ್ಲಕ್ಷವು ಸಮವಾಗಿ ಇದ್ದಂತೆ ಕಂಡು ಬರುವದು. ಇದರಿಂದ ಮಿ. ಚಿಮ್ಮಲಿಗಿಯವರ ಹೇಳಿಕೆಯಂತೆ ಈ ಯತಿಯ ವಿಷಯದಲ್ಲಿ ಅಷ್ಟು ಬಿಗಿಯಾದ ನಿರ್ಬಂಧವಿರಲಿಕ್ಕಿಲ್ಲೆಂದು ಮನದಟ್ಟು ಮಾಡಿಕೊಂಡರೆ ವಿಶೇಷ ಬಾಧೆ ನನಗಂತೂ ತೋರದು.

ಇನ್ನು ನಮ್ಮ ಪಟ್ಟೇದರವರು ಆರಂಭಕ್ಕೆ ಯತಿವಿಲಂಘನವಿಷಯದಲ್ಲಿ ಕಾರಣ ಸೂಚಿಸಲು "ನಹಿ ವಂಧ್ಯಾ ವಿಜಾನಾತಿ। ಗುರ್ವೀ ಪ್ರಸವ ವೇದನಾಂ" ಎಂಬದಾಗಿ ಹೇಳಿದ್ದರಿಂದ ಕವಿಗಳ ತಡೆಗಳು ಕವಿಗಳಿಗೇ ಗೊತ್ತಾ ಎಂಬದಾಗಿ ಹೇಳಿದ್ದು ಸಯುಕ್ತಿಕವು. ಆದರೆ ಯತಿಯ ವಿಷಯಕ್ಕೆ ಮಾತ್ರ ಸ್ವೈರವಾಗಿ ನಡೆದು, ಪ್ರಾಸಾದಿಗಳಲ್ಲಿ ಆ ವೃತ್ತಿಯನ್ನು ಅನುಸರಿಸಲಿಲ್ಲವೇಕೆ? ಕವಿತೆಯ ಮಾಡುವ ಪ್ರತಿಯೊಬ್ಬನ ಅನುಭವವು ಪ್ರಾಸದ ತ್ರಾಸಿಗಿಂತಲೂ ಇತರ ಯಾವ ತ್ರಾಸವೂ ಅಷ್ಟು ಬಿಗಿಯಾದದ್ದಲ್ಲೆಂದು ಗೊತ್ತಾಗಿದೆ.

ಯವಾಗುವ ಬಗ್ಗೆ, ಕೆಳಗಿನ ನಾಲ್ಕು ಪಂಕ್ತಿಗಳನ್ನು ತಮ್ಮ ಸನ್ನಿಧಿಯಲ್ಲಿ ಕಳಿಸಿರುವೆನು. ಅದಕ್ಕೆ ಬರುವ ಅಂಕದಲ್ಲಿಯೇ ಸ್ಥಳ ದೊರೆದೀತೆಂದು ತುಂಬಾ ಆಶಿಸುತ್ತೇನೆ.

ನನ್ನ ಅಭಿಪ್ರಾಯವೆಂದರೆ ಮಿ. ಚಿಮ್ಮಲಗಿ ಇವರ ಅಭಿಪ್ರಾಯದ ಪುನರುಚ್ಚಾರಣೆಯೇ ಇರುವದು. ಅವರು ಆದರೆ ಸಂಕ್ಷೇಪವಾಗಿ ಹೇಳಿದ ವಿಷಯವನ್ನು ಕೆಲ ಮಟ್ಟಿಗ ವಿಸ್ತರಿಸಿ ಹೇಳಲು ಈಗ ಉದ್ಯುಕ್ತನಾಗಿದ್ದೇನೆ.

ಮಿ. ಪಟ್ಟೇದರವರು ಮಿ. ಚಿಮ್ಮಲಗಿಯವರ ಅಭಿಪ್ರಾಯದ ಖಂಡನ ಮಾಡುವ ಕಾಲಕ್ಕೆ ಕೇಶಿರಾಜಕವಿ, ಕಾಲೇಜದ ಕನ್ನಡ ಪಂಡಿತರು, ಮೈಸೂ ರಸರಣಿ, ಇವೇ ಮೊದಲಾದ ಅವಶ್ಯಕವಾದ ಮಾತುಗಳನ್ನು ಮೂಲೆಗೊತ್ತಿ ತಮಗೆ ಅನುಕೂಲವಾಗುವಂತೆ "ಯತಿವಿಲಂಘನವೆಂದರೆ ಕನ್ನಡ ಪದ್ಯ ರಚನಾಕ್ರಮದೊಳಗೆ ಯತಿಯು ಸ್ಥಳದಲ್ಲಿ ವಿಭಕ್ತಿ ಇಲ್ಲದಿರುವದಾಗಿ ತಿಳಿ ಯಬೇಕೆಂದೂ ಪಠನಕ್ರಮದಲ್ಲಿ ಅವಶ್ಯವಾಗಿ ಯತಿಯು ಹಕ್ಕು ಉಂಟೆಂದು ತಿಳಿಯಬೇಕೆಂದೂ ಅನೇಕ ವಿವರಣೆಯಿಂದ ವ್ಯಕ್ತಮಾಡಲು ಯತ್ನಿಸಿರು ವರು. ಹಾಗೂ ಅವರ ಗನೇ ಕಲವಿನ ಅಭಿಪ್ರಾಯದ ಮೇಲಿಂದ ಕೇಶಿ ರಾಜನ ವಿಷಯಕ್ಕೆ ವಿಶೇಷ ಪೂಜ್ಯತೆ ಇಟ್ಟಂತೆ ಕಂಡು ಬರಲಿಲ್ಲ. ಇದು ಯಾವ ಕಾರಣವಿದಯೋ ತಿಳಿಯದು. ಕೇಶಿರಾಜನು 'ಯತಿ ವಿಲಂಘನ ದಿಂದರಿದಲ್ತೆ ಕನ್ನಡಂ' ಎಂದು ಹೇಳಿದ್ದು ಪೂರ್ವದ ಕವಿಗಳ ಮಾರ್ಗ ವನ್ನು ಅನುಸರಿಸಿ ಹೇಳಿದ್ದರೂ ಹೇಳಿರಬಹುದು. ಇದ್ದದ್ದನ್ನು ಯಥಾ ಸ್ಥಿತವಾಗಿ ಹೇಳಿದರೆ ಅವನಲ್ಲಿ ದೋಷವೇನು? ಇದಲ್ಲದೆ ಅವನು ರಚಿಸಿದ ನಮ್ಮ ಹಳೆಗನ್ನಡದ ಶುದ್ಧಾಶುದ್ಧತೆಗೆ ಬಹು ಮಟ್ಟಿಗೆ ಸಾಧನವಾದ 'ಶಬ್ದ ಮಣಿದರ್ಪಣವು' ಬಹುತರ ಎಲ್ಲರಿಗೂ ಎಲ್ಲ ವಿಷಯದಲ್ಲಿ ಮಾನ್ಯವಿದ್ದರೂ ಈ ಯತಿಯ ವಿಷಯವಾಗಿ ಹೇಳಿದ್ದು ಮಾತ್ರ ಅಪ್ರಿಯವಾಯಿತೇ? ಪೂರ್ವ ದವರು ಮಾಡಿದ ಎಲ್ಲ ಸಂಗತಿಗಳೂ ದೋಷರಹಿತವಾದವುಗಳೆಂದು ನಮ್ಮ ಪಟ್ಟೇದರವರು ಯಾವ ಆಧಾರದಿಂದ ಸಿದ್ಧಮಾಡುವರು? ಅದು ಒತ್ತ ಟ್ಟಿಗಿರಲಿ. "ಈಸ ಬಲ್ಲವನೇ ನೀರಿನಲ್ಲಿ ಮುಳುಗುವ ಸಂಭವ ಹೆಚ್ಚು" ಎಂಬ ಮಾತು ನಮ್ಮ ಪಟ್ಟೇದರವರಿಗೆ ಗೊತ್ತಿಲ್ಲವೆ? ಹೀಗಿದ್ದು ಅವರು ಈ ವಿಷಯದಲ್ಲಿ ಇಷ್ಟು ಆಗ್ರಹ ತೊಡಲು ಕಾರಣವೇನು?

ಯತಿವಿಲಂಘನವೆಂದರೆ ವಿಭಕ್ತಿ ಇಡದಿರುವದೆಂದು ನಮ್ಮ ಪಟ್ಟೇದರವರು ಒಪ್ಪುವಹಾಗಿರಬೇಕಿತ್ತೇ! ಹೀಗಿದ್ದು ಆ ಸ್ಥಳದಲ್ಲಿ ನಿಲ್ಲಲಿಕ್ಕೆ ಆಗ್ರಹವೇಕೆ? ಕಾಲೇಜದ ಪಂಡಿತರು ಯತಿಯೆಂದರೆ ವಿಶ್ರಾಂತಿಯ ಸ್ಥಳವೆಂದು ಇಟ್ಟುಕೊಂಡು, ವಿಭಕ್ತಿ ಇದ್ದಲ್ಲಿ ವಿಶ್ರಮಿಸಿ, ಬಹು ಮಟ್ಟಿಗೆ ಅರ್ಥವು ಸುಬೋಧವಾಗುವಂತೆಯೂ ಕರ್ಣಕ್ಕೆ ಇಂಪಾಗುವಂತೆಯೂ ಅಂದು ತೋರಿಸುತ್ತಿರುವದು ಈಗಿನ ನಮ್ಮೆಲ್ಲ ಟ್ರೇಂಡ ವ್ಯವಸಾಯ ಬಂಧುಗಳಿಗೆ ಅರಿದಾದ ಸಂಗತಿಯಲ್ಲ. ಯತಿಯ ಸ್ಥಳದಲ್ಲಿ ವಿಭಕ್ತಿ ಇದ್ದರೆ ನಿಲ್ಲಲಿಕ್ಕೆ ನಮ್ಮದೇನೂ ಪ್ರತಿಬಂಧವಿಲ್ಲ. ಆದರೆ ವಿಭಕ್ತಿಯಿಲ್ಲದೆ ಅಲ್ಲಿ ನಿಲ್ಲುವದರಿಂದ ಕರ್ಣಕ್ಕೆ ಕಠೋರವಾಗುವಂತೆ ತೋರಿದರೂ ಅಲ್ಲಿಯೇ ವಿಶ್ರಾಂತಿ ತೆಗೆದುಕೊಳ್ಳಬೇಕೆಂದು ಹೇಳುವದು ದುರಾಗ್ರಹವೆಂದೇ ಹೇಳಬೇಕಲ್ಲದೆ ಅನ್ಯಪರಿಹಾರವಿಲ್ಲ.

ಇನ್ನು ವಿ. ಪಟ್ಟೇದರವರ ಅಭಿಪ್ರಾಯವೇ ಗ್ರಾಹ್ಯವೆಂದು ಒಂದು ವೇಳೆ ಒಪ್ಪಿದರೂ ಪೂರ್ವದ ಮಹಾಕವಿಗಳು ಯತಿಯ ವಿಷಯಕ್ಕೆ ಇದ್ದ ನಿರ್ಬಂಧವನ್ನು ಏಕೆ ಪಾಲಿಸಲಿಲ್ಲವೆಂಬದನ್ನು ಅವರನ್ನೇ ಕೇಳಬೇಕಾಗಿದೆ. ಒಬ್ಬ ಮಹಾ ಕವಿಯು ಯತ್ಯುಲ್ಲಂಘನ ಮಾಡಿದ್ದರೆ ಅನ್ಯ ಬಹು ಕವಿಗಳ ಸಮ್ಮತಿಯಿಂದ ವಿ. ಪಟ್ಟೇದರವರ ಅಭಿಪ್ರಾಯವನ್ನು ಶಿರಸಾ ಮಾನ್ಯ ಮಾಡುತ್ತಿದ್ದೆವು. ಆದರೆ ಈ ಸಂಗತಿಯಲ್ಲಿ ಎಲ್ಲ ಮಹನೀಯರ ದುರ್ಲಕ್ಷವು ಸಮವಾಗಿ ಇದ್ದಂತೆ ಕಂಡು ಬರುವದು. ಇದರಿಂದ ವಿ. ಚಿಮ್ಮಲಿಗಿಯವರ ಹೇಳಿಕೆಯಂತೆ ಈ ಯತಿಯ ವಿಷಯದಲ್ಲಿ ಅಷ್ಟು ಬಿಗಿಯಾದ ನಿರ್ಬಂಧವಿರಲಿಕ್ಕಿಲ್ಲೆಂದು ಮನದಟ್ಟು ಮಾಡಿಕೊಂಡರೆ ವಿಶೇಷ ಬಾಧೆ ನನಗಂತೂ ತೋರದು.

ಇನ್ನು ನಮ್ಮ ಪಟ್ಟೇದರವರು ಆರಂಭಕ್ಕೆ ಯತಿವಿಲಂಘನವಿಷಯದಲ್ಲಿ ಕಾರಣ ಸೂಚಿಸಲು "ನಹಿ ವೇತ್ತಿ ವಿಜಾನಾತಿ । ಗ್ರಂಥೀ ಪ್ರಸಥ ವೇದನಂ" ಎಂಬದಾಗಿ ಹೇಳಿದ್ದರಿಂದ ಕವಿಗಳ ತಡೆಗಳು ಕವಿಗಳಿಗೇ ಗೊತ್ತು ಎಂಬದಾಗಿ ಹೇಳಿದ್ದು ಸಯುಕ್ತಿಕವು. ಆದರೆ ಯತಿಯ ವಿಷಯಕ್ಕೆ ಮಾತ್ರ ಸ್ಪೈರವಾಗಿ ನಡೆದು, ಪ್ರಾಸಾದಿಗಳಲ್ಲಿ ಆ ವೃತ್ತಿಯನ್ನು ಅನುಸರಿಸಲಿಲ್ಲವೇಕೆ? ಕವಿತೆಯ ಮಾಡುವ ಪ್ರತಿಯೊಬ್ಬನ ಅನುಭವವು ಪ್ರಾಸದ ತ್ರಾಸಿಗಿಂತಲೂ ಇತರ ಯಾವ ತ್ರಾಸವೂ ಅಷ್ಟು ಬಿಗಿಯಾದದ್ದಲ್ಲೆಂದು ಗೊತ್ತಾಗಿದೆ

ಹಾಗೂ ಈ ವಿಷಯದಲ್ಲಿ "ಪ್ರಾಸವಹ್ನಿಯನ್ನು ತುಷ್ಟೀ ಕರಿಸಬೇಕೆಂದೇ ಯತಿಯು ಆಹುತಿಯನ್ನು ಕವಿಗಳಿಗೆ ಹಾಕುವ ಪ್ರಸಂಗಬಿತ್ತು" ಎಂಬ ಆಶಯದ ಮೇಲಿಂದ ಮಿ. ಪಟ್ಟೇದರವರ ಅಭಿಪ್ರಾಯವೂ ಅನುಕೂಲವಿರುವದೆಂದು ಬೇರೆ ಹೇಳುವ ಕಾರಣವಿಲ್ಲ. ಈ ವಿವರಣೆಯಿಂದ ಕವಿತೆಯು ಇತರ ರಚನಾಕ್ರಮಕ್ಕೆ ಪ್ರಾಸವಿಲ್ಲೆಂದು ನನ್ನ ಅಭಿಪ್ರಾಯವಲ್ಲ ಆದರೆ ಪ್ರಾಸ, ಅಲಂಕಾರ, ಇತರ ಅಕ್ಷರಗಳ ಯೋಜನೆ ಇವುಗಳ ವಿಷಯಕ್ಕೆ ತಾಪಪಡುತ್ತಿರುವವರಿಗೆ ಕ್ಷುದ್ರವಾದ ಒಂದು ಯತಿಯ ವಿಭಕ್ತಿಯ ದೆಸೆಯಿಂದ ಅಷ್ಟು ತಾಪಪಡಬೇಕಾದ ಕಾರಣವಿಲ್ಲ. ಹೀಗಿದ್ದು ಅದೊಂದರಲ್ಲಿಯೇ ಪ್ರತಿಯೊಬ್ಬರ ದುರ್ಲಕ್ಷವು ಕಂಡು ಬರುತ್ತಿದೆ. ಇದರಿಂದ ಆಸೆಯ ತಾಪಕ್ಕೂ ಬೆದರದ ಮಹನೀಯರು (ಕವಿಗಳು) ಕ್ಷುಲ್ಲಕ ಪ್ರಾಣಿಯಾದ ಮಷ್ಟಿಕ ಭಯಕ್ಕೆ ಬೆದರಿ ಕೈ ಬಿಟ್ಟಂತೆ ಆಗುವದಿಲ್ಲವೇ! ಇದು ಸರ್ವರಿಗೂ ಹೇಗೆ ಸಮ್ಮತವಾದೀತು? ಪ್ರಾಸಾದಿಗಳ ನ್ಯೂನತೆ ಹೊರಡಿಸುವ ಕುರಿತು ನಮ್ಮ ಪಟ್ಟೇದರವರು ಎಷ್ಟು ಮಹದ್ಗ್ರಂಥಗಳನ್ನು ನೋಡಿ ಶ್ರಮ ಬಟ್ಟರೂ ದೊರೆಯುವದು ಅಪರೂಪವೇ ಎಂದು ನನ್ನ ಅಭಿಪ್ರಾಯವಿದೆ. ಆದರೆ ಯತಿವಿಲಂಘನ ಸ್ಥಳತೋರಿಸಲಿಕ್ಕೆ ಅಷ್ಟು ಶ್ರಮಬಡಬೇಕಾದ ಕಾರಣವಿಲ್ಲ. ಸಹಜವಾಗಿಯೇ ಅನೇಕ ಕವಿತೆಗಳು ದೊರೆಯುವವು ಅಂದ ಮೇಲೆ ಮಿ. ಪಟ್ಟೇದರವರ ಅಭಿಪ್ರಾಯಕ್ಕೆ ಬಲ ದೊರೆಯುವದು ಹೇಗೆ? ವಾಚಕರೇ ಊಹಿಸಬಹುದು.

ಇನ್ನು ಪೂರ್ವದ ಮಹಾತ್ಮರು ಹಾಕಿದ ನಿರ್ಬಂಧವನ್ನು ಮೀರಿ ಹೋಗಬೇಕೆಂದು ನಾನು ಎಂದೂ ಹೇಳಲಾರೆ. ಅವರು ಯತಿಯ ವಿಷಯಕ್ಕೆ ನಿರ್ಬಂಧ ಮಾಡಿದ್ದರ ಉದ್ದೇಶವು ನಮ್ಮಂಥ ಗಾಯನಕಲಾನಭಿಜ್ಞರಿಗೂ ಉಪಯೋಗ ಬೀಳಬೇಕೆಂದು ಬಂದು ಸಾಮಾನ್ಯನಿಯಮವಾಗಿರುವದು. ಈ ನಿಯಮವು ಗಾಯನಕಲಾಪಟುಗಳಿಗೆ ಸಹಸಾ ಅಲ್ಲ. ಅಂಧನಿಗೆ ದಾರೀ ತೋರಿಸಲಿಕ್ಕೆ ಮೆಳ್ಳನು ಯೋಗ್ಯನಿದ್ದರೂ ಪೂರ್ಣನಯನಾನಂದ ಪಡೆಯುವವನು ಅವನಿಗಿಂತಲೂ ಹೆಚ್ಚಿಗೆ ಯೋಗ್ಯನೆಂದು ಪ್ರತ್ಯೇಕವಾಗಿ ಹೇಳಬೇಕಾದ ಅವಶ್ಯವಿಲ್ಲ. ಅದರಿಂದ ಈ ಯತಿಯ ವಿಷಯದಲ್ಲಿ ಮಾತ್ರ ಪೂರ್ವದ ಮಹಾಕವಿಗಳ ಮಾರ್ಗದಿಂದಲೂ ದರ್ಪಣಕಾರನ ಅಭಿಪ್ರಾಯದಿಂದಲೂ ತಮಗೆ ವ್ಯತ್ಯಾಸ ಮಾಡಿಕೊಂಡರೆ ತೀರಿತು.

ಪೂರ್ವದ ಕವಿಗಳು ನಮಗೆ ಹೇಗೆ ಮಾನ್ಯರೋ ಹಾಗೆ ಕೇಶಿರಾಜನಾದರೂ ನಮಗೆ ಮಾನ್ಯನಾಗಲಿಕ್ಕೆ ಬೇಕು. ಮಿ. ಪಟ್ಟೇದರವರು ಮುಂದೆ ಕೇಶಿರಾಜನಂಥ ಮತ್ತೊಬ್ಬ ದರ್ಪಣಕಾರನು ಹುಟ್ಟಿ, "ಪದವಿಲಂಘನದಿಂದರಿ ತಲ್ತೆ ಕನ್ನಡಂ" ಎಂಬವಾಗಿ ಹೇಳಬಹುದಾಗಿ ಶಂಕಿಸಿ ಆಂಜಿರುವರು. ಹಾಗೂ "ಬಾಪಸೇ ಬೇಟಾ ಸವಾಯಿ" ಎಂಬ ಮಾರ್ಗವನ್ನು ತಮಗೆ ಅನುಕೂಲವಾಗುವಂತೆಯೇ ಯುಕ್ತಿಯಿಂದ ಕೂಡಿಸಿರುವರು. ಆದರೆ ಇದೇ ಯುಕ್ತಿಯು ಆಧುನಿಕ ಜನರಿಗೆ ಯೋಗ್ಯತೆಯನ್ನು ಬೆಳಿಸಲು ಬರಲಾರದೇ! ಯುಕ್ತಿಗೆ ಪ್ರತ್ಯುಕ್ತಿಯು ಹೊರಡುತ್ತಿದ್ದರೆ ಯುಕ್ತಿಯು ಆಟವೇ ನಡೆಯದು. ಆದರೆ "महाजनो येन गतः स पंथाः" ಎಂಬಂತೆ ಮಹಾತ್ಮರ ಮಾರ್ಗವೇ ಅವಲಂಬನ ಕಾರ್ಯವೆಂದು ಸರ್ವರೂ ಮನ್ನಿಸತಕ್ಕದ್ದು. ಇದಕ್ಕೆ ಯಾರ ಪ್ರತ್ಯವಾಯವೂ ಬರಲು ಕಾರಣವಿಲ್ಲ. ಅದರಿಂದ ಪೂರ್ವದ ಮಹಾ ಕವಿಗಳ ಮಾರ್ಗವನ್ನು ಅವಲಂಬಿಸಲು ಏನೂ ಬಾಧೆ ಬಾರದು.

ಗ್ರಂಥಗಳಲ್ಲಿ ಸಾಧಾರಣವಾಗಿ ಗದ್ಯ–ಪದ್ಯಗಳೆಂದು ಎರಡು ವಿಧವಾಗಿ ಇದ್ದದ್ದು ಯೋಗ್ಯವೇ. ಆದರೆ ಇವುಗಳ ವಿಷಯಕ್ಕೆ ನನ್ನ ಅಭಿಪ್ರಾಯವೇನೆಂದರೆ, ಗದ್ಯ ಗ್ರಂಥಗಳನ್ನು ಬರೆಯುವದು ವಿಶೇಷ ಶ್ರಮಕ್ಕೆ ಕಾರಣವಲ್ಲದಿದ್ದರೂ ಪದ್ಯದಲ್ಲಿ ಮಾತ್ರ ಸ್ವಲ್ಪ ಹೆಚ್ಚು ಶ್ರಮಬಡಬೇಕಾಗುವದೆಂಬದಕ್ಕೆ ಕವಿತೆಯ ನಿರ್ಬಂಧತೆಯೇ ಕಾರಣವೆಂಬದು ಸ್ಪಷ್ಟವು. ಯಾಕಂದರೆ, ಅದರಲ್ಲಿ ಮನಬಂದಂತೆ ಶಬ್ದಗಳನ್ನು ಹಾಕಲಿಕ್ಕೆ ಬಾರದಿರುವದರಿಂದ ದುರ್ಬೋಧ ಶಬ್ದಗಳನ್ನು ಹಾಕುವ ಪ್ರಸಂಗ ಬರುವದು. ಹೀಗಾಗಿ ಅರ್ಥದ ಸೌಲಭ್ಯಕ್ಕೆ ಹಾನಿಬರುವದೆಂಬದು ಎಲ್ಲರೂ ಒಪ್ಪಬಹುದಾಗಿದೆ ಪದ್ಯದ ನಿರ್ಬಂಧನವನ್ನು ಅನುಸರಿಸದಿದ್ದರೆ ಗದ್ಯಕ್ಕೂ ಪದ್ಯಕ್ಕೂ ವ್ಯತ್ಯಾಸವೇನು? ಎಂಬದಾಗಿ ಮಿ ಪಟ್ಟೇದರವರ ಮತ್ತೊಂದು ಆಶಂಕೆ (ಆಕ್ಷೇಪ) ಇರುವದು. ಆದರೆ ಅಲ್ಪವಾದ ಒಂದು ಯತಿಯ ಸ್ಥಳದಲ್ಲಿ ತುಸು ವ್ಯತ್ಯಾಸವಾದರೆ ಇಡೀ ಕವಿತೆಯ ನಿರ್ಬಂಧಕ್ಕೆ ಅಡ್ಡಿ ಬಂದಂತಾಯಿತೇ! ಈ ಮಾತು ಹೇಗೆ ಕೂಡೀತು?

ಈ ಯತಿಯನ್ನಾದರೂ ಅನುಸರಿಸಬಾರದೆಂದು ನಾನು ನಿಯಮ ಮಾಡುವದಿಲ್ಲ. ಆದರೆ ಆಧುನಿಕ ಕವಿಗಳಿಗೆ ಪೂರ್ವದ ಮಹಾಕವಿಗಳಂತೆ ಯತಿಯ ವಿಷಯಕ್ಕೆ ಸ್ವೈರವಾಗಿ ನಡೆಯಲು ಅಡ್ಡಿ ತರಬಾರದಾಗಿ ಹೇಳಿಕೆ

ಯದ. ಪೂರ್ವದ ಎಲ್ಲ ಮಹಾಕವಿಗಳು ಛಂದಸ್ಸಿನ ಎಲ್ಲ ನಿಯಮಗಳನ್ನೂ ಪಾಲಿಸಿ, ಕೇವಲ ಯತಿಯ ವಿಷಯವಾಗಿ ದುರ್ಲಕ್ಷಿಸುವದು ಯೋಗ್ಯವಿದ್ದಿಲ್ಲ. ಅದರೆ ಅವರು ಯಾವ ಬಲವತ್ತರ ಆಧಾರದಿಂದ ಹಾಗೆ ನಡೆದಿರುವರೋ ಅದನ್ನು ನಾವೆಲ್ಲ ವ್ಯವಸಾಯ ಬಂಧುಗಳು ಶೋಧಿಸಬೇಕಾಗಿದೆ. ನಾವು ಪೂರ್ಣ ಶೋಧಿಸದೆ ಕುಂದನೆಣಿಸುವದು ಸರಿಯಾದ ಮಾರ್ಗವೆನಿಸದು.

ಇನ್ನು ನನ್ನ ತಿಳುವಳಿಕೆಯಂತೆ ಪದ್ಯದ ಪ್ರಚಾರವು ಪೂರ್ವದ ಸಂಸ್ಕೃತಾಭಿಮಾನಿಗಳಾದ ಆರ್ಯರಿಂದಲೇ ಬಂದಿರುವದಾಗಿ ಅನುಮಾನಿಸಲು ಏನೂ ಆತಂಕ ಕಾಣುವದಿಲ್ಲ. ಯಾಕಂದರೆ ನಮ್ಮ ಪೂರ್ವಜರ ಕಾಲದಲ್ಲಿ ಮುದ್ರಣಕಲೆಯು ಉದಯಕ್ಕೆ ಬಾರದ್ದರಿಂದಲೂ ಲೇಖನಕ್ಕೆ ಅನುಕೂಲವಾದ ಕಾಗದಾದಿ ಸಾಧನಗಳು ಇಲ್ಲದ್ದರಿಂದಲೂ ವಿಶೇಷವಾಗಿ ವೇದಾದಿ ಗ್ರಂಥಗಳನ್ನು ಶಿಷ್ಯಪರಂಪರವಾಗಿ ಪಠಣಮಾಡಿಸಿ ಅದರ ಅಸ್ತಿತ್ವವನ್ನು ಕಾಯ್ದುಕೊಂಡದ್ದಾಗಿ ಅನೇಕ ಇತಿಹಾಸ ಪುರಾಣಾದಿಗಳಲ್ಲಿ ಕಂಡು ಬರುತ್ತಿದೆ. ಹಾಗೂ ಅನುಭವಸಿದ್ಧವಾಗಿಯೂ ಇದೆ. ಅದರ ಪಠನಕ್ಕೆ ಸ್ವಲ್ಪ ಗ್ರಂಥವೇ ಇರಬೇಕೆಂಬದು ಸ್ಪಷ್ಟವು. ಆರ್ಥಿಕಜ್ಞಾನವು ವಿಶೇಷವಿದ್ದು ಶಬ್ದಗಳು ಕಡಿಮೆ ಯೋಜಿಸುವದಕ್ಕೆ ಮುಖ್ಯ ಸಾಧನವಾಗಬೇಕೆಂದೇ ಪದ್ಯದ ಉತ್ಪತ್ತಿಯಾಯಿತೆಂದು ಹೇಳಿದರೆ ಏನೂ ಬಾಧೆ ತೋರುವದಿಲ್ಲ. ಇಲ್ಲಿ ಪಠನಕ್ಕೆ ಅನುಕೂಲವಾಗಬೇಕೆಂದೇ ಈ ಪದ್ಯದ ಉತ್ಪತ್ತಿಯಾಯಿತೆಂತಲೂ ಅನುಮಾನಿಸುವದನ್ನು ಮರೆಯಲಾಗದು. ಅದರೆ ತುಸು ಶಬ್ದಗಳ ಯೋಜನೆಯಿಂದ ಬಹ್ವರ್ಥಗಾಂಭೀರ್ಯವನ್ನು ಸೂಚಿಸುವ ಗ್ರಂಥಗಳು ಸಂಸ್ಕೃತ ಭಾಷೆಯಲ್ಲಿಯೇ ವಿಶೇಷವಿದ್ದರೂ ಕನ್ನಡದಲ್ಲಿ ಗದ್ಯದಲ್ಲಿರುವ ಅಭಿಪ್ರಾಯವು ಪದ್ಯದಲ್ಲಿ ತುಸು ಸ್ಥಾನದಲ್ಲಿಯೇ ಬಂದಿರುವದೆಂದು ಎಲ್ಲರೂ ಒಪ್ಪಲಿಕ್ಕೆಬೇಕು. ಗದ್ಯದಂತೆ ವಿಸ್ತಾರವಾಗಿ ಪದ್ಯವನ್ನು ಹೇಳಬೇಕಾಗಿದ್ದರೆ ಪದ್ಯದ ನಿರ್ಬಂಧವನ್ನು ಏಕೆ ಅವಲಂಬಿಸಬೇಕು? ಕಾರಣವಿದ್ದಿಲ್ಲ. ಆದ್ದರಿಂದ ಪದ್ಯದ ಉತ್ಪತ್ತಿಗೆ ಮೇಲಿನ ವಿವರಣೆಯೇ ಕಾರಣವೆಂದು ಊಹಿಸಲುಬಾಧೆ ಬಾರದು.

ಮಿ. ದಾಸೋ ಮಹಿಪತ ಕುಲಕರ್ಣಿ ಐಗಳೀ ಮಾಸ್ತರ ಇವರೂ ಮಿ. ಪಟ್ಟೇದವರ ಅಭಿಪ್ರಾಯಕ್ಕೆ ವಿಶೇಷ ಅನುಕೂಲಕೊಟ್ಟಂತೆ ತೋ

ಶಾಲಾಪತ್ರಕ

ಪುಸ್ತಕ ೫ಂ. | ನವಂಬರ ೧೯೧೪. | ಸಂಚಿಕೆ ೧೧

ಸ್ಫುಟ ವಿಷಯಗಳು.

೧. ಉದ್ಭಿಜ್ಜಗಳ ಮೇಲೆ ವಿದ್ಯುಚ್ಛಕ್ತಿಯ ಪರಿಣಾಮವು.

ಜರ್ಮನಿ ದೇಶದಲ್ಲಿ ಕಾಯಿಪಲ್ಲೆಗಳ ಗಿಡಗಳ ಮೇಲೆ ವಿದ್ಯುತ್ತಿನ ಪ್ರಯೋಗವು ಮಾಡಲ್ಪಟ್ಟಿದ್ದು, ಅದರಿಂದ ಬಹಳ ಪ್ರಯೋಜನವಾಗಿರುತ್ತದೆ. ವಿದ್ಯುತ್ತಿನ ಸಹಾಯದಿಂದ ಆ ಗಿಡಗಳು ಒಳ್ಳೇ ಭರದಿಂದ ಬೆಳೆಯುವವೆಂದು ಕಂಡುಬಂದಿರುತ್ತದೆ. ಕಾಯಿಪಲ್ಲೆಗಳು ಬೆಳೆದ ಹೊಲದಮೇಲೆ ವಿದ್ಯುತ್ತಿನ ಪ್ರಯೋಗವನ್ನು ಮಾಡಬೇಕಾದರೆ ಆ ಹೊಲದೊಳಗಿನ ಅಗಿಗಳಿಂದ ಸುಮಾರು ೧೦ ಫೂಟು ಎತ್ತರದ ಮೇಲೆ ಉಕ್ಕಿನ ತಂತಿಗಳ ಜಾಳಿಗೆಯನ್ನು ಪಸರಿಸಿ ಅದರಲ್ಲಿ ವಿದ್ಯುತ್ಪ್ರವಾಹವನ್ನು ಬಿಡತಕ್ಕದ್ದು. ಈ ರೀತಿಯಿಂದ ವಿದ್ಯುತ್ಪ್ರವಾಹವನ್ನು ಬಿಡುವದರಿಂದ ಬೆಳೆಯು ಚನ್ನಾಗಿ ಬರುವದಲ್ಲದೆ ದೊಡ್ಡ ಪ್ರಮಾಣದಿಂದ ಬರುವದು. ಆದರೆ ಈ ಉಪಾಯದ ಯೋಜನೆಯನ್ನು ಹವೆಯಲ್ಲಿ ಉಷ್ಣಮಾನವು ಹೆಚ್ಚಿದ್ದರೆ, ಅಥವಾ ಆರ್ದ್ರತೆಯ ಹೆಚ್ಚಿದ್ದರೆ ಮಾಡಬಾರದು; ಒಂದುವೇಳೆ ಮಾಡಿದರೆ ಲಾಭವಾಗುವದಕ್ಕೆ ಬದಲಾಗಿ ಬೆಳೆಗೆ ಕಿಂಚಿತ್ ಅಪಾಯವಾಗುವದು. ಮೇಲೆ ಹೇಳಿದ ವಿದ್ಯುತ್ತಿನ ಪ್ರಯೋಗವನ್ನು ೯೦ ಎಕರೆ ಭೂಮಿಯಮೇಲೆ ಒಮ್ಮೆಲೆ ಮಾಡಿ ನೋಡಿರುತ್ತದೆ.

---

೨. ಚಂದ್ರನ ಕಿರಣಗಳಿಂದ ಪದಾರ್ಥಗಳ ಮೇಲೆ ಆಗುವ ಪರಿಣಾಮವು.

ಆರ್ಯ-ವೈದ್ಯಶಾಸ್ತ್ರದಲ್ಲಿ ಚಂದ್ರಪುಟ ಪ್ರವಾಳವೆಂತಲೂ, ಸೂರ್ಯಪುಟ ಪ್ರವಾಳವೆಂತಲೂ ಪ್ರವಾಳಭಸ್ಮದಲ್ಲಿ ಎರಡು ಪ್ರಕಾರಗಳು ಇರುವವೆಂದು ಹೇಳಲ್ಪಟ್ಟಿರುವದು. ಇದರಿಂದ ಚಂದ್ರಪ್ರಕಾಶದ ಹಾಗು ಸೂರ್ಯಪ್ರಕಾಶದ ಪುಟ ಕೊಟ್ಟ ಭಸ್ಮಗಳು ಬೇರೆ ಬೇರೆ ಗುಣವುಳ್ಳವುಗಳಾಗುವವೆಂಬಂತಾಯಿತು.

ಸಕೃದ್ದರ್ಶನಕ್ಕೆ ಈ ಮಾತು ವಿಲಕ್ಷಣವಾಗಿ ತೋರಬಹುದು. ಔಷಧಗಳ ಮೇಲೆ ಪ್ರಕಾಶಕಿರಣಗಳ ಪರಿಣಾಮವು ಏನಾಗುವದೆಂಬದು ನಮ್ಮೆಲೆ ಲಕ್ಷಕ್ಕೆ ಬರುವದಿಲ್ಲ. ಆರ್ಯವೈದ್ಯಶಾಸ್ತ್ರದಲ್ಲಿ ವಿಶ್ವಾಸವಿಲ್ಲದ ಕೆಲವರು ಇದು ಹುಚ್ಚಾಟವೆಂದು ಒಂದುವೇಳೆ ಹಾಸ್ಯಮಾಡಬಹುದು. ಆದರೆ ನಿಜವಾಗಿ ವಿಚಾರ ಮಾಡಿದರೆ, ಪದಾರ್ಥಗಳ ಮೇಲೆ ಸೂರ್ಯಕಿರಣಗಳಿಂದ ಆಗುವ ಪರಿಣಾಮವು ಬೇರೆ ಇರುವದೆಂತಲೂ, ಚಂದ್ರಕಿರಣಗಳಿಂದ ಆಗುವ ಪರಿಣಾಮವು ಬೇರೆ ಇರುವದೆಂತಲೂ ಶಾಸ್ತ್ರಸಿದ್ಧವಾಗಿರುವದು.

ನಮ್ಮ ಜನರಲ್ಲಿ ಹೊಸ ಅರಿವೆಗಳನ್ನು ಚಿತ್ರಾ ನಕ್ಷತ್ರದ ಬಿಸಲಿಗೆ ಹಾಕುವ ರೂಢಿಯುಂಟು. ಸೂರ್ಯನ ಕಿರಣಗಳಿಂದ ಎಷ್ಟೋ ರೋಗ ಜಂತುಗಳು ನಾಶಹೊಂದುವವು. ಬೇರೆ ಬೇರೆ ಬಣ್ಣಗಳ ಬಾಟಲಿಗಳಲ್ಲಿ ನೀರು ತುಂಬಿ ಬಿಸಲೊಳಗೆ ಇಟ್ಟರೆ ಆ ನೀರಿನ ಗುಣವು ಬದಲಾಗುವದು.

ಇದೇ ಪ್ರಕಾರ ಚಂದ್ರನ ಕಿರಣಗಳಿಂದಲೂ ಪದಾರ್ಥಗಳ ಮೇಲೆ ಪರಿಣಾಮವಾಗುತ್ತಿರುತ್ತದೆ. ಆ ಕಿರಣಗಳಲ್ಲಿ ಪದಾರ್ಥಗಳನ್ನು ಕೊಳೆಯಿಸುವ ಶಕ್ತಿಯುಂಟೆಂದು ಅಧುನಿಕ ವೈದ್ಯಶಾಸ್ತ್ರದ ಶೋಧದಿಂದ ಗೊತ್ತಾಗಿರುತ್ತದೆ. ಬೆಳ್ದಿಂಗಳಲ್ಲಿ ಮಲಗಿದರೆ ದೃಷ್ಟಿಯು ಮಂದವಾಗುವದೆಂದು ಜನರ ತಿಳುವಳಿಕೆಯುಂಟು. ಉದ್ಭಿಜ್ಜಗಳ ಮೇಲೆ ಬೆಳ್ದಿಂಗಳಿಂದ ಹಲವು ಪರಿಣಾಮಗಳಾಗುವವು. ಚಂದ್ರಕಿರಣಗಳಿಂದ ಅವುಗಳ ಜೀವನ ಶಕ್ತಿಯು ಕಡಿಮೆಯಾಗುವದು. ದಕ್ಷಿಣ ಅಫ್ರಿಕದೊಳಗಿನ ಒಬ್ಬ ರಸಾಯನ ಶಾಸ್ತ್ರಜ್ಞನು ಇದಕ್ಕೆ ಕಾರಣವನ್ನು ಗೊತ್ತುಹಚ್ಚಿದ್ದಾನೆ. ಅವನ ಅಭಿಪ್ರಾಯವೇನಂದರೆ:—

ಚಂದ್ರನು ಸ್ವಪ್ರಕಾಶಕ ಪದಾರ್ಥವಲ್ಲ. ಸೂರ್ಯಪ್ರಕಾಶವು ಚಂದ್ರನ ಮೇಲೆ ಬಿದ್ದು ಪರಾವರ್ತನ ಹೊಂದಿ ಭೂಮಿಯಮೇಲೆ ಬೀಳುವದು. ಈ ಪ್ರಕಾರ ಪರಾವರ್ತನ ಹೊಂದಿ ಬರುವದರಿಂದಲೇ ಅದರಲ್ಲಿ ಮೇಲೆ ಹೇಳಿದ ಗುಣಗಳು ಬಂದಿರುವವು. ಈ ಸಂಗತಿಯನ್ನು ಸಿದ್ಧಮಾಡುವದಕ್ಕಾಗಿ ಅವನು ಒಂದು ಮಾನವನ್ನು ತಕ್ಕೊಂಡು ಅದರಲ್ಲಿ ಎರಡು ತುಂಡು ಮಾಡಿ ಒಂದು ತುಂಡನ್ನು ಮೂಲ ಪ್ರಕಾಶದಲ್ಲಿಯೂ ಮತ್ತೊಂದು ತುಂಡನ್ನು ಪರಾವರ್ತನದಿಂದ ಬಂದ ಪ್ರಕಾಶದಲ್ಲಿಯೂ

ಇಡಲು, ಎರಡನೇ ತುಂಡು ಬೇಗನೆ ಕೊಳೆಯುವದೆಂದು ಅವನ ಅನುಭವಕ್ಕೆ ಬಂತು. ಇದೇ ಪ್ರಯೋಗವನ್ನು ಬೇರೆ ತಿಂಬುಂಬುವ ಪದಾರ್ಥಗಳ ಮೇಲೆ ಮಾಡಿ ನೋಡಲು ಇದೇ ಮಾತು ಅವನ ಅನುಭವಕ್ಕೆ ಬಂತು.

ಚಂದ್ರ ಕಿರಣಗಳಿಂದ ಪದಾರ್ಥಗಳ ಮೇಲೆ ಅನೇಕ ಪರಿಣಾಮಗಳಾಗುವವೆಂದು ಜನರ ತಿಳುವಳಿಕೆಗಳು ಇರುವವು, ಈ ತಿಳುವಳಿಕೆಗಳನ್ನು ಶಾಸ್ತ್ರೀಯ ವಿಚಾರವೆಂಬ ಒರೆಗಲ್ಲಿಗೆ ತಿಕ್ಕಿ ಸತ್ಯವನ್ನು ಶೋಧಿಸುವದು ಅತ್ಯಂತ ಅವಶ್ಯವಾದದ್ದು. ಮೇಲೆ ಕೊಟ್ಟ ಪ್ರಯೋಗದಿಂದ ಈ ತಿಳುವಳಿಕೆಗಳು ತೀರ ನಿರಾಧಾರವಾಗಿರುವದಿಲ್ಲೆಂಬದು ನಿಜವು. ಆದರೆ ಅದರಲ್ಲಿ ಸತ್ಯಾಂಶವು ಎಷ್ಟಿರುವದೆಂಬದನ್ನು ಶೋಧಿಸಿ ಅವುಗಳ ಕಾರಣಗಳನ್ನು ಹುಡುಕಿ ತೆಗೆಯುವದು ಬಹಳ ಮಹತ್ವದ ಸಂಗತಿಯಾಗಿದೆ.

---

೩. ಆನೆಯ ಸೊಂಡೆಯ ಉಪಪತ್ತಿಯು.

ಡಾರ್ವಿನನ ಉತ್ಕ್ರಾಂತಿವಾದದಲ್ಲಿ "ಬೇರೆ ಬೇರೆ ಪ್ರಾಣಿಗಳ ಬೇರೆ ಬೇರೆ ಅವಯವಗಳು ಅವುಗಳ ಭಿನ್ನ ಪರಿಸ್ಥಿತಿಯ ಮೂಲಕವಾಗಿ ಉತ್ಪನ್ನವಾದವು" ಎಂಬದೊಂದು ನಿಯಮವು ಇರುತ್ತದೆ. ಪರಿಸ್ಥಿತಿಯು ಉತ್ಪನ್ನವಾಗಲಿಕ್ಕೆ ಮುಖ್ಯ ಕಾರಣಗಳು ಎರಡು:—

(೧) ನಿರ್ವಾಹವನ್ನು ಸಾಗಿಸುವದು.

(೨) ಶತ್ರುಗಳಿಂದ ಸಂರಕ್ಷಣವನ್ನು ಮಾಡಿಕೊಳ್ಳುವದು.

ಈ ಕಾರಣಗಳ ಮೂಲಕವಾಗಿ ಪ್ರಾಣಿಗಳಿಗೆ ಆಗಾಗ್ಗೆ ಅವಶ್ಯಕವಾದ ಅವಯವಗಳು ಉತ್ಪನ್ನವಾಗುತ್ತ ಹೋದವು. ಆನೆಯ ಸೊಂಡೆಯು ಒಳ್ಳೇ ಉದ್ದವಾದದ್ದರ ಉಪಪತ್ತಿಯನ್ನು ಪ್ರೋ. ಉಡವರ್ಥನೆಂಬ ಶಾಸ್ತ್ರಜ್ಞನು ಕೆಳಗೆ ಕೊಟ್ಟ ಪ್ರಕಾರ ಹೇಳಿದ್ದಾನೆ.

ಆನೆಯು ಮೊದಲು ಗಿಡ್ಡ ಪ್ರಾಣಿಯಾಗಿತ್ತು. ಕಾಲಾನುಕ್ರಮದಿಂದ ಅದರ ಕಾಲುಗಳು ಉದ್ದವಾಗುತ್ತಲೂ ಕುತ್ತಿಗೆಯು ಕಿರಿದಾಗುತ್ತಲೂ ಬಂದಹವು. ಭೂಮಿಯ ಮೇಲಿನ ಪದಾರ್ಥಗಳನ್ನು ತಿನ್ನಲಿಕ್ಕೆ ಅದರ ಬಾಯಿಯು ಭೂಮಿಗೆ ನಿಲುಕದಂತಾಯಿತು. ಅದರಿಂದ ಅದು

ತನ್ನ ಮೇಲ್ವನಡೆಯನ್ನು ಉದ್ದವಾಡಿ ಭೂಮಿಯ ಮೇಲಿನ ಪದಾರ್ಥವನ್ನು ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡಹತ್ತಿತು. ಈ ಪ್ರಕಾರವಾದೆಯು ಉದ್ದವಾಗುತ್ತಾಗುತ್ತ ಆನೆಗೆ ಈಗಿನ ಸೊಂಡೆಯು ಪ್ರಾಪ್ತವಾಗಿರುವದು. ಈ ಉಪಪತ್ತಿಯು ನಿಜವಿರಲಿ, ದಿಟವಿರಲಿ ಕಲ್ಪನೆಯು ಮಾತ್ರ ಮನೋರಂಜಕವಾಗಿರುವದು.

---

೪. ಬ್ರಿಟಿಶ ಜನರ ಅನುಕರಣೀಯವಾದ ಗುಣಗಳು.

ಅಮೇರಿಕದ ಒಬ್ಬ ಗ್ರಂಥಕಾರನೂ ತತ್ವಜ್ಞನೂ ಆದ ಎಮರ್ಸನ್ ಸೆಂಬವನು ತನ್ನದೊಂದು ನಿಬಂಧಮಾಲೆಯಲ್ಲಿ ಬ್ರಿಟಿಶ ಜನರಿಂದ ಅನುಕರಣ ಮಾಡತಕ್ಕ ಕೆಲವು ಗುಣಗಳನ್ನು ಕೊಟ್ಟಿದ್ದಾನೆ. ಅವು ಯಾವವೆಂದರೆ:—

೧. ಸಾಹಸ:—ಈ ಗುಣದಿಂದ ಅವರು ಬೇಕಾದಂಥ ಸಂಕಟವು ಒದಗಿದಾಗ್ಯೂ ಹಿಂಜರಿಯದೆ ಪೃಥ್ವಿಯ ಮೇಲಿನ ಯಾವದೊಂದು ಸ್ಥಳಕ್ಕೆ ಹೋಗಿ ಕೈಕೊಂಡ ಕಾರ್ಯವನ್ನು ಮಾಡುವರು. ಬೇರೆ ಜನಾಂಗದವರಲ್ಲಿ ಈ ಗುಣವು ಕಡಿಮೆ ಪ್ರಮಾಣದಿಂದ ದೃಷ್ಟಿಗೆ ಬೀಳುವದು; ನಮ್ಮ ಜನರಲ್ಲಂತೂ ಈ ಗುಣವು ಇಲ್ಲೇ ಇಲ್ಲೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

೨. ವ್ಯವಸ್ಥೆಯಿಂದಲೂ ಅಚ್ಚುಕಟ್ಟುತನದಿಂದಲೂ ಇರುವ ಪದ್ಧತಿ:—ಈ ಗುಣವು ಅವರು ಕೂಡುವ ಕೋಣೆ, ಮಲಗುವ ಕೋಣೆ, ಇಪ್ಪತ್ತಮಿತ್ರರಿಗೆ ಭೆಟ್ಟಿಯಾಗುವ ಪಡಸಾಲೆ, ಪುಸ್ತಕಾಲಯ ಇವೇ ಮೊದಲಾದ ಮನೆಯ ಬೇರೆ ಬೇರೆ ಭಾಗಗಳಲ್ಲಿ ಒಡೆದು ಕಾಣುತ್ತಿರುವದು; ಮತ್ತು ಅದೇ ಗುಣದ ಮೂಲಕವಾಗಿ ಅವರ ಸಾಮಾಜಿಕ ಹಾಗೂ ರಾಜಕೀಯ ಸಂಸ್ಥೆಗಳು ಒಳ್ಳೇ ವ್ಯವಸ್ಥೆಯಿಂದ ನಡೆಯುವವು. ಈ ಸಂಗತಿಗಳು ಅವರ ವ್ಯಾಪಾರದ ಹಾಗು ದಂಡಿನ ಯೋಜನೆಯಲ್ಲಿ ಚನ್ನಾಗಿ ಕಂಡು ಬರುವವು.

೩. ಸ್ವಾಭಿಮಾನವು:— ಅವರಲ್ಲಿ ವಿಶೇಷವಾಗಿ ಸ್ವಾಭಿಮಾನವೂ ಸ್ವಕೀಯರ ಬಗ್ಗೆ ಸಹಾನುಭೂತಿಯೂ, ಸಂಕಟಸಮಯದಲ್ಲಿ ಧೈರ್ಯವನ್ನು ಕೊಡುವ ಗುಣವೂ, ಹೊತ್ತು ಬಂದಾಗ ಎಲ್ಲ ಬಿಟ್ಟಿಯಾದರೂ ಸ

ಹಾಯು ಮಾಡುವ ಗುಣವೂ ಮಿಗಿಲಾಗಿರುವದು.

೪. **ಅವರ ಶಿಸ್ತು**: — ಅಂದರೆ, ಮೇಲಿನ ಅಧಿಕಾರಿಗಳಿಗೆ ಅಂಕಿತರಾಗಿ ಅವರ ಕೈಕೆಳಗೆ ಮರ್ಯಾದೆಯಿಂದ ನಡೆಯುವ ಗುಣವು. ಈ ಗುಣದ ಮೂಲಕ ಎಲ್ಲ ಕೆಲಸಗಳು ಸುಸೂತ್ರವಾಗಿ ಸಾಗುವವು. ಇದಕ್ಕೆ ಬದಲಾಗಿ ಪ್ರತಿಯೊಬ್ಬನು ಹಿರೇತನವನ್ನು ಮಾಡುತ್ತ ನಡೆದರೆ ಕೆಲಸವು ಕೆಟ್ಟು ಹಾಳಾಗಿ ಹೋಗುವದು.

೫. **ವೇಳೆಯ ಸದ್ವ್ಯಯ**: — ಅವರು ತಮ್ಮ ವೇಳೆಯು ದುಡ್ಡಿಗಿಂತಲೂ ಹೆಚ್ಚು ಮಹತ್ವವುಳ್ಳದ್ದೆಂದು ತಿಳಿಯುತ್ತಾರೆ. ಕಾಲನಿಯಮವನ್ನು ಇಟ್ಟುಕೊಂಡು ಅದರಂತೆ ತಪ್ಪದೆ ಕೆಲಸ ಮಾಡುವರು.

೬. **ಪ್ರಾಮಾಣಿಕತನ**: — ನೇಮಿಸಿ ಕೊಟ್ಟ ಕೆಲಸವನ್ನು ಮೇಲ್ವಿಚಾರಕರು ಇರಲಿ, ಇಲ್ಲದಿರಲಿ, ತಪ್ಪದೆ ಮನಃಪೂರ್ವಕವಾಗಿ ಮಾಡುವ ಜಟವು ಅವರಲ್ಲಿರುವದು.

೭. **ವಿವೇಕ**: — ಸಾಮಾನ್ಯವಾಗಿ ಅವರು ಎಂಥ ದೊಡ್ಡ ಅಧಿಕಾರವು ಪ್ರಾಪ್ತವಾದಾಗ್ಯೂ ಉದ್ಧಟರೂ, ಪರರನ್ನು ಲೆಕ್ಕಿಸದೆ ನಡೆಯುವವರೂ ಆಗಿರುವದಿಲ್ಲ. ಔಪಚಾರಿಕವಾದ ನಡಾವಳಿಯಿಂದ ಎಲ್ಲರ ಮನಸ್ಸನ್ನು ಸಮಾಧಾನದಿಂದ ಇಡಲಿಕ್ಕೆ ಯತ್ನಿಸುವರು. ಮೊದಲೇ ಗೊತ್ತಾದ ಕಾಯಿದೆಗಳನ್ನೂ ನೇಮಗಳನ್ನೂ ಎಂದೂ ಯಾವ ಕಾರಣದಿಂದಲೂ ಮುರಿಯದೆ, ತಮ್ಮ ರಾಜನೀತಿಯ ಧೋರಣವನ್ನು ಬಿಡದೆ, ಜನರಕೂಡ ಶಕ್ಯವಿದ್ದಷ್ಟು ಮಟ್ಟಿಗೆ ಸ್ನೇಹದಿಂದಲೂ, ಪ್ರೀತಿಯಿಂದಲೂ ನಡೆಯುವರು.

೮. **ಜಿಜ್ಞಾಸೆ**: — ತಮ್ಮ ಉದರ ನಿರ್ವಾಹದ ಉದ್ಯೋಗವನ್ನು ಮಾಡುವದಲ್ಲದೆ, ಕೇವಲ ಜಿಜ್ಞಾಸೆಯಿಂದ ನಾನಾಪ್ರಕಾರದ ಹೊಸ ಶೋಧಗಳಲ್ಲಿ ತನುಮನಧನಗಳನ್ನು ವೆಚ್ಚಮಾಡುವರು.

೯. ಪ್ರತಿಯೊಂದು ಸಂಗತಿಯ ಬಗ್ಗೆ ಅದಷ್ಟುಮಟ್ಟಿಗೆ ವ್ಯಾಪಕವಾದ ಶಾಸ್ತ್ರೀಯ ದೃಷ್ಟಿಯನ್ನಿಟ್ಟು ತಮ್ಮ ರಾಷ್ಟ್ರದ ಜನರಿಗೆ ಯಾವ ರೀತಿಯಿಂದ ಲಾಭವಾದೀತೆಂಬ ಬಗ್ಗೆ ಕೊತ್ತು ಸಿಕ್ಕಾಗ ಆಲೋಚಿಸುತ್ತಿರುವರು.

೧೦. ಒಳ್ಳೇ ನಿಕರದ ಪ್ರಸಂಗದಲ್ಲಿ ತತ್ವದ ಸಲುವಾಗಿ ತಮ್ಮ ಸಾಂಪತ್ತಿಕ ಲಾಭದ ಕಡೆಗೆ, ಅಂದರೆ ದ್ರವ್ಯರೂಪವಾದ ಲಾಭದ ಕಡೆಗೆ

ಲಕ್ಷಕೊಡದೆ, ತಮ್ಮ ಸಾರಾಸಾರ ವಿಚಾರಕ್ಕೆ ನಿಜವೆಂದು ಕಾಣುವ ಪಕ್ಷವನ್ನು ವಹಿಸುವರು. ಮತ್ತು ಒಮ್ಮೆ ಒಂದು ಪಕ್ಷವನ್ನು ವಹಿಸಿದ ಬಳಿಕ ಎಷ್ಟು ವಿಘ್ನಗಳು ಬಂದರೂ ಅದನ್ನು ಬಿಡುವದಿಲ್ಲ. ಆದರಿಂದ ತಮ್ಮ ಸರ್ವಸ್ವದ ಹಾನಿಯಾದರೂ ಅದನ್ನು ಸಹಿಸಲಿಕ್ಕೆ ಸಿದ್ಧರಾಗುವರು.

ಈ ಸದ್ಗುಣಗಳ ಮೂಲಕವಾಗಿಯೇ ಅವರು ಸದ್ಯಕ್ಕೆ ಭೂಮಂಡಲದಲ್ಲಿ ಮಿಗಿಲಾದ ಕೀರ್ತಿ-ಸಂಪತ್ತುಗಳನ್ನು ಪಡೆದಿರುತ್ತಾರೆ.

ಓದಿ ವಿಚಾರಮಾಡತಕ್ಕ ಮಾತುಗಳು.

೧. ಬಹಳ ಮಿತಿಯಿಂದ ಉಪಯೋಗಿಸ ಬೇಕಾದ ವಸ್ತುಗಳಲ್ಲಿ ದಾತೃತ್ವವೂ ಒಂದಾಗಿರುವದು. ಒಕ್ಕಲಿಗನು ತನ್ನ ಹೊಲದಲ್ಲಿ ಬಿತ್ತುವ ಬೀಜಗಳನ್ನು ಉಪಯೋಗಿಸುವಂತೆಯೇ ಮನುಷ್ಯನು ತನ್ನ ದಾತೃತ್ವ ಗುಣವನ್ನು ಉಪಯೋಗಿಸತಕ್ಕದ್ದು; ಅದನ್ನು ಮಿತಿಮೀರಿ ಅಂಗಲವಾಗಿ ಹರಡಿದರೆ ನಿಷ್ಫಲವಾಗುವದು. ಎಲ್ಲವನ್ನು ಒಂದೇ ಕಡೆಗೆ ಚಲ್ಲಿದರೆ, ಗಾದುಗೂಡಿ ಹೋಗುವದು.

೨. ಎಡನೆಯವರಿಗೆ ಜಾಣತನದ ನುಡಿಗಳನ್ನು ಹೇಳಬೇಕೆಂಬ ತೀವ್ರ ಉತ್ಕಂಠೆಯು ನಮ್ಮಲ್ಲಿ ಉಂಟಾದಾಗ ನಾವು ಅವರಲ್ಲಿ ಮನೋದೌರ್ಬಲ್ಯವುಂಟೆಂಬ ಕಲ್ಪನೆಯನ್ನು ಮಾಡಿಕೊಂಡಿರುತ್ತೇವೆ. ಆದರೆ ಇಂಥ ಪ್ರಸಂಗಗಳಲ್ಲಿ ತಮ್ಮ ಮನಸ್ಸಿನ ಸಾಮರ್ಥ್ಯವೇ ಎಷ್ಟರ ಮಟ್ಟಿಗೆ ಇರುವದೆಂಬದನ್ನು ಚನ್ನಾಗಿ ತಿಳಿದುಕೊಂಡಿರಬೇಕು.

೩. ನಿಂದೆಯಿಂದ ನಿಂದೆಮಾಡುವ ನಿಂದಕನು ಮಾತ್ರ ನೀಚನೆಂದು ನಿರ್ಣಯಿಸಲ್ಪಡುವನು. ಆದರೆ ಅವನು ಯಾವನ ನಿಂದೆಯನ್ನು ಮಾಡುವನೋ ಅವನ ಹಾನಿಯು ಎಂದೂ ಆಗುವದಿಲ್ಲ.

೪. ಪ್ರಕಾಶ ಕಿರಣಗಳಂತೆ ಸತ್ಯವು ಯಾವಾಗಲು ಸರಳ ಮಾರ್ಗದಿಂದ ಹೋಗುವದು. ಅದಕ್ಕೆ ವಕ್ರಮಾರ್ಗವು ಸ್ವಲ್ಪವೂ ಸರಿ ಬೀಳುವದಿಲ್ಲ.

೫. ದೊಡ್ಡಸ್ತಿಕೆಯುಳ್ಳ ಮನುಷ್ಯರ ಸ್ವಭಾವವು ಯಾವಾಗಲೂ ಸೊಡ್ಡದೇ. ಪ್ರಶಂಸನೀಯವಾದ ದೊಡ್ಡ ಕಾರ್ಯಗಳನ್ನು ಮಾಡುವದರಲ್ಲಿಯೇ ಅವರ ಒಲವು ಇರುತ್ತದೆ.

೬. ಮರ್ಯಾದೆ ಅಥವಾ ಮೇರೆ ಎಂಬದು ಎಲ್ಲ ಮಾತುಗಳಿಗೂ ಉಂಟು. ಸದ್ಗುಣಗಳಾದರೂ ಮರ್ಯಾದಿತವಾಗಿದ್ದರೆ ಲೇಸು. ಯಾಕಂದರೆ, ಮಿತಿ ಮೀರಿದರೆ ಸದ್ಗುಣಗಳು ಕೂಡ ದುರ್ಗುಣಗಳಲ್ಲಿ ಸಮಾವೇಶವಾಗುವವು.

೭. ಸಿಟ್ಟನ್ನು ಮನಸ್ಸಿನಲ್ಲಿಟ್ಟುಕೊಳ್ಳುವದಕ್ಕಿಂತ ಒಮ್ಮೆ ಧಡ ಧಡ, ಆಡಿ ತೋರಿಸಿ ಹೊರಗೆ ಹಾಕಿ ಬಿಡುವದು ಒಳ್ಳೆಯದು.

೮. ನ್ಯಾಯದಿಂದ ಸಂಪಾದಿಸಬಹುದು; ಮಿತಿಯಿಂದ ಉಪಭೋಗಿಸ ಬಹುದು; ಎರಡನೆಯವರಿಗೆ ಆನಂದದಿಂದ ಕೊಡಬಹುದು; ಸಮಾಧಾನದಿಂದ ನಿರ್ವಾಹ ಮಾಡಬಹುದು. ಈ ವಸ್ತುಗಳ ಹೊರತು ಸಜ್ಜನರಿಗೆ ಬೇರೆ ವಸ್ತುಗಳು ಬೇಕಾಗುವದೇ ಇಲ್ಲ.

೯. ಸಮಾಧಾನವೃತ್ತಿ ಮತ್ತು ಯುಕ್ತಾಯುಕ್ತವಿಚಾರ ಎಂಬೀ ಎರಡು ಗುಣಗಳುಳ್ಳವನಿಗೆ ಯಾವ ಸ್ಥಿತಿಯಲ್ಲಾದರೂ ಆನಂದವಿರುತ್ತದೆ.

೧೦. ಅಂಜಿಕೆ, ಮತ್ತು ಚಿಂತೆ ಈ ವ್ಯಾಧಿಗಳಿಂದ ಮನಸ್ಸನ್ನು ಕಾಪಾಡುವದಕ್ಕೆ ಈಶ್ವರ ನಿಷ್ಠೆಯೇ ಉತ್ತಮವಾದ ಉಪಾಯವಿರುತ್ತದೆ.

೧೧. ಒಬ್ಬನೂ ಜೀವದ ಗೆಳೆಯನಿಲ್ಲದವನಿಗೆ ಈ ಜಗತ್ತು ಕೇವಲ ಅರಣ್ಯದಂತೆಯೇ ಸರಿ.

೧೨. ಕೈ ಸಾಗುವಾಗ ಹಲವರು ಮಿತ್ರರಾಗುವರು. ಆದರೆ ನಿಜವಾದ ಮಿತ್ರತ್ವದ ಪರೀಕ್ಷೆಯು ಕೇಡುಗಾಲದಲ್ಲಿಯೇ ಆಗುವದು. ಕೈ ಸಾಗುವ ಕಾಲದಲ್ಲಿ ನಿಜವಾದ ಮಿತ್ರನು ಯಾರೆಂಬದು ಗೊತ್ತಾಗುವದಿಲ್ಲ. ಆದರೆ ಕೇಡುಗಾಲದಲ್ಲಿ ತನ್ನ ಶತ್ರುವು ಬೈಲಿಗೆ ಬಾರದೆ ಇರುವದಿಲ್ಲ.

೧೩. ದುಷ್ಟಸ್ವಭಾವ, ಮತ್ತು ದುರ್ಬುದ್ಧಿ ಇವುಗಳ ಪ್ರಭಾವವು ಲೋಕದಲ್ಲಿ ವಿಲಕ್ಷಣವಾಗಿರುವದು. ಒಳ್ಳೆಯ ಜನರ ಸತ್ಪ್ರವೃತ್ತಿಗಳಿಗಿಂತ ಅವರಿಂದ ಕ್ವಚಿತವಾಗಿ ಆದ ಕೇಡೇ ಬೈಲಿಗೆ ಬರುವದು.

೧೪. ಮೋಸಗಾರನ ಭಾಷಣದ ಆರಂಭವು ಅಸತ್ಯಕ್ಕೆ ಸತ್ಯಸ್ವರೂಪವನ್ನು ಕೊಡುವದರಲ್ಲಿಯೂ ಆಗುತ್ತದೆ.

೧೫. ಶಾಸ್ತ್ರಗಳ ಪ್ರತಿಷ್ಠೆಯು ಮಾತ್ರ ಬೆಳೆಯುವದರಿಂದೇನು? ಪ್ರತ್ಯಕ್ಷವಾಗಿ ಮನುಷ್ಯನ ಆಯುಷ್ಕ್ರಮದಲ್ಲಿ ಉಪಯುಕ್ತವಾಗುವ ಜ್ಞಾನವೇ ನಿಜವಾದ ಜ್ಞಾನವು.

ಹಿತೋಪದೇಶವು.

ಜಿಳಗಿನಲಿ ಬೇಗೇಳು ಕಂದನೆ ।
ತೊಳೆದುಕೊಳ್ಳೈ ಮೋರೆ ಮೈಗಳ ।
ಕಳೆಯದಲೆ ಕಾಲವನು ಸಾಲೆಗೆ ಪೋಗು ನಿತ್ಯದಲಿ ॥
ಎಳೆಯತನದಲಿ ದೃಢಮನಸಿನಿಂ ।
ಗಳಿಸಿಕೊಳ್ಳಲು ಬೇಕು ವಿದ್ಯೆಯ ।
ಗಳಿಗೆ ಮಾತ್ರವ ಕಳೆಯಕೂಡದು ಕೆಟ್ಟ ವ್ಯಸನದಲಿ ॥ ೧॥
ಮಾತದಿರು ಗುರುಹಿರಿಯರಾಜ್ಞೆಯ ।
ತೋರು ದಯವನು ಸರ್ವಭೂತಕೆ ।
ಚೋರ ಕೃತ್ಯವ ಮಾಡದಿರು ನೀನಾಡದಿರು ಸಟೆಯ ॥
ಯಾರಿಗೂ ಬಿರುನುಡಿಯ ನುಡಿಯದಿ ।
ರಾರಿಗೂ ಬೈಯ್ಯದಿರು ಗರ್ವದಿ ।
ಯಾರಿಗೂ ಬಗೆಯದಿರು ಕೇಡನು ಬಾಲಕೋತ್ತಮನೆ ॥೨॥
ಕಾಡದಿರು ಬಡ ಮೂಕ ಪ್ರಾಣಿಯ ।
ಆಡದಿರು ನೀಂ ಪರರ ನಿಂದೆಯ ।
ಮಾಡದಿರು ಗೆಳೆತನವ ಬಾಲನೆ ದುಷ್ಟಜನರೊಡನೆ ॥
ನೋಡಿ ನಗುತಿರು ಪರರ ಸೌಖ್ಯವ ।
ನೋಡಿ ಮರುಗೈ ಪರರ ದುಃಖವ !
ಮಾಡು ಯತ್ನವ ಕಳೆಯುವದಕಾ ಜನರ ಕಷ್ಟವನು ॥೩॥
ಮಾಡದಿರು ಮತ್ಸರವ ಪರರೊಳು ।
ಮಾಡುತಿರು ಸದ್ಗುಣಕೆ ಸ್ಪರ್ಧೆಯ ।
ನೋಡುತಿರು ನೀಂ ಸುತ್ತಮುತ್ತಲು ಸೂಕ್ಷ್ಮದೃಷ್ಟಿಯಲಿ॥
ಆಡದಿರು ಜಂಭವನು ಜನರೊಳು ।
ಮಾಡಿತೋರಿಸು ನಿನ್ನ ಜಾಣ್ಮೆಯ ।
ಆಡುವದು ಬಹು ಸುಲಭ ಮಾಳ್ಪುದು ಕಷ್ಟವೆನಿಸುವದು॥೪॥

ಸಮಾಜಶಾಸ್ತ್ರವು.

(ಭಾಷಾಂತರ)

ಅರ್ಥಶಾಸ್ತ್ರ, ನೀತಿಶಾಸ್ತ್ರ, ಮನುಷ್ಯಶಾಸ್ತ್ರ (Anthropology) ಹಾಗು ಸುಪ್ರಜಾನಿರ್ಮಾಣಶಾಸ್ತ್ರ (Eugenics) ಇವೇ ಮೊದಲಾದ ಶಾಸ್ತ್ರಗಳು ಸಮಾಜಶಾಸ್ತ್ರದಲ್ಲಿ ಸಮಾವೇಶವಾಗುತ್ತಿದ್ದರೂ ಈ ಶಾಸ್ತ್ರವು ಉಳಿದವುಗಳಿಂದ ಭಿನ್ನವಾಗಿರುವದು. ಉಪರ್ಯುಕ್ತ ಶಾಸ್ತ್ರಗಳಲ್ಲಿ, ಮಾನವಪ್ರಾಣಿಗೆ ಸಂಬಂಧಿಸಿದ ಒಂದು ಸಾಮಾನ್ಯ ಶಾಸ್ತ್ರದ ಒಂದೊಂದು ಅಂಗವು ಮಾತ್ರ ವಿವರಿಸಲ್ಪಟ್ಟಿರುವದು. ಸಮಾಜಶಾಸ್ತ್ರವೆಂದರೆ, ಮನುಷ್ಯಪ್ರಾಣಿಯ ಸಮುದಾಯವು ಹ್ಯಾಗೆ ಉಂಟಾಯಿತು? ಸಮಾಜವು ಸಾಂಪ್ರತದ ಸ್ಥಿತಿಗೆ ಯಾವ ಕ್ರಮದಿಂದ ಬಂದಿತು? ಯಾವ ಕಾರಣಗಳಿಂದ ಬಂದಿತು? ಅದರ ಅವಸ್ಥೆಯು ಮುಂದೆ ಏನಾಗಬಹುದು? ಅದರ ಪ್ರಗತಿಯು ಯಾವ ಮಾರ್ಗದಿಂದ ಆಗಬಹುದು, ಅಥವಾ ಸದ್ಯಕ್ಕೆ ಆಗುತ್ತಿರುವದು? ಅದು ಉತ್ಕರ್ಷಸ್ಥಿತಿಯಲ್ಲಿರುವದೋ ಅಪಕರ್ಷಾವಸ್ಥೆಯಲ್ಲಿರುವದೋ? ಇವೇ ಮುಂತಾದ ವಿಚಾರಗಳನ್ನು ಹೇಳುವಶಾಸ್ತ್ರವು. ನೀತಿಶಾಸ್ತ್ರ-ಅರ್ಥಶಾಸ್ತ್ರಗಳೇ ಮೊದಲಾದ ಶಾಸ್ತ್ರಗಳು ಮೇಲೆ ಹೇಳಿದ ವಿಚಾರಗಳಲ್ಲಿ ಒಂದೆರಡನ್ನು ಮಾತ್ರ, ಅದೂ ಏಕದೇಶೀಯವಾಗಿ ವಿವರಿಸುವವು. ಅರ್ಥಶಾಸ್ತ್ರದಲ್ಲಿ ಮನುಷ್ಯಪ್ರಾಣಿಯು ದ್ರವ್ಯದ ಲೋಭಿಯೆಂದು ಕಲ್ಪಿಸಿಕೊಂಡು, ಉಳಿದ ವಿಚಾರಗಳು ವಿವರಿಸಲ್ಪಟ್ಟಿರುವವು. ಮನುಷ್ಯಶಾಸ್ತ್ರದಲ್ಲಿ ಮನುಷ್ಯನು ಒಂಟಿಗನಾಗಿದ್ದಾಗಿನ, ಅಂದರೆ ಅವನು ಯಾವ ಸಮಾಜಕ್ಕೂ ಸೇರದೆ ಇದ್ದಾಗಿನ, ಸ್ಥಿತಿಯ ಸಂಬಂಧದ ವಿಚಾರಗಳು ಇರುವವು. ಆದರೆ ಈ ಎಲ್ಲ ಅಂಗಗಳ ಸಂಬಂಧದಿಂದ ವಿಚಾರ ಮಾಡುವ ಶಾಸ್ತ್ರವು ಸಮಾಜಶಾಸ್ತ್ರವು. ಸಾಂಪ್ರತದ ಕಾಲವು ವಿಚಾರಸ್ವಾತಂತ್ರ್ಯದ ಕಾಲವಾದ್ದರಿಂದ, ಇದರ ವಿವೇಚನವು ಆಗದೆ ಇರಲಾರದು. ಸಾಂಪ್ರತಕ್ಕೆ ವ್ಯವಹಾರದಲ್ಲಿರುವ ಬೇರೆ ಬೇರೆ ಆಚಾರವಿಚಾರಗಳೂ ಬೇರೆ ಬೇರೆ ರೂಢಿಗಳೂ ಹ್ಯಾಗೆ ಪ್ರಚಾರದಲ್ಲಿ ಬಂದವು? ಅವು ಸಮಾಜಕ್ಕೆ ಹಿತಕರವಾಗಿರುವವೋ ಅಹಿತಕರವಾಗಿರುವವೋ? ಎಂಬ ವಿಚಾರಗಳನ್ನು ಸಮಾಜಶಾಸ್ತ್ರದಲ್ಲಿ ಮಾಡಬೇಕಾಗುವದು. ಸಮಾಜವು ಈಶ್ವರನಿರ್ಮಿತವಾದದ್ದು, ಅದರೊಳಗಿನ ಆಚಾರವ್ಯವಹಾರಾದಿಗಳು ಅವನಿಂದಲೇ

ಪ್ರಣೀತವಾಗಿರುವವು, ಅತಏವ ಅದರ ವಿಷಯವಾಗಿ ಏನೂ ವಿಚಾರ ಮಾಡಬೇಕಾಗಿಲ್ಲ, ಹಾಗೂ ಮಾಡುವದು ಇಷ್ಟವೂ ಅಲ್ಲ, ಎಂಬ ಪುರಾತನ ಭಾವನೆಗೆ ಸಾಂಪ್ರತದಲ್ಲಿ ಅವಕಾಶವಿರುವದಿಲ್ಲ. ಬಾಯಬಲ್ಲಿನಲ್ಲಿ ಹೇಳಿದ ಮೇರೆಗೆ ಸೃಷ್ಟಿಯ ಉಪಪತ್ತಿಯನ್ನು ಸಾಧಿಸುವಂಥ, ಆಥವಾ ಸೃಷ್ಟಿಯಲ್ಲಿ ನಡೆಯುತ್ತಿರುವ ಕಾರ್ಯಗಳಿಗೆಲ್ಲಾ ಅಪೌರುಷೇಯತ್ವವನ್ನು ಕಲ್ಪಿಸಿ, ಅವು ಶಾಶ್ವತವಾದವುಗಳೆಂದು ತಿಳಿಯುವಂಥ ಒಂದು ಕಾಲವು ಹಿಂದೆ ಆಗಿ ಹೋಯಿತು. ಸಮಾಜಕ್ಕೆ ಸಾಂಪ್ರತಕ್ಕೆ ಒದಗಿರುವ ಸ್ಥಿತಿಯೂ, ಸಮಾಜದಲ್ಲಿ ಈ ಹೊತ್ತಿಗೆ ನಡೆಯುತ್ತಿರುವ ಆಚಾರ-ವಿಚಾರಗಳೂ ಸಮಾಜದಲ್ಲಿ ರೂಢವಾಗಿರುವ ಪರಸ್ಪರ ಸಂಬಂಧಗಳೂ ಈಶ್ವರಪ್ರಣೀತವಾಗಿರದೆ, ಸೃಷ್ಟಿಯ ಅನೇಕ ನಿಯಮಗಳಿಗೆ ಆಧೀನವಾಗಿ ಉಂಟಾಗಿರುವವು, ಎಂಬ ಸಂಗತಿಯನ್ನು ಈಗ ಸರ್ವರೂ ಸಮ್ಮತಿಸುವರು. ಹಾಗೂ ಈ ಕಾರ್ಯರೂಪಸಮಾಜದ ಅನೇಕ ರೂಢಿಗಳೂ ಅನೇಕ ಸಂಬಂಧಗಳೂ ಅನೇಕ ಪ್ರಕಾರಗಳೂ ಇವುಗಳಿಂದ ಕೂಡಿದ ಜನಸಮುದಾಯದ ಕರ್ತೃತ್ವಶಕ್ತಿಯೂ ಯಾವ ಕಾರಣಗಳನ್ನು ಅವಲಂಬಿಸಿರುವವು, ಎಂಬ ವಿಚಾರವನ್ನು ಸಮಾಜಶಾಸ್ತ್ರವು ಹೇಳಬೇಕಾಗಿರುವದು. ಹಾಗಾದರೆ, ಸಮಾಜಶಾಸ್ತ್ರವನ್ನು ಸ್ವತಂತ್ರವಾಗಿ ಯಾಕೆ ಹೇಳಬೇಕು? ಅರ್ಥಶಾಸ್ತ್ರ, ನೀತಿಶಾಸ್ತ್ರ, ಶಾಸನಶಾಸ್ತ್ರ ಇತ್ಯಾದಿಗಳಲ್ಲಿ ಸಮಾಜದ ಹಾಗೂ ಅದರೊಳಗಿನ ವ್ಯಕ್ತಿಗಳ ಬೇರೆ ಬೇರೆ ಅಂಗಗಳ ವಿಷಯದ ವಿಚಾರವು ಇದ್ದೇ ಇರುವದು; ಈ ಎಲ್ಲ ಶಾಸ್ತ್ರಗಳನ್ನು ಒತ್ತಟ್ಟಿಗೆ ಕೂಡಿಸಿಬಿಟ್ಟರೆ ಸಮಾಜಶಾಸ್ತ್ರವು ತಾನೇ ಸಿದ್ಧವಾಗುವದು; ಇವುಗಳಲ್ಲಿ ಸಮಾಜದ ಬೇರೆ ಬೇರೆ ಅಂಗಗಳ ವಿವೇಚನೆಯಾದ ಬಳಿಕ ಉಳಿಯಿತಿನ್ನೇನು? ಎಂದು ಯಾರಾದರೂ ಕೇಳಬಹುದು. ಇದಕ್ಕೆ ಉತ್ತರವೇನಂದರೆ, ಅರ್ಥಶಾಸ್ತ್ರಾದಿಗಳಲ್ಲಿ ಏಕದೇಶೀಯವಾದ ವಿಚಾರಗಳಿದ್ದದರಿಂದ ಅವುಗಳಿಗೆ ಅಕುಂಚಿತ ಸ್ವರೂಪವು ಪ್ರಾಪ್ತವಾಗುವದು. ಸಮಾಜಶಾಸ್ತ್ರದಂಥ ವಿಸ್ತೃತ ಸ್ವರೂಪದ ಶಾಸ್ತ್ರವಿಲ್ಲದಿದ್ದರೆ ಮನುಷ್ಯ ಪ್ರಾಣಿಯ ವಿಚಾರವು ಕೇವಲ ಸಂಕುಚಿತ ದೃಷ್ಟಿಯುಳ್ಳದ್ದಾಗುವದು. ಮನುಷ್ಯನು ಹೆಚ್ಚು ಹೆಚ್ಚು ಎತ್ತರದ ಪ್ರದೇಶಕ್ಕೆ ಹೋಗಹತ್ತಿದಂತೆ ಅವನಿಗೆ ಸುತ್ತಲೂ ಹೆಚ್ಚು ಹೆಚ್ಚು ವಿಸ್ತಾರವಾದ ಸ್ಥಳವು ಕಾಣಹತ್ತು

ವದು. ಅದೇ ಮೇರೆಗೆ ಏಕದೇಶೀಯ ಶಾಸ್ತ್ರಗಳ ಅವಲೋಕನದಿಂದ ಏಕದೇಶೀಯ ಜ್ಞಾನವು ದೊರೆಯುವದು. ಅರ್ಥಶಾಸ್ತ್ರದ ಅಭ್ಯಾಸದಿಂದ ಮನುಷ್ಯನ ಧನಲುಬ್ಧತೆಯನ್ನಷ್ಟು ಧ್ಯಾನದಲ್ಲಿ ಉಳಿಯಬಹುದು. ಆದರೆ ಧನಸಂಚಯವಷ್ಟೇ ಮನುಷ್ಯನ ಧರ್ಮವಲ್ಲ. ಅವನಲ್ಲಿ ಇನ್ನೂ ಅನೇಕ ಗುಣಗಳಿರಬೇಕಾಗುವದು. ಒಟ್ಟಿಗೆ, ಈ ತರದ ಏಕದೇಶೀಯ ಶಾಸ್ತ್ರಗಳ ಅಭ್ಯಾಸದಿಂದ ಸಮಾಜಶಾಸ್ತ್ರದ ಸಹಾಯದಿಂದ ದೊರೆಯುವಂಥ ಸಾಂಗೋಪಾಂಗವಾದ ಜ್ಞಾನವು ಲಭಿಸಲಾರದು. ಸುಪ್ರಸಿದ್ಧ ಫ್ರೆಂಚತತ್ವಜ್ಞನಾದ ಕಾಮ್ಟೆ ಎಂಬವನು ಬೇರೆ ಬೇರೆ ಶಾಸ್ತ್ರಗಳ ವರ್ಗೀಕರಣ ಮಾಡುವಾಗ ಸಮಾಜಶಾಸ್ತ್ರಕ್ಕೆ ಮೊದಲನೆಯ ಸ್ಥಾನವನ್ನೂ ಪರಿಮಾಣಶಾಸ್ತ್ರ (Mathematics) ಕ್ಕೆ ಕಡೆಯ ಸ್ಥಾನವನ್ನೂ ಕೊಟ್ಟಿರುವನು.

ಸಮಾಜಶಾಸ್ತ್ರವು ಅತ್ಯಂತ ಕಠಿಣವಾಗಿರುವದು. ಅರ್ವಾಚೀನಕಾಲದ ಸಮಾಜಸಾಸ್ತ್ರವನ್ನು ಪ್ರಥಮದಲ್ಲಿ ಪ್ರಚಾರಕ್ಕೆ ತಂದವನು ಸುಪ್ರಸಿದ್ಧ ಫ್ರೆಂಚ ತತ್ವಜ್ಞನಾದ ಕಾಮ್ಟೆಯೆಂಬವನು. ಪ್ಲೇಟೋ ಮತ್ತು ಅರಿಸ್ಟಾಟಲ್ ಇವರ ಗ್ರಂಥಗಳಲ್ಲಿಯೂ ಸಮಾಜ ಶಾಸ್ತ್ರದ ಸಂಬಂಧದ ವಿವೇಚನವು ಬಂದಿರುವದು. ಆದರೆ ನೀತಿಶಾಸ್ತ್ರ, ಶಾಸನಶಾಸ್ತ್ರ ಸಮಾಜಶಾಸ್ತ್ರ ಎಂಬ ಮೂರು ಬೇರೆ ಬೇರೆ ಶಾಸ್ತ್ರಗಳ ಮೂರು ಸ್ವತಂತ್ರ ಸ್ವರೂಪಗಳು ಮಾತ್ರ ಈ ಪ್ರಾಚೀನ ಗ್ರಂಥಗಳಲ್ಲಿ ಕಂಡುಬರುವದಿಲ್ಲ. ಇದಕ್ಕೆ ಪ್ರಾಚೀನ ಕಾಲದೊಳಗಿನ ಗ್ರೀಕ ಹಾಗು ರೋಮನ್ ಸಂಸ್ಥೆಗಳ ವಿಶಿಷ್ಟಪರಿಸ್ಥಿತಿಯೇ ಕಾರಣವು. ಸಾಂಪ್ರತದಲ್ಲಿ ರಾಜ್ಯವು ಏಕಸತ್ತಾತ್ಮಕವಾದದ್ದಿರಲಿ, ಬಹುಜನಸತ್ತಾತ್ಮಕವಾದದ್ದಿರಲಿ, ಧನಿಕಸತ್ತಾತ್ಮಕವಾದದ್ದಿರಲಿ, ಸಾಮಾನ್ಯಜನಸತ್ತಾತ್ಮಕವಾದದ್ದಿರಲಿ, ರಾಜ್ಯಕರ್ತರೂ ಪ್ರಜೆಗಳೂ ಬೇರೆ ಬೇರೆಯಾಗಿ ಒಡೆದು ಕಾಣಿಸುವರು. ಆದರೆ ಪ್ರಾಚೀನ ಗ್ರೀಕ ಸಂಸ್ಥೆಗಳು ತೀರ ಸಣ್ಣ ಸಣ್ಣವಿದ್ದವು. ಆದ್ದರಿಂದ ಅವುಗಳೊಳಗಿನ ಪ್ರತಿಯೊಬ್ಬ ಮನುಷ್ಯನೂ ಅರಸನಂತೆ ಇರುತ್ತಿದ್ದನು. ಮತಕೊಡುವವರು ಶಾಸನಸಭೆಯ ಸಭಾಸದರನ್ನು ಆರಿಸುವ ಪದ್ಧತಿಯು ಆಗಿನ ಕಾಲದಲ್ಲಿ ಇದ್ದಿಲ್ಲ. ಯಾಕಂದರೆ, ಮತಕೊಡುವವರು ತೀರ ಸ್ವಲ್ಪಜನರೇ ಇರುತ್ತಿದ್ದುದರಿಂದ ಅವರೆಲ್ಲರೂ ಶಾಸನಸಭೆಯ ಸಭಾಸದರಾಗುತ್ತಿದ್ದರು.

ಪ್ರಣೀತವಾಗಿರುವವು, ಅತಏವ ಅದರ ವಿಷಯವಾಗಿ ಏನೂ ವಿಚಾರ ಮಾಡಬೇಕಾಗಿಲ್ಲ, ಹಾಗೂ ಮಾಡುವದು ಇಷ್ಟವೂ ಅಲ್ಲ, ಎಂಬ ಪುರಾತನ ಭಾವನೆಗೆ ಸಾಂಪ್ರತದಲ್ಲಿ ಅವಕಾಶವಿರುವದಿಲ್ಲ. ಬಾಯಬಲ್ಲಿನಲ್ಲಿ ಹೇಳಿದ ಮೇರೆಗೆ ಸೃಷ್ಟಿಯ ಉಪಪತ್ತಿಯನ್ನು ಸಾಧಿಸುವಂಥ, ಅಥವಾ ಸೃಷ್ಟಿಯಲ್ಲಿ ನಡೆಯುತ್ತಿರುವ ಕಾರ್ಯಗಳಿಗೆಲ್ಲಾ ಅಪೌರುಷೇಯತ್ವವನ್ನು ಕಲ್ಪಿಸಿ, ಅವು ಶಾಶ್ವತವಾದವುಗಳೆಂದು ತಿಳಿಯುವಂಥ ಒಂದು ಕಾಲವು ಹಿಂದೆ ಆಗಿ ಹೋಯಿತು. ಸಮಾಜಕ್ಕೆ ಸಾಂಪ್ರತಕ್ಕೆ ಒದಗಿರುವ ಸ್ಥಿತಿಯೂ, ಸಮಾಜದಲ್ಲಿ ಈ ಹೊತ್ತಿಗೆ ನಡೆಯುತ್ತಿರುವ ಆಚಾರ-ವಿಚಾರಗಳೂ ಸಮಾಜದಲ್ಲಿ ರೂಢವಾಗಿರುವ ಪರಸ್ಪರ ಸಂಬಂಧಗಳೂ ಈಶ್ವರಪ್ರಣೀತವಾಗಿರದೆ, ಸೃಷ್ಟಿಯ ಅನೇಕ ನಿಯಮಗಳಿಗೆ ಆಧೀನವಾಗಿ ಉಂಟಾಗಿರುವವು, ಎಂಬ ಸಂಗತಿಯನ್ನು ಈಗ ಸರ್ವರೂ ಸಮ್ಮತಿಸುವರು. ಹಾಗೂ ಈ ಕಾರ್ಯರೂಪಸಮಾಜದ ಅನೇಕ ರೂಢಿಗಳೂ ಅನೇಕ ಸಂಬಂಧಗಳೂ ಅನೇಕ ಪ್ರಕಾರಗಳೂ ಇವುಗಳಿಂದ ಕೂಡಿದ ಜನಸಮುದಾಯದ ಕರ್ತೃತ್ವಶಕ್ತಿಯೂ ಯಾವ ಕಾರಣಗಳನ್ನು ಅವಲಂಬಿಸಿರುವವು, ಎಂಬ ವಿಚಾರವನ್ನು ಸಮಾಜಶಾಸ್ತ್ರವು ಹೇಳಬೇಕಾಗಿರುವದು. ಹಾಗಾದರೆ, ಸಮಾಜಶಾಸ್ತ್ರವನ್ನು ಸ್ವತಂತ್ರವಾಗಿ ಯಾಕೆ ಹೇಳಬೇಕು? ಅರ್ಥಶಾಸ್ತ್ರ, ನೀತಿಶಾಸ್ತ್ರ, ಶಾಸನಶಾಸ್ತ್ರ ಇತ್ಯಾದಿಗಳಲ್ಲಿ ಸಮಾಜದ ಹಾಗೂ ಅದರೊಳಗಿನ ವ್ಯಕ್ತಿಗಳ ಬೇರೆ ಬೇರೆ ಅಂಗಗಳ ವಿಷಯದ ವಿಚಾರವು ಇದ್ದೇ ಇರುವದು; ಈ ಎಲ್ಲ ಶಾಸ್ತ್ರಗಳನ್ನು ಒತ್ತಟ್ಟಿಗೆ ಕೂಡಿಸಿಬಿಟ್ಟರೆ ಸಮಾಜಶಾಸ್ತ್ರವು ತಾನೇ ಸಿದ್ಧವಾಗುವದು; ಇವುಗಳಲ್ಲಿ ಸಮಾಜದ ಬೇರೆ ಬೇರೆ ಅಂಗಗಳ ವಿವೇಚನೆಯಾದ ಬಳಿಕ ಉಳಿಯಿತಿನ್ನೇನು? ಎಂದು ಯಾರಾದರೂ ಕೇಳಬಹುದು. ಇದಕ್ಕೆ ಉತ್ತರವೇನಂದರೆ, ಅರ್ಥಶಾಸ್ತ್ರಾದಿಗಳಲ್ಲಿ ಏಕದೇಶೀಯವಾದ ವಿಚಾರಗಳಿದ್ದದರಿಂದ ಅವುಗಳಿಗೆ ಅಕುಂಚಿತ ಸ್ವರೂಪವು ಪ್ರಾಪ್ತವಾಗುವದು. ಸಮಾಜಶಾಸ್ತ್ರದಂಥ ವಿಸ್ತೃತ ಸ್ವರೂಪದ ಶಾಸ್ತ್ರವಿಲ್ಲದಿದ್ದರೆ ಮನುಷ್ಯ ಪ್ರಾಣಿಯ ವಿಚಾರವು ಕೇವಲ ಸಂಕುಚಿತ ದೃಷ್ಟಿಯುಳ್ಳದ್ದಾಗುವದು. ಮನುಷ್ಯನು ಹೆಚ್ಚು ಹೆಚ್ಚು ಎತ್ತರದ ಪ್ರದೇಶಕ್ಕೆ ಹೋಗಹತ್ತಿದಂತೆ ಅವನಿಗೆ ಸುತ್ತಲೂ ಹೆಚ್ಚು ಹೆಚ್ಚು ವಿಸ್ತಾರವಾದ ಸ್ಥಳವು ಕಾಣಹತ್ತು

ವದು. ಅದೇ ಮೇರೆಗೆ ಏಕದೇಶೀಯ ಶಾಸ್ತ್ರಗಳ ಅವಲೋಕನದಿಂದ ಏಕದೇಶೀಯ ಜ್ಞಾನವು ದೊರೆಯುವದು. ಅರ್ಥಶಾಸ್ತ್ರದ ಅಭ್ಯಾಸದಿಂದ ಮನುಷ್ಯನ ಧನಲುಬ್ಧತೆಯಷ್ಟು ಧ್ಯಾನದಲ್ಲಿ ಉಳಿಯಬಹುದು. ಆದರೆ ಧನಸಂಚಯವಷ್ಟೇ ಮನುಷ್ಯನ ಧರ್ಮವಲ್ಲ. ಅವನಲ್ಲಿ ಇನ್ನೂ ಅನೇಕ ಗುಣಗಳಿರಬೇಕಾಗುವದು. ಒಟ್ಟಿಗೆ, ಈ ತರದ ಏಕದೇಶೀಯ ಶಾಸ್ತ್ರಗಳ ಅಭ್ಯಾಸದಿಂದ ಸಮಾಜಶಾಸ್ತ್ರದ ಸಹಾಯದಿಂದ ದೊರೆಯುವಂಥ ಸಾಂಗೋಪಾಂಗವಾದ ಜ್ಞಾನವು ಲಭಿಸಲಾರದು. ಸುಪ್ರಸಿದ್ಧ ಫ್ರೆಂಚತತ್ವಜ್ಞನಾದ ಕಾಮ್ಟೆ ಎಂಬವನು ಬೇರೆ ಬೇರೆ ಶಾಸ್ತ್ರಗಳ ವರ್ಗೀಕರಣ ಮಾಡುವಾಗ ಸಮಾಜಶಾಸ್ತ್ರಕ್ಕೆ ಮೊದಲನೆಯ ಸ್ಥಾನವನ್ನು ಪರಿಮಾಣಶಾಸ್ತ್ರ (Mathematics) ಕ್ಕೆ ಕಡೆಯ ಸ್ಥಾನವನ್ನೂ ಕೊಟ್ಟಿರುವನು.

ಸಮಾಜಶಾಸ್ತ್ರವು ಅತ್ಯಂತ ಕಠಿಣವಾಗಿರುವದು. ಅವಾಚೀನಕಾಲದ ಸಮಾಜಶಾಸ್ತ್ರವನ್ನು ಪ್ರಥಮದಲ್ಲಿ ಪ್ರಚಾರಕ್ಕೆ ತಂದವನು ಸುಪ್ರಸಿದ್ಧ ಫ್ರೆಂಚ ತತ್ವಜ್ಞನಾದ ಕಾಮ್ಟೆಯೆಂಬವನು. ಪ್ಲೇಟೋ ಮತ್ತು ಅರಿಸ್ಟಾಟಲ್ ಇವರ ಗ್ರಂಥಗಳಲ್ಲಿಯೂ ಸಮಾಜಶಾಸ್ತ್ರದ ಸಂಬಂಧದ ವಿವೇಚನವು ಬಂದಿರುವದು. ಆದರೆ ನೀತಿಶಾಸ್ತ್ರ, ಶಾಸನಶಾಸ್ತ್ರ ಸಮಾಜಶಾಸ್ತ್ರ ಎಂಬ ಮೂರು ಬೇರೆ ಬೇರೆ ಶಾಸ್ತ್ರಗಳ ಮೂರು ಸ್ವತಂತ್ರ ಸ್ವರೂಪಗಳು ಮಾತ್ರ ಈ ಪ್ರಾಚೀನ ಗ್ರಂಥಗಳಲ್ಲಿ ಕಂಡುಬರುವದಿಲ್ಲ. ಇದಕ್ಕೆ ಪ್ರಾಚೀನ ಕಾಲದೊಳಗಿನ ಗ್ರೀಕ್ ಹಾಗು ರೋಮನ್ ಸಂಸ್ಥೆಗಳ ವಿಶಿಷ್ಟಪರಿಸ್ಥಿತಿಯೇ ಕಾರಣವು. ಸಾಂಪ್ರತದಲ್ಲಿ ರಾಜ್ಯವು ಏಕಸತ್ತಾತ್ಮಕವಾದದ್ದಿರಲಿ, ಬಹುಜನಸತ್ತಾತ್ಮಕವಾದದ್ದಿರಲಿ, ಧನಿಕಸತ್ತಾತ್ಮಕವಾದದ್ದಿರಲಿ, ಸಾಮಾನ್ಯಜನಸತ್ತಾತ್ಮಕವಾದದ್ದಿರಲಿ, ರಾಜ್ಯಕರ್ತರೂ ಪ್ರಜೆಗಳೂ ಬೇರೆ ಬೇರೆಯಾಗಿ ಒಡೆದು ಕಾಣಿಸುವರು. ಆದರೆ ಪ್ರಾಚೀನ ಗ್ರೀಕ ಸಂಸ್ಥೆಗಳು ತೀರ ಸಣ್ಣ ಸಣ್ಣವಿದ್ದವು. ಆದ್ದರಿಂದ ಅವುಗಳೊಳಗಿನ ಪ್ರತಿಯೊಬ್ಬ ಮನುಷ್ಯನೂ ಅರಸನಂತೆ ಇರುತ್ತಿದ್ದನು. ಮತಕೊಡುವವರು ಶಾಸನಸಭೆಯ ಸಭಾಸದರನ್ನು ಆರಿಸುವ ಪದ್ಧತಿಯು ಆಗಿನ ಕಾಲದಲ್ಲಿ ಇದ್ದಿಲ್ಲ. ಯಾಕಂದರೆ, ಮತಕೊಡುವವರು ತೀರ ಸ್ವಲ್ಪಜನರೇ ಇರುತ್ತಿದ್ದರಿಂದ ಅವರೆಲ್ಲರೂ ಶಾಸನಸಭೆಯ ಸಭಾಸದರಾಗುತ್ತಿದ್ದರು.

ಅದರಿಂದ ಪ್ರತಿ ಒಬ್ಬ ಮನುಷ್ಯನ, ಅಂದರೆ ಪ್ರತಿ ಒಂದು ವ್ಯಕ್ತಿಯ ಸಂಬಂಧದಿಂದ ಮಾಡತಕ್ಕ ವಿಚಾರಗಳೆಲ್ಲ ಸಮಾಜವನ್ನು ಅಥವಾ ಸಂ ಸ್ಥಾನವನ್ನು ಅನುಲಕ್ಷಿಸಿಯೇ ನಡೆಯುತ್ತಿದ್ದವು. ಅದರಿಂದ ಪ್ರತಿ ಒಬ್ಬ ವ್ಯಕ್ತಿಯ ನೈತಿಕ ಕರ್ತವ್ಯಗಳೂ ಸಾಮಾಜಿಕ ಕರ್ತವ್ಯಗಳೂ ಏಕ ರೂಪವಾಗಿ ಪ್ರತಿಯೊಂದು ಸಂಗತಿಯು ಸಮಾಜಾಯತ್ತವಾದದ್ದೂ ಧರ್ಮಾ ಯತ್ತವಾದದ್ದೂ ಕೂಡೇ ಆಗುತ್ತಿತ್ತು. ಆದರೆ ಕಾಲಾಂತರದಲ್ಲಿ ಹೊಸ ಹೊಸ ಶಾಸ್ತ್ರಗಳು ಹುಟ್ಟಿ ಮೊದಲಿನ ಭಾವನೆಗಳನ್ನು ಹಿಂದಕ್ಕೊತ್ತಿದವು. ಮೊಟ್ಟಮೊದಲು ಜ್ಯೋತಿಷಶಾಸ್ತ್ರವು ತಲೆಯೆತ್ತಿತು. ಆ ಸಮಯದಲ್ಲಿ ಪ್ರಾಚೀನ ವಿಚಾರಗಳ ವಿರುದ್ಧವಿಚಾರವುಳ್ಳ ಜನರು ಅನೇಕ ವಿಧದ ಕಷ್ಟನಷ್ಟಗಳನ್ನು ಸಹಿಸಬೇಕಾಯಿತು. ಆ ಮೇಲೆ ಬೇರೆ ಬೇರೆ ಶಾಸ್ತ್ರ ಗಳು ಉದಯಹೊಂದಿ ಯಾವತ್ತೂ ಯುರೋಪಖಂಡದಲ್ಲಿ ವಿಚಾರ ಕ್ರಾಂತಿಯನ್ನುಂಟು ಮಾಡಿದವು. ಹಿಂದೆ ಹೇಳಿದಂತೆ, ಸಾಂಪ್ರತದ ಸ ಮಾಜಶಾಸ್ತ್ರದ ಜನಕನು ಫ್ರೆಂಚ ತತ್ವಜ್ಞನಾದ ಕಾಮ್ಟೆ ಎಂಬವನು. ಆ ಮೇಲೆ ಆದ ಹರ್ಬರ್ಟ ಸ್ಪೆನ್ಸರನೂ ಈ ಶಾಸ್ತ್ರದ ಸಂಬಂಧದಿಂದ ಬಹು ಮಟ್ಟಿಗೆ ವಿಚಾರ ಮಾಡಿರುವನು. ಅವನು "ಸೋಶಿಯಾಲಜೀ" (Sociology) ಎಂಬ ಶಬ್ದವನ್ನು ವಿಶೇಷವಾಗಿ ಉಪಯೋಗಿಸಿದ್ದರಿಂದ ಲೇ, ಆ ಶಬ್ದವು ಇಂಗ್ಲಿಷ ಭಾಷೆಯಲ್ಲಿ ಸಮಾಜಶಾಸ್ತ್ರವಾಚಕ ಶಬ್ದ ವಾಯಿತು.

ಸಮಾಜ ಶಾಸ್ತ್ರದಲ್ಲಿ ಸಿದ್ಧಾಂತಗಳನ್ನು ತೆಗೆಯುವ ಪದ್ಧತಿಗಳು ಎರಡು ಇರುವವು. (೧) ನಿಗಮನ ಪದ್ಧತಿ (Deductive method), (೨) ವಿಗಮನ ಅಥವಾ ಪ್ರಯೋಗಪದ್ಧತಿ (Inductive or Experimental method). ಯಾವವಾದರೂ ಎರಡು ಸಿದ್ಧ ಸಂಗತಿಗಳ ಆಧಾರದಿಂದ ಮೂರನೇ ಸಂಗತಿಯನ್ನು ಹುಡುಕಿ ತೆಗೆಯುವದು ನಿಗಮನ ಪದ್ಧತಿಯು. ಆದರೆ ನಿಗಮನಪದ್ಧತಿಯಂತೆ ಯಾವದೊಂದು ಸಂಗತಿಯು ಸಿದ್ಧವಾದದ್ದೆಂದು ತಿಳಿದುಕೊಳ್ಳದೆ ಪ್ರಯೋಗಮಾಡಿ, ಅಥವಾ ಉದಾಹ ರಣೆಗಳ ಸಹಾಯದಿಂದ ಅದರ ಸತ್ಯತೆಯನ್ನು ಸಿದ್ಧಮಾಡಿಕೊಡುವದು ವಿಗಮನ ಅಥವಾ ಪ್ರಯೋಗಪದ್ಧತಿ. ವಿಗಮನ ಪದ್ಧತಿಯಲ್ಲಿ ಯಾವದೂ ಕೊನೆಗೆ ನಿಗಮನ ಪದ್ಧತಿಯನ್ನು ಆಶ್ರಯಿಸಲೇ ಬೇಕಾಗು

ವದು. ಆದರೆ ಅದರಲ್ಲಿ ನಿಗಮನ ಪದ್ಧತಿಯಂತೆ ಯಾವದಾದರೊಂದು ಸಂಗತಿಯು ಸಿದ್ಧವಾದದ್ದೆಂದು ತಿಳಿದುಕೊಂಡು ಅದನ್ನು ಆಧಾರವಾಗಿ ತೆಗೆದುಕೊಳ್ಳದೆ, ಮೊದಲು ಅದರ ಸತ್ಯತೆಯನ್ನು ಸ್ಥಾಪಿಸಿಕೊಂಡು, ಆ ಮೇಲೆ ಅದರ ಸಹಾಯದಿಂದ ಮತ್ತೊಂದು ಸಂಗತಿಯನ್ನು ಸ್ಥಾಪಿಸಬೇಕಾಗುವದು. ಸಮಾಜಶಾಸ್ತ್ರದ ಸಿದ್ಧಾಂತಗಳನ್ನು ಸ್ಥಾಪಿಸಲಿಕ್ಕೆ ಈ ಪ್ರಯೋಗ ಪದ್ಧತಿಯು ಸಹ ತಕ್ಕಷ್ಟು ಪ್ರಯೋಜನಕಾರಿಯಾಗುತ್ತಿರುವದಿಲ್ಲ. ರಸಾಯನ ಶಾಸ್ತ್ರದಲ್ಲಿ ಯಾವದಾದರೊಂದು ಪ್ರಯೋಗವನ್ನು ಸಾಧಿಸಿಕೊಂಡರೆ, ಅದರ ಮೇಲಿಂದ ಒಂದು ಸಾಮಾನ್ಯ ಸಿದ್ಧಾಂತವನ್ನು ಸ್ಥಾಪಿಸಲಿಕ್ಕೆ ಬರುವದು. ಯಾಕಂದರೆ, ಈ ಪ್ರಸಕ್ತಿಯಲ್ಲಿ ಒಂದು ಕಾರ್ಯಕ್ಕೆ ಪ್ರಾಮುಖ್ಯವಾಗಿ ಒಂದೇ ಕಾರಣವು ಇರುವದು. ಆದರೆ ಸಮಾಜಶಾಸ್ತ್ರದ ಸಿದ್ಧಾಂತದಲ್ಲಿ ಈ ಕ್ರಮವಿರುವದಿಲ್ಲ. ಸಮಾಜಶಾಸ್ತ್ರದೊಳಗಿನ ಪ್ರತಿಯೊಂದು ಸಂಗತಿಯು ಅನೇಕ ಕಾರಣಗಳಿಂದ ಉಂಟಾಗಿರುವದು. ಆದದರಿಂದ ನಿಶ್ಚಿತಕಾರಣಗಳಿಂದ ನಿಶ್ಚಿತಕಾರ್ಯವುಂಟಾಗುತ್ತಿರುವಂಥ ನಿರ್ಯಾದಿತವಾದ ಕಾರಣಸಂಖ್ಯೆಯುಳ್ಳಂಥ ರಸಾಯನಾದಿ ಶಾಸ್ತ್ರಗಳಲ್ಲಿ ಉಪಯೋಗಿಸಲಿಕ್ಕೆ ಬರುವ ಪ್ರಯೋಗಪದ್ಧತಿಯಿಂದ ಸಮಾಜಶಾಸ್ತ್ರವನ್ನು ಅಭ್ಯಾಸಿಸುವಂತಿಲ್ಲ. ಇದರೊಳಗಿನ ಪ್ರತಿಯೊಂದು ಕಾರ್ಯಕ್ಕೆ ಅನೇಕ ಕಾರಣಗಳಿರುವವು. ಅವು ಸ್ಥಲಕಾಲಗಳನ್ನೂ ಪ್ರತಿಯೊಂದು ವ್ಯಕ್ತಿಯ ಸ್ಥಿತಿಗತಿಗಳನ್ನೂ ಅವಲಂಬಿಸಿರುವವು. ಅದರಿಂದ ಪ್ರತಿಯೊಂದು ಕಾರಣವನ್ನು ನಿರೀಕ್ಷಿಸಿ, ಅದರ ಸರಳ ಕಾರ್ಯವನ್ನು ಮೊದಲು ಶೋಧಿಸಿಕೊಂಡು, ಆ ಮೇಲೆ ಈ ಯಾವತ್ತು ಕಾರಣಗಳ ಪರಿಣಾಮರೂಪವಾದ ಕಾರ್ಯವನ್ನು ನೋಡಿ, ಸ್ಥಳಕಾಲಗಳನ್ನು ಅನುಲಕ್ಷಿಸಿ, ಸಾಮಾನ್ಯ ಸಿದ್ಧಾಂತವನ್ನು ಸ್ಥಾಪಿಸಬೇಕಾಗುವದು. ಈ ತರದ ಪದ್ಧತಿಗೆ ಐತಿಹಾಸಿಕ ಪದ್ಧತಿ (Historical method) ಎಂಬ ಹೆಸರು; ಹಾಗು ಸಮಾಜಶಾಸ್ತ್ರದೊಳಗಿನ ಸಿದ್ಧಾಂತಗಳನ್ನು ಇದೇ ಪದ್ಧತಿಯಿಂದ ನಿರ್ಣಯಿಸಬೇಕಾಗುವದು. ಈ ಐತಿಹಾಸಿಕ ಪದ್ಧತಿಯ ಅಭಾವದ ಮೂಲಕವಾಗಿ ಇಂದಿನವರೆಗೆ ಸಮಾಜಶಾಸ್ತ್ರದಲ್ಲಿ ಸಮಾವೇಶವಾದಂಥ ಅರ್ಥಶಾಸ್ತ್ರಾದಿ ಶಾಸ್ತ್ರಗಳಲ್ಲಿ ವಿಲಕ್ಷಣವಾದ ತಪ್ಪುಗಳಾಗಿರುವವು. ಪೂರ್ವದಲ್ಲಿ ಇಂಗ್ಲಂಡದಲ್ಲಿ ಆಗಿ ಹೋದ ರಿಕ್ಯಾರ್ಡೋ

ಎಂಬ ಅರ್ಥಶಾಸ್ತ್ರಜ್ಞನು "ಥಿಯರಿ ಆಫ ರೆಂಟ" ("Theory of rent",) ಅಂದರೆ ಬಾಡಿಗೆಯ ಉಪಪತ್ತಿ ಎಂಬ ನಿಯಮವನ್ನು ಶೋಧಿಸಿದನು. ಅದರಿಂದ ಅವನು ಒಳ್ಳೇ ವಿಖ್ಯಾತನಾದನು. ಆದರೆ ಈ ತತ್ವವು ಇಂಗ್ಲಂಡದ ಮಟ್ಟಿಗೆ ಮಾತ್ರ ನಿಜವಾದದ್ದಿದ್ದು, ಅದೇ ಫ್ರಾನ್ಸ ದೇಶಕ್ಕೆ ಹೊಂದುವದಿಲ್ಲ. ಅದರಿಂದ ಈಗ ಅದರ ಮಹತ್ವವು ಇಲ್ಲದಂತಾಗಿದೆ. ಐತಿಹಾಸಿಕ ಪದ್ಧತಿಯ ಜ್ಞಾನವಿಲ್ಲದೆ ಇದ್ದದ್ದೇ ಈ ತರದ ತಪ್ಪಿಗೆ ಕಾರಣವು.

ನಮ್ಮ ಹಿಂದೂ ಸಮಾಜಕ್ಕೆ ಈ ಸಮಾಜಶಾಸ್ತ್ರದ ಅವಶ್ಯಕತೆಯು ಬಹಳ ಇರುವದು. ಆಂಗ್ಲ ವಿದ್ಯಾಭ್ಯಾಸದಿಂದ ನಮ್ಮಲ್ಲಿ ವಿಚಾರ ಕ್ರಾಂತಿಯುಂಟಾಗಿರುವದು. ನಮ್ಮಲ್ಲಿ ಹೊಸ ಹೊಸ ಕಲ್ಪನೆಗಳು ಬಂದಿರುವವು. ಇಂಥ ಸಮಯದಲ್ಲಿ ನಮ್ಮ ಸಮಾಜವು ಊರ್ಜಿತವಾಗುತ್ತ ನಡೆದಿರುವದೋ ಇಲ್ಲವೋ, ತಕ್ಕಷ್ಟು ಭರದಿಂದ ಮುಂದಡಿಯಿಡುತ್ತಿರುವದೋ ಹ್ಯಾಗೆ, ಸುಧಾರಣೆಯ ಸರಿಯಾದ ಮಾರ್ಗವು ಯಾವದು, ಸರಿಯಾದ ಪ್ರಗತಿಯ ದಿಕ್ಕು ಯಾವದು, ಇವೇ ಮೊದಲಾದ ಸಂಗತಿಗಳು ತಿಳಿಯಬೇಕಾದರೆ, ಸಮಾಜಶಾಸ್ತ್ರವು ಬೇಕೇಬೇಕು. ಸಾಮಾಜಿಕ ಕಾರ್ಯಗಳ ಸಂಬಂಧದಿಂದ ಸಮಾಜದೊಳಗಿನ ವ್ಯಕ್ತಿಗಳ ಮುಂದೆ ಬರುವಂಥ ಬೇರೆ ಬೇರೆ ಪ್ರಶ್ನೆಗಳಿಗೆ ತಕ್ಕ ಸಮಾಧಾನವನ್ನು ಹೇಳಿ, ಸರಿಯಾದ ಮಾರ್ಗವನ್ನು ತೋರಿಸುವದು ಸಮಾಜಶಾಸ್ತ್ರದ ಉದ್ದೇಶವು; ಮತ್ತು ವ್ಯಾವಹಾರಿಕ ದೃಷ್ಟಿಯಿಂದಲಾದರೂ ಸಮಾಜಶಾಸ್ತ್ರವು ಬಹಳ ಮಹತ್ವವುಳ್ಳದ್ದಾಗಿರುವದು. ಸಮಾಜದ ಘಟನೆ, ಅದರ ಉತ್ಕರ್ಷಾಪಕರ್ಷಗಳು, ಇವೇ ಮೊದಲಾದವುಗಳ ಸಂಬಂಧದ ಸಿದ್ಧಾಂತಗಳು ಗೊತ್ತಿದ್ದರೆ, ಸಾಮಾಜಿಕ ವ್ಯಕ್ತಿಗಳು ಉನ್ನತಿಯನ್ನು ಹೊಂದಲಿಕ್ಕೆ ಅನುಕೂಲವಾಗುವದು. ನೂತನ ಕಲ್ಪನೆಗಳೂ, ನೂತನ ವಿಚಾರಗಳೂ, ನೂತನ ಪ್ರೇರಣೆಗಳೂ ನಮ್ಮ ಸಮಾಜದಲ್ಲಿ ದಿನದಿನಕ್ಕೆ ಹುಟ್ಟಹತ್ತಿರುವವು. ಅವುಗಳ ಕಡೆಗೆ ನಾವು ಬೆನ್ನುಮಾಡಿ ಕುಳಿತುಕೊಂಡರೆ ಸಾಗದು. ನಾವು ಅವುಗಳನ್ನು ಅರಿತುಕೊಂಡು ಅವುಗಳಿಗೆ ಅನುಕೂಲವಾಗಿ ನಮಗೆ ಸುಖವಾಗುವಂತೆ ನಡೆಯುವದು ಅವಶ್ಯವು. ಅದರಿಂದ ಆ ಸಮಾಜಶಾಸ್ತ್ರದ ದಿಗ್ದರ್ಶನ ಮಾಡಬೇಕಾದದು ಬಯಸಿ, ಅದರ ವಿಷಯದಲ್ಲಿ ಪ್ರಾಚೀನ ಕಾಲದಿಂದ ಈಗಿನವರೆಗೆ ಆ ಆ ಕಾಲದಲ್ಲಿ ಪ್ರಚಲಿತ

ವಾಗಿದ್ದ ಹಲವು ವಿಚಾರಗಳನ್ನು ಹೇಳಿ, ಸದ್ಯದ ಕಾಲದಲ್ಲಿ ಯೋಗ್ಯವೆಂದೆಣಿಸ್ಪಡುವ ವಿಚಾರಗಳನ್ನು ಸಂಕ್ಷಿಪ್ತವಾಗಿ ವಿವರಿಸುವೆವು.

ಸಮಾಜಶಾಸ್ತ್ರದ ಸಂಬಂಧದಿಂದ ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ವಿಚಾರಗಳು ಹುಟ್ಟಿದವು. ಈ ಕಾಲಾವಧಿಯಲ್ಲಿ ಮೂರು ವಿಭಾಗಗಳನ್ನು ಕಲ್ಪಿಸಬಹುದು:—(೧) ಪ್ಲೇಟೋ-ಅರಿಸ್ಟಾಟಲರ ಕಾಲದಿಂದ ಪ್ರಸಿದ್ಧ ತತ್ವವೇತ್ತನಾದ ಕಾಮ್ಟೇನ ಕಾಲದವರೆಗಿನ ಅವಧಿಯು, (೨) ಕಾಮ್ಟೇನಿಂದ ಹರ್ಬರ್ಟ್ ಸ್ಪೆನ್ಸರನ ವರೆಗಿನ ಕಾಲವು, (೩) ಸ್ಪೆನ್ಸರನಿಂದ ಈಚೆಗಿನ ಕಾಲವು.

ಸಮಾಜರಚನೆಯು ಶ್ರಮವಿಭಾಗದ ತತ್ವವನ್ನು ಅನುಸರಿಸಿ ಉಂಟಾಯಿತೆಂದೂ ಶ್ರಮವಿಭಾಗದ ಕಲ್ಪನೆಯಿಲ್ಲದಿದದ್ದರೆ ಸಮಾಜವೇ ಉಂಟಾಗುತ್ತಿದ್ದಿಲ್ಲೆಂದೂ ಪ್ಲೇಟೋನು ಅಭಿಪ್ರಾಯಪಟ್ಟನು.

"ಮನುಷ್ಯಪ್ರಾಣಿಯು ಸ್ವಾಭಾವಿಕವಾಗಿ ಸಮಾಜಪ್ರಿಯನು; ಕುಟುಂಬವು ಸಮಾಜದ ಬೀಜರೂಪವು; ಕೌಟುಂಬಿಕ ಸಂಬಂಧದೊಡನೆ ಬೇರೆ ಬೇರೆ ಸಂಬಂಧಗಳು ಕೂಡಿ, ಬೆಳೆದು, ಸಮಾಜವು ಸಾಂಪ್ರತದ ಅವಸ್ಥೆಯನ್ನು ಹೊಂದಿರುವದು;" ಎಂದು ಅರಿಸ್ಟಾಟಲನು ಹೇಳಿರುವನು. ಈ ರೀತಿಯಾಗಿ ಪ್ಲೇಟೋ ಮತ್ತು ಅರಿಸ್ಟಾಟಲ್ ಇವರ ಅಭಿಪ್ರಾಯಗಳಲ್ಲಿ ಭಿನ್ನತ್ವವು ಕಂಡುಬರುವದು. ಹಿಂದೆ ಹೇಳಿದಂತೆ ಪ್ರಾಚೀನ ಕಾಲದಲ್ಲಿ ಗ್ರೀಸದೇಶದಲ್ಲಿ ಸಮಾಜ ಹಾಗು ರಾಜಸಂಸ್ಥೆ ಇವುಗಳಲ್ಲಿ ಭೇದವಿದ್ದಿಲ್ಲ.

ಈ ಗ್ರೀಕ ಕಾಲದ ತರುವಾಯ ಸಮಾಜವು ಈಶ್ವರಪ್ರಣೀತವಾದದ್ದು ಎಂಬ ಒಂದು ಭಾವನೆಯು ಉದಯಹೊಂದಿತು. ಸಮಾಜ ಘಟನೆಯ ಮೂಲಕಾರಣವು ಮನುಷ್ಯಪ್ರಾಣಿಯ ಸಮಾಜಪ್ರಿಯತೆಯೂ ಅಲ್ಲ, ಶ್ರಮವಿಭಾಗದ ಕಲ್ಪನೆಯೂ ಅಲ್ಲ, ಈಶ್ವರನ ಇಚ್ಛೆಯೇ ಸಮಾಜಘಟನೆಗೆ ಮೂಲಕಾರಣವು, ಎಂಬ ಭಾವನೆಯು ಆಕಾಲದಲ್ಲಿ ನೆಲೆಗೊಂಡಿತು; ಹಾಗು ಸಮಾಜಶಾಸ್ತ್ರವು ಧರ್ಮದ ಒಂದು ಅಂಗವೆಂದು ತಿಳಿಯಲ್ಪಟ್ಟಿತು. ರಾಜಸತ್ತೆಯು ಈಶ್ವರ ಪ್ರಣೀತವಾದದ್ದೆಂಬ ಭಾವನೆಯಾದರೂ ಇದೇ ಕಾಲದಲ್ಲಿ ಉದಯಹೊಂದಿತು. ಅರಸನು ಈಶ್ವರೇಚ್ಛೆಯಿಂದ ಉಂಟಾಗುವನು, ಪ್ರಜೆಗಳು ಅವನ ಅಪ್ಪಣೆಗಳನ್ನು ಪಾಲಿಸುವ

ವಿಷಯವಾಗಿ ಎಷ್ಟುಮಾತ್ರವೂ ಹಿಂದೆನುಂದೆ ನೋಡಕೂಡದು, ಎಂಬ ತತ್ವದ ಸಂಬಂಧದಿಂದ ಇಂಗ್ಲಂಡದಲ್ಲಿ ಒಂದು ಕಾಲದಲ್ಲಿ ರಾಜಪ್ರಜೆಗಳ ನಡುವೆ ಭಯಂಕರವಾದ ವಿರೋಧವು ಉಂಟಾಗಿತ್ತು. ಸಮಾಜದ ಈ ಈ ಶ್ವರಪ್ರಣೀತತೆಯ ಭಾವನೆಯ ಮೂಲಕವಾಗಿ, "ಸಮಾಜವು ಪೂರ್ಣಾವ ಸ್ಥೆಯಲ್ಲಿರುವದು; ಅದರಲ್ಲಿ ಯಾವ ತರದ ಬದಲಾವಣೆಗಳೂ ಆಗಬೇ ಕಾಗಿಲ್ಲ; ಈಶ್ವರನ ಇಚ್ಛೆಯನ್ನನುಸರಿಸಿಯೇ ಯಾವತ್ತು ಕಾರ್ಯಗಳು ನಡೆಯುವವು; ಮನುಷ್ಯನು ಅದರಲ್ಲಿ ಕೈಹಾಕಕೂಡದು; ಈ ಪೂರ್ಣ ತೆಯನ್ನು ಹೊಂದಿದ ಸಮಾಜದಲ್ಲಿ ನ್ಯೂನತೆಯುಂಟಾಗದಂತೆ ನೋಡಿ ಕೊಳ್ಳುವದಿಷ್ಟೇ ಮನುಷ್ಯನ ಕರ್ತವ್ಯವು" ಎಂಬ ವಿಚಾರಗಳು ಸ್ವಾಭಾ ವಿಕವಾಗಿ ಉಂಟಾದವು.

ಈ ಭಾವನೆಯ ತರುವಾಯ ಹುಟ್ಟಿದ ಇನ್ನೊಂದು ಮತಕ್ಕೆ "ಅನಿ ರ್ಬಂಧತೆಯ ಭಾವನೆ" ಎಂಬ ಹೆಸರು ಕೊಡಬಹುದು. ಪ್ರಸಿದ್ಧನಾದ ಅಡಾಮಸ್ಮಿಥ್‌ನೆಂಬವನು ಈ ಮತದ ಪುರಸ್ಕರ್ತನಾಗಿದ್ದನು. ಅವನ ಅಭಿಪ್ರಾಯವೇನೆಂದರೆ—"ರಾಜಸತ್ತೆಯ ಅವಶ್ಯಕತೆಯೇ ಇಲ್ಲ. ಅದ ರಿಂದ ಪ್ರತ್ಯಕ್ಷವಾದ ಲಾಭವೇನೂ ಇಲ್ಲ, ಪೋಲೀಸಿನ ಕೆಲಸವನ್ನು, ಅಂದರೆ ಪ್ರಜೆಗಳ ವಿತ್ತ-ಜೀವಿತಗಳನ್ನು ರಕ್ಷಿಸುವದಿಷ್ಟೇ ರಾಜಸತ್ತೆಯ ಕರ್ತವ್ಯವು. ಸಾಂಪತ್ತಿಕ ಅಥವಾ ಸಾಮಾಜಿಕ ಕೆಲಸಗಳಲ್ಲಿ ರಾಜ ಸತ್ತೆಯು ಕೈಹಾಕಕೂಡದು. ರಾಜಸತ್ತೆಯು ಸಾಮಾಜಿಕ ವಿಷಯಗ ಳಲ್ಲಿ ವಿಶೇಷ ಅವಶ್ಯಕತೆಯಿರುವ ಸಂಗತಿಗಳಲ್ಲಿ ಮಾತ್ರ ಕೈಹಾಕ ಬೇಕು." ರಾಜಸತ್ತೆಯು ಈಶ್ವರಪ್ರಣೀತವಾದದ್ದು ಎಂಬ ವಿಚಾರದ ವಿರುದ್ಧವಾಗಿ ಈ ಮತವು ಉದಯಹೊಂದಿತ್ತು.

ಇಲ್ಲಿಂದ ಮುಂದಿನ ಕಾಲವೆಂದರೆ, ಫ್ರೆಂಚ ರಾಜ್ಯಕ್ರಾಂತಿಯ ಮೊದ ಲಿನ ಕಾಲವು. ಈ ಸಮಯದಲ್ಲಿ ರೂಸೋ ಎಂಬ ತತ್ವಜ್ಞನು "ರಾಜ ಸತ್ತೆಯು ರಾಜಪ್ರಜೆಗಳಲ್ಲಿ ಕೆಲವು ಒಡಂಬಡಿಕೆಗಳಾಗಿ ಪ್ರಚಾರದಲ್ಲಿ ಬಂದಿರಬೇಕು" ಎಂದು ಪ್ರತಿಪಾದಿಸಿದನು. ಮನುಷ್ಯಪ್ರಾಣಿಯ ನೈಸರ್ಗಿ ಕ ಸ್ಥಿತಿಯಲ್ಲಿಯೇ ಇವನ ವಿಶ್ವಾಸವು ವಿಶೇಷವಾಗಿತ್ತು. "ಮನುಷ್ಯನು ಪಶುಸ್ಥಿತಿಯಲ್ಲಿದ್ದಾಗಲೇ ಹೆಚ್ಚು ಸುಖಿಯಾಗಿದ್ದನು; ಸಮಾಜರಚನೆಯು ಕೇವಲ ಕೃತ್ರಿಮವಾದದ್ದಿರುವದು; ಇದು ಈಶ್ವರಪ್ರಣೀತವಂತೂ ಅಲ್ಲೇ

ಅಲ್ಲ; ಮೇಲಾಗಿ ಇದು ಪ್ರಚಾರದಲ್ಲಿ ಬಂದಂದಿನಿಂದ ಮನುಷ್ಯನ ಸುಖವು ಇಲ್ಲದಂತಾಗಿ ಹೋಗಿದೆ," ಎಂದು ಇವನು ಹೇಳುತ್ತಿದ್ದನು. ರೂಸೋನ ಈ ವಿಚಾರಗಳು ಆಗಿನಕಾಲದಲ್ಲಿ ಜನರಿಗೆ ನಿಜವೆಂದು ತೋರಿದವು. ಇದಕ್ಕೆ ಆಗಿನ ಕಾಲದ ಪರಿಸ್ಥಿತಿಯೇ ಕಾರಣವು. ಆ ಕಾಲದಲ್ಲಿ ಫ್ರಾನ್ಸದಲ್ಲಿ ಧರ್ಮಗುರುಗಳು ಧನವಂತರೂ ಅತ್ಯಂತ ಸುಖಿಗಳಾಗಿದ್ದರು. ಆದರೆ ಸಾಮಾನ್ಯ ಜನಸಮೂಹವೆಲ್ಲ ಕೂಳು ನೀರಿಲ್ಲದೆ ಪೇಚಾಡಬೇಕಾಗುತ್ತಿತ್ತು. ಅದರಿಂದ ಅವರಿಗೆ ಈ ವಿಚಾರಗಳು ಸಮುಂಜಸವೆನಿಸಿದ್ದು ಸಹಜವು.

ಅಡಾಮ್ ಸ್ಮಿಥನು ಸಮಾಜದ ಉತ್ಕ್ರಾಂತಿಯಲ್ಲಿ ಮೂರು ಮೆಟ್ಟಿಲುಗಳನ್ನು ಕಲ್ಪಿಸಿದನು—(೧) ಬೇಟೆಯಿಂದ ಜೀವಿಸುವ ಮನುಷ್ಯ ಸಮಾಜವು. (೨) ದನಕರಗಳನ್ನು ಸಾಕಿ ಬದುಕುವ ಸಮಾಜವು. (೩) ಹೊಲ ಮನೆಗಳನ್ನು ಮಾಡಿಕೊಂಡು ಇರುವ ಸಮಾಜವು.

ಅಡಾಮ್ ಸ್ಮಿಥನ ತರುವಾಯ ಕಾಮ್ಟೆಯು ಸಮಾಜಶಾಸ್ತ್ರದ ವಿಷಯವಾಗಿ ವಿಶೇಷ ವಿಚಾರ ಮಾಡಿದನು. ಈ ಶಾಸ್ತ್ರದ ವಿಸ್ತೃತಸ್ವರೂಪವು ಕಾಮ್ಟೆಯ ಕಾಲದಲ್ಲಿಯೇ ಅಸ್ತಿತ್ವಕ್ಕೆ ಬಂದಿತು. ಅವನ ಅಭಿಪ್ರಾಯವೇನಂದರೆ:—"ರಾಜಸತ್ತೆಯು (the State) ಸಮಾಜದ ಒಂದು ಅಂಗಮಾತ್ರವಾಗಿರುವದು. ಇದಲ್ಲದೆ ಸಮಾಜಕ್ಕೆ ಇನ್ನೂ ಅನೇಕ ಅಂಗಗಳಿರುವವು. ಕೇವಲ ರಾಜಸಂಸ್ಥೆಯ ದೃಷ್ಟಿಯಿಂದಿಷ್ಟೇ ಅಲ್ಲದೆ, ಸಮಾಜದ ಸರ್ವಾಂಗಗಳ ದೃಷ್ಟಿಯಿಂದಲೂ ಸಾಂಪ್ರತದ ಕಾಲದವರೆಗೆ ಅದು ಹ್ಯಾಗೆ ಉತ್ಕ್ರಾಂತಿಯನ್ನು ಹೊಂದುತ್ತ ಬಂದಿರುವದು ಎಂಬದನ್ನು ಒಡೆಮ ಹೇಳುವದು ಸಮಾಜಶಾಸ್ತ್ರದ ಕರ್ತವ್ಯವಿರುವದು." ಈ ಪ್ರಕಾರ ಕಾಮ್ಟೆಯು ಸಮಾಜಶಾಸ್ತ್ರಕ್ಕೆ ವಿಸ್ತೃತ ಸ್ವರೂಪವನ್ನು ಕೊಟ್ಟದ್ದಿಷ್ಟೇ ಅಲ್ಲದೆ, ಎರಡು ಮಹತ್ವದ ತತ್ವಗಳನ್ನು ಪ್ರಚಾರಕ್ಕೆ ತಂದನು. ಅವು ಯಾವವೆಂದರೆ:—(೧) ಸಮಾಜವು ಸರ್ವದಾ ಪ್ರಗಮನಶೀಲವಾಗಿರುವದು. ಕಾಮ್ಟೆಯು ಅಜ್ಞೇಯವಾದಿ(Agnostic)ಯಾಗಿದ್ದನು. ಅದರಿಂದ ಅವನು ಸಮಾಜವು ಈಶ್ವರಪ್ರಣೀತತೆಯ ವಿರುದ್ಧವಾಗಿ ಸಿದ್ಧಾಂತವನ್ನು ಸ್ಥಾಪಿಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ ಅವನ ಎನೆಯ ಸಿದ್ಧಾಂತವಾದ "ನೈಸರ್ಗಿಕ ಕಾರಣಗಳಲ್ಲಿಯೇ ಸಮಾಜ

ರಚನೆಯ ಬೀಜವಿರುವದು" ಎಂಬ ಸಮಾಜದ ಉತ್ಪತ್ತಿ-ಸ್ಥಿತಿಗಳ ಸಂಬಂಧದ ಸಿದ್ಧಾಂತವು ವಿಶೇಷ ಲಕ್ಷದಲ್ಲಿಡುವಂತಿದೆ. ಅವನು, ಸೃಷ್ಟಿಯೊಳಗಿನ ಇತರ ವ್ಯವಹಾರಗಳು ನೈಸರ್ಗಿಕ ಕಾರಣಗಳಿಂದ ಜರುಗುತ್ತಿರುವಂತೆ, ಸಮಾಜರಚನೆಯಾದರೂ ನೈಸರ್ಗಿಕ ಕಾರಣಗಳಿಂದಲೇ ಉಂಟಾಗಿರುವದು ಎಂದು ಪ್ರತಿಪಾದಿಸಿದನು. ಕಾಮ್ಟೆಯ ಅಭಿಪ್ರಾಯದಂತೆ ಮನುಷ್ಯಪ್ರಾಣಿಯ ಜ್ಞಾನಕ್ಕೆ ಮೂರು ಅವಸ್ಥೆಗಳಿರುವವು:—(೧) ದೈವೀ ಅವಸ್ಥೆ (Theological stage), (೨) ತಾತ್ವಿಕ ಅವಸ್ಥೆ (Metaphysical stage), (೩) ಪ್ರತ್ಯಕ್ಷಾವಸ್ಥೆ (Positive stage). ತೀರ ಅಜ್ಞಾನಿಯಾದ ಮನುಷ್ಯನು ಸೃಷ್ಟಿಯಲ್ಲಿ ಘಟಿಸುತ್ತಿರುವ ಪ್ರತಿಯೊಂದು ಕಾರ್ಯಕ್ಕೆ ಭೂತ-ಪಿಶಾಚ-ದೇವತೆಗಳೇ ಕಾರಣವೆಂದು ತಿಳಿಯುವನು; ಮಂತ್ರತಂತ್ರಾದಿಗಳನ್ನು ನಂಬುವನು; ಇದೇ ಮೊದಲನೆಯ ಅವಸ್ಥೆಯು. ತಾತ್ವಿಕ ಕಲ್ಪನೆಗಳು ಬೈಲಿಗೆ ಬಂದು, ಇಂಥದೊಂದು ಕಾರ್ಯಕ್ಕೆ ಇಂಥದೊಂದು ದೇವತೆಯು ಕಾರಣವೆಂದು ನಿಶ್ಚಯಿಸಿ, ಆ ವ್ಯಕ್ತಿಗತವಾದ ದೇವತೆಯನ್ನು ಆರಾಧಿಸುವದು ಎರಡನೆಯ ಅವಸ್ಥೆಯು. ನಿಜವಾದ ಕಾರ್ಯಕಾರಣ ಭಾವವನ್ನು ಅರಿತುಕೊಂಡು ವಿಶ್ವಪ್ರಪಂಚದ ಚಾಲನಕ್ರಮವನ್ನು ಅರಿತುಕೊಳ್ಳುವದು ಮೂರನೆಯ ಅವಸ್ಥೆಯು. ಕಾಮ್ಟೆಯ ಅಭಿಪ್ರಾಯದಂತೆ, ಶಾಸ್ತ್ರೀಯ ಜ್ಞಾನವು ಈ ಮೂರನೆಯ ಅವಸ್ಥೆಯಲ್ಲಿಯೇ ಹುಟ್ಟುವದು. ನೈಸರ್ಗಿಕ ಕಾರ್ಯಕ್ಕೆ ನೈಸರ್ಗಿಕ ಕಾರಣವೇ ಇರಬೇಕೆಂಬ ವಿಚಾರವು ಉಂಟಾದಮೇಲೆ, ಮನುಷ್ಯನು ಆ ಕಾರಣವನ್ನು ಶೋಧಿಸಲಿಕ್ಕೆ ಯತ್ನಿಸುವನು. ಜ್ಞಾನದ ಎರಡನೆಯ ಅವಸ್ಥೆಯಲ್ಲಿ ಕಲಾಕೌಶಲ್ಯಗಳು ಅಭಿವೃದ್ಧಿಯನ್ನು ಹೊಂದುವವು. ಕಾವ್ಯ, ಗಾಯನ, ನೃತ್ಯ, ಚಿತ್ರಕಲೆ ಮುಂತಾದವು ಈ ಅವಸ್ಥೆಯಲ್ಲಿಯೇ ಉಗಮ ಹೊಂದುವವು. ಆದರೆ ಶಾಸ್ತ್ರೀಯ ಜ್ಞಾನದ ಪ್ರಗತಿಯು ಮಾತ್ರ ಆಗುವದಿಲ್ಲ.

ಕಾಮ್ಟೆಯ ತರುವಾಯ ಹರ್ಬರ್ಟ್ ಸ್ಪೆನ್ಸರನು ಸಮಾಜಶಾಸ್ತ್ರದ ವಿಷಯವಾಗಿ ಒಳ್ಳೇ ವಿಚಾರ ಮಾಡಿರುವನು. ಆತನ ಅಭಿಪ್ರಾಯದ ಮೇರೆಗೆ ಪ್ರಾಣಿಶಾಸ್ತ್ರ-ಸಮಾಜಶಾಸ್ತ್ರಗಳಲ್ಲಿ ಭೇದವಿರುವದಿಲ್ಲ. ಪ್ರಾಣಿಗಳ ಉತ್ಕ್ರಾಂತಿ ವಿಚಾರವು ಸಮಾಜದ ಉತ್ಕ್ರಾಂತಿಯ ವಿಚಾ

ರವನ್ನು ಅಕ್ಷರಶಃ ಹೋಲುವದೆಂದು ಅವನ ಮತವಿರುವದು. ಸ್ಪೆನ್ಸರನು ಸಮಾಜವು ಇಂದ್ರಿಯವಿಶಿಷ್ಟವಾದದ್ದೆಂದು (Organism) ತಿಳಿದುಕೊಳ್ಳುತ್ತಿದ್ದನು. ಹಾಗು ಈ ಸಾದೃಶ್ಯವನ್ನು ಅನುಲಕ್ಷಿಸಿಯೇ ಅವನು ಯಾವತ್ತು ವಿಚಾರಗಳನ್ನು ಬರೆದಿರುವನು. ಅವನು ಉತ್ಕ್ರಾಂತಿ ತತ್ವದ ದೃಷ್ಟಿಯಿಂದ ಸಮಾಜಶಾಸ್ತ್ರದ ಸಾಂಗೋಪಾಂಗ ವಿಚಾರವನ್ನು ಮಾಡಿರುವನು. ಕಾಮ್ಟೆ ಮತ್ತು ಸ್ಪೆನ್ಸರ ಇವರ ಅಭಿಪ್ರಾಯಗಳು ಸಾಂಪ್ರತದ ಎಲ್ಲ ಸಮಾಜಶಾಸ್ತ್ರಜ್ಞರಿಗೆ ಅನುಮತವಾಗಿಲ್ಲ. ಅವರು ಆ ವಿಚಾರಗಳಲ್ಲಿ ಕೆಲವು ದೋಷಗಳನ್ನು ತೋರಿಸುವರು.

ಹರ್ಬರ್ಟ ಸ್ಪೆನ್ಸರನಿಂದ ಈಚೆಗಿನ ಸಮಾಜಶಾಸ್ತ್ರಜ್ಞರಿಗೆ ಅರ್ವಾಚೀನರೆಂದು ಹೇಳುವದುಂಟು. ಇವರು ಸ್ಪೆನ್ಸರನ ಅಭಿಪ್ರಾಯಗಳನ್ನು ಅನುಮೋದಿಸದೆ ಅವುಗಳಲ್ಲಿ ದೋಷಗಳನ್ನು ತೋರಿಸುವರು. ಸ್ಪೆನ್ಸರನು ಸಮಾಜವು ಇಂದ್ರಿಯವಿಶಿಷ್ಟವಾದದ್ದೆಂದು ತಿಳಿದುಕೊಂಡು ಅದಕ್ಕೆ ವಿಶ್ವದ ಉತ್ಕ್ರಾಂತಿ ತತ್ವವನ್ನು (Cosmic evolution) ಜೋಡಿಸಿ ಸಿದ್ಧಾಂತಗಳನ್ನು ಸ್ಥಾಪಿಸಿದನು. ಚಲನ ಶಕ್ತಿಯು ವ್ಯಯವಾಗಿ ಪ್ರಕೃತಿಗೆ ಸ್ಥಿರಾವಸ್ಥೆಯು ಪ್ರಾಪ್ತವಾಗುವದು(Dissipation of motion and integration of matter), ಮತ್ತು ಉತ್ಕ್ರಾಂತಿಯ ಅವ್ಯವಸ್ಥಿತ ಸ್ಥಿತಿಯು ಹೋಗಿ ನಿಶ್ಚಿತತೆಯು ಪ್ರಾಪ್ತವಾಗುವದು, ಎಂಬ ಪ್ರಾಣಿಶಾಸ್ತ್ರದೊಳಗಿನ ಉತ್ಕ್ರಾಂತಿ ತತ್ವವನ್ನು ತೆಗೆದುಕೊಂಡು ಸ್ಪೆನ್ಸರನು ಸಮಾಜಶಾಸ್ತ್ರದ ವಿಚಾರವನ್ನು ಮಾಡಿದನು. ಆದರೆ ಈಚೀಚೆಗಿನ ಪಂಡಿತರು ಈ ವಿಚಾರ ಪದ್ಧತಿಯು ಸರಿಯಾದದ್ದಲ್ಲವೆಂದು ಹೇಳುವರು. ಸ್ಪೆನ್ಸರನು ಅನೇಕ ಉದಾಹರಣೆಗಳನ್ನು ತೆಗೆದುಕೊಂಡು ತನ್ನ ಸಿದ್ಧಾಂತಗಳನ್ನು ಸ್ಥಾಪಿಸಿದ್ದನು. ಆದರೆ ಆ ಉದಾಹರಣೆಗಳು ಏಕದೇಶೀಯವಾಗಿದ್ದವು. ಸೊನ್ನೆಗಾತನ ಹಾಗೂ ಡಾಕ್ಟರನ ಆಯುಧಗಳು ಉಕ್ಕಿನಿಂದ ಮಾಡಿದವಾದ ಮಾತ್ರಕ್ಕೆ ಎರಡೂ ಒಂದೇ ಕೆಲಸಕ್ಕೆ ಉಪಯೋಗ ಬೀಳಲಾರವು. ಇದೇ ಮಾತು ಮನುಷ್ಯ ಹಾಗು ಇತರ ಪ್ರಾಣಿಗಳ ಉತ್ಕ್ರಾಂತಿತತ್ವದ ವಿಚಾರದಲ್ಲಿಯಾದರೂ ಇರುವದು. ಈ ಸಂಗತಿಯು ಸ್ಪೆನ್ಸರನ ಲಕ್ಷಕ್ಕೆ ಬಂದಿದ್ದಿಲ್ಲ. ಅದರಿಂದಲೇ ಅವನ ಸಿದ್ಧಾಂತಗಳು ದೋಷಯುಕ್ತವಾಗಲಿಕ್ಕೆ ಕಾರಣವಾಯಿತು. ಸಮಾಜದಲ್ಲಿ ನಿಶ್ಚಿತತೆಯೂ ಅಭೇದ್ಯ

ಸ್ಥಿತಿಯೂ ಸರ್ವತ್ರ ಕಂಡುಬರುವದಿಲ್ಲ. ಒಂದು ಕಡೆಗೆ ನಿಜವೆಂದು ಕಂಡುಬಂದ ಸಿದ್ಧಾಂತಗಳು ಇನ್ನೊಂದು ಕಡೆಗೆ ಸರಿಹೊಂದುವದಿಲ್ಲ. ಅದರಿಂದ ಸಮಾಜಶಾಸ್ತ್ರದ ಅಭ್ಯಾಸವು ಯಾವಾಗಲೂ ಐತಿಹಾಸಿಕ ಪದ್ಧತಿಯಿಂದಲೇ (Historical method) ನಡೆಯಬೇಕೆಂತಲೂ, ಪ್ರೇರಣಾಶಾಸ್ತ್ರ-ರಸಾಯನಶಾಸ್ತ್ರಗಳಂತೆ ಸಮಾಜಶಾಸ್ತ್ರದ ಸಿದ್ಧಾಂತಗಳನ್ನು ಸ್ಥಾಪಿಸಕೂಡದೆಂತಲೂ ಹಿಂದೆ ಹೇಳಿರುವೆವು. ಸಮಾಜಶಾಸ್ತ್ರದೊಳಗಿನ ಕಾರ್ಯಗಳು ಒಮ್ಮೊಮ್ಮೆ ವಿರುದ್ಧತರದ ಪ್ರೇರಣೆಯಿಂದಲೂ ನಡೆಯುತ್ತಿರುವವು.

ಆಧುನಿಕ ಸಮಾಜಶಾಸ್ತ್ರಜ್ಞರು ಆ ಶಾಸ್ತ್ರದಲ್ಲಿ ಸಮಾಜಸ್ಥಿತಿ ಶಾಸ್ತ್ರ(Static Sociology) ಸಮಾಜಪ್ರಗತಿಶಾಸ್ತ್ರ (Dynamic Sociology) ಎಂಬ ಎರಡು ಭಾಗಗಳನ್ನು ಕಲ್ಪಿಸುವರು. ಸಮಾಜಸ್ಥಿತಿ ಶಾಸ್ತ್ರದಲ್ಲಿ ಸಮಾಜವು ಹ್ಯಾಗೆ ಅಸ್ತಿತ್ವಕ್ಕೆ ಬಂದಿತು? ಅದು ಇದ್ದ ಸ್ಥಿತಿಯಲ್ಲಿಯೇ ಹ್ಯಾಗೆ ಉಳಿಯುವದು? ಇವುಗಳ ವಿವೇಚನವಿರುವದು. ಸಮಾಜಪ್ರಗತಿಶಾಸ್ತ್ರದಲ್ಲಿ ಸಮಾಜದ ಬದಲಾವಣೆಯು ಯಾವ ಯಾವ ಕಾರಣಗಳಿಂದ ಆಗುವದು? ಎಂಬ ವಿಚಾರವಿರುವದು. ಸಮಾಜದಲ್ಲಿ ಒಂದೇಸವನೇ ಪ್ರಗತಿಯೇ ನಡೆದಿರುವದು ಎಂಬ ಮಾತನ್ನು ಆಧುನಿಕ ಸಮಾಜಶಾಸ್ತ್ರಜ್ಞರು ಸಂಪೂರ್ಣವಾಗಿ ಸಮ್ಮತಿಸುವದಿಲ್ಲ. ಸಾಮಾಜಿಕ ಪ್ರಗತಿಯನ್ನು ಪುಕಾಲೆಯು ಸಮುದ್ರದ ತೆರೆಗಳಿಗೆ ಹೋಲಿಸಿರುವನು. ಸಮುದ್ರದ ನೀರು ಏರುತ್ತಲೇ ಇರಲಿ, ಅಥವಾ ಇಳಿಯುತ್ತಲೇ ಇರಲಿ, ಅಲ್ಲಿ ಕೆಲವು ತೆರೆಗಳು ಮುಂದೆ ಬರುತ್ತಿರುವವು, ಕೆಲವು ಹಿಂದೆ ಹೋಗುತ್ತಿರುವವು. ಕೇವಲ ನಾಲ್ಕೈದು ನಿಮಿಷ ನಿಂತು ನೋಡಿದ ಮಾತ್ರಕ್ಕೆ ಈಗ ನೀರು ಏರುವದೋ, ಇಳಿಯುತ್ತಿರುವದೋ ಹೇಳಲಿಕ್ಕೆ ಬರುವದಿಲ್ಲ. ತಾಸರ್ಧತಾಸು ಲಕ್ಷ್ಯಪೂರ್ವಕವಾಗಿ ನಿರೀಕ್ಷಿಸಿದರೆ ಮಾತ್ರ ಅದು ಗೊತ್ತಾಗುವದು. ಇದೇ ಸ್ಥಿತಿಯು ಸಮಾಜದಲ್ಲಿಯಾದರೂ ಇರುವದು. ಜಗತ್ತಿನೊಳಗಿನ ಮಾನವಸಮಾಜಗಳು ಉತ್ಕರ್ಷಾವಸ್ಥೆಯಲ್ಲಿರುವವೋ ಅಪಕರ್ಷಾವಸ್ಥೆಯಲ್ಲಿರುವವೋ ಎಂಬ ವಿಚಾರದಲ್ಲಿ ಎಲ್ಲ ಪಂಡಿತರ ಅಭಿಪ್ರಾಯಗಳಲ್ಲಿ ಐಕ್ಯವಿಲ್ಲ. ಆದರೂ ಅಖಿಲಮಾನವ ಜಾತಿಯನ್ನು ನೋಡಿದರೆ, ಅದು ದಿನದಿನಕ್ಕೆ ಮುಂದಡಿಯಿಡುತ್ತ

ನಡೆದಿರುವದೆಂದೂ ಕೆಲವು ರಾಷ್ಟ್ರಗಳು ಉತ್ಕರ್ಷ ಹೊಂದುತ್ತಿದ್ದರೆ, ಮತ್ತೆ ಕೆಲವು ರಾಷ್ಟ್ರಗಳು ಅಪಕರ್ಷಾವಸ್ಥೆಯಲ್ಲಿ ಇರುವವೆಂದೂ ಕೆಲವು ಪಂಡಿತರು ಅಭಿಪ್ರಾಯಪಡುವರು.

ಸಮಾಜದ ಅಸ್ತಿತ್ವಕ್ಕೆ ಮನುಷ್ಯಪ್ರಾಣಿಯಲ್ಲಿರುವ ಮೂರು ಸ್ವಾಭಾವಿಕ ಗುಣಗಳೇ ಕಾರಣವೆಂದು ಆಧುನಿಕ ಪಂಡಿತರು ಪ್ರತಿಪಾದಿಸುವರು. ಅವು ಯಾವವೆಂದರೆ, (೧) ಮನುಷ್ಯನ ಸಮಾಜಪ್ರಿಯತೆ, ಅಥವಾ ಸಹಾನುಭೂತಿ, (೨) ನ್ಯಾಯಪ್ರಿಯತೆ, (೩) ಸ್ವಾಭಿಮಾನ.

ಕಾಮ್ಟೆಯ ಹಾಗು ಆಧುನಿಕ ಪಂಡಿತರ ವಿಚಾರಗಳಲ್ಲಿ ಇರುವ ವಿರೋಧವು ಏನಂದರೆ, ಕಾಮ್ಟೆಗೆ ಮಾನಸತತ್ವಗಳಲ್ಲಿ (Psychology) ಮೂಲತಃ ವಿಶ್ವಾಸವಿದ್ದಿಲ್ಲ. ಅವನು ತನ್ನ ಯಾವತ್ತು ವಿಚಾರಸರಣಿಯಲ್ಲಿ ಮನುಷ್ಯಪ್ರಾಣಿಯನ್ನು ಇತರ ಪ್ರಾಣಿಗಳಂತೆ ಒಂದು ಪದಾರ್ಥ (object) ವೆಂದು ತಿಳಿಯುತ್ತಿದ್ದನು. ಅದರಿಂದ ಅವನ ಯಾವತ್ತು ವಿಚಾರವು ಪದಾರ್ಥಾತ್ಮಕ ಸ್ವರೂಪ (objective) ದ್ದಾಯಿತು. ಮನುಷ್ಯಪ್ರಾಣಿಯಲ್ಲಿ ಇತರಪ್ರಾಣಿಗಳಿಗಿಂತ ಕೆಲವು ವಿಶೇಷ ಗುಣಗಳು ಇರುವವೆಂಬ ದೃಷ್ಟಿಯಿಂದ ಅವನು ವಿಚಾರಮಾಡಿದ್ದಿಲ್ಲ. ಆಧುನಿಕ ಪಂಡಿತರು ಮನುಷ್ಯಪ್ರಾಣಿಯ ಈ ವಿಶಿಷ್ಟ ಯೋಗ್ಯತೆಯನ್ನು ಅನುಲಕ್ಷಿಸಿ ತಮ್ಮ ಸಿದ್ಧಾಂತಗಳನ್ನು ಸ್ಥಾಪಿಸಿರುವರು. ಮನುಷ್ಯನಿಗೆ ಬುದ್ಧಿಶಕ್ತಿ-ವಿಚಾರಶಕ್ತಿಗಳೂ ಮನೋವ್ಯತ್ತಿಯೂ ಇರುವವು; ಹಾಗು ಅವುಗಳ ಮೂಲಕವಾಗಿ ಮನುಷ್ಯನಿಗೂ ಇತರ ಪ್ರಾಣಿಗಳಿಗೂ ಬಹಳ ಭೇದವುಂಟಾಗಿರುವದು. ಮನುಷ್ಯನಲ್ಲಿ ಪದಾರ್ಥಾತ್ಮಕ (physical aspect) ತತ್ವವು ಇದ್ದೇ ಇರುವದು. ಆದರೆ, ಅದರ ಸಂಗಡ ಅವನ ವಿಶಿಷ್ಟಗುಣವಾದ ಮಾನಸಿಕ ಅಥವಾ ಆತ್ಮಿಕಸ್ವರೂಪ (Mental or psychical aspect) ವನ್ನು ವಿಚಾರದಲ್ಲಿ ತೆಗೆದುಕೊಳ್ಳಲಿಕ್ಕೆಬೇಕು. ಕಾಮ್ಟೆ ಹಾಗು ಸ್ಪೆನ್ಸರ ಇವರು ಮಾಡಿದ ವಿಚಾರಗಳು ಕೇವಲ ಪದಾರ್ಥಾತ್ಮಕ ಸ್ವರೂಪದವಿದ್ದವು; ಮಾನಸಿಕ ಸ್ವರೂಪದವರಲ್ಲಿಲ್ಲ. ಅದರಿಂದಲೇ ಅವು ಸದ್ಯದ ಕಾಲದಲ್ಲಿ ಹಿಂದೆ ಬೀಳಬೇಕಾಯಿತು. ಮಾನಸಿಕ ಸ್ವರೂಪದಲ್ಲಿ ಯಾವತ್ತು ಪ್ರಾಣಿಗಳಲ್ಲಿ ಸಾಮ್ಯವು ಕಂಡುಬರುವದು; ಆದೇ, ಪದಾರ್ಥಾತ್ಮಕ ಸ್ವರೂಪದಲ್ಲಿ ವಿವಿಧತೆಯು ವ್ಯಕ್ತವಾಗುವದು. ಇದಕ್ಕೆ ಕಾರಣವೇನಂದರೆ, ಕೇವಲ ಭೌತಿಕವಿಶ್ವವನ್ನು ನಿರೀಕ್ಷಿಸಿದರೆ ಪರಿಸ್ಥಿತಿ

ಭೇದದಿಂದ ಅನೇಕ ಸಂಗತಿಗಳು ಉದ್ಭವಿಸುವವು; ಆದರೆ, ಮಾನಸಿಕ ಸೃಷ್ಟಿಯಲ್ಲಿ ಇಷ್ಟೊಂದು ವಿವಿಧತೆಯು ಕಂಡುಬರುವದಿಲ್ಲ. ಪರಿಸ್ಥಿತಿಯು ಮನುಷ್ಯನ ಅಥವಾ ಸಮಾಜದ ಸ್ಥಿತಿಗೆ ಪ್ರಧಾನ ಕಾರಣವಲ್ಲ; ಇನ್ನೂ ಅನೇಕ ಕಾರಣಗಳಿರುವವು. ಇವುಗಳ ವಿಚಾರವನ್ನು ಸ್ಪೆನ್ಸರನೇ ಮೊದಲಾದವರು ಮಾಡಿಲ್ಲ. ಅವುಗಳನ್ನು ಆಧುನಿಕ ಪಂಡಿತರು ವಿವೇಚಿಸಿರುವರು. ಮನುಷ್ಯಪ್ರಾಣಿಯ ಪದಾರ್ಥಾತ್ಮಕ ಅಥವಾ ಭೌತಿಕಸ್ವರೂಪವೂ (objective) ಆತ್ಮಿಕ (subjective) ಸ್ವರೂಪವೂ ಅಷ್ಟೇ ಮಹತ್ವವುಳ್ಳವುಗಳಾಗಿರುವದರಿಂದ ಅವುಗಳೆರಡನ್ನೂ ಲಕ್ಷದಲ್ಲಿಟ್ಟುಕೊಂಡ ಹೊರತು ಸಮಾಜಶಾಸ್ತ್ರದ ಸಿದ್ಧಾಂತಗಳನ್ನು ಸ್ಥಾಪಿಸಲು ಬರುವದಿಲ್ಲ.

ಸಮಾಜಕ್ಕೆ ನವೀನತೆಯು ಪ್ರಾಪ್ತವಾಗಿ, ಅದರಲ್ಲಿ ಬದಲಾವಣೆಗಳುಂಟಾಗಲಿಕ್ಕೆ ಕೆಲವು ಕಾರಣಗಳು ಬೇಕಾಗುವವು. ಅವುಗಳಲ್ಲಿ ಸಮಾಜದ ಲೋಕಸಂಖ್ಯೆಯ ಬೆಳುವಣಿಗೆಯು ಒಂದಾಗಿರುವದು. ಸಮಾಜದ ಲೋಕಸಂಖ್ಯೆಯು ಬೆಳೆಯುತ್ತ ನಡೆದಂತೆ, ಅದರಲ್ಲಿ ಬದಲಾವಣೆಗಳುಂಟಾಗುವದು ಸ್ವಯಂ ಸಿದ್ಧವಾದ ಸಂಗತಿಯೇ ಸರಿ. ಪರದೇಶಗಳಿಗೆ, ಅಥವಾ ವಸಾಹತುಗಳಿಗೆ ವಾಸಿಸಲಿಕ್ಕೆ ಹೋಗುವದು ಎರಡನೆಯ ಕಾರಣವು. ಸಂಪತ್ತು ಅಭಿವೃದ್ಧಿಯಾಗುವದು ಮೂರನೆಯ ಕಾರಣವು. ಸಂಪದಭಿವೃದ್ಧಿಯ ಮೂಲಕವಾಗಿ ಸಮಾಜದಲ್ಲಿ ಭೇದಭಾವವು ಹುಟ್ಟಿ, ನೆಲೆಗೊಳ್ಳುವದು. ಅದರಿಂದ ಸಮಾಜದ ಸ್ವರೂಪವು ಬದಲಾಗುವದು. ಸಮಾಜದ ನವೀನತೆಗೆ ಈ ಮೂರು ಕಾರಣಗಳಲ್ಲದೆ, ಇನ್ನೂ ಕೆಲವು ಕಾರಣಗಳು ಇರುವವು. ಸಮಾಜದೊಳಗಿನ ವ್ಯಕ್ತಿಗಳಲ್ಲಿ ಹೊಸ ಹೊಸ ಕಲ್ಪನೆಗಳೂ, ಧ್ಯೇಯಗಳೂ ಉಂಟಾಗುವದರಿಂದ ಸಮಾಜದ ಮೇಲೆ ವಿಶೇಷ ಪರಿಣಾಮವಾಗುವದು; ಹಾಗು ಸಮಾಜದೊಳಗಿನ ಕೆಲವು ವಿಶೇಷ ವ್ಯಕ್ತಿಗಳ ಚಲನವಲನಗಳ ಮೂಲಕವಾಗಿ ಸಮಾಜದಲ್ಲಿ ಬದಲಾವಣೆಗಳುಂಟಾಗುವವು. ಕಾರ್ಲಾಯಿಲನೆಂಬ ತತ್ವಜ್ಞನ ಅಭಿಪ್ರಾಯಾನುಸಾರವಾಗಿ ನೋಡಿದರೆ, ಜಗತ್ತಿನೊಳಗಿನ ಮಹತ್ವದ ಸ್ಥಿತ್ಯಂತರಗಳಿಗೆ ಕೇವಲ ಸಮಾಜದೊಳಗಿನ ಕೆಲವು ಮಹಾ ಪುರುಷರೇ (Heroes) ಕಾರಣವೆಂದು ಕಂಡುಬರುವದು. ಬಕ್ಕಲನೆಂಬ ತತ್ವಜ್ಞನು ಇಂಥ ಮಹಾಪುರುಷರು ಆ ಆ ಪರಿಸ್ಥಿತಿಗೆ

ಅನುಗುಣವಾಗಿ ಉದ್ಭವಿಸುವದೆಂದೂ ಆ ಸ್ಥಿತ್ಯಂತರಗಳಿಗೆ ಸಮಾಜದ ಜಾಗ್ರತಾವಸ್ಥೆಯೇ ಕಾರಣವೆಂದೂ ಪ್ರತಿಪಾದಿಸುವನು. ಇವೆರಡೂ ಮತಗಳ ಸತ್ಯಾಸತ್ಯನಿರ್ಣಯ ಮಾಡುವದು ಸುಲಭಸಾಧ್ಯವಲ್ಲ. ಮಹಮ್ಮದ ಪೈಗಂಬರನು ಉದಯವಾಗುವ ಪೂರ್ವದಲ್ಲಿದ್ದ ಅರಬಸ್ತಾನದ ಸ್ಥಿತಿಯನ್ನು, ಅಥವಾ ಗೌತಮಬುದ್ಧನು ಹುಟ್ಟುವದಕ್ಕಿಂತ ಮೊದಲಿನ ಹಿಂದುಸ್ತಾನದ ಸ್ಥಿತಿಯನ್ನು, ಇಲ್ಲವೆ ಶಿವಾಜಿಯು ಸ್ವರಾಜ್ಯವನ್ನು ಸ್ಥಾಪಿಸುವದಕ್ಕಿಂತ ಮೊದಲಿನ ದಕ್ಷಿಣದೊಳಗಿನ ಹಿಂದೂಗಳ ಸ್ಥಿತಿಯನ್ನು ನೋಡಿದರೆ, ಇವೆರಡೂ ವಿಚಾರಗಳು ಅಂಶತಃ ನಿಜವಿರುವವೆಂದು ತಿಳಿದುಬರುವದು. ಒಟ್ಟಿನಮೇಲೆ, ಪರಿಸ್ಥಿತಿಯು ಗುಣವಿಶೇಷಗಳುಳ್ಳ ಮಹಾಪುರುಷರ ಕರ್ತೃತ್ವಕ್ಕೆ ಅನುಗುಣವಾಗಿದ್ದರೆ, ಸಮಾಜದಲ್ಲಿ ಮಹತ್ವದ ಬದಲಾವಣೆಗಳುಂಟಾಗುವವು. ಸಮಾಜದ ಬದಲಾವಣೆಗೆ ಇನ್ನೊಂದು ಮಹತ್ವದ ಕಾರಣವು ಯಾವದೆಂದರೆ, ಎರಡು ಸಂಸ್ಕೃತಿಗಳ ಸಂಗಮವಾಗೋಣವು(Crossing of two civilisations). ಎರಡು ಭಿನ್ನ ಸುಧಾರಣೆಗಳುಳ್ಳ ಸಮಾಜಗಳಲ್ಲಿ ಪರಸ್ಪರ ಸಂಬಂಧವುಂಟಾದರೆ, ಆ ಎರಡೂ ಸುಧಾರಣೆಗಳಲ್ಲಿ ವಿಶೇಷ ಹೆಚ್ಚು ಕಡಿಮೆಗಳಾಗುವವು. ಹೆಚ್ಚು ಪ್ರಬಲವಾದ ಸುಧಾರಣೆಯು ಕಡಿಮೆ ಬಲವುಳ್ಳ ಸುಧಾರಣೆಯನ್ನು ಹಿಂದಕ್ಕೊತ್ತಿಬಿಡುವದು. ಆದರೆ ಅವೆರಡೂ ಸಮಾನ ಬಲವುಳ್ಳವುಗಳಾಗಿದ್ದರೆ ಮಾತ್ರ ವಿಶೇಷ ಪ್ರಕಾರದ ಬದಲಾವಣೆಗಳಾಗುವವು. ಇಜಿಪ್ತ-ಇರಾಣಗಳ ಸಂಸ್ಕೃತಿಗಳ ಸಂಗಮದಿಂದ ಅಲೆಗ್ಝಾಂಡ್ರಿಯಾದ ಸಂಸ್ಕೃತಿಯು ನಿರ್ಮಾಣವಾಯಿತು; ಹಾಗು ಸದ್ಯದ ಯುರೋಪೀಯ ಸಂಸ್ಕೃತಿಯು ಗ್ರೀಕ ಮತ್ತು ರೋಮನ್ ಸಂಸ್ಕೃತಿಗಳ ಅಪತ್ಯವೆಂದು ಹೇಳಬಹುದು. ಹಿಂದೂ ಮುಸಲ್ಮಾನ ಸಂಸ್ಕೃತಿಗಳ ಸಂಗಮದಿಂದ ಹಿಂದೂ ಸಮಾಜದ ಮೇಲಾದ ಪರಿಣಾಮವು ಸಾಧಾರಣತರದ್ದೆಂದು ಹೇಳುವಂತಿಲ್ಲ. ಪ್ರಕೃತದ ಯುರೋಪೀಯ ಸಂಸ್ಕೃತಿಗಳ ಸಂಗಮದಿಂದ ಹಿಂದೂ ಸಮಾಜದ ಸ್ಥಿತಿಯು ದಿನದಿನಕ್ಕೆ ಬದಲಾಗುತ್ತ ನಡೆದಿರುವದು ಪ್ರತ್ಯಕ್ಷವಾಗಿ ಕಂಡುಬರುವದು.

ಇನ್ನು, ಸಮಾಜವ್ಯವಸ್ಥೆಯು ಯಾವರೀತಿಯಾಗಿರಬೇಕೆಂಬ ವಿಷಯವಾಗಿ ಆಧುನಿಕ ಸಮಾಜಶಾಸ್ತ್ರಜ್ಞರು ಹೇಳುವ ಮುಖ್ಯ ವಿಚಾ

ರಗಳನ್ನಷ್ಟು ಹೇಳಿ ಪ್ರಕೃತ ಪ್ರಕರಣವನ್ನು ಮುಗಿಸುವೆವು. ಗ್ರೀಕರ ಕಾಲದಲ್ಲಿ ಮನುಷ್ಯನು ಸಮಾಜವನ್ನು ಅವಲಂಬಿಸಿ ಇರಬೇಕು, ಎಂಬ ಮತದ ಪ್ರಾಬಲ್ಯವಿತ್ತು. ಈ ಮತಕ್ಕೇ ಅರ್ವಾಚೀನರು ಸಮಾಜಸತ್ತ್ವವಾದ (Socialism) ಎಂದು ಹೆಸರು ಕೊಡುವರು. ಮುಂದೆ ೧೪ನೆಯ ಶತಮಾನದಲ್ಲಿ ವ್ಯಕ್ತಿವಾದ (Individuality) ವು ಅಂದರೆ, ಸಮಾಜವು ತನ್ನೊಳಗಿನ ವ್ಯಕ್ತಿಗಳನ್ನು ಅವಲಂಬಿಸಿ ಇರಬೇಕು, ವ್ಯವಸ್ಥೆಯನ್ನು ಕಾಯ್ದುಕೊಳ್ಳುವದಿಷ್ಟೇ ಸಮಾಜದ ಕೆಲಸವು, ಎಂಬ ಮತವು ಉಂಟಾಯಿತು. ಆಧುನಿಕ ಶಾಸ್ತ್ರಜ್ಞರು ಇವೆರಡೂಗಳನ್ನು ಸಂಗ್ರಹಿಸಿ, ಮೂರನೆಯದೊಂದು ಮತವನ್ನು ಸ್ಥಾಪಿಸಿರುವರು. ಅವರ ಮತವೇನಂದರೆ:—"ಸಮಾಜವು ತನ್ನೊಳಗಿನ ವ್ಯಕ್ತಿಗಳ ಸಂಬಂಧದಿಂದ ಅನೇಕ ಕೆಲಸಗಳನ್ನು ಮಾಡಬೇಕಾಗುವದು. ಅವನ್ನು ಸಮಾಜದೊಳಗಿನ ಸತ್ತಾಧಿಕಾರಿಯಾದ ಸಂಸ್ಥೆಯು (State) ಮಾಡಬೇಕು; ಹಾಗು ಇವುಗಳ ಸಂಬಂಧದ ನಿಯಮಗಳನ್ನು ಸಮಾಜದೊಳಗಿನ ಬಹು ವ್ಯಕ್ತಿಗಳ ಅನುಮತಿಯಿಂದ ಮಾಡಿಕೊಂಡಿರಬೇಕು. ಆ ನಿಯಮಗಳಲ್ಲಿ ಸಮಾಜದೊಳಗಿನ ಯಾವದೇ ಒಂದು ವ್ಯಕ್ತಿಗೆ ತನ್ನ ಉನ್ನತಿಯನ್ನು ಮಾಡಿಕೊಳ್ಳಲಿಕ್ಕೆ ಪ್ರತಿಕೂಲವಾಗುವಂಥ, ಅಥವಾ ಅಡಚಣಿ ಬರುವಂಥ ನಿಯಮಗಳು ಇರಕೂಡದು." ಈ ನಿಯಮವನ್ನೇ ಅನುಸರಿಸಿ ಸಾಂಪ್ರತದ ಸಾಮಾಜಿಕ ಕಾಯದೆಗಳು (Socialistic legislation) ಆಗುತ್ತಿರುವವು.

ಹಿಂದೆ ಹೇಳಿದಂತೆ ಸಾಂಪ್ರತದ ಹಿಂದೂಸಮಾಜಕ್ಕೆ ಸಮಾಜಶಾಸ್ತ್ರದ ಅಧ್ಯಯನದ ಅವಶ್ಯಕತೆಯು ಬಹಳ ಇರುವದು. ಸದ್ಯಕ್ಕೆ ನಮ್ಮಲ್ಲಿ ಹೊಸ ಹೊಸ ಕಲ್ಪನೆಗಳು ಬಂದು ಸೇರುತ್ತಿರುವವು. ಆಂಗ್ಲವಿದ್ಯಾಭ್ಯಾಸದಿಂದ ನಮ್ಮಲ್ಲಿ ವಿಚಾರಕ್ರಾಂತಿಯುಂಟಾಗುತ್ತಿರುವದು. ಇಂಥ ಪ್ರಸಂಗದಲ್ಲಿ ನಮ್ಮ ಸಮಾಜವು ಸರಳವಾದ ಮಾರ್ಗದಿಂದ ನಡೆಯುತ್ತಿರುವದೋ ಅಡ್ಡಮಾರ್ಗವನ್ನು ಹಿಡಿದಿರುವದೋ? ಸಮಾಜ ಸುಧಾರಣೆಯ ಸರಿಯಾದ ಮಾರ್ಗವು ಯಾವದು? ಪ್ರಗತಿಯ ನಿಜವಾದ ದಿಕ್ಕು ಯಾವದು? ಇವೇ ಮುಂತಾದ ಸಂಗತಿಗಳು ತಿಳಿಯಬೇಕಾದರೆ ಸಮಾಜಶಾಸ್ತ್ರವು ಅವಶ್ಯವಾಗಿ ಬೇಕೇಬೇಕು. ಯಾವದಾದರೊಂದು ಶಾಸ್ತ್ರದ ಮಹತ್ವವನು ನಿರ್ಣ

ಯಿಸಬೇಕಾದರೆ, ಅದರ ಪ್ರತ್ಯಕ್ಷ ಉಪಯೋಗವೇನಿರುವದೆಂಬದನ್ನು ತಿಳಿದುಕೊಂಡು ನಿರ್ಣಯಿಸಲಿಕ್ಕೆ ಅಡ್ಡಿ ಇಲ್ಲ. ಮನುಷ್ಯನ ಎದುರಿಗೆ ಸರ್ವದಾ ವಿಚಾರ ಮಾಡತಕ್ಕಂಥ ನೂರಾರು ಪ್ರಶ್ನೆಗಳು ಬಂದು ನಿಲ್ಲುವವು. ಅವುಗಳ ಸಮಾಧಾನಕ್ಕಾಗಿ ಉದಯ ಹೊಂದಿರುವ ಶಾಸ್ತ್ರಗಳೆಲ್ಲ ಉಪಯುಕ್ತ ಶಾಸ್ತ್ರಗಳೆಂತಲೇ ಹೇಳಬೇಕಾಗುವದು. ಯಾಕಂದರೆ, ಇಂಥ ಪ್ರಶ್ನೆಗಳು ಸ್ವಾಭಾವಿಕವಾಗಿ ಹುಟ್ಟೇ ಹುಟ್ಟುವವು; ಹಾಗು ಅವುಗಳ ವಿಷಯವಾಗಿ ಸಮಾಧಾನ ಪಡೆಯಬೇಕೆಂದು ಮನುಷ್ಯನು ಸರ್ವದಾ ಹಾತೊರೆಯುತ್ತಿರುವನು. ಅವುಗಳಲ್ಲಿ ಮನುಷ್ಯನ ಮುಂದೆ ಅಡಿಗಡಿಗೆ ಬಂದು ನಿಲ್ಲುವಂಥ ಸಮಾಜ ಸಂಬಂಧದ ಬೇರೆ ಬೇರೆ ಪ್ರಕಾರದ ಹಲವು ಪ್ರಶ್ನೆಗಳಿಗೆ ಸಮಾಧಾನಕರವಾದ ನಿರ್ಣಯವನ್ನು ಹೇಳಿ, ಸಮಾಧಾನ ಪಡಿಸುವದು ಸಮಾಜಶಾಸ್ತ್ರದ ಉದ್ದೇಶವಾಗಿರುವದರಿಂದ, ಆ ಶಾಸ್ತ್ರವು ಅತ್ಯಂತ ಮಹತ್ವದ್ದಾಗಿರುವದು. ಇದಲ್ಲದೆ ಪ್ರತ್ಯಕ್ಷ ವ್ಯಾವಹಾರಿಕ ದೃಷ್ಟಿಯಿಂದಲಾದರೂ ಈ ಶಾಸ್ತ್ರದ ಮಹತ್ವವು ಬಹಳ ಇರುವದು. ಸಮಾಜದ ಘಟನೆಯು ಹಾಗೂ ಅದರ ಉತ್ಕರ್ಷಾಪಕರ್ಷಗಳ ನಿಯಮಗಳು, ಅಥವಾ ಸಿದ್ಧಾಂತಗಳು ನಮಗೆ ಗೊತ್ತಿದ್ದರೆ ನಾವು ನಮ್ಮ ಸಮಾಜದಲ್ಲಿ ಯಾವ ರೀತಿಯಾಗಿ ಉನ್ನತಿಯನ್ನು ಹೊಂದಬೇಕೆಂಬದು ಗೊತ್ತಾಗುವದು. ಈ ಬಗೆಯ ಸಿದ್ಧಾಂತಗಳನ್ನು ತಿಳಿಸುವ ಕಾರ್ಯವನ್ನು ಸಮಾಜಶಾಸ್ತ್ರವು ಮಾಡುವದು. ಜಗತ್ತಿನಲ್ಲಿ ನೂತನ ಕಲ್ಪನೆಗಳೂ ನೂತನ ವಿಚಾರಗಳೂ ನೂತನ ಪ್ರೇರಣೆಗಳೂ ದಿನ ದಿನಕ್ಕೆ ಉಂಟಾಗಹತ್ತಿರುವವು. ನಾವು ಅವುಗಳ ಕಡೆಗೆ ಲಕ್ಷ್ಯ ಮಾಡುವಂತಿಲ್ಲ. ಅವುಗಳಿಗನುಸಾರವಾಗಿ ನಮಗೆ ಹಿತಕರವಾಗುವಂಥ ಮಾರ್ಗವನ್ನು ನೋಡಿಕೊಂಡು, ಅದರಂತೆ ನಮ್ಮ ವರ್ತನವನ್ನು ಇಡುವದು ಅವಶ್ಯವಾಗಿದೆ.

ಆಕ್ಷೇಪನಿರಸನ.

(ಮಿ. ಮ. ಪ್ರ. ಪೂಜಾರ ಇವರು ಬರೆದದ್ದು.)

ಕಳೆದ ತಿಂಗಳ ಸಂಚಿಕೆಯಲ್ಲಿ ಬಂದ "ಸಮಾಸ ವಿಷಯ" ಎಂಬ ಲೇಖದ ವಿಷಯದಲ್ಲಿ ಕೆಲವು ಮಾತುಗಳನ್ನು ಬರೆಯಲುಪಕ್ರಮಿಸುತ್ತೇನೆ.

ಹೋದ ಮೇ ತಿಂಗಳ ಸಂಚಿಕೆಯಲ್ಲಿ 'ಗಮಕ' ಸಮಾಸದ ವಿಷಯದಲ್ಲಿ ನಾನು ಸ್ವಾಭಿಪ್ರಾಯವನ್ನು ಪ್ರಕಟಿಸಿದ್ದೇನಷ್ಟೇ? ಆ ಲೇಖನದಲ್ಲಿ ಕರ್ಮಧಾರಯಕ್ಕೂ ಗಮಕಕ್ಕೂ ವಿಶೇಷಭೇದವನ್ನು ತೋರಿಸಲು ಬಾರದಂತಿರುವದರಿಂದ ಗಮಕವೆಂಬ ಹೊಸ ಸಂಜ್ಞೆಯನ್ನು ಕಲ್ಪಿಸುವ ಅವಶ್ಯವಿಲ್ಲವೆಂದೂ, ಸಂಸ್ಕೃತೋತ್ತರಪದಕವಾದ ಕರ್ಮಧಾರಯಕ್ಕೆ ಗಮಕವೆನಬೇಕೆಂದು ದರ್ಪಣಕಾರನ ಅಭಿಪ್ರಾಯವಿರಬಹುದೆಂದೂ, ಕೇವಲ ಸಂಸ್ಕೃತೋತ್ತರಪದಕತ್ವರೂಪವಾದ ಭೇದಕ ಧರ್ಮವು ಬೇರೊಂದು ಸಂಜ್ಞೆಯನ್ನು ಕಲ್ಪಿಸುವದಕ್ಕೆ ಸಾಕಷ್ಟು ಕಾರಣವಲ್ಲವೆಂದೂ, ಆದ್ದರಿಂದಲೇ ಹೊಸ ವ್ಯಾಕರಣ ಬರೆಯುವವರು ಈ ಹೆಸರನ್ನು ಬಿಟ್ಟು ಸಾಗಿಸಬಹುದೆಂದೂ, ಈ ಕಾರಣದಿಂದಲೇ ಶಾಸನಕಾರನು ಗಮಕವೆಂಬ ಹೆಸರನ್ನು ಬಿಟ್ಟು ಪ್ರಯೋಗಗಳನ್ನು ಸಾಧಿಸಿರುವನೆಂದೂ ತೋರಿಸಿದ್ದೇನೆ.

ಮಿ. ವೇ. ರಾ. ಪ್ರಭು ಎಂಬವರು ಗಮಕವೆಂಬ ಸಂಜ್ಞೆಯನ್ನು ಬಿಡಲಿಕ್ಕಾಗುವದಿಲ್ಲವೆಂಬದಕ್ಕೆ ತಮ್ಮ ಲೇಖನದಲ್ಲಿ ಕೆಲವು ಕಾರಣಗಳನ್ನು ತೋರಿಸಿರುವರು. ಅವುಗಳಲ್ಲಿ —

(೧ನೆಯದು) — "ಗಮಕಸಮಾಸವೆಂಬ ಹೆಸರನ್ನೆ ಬಿಟ್ಟರೆ ಕನ್ನಡದ ಒಂದು ವಿಶೇಷ ಲಕ್ಷಣವನ್ನೆ ಬಿಟ್ಟುಕೊಟ್ಟಂತೆ ಆದೀತು".....

ಗಮಕವೆಂಬ ಹೆಸರನ್ನು ಬಿಡಬಹುದೆಂದು ಹೇಳುವಾಗ ದರ್ಪಣವು ಇಲ್ಲವೆನುಡಿಗಟ್ಟು ಗಮಕವೆಂದು ಹೇಳುವ ಪ್ರಯೋಗಗಳನ್ನು ಬಿಡಬೇಕೆಂಬ ಅಭಿಪ್ರಾಯವು ಇಲ್ಲವೆಂಬದು ಸ್ಪಷ್ಟವಿದೆ. ಆ ಪ್ರಯೋಗಗಳಿಗೆ ಗಮಕವೆಂಬ ಹೆಸರಿಡಬೇಕೇ ಬಿಟ್ಟರೂ ಸಾಗಬಹುದೇ? ಎಂಬ ವಿಚಾರವನ್ನು ಮಾಡಬೇಕಾಗಿರುವದು. ವ್ಯಾಕರಣದಲ್ಲಿ ಕಾರ್ಯವಿಧಾನಾರ್ಥವಾಗಿ ಸಂಜ್ಞೆಗಳನ್ನು ಕಲ್ಪಿಸುವದುಂಟು (कार्यार्थं हि संज्ञाकरणम्).ಸಮಾನಾಧಿಕರಣವಿಶೇಷಣ ವಿಶೇಷ್ಯಗಳು ಕೂಡಿ ಆಗುವ ಸಮಾಸವು ಕರ್ಮಧಾರಯವೆಂದು ಹೇಳಿ 'ಕರ್ಮಧಾರಯ' ವೆಂಬ ಸಂಜ್ಞೆಯನ್ನು ಕಲ್ಪಿಸಿದ ಬಳಿಕ (ಕರ್ಮಧಾರಯ ಸಂಜ್ಞೆಯನ್ನು ನಿಮಿತ್ತಮಾಡಿಕೊಂಡು ವ್ಯಾಕರಣದಲ್ಲಿ ಹಲವು ಕಾರ್ಯಗಳ ವಿಧಾನವುಂಟು.) ಗಮಕವೆಂಬ ಹೊಸ ಸಂಜ್ಞೆಯನ್ನು ಕಲ್ಪಿಸುವಾಗ ಏನಾದರೊಂದು ಕಾರ್ಯವಿಧಾನವಿರಬೇ

ಕಲ್ಲವೆ? ಕರ್ಮಧಾರಯದಲ್ಲಿ ಅಗತಕ್ಕ ಕಾರ್ಯಕ್ಕೆ ಬೇರೆಯಾದ ಯಾವ ಕಾರ್ಯವು ದರ್ಪಣವು, ಇಲ್ಲವೆ ನುಡಿಗಟ್ಟು, ಇಲ್ಲವೆ ಶಬ್ದಾದರ್ಶವು ಹೇಳುವ ಗಮಕದ ಉದಾಹರಣಗಳಲ್ಲುಂಟು? ದರ್ಪಣಕಾರನು ಗಮಕ ಸಂಜ್ಞೆಯನ್ನು ನಿಮಿತ್ತಮಾಡಿಕೊಂಡು ಕರ್ಮಧಾರಯಕಾರ್ಯದಿಂದ ಭಿನ್ನವಾದ ಯಾವ ಕಾರ್ಯವನ್ನೂ ವಿಧಿಸಿರುವದಿಲ್ಲ. ಶಾಸನಕಾರನು ಈ ತತ್ವಕ್ಕನುಸರಿಸಿ "ಆಕಾಙ್ಕ್ಷಾಹೇತೌ" "ಏಕಾನೇಕಾಽಽ" ಮೊದಲಾದ ಸೂತ್ರಗಳಿಂದ ಅಙಾಗಮವಿಧಾನ, ಏಕವಚನ ಮೊದಲಾದ ಕಾರ್ಯಗಳನ್ನು ಹೇಳಬೇಕಾದ್ದರಿಂದ ಬಹುವ್ರೀಹಿ, ದ್ವಂದ್ವ ಎಂಬ ಎರಡು ಸಮಾಸ ನಾಮಗಳನ್ನು ಕಲ್ಪಿಸಿದನೇ ಹೊರತು ತತ್ಪುರುಷ, ಕರ್ಮಧಾರಯ ಮೊದಲಾದ ಸಂಜ್ಞೆಗಳನ್ನು ಕೂಡ ಕಲ್ಪಿಸಲಿಲ್ಲ. ವ್ಯಾಕರಣದಲ್ಲಿ ಲಕ್ಷ್ಯಸಿದ್ಧಿಯೇ ಮುಖ್ಯವು. ಸಂಜ್ಞಾಕಲ್ಪನವು ವ್ಯಾಕರಣಕಾರನ ಜಾಣ್ಮೆಯನ್ನವಲಂಬಿಸಿರುವದು. ನಿಪುಣನಾದ ವ್ಯಾಕರಣಕಾರನು ಸ್ವಲ್ಪ ಸಂಜ್ಞೆಗಳಿಂದ ಕಾರ್ಯಗಳನ್ನು ನಿರ್ವಹಿಸುವನು. ತತ್ಪುರುಷ, ಕರ್ಮಧಾರಯ ಮೊದಲಾದ ಸಂಜ್ಞೆಗಳನ್ನು ಕೂಡ ಬಿಟ್ಟು ಶಾಸನಕಾರನು ಲಕ್ಷ್ಯಸಿದ್ಧಿಯನ್ನು ಮಾಡಿತೋರಿಸುವಾಗ, ಕರ್ಮಧಾರಯಕಾರ್ಯಕ್ಕಿಂತ ಭಿನ್ನವಾದ ಕಾರ್ಯವು ಇಲ್ಲದ ಗಮಕವೆಂಬ ಸಂಜ್ಞೆಯು ಏಕೆ ಬೇಕು ಏನು? ಹೀಗಿರುವಾಗ "ಗಮಕವೆಂಬ ಹೆಸರನ್ನೆ ಬಿಟ್ಟರೆ ಕನ್ನಡದ ಒಂದು ವಿಶೇಷ ಲಕ್ಷಣವನ್ನೆ ಬಿಟ್ಟಂತೆ ಆದೀತು," ಎಂದು ಮಿ. ಪ್ರಭುಗಳು ಭಯಪಡುವದು ಏಕೆ? ಅವರ ಈ ಮೊದಲನೆಯ ಕಾರಣದ ಮೇಲೆ ಪ್ರತಿಪ್ರಶ್ನೆಗಳು:— (೧) ಗಮಕ ಸಮಾಸವೆಂಬ ಹೆಸರು ಕನ್ನಡದ ಲಕ್ಷಣವೇ? ಅಥವಾ (೨) ಗಮಕ ಸಮಾಸ ಪ್ರಯೋಗಗಳು ಕನ್ನಡದ ಲಕ್ಷಣವೆ? (೩) ಲಕ್ಷಣವೆಂದು ಹೇಳುವಾಗ "लक्ष्यतावच्छेदक समानियतो धर्मः" ಎಂಬ ಶಾಸ್ತ್ರೀಯಾರ್ಥದಲ್ಲಿ ಲಕ್ಷಣಶಬ್ದ ಪ್ರಯೋಗವೇ? (೪) ಶಾಸ್ತ್ರೀಯಾರ್ಥವನ್ನು ಬಿಟ್ಟು ಬೇರೆ ಅರ್ಥದಲ್ಲಿ ಲಕ್ಷಣ ಶಬ್ದಪ್ರಯೋಗವೇ? ನಿರಾಕರಣಗಳು:— (೧) ಗಮಕವೆಂಬ ಹೆಸರು ಕನ್ನಡದ ಲಕ್ಷಣವೆಂದರೆ ಅಪಹಾಸ್ಯಾಸ್ಪದವಾಗುವದು. (೨) ನೀವು ಗಮಕವೆಂದು ಹೇಳುವ ಪ್ರಯೋಗಗಳು ನಮಗೂ ಸಮ್ಮತವಾಗಿರುವವು. ಆದರೆ ಅವುಗಳಿಗೆ ಹೆಚ್ಚಿನ ಸಂಜ್ಞೆಯನ್ನು ಕಲ್ಪಿಸುವದು ಮಾತ್ರ ನಮಗೆ ಸಮ್ಮತವಿಲ್ಲ. (೩) ಶಾಸ್ತ್ರೀ

ಯಾರ್ಥದಲ್ಲಿ ಲಕ್ಷಣ ಶಬ್ದಪ್ರಯೋಗವಿದ್ದರೆ, "ರಾಮುಂ ಊರ್ಗೆ ಪೋದಪಂ" ಇತ್ಯಾದಿ ಲಕ್ಷ್ಯತಾವಚ್ಛೇದಂತವಾದ ಕನ್ನಡ ಭಾಷೆಯಲ್ಲಿ ಗಮಕ ಸಮಾಸವಿಲ್ಲದ್ದರಿಂದ ಅವ್ಯಾಪ್ತಿದೋಷವು ಬರುವದು. (೪) ಬೇರೆ ಅರ್ಥವಲ್ಲಿ ಲಕ್ಷಣ ಶಬ್ದವಿದ್ದರೆ ಕನ್ನಡ ಭಾಷೆಯಲ್ಲಿ ಇದೊಂದು ವಿಷಯವು ಎಂಬರ್ಥದಲ್ಲಿ ಉಪಯೋಗಿಸಿರಬೇಕು. ಹಾಗಿದ್ದರೆ, ಕನ್ನಡ ಭಾಷೆಯ ಶೈಲಿಗೆ ಸಹಕಾರಿಗಳಾದ, ನೀವು ಗಮಕವೆಂದು ಹೇಳುವ ಪ್ರಯೋಗಗಳು ನಮಗೂ ಸಮ್ಮತವಾಗಿರುವದರಿಂದಲೂ ಅವುಗಳಿಗೆ ಗಮಕವೆಂಬ ಹೆಸರನ್ನಿಡದಿದ್ದರೂ ಸಾಗಬಹುದಾದ್ದರಿಂದಲೂ ಕನ್ನಡದ ವಿಶೇಷ ಲಕ್ಷಣವನ್ನು ಬಿಟ್ಟಂತೆ ಆದೀತು, ಎಂದು ಅಂಜುವ ಇಲ್ಲವೆ ಅಂಜಿಸುವ ಕಾರಣವಿಲ್ಲ. ಆ ಹೆಸರನ್ನು ಬಿಟ್ಟರೆ ಕರ್ಣಾಟಕ ಭಾಷೆಯ ಕರ್ಣಾಟಕತ್ವವು ಹೋಗುವದಿಲ್ಲ. ಅದರಂತೆಯೇ, ನಮಗಿಂತ ಕನ್ನಡ ಭಾಷೆಯಲ್ಲಿ ಅತ್ಯಂತಾಭಿಮಾನವುಳ್ಳವನೂ, ಕನ್ನಡ ವ್ಯಾಕರಣಕ್ಕೆ ಸುಸ್ವರೂಪವನ್ನು ತಂದು ಕೊಟ್ಟವನೂ ಆದ ಭಟ್ಟಾಕಲಂಕನು ಈ ಹೆಸರನ್ನು ಹೇಳಲಿಲ್ಲ. ಅದರಿಂದ ಈ ವಿಷಯದಲ್ಲಿ ಅವನ ವ್ಯಾಕರಣಕ್ಕೆ ಯಾವ ನ್ಯೂನತೆಯೂ ಬಂದಿಲ್ಲ.

ಎರಡನೆಯ ಕಾರಣವು:— "ದರ್ಪಣಕಾರನು ಗಮಕದಲ್ಲಿ ಕ್ರಿಯಾ ಸಮಾಸವೂ ಸೇರುತ್ತದೆ, ಇತ್ಯಾದಿ:—"

ಕ್ರಿಯಾಸಮಾಸವು ಗಮಕದಲ್ಲಿ ಸೇರಲಿ, ಸೇರದಿರಲಿ, ಅದನ್ನು ಬಿಡುವದು ನಮ್ಮ ಇಷ್ಟವಲ್ಲ. ಮೊದಲು ಅದು ಗಮಕದಲ್ಲಿ ಸೇರುವದಾದರೂ ಹೇಗೆ? ಗಮಕವು ಕರ್ಮಧಾರಯದ ಉಪಭೇದವೆಂದು ಹೇಳಬಹುದಾದಾಗ ಕರ್ಮಧಾರಯದಲ್ಲಿಯೇ ಸೇರಿಸಲಿಕ್ಕಾಗದ ಕ್ರಿಯಾ ಸಮಾಸವು ಗಮಕದಲ್ಲಿ ಸೇರುವದು ಹೇಗೆ? "ಕರ್ಮಧಾರಯಮುದುವುಂ" ಕರ್ಮಧಾರಯವೂ ಗಮಕವೂ ಒಂದೇ ಎಂದು ಸ್ಪಷ್ಟವಾಗಿ ಹೇಳುವ ದರ್ಪಣಕಾರನಿಗೆ ಕ್ರಿಯಾಸಮಾಸವೂ ಗಮಕದಲ್ಲಿ ಸೇರುವದೆಂಬ ಅಭಿಪ್ರಾಯವು ಉಂಟೆಂದು ಕಲ್ಪಿಸುವದು ಹೇಗೆ? ಸಮಾಸವು ಯಾವದೊಂದು ಭಾಷೆಯ ಆರಂಭದ ಸ್ವಾಭಾವಿಕ ಸ್ಥಿತಿಯಲ್ಲವೆಂಬದು ನಿಜ. ಆದರೂ ಭಾಷೆಯಲ್ಲಿ ಗಮಕ-ಕ್ರಿಯಾಸಮಾಸಗಳ ಘಟನೆಯಾಗಿರುವ ಕಾಲದಲ್ಲಿಯೇ ತತ್ಪುರುಷಾದಿಗಳ ಘಟನೆಯೂ ಆಗಿರಬೇಕು. ತತ್ಪುರುಷಾದಿ

ಸಂಸ್ಕೃತ ಸಂಜ್ಞೆಗಳು ಈಚೆಗೆ ಬಂದಿರುವವೋ ಹೊರತು ಆ ಪ್ರಯೋಗಗಳು ಪ್ರಾಚೀನಗಳೇ?

೩ನೆಯ ಕಾರಣವು:— "द्विगुरेकवचनम् कतारः कर्मधारये" ಮೊದಲಾದ ಸೂತ್ರಗಳಿಂದ ಏಕವಚನ ಪೂರ್ವನಿಪಾತನ ಮೊದಲಾದ ಕಾರ್ಯಗಳನ್ನು ವಿಧಿಸುವದಕ್ಕಾಗಿ ತತ್ಪುರುಷದ ಹೊರತಾಗಿ ದ್ವಿಗು, ಕರ್ಮಧಾರಯ ಸಂಜ್ಞೆಗಳನ್ನು ಕಲ್ಪಿಸಬೇಕಾಯಿತು. ಹಾಗೆ ಕನ್ನಡದಲ್ಲಿ ಯಾವ ಕಾರ್ಯವನ್ನು ವಿಧಿಸುವದಕ್ಕೆ ಗಮಕವೆಂಬ ಸಂಜ್ಞೆಯನ್ನು ಕಲ್ಪಿಸುವದು? ಕೇವಲ ವ್ಯಾವರ್ತಕ ಧರ್ಮವಿಲ್ಲ ಮಾತ್ರದಿಂದ ಹೊಸ ಸಂಜ್ಞೆಗಳನ್ನು ಕಲ್ಪಿಸುವದು ವ್ಯಾಕರಣಕಾರರ ಪದ್ಧತಿಯಲ್ಲ.

೪ನೆಯ ಕಾರಣವು:— "ಕನ್ನಡದ ಯಾವ ವ್ಯಾಕರಣದಲ್ಲಿಯೂ ಗಮಕವನ್ನು ಬಿಟ್ಟಿಲ್ಲ."

ಪ್ರತಿಪ್ರಶ್ನೆಗಳು:—ಯಾವ ವ್ಯಾಕರಣದಲ್ಲಿಯೂ ಎಂಬದಕ್ಕೆ (೧) ಪ್ರಾಮಾಣಿಕವಿರಲಿ, ಅಪ್ರಾಮಾಣಿಕವಿರಲಿ ಆ ಎಲ್ಲ ವ್ಯಾಕರಣಗಳಲ್ಲಿಯೂ ಎಂದರ್ಥವೇ? (೨) ಪ್ರಾಮಾಣಿಕವಾದ ಯಾವ ವ್ಯಾಕರಣದಲ್ಲಿಯೂ ಎಂದರ್ಥವೇ? (೩) ಪ್ರಾಮಾಣಿಕ ವ್ಯಾಕರಣಗಳಲ್ಲಿಯೂ ಕೂಡ ತಾವು ಗ್ರಹಿಸಿದ ವ್ಯಾಕರಣಗಳಲ್ಲಿ ಎಂದರ್ಥವೇ? (೪) ಎಲ್ಲ ಪ್ರಾಮಾಣಿಕ ವ್ಯಾಕರಣಗಳಲ್ಲಿ ಎಂದರ್ಥವೇ?

ನಿರಾಕರಣಗಳು:—

(೧) ಅಪ್ರಾಮಾಣಿಕ ವ್ಯಾಕರಣಗಳಲ್ಲಿ ಗಮಕವನ್ನು ಬಿಡದಿದ್ದರೂ ಅದನ್ನು ಗಣನೆಗೆ ತರಬೇಕಾದ ಅವಶ್ಯವಿಲ್ಲ. ಯಾಕಂದರೆ, ಅವು ಹೇಗಿದ್ದರೂ ಅಪ್ರಾಮಾಣಿಕಗಳೇ. (೨) ಪ್ರಾಮಾಣಿಕವಾದ ಕೆಲವು ಮುಖ್ಯ ವ್ಯಾಕರಣಗಳಲ್ಲಿ ಅದರ ಹೆಸರನ್ನೆ ಎತ್ತಿಲ್ಲ. (ನೋಡು-ಶ.ಶಾಸನ; ನಾಗವರ್ಮ ವ್ಯಾಕ.) (೩) ನೀವು ನೋಡಿದ ವ್ಯಾಕರಣಗಳ ಹೊರತು ಉಳಿದಿರುವ ಪ್ರಾಮಾಣಿಕ ವ್ಯಾಕರಣಗಳನ್ನೂ ವಿಚಾರಿಸಿ ಬಳಿಕ ಯಾವದೊಂದು ನಿರ್ಣಯಕ್ಕೆ ಹೊಂದಬೇಕು. (೪) ಕನ್ನಡ ಭಾಷೆಯಲ್ಲಿ ಆರಂಭಕ್ಕೆ ಹುಟ್ಟಿದ ವ್ಯಾಕರಣಗಳು ನಾಗವರ್ಮನ ಶಬ್ದಸ್ಮೃತಿ-ಭಾಷಾಭೂಷಣಗಳು. ಮುಂದೆ ಇವುಗಳ ಹೋಲಿಕೆಯಿಂದ ಹುಟ್ಟಿದ ಕೇತಿರಾಜನ ದರ್ಪಣ, ಭಟ್ಟಾಕಲಂಕನ ಶಬ್ದಾನುಶಾಸನ, ಇವು ಕನ್ನಡ

ಯಾರ್ಥದಲ್ಲಿ ಲಕ್ಷಣ ಶಬ್ದಪ್ರಯೋಗವಿದ್ದರೆ, "ರಾಮುಂ ಊರ್ಗೆ ಪೋದಪಂ" ಇತ್ಯಾದಿ ಲಕ್ಷ್ಯತಾವಚ್ಛೇದಂತವಾದ ಕನ್ನಡ ಭಾಷೆಯಲ್ಲಿ ಗಮಕ ಸಮಾಸವಿಲ್ಲದ್ದರಿಂದ ಅವ್ಯಾಪ್ತಿದೋಷವು ಬರುವದು. (ಳ) ಬೇರೆ ಅರ್ಥದಲ್ಲಿ ಲಕ್ಷಣ ಶಬ್ದವಿದ್ದರೆ ಕನ್ನಡ ಭಾಷೆಯಲ್ಲಿ ಇದೊಂದು ವಿಷಯವು ಎಂಬರ್ಥದಲ್ಲಿ ಉಪಯೋಗಿಸಿರಬೇಕು. ಹಾಗಿದ್ದರೆ, ಕನ್ನಡ ಭಾಷೆಯ ಶೈಲಿಗೆ ಸಹಕಾರಿಗಳಾದ, ನೀವು ಗಮಕವೆಂದು ಹೇಳುವ ಪ್ರಯೋಗಗಳು ನಮಗೂ ಸಮ್ಮತವಾಗಿರುವರಿಂದಲೂ ಅವುಗಳಿಗೆ ಗಮಕವೆಂಬ ಹೆಸರನ್ನಿಡದಿದ್ದರೂ ಸಾಗಬಹುದಾದ್ದರಿಂದಲೂ ಕನ್ನಡದ ವಿಶೇಷ ಲಕ್ಷಣವನ್ನು ಬಿಟ್ಟಂತೆ ಆದೀತು, ಎಂದು ಅಂಜುವ ಇಲ್ಲವೆ ಅಂಜಿಸುವ ಕಾರಣವಿಲ್ಲ. ಆ ಹೆಸರನ್ನು ಬಿಟ್ಟರೆ ಕರ್ಣಾಟಕ ಭಾಷೆಯ ಕರ್ಣಾಟಕತ್ವವು ಹೋಗುವದಿಲ್ಲ. ಅದರಂತೆಯೇ, ನಮಗಿಂತ ಕನ್ನಡ ಭಾಷೆಯಲ್ಲಿ ಅತ್ಯಂತಾಭಿಮಾನವುಳ್ಳವನೂ, ಕನ್ನಡ ವ್ಯಾಕರಣಕ್ಕೆ ಸುಸ್ವರೂಪವನ್ನು ತಂದು ಕೊಟ್ಟವನೂ ಆದ ಭಟ್ಟಾಕಲಂಕನು ಈ ಹೆಸರನ್ನು ಹೇಳಲಿಲ್ಲ. ಅದರಿಂದ ಈ ವಿಷಯದಲ್ಲಿ ಅವನ ವ್ಯಾಕರಣಕ್ಕೆ ಯಾವ ನ್ಯೂನತೆಯೂ ಬಂದಿಲ್ಲ.

ಎರಡನೆಯ ಕಾರಣವು:— "ದರ್ಪಣಕಾರನು ಗಮಕದಲ್ಲಿ ಕ್ರಿಯಾ ಸಮಾಸವೂ ಸೇರುತ್ತದೆ, ಇತ್ಯಾದಿ:—"

ಕ್ರಿಯಾಸಮಾಸವು ಗಮಕದಲ್ಲಿ ಸೇರಲಿ, ಸೇರದಿರಲಿ, ಅದನ್ನು ಬಿಡುವದು ನಮ್ಮ ಇಷ್ಟವಲ್ಲ. ಮೊದಲು ಅದು ಗಮಕದಲ್ಲಿ ಸೇರುವದಾದರೂ ಹೇಗೆ? ಗಮಕವು ಕರ್ಮಧಾರಯದ ಉಪಭೇದವೆಂದು ಹೇಳಬಹುದಾದಾಗ ಕರ್ಮಧಾರಯದಲ್ಲಿಯೇ ಸೇರಿಸಲಿಕ್ಕಾಗದ ಕ್ರಿಯಾ ಸಮಾಸವು ಗಮಕದಲ್ಲಿ ಸೇರುವದು ಹೇಗೆ? "ಕರ್ಮಧಾರಯಮುದುವುಂ" ಕರ್ಮಧಾರಯವೂ ಗಮಕವೂ ಒಂದೇ ಎಂದು ಸ್ಪಷ್ಟವಾಗಿ ಹೇಳುವ ದರ್ಪಣಕಾರನಿಗೆ ಕ್ರಿಯಾಸಮಾಸವೂ ಗಮಕದಲ್ಲಿ ಸೇರುವದೆಂಬ ಅಭಿಪ್ರಾಯವು ಉಂಟೆಂದು ಕಲ್ಪಿಸುವದು ಹೇಗೆ? ಸಮಾಸವು ಯಾವದೋ ದು ಭಾಷೆಯ ಆರಂಭದ ಸ್ವಾಭಾವಿಕ ಸ್ಥಿತಿಯಲ್ಲವೆಂಬದು ನಿಜ. ಆದರೂ ಭಾಷೆಯಲ್ಲಿ ಗಮಕ-ಕ್ರಿಯಾಸಮಾಸಗಳ ಘಟನೆಯಾಗಿರುವ ಕಾಲದಲ್ಲಿಯೇ ತತ್ಪುರುಷಾದಿಗಳ ಘಟನೆಯೂ ಆಗಿರಬೇಕು. ತತ್ಪುರುಷಾದಿ

ಸಂಸ್ಕೃತ ಸಂಜ್ಞೆಗಳು ಈಚೆಗೆ ಬಂದಿರುವವೋ ಹೊರತು ಆ ಪ್ರಯೋಗಗಳು ಪ್ರಾಚೀನಗಳೇ?

೩ನೆಯ ಕಾರಣವು:— "द्विगुरेकवचनम् कृतारः कर्मधारये" ಮೊದಲಾದ ಸೂತ್ರಗಳಿಂದ ಏಕವಚನ ಪೂರ್ವನಿಪಾತನ ಮೊದಲಾದ ಕಾರ್ಯಗಳನ್ನು ವಿಧಿಸುವದಕ್ಕಾಗಿ ತತ್ಪುರುಷದ ಹೊರತಾಗಿ ದ್ವಿಗು, ಕರ್ಮಧಾರಯ ಸಂಜ್ಞೆಗಳನ್ನು ಕಲ್ಪಿಸಬೇಕಾಯಿತು. ಹಾಗೆ ಕನ್ನಡದಲ್ಲಿ ಯಾವ ಕಾರ್ಯವನ್ನು ವಿಧಿಸುವದಕ್ಕೆ ಗಮುಕವೆಂಬ ಸಂಜ್ಞೆಯನ್ನು ಕಲ್ಪಿಸುವದು? ಕೇವಲ ವ್ಯಾವರ್ತಕ ಧರ್ಮವಿದ್ದ ಮಾತ್ರದಿಂದ ಹೊಸ ಸಂಜ್ಞೆಗಳನ್ನು ಕಲ್ಪಿಸುವದು ವ್ಯಾಕರಣಕಾರರ ಪದ್ಧತಿಯಲ್ಲ.

೪ನೆಯ ಕಾರಣವು:— "ಕನ್ನಡದ ಯಾವ ವ್ಯಾಕರಣದಲ್ಲಿಯೂ ಗಮುಕವನ್ನು ಬಿಟ್ಟಿಲ್ಲ."

ಪ್ರತಿಪ್ರಶ್ನೆಗಳು: — ಯಾವ ವ್ಯಾಕರಣದಲ್ಲಿಯೂ ಎಂಬದಕ್ಕೆ (೧) ಪ್ರಾಮಾಣಿಕವಿರಲಿ, ಅಪ್ರಾಮಾಣಿಕವಿರಲಿ ಆ ಎಲ್ಲ ವ್ಯಾಕರಣಗಳಲ್ಲಿಯೂ ಎಂದರ್ಥವೇ? (೨) ಪ್ರಾಮಾಣಿಕವಾದ ಯಾವ ವ್ಯಾಕರಣದಲ್ಲಿಯೂ ಎಂದರ್ಥವೇ? (೩) ಪ್ರಾಮಾಣಿಕ ವ್ಯಾಕರಣಗಳಲ್ಲಿಯೂ ಕೂಡ ತಾವು ಗ್ರಹಿಸಿದ ವ್ಯಾಕರಣಗಳಲ್ಲಿ ಎಂದರ್ಥವೇ? (೪) ಎಲ್ಲ ಪ್ರಾಮಾಣಿಕ ವ್ಯಾಕರಣಗಳಲ್ಲಿ ಎಂದರ್ಥವೇ?

ನಿರಾಕರಣಗಳು:—

(೧) ಅಪ್ರಾಮಾಣಿಕ ವ್ಯಾಕರಣಗಳಲ್ಲಿ ಗಮುಕವನ್ನು ಬಿಡದಿದ್ದರೂ ಅದನ್ನು ಗಣನೆಗೆ ತರಬೇಕಾದ ಅವಶ್ಯವಿಲ್ಲ. ಯಾಕಂದರೆ, ಅವು ಹೇಗಿದ್ದರೂ ಅಪ್ರಾಮಾಣಿಕಗಳೇ. (೨) ಪ್ರಾಮಾಣಿಕವಾದ ಕೆಲವು ಮುಖ್ಯ ವ್ಯಾಕರಣಗಳಲ್ಲಿ ಅದರ ಹೆಸರನ್ನೆ ಎತ್ತಿಲ್ಲ. (ನೋಡು-ಶ.ಶಾಸನ; ನಾಗವರ್ಮ ವ್ಯಾಕ.) (೩) ನೀವು ನೋಡಿದ ವ್ಯಾಕರಣಗಳ ಹೊರತು ಉಳಿದಿರುವ ಪ್ರಾಮಾಣಿಕ ವ್ಯಾಕರಣಗಳನ್ನೂ ವಿಚಾರಿಸಿ ಬಳಿಕ ಯಾವದೊಂದು ನಿರ್ಣಯಕ್ಕೆ ಹೊರಡಬೇಕು. (೪) ಕನ್ನಡ ಭಾಷೆಯಲ್ಲಿ ಆರಂಭಕ್ಕೆ ಹುಟ್ಟಿದ ವ್ಯಾಕರಣಗಳು ನಾಗವರ್ಮನ ಶಬ್ದಸ್ಮೃತಿ-ಭಾಷಾಭೂಷಣಗಳು. ಮುಂದೆ ಇವುಗಳ ಹೋಲಿಕೆಯಿಂದ ಹುಟ್ಟಿದ ಕೇಶಿರಾಜನ ದರ್ಪಣ, ಭಟ್ಟಾಕಲಂಕನ ಶಬ್ದಾನುಶಾಸನ, ಇವು ಕನ್ನಡ

ದಲ್ಲಿ ಪ್ರಾಮಾಣಿಕ ವ್ಯಾಕರಣಗಳು. ಇದುವರೆಗೆ ಹೊಸಗನ್ನಡಕ್ಕೆ ಸುಕಾದ ಪ್ರಾಮಾಣಿಕ ವ್ಯಾಕರಣವು ಹುಟ್ಟಿಲ್ಲ. (ನೋಡು-ರಘುನಾಥ ರಾಯನ ವ್ಯಾ. ಮಂಜರಿ.) ನಾಗವರ್ಮನ ವ್ಯಾಕರಣಗಳು ಬಹಳ ಸಂಕ್ಷಿಪ್ತವಿರುವವು. ದರ್ಪಣವು ವಿಸ್ತೃತವಾಗಿದ್ದರೂ ಅದರಲ್ಲಿ ಹಲವು ವಿಷಯಗಳು ವ್ಯಾಕರಣತತ್ವಗಳನ್ನನುಸರಿಸಿಲ್ಲ. ದರ್ಪಣಕಾರನು ಪ್ರಯೋಗಸಂಗ್ರಾಹಕನೆಂದು ಮಾನ್ಯನಾಗಿರುವನು. ಭಟ್ಟಾಕಲಂಕನು ಕೇಶಿರಾಜಸಂಗೃಹೀತಪ್ರಯೋಗಬಲದಿಂದ ವ್ಯಾಕರಣತತ್ವಗಳಿಗೆ ಎಲ್ಲಿಯೂ ಭಂಗಬಾರದಂತೆ ತನ್ನ ವ್ಯಾಕರಣವನ್ನು ಬರೆದಿರುವನು. ತತ್ತರೋತ್ತರ मुनीनां प्रामाण्यम् ಎಂದು, ಸಂಸ್ಕೃತದಲ್ಲಿ ಪಾಣಿನಿಗಿಂತ ಕಾತ್ಯಾಯನನಿಗೂ ಕಾತ್ಯಾಯನನಿಗಿಂತ ಪತಂಜಲಿಗೂ ಪ್ರಾಮಾಣ್ಯವನ್ನು ಕೊಡುವಂತೆ, ಕನ್ನಡದಲ್ಲಿ ನಾಗವರ್ಮನಿಗಿಂತ ಕೇಶಿರಾಜನಿಗೂ, ಕೇಶಿರಾಜನಿಗಿಂತ ಭಟ್ಟಾಕಲಂಕನಿಗೂ ಪ್ರಾಮಾಣ್ಯವನ್ನು ಕೊಡುವರು. ನಾಗವರ್ಮನ ವ್ಯಾಕರಣಗಳೂ, ಪರಮಪ್ರಮಾಣವೆನಿಸಿದ ಶಾಸನವೂ ಇವುಗಳಲ್ಲಿ ಗಮುಕವೆಂಬ ಸಂಜ್ಞೆಯನ್ನು ಕಲ್ಪಿಸದೆ ಪ್ರಯೋಗಗಳನ್ನು ಸಾಧಿಸಿರುವರು. ಹೀಗಿರುವಾಗ ದರ್ಪಣದ ಮೇಲೆ ಆಕ್ಷೇಪವನ್ನು ತೆಗೆದು ಕೊಂಡಾಗ ನುಡಿಗಟ್ಟು, ಶಬ್ದಾದರ್ಶ....., ಮೊದಲಾದ ವ್ಯಾಕರಣಗಳ ಮಾಲಿಕೆಯನ್ನು ಆಧಾರವಾಗಿ ತೋರಿಸುವದು ಸಮಂಜಸವಾಗಲಾರದು.

ಮಿ. ಪ್ರಭು ಇವರ ಲೇಖದ ೩ನೆಯ ಪ್ಯಾರಾದಲ್ಲಿ:— ಶಬ್ದಾದರ್ಶದ ಪ್ರತಿ (೧೯೦೭)ಯಲ್ಲಿ 'ಕರ್ಮಧಾರಯದ್ವಿಗುಗಳಲ್ಲಿ ಗುಣವಾಚಕ-ಸಂಖ್ಯಾವಾಚಕಗಳು ಬಂದು ಹೋಗುವದರಿಂದ ಸರ್ವನಾಮ-ಕೃದಂತಗಳಲ್ಲೊಂದು ಪೂರ್ವಪದವಾಗಿರುವ ಸಮಾಸಕ್ಕೆ ಗಮುಕವೆನಬೇಕೆಂ'ದು ಹೇಳಿದೆಯೆಂದು ಹೇಳುತ್ತಾರೆ. ಹೇಳಿರಬಹುದು. ಅದಾದರೂ ಗಮುಕದ ಮೇಲಿನ ಮೋಹವೇ ಹೊರತು ಬೇರೆಯಲ್ಲ. ಈ ವ್ಯಾಖ್ಯೆಯನ್ನನುಸರಿಸಿದರೆ ಕರ್ಮಧಾರಯದಲ್ಲಿ ಗುಣವಾಚಕವೊಂದೇ ಪೂರ್ವಪದವಾಗಿರಬೇಕೆಂದು ಹೇಳಿದಂತಾಗುತ್ತದೆ. ಹೀಗೆ ಹೇಳಿದರೆ ಸಂಸ್ಕೃತವ್ಯಾಕರಣ, ಶಾಸನ, ದರ್ಪಣ ಇವುಗಳಿಗೆಲ್ಲ ದೊಡ್ಡ ವಿರೋಧವು ಬರುವದು. "तत्पुरुषः समानाधिकरणः कर्मधारयः" (पाणिनि) "विशेषणमेकार्थं" (शासन) "ಸಮುಂತದೇಕಾಶ್ರಯಮಾಗಿರೆ ಕರ್ಮಧಾರಯಂ" (ದರ್ಪಣ)

ಎಂದು ಹೇಳಿದ ಕರ್ಮಧಾರಯಲಕ್ಷಣಗಳಲ್ಲಿ ಶಬ್ದಾದರ್ಶದ ಆ ಅಭಿಪ್ರಾಯವು ಇಲ್ಲ. ಹಾಗೆ ಒಂದೊಂದು ಪ್ರಕಾರದ ವಿಶೇಷಣವು ಪೂರ್ವಪದವಿದ್ದರೆ ಒಂದೊಂದು ಹೆಸರನ್ನು ಕೊಡಬಹುದಾಗಿದ್ದರೆ ಕೃದಂತಪೂರ್ವಪದಕವಾಗಿದ್ದರೆ ಗಮುಕವೆಂಬ ಹೆಸರನ್ನೂ ಸರ್ವನಾಮವು ಪೂರ್ವಪದವಾಗಿದ್ದರೆ ಮತ್ತೊಂದು ಹೆಸರನ್ನೂ ಯಾಕೆ ಕೊಡಬಾರದು? ಆದರಿಂದ ಹೊಸ ಸಂಜ್ಞೆಯನ್ನು ಕಲ್ಪಿಸುವಲ್ಲಿ ಯಾವ ಸಾಮಗ್ರಿಯಿರಬೇಕೆಂಬದನ್ನು ವಿಚಾರಿಸಬೇಕು.

ಇನೆಯು ಪ್ಯಾರಾಗ್ರಾಫಿನಲ್ಲಿ:—ನುಡಿಗಟ್ಟಿನಲ್ಲಿ ಕರ್ಮಧಾರಯ ವ್ಯಾಖ್ಯೆಯ ಕೆಳಗಿನ ಟೀಪಿನಲ್ಲಿದ್ದ "ಸಂಖ್ಯಾವಾಚಕ ವಿಶೇಷಣವಲ್ಲ" ಎಂಬದರ ಮೇಲೆ ಆಕ್ಷೇಪ ತೆಗೆದುಕೊಂಡದಕ್ಕೆ ಸಂಸ್ಕೃತ ವ್ಯಾಕರಣವನ್ನು ನೋಡಿದ ಹೊರತು ಆ ವಿಷಯವು ತಿಳಿಯಲಾರದೆಂದು ಸ್ವಲ್ಪದಲ್ಲಿ ಆ ತಿಳುವಳಿಕೆಯನ್ನು ಎಲ್ಲರಿಗೂ ತಂದುಕೊಡಬೇಕೆಂಬ ಸದುದ್ದೇಶದಿಂದ "ಸಂಖ್ಯಾಪೂರ್ವಸ್ತು...." ಎಂಬ ವಾಕ್ಯವನ್ನು ಕೊಟ್ಟಿರುವರು. ಆದರೆ ಈ ವಾಕ್ಯದ ಪೂರ್ವಾಪರ ಸಂದರ್ಭವನ್ನು ಸರಿಯಾಗಿ ತಿಳಿದವರು ಈ ಸಂದರ್ಭದಲ್ಲಿ ಇದನ್ನು ಪ್ರಮಾಣವಾಗಿ ತೋರಿಸಲಾರರು. ಸಂಸ್ಕೃತದಲ್ಲಿ ಸಮಾನಾಧಿಕರಣವಾದ ಬೇಕಾದ ವಿಶೇಷಣವು ಪೂರ್ವಪದವಾಗಿದ್ದರೂ ಕರ್ಮಧಾರಯ ಸಮಾಸವಾಗುವದೆಂದು ಹೇಳಿದ್ದರೂ ದಿಗ್ವಾಚಕ ಸಂಖ್ಯಾವಾಚಕವಿಶೇಷಣಗಳೂ ವಿಶೇಷ್ಯಗಳೂ ಕೂಡಿ (ಕೆಲವು ಸ್ಥಳಗಳ ಹೊರತು) ಸಮಾಸವಾಗುವದಿಲ್ಲ. ಸಂಜ್ಞೆಯಲ್ಲಿ ಮಾತ್ರ ದಿಕ್ಸಂಖ್ಯಾವಾಚಕಗಳು ಸಮಾಸವಾಗುವವು (दिक्सङ्ख्ये संज्ञायाम्). सप्तर्षयः ಮೊದಲಾದ ಸಂಜ್ಞಾಶಬ್ದಗಳು ಇದಕ್ಕೆ ಉದಾಹರಣೆಗಳು. ಈ ತರದ ಉದಾಹರಣೆಗಳೂ ಕರ್ಮಧಾರಯವೆನಿಸಿಕೊಳ್ಳುವವು. "तद्धितार्थोत्तरपदसमाहारेच" ಎಂಬ ಸೂತ್ರದಿಂದ पौर्वशालः, षाण्मातुरः ಮೊದಲಾದ ತದ್ಧಿತಪ್ರತ್ಯಯಪರಕವಾದ ಸಮಾಸಗಳೂ, पूर्वशालाप्रियः पञ्चगोरथः ಮೊದಲಾದ ಉತ್ತರಪದಪರಕವಾದ ಸಮಾಸಗಳೂ, पञ्च फली (दिक्षुसमाहारो नास्ति) ಮೊದಲಾದ ಸಮಾಹಾರಾರ್ಥಕ ಸಮಾಸಗಳೂ ವಿಧಿಸಲ್ಪಟ್ಟವೆ. ಈ ಮೂರು ಪ್ರಕಾರದ ಸಂಖ್ಯಾಪೂರ್ವಕ ಕರ್ಮಧಾರಯವು ದ್ವಿಗುವೆನಿಸುವದು.

(ಸಶೇಷ)

ವಿದ್ಯಾಖಾತೆಯ ನೋಟೀಸು.

ಕನ್ನಡ ಹಾಗೂ ಉರ್ದು ಶಾಲೆಗಳಿಗೋಸ್ಕರ ಸರಕಾರದವರು ಮಂಜೂರ ಮಾಡಿದ ಪುಸ್ತಕಗಳ ಪಟ್ಟಿಯನ್ನು ಎಲ್ಲ ಜನರ ಮಾಹಿತಿಗಾಗಿ ಕೆಳಗೆ ಕೊಟ್ಟಿರುತ್ತೇವೆ:—

ನಂಬರು.	ಪುಸ್ತಕದ ಹೆಸರು.	ಪುಸ್ತಕದ ಭಾಷೆಯು.	ಪುಸ್ತಕವು ಮಂಜೂರ ಆದ ಉದ್ದೇಶವು.	ಕಿಮ್ಮತ್ತು.			ಬರಾ.
	ಗುರುರಾವ ಎಮ್. ಬಿರೂರ.						
೧	ಮಲೆನಾಡು ಜ್ವರ ಮತ್ತು ಅದರ ನಿವಾರಣೋಪಾಯಗಳು.	ಕನ್ನಡ	ಕನ್ನಡ ಪ್ರಾಥಮಿಕ ಶಾಲೆಗಳಲ್ಲಿ ಇನಾಮಿಗಾಗಿ ಹಾಗು ಲಾಯಬ್ರರಿಯ ಉಪಯೋಗಕ್ಕಾಗಿ.	೦	೦	೯	
	ಮಗಡಾಳ ವ್ಹಿ. ಎನ್. ಧಾರವಾಡ.						
೨	ಹಿಂದುಸ್ತಾನದ ಭೂಗೋಲ,	ಸದರ	ಕನ್ನಡ ಟ್ರೇನಿಂಗ ಕಾಲೇಜಗಳಲ್ಲಿಯೂ ಪ್ರಾಥಮಿಕ ಶಾಲೆಗಳಲ್ಲಿಯೂ ಲಾಯಬ್ರರಿಗಳಲ್ಲಿಯೂ ಉಪಯೋಗಿಸುವದಕ್ಕಾಗಿ.	೦	೮	೦	
	ಲ್ಯಾಂಗಮನ್ಸ ಗ್ರೀನ ಲ್ಯಾಂಡ ಕಂಪನಿ ಮುಂಬಯಿ.						
೩	ಹಿಂದುಸ್ತಾನಕೆ ತಾರೀಖಿ ಕಹಾನಿಯಾನ- ಸಾಲಾ ಸೊಹನಲಾಲ ಎಂಬವರು ಬರೆದದ್ದು.	ಉರ್ದು	ಉರ್ದು ಶಾಲೆಗಳಲ್ಲಿ ಇನಾಮಿಗಾಗಿ ಹಾಗು ಲಾಯಬ್ರರಿಯ ಉಪಯೋಗಕ್ಕಾಗಿ.	೦	೬	೦	

ಶಾಲಾಪತ್ರಿಕೆ

ಪ್ರಸ್ತಕ ಸಂಖ್ಯೆ. | ಡಿಸೆಂಬರ ೧೯೧೪. | ಸಂಪುಟ ೧೨

ಸ್ಫುಟ ವಿಷಯಗಳು

೧. ಮನುಷ್ಯಶರೀರದ ಬಗ್ಗೆ ಕೆಲವು ಸಂಗತಿಗಳು.

ಹೊಸದಾಗಿ ಹುಟ್ಟಿದ ಗಂಡು ಕೂಸಿನ ಶರೀರವು ೧೪ ಇಂಚು ಉದ್ದವಾಗಿದ್ದು ೬-೭ ಪೌಂಡು ಭಾರವುಳ್ಳದ್ದಿರುವದು. ಹೆಣ್ಣು ಕೂಸಿನ ಭಾರವು ಇದಕ್ಕೂ ಸ್ವಲ್ಪ ಕಡಿಮೆಯಿರುವದು. ದೊಡ್ಡವರ ಶರೀರದ ಭಾರವು ಸುಮಾರು ೧೪೫ ಪೌಂಡು ಇದ್ದು, ಉದ್ದವು ಸರಾಸರಿ ೫ ಫೂಟು ೬ ಇಂಚು ಇರುವದು. ಮನುಷ್ಯನ ಉದ್ದಕ್ಕಿಂತ ಅವನ ಅಸ್ಥಿಸಂಜರದ ಉದ್ದವು ೧ ಇಂಚು ಕಡಿಮೆಯಿರುವದು. ಅದರ ಭಾರವು ೧೪ ಪೌಂಡು ಇದ್ದು, ಅದರಲ್ಲಿ ಒಟ್ಟು ೨೧೪ ಬೇರೆ ಬೇರೆ ಎಲುವುಗಳಿರುವವು. ಮೈಯೊಳಗಿನ ಒಟ್ಟು ರಕ್ತದ ಭಾರವು ೧೨ ಪೌಂಡು ಇರುವದು; ಮತ್ತು ಅದರಲ್ಲಿ ಸುಮಾರು ೬೫ ಔಂಸು ರಕ್ತವು ರಕ್ತಾಶಯದ ಪ್ರತಿಯೊಂದು ಸ್ಪಂದನದಲ್ಲಿ ಅದರಲ್ಲಿ ಹರಿಯುತ್ತಿರುವದು. ಈ ಸ್ಪಂದನಗಳು ದೊಡ್ಡವರಲ್ಲಿ ಪ್ರತಿಯೊಂದು ನಿನಿಟಿಗೆ ೬೫ ರಿಂದ ೭೫ ಇರುವವು; ಮತ್ತು ಇವು ನಾಡಿಯಲ್ಲಿ ಗೊತ್ತಾಗುವವು. ರಕ್ತಾಶಯವು ಎದೆಯ ಎಡಗಡೆ ಇರುವದು. ಅದು ಸುಮಾರು ಒಂದು ಮುಷ್ಟಿಯಷ್ಟು ಇರುವದು. ಮತ್ತು ಅದರ ಭಾರವು ೯-೧೧ ಔಂಸು ಇರುವದು. ಅದರಲ್ಲಿ ಬೇರೆ ಬೇರೆ ನಾಲ್ಕು ಖಾನೆಗಳಿರುವವು. ಅವುಗಳ ಆಕುಂಚನ ಪ್ರಸರಣಗಳಿಂದ ರಕ್ತವು ರಕ್ತನಾಹಿನಿಗಳಿಂದ ಎಲ್ಲ ಶರೀರಕ್ಕೆ ಮುಟ್ಟಿ ಮಲಿನರಕ್ತವು ಎದೆಯ ಬಲಗಡೆಗಿರುವ ಫುಪ್ಫುಸದಲ್ಲಿ ಶುದ್ಧವಾಗುವದು. ಈ ಫುಪ್ಫುಸದಲ್ಲಿ ೧೭,೪೦,೦೦,೦೦೦ ಸೂಕ್ಷ್ಮಕೋಶಗಳಿರುವವು. ಅವು ಉಸಿರನ್ನೆಳೆದುಕೊಂಡಾಗ ಸ್ವಚ್ಛ ಹವೆಯಿಂದ ತುಂಬಲು, ಆ ಹವೆಯೊಳಗಿನ ಆಕ್ಸಿಜನ್ ವಾಯುವಿನಿಂದ ಅದರಲ್ಲಿ ಹುಯ್ಯು

ಇತ್ತಿತ್ತಲಾಗಿ ಅಪಚನ, ಹೃದ್ರೋಗ ಮೊದಲ

೭. ಫಲಾಹಾರ. ದವುಗಳ ಮೇಲೆ ಫಲಾಹಾರವು ಉಪಯುಕ್ತ
ವಾದ ಉಪಾಯವೆಂದು ಎಷ್ಟೋ ಪಾಶ್ಚಿಮಾತ್ಯ
ವೈದ್ಯಶಾಸ್ತ್ರಜ್ಞರ ಅಭಿಪ್ರಾಯವಾಗಿರುತ್ತದೆ. ಆದ ಕಾರಣ ಆ ಸಂಬಂಧ
ವ ಕೆಲವು ವಿಚಾರಗಳನ್ನು ಇಲ್ಲಿ ಕೊಟ್ಟಿದೆ.

ಸದ್ಯಕ್ಕೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿಯೂ ಊರುಗಳಲ್ಲಿಯೂ
ಜನರು ಅಜೀರ್ಣದಿಂದ ನಾನಾಪ್ರಕಾರದ ಬೇನೆಗಳಿಗೆ ಗುರಿಯಾಗಿರುವ
ರು. ಅಜೀರ್ಣಪರಿಹಾರಕ್ಕಾಗಿ ನಿರಂತರವಾಗಿ ಔಷಧಗಳನ್ನು ಸೇವಿಸ
ುತ್ತಿರುತ್ತಾರೆ. ಸರ್ವಸಾಧಾರಣವಾದ ಪಾಚಕ ಔಷಧಗಳಲ್ಲಿ; ಕರಳ
ಶನ್ನ ಕೆಲಸವನ್ನು ಚನ್ನಾಗಿ ಮಾಡಿ, ಉಂಡ ಅನ್ನವು ಜೀರ್ಣವಾಗುವ
ಕೆ ಮಾಡುವ ಗುಣವಿರುತ್ತದೆ. ಆದರೆ ಇಂಥ ಔಷಧಗಳನ್ನು ತಕ್ಕೊ
ಳ್ಳುವದಕ್ಕಿಂತ ಫಲಾಹಾರವನ್ನು ಮಾಡುವದು ಹೆಚ್ಚು ಪ್ರಯೋಜನಕ
ನೆಂದು ಅನುಭವದಿಂದ ಗೊತ್ತಾಗಿದೆ. ಸಕ್ಕರೆನಿಂಬೇಹಣ್ಣು, ಕಿತ್ತಳೆ
ಸಾಳೆ, ಸ್ಟ್ರಾಬೇರಿ, ರಾಸಬೇರಿ, ದಾಳಿಂಬ ಮೊದಲಾದ ಹಣ್ಣುಗಳಲ್ಲಿ
ಅಜೀರ್ಣಹಾರಕ ಗುಣವಿರುತ್ತದೆ. ಈ ಹಣ್ಣುಗಳಿಗಿಂತ ಅಂಜೂರ
ಖಿಸನಿಸ, ಖಿಜ್ಜೂರ ಮೊದಲಾದ ಹಣ್ಣುಗಳಲ್ಲಿ ಈ ಗುಣವು ವಿಶೇಷ
ವಾಗಿರುವದು ಅಜೀರ್ಣದ ಮೇಲೆ ರಾಮಬಾಣ ಔಷಧವೆಂದು ವರ್ತ
ಮಾನಪತ್ರಗಳಲ್ಲಿ ನೋಟೀಸು ಕೊಟ್ಟು, ನಾನಾಪ್ರಕಾರದಿಂದ ಸ್ತುತಿ
ಸ್ತೋತ್ರಗಳನ್ನು ಮಾಡಿರುವ ಪ್ರತಿಯೊಂದು ಬಗೆಯ ಔಷಧದಲ್ಲಿ ಆ
ಯಾ ಹಣ್ಣಿನ ಅರ್ಕವನ್ನು ಹೆಚ್ಚು ಪ್ರಮಾಣದಿಂದ ಮಿಶ್ರ ಮಾಡಿರು
ತ್ತಾರೆ. ಆವ ಕಾರಣ ಅಜೀರ್ಣ ರೋಗದಿಂದ ಪೀಡಿತರಾದವರು ಆ
ಹಣ್ಣನ್ನಾಗಲಿ, ಈ ಹಣ್ಣಿನ ರಸವನ್ನಾಗಲಿ ಸೇವಿಸುವದು ಹಿತಕರವು.

ಹೃದಯದ ಕಾರ್ಯವು ಅತಿಸುಲಭವಾಗಿ ನಡೆಯುವಂತೆ ಮಾಡ
ುವ ಗುಣವು ಹಣ್ಣಿನಲ್ಲಿ ಹೆಚ್ಚು ಪ್ರಮಾಣದಿಂದ ಇರುತ್ತದೆ. ಹಣ್ಣಿನಲ್ಲಿ
ರುವ ಆಮ್ಲ-ಕ್ಷಾರಗಳ ತತ್ವಗಳು ಹೃದಯದ ಕಾರ್ಯದಲ್ಲಿ ಒಂದ
ಬಗೆಯ ಸಂಚಲನ ಶಕ್ತಿಯನ್ನು ಹುಟ್ಟಿಸುತ್ತವೆ; ಮತ್ತು ಹಣ್ಣಿನೊಳಗಿನ
ಶರ್ಕರಾಂಶವನ್ನು ಸಹಜವಾಗಿ ಶೋಷಣಮಾಡುವ ಶಕ್ತಿಯು ಹೃದಯ
ದಲ್ಲಿ ಇರುವದು.

ಅಜೀರ್ಣರೋಗದಿಂದ ಪೀಡಿತರಾದವರು ಎಂಟು ಹತ್ತು ದಿವಸಗಳವರೆಗೆ ಸ್ವಲ್ಪ ಸ್ವಲ್ಪ ತಾಜಾ ಹಣ್ಣುಗಳನ್ನು ತಿನ್ನುತ್ತಹೋದರೆ, ಅವರ ಮನಸಿಗೆ ವಿಶ್ರಾಂತಿಯಾಗುವದಲ್ಲದೆ, ಪಚನಶಕ್ತಿಯು ಪ್ರಜ್ವಲಿತವಾಗುತ್ತದೆ. ನಮ್ಮ ಅನ್ನಾಶಯದಲ್ಲಿ ಒಂದು ಪ್ರಕಾರದ ರಸವಿರುವದು. ಆ ರಸವಿಂದ ನಾವು ಉಂಡ ಅನ್ನವು ಪಚನವಾಗುವದು. ಫಲಾಹಾರದಿಂದ ಈ ಪಾಚಕ ರಸದೊಳಗಿನ ದೂಷಿತ ತತ್ವಗಳು ನಾಶವಾಗುವವು.

ಹಣ್ಣುಗಳಲ್ಲಿ ರೇಚನಶಕ್ತಿಯೂ ಇರುವದು. ಅದು ಕರಳಿನೊಳಗಿನ ದೂಷಿತವಾದ ಮಲವನ್ನು ಹೊರಗೆ ದೂಡುತ್ತದೆ. ಕರುಳಿನಲ್ಲಿ ಮಲಸಂಚಯವಾಗುತ್ತಿದ್ದರೆ ಅದು ವಿಸರ್ಜನಹೊಂದಿ ಮಲಾಶವು ಸ್ವಚ್ಛವಾಗಲಿಕ್ಕೆ ಫಲಾಹಾರ ಮಾಡುವದು ಹೆಚ್ಚು ಪ್ರಯೋಜನಕರವಾದದ್ದು. ಇದಕ್ಕಾಗಿ ಕಿತ್ತಳೆ, ಖರಬುಜ ಹಣ್ಣುಗಳು ಹೆಚ್ಚು ಯೋಗ್ಯವಾದವುಗಳು. ಈ ಹಣ್ಣುಗಳ ರಸಗಳು ಮಲಾಶಯದೊಳಗಿನ ಮಲವನ್ನು ಹೊರಗೆ ದೂಡುವ ಕಾರ್ಯವನ್ನು ಮಾಡುವದಲ್ಲದೆ, ಅದರ ಕಾರ್ಯಕ್ಕೆ ಸಹಾಯವನ್ನು ಮಾಡುವವು. ಮತ್ತು ಮನಸ್ಸಿನಲ್ಲಿ ಪ್ರಸನ್ನತೆಯನ್ನು ಹುಟ್ಟಿಸಿ ಕಾರ್ಯೋತ್ಸಾಹವನ್ನುಂಟು ಮಾಡುವವ.

ಹುಳಿ ಹಣ್ಣುಗಳೂ, ರೇಚಕಗುಣವಿರುವ ಹಣ್ಣುಗಳೂ, ದೂಷಿತ ರಕ್ತವನ್ನು ಶುದ್ಧಮಾಡುವವು; ಹುರುಕು, ಖಜ್ಜಿ, ಹುಣ್ಣು ಮೊದಲಾದ ಚರ್ಮರೋಗಗಳನ್ನು ತ್ವರಿತವಾಗಿ ನಾಶಗೊಳಿಸುವವು. ಮಿತಿಮೀರಿದ ಮಾಂಸಾಶನದಿಂದ ರುಧಿರವಿಕೃತಿಯು ಉತ್ಪನ್ನವಾಗುವದು. ಈ ವಿಕಾರವು ಲಿಂಬಿಹಣ್ಣು, ಖರಬುಜ ಹಣ್ಣು ಇವುಗಳ ಸೇವನದಿಂದ ದೂರವಾಗುತ್ತದೆ.

ವಿದ್ಯಾರ್ಥಿಗಳು, ಕಾನೂನು, ಶಿಕ್ಷಕರು ಮೊದಲಾದವರು ಒತ್ತಟ್ಟಿಗೆ ಕೂತು ಕೆಲಸ ಮಾಡಬೇಕಾಗುತ್ತದೆ. ಇಂಥವರ ಶರೀರದಲ್ಲಿ ಒಂದು ಪ್ರಕಾರದ ದೂಷಿತ ಪದಾರ್ಥವು ಉತ್ಪನ್ನವಾಗುತ್ತಿರುತ್ತದೆ. ಆ ಪದಾರ್ಥದಿಂದ ಅವರ ಪಚನಶಕ್ತಿಯು ಕುಗ್ಗುತ್ತದೆ. ಅದರಿಂದ ಅವರ ಕರುಳು ತನ್ನ ಕೆಲಸವನ್ನು ಚನ್ನಾಗಿ ಮಾಡುವದಿಲ್ಲ. ಹೃದಯದಲ್ಲಿ ಕಾವು ಹೆಚ್ಚಾಗುವದು. ಮಲವಿಸರ್ಜನದ ಕಾರ್ಯವು ಚನ್ನಾಗಿ ಸಾಗುವದಿಲ್ಲ. ಅದರಿಂದ ಅವರ ಶರೀರದಲ್ಲಿ ಅಪರಿಪಕ್ವವಾದ ಅನ್ನವು

ಸಂಚಾರವಾಗುತ್ತದೆ. ಈ ಮೇರೆಗೆ ಅವನ ಶರೀರದಲ್ಲಿ ರೋಗವು ಉತ್ಪನ್ನವಾಗಿ ಮಿದುಳಿನ ಕಾರ್ಯವು ನಿಂತು ಹೋಗುವದು; ಯಾವಾಗಲೂ ತಲೆಯ ಶೂಲೆಯು ಏಳುವದು. ಸರ್ವಾಂಗವು ಸೊಯ್ಯಹತ್ತುವದು. ಉತ್ಸಾಹವು ನಷ್ಟವಾಗಿ ಮೈಯಲ್ಲಿ ಆಲಸ್ಯವು ಸೇರುವದು. ಈ ವಿಕಾರಗಳು ಆಗದಿರಲಿಕ್ಕೆ ತಾಜಾ ಹಣ್ಣುಗಳ ಸೇವನ ಮಾಡುವದೊಂದೇ ಶ್ರೇಷ್ಠವಾದ ಉಪಾಯವು. ಇಂಥ ರೋಗಿಗಳಿಗೆ ಒಂದೆರಡು ವಾರಗಳವರೆಗೆ ಹಣ್ಣುಗಳನ್ನು ಹೆಚ್ಚು ಪ್ರಮಾಣದಿಂದ ತಿಂದು, ಹೆಚ್ಚು ನೀರು ಕುಡಿಯಲಿಕ್ಕೆ ಹೇಳಬೇಕು. ಅದರಿಂದ ಅವನ ಜಠರದೊಳಗಿನ ಅವರಿಪಕ್ವ ಅನ್ನವೂ ಮಲವೂ ಹೊರಟು ಹೋಗಿ, ಮನಸಿಗೆ ವಿಶ್ರಾಂತಿಯೆನಿಸುವದು.

ಫಲಾಹಾರದಿಂದ, ವಿಶೇಷವಾಗಿ ಕಿತ್ತಳೆಹಣ್ಣುಗಳ ಸೇವನದಿಂದ, ಶರೀರದ ಕಾಂತಿಯು ಹೆಚ್ಚಾಗುವದು. ವಿಶೇಷವಾಗಿ ಫಲಾಹಾರವನ್ನು ಮಾಡುವವನ ಮೋರೆಯ ಮೇಲೆ ಯಾವಬಗೆಯ ಬಕ್ಕೆಗಳೂ ಏಳುವದಿಲ್ಲ; ಹಾಗು ಕಲೆಗಳು ಬೀಳುವದಿಲ್ಲ.

ರೋಗಿಯು ಶರೀರದಲ್ಲಿ ರಕ್ತದ ಕೊರತೆಯಾಗಿದ್ದು, ಶರೀರವೆಲ್ಲ ಒಣಗಿ ಹೋಗಿದ್ದರೆ, ಫಲಾಹಾರದಿಂದ ಅವನ ಮೈಯಲ್ಲಿ ಹೊಸ ರಕ್ತವು ಉತ್ಪನ್ನವಾಗಿ ಅವನು ತೇಜಸ್ವಿಯೂ ಸಶಕ್ತನೂ ಆಗುವನು. ದ್ರಾಕ್ಷಿಯ ಹಣ್ಣಿನಲ್ಲಿ ಈ ಗುಣವು ವಿಶೇಷವಾಗಿರುವದು. "ದ್ರಾಕ್ಷಾವ್ಯೂತ" "ಆತಂಕನಿಗ್ರಹ" "ವಿಷ್ಣುಭಕ್ತಿವರ್ಧಕ ಗುಟಿಕಾ" ಮುಂತಾದ ಔಷಧಗಳನ್ನು ಸೇವಿಸಿ ಪುಷ್ಟಿಯನ್ನೂ ತುಷ್ಟಿಯನ್ನೂ ಹೊಂದಲಪೇಕ್ಷಿಸುವವನು ನಾವು ಹೇಳುವ ಮಾತಿನ ಅನುಭವವನ್ನು ತಕ್ಕೊಳ್ಳಬೇಕೆಂದು ಆಗ್ರಹದ ಸೂಚನೆಯನ್ನು ಮಾಡುತ್ತೇವೆ.

ವಾತವಿಕಾರವಿದ್ದವನು ಫಲಾಹಾರ ಮಾಡುವದು ಇಷ್ಟವು. ಇಂಥವನು ವಿಶೇಷವಾಗಿ ಹುಳಿ ಹಣ್ಣುಗಳನ್ನು ಸೇವಿಸುವದರಿಂದ ವಾತವಿಕಾರವು ನಷ್ಟವಾಗಿ ಶಕ್ತಿಯು ಪ್ರಾದುರ್ಭಾವವಾಗುವದು. ಈ ರೋಗಿಗಳು ದಿನಾಲು ಕಿತ್ತಳೆಹಣ್ಣಿನ ಅಥವಾ ಲಿಂಬೀಹಣ್ಣಿನ ಎರಡು ಪೇಲೆ ರಸವನ್ನು ತಕ್ಕೊಳ್ಳುವದರಿಂದ ವಾತರೋಗವು ಸಂಪೂರ್ಣವಾಗಿ ನಾಶ

ವಾಗುವದು. ಅಶಕ್ತತೆಯು ಮೇಲೆ ಫಲಾಹಾರವು ರಾಮಬಾಣ ಔಷಧ ವೆಂದು ಹಿಂದೆ ಹೇಳಿದ್ದೇವೆ. ಅದಕ್ಕಾಗಿ ಅಂಗುಲದ ಹಣ್ಣನ್ನು ಉಪ ಯೋಗಿಸುವದು ಹೆಚ್ಚು ಹಿತಕರವು. ಯಾಕಂದರೆ ಅದರಲ್ಲಿ ಶರ್ಕ ರಾಂಶವು ಹೆಚ್ಚಿದ್ದು ಅದು ಬೇಗ ಪಚನವಾಗುವದರಿಂದ, ಶರೀರದ ಎಲ್ಲ ಭಾಗಗಳಿಗೂ ಮುಟ್ಟಿ, ಹೋದ ಶಕ್ತಿಯು ಪುನಃ ಬೇಗ ಪ್ರಾಪ್ತವಾಗುವದು.

ಮಾಂಸಾಶನವು ಚಿಕ್ಕಮಕ್ಕಳಿಗೆ ಅಪಾಯಕಾರಕವಾಗಿರುತ್ತದೆ. ಅದನ್ನು ಹೆಚ್ಚಾಗಿ ಸೇವಿಸುವದರಿಂದ ದೊಡ್ಡವರಿಗೂ ಕೂಡ ಹಾನಿಯಾ ಗುತ್ತದೆ. ಆದರೆ, ಫಲಾಹಾರವು ಆಬಾಲವೃದ್ಧರಿಗೆ ಯೋಗ್ಯವಾಗಿರುತ್ತದೆ. ಸಣ್ಣ ಹುಡುಗರ ಸಲುವಾಗಿ ಪೇಟೆಯಲ್ಲಿ ಮಾರಾಟವಾಗುವ "ಬಾಲಾ ಮೃತ" "ಬಾಲಸುಧಾ" ಎಂಬ ಔಷಧಗಳಲ್ಲಿ ಬೇರೆ ಬೇರೆ ಪ್ರಕಾರದ ಹಣ್ಣುಗಳನ್ನು, ಅವುಗಳ ರಸವನ್ನು ಕೂಡಿಸಿರುತ್ತಾರೆ. ಚಿಕ್ಕಮಕ್ಕಳಿಗೆ ಮಿಠಾಯಿಯನ್ನು ತಿನ್ನಲಿಕ್ಕೆ ಕೊಡುವದರ ಬದಲಾಗಿ ಹಣ್ಣು ಹಂಪಲ ಗಳನ್ನು ಕೊಡುವದರಿಂದ ಮಿಠಾಯಿಯಿಂದ ಆಗುವ ಜಂತಿನ ವಿಕಾರಗಳು ಆಗದೆ, ಹಣ್ಣುಗಳಿಂದ ಕಾಂತಿಶಕ್ತಿಗಳು ಅಭಿವೃದ್ಧಿಯಾಗುವದಲ್ಲದೆ, ಪ್ರಕೃತಿಯು ಚನ್ನಾಗಿ ಉಳಿಯುವದು.

ನಿತ್ಯದಲ್ಲಿ ಊಟದ ಕಾಲಕ್ಕೆ ಫಲಾಹಾರ ಮಾಡುವ ನಿಯಮವನ್ನು ಇಟ್ಟರೆ, ರೋಗಗಳ ಪ್ರತೀಕಾರವಾಗುವದಲ್ಲದೆ, ಶರೀರಪ್ರಕೃತಿಯು ನಿರೋಗಿಯಾಗಿ ಉಳಿಯುತ್ತದೆ. ಯುರೋಪಿಯನ್ನರಲ್ಲಿ ಫಲಾಹಾರದ ನಡತೆಯು ವಿಶೇಷವಾಗಿರುವದು. ಅದರಿಂದಲೇ ಅವರು ನಿರೋಗಿ ಗಳೂ ಸಶಕ್ತರೂ ಆಗಿರುವರು. ಈ ಸತ್ಯ ತತ್ವವನ್ನು ಅರಿತುಕೊಂಡು ಅದನ್ನು ಅವಲಂಬಿಸದೆ, ಅನುಕರಣಪ್ರಿಯರಾದ ನಮ್ಮ ಪಾಶ್ಚಾತ್ಯ ಸಂ ಸ್ಕೃತಿಯ ಜನರು ಅವರ ಚಹಾ, ಕಾಫಿ, ಮದ್ಯ, ಧೂಮ್ರಪಾನ, ಮತ್ಸ್ಯ ಮಾಂಸ ಮುಂತಾದವುಗಳ ಸೇವನದಿಂದ ಅವರಂತೆ ಸುದೃಢರೂ, ಸಶಕ್ತ ರೂ ಆಗಲಿಕ್ಕೆ ಅಪೇಕ್ಷಿಸುತ್ತಾರೆ. ಆದರೆ ಅವರು, ಶಕ್ತಿಯು ಇಂಥ ಮಾದಕ ಪೇಯಗಳಿಂದಲೂ, ಔಷಧದ ಬಾಟಲಿಗಳಿಂದಲೂ ಪ್ರಾಪ್ತವಾ ಗದೆ, ಯೋಗ್ಯವಾದ ಆಹಾರವಿಹಾರಗಳ ನಿಯಮಿತ ಸೇವನದಿಂದಲೇ ಪ್ರಾಪ್ತವಾಗುವದೆಂಬ ಸಂಗತಿಯನ್ನು ಲಕ್ಷದಲ್ಲಿಡಬೇಕಾಗಿದೆ.

ಹಣ್ಣುಗಳ ಸಂಗಡ ಹಾಲುತುಪ್ಪಗಳನ್ನು ತಕ್ಕೊಳ್ಳುವದರಿಂದ ಕಾಂತಿಶಕ್ತಿಗಳು ಬೆಳೆಯುವವಲ್ಲದೆ ಹಸಿವೆಯು ಚನ್ನಾಗಿ ಆಗುವದು. ಫಲಾಹಾರ ಮಾಡುವವರು ಮಾಂಸಾಹಾರ ಮಾಡುವವರಿಗಿಂತ ಹೆಚ್ಚು ಬುದ್ಧಿವಂತರೂ ಸುವೃಢರೂ ಆಗುವರೆಂದು ಪಾಶ್ಚಾತ್ಯರಾಷ್ಟ್ರವರು ಅನುಭವದಿಂದ ನಿರ್ಣಯಿಸಿದ್ದಾರೆ; ಮತ್ತು ಅವರು ಇತ್ತಿತ್ತಲಾಗಿ ಮಾಂಸಾಶನವನ್ನು ಬಿಟ್ಟುಬಿಡಹತ್ತಿದ್ದಾರೆ. ಹೀಗಿರಲು, ನಮ್ಮ ದೇಶದಲ್ಲಿ ಮಾತ್ರ ಅದರ ಪ್ರಸಾರವು ಒಳ್ಳೇ ಭರದಿಂದ ಆಗುತ್ತಿರುವದನ್ನು ನೋಡಿದರೆ ಸಖೇದಾಶ್ಚರ್ಯವಾಗುತ್ತದೆ.

---

೩. ಶರೀರದ ಮೇಲೆ ಮಾನಸಿಕ ಕ್ಷೋಭದಿಂದಾಗುವ ಪರಿಣಾಮವು.

ಶರೀರಕ್ಕೂ ಮನಸಿಗೂ ಅತಿ ನಿಕಟಸಂಬಂಧವಿರುವದು. ರೋಗಿಗಳಿಗೆ ಯಾವಾಗಲು ಧೈರ್ಯವನ್ನು ಹೇಳುತ್ತಿರಬೇಕೆಂಬ ನಿಯಮ ಉಂಟು. ಆಂಜಿಕೆಯಿಂದ ಒಮ್ಮೊಮ್ಮೆ ಸರ್ವಾಂಗವು ಬೆವರುವದು ಈಸುವವನು ಆಂಜಿದರೆ ಅವನ ಕೈಕಾಲುಗಳು ಸ್ತಬ್ಧವಾಗುವವು. ಅವನು ಈಸುವ ಕೆಲಸದಲ್ಲಿ ಒಳ್ಳೇ ಪ್ರವೀಣನಾದಾಗ್ಯೂ ಆಂಜಿದರೆ ಮುಳುಗುವ ಸಂಭವವು ವಿಶೇಷವಾಗಿರುವದು

ಶರೀರಕ್ಕೂ ಮನಸಿಗೂ ಇರುವ ಈ ಸಂಬಂಧವು ಪಶುಗಳಲ್ಲಿ ಸಹ ಕಂಡುಬರುವದು. ಅಮೇರಿಕಾಖಂಡದಲ್ಲಿ ಈ ಸಂಬಂಧದ ಕೆಲವು ಪ್ರಯೋಗಗಳನ್ನು ಮಾಡಿ ನೋಡಿರುತ್ತಾರೆ.

ಕಾನ್ಸಸ ಸಂಸ್ಥಾನದ ಒಂದು ಒಕ್ಕಲತನದ ಕಾಲೇಜದಲ್ಲಿ ಆಕಳ ಮೇಲೆ ಈ ಪ್ರಯೋಗವು ಮಾಡಲ್ಪಟ್ಟಿತು. ಆಕಳನ್ನು ಬಹು ಪ್ರೇಮಪೂರ್ವಕವಾಗಿ ನಡಿಸಿಕೊಂಡರೆ ಅದು ಹಿಂಡುವ ಹಾಲಿನ ಮೇಲೆ ಏನು ಪರಿಣಾಮವಾಗುವದೆಂಬದೂ ಅದನ್ನು ಒಳ್ಳೇ ನಿರ್ದಯತನದಿಂದ ನಡಿಸಿಕೊಂಡರೆ ಆಗುವ ಪರಿಣಾಮವೂ ಪರೀಕ್ಷಿಸಿ ನೋಡಲ್ಪಟ್ಟಿತು.

ಫಾಗುವದು. ಅಶಕ್ತತೆಯು ಮೇಲೆ ಫಲಾಹಾರವು ರಾಮಬಾಣ ಔಷಧ ವೆಂದು ಹಿಂದೆ ಹೇಳಿದ್ದೇವೆ. ಅದಕ್ಕಾಗಿ ಅಂಗುರದ ಹಣ್ಣಿನ್ನು ಉಣ್ಣ ಯೋಗಿಸುವದು ಹೆಚ್ಚು ಹಿತಕರವು. ಯಾಕೆಂದರೆ ಅದರಲ್ಲಿ ಶರ್ಕ ರಾಂಶವು ಹೆಚ್ಚಿದ್ದು ಅದು ಬೇಗ ಪಚನವಾಗುವದರಿಂದ, ಶರೀರದ ಎಲ್ಲ ಭಾಗಗಳಿಗೂ ಮುಟ್ಟಿ, ಹೋದ ಶಕ್ತಿಯು ಪುನಃ ಬೇಗ ಪ್ರಾಪ್ತವಾಗುವದು.

ಮಾಂಸಾಶನವು ಚಿಕ್ಕಮಕ್ಕಳಿಗೆ ಅಪಾಯಕಾರಕವಾಗಿರುತ್ತದೆ. ಅದನ್ನು ಹೆಚ್ಚಾಗಿ ಸೇವಿಸುವದರಿಂದ ದೊಡ್ಡವರಿಗೂ ಕೂಡ ಹಾನಿಯಾ ಗುತ್ತದೆ. ಆದರೆ, ಫಲಾಹಾರವು ಆಬಾಲವೃದ್ಧರಿಗೆ ಯೋಗ್ಯವಾಗಿರುತ್ತದೆ. ಸಣ್ಣ ಹುಡುಗರ ಸಲುವಾಗಿ ಪೇಟೆಯಲ್ಲಿ ಮಾರಾಟವಾಗುವ "ಬಾಲಾ ಮೃತ" "ಬಾಲಸುಧಾ" ಎಂಬ ಔಷಧಗಳಲ್ಲಿ ಬೇರೆ ಬೇರೆ ಪ್ರಕಾರದ ಹಣ್ಣುಗಳನ್ನೂ, ಅವುಗಳ ರಸವನ್ನೂ ಕೂಡಿಸಿರುತ್ತಾರೆ. ಚಿಕ್ಕಮಕ್ಕಳಿಗೆ ಮಿಠಾಯಿಯನ್ನು ತಿನ್ನಲಿಕ್ಕೆ ಕೊಡುವದರ ಬದಲಾಗಿ ಹಣ್ಣು ಹಂಪಲ ಗಳನ್ನು ಕೊಡುವದರಿಂದ ಮಿಠಾಯಿಯಿಂದ ಆಗುವ ಜಂತಿನ ವಿಕಾರಗಳು ಆಗದೆ, ಹಣ್ಣುಗಳಿಂದ ಕಾಂತಿಶಕ್ತಿಗಳು ಅಭಿವೃದ್ಧಿಯಾಗುವದಲ್ಲದೆ, ಪ್ರಕೃ ತಿಯು ಚನ್ನಾಗಿ ಉಳಿಯುವದು.

ನಿತ್ಯದಲ್ಲಿ ಊಟದ ಕಾಲಕ್ಕೆ ಫಲಾಹಾರ ಮಾಡುವ ನಿಯಮವನ ನ್ನು ಇಟ್ಟರೆ, ರೋಗಗಳ ಪ್ರತೀಕಾರವಾಗುವದಲ್ಲದೆ, ಶರೀರಪ್ರಕೃತಿಯು ನಿರೋಗಿಯಾಗಿ ಉಳಿಯುತ್ತದೆ. ಯುರೋಪಿಯನ್ನರಲ್ಲಿ ಫಲಾಹಾರದ ನಡತೆಯು ವಿಶೇಷವಾಗಿರುವದು. ಅದರಿಂದಲೇ ಅವರು ನಿರೋಗಿ ಗಳೂ ಸಶಕ್ತರೂ ಆಗಿರುವರು. ಈ ಸತ್ಯ ತತ್ವವನ್ನು ಅರಿತುಕೊಂಡು ಅದನ್ನು ಅವಲಂಬಿಸದೆ, ಅನುಕರಣಪ್ರಿಯರಾದ ನಮ್ಮ ಪಾಶ್ಚಾತ್ಯ ಸಂ ಸ್ಕೃತಿಯ ಜನರು ಅವರ ಚಹಾ, ಕಾಫಿ, ಮದ್ಯ, ಧೂಮ್ರಪಾನ, ಮತ್ಸ್ಯ ಮಾಂಸ ಮುಂತಾದವುಗಳ ಸೇವನದಿಂದ ಅವರಂತೆ ಸುದೃಢರೂ, ಸಶಕ್ತ ರೂ ಆಗಲಿಕ್ಕೆ ಅಪೇಕ್ಷಿಸುತ್ತಾರೆ. ಆದರೆ ಅವರು, ಶಕ್ತಿಯು ಬಂಥ ವಾದಕ ಪೇಯಗಳಿಂದಲೂ, ಔಷಧದ ಬಾಟಲಿಗಳಿಂದಲೂ ಪ್ರಾಪ್ತವಾ ಗದೆ, ಯೋಗ್ಯವಾದ ಆಹಾರವಿಹಾರಗಳ ನಿಯಮಿತ ಸೇವನದಿಂದಲೇ ಪ್ರಾಪ್ತವಾಗುವದೆಂಬ ಸಂಗತಿಯನ್ನು ಲಕ್ಷದಲ್ಲಿಡಬೇಕಾಗಿದೆ.

ಹಣ್ಣುಗಳ ಸಂಗಡ ಹಾಲುತುಪ್ಪಗಳನ್ನು ತಕ್ಕೊಳ್ಳುವದರಿಂದ ಕಾಂತಿಶಕ್ತಿಗಳು ಬೆಳೆಯುವವಲ್ಲದೆ ಹಸಿವೆಯು ಚನ್ನಾಗಿ ಆಗುವದು. ಫಲಾಹಾರ ಮಾಡುವವನು ಮಾಂಸಾಹಾರ ಮಾಡುವವರಿಗಿಂತ ಹೆಚ್ಚು ಬುದ್ಧಿವಂತನೂ ಸುವ್ಯಥನೂ ಆಗುವನೆಂದು ಪಾಶ್ಚಾತ್ಯರಾಪ್ತಪ್ರವರು ಅನುಭವದಿಂದ ನಿರ್ಣಯಿಸಿದ್ದಾರೆ; ಮತ್ತು ಅವರು ಇತ್ತಿತ್ತಲಾಗಿ ಮಾಂಸಾಶನವನ್ನು ಬಿಟ್ಟುಬಿಡಹತ್ತಿದ್ದಾರೆ. ಹೀಗಿರಲು, ನಮ್ಮ ದೇಶದಲ್ಲಿ ಮಾತ್ರ ಅದರ ಪ್ರಸಾರವು ಒಳ್ಳೇ ಭರದಿಂದ ಆಗುತ್ತಿರುವದನ್ನು ನೋಡಿದರೆ ಸಖೇದಾಶ್ಚರ್ಯವಾಗುತ್ತದೆ.

---

೩. ಶರೀರದ ಮೇಲೆ ಮಾನಸಿಕ ಕ್ಷೋಭದಿಂದಾಗುವ ಪರಿಣಾಮವು.

ಶರೀರಕ್ಕೂ ಮನಸಿಗೂ ಅತಿ ನಿಕಟಸಂಬಂಧವಿರುವದು. ರೋಗಿಗಳಿಗೆ ಯಾವಾಗಲು ಧೈರ್ಯವನ್ನು ಹೇಳುತ್ತಿರಬೇಕೆಂಬ ನಿಯಮ ಉಂಟು. ಆಂಜಿಕೆಯಿಂದ ಒಮ್ಮೊಮ್ಮೆ ಸರ್ವಾಂಗವು ಬೆವರುವದು ಈಸುವವನು ಆಂಜಿದರೆ ಅವನ ಕೈಕಾಲುಗಳು ಸ್ತಬ್ಧವಾಗುವವು. ಅವನು ಈಸುವ ಕೆಲಸದಲ್ಲಿ ಒಳ್ಳೇ ಪ್ರವೀಣನಾದಾಗ್ಯೂ ಆಂಜಿದರೆ ಮುಳುಗುವ ಸಂಭವವು ವಿಶೇಷವಾಗಿರುವದು

ಶರೀರಕ್ಕೂ ಮನಸಿಗೂ ಇರುವ ಈ ಸಂಬಂಧವು ಪಶುಗಳಲ್ಲಿ ಸಹ ಕಂಡುಬರುವದು. ಅಮೇರಿಕಾಖಂಡದಲ್ಲಿ ಈ ಸಂಬಂಧದ ಕೆಲವು ಪ್ರಯೋಗಗಳನ್ನು ಮಾಡಿ ನೋಡಿರುತ್ತಾರೆ.

ಕಾನ್ಸಸ ಸಂಸ್ಥಾನದ ಒಂದು ಒಕ್ಕಲತನದ ಕಾಲೇಜದಲ್ಲಿ ಆಕಳ ಮೇಲೆ ಈ ಪ್ರಯೋಗವು ಮಾಡಲ್ಪಟ್ಟಿತು. ಆಕಳನ್ನು ಬಹು ಪ್ರೇಮ ಪೂರ್ವಕವಾಗಿ ನಡಿಸಿಕೊಂಡರೆ ಅದು ಹಿಂಡುವ ಪಾಲಿನ ಮೇಲೆ ಏನು ಪರಿಣಾಮವಾಗುವದೆಂಬದೂ ಅದನ್ನು ಒಳ್ಳೇ ನಿರ್ದಯತನದಿಂದ ನಡಿಸಿಕೊಂಡರೆ ಆಗುವ ಪರಿಣಾಮವೂ ಪರೀಕ್ಷಿಸಿ ನೋಡಲ್ಪಟ್ಟಿತು.

ಮೊದಲು ಮೂರು ಆಕಳುಗಳು ಪ್ರೀತಿಪೂರ್ವಕವಾಗಿ ನಡಿಸಿಕೊಳ್ಳಲ್ಪಟ್ಟವು. ಅದರಿಂದ ಅವು ಸರಾಸರಿಯಿಂದ ೧೪ ಶೇರು ಹಾಲು ಕೊಡುತ್ತಿದ್ದವು ಮತ್ತು ಅವುಗಳ ಹಾಲಿನಲ್ಲಿ ನೂರಕ್ಕೆ ೪.೩ ಭಾಗ ತುಪ್ಪದ ಅಂಶವು ಇತ್ತು. ತದನಂತರ ಅವೇ ಆಕಳುಗಳು ಮೈಯ್ಯುತ್ತಿರುವಾಗ ಅವುಗಳನ್ನು ಹೊಡೆಯುವದು, ಆಗಾಗ್ಗೆ ಅವುಗಳ ಮೈಮೇಲೆ ಏರಿ ಹೋಗುವದು, ಈ ಪ್ರಕಾರ ನಾನಾರೀತಿಯಿಂದ ತೊಂದರೆ ಕೊಡಹತ್ತಲು ೧೧॥ ಶೇರಿನಂತೆ ಹಾಲು ಕೊಡಹತ್ತಿದವು. ಮತ್ತು ಆ ಹಾಲಿನಲ್ಲಿ ನೂರಕ್ಕೆ ೩.೪ ಭಾಗ ಮಾತ್ರ ತುಪ್ಪದ ಅಂಶವು ಉಳಿಯಹತ್ತಿತು.

ಇದೇ ಪ್ರಕಾರ ಮತ್ತೊಂದು ಪ್ರಯೋಗವು ಮಾಡಲ್ಪಟ್ಟಿತು. ಮೂರು ಆಕಳುಗಳು ಪಾಡಿಕೆಯಾಗಿ ೧೫॥ ಸೇರು ಹಾಲು ಕೊಡುತ್ತಿದ್ದವು. ಮತ್ತು ಅವುಗಳ ಹಾಲಿನಲ್ಲಿ ತುಪ್ಪದ ಅಂಶವು ನೂರಕ್ಕೆ ೪.೦ ಭಾಗವಿರುತ್ತಿತ್ತು. ಮುಂದೆ ಆ ಆಕಳಗಳನ್ನು ಹೊಲಕ್ಕೆ ಒಯ್ದು ಅಲ್ಲಿ ಅವುಗಳ ಮೇಲೆ ಬೇಟೆಯ ನಾಯಿಗಳನ್ನು ಛೂ ಬಿಟ್ಟರು. ಆ ನಾಯಿಗಳು ಒದರುತ್ತ ಅವುಗಳ ಬೆನ್ನುಹತ್ತಲು ಅವು ಹಿಂಡುವ ಹಾಲಿನ ಮೇಲೆ ಪರಿಣಾಮವಾಗಿ ೧೧॥ ಸೇರು ಹಾಲು ಕೊಡಹತ್ತಿದವು; ಹಾಗು ಆ ಹಾಲಿನಲ್ಲಿ ತುಪ್ಪದ ಅಂಶವು ನೂರಕ್ಕೆ ೩.೬ ರಂತೆ ಉಳಿಯಹತ್ತಿತು.

ಇದರಿಂದ ಪ್ರಾಣಿಗಳನ್ನು ಒಳ್ಳೇ ರೀತಿಯಿಂದ ನಡೆಯಿಸಿಕೊಂಡು ಸಮಾಧಾನವುಳ್ಳ ಸ್ಥಿತಿಯಲ್ಲಿಟ್ಟರೆ, ಅವು ಒಳ್ಳೇತರದ ಬಹಳ ಹಾಲನ್ನು ಕೊಡುವವೆಂಬದು ಸ್ಪಷ್ಟವಾಗುತ್ತದೆ. ನಮ್ಮ ಜನರು ಆಕಳು ಎಮ್ಮೆಗಳನ್ನು ಹಿಂಡಿಕೊಳ್ಳುವಾಗ ಕಾಲು ಕಟ್ಟುತ್ತಾರೆ. ಇದು ಸರಿಯಲ್ಲ. ಆ ಪ್ರಾಣಿಗಳ ಮನೋವೃತ್ತಿಯ ಮೇಲೆ ಆದರ ಪರಿಣಾಮವಾದ ಕೂಡಲೆ ಅವು ಹಿಂಡುವ ಹಾಲಿನ ಮೇಲೂ ಆಗುವದು. ಹೆಣ್ಣುಮಕ್ಕಳು ಸಹ ತಮ್ಮ ಮಕ್ಕಳಿಗೆ ಹಾಲುಕುಡಿಸುವಾಗ ಒಳ್ಳೇ ಶಾಂತವೃತ್ತಿಯಿಂದ ಇರುವದು ವೈದ್ಯಶಾಸ್ತ್ರದ ದೃಷ್ಟಿಯಿಂದ ಬಹು ಮಹತ್ವದ ಸಂಗತಿಯಾಗಿರುತ್ತದೆ.

ಆಕ್ಷೇಪನಿರಸನ.



(ಕಳೆದ ಸಂಚಿಕೆಯ ೩೧ನೆಯ ಪುಟದಿಂದ ಮುಂದೆ ಸಾಗಿಸ್ಪು)

"संख्यापूर्वोद्विगुः" ಎಂಬ ಸೂತ್ರದಲ್ಲಿ ಈ ಮೂರು ತರದ ಸಂಖ್ಯಾ ಪೂರ್ವಕ ಕರ್ಮಧಾರಯಕ್ಕೇ ದ್ವಿಗುವೆನಬೇಕೆಂದು ವೃತ್ತಿಯಲ್ಲಿ ಹೇಳಿರುವದನ್ನು ನೋಡಿದವರಿಗೆ ಕೇವಲ ಸಂಖ್ಯಾಪೂರ್ವಕವಾದ ತ್ರಿಲೋಕಾಃ, ಸಪ್ತರ್ಷಯಃ ಎಂಬಿವು ದ್ವಿಗುಸಮಾಸಗಳಲ್ಲವೆಂಬದು ಸ್ಪಷ್ಟವಾಗಿ ಗೊತ್ತಾಗುವದು. ಇದರಂತೆ ಕನ್ನಡದಲ್ಲಿಯೂ ಕೇವಲ ಸಂಖ್ಯಾವಾಚಕವು ಪೂರ್ವಪದವಾಗಿರುವ ಮೂಲೋಕಂಗಳ್ ಎಂಬದು ಸಂಜ್ಞೆಯಲ್ಲಿ ಕರ್ಮಧಾರಯವೆಂದು ತಿಳಿಯುವದಕ್ಕೂ, ಸಮಾಹಾರಾರ್ಥದಲ್ಲಿ 'ಮೂಲೋಕಂ' ಎಂಬದು ದ್ವಿಗುವೆಂದು ಹೇಳುವದಕ್ಕೂ ಬಾಧಕವಿಲ್ಲ. ಮತ್ತು ಹೀಗೆ ಹೇಳುವದೇ ಯುಕ್ತವಾಗಿರುವದು. ಅಂದಬಳಿಕ ನುಡಿಗಟ್ಟಿನಲ್ಲಿ ಕರ್ಮಧಾರಯದ ವ್ಯಾಖ್ಯೆಯನ್ನು ಬರೆಯುವಾಗ ಸಂಖ್ಯಾವಾಚಕ ವಿಶೇಷಣವನ್ನು ನಿಷೇಧಿಸುವ ಕಾರಣವೇನು? ಸಮಾಹಾರಾರ್ಥದಲ್ಲಿ ಆಗುವ ಮೂಲೋಕಂ ಮೊದಲಾದ ಸಂಖ್ಯಾಪೂರ್ವಪದಕ ಸಮಾಸವು ದ್ವಿಗುವೆಂದು ಹೇಳಿದರೆ ಸಾಲದೇ? ಈ ಕಾರಣದಿಂದಲೇ ಅದರ ಮೇಲೆ ಆಕ್ಷೇಪವನ್ನು ತೆಗೆದುಕೊಳ್ಳಬೇಕಾಯಿತು.

ಇನ್ನೊಂದು ಚಮತ್ಕಾರವೆಂದರೆ, ತೆಂಗಾಳಿ ಎಂಬದು ಕರ್ಮಧಾರಯಕ್ಕೆ ಉದಾಹರಣವಾಗುವದೆಂದು ತೋರಿಸಿದ್ದು. ತೆಂಗಾಳಿ ಎಂಬದಕ್ಕೆ ವ್ಯಾಕರಣ ಬಲ್ಲ ಯಾವ ಮನುಷ್ಯನಾದರೂ ತೆಂಕಣ ಗಾಳಿ ಎಂದೇ ವಿಗ್ರಹ ಹೇಳುತ್ತಾನೆ. ಅಲ್ಲಿ ಪರ್ಯಂತ ಪೂರ್ವಪದಪ್ರತೀತಿಯೇ ಆಗುವದು. ಹೀಗೆ ಸರ್ವಜನಪ್ರತೀತಿಯನ್ನು ಅಪಲಾಪಿಸಿ ನಡುವೆ 'ಅದು'* ಎಂಬ ಹೆಚ್ಚಿನ ಪದವನ್ನು ಸೇರಿಸಿ ತೆಂಕಣದು ಗಾಳಿ ಎಂದು ವಿಗ್ರಹ ಹೇಳಬಹುದೆಂದು ಅನ್ನುವದು ಸಮಂಜಸವಾಗಿಲ್ಲ. ಹಾಗೆ ವಿಗ್ರಹವನ್ನು ಕಲ್ಪಿಸಿ ಮುಂದೆ ಅದು ಎಂಬ ಪದವು ಲೋಪವಾಗುವದಕ್ಕೆ

---

* ನನ್ನದು, ನಿನ್ನದು ಮೊದಲಾದ ಶಬ್ದಗಳಲ್ಲಿ ನಡುವೆ "ಅದು" ಎಂಬದು ಸೇರಿರುತ್ತದೆ.

"ಲಾಡೂಭಟ್ಟ" ಎಂಬಲ್ಲಿ ನುಡಿಗಟ್ಟು ಹೇಳುವಂತೆ ಮಧ್ಯಮಪದಲೋಪವಿಧಾಯಕ ನಿಯಮವನ್ನು ದರ್ಪಣಕಾರನು ಹೇಳಿ, ಈ ಪ್ರಕಾರದ ಯಥೇಚ್ಛ ವಿಗ್ರಹಕ್ಕೆ ಆಸ್ಪದಮಾಡಿಲ್ಲವೆಂಬದನ್ನೂ, ಇಂಥ ವಿಗ್ರಹಗಳಿಗೂ ಆಸ್ಪದಕೊಟ್ಟು ಇನ್ನೊಂದು ವ್ಯಾಕರಣವನ್ನು ಯಾವನೊಬ್ಬ ಮಹಾಪಂಡಿತನು ಬರೆಯುವವರೆಗೆ ಈ ಇಷ್ಟಾರ್ಥವು ಸಿದ್ಧಿಸುವದಿಲ್ಲವೆಂಬದನ್ನೂ ತಿಳಿಯಬೇಕು.

"ಮೂಢಶ್ರದ್ಧೆಯೆನ್ನಬೇಕೋ ಪರಂಪರಾಭಿಮಾನವೆನ್ನಬೇಕೋ ಲಾಕ್ಷಣಿಕರೂ ..... ನಿರ್ಣಯಿಸಬೇಕು" ಎಂಬ ಬಗ್ಗೆ, ಈ ಎರಡರಲ್ಲಿ ಯಾವದನ್ನು ನಿರ್ಣಯಿಸಿದರೂ ಸ್ವಪಕ್ಷಹಾನಿಯೇ ಸರಿ. ನುಡಿಗಟ್ಟಿನಲ್ಲಿ, ಪ್ರಮಾದಗಳಿರಬಹುದು. ಅವನ್ನು ನಿಂದ್ಯವಾದ ದೃಷ್ಟಿಯಿಂದ ನೋಡುವದು ಪಾಪಕರವೆಂದು ಪೂರ್ವಿಕರು ತಿಳಿಯುತ್ತ ಬಂದಿರುತ್ತಾರಂತೆ. ಪ್ರಮಾದವು ನಿಂದ್ಯವೊ? ಅನಿಂದ್ಯವೊ? ಅನಿಂದ್ಯವೆಂದರೆ ನಮ್ಮ ಉಪಾಯವಿಲ್ಲ. ನಿಂದ್ಯವಿದ್ದರೆ ನಿಂದ್ಯವನ್ನು ನಿಂದ್ಯದೃಷ್ಟಿಯಿಂದ ನೋಡಿದರೆ ಪಾಪಕರವೆಂದು ತಿಳಿಯುವಷ್ಟು ಮೂರ್ಖರಾದ ಪೂರ್ವಿಕರು ನಮ್ಮ ದೇಶದಲ್ಲಿಯಂತೂ ಇರಲಿಲ್ಲವೆಂಬದನ್ನು ಬೇರೆ ಹೇಳಬೇಕಾಗಿಲ್ಲ. ಶಾಸ್ತ್ರಗಳಲ್ಲಿ ದೋಷಗಳಿದ್ದರೆ ಅವನ್ನು ಮೂಢಶ್ರದ್ಧೆಯಿಂದ ಮುಚ್ಚಿಡುವದಕ್ಕಿಂತ ಅವನ್ನು ಬೈಲಿಗಿಟ್ಟು ತಿದ್ದಿಕೊಳ್ಳುವದಕ್ಕೆ ಪ್ರಯತ್ನಪಡುವದು ಪುಣ್ಯಕರವಾದದ್ದೆಂದು ನನ್ನ ನಂಬಿಗೆಯುಂಟು. ಸಂಸ್ಕೃತ ಭಾಷೆಯಲ್ಲಿ ಖಂಡನಗ್ರಂಥಗಳ ಸಂಖ್ಯೆಯೂ ಕಡಿಮೆಯಾಗಿಲ್ಲ. ಆ ಗ್ರಂಥಗಳ ಕರ್ತೃಗಳೆಲ್ಲರೂ ಪಾಪಿಗಳೇ?

೫ನೆಯ ಪ್ಯಾರಾ:—ಇದರಲ್ಲಿ ತೋರಿಸಿದ ಆಕ್ಷೇಪಗಳಿಗೆ ಹಿಂದಿನ ವಿವೇಚನೆಯಲ್ಲಿ ಉತ್ತರಗಳನ್ನು ಕೊಟ್ಟಂತೆಯೇ ಇದೆ.

೬ನೆಯ ಪ್ಯಾರಾ:—ನುಡಿಗಟ್ಟಿನಲ್ಲಿ ದೋಷಗಳನ್ನು ತೋರಿಸುವದು ಯಾರಿಗಾದರೂ ಸಾಧ್ಯವಿದೆಯಂತೆ. ಮುಂದೆ ಕೊನೆಯಲ್ಲಿ ನುಡಿಗಟ್ಟನ್ನು ಪಾರಾಯಣ ಮಾಡುವವರೂ ಇರುತ್ತಾರೆಂದೂ ತೋರಿಸಿ ಅದಕ್ಕೆ ಅಷ್ಟೊಂದು ಪವಿತ್ರತೆಯನ್ನೂ ತೋರ್ಪಡಿಸುತ್ತಾರೆ! ದರ್ಪಣದ ಸಮಾನ ಪ್ರಕರಣದಲ್ಲಿ ಲಕ್ಷ್ಯೋದಾಹರಣಗಳಿಗೆ ಸಮನ್ವಯವೇ ಇಲ್ಲವಂತೆ,

ಹೀಗೆಕೆ ಗ್ರಂಥವೆಲ್ಲ ಅಸಮಂಜಸವಾಗಿ ತೋರುತ್ತದೋ? ಗಮಕವೆಂಬ ಹೆಸರಿನ ಉತ್ಪಾದಕನು ದರ್ಪಣಕಾರನಿರುವನೆಂದು ಬರೆದದ್ದರ ಮೇಲೆ ಮಲ್ಲಿನಾಥನ "सापेक्षत्वेपि गमकत्वात्समासः" ಎಂಬ ವಾಕ್ಯವನ್ನು ಗಮಕದ ಉತ್ಪಾದಕರ ವಿಷಯದಲ್ಲಿ ಸಂಶಯವೇ ಉಳಿಯುತ್ತದೆಂಬ ದಕ್ಕೆ ಆಧಾರವಾಗಿ ತೋರಿಸಿದ್ದನ್ನು ನೋಡಿದರೆ, ಗಮಕದ ಮೇಲಿನ ಅತಿ ಮೋಹದಿಂದ ಗಮಕವೆಂಬ ಶಬ್ದವು ಬಂದೊಡನೆ ಬೆಚ್ಚಿಬೀಳುವದು ಅಪಹಾಸಾಸ್ಪದವೆಂಬದನ್ನು ತಿಳಿಸಬೇಕಾಗುವದು. ಮೇಲಿನ ವಾಕ್ಯದ ಅರ್ಥವನ್ನು ವಿವರವಾಗಿ ತಿಳಿಸುವದಕ್ಕೆ ಇಲ್ಲಿ ಅವಕಾಶವಿಲ್ಲದಿದ್ದರೂ ಒಂದೆರಡು ಸಂಗತಿಗಳನ್ನು ಸಂಕ್ಷೇಪವಾಗಿ ಹೇಳುತ್ತೇನೆ. "पदार्थैः पदार्थेनान्वेति, नत्र पदार्थैकदेशेन" ಎಂಬ ಸಿದ್ಧಾಂತಕ್ಕೆ ಅಪವಾದಗಳಾದ ಕೆಲವು ಪ್ರಯೋಗಗಳು ಸಂಸ್ಕೃತ ಭಾಷೆಯಲ್ಲುಂಟು. ಇದಲ್ಲದೆ ಪೂರ್ವೋತ್ತರ ಪದಗಳಲ್ಲಿ ಒಂದು ಬೇರೊಂದು ಪದಕ್ಕೆ ಸಾಪೇಕ್ಷವಾಗಿದ್ದರೂ ಆ ಎರಡು ಪದಗಳಲ್ಲಿ ವೃತ್ತಿ (ಕೃದ್ವೃತ್ತಿ, ತದ್ಧಿತವೃತ್ತಿ, ಸಮಾಸವೃತ್ತಿ) ಯಾಗಿರುವದುಂಟು. ಇಂತಹ ಪ್ರಯೋಗವು ಮಹಾಭಾಷ್ಯದಲ್ಲುಂಟು. ಅದನ್ನೆ ಗಮಕ (ಸೂಚಕ) ವನ್ನಾಗಿಟ್ಟುಕೊಂಡು ಕೆಲವು ಕವಿಗಳೂ ಅಂತಹ ಪ್ರಯೋಗಗಳನ್ನು ಉಪಯೋಗಿಸಿರುವರು. ತತ್ವ ಬೋಧಿನಿಯಲ್ಲಿ ನಾಗೋಜಿಭಟ್ಟರು ಈ ತರದ ಪ್ರಯೋಗಗಳನ್ನು ತೋರಿಸಿರುವರು. "किमोदनं शालीनाम्" ಎಂಬದಕ್ಕೆ केषां शालीनां ओदनम, ಎಂದು ಅರ್ಥವು. (किमोदनः समासवृ.) "कुतोभवान् पाटलिपुत्रकः" ಎಂಬದಕ್ಕೆ कस्मात् पाटलिपुत्राद्भवानागतः ಎಂದರ್ಥವಿರುವದು. (पाटलिपुत्रकः — तद्धितवृ.) ಮೇಲಿನ सापेक्षत्वेपि.... ಎಂಬ ವಾಕ್ಯದಲ್ಲಿರುವ ಗಮಕ ಶಬ್ದವು ಸೂಚಕ, ಇಲ್ಲವೆ ದೃಷ್ಟ (ಮಹಾಭಾಷ್ಯದಲ್ಲಿ) ಎಂಬರ್ಥದಲ್ಲಿರುವದು. ಅದ್ದರಿಂದ ಕನ್ನಡದ ಗಮಕ ಸಮಾಸಕ್ಕೂ ಅದಕ್ಕೂ ಏನೂ ಸಂಬಂಧವಿಲ್ಲವೆಂದು ತಿಳಿಯಬೇಕು.

ಒನೆಯ ಪ್ಯಾರಾದಲ್ಲಿ:—"ನಾವು ನಿರ್ದೇಶಮಾಡುವದು ಬಿಗಿಯಾಗಿ ಕರ್ಮಧಾರಯಾದಿಗಳಲ್ಲಿ ಸೇರಿಸಲಿಕ್ಕೆ ಸಂಸ್ಕೃತ ಸಮಾಸಗಳಿಗೆ ಜಾತಿಸಾಂಕರ್ಯದೋಷವು ಬಂದು ಪ್ರಾಪ್ತವಾಗುವದರಿಂದ" ಪ್ರತಿಯೊಂದಕ್ಕೆ ನಾವು ನಿರ್ದೇಶನಮಾಡಲೇಬೇಕೆಂದು ಯಾರು ಹೇಳುತ್ತಾರೆ?

ಒಂದೇ ಹೆಸರಿನಿಂದ ಹೇಳಿದರೆ ಸಾಲದೆ? ಜಾತಿ ಸಾಂಕರ್ಯದೋಷವೆಂದರೆ ಅದಾವದು? ನೈಯಾಯಿಕರು "व्यक्तिभेदः.... सङ्करो.... जाति बाधकसङ्करः" ಎಂದು ಹೇಳಿದ ಜಾತಿಬಾಧಕಸಾಂಕರ್ಯದೋಷವೇ? ಇನ್ನಾವದಾದರೂ ಘನವಾದ ದೋಷವೇ? ಜಾತಿಶಬ್ದವಾದರೂ ಇಲ್ಲಿ नित्यमेकमनेकानुगतम् ಎಂಬ ಶಾಸ್ತ್ರೀಯಾರ್ಥದಲ್ಲಿ ಪ್ರಯೋಗಿಸಿದ್ದೇ? ಸುಮ್ಮನೆ ಉಪಯೋಗಿಸಿದ್ದೇ? ಹೆಚ್ಚಿನ ಸಂಜ್ಞೆಗಳನ್ನು ಕಲ್ಪಿಸುವದೇ ಗೌರವವು. ಸ್ವಲ್ಪ ಸಂಜ್ಞೆಗಳಿಂದ ಕಾರ್ಯವನ್ನು ನಿರ್ವಹಿಸುವದು ಲಾಘವವು. ಆದರೆ ಮಿ. ಪ್ರಭುಗಳು ಹೆಚ್ಚಿನ ಸಂಜ್ಞೆಯನ್ನು ಕಲ್ಪಿಸದೆ ಬಿಟ್ಟರೇ ಗೌರವದೋಷವು ಬರುತ್ತದೆಯೆಂದು ಹೇಳುತ್ತಾರೆ. ಈ ಕೋಟಿಕ್ರಮವು ಶಾಸ್ತ್ರಜ್ಞರಿಗೆ ವಿಲಕ್ಷಣವಾಗಿ ತೋರುವದು.

ಈ ಗಮಕವಿಷಯದಲ್ಲಿ ನನ್ನ ಅಭಿಪ್ರಾಯವನ್ನು ಇನ್ನೊಮ್ಮೆ ಇಲ್ಲಿ ಹೇಳುತ್ತೇನೆ. ಸಮಾನಾಧಿಕರಣವಿಶೇಷಣವಿಶೇಷ್ಯಗಳು ಕೂಡಿ ಆಗುವ ಸಮಾಸವು ಕರ್ಮಧಾರಯವು. ಅದರಲ್ಲಿ ಸಂಖ್ಯಾವಾಚಕ ವಿಶೇಷಣವು ಪೂರ್ವಪದವಾಗಿದ್ದು ಸಮಾಹಾರರೂಪ ವಿಶೇಷಾರ್ಥವಿದ್ದರೆ ದ್ವಿಗುವೆಂದು ಹೇಳಬೇಕು. ಸಂಸ್ಕೃತೋತ್ತರಪದಕವಾದ ಕರ್ಮಧಾರಯಕ್ಕೆ ಗಮಕವೆಂದು ಕೆಲವರು ಹೇಳುತ್ತಾರೆ. ಸಂಸ್ಕೃತದಲ್ಲಿ "सापेक्षत्वेपि गमकत्वात्समासः" ಎಂದು ಹೇಳುವ ಸ್ಥಳದಲ್ಲಿರುವಂಥ ಸಮಾಸಪ್ರಯೋಗಗಳು ಕನ್ನಡದಲ್ಲಿಯೂ ಉಂಟು (ಜಲದ ನಿಧೋರಸ್ಥಲನಾದ ವಿಷ್ಣು ವಿಜಯಾದಿತ್ಯಂ). ಇಂಥ ಸಮಾಸಗಳಿಗೇ ಗಮಕತ್ವಾತ್ (ವ್ಯವಹಾರದೃಷ್ಟತ್ವಾತ್) ಸಮಾಸ, ಎಂದು ಹೇಳುವದು ಹೆಚ್ಚು ಯುಕ್ತವಾಗುತ್ತದೆ. ಈ ವಿಷಯವನ್ನು ಹೊಸ ವ್ಯಾಕರಣವನ್ನು ಬರೆಯುವ ಮಹನೀಯರು ಗಮನಿಸುವರೆಂದು ಕೋರುವೆನು.

ಪೂಜಾರ.

ಆಟಗಳೂ ವ್ಯವಹಾರವೂ.

ಆಟಗಳು ನಮ್ಮ ಜನರಿಗೆ ವಿಶೇಷವಾಗಿ ಸೇರುವದಿಲ್ಲ. ಮನಸ್ಸು, ಬುದ್ಧಿ, ಶರೀರ ಇವುಗಳನ್ನು ಶಕ್ಯವಿದ್ದಷ್ಟು ಮಟ್ಟಿಗೆ ಪರಿಪಕ್ವ ಸ್ಥಿತಿಗೆ

ತರುವದೇ ಶಿಕ್ಷಣದ ಧ್ಯೇಯವಾಗಿರುತ್ತದೆ. ಇದನ್ನು ಸಾಧಿಸುವದಕ್ಕಾಗಿ ಶಿಕ್ಷಣದಲ್ಲಿ ಅನೇಕ ಸಂಗತಿಗಳ ಸಮಾವೇಶವು ಮಾಡಲ್ಪಟ್ಟಿರುವದು. ಆದರೆ ಆಟಗಳೂ ಅವುಗಳಲ್ಲಿ ಸೇರುವವೆಂಬ ಕಲ್ಪನೆಯು ನಮ್ಮಲ್ಲಿ ಎಷ್ಟೋ ಜನರಿಗೆ ಸೇರುವದಿಲ್ಲ. ಪಟ್ಟಣಗಳಲ್ಲಿ ಹಾಯಸ್ಕೂಲ-ಕಾಲೇಜ ಗಳ ವಿದ್ಯಾರ್ಥಿಗಳು ಪದ್ಧತಿಗೆ ಸರಿಯಾಗಿ ಎಷ್ಟೋ ಆಟಗಳನ್ನು ಆಡು ತ್ತಿರುವರು; ಅವುಗಳ ಬಗ್ಗೆ ವಿದ್ಯಾರ್ಥಿಗಳ ಹಾಗು ನಾಗರಿಕರ ಅನುಕೂ ಲ ಅಭಿಪ್ರಾಯವಿದ್ದಂತೆ ಕಂಡುಬರುವದು. ಆದರೆ ಹಳ್ಳಿಪಳ್ಳಿಗಳಲ್ಲಿ ಆಡುವವರ ವಿಷಯವಾಗಿಯೂ, ಆಟಗಳ ವಿಷಯವಾಗಿಯೂ ಬಹುಶಃ ತಿರಸ್ಕಾರವೇ ದೃಷ್ಟಿಗೆ ಬೀಳುವದು. ಇದು ಹಿತಕರವಲ್ಲ. ನಾವು ನಿತ್ಯ ದಲ್ಲಿ ಮಾಡುವ ಅನೇಕ ವ್ಯವಹಾರಗಳಲ್ಲಿ ಯಶವನ್ನು ಪಡೆಯಲಿಕ್ಕೂ ಸಮಾಜದ ಅಥವಾ ದೇಶದ ಉನ್ನತಿಯಾಗಲಿಕ್ಕೂ ಅತ್ಯವಶ್ಯವಾಗಿರುವ ಉತ್ಕರ್ಷದ ಆಶೆ, ಧೈರ್ಯ, ಸ್ವಾರ್ಥತ್ಯಾಗ, ಶಿಸ್ತು ಇವೇ ಮೊದಲಾದ ಗುಣಗಳನ್ನು ಸಂಪಾದಿಸಲಿಕ್ಕೆ ಆಟದಿಂದ ಬಹಳ ಸಹಾಯವಾಗುತ್ತದೆ. ಆಟಗಳಿಂದ ಶರೀರಸಾಮರ್ಥ್ಯವು ಬೆಳೆಯುವದಂತೂ ನಿಜವೇ. ಇದಲ್ಲದೆ ಅನೇಕ ತರದ ಆಟಗಳನ್ನು ಆಡುವದರಿಂದ ಬುದ್ಧಿಗೆ ಚಾಪಲ್ಯವು ದೊರೆ ಯುತ್ತದೆ; ಪಾಶ್ಚಾತ್ಯ ರಾಷ್ಟ್ರದವರು ಈ ಅನುಭವವನ್ನು ತಕ್ಕೊಂಡು ಶಿಕ್ಷಣದಲ್ಲಿ ಆಟಗಳಿಗೆ ಮಹತ್ವವನ್ನು ಕೊಟ್ಟಿರುವರು. ಪ್ರಸಿದ್ಧ ಇಂಗ್ಲಿಷ ಸೇನಾಪತಿಯಾದ ವೆಲಿಂಗ್ಟನನು—"ರಣಭೂಮಿಯಲ್ಲಿ ಜಯಸಂಪಾದಿ ಸುವ ಕಲೆಯನ್ನು ನಾನು ಕ್ರಿಕೆಟಿನ ಬೈಲಿನಲ್ಲಿ ಕಲಿತೆನೆಂ"ದು ಅಂದ ದ್ದು ಇತಿಹಾಸದಲ್ಲಿ ಪ್ರಸಿದ್ಧವಿರುವದು. ನಮ್ಮ ದೇಶದಲ್ಲಿ ಶಿಕ್ಷಣದ ಪ್ರಸಾರವು ಇನ್ನೂ ಆಗತಕ್ಕಷ್ಟು ಆಗಿರದಿದ್ದರೂ ಆಟಗಳ ಪ್ರಸಾರದಿಂದ ಭಾವೀರಾಷ್ಟ್ರದಲ್ಲಿ ಅನೇಕ ಉತ್ತಮೋತ್ತಮವಾದ ಗುಣಗಳನ್ನು ಹು ಟ್ಟಿಸಲಿಕ್ಕೆ ಬರುವಂತಿರುವದು. ಇದಲ್ಲದೆ ನಮ್ಮ ದೇಶದ ಆಟಗಳು ವಿಶೇ ಷ ಖರ್ಚಿನವಿರುವದಿಲ್ಲಾದ ಕಾರಣ ತೀರ ಸಣ್ಣ ಹಳ್ಳಿಯಲ್ಲಿ ಬಡವರು ಸಹ ಆಡಲಿಕ್ಕೆ ಬರುವಂತಿರುವದು. ಆಟಗಳಿಂದ ಮೇಲೆ ಹೇಳಿದ ಮಾನ ಸಿಕ ಗುಣಗಳು ಹ್ಯಾಗೆ ಹುಟ್ಟುವವೆಂಬ ಬಗ್ಗೆ ಇಲ್ಲಿ ನಾಲ್ಕು ಮಾತುಗ ಳನ್ನು ಹೇಳುವೆವು.

ಮೊದಲು ಆಟಗಳ ವಿಷಯವಾಗಿ ನಾವು ಆಲೋಚಿಸುವಾ. ಸ್ತ್ರಿ

ಥರು ಆಡತಕ್ಕ ಆಟಗಳಲ್ಲಿ ಬಹುಶಃ ಎರಡು ಪಕ್ಷಗಳು, ಇಲ್ಲವೆ ಎರಡು ಪಂಗಡಗಳು ಇದ್ದೇ ಇರುತ್ತವೆ.

ಆಟಕ್ಕೆ ನಿಂತ ಪ್ರತಿಯೊಂದು ಪಕ್ಷದ ಪ್ರತಿಯೊಬ್ಬ ವ್ಯಕ್ತಿಯ ಮನಸಿನಲ್ಲಿ ಒಂದೇ ಒಂದು ಪ್ರಬಲವಾದ ಇಚ್ಛೆಯು ತುಂಬಿಕೊಂಡಿರುವದು. ರಣಭೂಮಿಯಲ್ಲಿ ಯುದ್ಧಕ್ಕೆ ನಿಂತ ಉಭಯಪಕ್ಷದ ಸೈನಿಕರ ಮನಸಿನಲ್ಲಿ ಯಾವ ಪ್ರಬಲವಾದ ಇಚ್ಛೆಯು ಇರುವದು? ಅದೇ ಇಚ್ಛೆಯು ಆಡಲಿಕ್ಕೆ ನಿಂತ ಪ್ರತಿಯೊಬ್ಬ ವ್ಯಕ್ತಿಯ ಮನಸಿನಲ್ಲಿ ಇರುವದು. ಆ ಪ್ರಬಲವಾದ ಇಚ್ಛೆಯು ಯಾವದೆಂದರೆ, ವಿಜಯೇಚ್ಛೆಯು!! ತಮ್ಮ ಪಕ್ಷಕ್ಕೆ ಗೆಲವು ಹ್ಯಾಗೆ ದೊರಕೀತು? ಪರಪಕ್ಷದವರು ಹ್ಯಾಗೆ ಸೋತಾರು ಎಂಬದನ್ನೇ ಅವನು ವಿಚಾರಮಾಡುತ್ತಿರುತ್ತಾನೆ. ತಿಳ್ಳೀ ಆಟದಲ್ಲಿ ಹಾಯಲಿಕ್ಕೆ ನಿಂತವರಲ್ಲಿ ಪ್ರತಿಯೊಬ್ಬನು—ಆಟವು ಪ್ರಾರಂಭವಾಗುವದೊಂದೇ ತಡ, ನೋಡಿರಿ, ಹ್ಯಾಗೆ ಚಿಗರಿಯಂತೆ ಟಣ್ಣನೆ ಪಾರಾಗಿ ಹೋಗಿ ಉಪ್ಪುತರುವೆನು ಎಂದು ಅನ್ನುತ್ತಿರುವನು. ಕಟ್ಟುವವರ ವಿಚಾರಗಳು ಇದಕ್ಕೆ ವಿರುದ್ಧವಾಗಿ ಇರುವವು. ಮನುಷ್ಯನು ಎಷ್ಟೇ ಹೇಡಿಯಾಗಿರಲಿ, ಜೊನ್ನನಾಗಿರಲಿ ಆಡುವವರ ಗುಂಪಿನಲ್ಲಿ ಸೇರಿದನೆಂದರೆ ಅವನಲ್ಲಿ ಕೂಡಲೆ ಚಾಪಲ್ಯವು ತಲೆದೋರುವದು. ಆವೇಶವು ವ್ಯಕ್ತವಾಗುವದು. ಈ ಮೇರೆಗೆ ಆ ಕಾಲಕ್ಕೆ ಪ್ರತಿಯೊಬ್ಬನ ಮನಸಿನಲ್ಲಿ ಜಯಸಂಪಾದಿಸುವದೊಂದೇ ವಿಚಾರವಲ್ಲದೆ ಬೇರೆ ಯಾವ ವಿಚಾರಗಳೂ ಇರುವದಿಲ್ಲ.

ಹೀಗಿದ್ದರೂ ಯುದ್ಧಕ್ಕೆ ನಿಂತ ಎರಡುಪಕ್ಷದ ದಂಡಾಳುಗಳಿಗೂ, ಆಡಲಿಕ್ಕೆ ನಿಂತ ಎರಡು ಪಂಗಡದವರಿಗೂ ಒಂದು ವೈಲಕ್ಷಣ್ಯವಿರುವದು. ರಣಭೂಮಿಯಲ್ಲಿ ಸೈನಿಕರು ಪರಸ್ಪರರನ್ನು ನಾಶಗೊಳಿಸಿ ಜಯಸಂಪಾದಿಸಲುಯತ್ನಿಸುತ್ತಿರುವರು. ಅವರಲ್ಲಿ ಪರಸ್ಪರ ಪ್ರೇಮ-ಸಹಾನುಭೂತಿಗಳು ಎಷ್ಟು ಮಾತ್ರಕ್ಕೂ ಇರುವದಿಲ್ಲ. ಆದರೆ ಆಟಗಳ ಮಾತು ಹಾಗಲ್ಲ. ಆಟಗಳಲ್ಲಿ ಪ್ರತಿಯೊಂದು ಪಂಗಡದ ಪ್ರತಿಯೊಬ್ಬ ಮನುಷ್ಯನ ಮನಸಿನಲ್ಲಿ ವಿರುದ್ಧಪಂಗಡದವರ ವಿಷಯವಾಗಿ ಪ್ರೇಮ-ಸಹಾನುಭೂತಿಗಳು ಇರುವವು. ಸ್ವಲ್ಪ ವಿಚಾರಮಾಡಿದರೆ ಇದರಲ್ಲೇನೂ ಆಶ್ಚರ್ಯವಿಲ್ಲೆಂದು ತಿಳಿಯುವದು. ಯಾಕಂದರೆ, ಎರಡೂ ಪಂಗಡದವರಿಗೆ ಮುಂಚಿನಿಂದ

ಯಾವ ತರದ ವೈರಭಾವವೂ ಇರುವದಿಲ್ಲ. ಅವರು ಬಹಳ ದಿವಸಗಳಿಂದ ಒಂದೇ ಕಡೆಗೆ ವಾಸಿಸುವವರೂ ಒಬ್ಬರಿಗೊಬ್ಬರು ಸಲಿಗೆಯಿಂದ ಮಾತು ಕಥೆಗಳನ್ನು ಆಡುತ್ತ ಬಂದವರೂ ಆಗಿರುವರು. ಇದಲ್ಲದೆ ವಿಜಯಾನಂದವನ್ನು ಸಂಪಾದಿಸಬೇಕೆಂಬ ಉತ್ಕಟವಾದ ಇಚ್ಛೆಯು, ಯಾರ ಸಹಾಯದಿಂದ ಅಥವಾ ಯಾರ ಸಂಗಡ ಆಡುವದರಿಂದ ಪ್ರತಿಯೊಬ್ಬನ ಮನಸಿನಲ್ಲಿ ಉತ್ಪನ್ನವಾಗಿರುವದು? ಪ್ರತಿಸ್ಪರ್ಧಿಗಳ ಅಥವಾ ವಿರುದ್ಧಪಂಗಡದವರ ಸಹಾಯದಿಂದಲ್ಲವೆ? ಅವರೇ ಆಟಕ್ಕೆ ಸಿದ್ಧವಾಗದಿದ್ದರೆ ವಿಜಯವೆಲ್ಲಿಯದು? ಆನಂದವೆಲ್ಲಿಯದು? ಈ ಕಾರಣದ ಮೂಲಕ ಆಡಲಿಕ್ಕೆ ನಿಂತ ಪ್ರತಿಯೊಬ್ಬ ವ್ಯಕ್ತಿಯ ಮನಸಿನಲ್ಲಿ ಪ್ರತಿಸ್ಪರ್ಧಿಯ ವಿಷಯವಾಗಿ ಪ್ರೇಮವೂ ಸಹಾನುಭೂತಿಯೂ ಉತ್ಪನ್ನವಾಗುವವು.

ಇನ್ನೊಂದು ಸಂಗತಿಯು ಯಾವದೆಂದರೆ ಪ್ರತಿಯೊಂದು ಆಟಕ್ಕೆ ಕೆಲವು ಗೊತ್ತಾದ ನಿಯಮಗಳು ಇರುವವು. ಆ ನಿಯಮಗಳು ನ್ಯಾಯ ಮಾರ್ಗಕ್ಕೆ ಅನುಸರಿಸಿ ಇರುವವು. ಯಾವ ಪಂಗಡದವರೂ ಆ ನಿಯಮಗಳಿಗೆ ತಪ್ಪಿನಡೆದು ವಿಜಯವನ್ನು ಸಂಪಾದಿಸಲಿಕ್ಕೆ ಇಚ್ಛಿಸುವದಿಲ್ಲ. ಅದರಿಂದ ಯಾರ ಮನಸಿನಲ್ಲಿಯೂ ಅಸಂತೋಷವೂ ದ್ವೇಷಬುದ್ಧಿಯೂ ಹುಟ್ಟುವ ಕಾರಣವಿರುವದಿಲ್ಲ.

ಈ ಮೇರೆಗೆ ಆಟಕ್ಕೆ ನಿಂತ ಪ್ರತಿಯೊಬ್ಬ ವ್ಯಕ್ತಿಯ ಮನಸಿನಲ್ಲಿ ಆಟವು ಮುಗಿಯುವವರೆಗೆ ವಿಜಯೇಚ್ಛೆಯು ತುಂಬಿ ತುಳುಕುತ್ತಿರುವದು; ಮತ್ತು ಪ್ರತಿಸ್ಪರ್ಧಿಗಳ ವಿಷಯವಾಗಿ ಪ್ರೇಮಸಹಾನುಭೂತಿಗಳು ಇರುವವು; ಹಾಗು ಅವನು ನ್ಯಾಯಮಾರ್ಗದಿಂದ ವಿರುದ್ಧಪಂಗಡದವರನ್ನು ಸೋಲಿಸುವ ಪ್ರಯತ್ನಗಳನ್ನೇ ಮಾಡುತ್ತಿರುವನು.

ಇನ್ನು ನಾವು ವ್ಯವಹಾರದ ಬಗ್ಗೆ ಆಲೋಚಿಸುವಾ. ವ್ಯವಹಾರದಲ್ಲಿಯಾದರೂ ತಾವು, ತಮ್ಮ ಕುಟುಂಬ, ತಮ್ಮ ಊರು, ತಮ್ಮ ದೇಶ, ಇದೊಂದು ಪಕ್ಷ. ಪರರು, ಪರರ ಮನೆ, ಪರರ ಕುಟುಂಬ ಪರವೂರು, ಪರದೇಶ, ಇದೊಂದುಪಕ್ಷ. ಎರಡು ಪಂಗಡಗಳನ್ನು ಮಾಡಿಕೊಳ್ಳದೆ ಹ್ಯಾಗೆ ಆಟವಾಡಲಿಕ್ಕೆ ಬರುವದಿಲ್ಲವೋ ಅದೇ ಪ್ರಕಾರ ಎರಡು ಪಕ್ಷಗಳಿಲ್ಲದೆ ಯಾವ ವ್ಯವಹಾರವೂ ಸಾಗುವದಿಲ್ಲ.

ಆಟಗಳಂತೆ ವ್ಯವಹಾರದಲ್ಲಿಯೂ ಎರಡು ಪಕ್ಷಗಳಿರುವವು; ಆದರೆ ಆಟದಲ್ಲಿ ಪ್ರತಿಯೊಂದು ಪಂಗಡದ ಪ್ರತಿಯೊಬ್ಬ ಮನುಷ್ಯನು ತನ್ನ ಪಂಗಡದವರಿಗೆ ಜಯದೊರೆಯಬೇಕೆಂದು ಕಾಯಾವಾಚಾಮನಸಿನಿಂದ ಯತ್ನಮಾಡುತ್ತಿರುವಂತೆ ವ್ಯವಹಾರದಲ್ಲಿ ತನ್ನ, ತನ್ನ ಮನೆತನದ, ತನ್ನ ಊರು, ತನ್ನದೇಶದ ಉನ್ನತಿಯ ಬಗ್ಗೆ ಯತ್ನಮಾಡುವದಿಲ್ಲ. ಆಟವಾಡುವಾಗ ತೋರಿಸುವ ಚಟುವಟಿಕೆ, ಉತ್ಸಾಹ, ಹುರುಪು ಮೊದಲಾದ ಗುಣಗಳು ವ್ಯವಹಾರದಲ್ಲಿ ಕಂಡುಬರುವದಿಲ್ಲ. ಅದರಿಂದ ಆಗತಕ್ಕಷ್ಟು ಸುಧಾರಣೆಯೂ ಉತ್ಕರ್ಷವೂ ಆಗುವದಿಲ್ಲ; ಜಯವೂ ದೊರಕುವದಿಲ್ಲ. ಎರಡೂ ಪಕ್ಷಗಳು ಈರ್ಷೆಯಿಂದ ವಿಜಯವನ್ನು ಸಂಪಾದಿಸಿ ಒಬ್ಬರಮುಂದೆ ಮತ್ತೊಬ್ಬರು ಹೋಗಲಿಕ್ಕೆ ಯತ್ನಿಸಿದರೆ ಮಾತ್ರ ಉಭಯಪಕ್ಷಗಳು ಊರ್ಜಿತಸ್ಥಿತಿಯನ್ನು ಹೊಂದುವವು. ಇದಕ್ಕೆ ವಿಪರೀತವಾಗಿ ಎರಡೂ ಪಕ್ಷಗಳು ತಣ್ಣಗೆ ಕುಳಿತುಕೊಂಡುಬಿಟ್ಟರೆ, ಉತ್ಕರ್ಷದ ಆಶೆಯನ್ನು ಮಾಡುವ ಕಾರಣವೇ ಇಲ್ಲ.

ಉಭಯಪಕ್ಷಗಳ ಉತ್ಕರ್ಷವಾಗಬೇಕಾದರೆ ಎರಡೂಕಡೆಯ ಪ್ರತಿಯೊಬ್ಬ ವ್ಯಕ್ತಿಯ ಮನಸಿನಲ್ಲಿ ಈರ್ಷೆಯು ಇದ್ದು, ಪರಸ್ಪರರ ವಿಷಯವಾಗಿ ಸಹಾನುಭೂತಿಯು ಇರುತ್ತಿದ್ದರೆ ಮಾತ್ರ ಮೇಲಾಟದ ಪ್ರಯತ್ನಗಳು ಯೋಗ್ಯಮಾರ್ಗದಿಂದ ಮಾಡಲ್ಪಡುವವು. ನಮ್ಮ ಜನರಲ್ಲಿ ಇಂಥ ಸಹಾನುಭೂತಿಯು ಕಂಡುಬರುವದಿಲ್ಲ. ಅದರಿಂದಲೇ ನಮ್ಮ ಜನರ ವ್ಯವಹಾರಗಳ ಪರಿಣಾಮವು ವಿಚಿತ್ರವಾಗುವದು. ನೆರೆಯವರಿಗಿಂತ ತಾವು ಹೆಚ್ಚಿನ ಮಹತ್ವವನ್ನಾಗಲಿ ಹೆಚ್ಚಿನ ಉತ್ಕರ್ಷವನ್ನಾಗಲಿ ಸಂಪಾದಿಸಬೇಕಾದರೆ ಅವರಿಗಿಂತ ತಮ್ಮಲ್ಲಿ ಹೆಚ್ಚು ಸದ್ಗುಣಗಳು ಹುಟ್ಟುವಂತೆ ಸತತ ಪ್ರಯತ್ನವನ್ನೂ ದೀರ್ಘೋದ್ಯೋಗವನ್ನೂ ಮಾಡತಕ್ಕದ್ದು; ಆದರೆ ಇದನ್ನೆಲ್ಲ ಬಿಟ್ಟುಕೊಟ್ಟು ನೆರೆಯವರಿಗಿಂತ ತಾವು ಹೆಚ್ಚು ದೊಡ್ಡಸ್ತಿಕೆಗೆ ಏರಬೇಕೆಂಬ ಅಪೇಕ್ಷೆಯಿಂದ ಯಾವಾಗಲೂ ಅವರ ಅಪಕರ್ಷವನ್ನು ಚಿಂತಿಸುತ್ತಿರುವರು; ಯುಕ್ತಿಪ್ರಯುಕ್ತಿಯಿಂದ ಅವರ ಉತ್ಕರ್ಷಕ್ಕೆ ಅಡ್ಡಬರುವರು. ಎರಡನೆಯವರ ಮುಂದೆ ಹೋಗುವದೆಂದರೆ ಅವರನ್ನು ಹಿಂದಕ್ಕೆ ಜಗ್ಗುವ ಪ್ರಯತ್ನಮಾಡುವದು. ಇದೇ ತರದ ಸ್ಥಿತಿಯು ನಮ್ಮ ಸಮಾಜದಲ್ಲಿ ಆಗಾಗ್ಗೆ ದೃಷ್ಟಿಗೆಬೀಳುವದು.

ಈ ಪ್ರಕಾರದ ಸ್ಥಿತಿಯು ಹಳ್ಳಿಪಳ್ಳಿಗಳಲ್ಲಿಯೇ ದೃಷ್ಟಿಗೆ ಬೀಳುವದೆಂತಲ್ಲ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವಾಸಿಸುತ್ತಿರುವ ಸುಶಿಕ್ಷಿತರು ಸಹ ಪ್ರತಿ ಪಕ್ಷದವನನ್ನು ಸೋಲಿಸುವದಕ್ಕಾಗಿ ಎಷ್ಟೋ ಅನ್ಯಾಯದ ಉಪಾಯ ಗಳ ಯೋಜನೆಯನ್ನು ಮಾಡಿದ್ದು ಎಷ್ಟೋಸಾರೆ ದೃಷ್ಟಿಗೆ ಬೀಳುವದು. ಸಮಾಜದ ಮುಂದಾಳುಗಳೆಂದೆನಿಸಿಕೊಳ್ಳುವ ಜನರು ಸಹ ಒಮ್ಮೊಮ್ಮೆ ಪಕ್ಷಾಭಿಮಾನದಿಂದ ಪ್ರತಿಸ್ಪರ್ಧಿಗಳಾದ ಮಾನ್ಯ ಜನರ ಹಿತಕರವಾದ ಪ್ರಯತ್ನಗಳನ್ನು ಕೇವಲ ಅವರ ಮಹತ್ವವು ಕಡಿಮೆಯಾಗಬೇಕೆಂಬ ಉದ್ದೇಶದಿಂದ ಕೆಡಿಸಿಬಿಡುವರು.

ಆಟದಲ್ಲಿ ಪ್ರತಿಯೊಂದು ಪಂಗಡದವರು ಎದಡನೇ ಪಂಗಡದವ ರನ್ನು ಯೋಗ್ಯರೀತಿಯಿಂದ ಸೋಲಿಸಬೇಕೆಂದು ಯತ್ನಿಸುತ್ತಿರುವರು. ಅದಕ್ಕಾಗಿ ಅವರು ತಮ್ಮ ಸಾಹಸ ಚಾತುರ್ಯಾದಿ ಗುಣಗಳ ಯೋಜನೆ ಯನ್ನು ಮಾಡಬೇಕಾಗುತ್ತದೆ. ಅದರಿಂದ ಉಭಯಪಕ್ಷದವರ ಆಟ ವಾಡುವ ಶಕ್ತಿಯು ಹೆಚ್ಚಾಗುವದು; ಒಬ್ಬರಿಗಿಂತ ಮತ್ತೊಬ್ಬರು ಹೆಚ್ಚು ಚಪಲರೂ, ಹೆಚ್ಚು ಬುದ್ಧಿವಂತರೂ, ಹೆಚ್ಚು ಸಾಹಸಿಗರೂ ಆಗುವರು. ಆದರೆ ಇದಕ್ಕೆ ಬದಲಾಗಿ ಆಟದಲ್ಲಿ ಕಪಟಿಯೂ, ಸೀಡಕನೂ ಆದ ಮನುಷ್ಯನೊಬ್ಬನು ಇದ್ದು, ಒಂದು ಪಂಗಡದವರು ಸುಳ್ಳು-ಮೋಸಗಳನ್ನು ಮಾಡಹತ್ತಿದರೆಂದರೆ ಎದಡನೇ ಪಂಗಡದವರಾದರೂ ಅದರಂತೆ ಮಾಡಬೇ ಕಾಗುತ್ತದೆ. ಮುಂದೆ ಬರಬರುತ್ತ ಉಭಯಪಕ್ಷದವರಲ್ಲಿ ವ್ಯಾಜ್ಯಗಳು ಹೆಚ್ಚಾಗುತ್ತ ಹೋಗುವವು. ಕಟ್ಟಕಡೆಗೆ ಕೈಗೆಕೈಹತ್ತುವ ಪ್ರಸಂಗಗಳು ಒದಗಿ ಆಟವು ಒತ್ತಟ್ಟಿಗೆ ಉಳಿಯುವದು; ಮತ್ತು ಅದರಿಂದಾಗುವ ಆನಂ ದಕ್ಕೆ ಎಲ್ಲರೂ ಎರವಾಗುವರು. ವ್ಯವಹಾರದಲ್ಲಿಯೂ ಇದೇ ಹಾಪಾಗು ವದು. ವ್ಯವಹಾರದಲ್ಲಿ ಎದಡೂಪಕ್ಷದವರು ಪರಸ್ಪರ ಸಹಾನುಭೂತಿಯ ನ್ನು ನ್ಯಾಯನೀತಿಗಳನ್ನೂ ಬದಿಗಿಟ್ಟು ಒಬ್ಬರು ಮತ್ತೊಬ್ಬರನ್ನು ಅವನ ತ ಸ್ಥಿತಿಗೆ ತರಲು ಯತ್ನಿಸಿದರೆ ಅವರ ಪ್ರಯತ್ನಗಳಿಗೆ ಯಶವು ದೊರೆತು ಉಭಯತರ ದುಷ್ಟ ಹೇತುಗಳು ಕೊನೆಗಾಣುವವು. ಅದರಿಂದ ಉಭಯ ತರೂ ನಾಶಹೊಂದುವರು.

ಇದರಿಂದ ಸಿದ್ಧವಾಗುವದೇನಂದರೆ, ವ್ಯವಹಾರದಲ್ಲಿ ಎದಡೂಪಕ್ಷ ಗಳ ಉತ್ಕರ್ಷವಾಗಬೇಕಾದರೆ, ಅವೆರಡು ಪಕ್ಷದವರ ಮನಸಿನಲ್ಲಿ

ಉತ್ಕರ್ಷದ ಪ್ರಬಲವಾದ ಇಚ್ಛೆಯೂ ಪರಸ್ಪರರ ವಿಷಯವಾಗಿ ಪ್ರೀತಿ ಸಹಾನುಭೂತಿಗಳೂ ಇರಲಿಕ್ಕೆಬೇಕು. ಮತ್ತು ಉಭಯಪಕ್ಷದವರು ತಮ್ಮ ತಮ್ಮ ಉತ್ಕರ್ಷದ ಸಲುವಾಗಿ ಮಾಡುವ ಪ್ರಯತ್ನಗಳು ನ್ಯಾಯದಿಂದಲೂ ಸರಳಮಾರ್ಗದಿಂದಲೂ ನಡೆಯುತ್ತಿರಲಿಕ್ಕೆಬೇಕು. ಇಲ್ಲದಿದ್ದರೆ ಉತ್ಕರ್ಷವಾಗುವದಂತು ಒತ್ತಟ್ಟಿಗೆ ಉಳಿದು, ಉಭಯಪಕ್ಷದವರು ಕೀಳ್ತರಕ್ಕೆಳಸುವರು.

ವ್ಯವಹಾರಕ್ಕೆ ಅತ್ಯುಪಯುಕ್ತವಾದ ಈ ಗುಣಗಳು ಉತ್ಪನ್ನವಾಗಲಿಕ್ಕೆ ಆಟಗಳಷ್ಟು ಉತ್ತಮವಾದ ಬೇರೆ ಯಾವ ಸಾಧನವೂ ಇರುವದಿಲ್ಲ. ಆಟಕ್ಕೆ ನಿಂತ ಮನುಷ್ಯನ ಮನಸಿನಲ್ಲಿ ಆ ಕಾಲದ ಪರಿಸ್ಥಿತಿಗನುಸರಿಸಿ ವಿರುದ್ಧ ಪಕ್ಷದವರ ವಿಷಯವಾಗಿ ಪ್ರೀತಿಯೂ, ಅವರನ್ನು ಸೋಲಿಸುವದಕ್ಕಾಗಿ ಯೋಗ್ಯ ಪ್ರಯತ್ನಗಳನ್ನು ಮಾಡಬೇಕೆಂಬ ಬುದ್ಧಿಯೂ ತಮ್ಮಿಂದ ತಾವೇ ಉತ್ಪನ್ನವಾಗುವವು. ಮನುಷ್ಯನು ಎಷ್ಟೇ ಜಗಳಗಂಟನೂ, ಕಪಟಿಯೂ, ನೀಚನೂ ಆಗಿದ್ದರೂ ಅವನಿಗೆ ಆಟದ ಲಕ್ಷ್ಯ ಹತ್ತಿ ದಿನಾಲು ನಿಯಮದಿಂದ ಆಡುತ್ತ ಹೋದರೆ, ಅವನ ಆ ದುರ್ಗುಣಗಳು ದಿನ ದಿನಕ್ಕೆ ನಿಃಸಂಶಯವಾಗಿ ಕಡಿಮೆಯಾಗುತ್ತ ಹೋಗುವವು. ಮಾನಸಿಕ ದೌರ್ಬಲ್ಯವುಳ್ಳವನಲ್ಲಿ ಚಟುವಟಿಕೆ ಉತ್ಸಾಹಗಳನ್ನು ಉತ್ಪನ್ನಮಾಡುವ ವಿಲಕ್ಷಣ ಸಾಮರ್ಥ್ಯವು ಆಟಗಳಲ್ಲಿ ಇರುವದು.

ಇದಲ್ಲದೆ ಇನ್ನೂ ಎಷ್ಟೋ ಮಹತ್ವದ ಗುಣಗಳು ಆಟಗಳಿಂದ ಉತ್ಪನ್ನವಾಗುವವು. ಅವುಗಳಲ್ಲಿ ತಿಸ್ತು ಇದೊಂದು ಗುಣವಾಗಿರುತ್ತದೆ. ಯಾವದೊಂದು ಕಾರ್ಯದಲ್ಲಿ ಯಶಪ್ರಾಪ್ತಿಯಾಗಬೇಕಾದರೆ ಆ ಕೆಲಸ ಮಾಡುವ ಎಲ್ಲ ಜನರ ಪ್ರಯತ್ನಗಳು ಒಂದೇ ವಿವಕ್ಷಿತ ದಿಕ್ಕಿನಿಂದ ಸಾಗಬೇಕಾಗುತ್ತದೆ. ಮತ್ತೂ ಅವರ ಶಕ್ತಿಗಳನ್ನೆಲ್ಲ ಏಕತಂತ್ರದಿಂದ ಉಪಯೋಗದಲ್ಲಿ ತರಬೇಕಾಗುತ್ತದೆ. ಆಟಗಳಿಗೂ ಈ ಮಾತು ಸಂಪೂರ್ಣವಾಗಿ ಹತ್ತುವದು. ತಮ್ಮ ಪಂಗಡಕ್ಕೆ ಜಯವು ದೊರೆಯಬೇಕೆಂದು, ಆ ಪಂಗಡದೊಳಗಿನ ಪ್ರತಿಯೊಬ್ಬ ವ್ಯಕ್ತಿಯು ಆ ಪಂಗಡದಲ್ಲಿ ಒಳ್ಳೇ ಬುದ್ಧಿವಂತನೂ ಕರ್ತೃತ್ವಶಾಲಿಯೂ ಆದ ಹಿರೇ ಉದ್ಧರಿಯ ತಂತ್ರದಿಂದ ನಡೆಯಬೇಕಾಗುತ್ತದೆ. ತಮ್ಮ ಪಂಗಡಕ್ಕೆ ಜಯ ದೊರೆಯಬೇ

ಕೆಂಬ ಪ್ರಬಲವಾದ ಇಚ್ಛೆಯ ಮೂಲಕವಾಗಿ ಹಿರೇ ಉದ್ದರಿಯ ತಂತ್ರ ದಂತೆ ನಡೆಯುವದು ಅಪಮಾನವೆಂದು ಯಾರ ಮನಸಿನಲ್ಲಿಯೂ ಬರು ವದಿಲ್ಲ. ಇಲ್ಲದಿದ್ದರೆ ಬೇರೆ ಪ್ರಸಂಗಗಳಲ್ಲಿ ಯಾವನೂ ತನ್ನ ಮನಸ್ಸಿನ ವಿರುದ್ಧವಾಗಿ ಮತ್ತೊಬ್ಬನ ತಂತ್ರದಂತೆ ನಡೆಯಲಿಕ್ಕೆ ಒಪ್ಪಿಕೊಳ್ಳಲಾ ರನು. ಆದರೆ ಆಟದಲ್ಲಿ ಸೀಡಕನೂ, ಮಾನವಂತನೂ ಆದ ಮನು ಷ್ಯನು ಸಹ ತನ್ನ ವಿಚಾರಗಳನ್ನು ಬದಿಗಿಟ್ಟು ಹಿರೇ ಉದ್ದರಿಯ ಮಾತು ಗಳಿಗೆ ಮಾನ ಕೊಡುತ್ತಾನೆ. ಈ ಪ್ರಕಾರ ಆಟಗಳಿಂದ ಶಿಸ್ತಿನಿಂದ ನಡೆ ಯುವ ಶಿಕ್ಷಣವು ದೊರೆಯುವದು; ಹಾಗು ಶಿಸ್ತಿನಿಂದ ನಡೆಯುವ ಚಟ ವು ಬೀಳುವದು.

ಆಟಗಳಿಂದ ಪ್ರಾಪ್ತವಾಗುವ ಮತ್ತೊಂದು ಮಹತ್ವದ ಗುಣವೆಂ ದರೆ ಸ್ವಾರ್ಥತ್ಯಾಗವು. ಆಡುವಾಗ ಯಾವದೊಂದು ಉದ್ದರಿಯ ಕಾಲೊ ಳಗೆ ಮುಳ್ಳು ಮುರಿಯಿತೆಂದು ತಿಳಿಯುವಾ. ಆಗ ಅವನ ಮನಸಿನಲ್ಲಿ ನಾನು ಈ ಕಾಲಕ್ಕೆ ಆಟದ ಕಡೆಗೆ ಅಲಕ್ಷ ಮಾಡಿದರೆ ನನ್ನ ಒಬ್ಬನ ತಪ್ಪಿನಿಂದ ನಮ್ಮ ಪಂಗಡಕ್ಕೆ ಒಂದುವೇಳೆ ಅಪಜಯವಾದೀತೆಂಬ ಭೀತಿ ಯಿಂದ ಅವನು ತನಗಾಗುವ ಅಲ್ಪಸ್ವಲ್ಪ ನೋವನ್ನು ಸಹಿಸಿಕೊಂಡಾ ದರೂ ಆಟದ ಕಡೆಗೆ ಲಕ್ಷ ಕೊಡುವನು. ಆಗ ಅವನ ಮನಸಿನಲ್ಲಿ ತನ್ನ ಹಿತಕ್ಕಿಂತ ಹೆಚ್ಚಿನದಾದ ತನ್ನ ಪಂಗಡದ ಹಿತವನ್ನು ಸಾಧಿಸುವ ಕಲ್ಪನೆಯು ಉತ್ಪನ್ನವಾಗುವದು. ತನ್ನ ಅಲಕ್ಷದಿಂದ ತನಗೇನಾದರೂ ದುಃಖವಾದರೆ ಅದನ್ನು ತಾನೊಬ್ಬನೇ ತಾಳಿಕೊಳ್ಳಬಹುದು. ಆದರೆ ತನ್ನೊಬ್ಬನ ತಪ್ಪಿನಿಂದ ಆಟವು ವಿರಸವಾಗಿ ತನ್ನ ಪಂಗಡದ ಎಲ್ಲ ಜನ ರಿಗೂ ಖೇದವಾಗುವ ಪ್ರಸಂಗವು ಬರಬಾರದೆಂದು ಸ್ವತಃ ಕೆಲವು ದುಃಖ ವನ್ನು ಸಹಿಸಿ ಆಟವಾಡುತ್ತ ನಿಲ್ಲುವನು. ಈ ಪ್ರಕಾರ ಆಟದಿಂದ ಮನು ಷ್ಯನ ಮನಸಿನಲ್ಲಿ ಪಕ್ಷಾಭಿಮಾನದ ಕಲ್ಪನೆಯು ಉತ್ಪನ್ನವಾಗುವದು. ತನ್ನ ಪಕ್ಷದವರ ಲಾಭದ ಸಲುವಾಗಿ ತನ್ನ ಸಮಾಜದ ಹಿತದ ಸಲು ವಾಗಿ, ಸಮುಷ್ಟಿಯ ಕೆಲಸದ ಸಲುವಾಗಿ, ತನ್ನೊಬ್ಬನ ಆಥವಾ ವ್ಯಕ್ತಿಯ ಇಲ್ಲವೆ ವ್ಯಷ್ಟಿಯ ಸುಖವನ್ನೂ ಅನುಕೂಲತೆಗಳನ್ನೂ ಹ್ಯಾಗೆ ಬದಿಗೆ ಸರಿಸಬೇಕೆಂಬ ಪಾಠವು ಆಟಗಳಿಂದ ದೊರೆಯುವದು.

ಇದೇ ಪ್ರಕಾರ ಆಟಗಳಿಂದ, ದೀರ್ಘಪ್ರಯತ್ನ, ಕೈಕೊಂಡ ಕೆಲಸವು ಕೊನೆಗಾಣುವವರೆಗೆ ಬಿಡದೆ ಇರುವ ಸ್ವಭಾವ ಇವೇ ಮೊದಲಾದ ಗುಣಗಳು ಉತ್ಪನ್ನವಾಗುವವು.

ಸಮಾಜದ ಉನ್ನತಿಗೆ ಈ ಎಲ್ಲ ಗುಣಗಳು ಎಷ್ಟು ಆವಶ್ಯಕವಾಗಿರುವವೆಂಬದನ್ನು ಇಲ್ಲಿ ಬೇರೆ ಹೇಳುವ ಕಾರಣವಿಲ್ಲ. ಈ ಗುಣಗಳ ಅಭಾವದ ಮೂಲಕವಾಗಿಯೇ ನಾವು ಸದ್ಯಕ್ಕೆ ನಾನಾವಿಧದ ವಿಪತ್ತುಗಳಿಗೆ ಗುರಿಯಾಗಿರುವೆವು. ಆಟಗಳಿಂದ ಮೇಲೆ ಹೇಳಿದ ಗುಣಗಳು ಸಹಜವಾಗಿ ಮೈಯುಂಡರೆ ಅವುಗಳ ಪರಿಣಾಮವು ನಾವು ನಿತ್ಯದಲ್ಲಿ ನೋಡುವ ವ್ಯವಹಾರಗಳಲ್ಲಿ ಆಗಾಗ್ಗೆ ವ್ಯಕ್ತವಾಗುವದು. ಇದಲ್ಲದೆ ಆಟಗಳಿಂದ ಶರೀರಸಾಮರ್ಥ್ಯವು ಬೆಳೆಯುವದೊಂದು ಮಹತ್ವದ ಲಾಭವು ಬೇರೆಯೇ ಇರುವದು. ಅದನ್ನು ವಿವರಿಸಿ ಹೇಳುವ ಕಾರಣವಿಲ್ಲ.

ಪತ್ರವ್ಯವಹಾರ.

ಮಹಾಕವಿಗಳೂ ಬಿರುದುಗಳೂ

ಈ ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನು ಬೇಕೆಂದು ಅಪೇಕ್ಷಿಸುತ್ತಾನಲ್ಲವೇ? ಹಾಗಾಗಲಿಕ್ಕೆ ತನ್ನ ಕೈಲಾದಮಟ್ಟಿಗೆ ಯತ್ನವನ್ನಾದರೂ ಮಾಡುವನು. ಪ್ರತಿದಿನ ಬೆಳೆಯತಕ್ಕ ಪ್ರಪಂಚಕ್ಕೆ ಇದು ಯೋಗ್ಯವಾದದ್ದೇ.

ಪ್ರಸಿದ್ಧಿಯು ಒಂದುಕಡೆಯಲ್ಲಿ ಧೈರ್ಯದಿಂದ, ಮತ್ತೊಂದು ಕಡೆಯಲ್ಲಿ ಶೌರ್ಯದಿಂದ, ಇನ್ನೊಂದೆಡೆಯಲ್ಲಿ ಔದಾರ್ಯದಿಂದ, ಕೆಲವೆಡೆಯಲ್ಲಿ ದಾನದಿಂದ, ಹಲವೆಡೆಯಲ್ಲಿ ಮಾನದಿಂದ, ಕೆಲವೆಡೆಗೆ ಕಾವ್ಯದಿಂದ ಆಗುವದು.

ಅಪತರ ಈ ಅಪ್ರಸ್ತುತ ವರ್ಣನೆಯನ್ನು ಬದಿಗಿಟ್ಟು, ಕಾವ್ಯದಿಂದ ಯಾರು ಅಜರಾಮರಧರ್ಮರಾಗಿರುವರೋ ಅವರನ್ನೇ ನಾವೀ ಅವಸರದಲ್ಲಿ ಅಧಿಕರಿಸುವ.

ಆಧುನಿಕರಾದ ವಿದ್ಯಾವಂತರು ಹೇಗೆ ಬಾಲಸರಸ್ವತೀ, ತರ್ಕವಾಚಸ್ಪತಿ, ವಿದ್ಯಾಭೂಷಣ, ಭಟ್ಟಶ್ರೀ, ಬಿ. ಎ., ಎಮ್. ಎ, ಮೊದಲಾದ ಪದವಿಗಳಿಂದ ಅಲಂಕೃತರಾಗುವರೋ, ಹಾಗೆಯೇ ನಮ್ಮ ಪ್ರಾಚೀನ ಮಹಾಕವಿಗಳಾದರೂ ಬಿರುದುಗಳಿಂದ ಭೂಷಿತರಾಗಿದ್ದರೆಂದು ಕೇಳುತ್ತೇವೆ.

ಅವರಲ್ಲಿಯೂ ಕವಿಗಳಲ್ಲಿ ಪ್ರಥಮಗಣನೀಯನಾದ ಕಾಲಿದಾಸನ ಬಿರುದನ್ನೇ ಮೊದಲು ಹೇಳುವೆವು.

ಕವಿಕುಲತಿಲಕನಾದ ಕಾಲಿದಾಸನು ರಘುವಂಶವೆಂಬ ರಸಮಯ ಕಾವ್ಯದಲ್ಲಿ, ಇಂದುಮತೀ ಸ್ವಯಂವರವರ್ಣನಾವಸರದಲ್ಲಿ —

ಚಾಪಳದ ಕುಡಿನೋಟದಂಗನೆ ।
ದೀಪಶಿಖೆಯಂತಿರೆ ಸ್ವಯಂವರ ।
ಭೂಪರಲಿ ನಡೆದಿರಲು ಮುಂದಕೆ ಹಿಂದಿನವನಿಪರು ॥
ಭೂಪಮಾರ್ಗದೊಳಿರುವ ಮಂದಿರ ।
ರೂಪವನು ಹೊಂದಿದರು ಮುಂದಿನ ।
ಭೂಪರೈದಿದರಾಗ ಸಾವಿತರವಿಯ ತೇಜವನು ॥

ಸಂಚರಿಸತಕ್ಕ ದೀಪಶಿಖೆಯಂತೆ ಪತಿಯನ್ನು ವರಿಸುವ ಆ ಇ ಮತಿಯು ಯಾವ ಯಾವ ಭೂಪತಿಯನ್ನು ದಾಟಿ ನಡೆದಳೋ ಆ ಪನ ಮುಖವು ರಾಜಮಾರ್ಗದಲ್ಲಿರುವ ಪ್ರಾಸಾದದಂತೆ ವಿವರ್ಣತೆಯನ್ನು ಹೊಂದಿತು.

ಈ ಪದ್ಯದಿಂದ ಇಂದುಮತಿಗೆ ಅನಭಿಮತರಾದ, ಆದ್ದರಿಂದಲೇ ಆಕೆಯಿಂದ ಉಪೇಕ್ಷಿಸಲ್ಪಟ್ಟ, ಅರಸರ ಅತಿದಯನೀಯವಾದ ಅವಸ್ಥೆಯನ್ನು ನಿರೂಪಿಸುವ ಕವಿಯು, ಈ ಪದ್ಯಶ್ರವಣದಿಂದ ಚಮತ್ಕೃತರಾದ ಇತರ ಪಂಡಿತರಿಂದ "ದೀಪಶಿಖಾಕಾಲಿದಾಸಃ" ಎಂಬ ಪ್ರಸಿದ್ಧಿಯನ್ನು ಹೊಂದಿದನೆಂದು ಬಹುಕಾಲದಿಂದ ಕೇಳುವೆವು. "ಉಪಮಾ

ಇದೇ ಪ್ರಕಾರ ಆಟಗಳಿಂದ, ದೀರ್ಘಪ್ರಯತ್ನ, ಕೈಕೊಂಡ ಕೆಲಸವು ಕೊನೆಗಾಣುವವರೆಗೆ ಬಿಡದೆ ಇರುವ ಸ್ವಭಾವ ಇವೇ ಮೊದಲಾದ ಗುಣಗಳು ಉತ್ಪನ್ನವಾಗುವವು.

ಸಮಾಜದ ಉನ್ನತಿಗೆ ಈ ಎಲ್ಲ ಗುಣಗಳು ಎಷ್ಟು ಆವಶ್ಯಕವಾಗಿರುವವೆಂಬದನ್ನು ಇಲ್ಲಿ ಬೇರೆ ಹೇಳುವ ಕಾರಣವಿಲ್ಲ. ಈ ಗುಣಗಳ ಅಭಾವದ ಮೂಲಕವಾಗಿಯೇ ನಾವು ಸದ್ಯಕ್ಕೆ ನಾನಾವಿಧದ ವಿಪತ್ತುಗಳಿಗೆ ಗುರಿಯಾಗಿರುವೆವು. ಆಟಗಳಿಂದ ಮೇಲೆ ಹೇಳಿದ ಗುಣಗಳು ಸಹಜವಾಗಿ ಮೈಯ್ಯುಂಡರೆ ಅವುಗಳ ಪರಿಣಾಮವು ನಾವು ನಿತ್ಯದಲ್ಲಿ ಮಾಡುವ ವ್ಯವಹಾರಗಳಲ್ಲಿ ಆಗಾಗ್ಗೆ ವ್ಯಕ್ತವಾಗುವದು. ಇದಲ್ಲದೆ ಆಟಗಳಿಂದ ಶರೀರಸಾಮರ್ಥ್ಯವು ಬೆಳೆಯುವದೊಂದು ಮಹತ್ವದ ಲಾಭವು ಬೇರೆಯೇ ಇರುವದು. ಅದನ್ನು ವಿವರಿಸಿ ಹೇಳುವ ಕಾರಣವಿಲ್ಲ.

ಪತ್ರವ್ಯವಹಾರ.

ಮಹಾಕವಿಗಳೂ ಬಿರುದುಗಳೂ.

ಕದಲ್ಲಿ ಪ್ರತಿಯೊಬ್ಬ ಮನುಷ್ಯನು ತನ್ನ ಪ್ರಸಿದ್ಧಿಯಾಗಬೇಕೆಂದು ಅಪೇಕ್ಷಿಸುತ್ತಾನಲ್ಲವೇ? ಹಾಗಾಗಲಿಕ್ಕೆ ತನ್ನ ಕೈಲಾದವುಟ್ಟಿಗೆ ಯತ್ನವನ್ನಾದರೂ ಮಾಡುವನು. ಪ್ರತಿದಿನ ಬೆಳೆಯತಕ್ಕ ಪ್ರಪಂಚಕ್ಕೆ ಇದು ಯೋಗ್ಯವಾದದ್ದೇ.

ಪ್ರಸಿದ್ಧಿಯು ಒಂದುಕಡೆಯಲ್ಲಿ ಧೈರ್ಯದಿಂದ, ಮತ್ತೊಂದು ಕಡೆಯಲ್ಲಿ ಶೌರ್ಯದಿಂದ, ಇನ್ನೊಂದೆಡೆಯಲ್ಲಿ ಔದಾರ್ಯದಿಂದ, ಕೆಲವೆಡೆಯಲ್ಲಿ ದಾನದಿಂದ, ಕೆಲವೆಡೆಯಲ್ಲಿ ಮಾನದಿಂದ, ಕೆಲವೆಡೆಗೆ ಕಾವ್ಯದಿಂದ ಆಗುವದು.

ತಂತಮ್ಮ ಈ ಅಪ್ರಸ್ತುತ ವರ್ಣನೆಯನ್ನು ಬಿಡಿಗಿಟ್ಟು, ಕಾವ್ಯದಿಂದ ಯಾರು ಅಜರಾಮರಕೀರ್ತಿಗಳಾಗಿರುವರೋ ಅವರನ್ನೇ ನಾವೀ ಅವಸರದಲ್ಲಿ ಅಧಿಕರಿಸುವ.

ಪದುನಿಕರಾದ ವಿದ್ವಾಂಸರು ಹೇಗೆ ಬಾಲಸರಸ್ವತೀ, ತರ್ಕವಾಚಸ್ಪತಿ, ವಿದ್ಯಾಭೂಷಣ, ಭಟ್ಟಶ್ರೀ, ಬಿ. ಎ., ಎಮ್. ಎ, ಮೊದಲಾದ ಪದವಿಗಳಿಂದ ಅಲಂಕೃತರಾಗುವರೋ, ಹಾಗೆಯೇ ನಮ್ಮ ಪ್ರಾಚೀನ ಮಹಾಕವಿಗಳಾದರೂ ಬಿರುದುಗಳಿಂದ ಭೂಷಿತರಾಗಿದ್ದರೆಂದು ಕೇಳುತ್ತೇವೆ.

ಅವರಲ್ಲಿಯೂ ಕವಿಗಳಲ್ಲಿ ಪ್ರಥಮಗಣನೀಯನಾದ ಕಾಲಿದಾಸನ ಬಿರುದನ್ನೇ ಮೊದಲು ಹೇಳುವೆವು.

ಕವಿಕುಲತಿಲಕನಾದ ಕಾಲಿದಾಸನು ರಘುವಂಶವೆಂಬ ರಸಮಯ ಕಾವ್ಯದಲ್ಲಿ, ಇಂದುಮತೀ ಸ್ವಯಂವರವರ್ಣನಾವಸರದಲ್ಲಿ —

ಚಾಪಳದ ಕುಡಿನೋಟದಂಗನೆ।
ದೀಪಶಿಖೆಯಂತಿರೆ ಸ್ವಯಂವರ।
ಭೂಪರಲಿ ನಡೆದಿರಲು ಮುಂದಕೆ ಹಿಂದಿನವನಿಪರು ॥
ಭೂಪಮಾರ್ಗದೊಳಿರುವ ಮುಂದಿನ।
ರೂಪವನು ಹೊಂದಿದರು ಮುಂದಿನ।
ಭೂಪರೈದಿದರಾಗ ಸಾವರರಿಯ ತೇಜವನು ॥

ಸಂಚರಿಸುತಕ್ಕ ದೀಪಶಿಖೆಯಂತೆ ಪತಿಯನ್ನು ವರಿಸುವ ಆ ಇಂದುಮತಿಯು ಯಾವ ಯಾವ ಭೂಪತಿಯನ್ನು ದಾಟಿ ನಡೆದಳೋ ಆ ಭೂಪನ ಮುಖವು ರಾಜಮಾರ್ಗದಲ್ಲಿರುವ ಪ್ರಾಸಾದದಂತೆ ವಿವರ್ಣತೆಯನ್ನು ಹೊಂದಿತು.

ಈ ಪದ್ಯದಿಂದ ಇಂದುಮತಿಗೆ ಅನಭಿಮತರಾದ, ಆದ್ದರಿಂದಲೇ ಆಕೆಯಿಂದ ಉಪೇಕ್ಷಿಸಲ್ಪಟ್ಟ, ಅತಸರ ಅತಿದಯನೀಯವಾದ ಅವಸ್ಥೆಯನ್ನು ನಿರೂಪಿಸುವ ಕವಿಯು, ಈ ಪದ್ಯಶ್ರವಣದಿಂದ ಚಮತ್ಕೃತರಾದ ಇತರ ಪಂಡಿತರಿಂದ "ದೀಪಶಿಖಾಕಾಲಿದಾಸಃ" ಎಂಬ ಪ್ರಸಿದ್ಧಿಯನ್ನು ಹೊಂದಿದನೆಂದು ಬಹುಕಾಲದಿಂದ ಕೇಳುವೆವು. "ಉಪಮಾ

ಕಾಲಿದಾಸಸ್ಯ" ಎಂಬ ಚಿರಪ್ರಸಿದ್ಧವಾದ ಪ್ರವಾದವನ್ನು ಸಮರ್ಥಿಸುತ್ತ ಈ ವರ್ಣನವು ಅನ್ಯಾದೃಶವಾದ ಆನಂದವನ್ನುಂಟು ಮಾಡುವದೆಂಬ ಬಗ್ಗೆ ಸಹೃದಯರಿಗೆ ಸ್ವಹೃದಯವೇ ಪ್ರಮಾಣವು.

ಕಾಲಿದಾಸನಂತೆ ಭಾರವಿಕವಿಯಾದರೂ ಕಿರಾತಾರ್ಜುನೀಯ ಕಾವ್ಯದಲ್ಲಿ —

*
ಅರಳಿದೀ ನಲಿನಗಳ ವನದೆಡೆ !
ಯರರೆ ಪುಟ್ಟಿದ ಹುಡಿಯು ಮೇಲಕೆ !
ಭರದೆ ಗಾಳಿಗಳಿಂದ ಗಗನಾಂಗಣಕೆ ಪಸರಿಸುತ ॥
ಮೆರೆಯುತಿದೆ ಕನಕಾತಪತ್ರವ !
ನಿರದೆ ಗೆಲ್ಲುತಲೆಲ್ಲಕಡೆಯಲಿ !
ಗಿರಿಯಕೊಳದೊಳಗಿರುವ ಸರಸೀ ರುಹದ ನಿಕರದಲಿ ॥

ಈ ಸ್ಥಲಕಮಲವನದಿಂದ, ಗಾಳಿಯು ಕಮಲಗಳಲ್ಲಿದ್ದ ಪರಾಗವನ್ನು ಎಬ್ಬಿಸಿಕೊಂಡು ಹೋಗಿ ಆಕಾಶದಲ್ಲಿ ಸುತ್ತಲು ಪಸರಿಸಿ ಕನಕಮಯಛತ್ರದ ಶೋಭೆಯನ್ನುಂಟುಮಾಡುವದು.

ಈ ಶ್ಲೋಕದಿಂದ ಸ್ಥಲನಲಿನೀವನದಿಂದ ಎದ್ದು ಆಕಾಶದಲ್ಲಿ ವಿವರ್ತಿತವಾದ ಸ್ಥಲನಲಿನೀಪರಾಗಪುಂಜವು ಬಂಗಾರದ ಕೊಡೆಯಂತೆ ಕಾಣುತ್ತದೆಂದು ನಿಪುಣವಾಗಿ ಉತ್ಪ್ರೇಕ್ಷಿಸಿ "ಛತ್ರಭಾರವಿಃ" ಎಂಬ ಪದವಿಯನ್ನು ಸಂಪಾದಿಸಿದನೆಂದು ಪಂಡಿತಪರಿಷತ್ತಿನಲ್ಲಿ ಕಿಂವದಂತಿಯುಂಟು.

ಇದರಂತೆ ಮಾಘಕವಿಯಾದರೂ ಘಂಟಾಮಾಘನೆಂದು ಪ್ರಸಿದ್ಧಿಯನ್ನು ಪಡೆದಿದ್ದನು. ಯಾಕಂದರೆ ಅವನು ಸ್ವನಿರ್ಮಿತವಾದ ಶಿಶುಪಾಲವಧವೆಂಬ ಕಾವ್ಯದಲ್ಲಿ ರೈವತಗಿರಿವರ್ಣನ ಪ್ರಕರಣದಲ್ಲಿ —

---

* ಈ ಶ್ಲೋಕಗಳು ಮಿ. ಉಸೇಂಪ್ರಶರ್ಮರಿಂದ ಅವತರಿಸಲ್ಪಟ್ಟಿವೆ.

ಮೋರೆಯನು ರವಿತೋರೆ ಪಶ್ಚಿಮ
ಮೇರೆಯನು ಶತಿಸಾರೆ ಗಗನದ ।
ಮೇರೆಯಲಿ ಪಸರಿಸುತ ತಮ್ಮ ರಶ್ಮಿರಜ್ಜುಗಳ ॥
ಬೇರೆ ಬೇರೆಯ ಪಾರ್ಶ್ವದೊಳಗಾ ।
ಘೋರಘಂಟೆಗಳನ್ನು ಧರಿಸಿದ ।
ವಾರಣದ ತೆರದಂತೆ ರೈವತಗಿರಿಯು ತೋರುವದು ॥

ವಿಸ್ತೃತಕಿರಣಗಳುಳ್ಳ ಸೂರ್ಯನು ಉದಯನಾಗುತ್ತಿರಲು ಚಂದ್ರನು ಅಸ್ತನಾಗುತ್ತಿರಲು, ರೈವತಗಿರಿಯು ಜೋತಾಡತಕ್ಕ ಎರಡು ಗಂಟೆಗಳಿಂದಲಂಕೃತವಾದ ಆನೆಯಂತೆ ಕಾಣುವದು. ಈ ವರ್ಣನದಿಂದ ಕವಿಯು ಉತ್ಪ್ರೇಕ್ಷೆಯಲ್ಲಿ ತನ್ನ ಕೌಶಲವನ್ನು ತೋರಿಸಿರುವನು. ಇದರಿಂದ ಅವನಿಗೆ ಘಂಟಾಮಾಘನೆಂಬ ಬಿರುದು ಸಿಕ್ಕಿತೆಂದು ನಿರ್ಣಯಸಾಗರ ನವೀನ ಮುದ್ರಿತಮಾಘಕಾವ್ಯ ಟಿಪ್ಪಣಿಯಲ್ಲಿ ವ್ಯಾಖ್ಯಾತೃವಾದ ವಲ್ಲಭದೇವನು ಹೇಳಿದ್ದಾನೆ:—

ಇವರಂತೆ ಬಾಲಭಾರತಕಾವ್ಯಕರ್ತೃವಾದ ಶ್ರೀಮದಮರಚಂದ್ರ ಸೂರಿಯು "ವೇಣೀಕೃಪಾಣೋಮುರಃ" ಎಂಬ ಬಿರುದಿನಿಂದ ಪ್ರಖ್ಯಾತನಾಗಿದ್ದನು. ಯಾಕಂದರೆ ಆ ಮಹಾಕವಿಯು ಈ ಪ್ರಕಾರ ರುಚಿರವಾಗಿ ಉತ್ಪ್ರೇಕ್ಷಿಸುತ್ತಾನೆ.

ಹರಗೆ ಪರಿಭವ ಹೊಂದಿದೆನು ತೆಗೆ ।
ಶರನಿದೆನ್ನುತ ಧರೆಯನೆಲ್ಲವ ।
ನಿರದೆ ಗೆಲ್ಲುವೆನೆಂದು ಮಾರನು ಸೂರನುದಯದಲಿ ॥
ಸರಭರನೆ ಮೊಸರನ್ನು ಕಡೆಯುತ ।
ಲಿರುವ ನಾರಿಯ ಚಲಿಪವೇಣಿಯ ।
ನೆರೆ ಮಿಪದಿ ತೋರುವನು ಜಗದಲಿ ನಿಜಕೃಪಾಣವನು ॥

ಮಹಾದೇವನಿಂದ ಅಪಜಯವನ್ನು ಹೊಂದಿದೆನು. ಇನ್ನೇಕೆ ಬಾಣವನ್ನು ಹಿಡಿಯಲಿ? ಎಂದು ಪ್ರತಿಜ್ಞೆಮಾಡಿ, ಕಾಮನು ಮುಂಜಾವಿನಲ್ಲಿ ಮೊಸರನ್ನು ಕಡಿತ್ತಲಿರುವ ನಾರಿಯ ಚಂಚಲವಾದ ಹೆಳಲಿನ ನೆವದಿಂದ

ಇನ್ನು ಇದರಿಂದಲೇ ಜಗತ್ತನ್ನೆಲ್ಲ ಗೆದೆಯುವೆನೆಂದು ತನ್ನ ಕತ್ತಿಯನ್ನು ತೋರಿಸುವನೇನೋ !!

ಶ್ರೀಕಂಠಚರಿತಾಖ್ಯ ಮಹಾಕಾವ್ಯಕರ್ತೃವಾದ ಮಹಾಕವಿ ಮಂಖನು "ಕರ್ಣಿಕಾರಮಂಖಃ" ಎಂದು ಪ್ರಸಿದ್ಧನಾಗಿದ್ದನು. ಅವನು ತನ್ನ ಕಾವ್ಯದಲ್ಲಿ ಕರ್ಣಿಕಾರಕುಸುಮದ ರೂಪವನ್ನೂ, ಸೌರಭ್ಯಾಭಾವವನ್ನೂ ಸಹೃದಯಚಮತ್ಕಾರಿಯಾದ ಪ್ರಕಾರದಿಂದ ಈ ಪ್ರಕಾರ ವರ್ಣಿಸುವನು: —

ಅಣ್ಣಿ ಚಿತ್ತೈಸೀಗ ಹೆಚ್ಚಿನ।
ವರ್ಣದಿಂ ತರತರದೆ ಶೋಭಿಸಿ।
ತಣ್ಣಗಿನ ಸೌರಭ್ಯವಿಲ್ಲದೆಯರಳಿ ನಿಂತಿರುವ॥
ಕರ್ಣಿಕಾರವ ನೋಡಿ ಯಾವನ।
ಕಣ್ಣಿಗೂ ಘ್ರಾಣಕ್ಕು ನಿಕರದ।
ವರ್ಣನೆಯ ವಾಗ್ವಾದವದು ತಾ ನಡೆಯದಿರಬಹುದೇ?॥

ಇವರಂತೆ ಉದಯರಕ್ತವಾದ ಚಂದ್ರಬಿಂಬವನ್ನು ರತಿಪತಿರತ್ನ ಖೇಟಕತ್ವದಿಂದ ಉತ್ಪ್ರೇಕ್ಷಿಸಿ ಭಾವನಾಪುರುಷೋತ್ತಮವಾದಿಗ್ರಂಥಗಳ ಕರ್ತೃವೂ ಶತಾವಧಾನಿಯೂ ಆದ ಶ್ರೀನಿವಾಸಾಧ್ವರಿಯು "ರತ್ನಖೇಟಕ" ನೆಂದು ಪ್ರಸಿದ್ಧಿಹೊಂದಿದನು, ಎಂದು ಕೇಳುವೆವು.

ರತ್ನಖೇಟದೀಕ್ಷಿತನ ವಿಷಯವಾಗಿ ಚೋಲದೇಶದಲ್ಲಿ ಒಂದು ಕಿಂವದಂತಿಯುಂಟು: —

ಪೂರ್ವದಲ್ಲಿ ಒಬ್ಬ ಪಂಡಿತಾಗ್ರಣಿಯು ಶ್ರೀರತ್ನಖೇಟದೀಕ್ಷಿತನನ್ನು ವಾದದಲ್ಲಿ ಗೆದೆಯಬೇಕೆಂದು ಅವನ ಮನೆಯ ಬಾಗಿಲ ಬಳಿಗೆ ಮುಂಜಾವಿನಲ್ಲಿಯೇ ಬಂದನು. ಆಗ ಅಂಗಳದ ಸಂಮಾರ್ಜನವನ್ನು ಮಾಡುವದಕ್ಕಾಗಿ ಗೋಮಯಜಲದಿಂದೊಡಗೂಡಿದ ಭಾಂಡವನ್ನು ಕೈಯಲ್ಲಿ ಹಿಡಿದುಕೊಂಡು ಬಂದ ಮುಗ್ಧಳಾದ ಸ್ತ್ರೀಯಳಿಗೆ ರತ್ನಖೇಟದೀಕ್ಷಿತನಿರುವನೇ? ಅವನನ್ನು ವಾದದಲ್ಲಿ ಗೆದೆಯಲು ಬಂದಿದ್ದೇನೆ, ಎಂದಂದನು. ಆಕೆಯು ಈ ಮಾತನ್ನು ಕೇಳದವಳಂತೆ ನಟಿಸುತ್ತ ಸ್ವಕಾರ್ಯವ್ಯಗ್ರಳಾಗಿ, ಗೋಮಯಾಂಬುಸೇಚನತಾಲಾನುಗುಣವಾಗಿಯೇ:--

* ಪಂಡಿತರ ಮೊದಲಿಗನು ರಿಪುಗಳ
ದಂಡಿಸುವನಲಿ ಯತ್ನವಿಲ್ಲದೆ
ಪುಂಡ ರತ್ನಸುಖೇಟ ದೀಕ್ಷಿತನೆದುರು ವಾದಿಸಲು ॥
ಕಂಡು ಬಡಬಡಿಸುವನು ಸುರಗುರು
ಮುಂಡಗಳ ಬಗ್ಗಿಪನು ವಣ್ಮುಖ
ನಂಡಲೆದು ಪೋಗುವನು ಶೇಷನು ಜೊಮ್ಮಡುವ್ಮೊಗನು॥

ಈ ಅರ್ಥದ ಪದ್ಯವನ್ನು ಅನ್ನತ್ತ ಅಂಗಳದಲ್ಲಿ ಥಳಿ ಹೊಡೆದಳು. ಬಂದ ಪಂಡಿತನಿದನ್ನು ಕೇಳಿ "ಏನು ಈ ಗೃಹದ ಪಾಂಡಿತ್ಯವೊ!!!" ಎಂದು ಪ್ರಶಂಸಿಸುತ್ತ, ಭಯದಿಂದ ಪಲಾಯನವನ್ನೇ ಶರಣು ಹೋದನು.

ಕ್ರಮಶಃ

ತವ್ಯ ವಿಧೇಯ ಶಿಷ್ಯ.
ಕೇಶವಭಟ್ಟ ಜೋಶಿ, ಗಲಗಲಿ.

ಗುರುವರ್ಯ, ರಾವಸಾಹೇಬ ಕನ್ನಡ ಶಾಲಾಪತ್ರಿಕೆಯ ಎಡಿಟರ ಮಹಾಶಯರ ಸನ್ನಿಧಿಗೆ:—

ತಮ್ಮ ಶಿಷ್ಯರಲ್ಲೋರ್ವನ, ಸಾಷ್ಟಾಂಗ ನಮಸ್ಕಾರ. ವಿ. ವಿ.

ತಮ್ಮ ಮಾಸಪತ್ರಿಕೆಯಲ್ಲಿ, ಈ ಕೆಳಗಿನ ನಾಲ್ಕು ಪಂಕ್ತಿಗಳಿಗೆ, ಸ್ಥಾನವನ್ನು ಕೊಡುವಿರೆಂದು ಅಪೇಕ್ಷಿಸುತ್ತೇನೆ.

"ವಾಚನ ಮತ್ತು ವಾಚನಾಲಯ."

ವಾಚನದ ಉದ್ದೇಶ:— ಈ ಲೋಕದಲ್ಲಿ ಹುಟ್ಟಿದ ಪ್ರತಿಯೊಬ್ಬ ಮನುಷ್ಯನು ಇಹದಲ್ಲಿ ಕೀರ್ತಿಯನ್ನೂ, ಪರದಲ್ಲಿ ಸೌಖ್ಯವನ್ನೂ ಬಯಸುತ್ತಿರುತ್ತಾನೆ. ಇವೆಲ್ಲವೂ ದೊರೆಯಬೇಕಾದರೆ ಜ್ಞಾನವೇ ಮೂಲವು. ಇಂಥಾ ಜ್ಞಾನವು ಸಂಪಾದನೆಯಾಗುವದಕ್ಕೆ, ವಾಚನವು ಮುಖ್ಯ ಸಾಧನವಾಗಿರುತ್ತದೆ. ಮನುಷ್ಯನಿಗೆ ಎಷ್ಟೋ ದುಃಖಗಳಿದ್ದರೂ, ವಾಚನ

---

*ಮೂಲ ಶ್ಲೋಕ--"ವಿಪಶ್ಚಿತಾಮ ಪಶ್ಚಿಮೇऽಥ ರತ್ನಖೇಟದೀಕ್ಷಿತೇ ಸಪತ್ನಜಿ-
ತ್ಯಯತ್ನತೋ ವಿವಾದಕೇಲಿ ಮಾಗತೇ । ಬೃಹಸ್ಪತಿಃ ಪ್ರಜಲ್ಪತಿ ಪ್ರಕರ್ಪತಿ ಕ ಸರ್ಪರಾಡ
ಷಡಾನನೋ ನತಾನನಶ್ಚತುರ್ಮುಖಶ್ಚ ದೃಮ್ಮುಖಃ ॥ "

ದಿಂದ ಅವನ ಮನೋರಂಜನವಾಗಿ, ಆ ಓದುವ ವೇಳೆಯ ಮಟ್ಟಿಗಾದರೂ ತನ್ನ ದುಃಖಗಳನ್ನು ಮರೆಯುವನು. ಏಕಾಂತವಾಸದಲ್ಲಿ ಮನಸ್ಸಿನ ಕಾರ್ಯವು ಆನಂದದಿಂದ ಜರುಗುವಿಕ್ಕೆ ವಾಚನದಂಥ ಜತೆಯು ಮತ್ತೊಂದಿಲ್ಲ. ನಾವು ದಿನ ದಿನಕ್ಕೆ ಹ್ಯಾಗೆ ಹ್ಯಾಗೆ ಹೆಚ್ಚು ಓದಹತ್ತುವೆವೋ, ಹಾಗೆ ಹಾಗೆ ವಾಚನಾಭಿರುಚಿಯು ಹೆಚ್ಚು ಬೆಳೆದು, ಜಗತ್ತಿನಲ್ಲಿ ನಡೆದ ದಿನಂಪ್ರತಿಯ ಎಲ್ಲ ವ್ಯವಹಾರಗಳೂ, ತಪ್ಪದೆ ತಿಳಿಯುತ್ತವೆ. ಇದಲ್ಲದೆ ವಾಚನದಿಂದ ವಿಚಾರ ಮಾಡುವ ಶಕ್ತಿಯು ಬೆಳೆದು, ಬುದ್ಧಿಯು ವಿಕಾಸವಾಗುತ್ತದೆ. ವಾಚನದ ವಿಷಯವಾಗಿ ನೇಪೋಲಿಯನ್‌ನು ಒಂದು ಕಡೆಗೆ ಅಂದದ್ದೇನಂದರೆ:— "ನಾನು ಅಡವಿಯಲ್ಲಿ ಇರಬೇಕೆಂದು ಹೇಳಿ ಪುಸ್ತಕಗಳನ್ನು ಕೊಟ್ಟರೆ (ಓದಲಿಕ್ಕೆ) ಅಲ್ಲಿಯೇ ಆನಂದದಿಂದ ಕಾಲಕ್ರಮಣ ಮಾಡುವೆನು." ಈ ಸಂಗತಿಯು ಅಕ್ಷರಶಃ ನಿಜವಿರುತ್ತದೆ. ಯಾಕಂದರೆ ಇದರಿಂದ ಪ್ರಾಚೀನ, ಹಾಗೂ ಅರ್ವಾಚೀನ ಕಾಲದ ಅನೇಕ ವಿದ್ವಾಂಸರ ಪರಿಚಯವಾಗುತ್ತದೆ. ಅವರು ಪುಸ್ತಕದಲ್ಲಿ ಬರೆದು ಇಟ್ಟಂಥ, ಉದಾತ್ತ ವಿಚಾರಗಳು ತಿಳಿದು, ಮನಸ್ಸು ಸುಸಂಸ್ಕೃತವಾಗುತ್ತದೆ.

೧. ವಾಚನದ ಕ್ರಮ.

ನಾವು ಏನು ಓದುವೆವೋ, ಅದನ್ನು ನೆಟ್ಟಗೆ ಮನನ ಮಾಡಿಕೊಳ್ಳತಕ್ಕದ್ದು. ಅಂದರೆ ಮಾತ್ರ ಜ್ಞಾನ ಪ್ರಾಪ್ತಿಯಾಗುವದೇ ಹೊರ್ತು, ಇಲ್ಲದಿದ್ದರೆ ಎಷ್ಟು ಓದಿದರೂ "ಡಬ್ಬುಗೊಡದ ಮೇಲೆ ನೀರು ಸುರುವಿದಂತೆ" ಅದು ನಿಷ್ಫಲವೇ ಸರಿ. ಮನನ ಮಾಡಿಕೊಳ್ಳದೆ, ಇಪ್ಪತ್ತೈದು ಪುಸ್ತಕಗಳನ್ನು ಓದಿದ್ದಕ್ಕಿಂತಲೂ, ಮನಸ್ಸುಗೊಟ್ಟು ಒಂದೇ ಪುಸ್ತಕವನ್ನು ಓದಿದ್ದರ ಪರಿಣಾಮದ ಮಹತ್ವವು ಹೆಚ್ಚಿರುತ್ತದೆ. ಯಾಕಂದರೆ, ಉಣ್ಣುವಾಗ ಅನ್ನವನ್ನು ಚನ್ನಾಗಿ ನುರಿಸಿ ನುಂಗಿದರೆ, ದೇಹಕ್ಕೆ ಹಿತವಾಗುತ್ತದೆಯೇ ಹೊರ್ತು, ಹಾಗೆಯೇ ಗಡಬಿಡಿಯಿಂದ ತಿಂದರೆ, ಎಂದೂ ಉಪಯೋಗವಾಗುವದಿಲ್ಲ. ಈಗಿನ ಕಾಲದಲ್ಲಿ ಎಷ್ಟೋ ಮಹನೀಯರು, ವರ್ತಮಾನಪತ್ರ, ಪುಸ್ತಕ ಮೊದಲಾದವುಗಳು ಹೊಸದಾಗಿ ಬಂದ ಕೂಡಲೆ, ಕಣ್ಣಿನಿಂದ ನೋಡಿ ತಿರುವಿಹಾಕಿ, ಅದರ ಸಂಗಡಲೇ ಓದುವದನ್ನು ಸಹ ಮುಗಿಸಿ ಬಿಡುತ್ತಾರೆ. ಅವರಿಗೆ ಹ್ಯಾಗೆ

ಸಮಾಧಾನವಾಗುತ್ತದೆಯೋ ದೇವರಿಗೇ ಗೊತ್ತು! ಹೀಗೆ ಓದುವದರಿಂದ, ಜ್ಞಾನಪ್ರಾಪ್ತಿಯು ಏನೂ ಆಗದೆ, ನಾನು ಬಹಳ ಓದುತ್ತೇನೆ, ನಾನು ಬಹಳ ಪಂಡಿತನು, ಎಂಬ ಗರ್ವವು ಮಾತ್ರ ಉತ್ಪನ್ನವಾಗುವ ಸಂಭವವಿರುತ್ತದೆ. ಇದರ ಫಲವು ಪ್ರಾಯದ ಕಾಲದಲ್ಲಿ ಕೆಲಸ ನಡೆಸುವಾಗ ಏನೂ ತಿಳಿಯುವದಿಲ್ಲ. ಕಡೆಯ ಅವಸ್ಥೆಯಲ್ಲಿ ಬೇಸರದಿಂದ ಹೊತ್ತುಗಳೆಯುವಾಗ, ಪಶ್ಚಾತ್ತಾಪವಾಗಬಹುದು

ಆದ್ದರಿಂದ ಪ್ರಿಯ ವ್ಯವಸಾಯಬಂಧುಗಳೇ, ನಾವಾದರೂ ಪೇನ ಶನ್ನಿಗೆ ತಕ್ಕ ಹಳೇ ಮಾಸ್ತರರಾಗುವಷ್ಟರಲ್ಲಿ, ಅನುಭವದೊಂದಿಗೆ ವಾಚನವನ್ನಾದರೂ ಬೆಳಿಸಿ, ಹೊಸ ಹೊಸ ಜ್ಞಾನ ಸಂಪಾದನೆ ಮಾಡಿಕೊಳ್ಳುತ್ತ, ಹೊಸದಾಗಿ ಶಿಕ್ಷಣ ಹೊಂದಿ ಬರುತ್ತಿರುವ ತರುಣರಿಗೆ ಅನುಭವವನ್ನು ಕೊಡುವಂಥವರಾಗುವದು ಯೋಗ್ಯವದೆ ಅರ್ಥಾತ್ ಕಾಲೇಜ ಬಿಟ್ಟ ಕೂಡಲೆ ಸ್ಥಾನ, ಕಾಲ ಮುಂತಾದ ಪರಿಸ್ಥಿತಿಗಳಿಂದ ಅನೇಕ ಅನನುಕೂಲತೆಗಳು ಬಂದರೂ ದುರಭಿಮಾನಿಗಳಾಗದೆ, ಓದಾಳಿಗಳಾಗಿರಬೇಕೆಂಬ ಸದಿಚ್ಛೆಯು ಇರಬೇಕು. ಯಾಕಂದರೆ, ಈ ಕಾಲದಲ್ಲಿ ಸಂಪಾದಿಸಿದ ಜ್ಞಾನದ ಸಂಗ್ರಹವು, ಕಡೆಯ ಕಾಲದಲ್ಲಿ ಖರ್ಚು ಮಾಡತಕ್ಕ ಭಾಂಡಾರವಾಗಿರುತ್ತದೆ. ಈ ಪ್ರಸಂಗದಲ್ಲಿ ವಿದ್ಯೆಗಿಂತಲೂ ಅನುಭವವು ಹೆಚ್ಚಿನದು, ಅದಕ್ಕೆ ಹೆಚ್ಚು ಮರ್ಯಾದೆಯನ್ನು ಕೊಡಬೇಕು ಎಂಬ ಸಂಗತಿಯನ್ನು ಮಾತ್ರ ಎಂದಿಗೂ ಮರೆಯಲಾಗದು. ಸದ್ಯಕ್ಕೆ ಅಮೇರಿಕಾ, ಇಂಗ್ಲಂಡ ಮೊದಲಾದ ದೇಶಗಳಲ್ಲಿ ನಡೆದಿರುವ ಸುಧಾರಣೆಯು ಕೇವಲ ಅಲ್ಲಿಯ ಜನರ, ವಾಚನಪ್ರಿಯತೆಯನ್ನೇ ಅವಲಂಬಿಸಿರುತ್ತದೆ. ಆ ಜನರ ವಾಚನಪ್ರಿಯತೆಯೆಷ್ಟೆಂಬ ಬಗ್ಗೆ ಸ್ವತಃ ಕೇಳಿದ ಒಂದು ಸಣ್ಣ ಮಾತಿನ ಉದಾಹರಣೆಯನ್ನು ಕೊಡಬಹುದು. ಸ್ವಲ್ಪ ದಿವಸ ಮೊದಲು ದಕ್ಷಿಣ ಭಾಗದ ಲೋಕಪ್ರಿಯ ಕಮೀಶನ್ನರರಾಗಿದ್ದ ಮೆ|| ಗಿಬ್ಬ ಸಾಹೇಬರವರು ಇಲ್ಲಿಗೆ ಬಂದ ಕಾಲಕ್ಕೆ, ತಮ್ಮ ಭಾಷಣದಲ್ಲಿ "ನಾವು ಇಂಗ್ಲಂಡದಲ್ಲಿ ನಳ, ಗ್ಯಾಸ, ವಾಚನಾಲಯ ಇವುಗಳಿಗಾಗಿ (೫) ಇಪ್ಪತ್ತು ಪೌಂಡು ಕರಕೊಡಬೇಕಾಗುತ್ತದೆಂದು ಹೇಳಿದರು. ಇದನ್ನು ನಮ್ಮಲ್ಲಿಯ ಸ್ಥಿತಿಗೆ ಹೋಲಿಸಿ ನೋಡಿದರೆ ವಾಚನದ ವಿಷಯದಲ್ಲಿ ನಾವು ಎಷ್ಟು ಹಿಂದೆ ಇರುತ್ತೇವೆಂಬದು ಸ್ಪಷ್ಟವಾಗಿ ತಿಳಿಯುತ್ತದೆ.

೩. ತಪ್ಪು ಒಪ್ಪಿಕೊಳ್ಳದಿರೋಣ.

ನಾವು ಓದುವಾಗ ಏನಾದರೂ ತಿಳಿಯದಿದ್ದರೆ, ಎಲ್ಲರನ್ನೂ ಬಿಗೆ ಕೇಳುವದಕ್ಕೆ ನಮ್ಮ ಮರ್ಯಾದೆಯು ಸಾಲುವದಿಲ್ಲ. ಇದೇ ರೀತಿಯಿಂದ, ಇನ್ನೂ ಅನೇಕ ಪ್ರಸಂಗಗಳಲ್ಲಿ ಅಜ್ಞಾನವು ಹೊರಬೀಳದಂತೆ, ಅದಷ್ಟು ಜವಾಬದಾರಿಯಿಂದ ಕಾಯಲ್ಪಡುತ್ತದೆ. ಇದು ದೊಡ್ಡ ದುರ್ಗುಣವು! ದೊಡ್ಡ ತಪ್ಪು! ಹೀಗೆ ಮಾಡುವದರಿಂದ, ನಮ್ಮ ತಪ್ಪು ನಮಗೆ ಎಂದೂ ತಿಳಿಯಲಿಕ್ಕಿಲ್ಲ. ನಮ್ಮ ತಪ್ಪನ್ನು ನಾವು ಒಪ್ಪಿಕೊಂಡರೆ, ನಿಶ್ಚಯವಾಗಿ ನಿನ್ನಿನಗಿಂತ ಪಂಡಿತರಾದೆವೆಂದು ತಿಳಿದು ತಕ್ಕದ್ದು. ಈ ಪ್ರಸಂಗದಲ್ಲಿ ಅಲ್ಪ ಜ್ಞಾನದಿಂದಲೇ ಮದಾಂಧರಾದಂಥ ತರುಣರಿಗೂ ಎಷ್ಟು ಓದಿದರೂ ಇನ್ನೂ ವಿದ್ಯಾರ್ಥಿಯಾಗಿಯೇ ಇರಬೇಕು, ಎಂಬ ಅಭಿಪ್ರಾಯವುಳ್ಳ ವೃದ್ಧರಿಗೂ ತುಲನಾ ಮಾಡಿದರೆ, ವಾಚನದ ಮಹತ್ವವು ಬೆಲೆಗಾಣುವದು.

೪. ವಾಚನದ ಮೇರೆ.

ವಾಚನವನ್ನು ನಮ್ಮ ಶಕ್ತ್ಯನುಸಾರವಾಗಿ ಸಾಗಿಸಬಹುದು. ಯಾವ ಕೆಲಸವನ್ನಾದರೂ, ಅತಿರೇಕವಾಗಿ ಮಾಡುವದು ನಿರರ್ಥಕವಾದದ್ದು. ಶಕ್ತ್ಯನ್ನು ಮೀರಿ ಓದುವದರಿಂದ, ಕಣ್ಣಿಗೂ, ಮಿದುಳಿಗೂ ಅಪಾಯವಾಗುವ ಸಂಭವವಿರುತ್ತದೆ. ಕಾರಣ ತನಗೆ ಬೇಸರಿಕೆ ಬಂದ ಕೂಡಲೆ, ಓದುವದನ್ನು ಬಿಟ್ಟುಬಿಡಬೇಕು. ಇಂಥ ಪ್ರಸಂಗದಲ್ಲಿ ಏನು ಓದಿದರೂ, ಲಕ್ಷ್ಯದಲ್ಲಿ ಉಳಿಯುವದಿಲ್ಲ. ಆದ್ದರಿಂದ ಶಕ್ತ್ಯನುಸರಿಸಿ ಒಂದೇ ಪುಸ್ತಕವಾದರೂ ಅಡ್ಡಿಯಿಲ್ಲ, ಮನನ ಮಾಡಿಕೊಂಡು ಓದುವದರಿಂದ, ನಿಶ್ಚಯವಾಗಿ ಜ್ಞಾನಪ್ರಾಪ್ತಿಯಾಗುವದು. ಓದಲಿಕ್ಕೆ ಯೋಗ್ಯ ಪುಸ್ತಕಗಳು ಯಾವವು ಎಂಬದನ್ನು ಬಲ್ಲವರಿಂದ ತಿಳಿದುಕೊಳ್ಳಬಹುದು.

೫. ವಾಚನದಿಂದಾಗುವ ಲಾಭಗಳು.

ಭಾಷಾಶಕ್ತಿ-ವಿಚಾರಶಕ್ತಿಗಳು ಬೆಳೆದು, ಬುದ್ಧಿಯು ವಿಕಾಸವಾಗುತ್ತದೆ. ಮನಸ್ಸು ಯಾವಾಗಲೂ, ಎಲ್ಲದನೇ ಯಾವತ್ತರ ಗಡಿಬಿಡಿಯಲ್ಲಿ ಇರದೆ, ಆನಂದದ ಸ್ಥಿತಿಯಲ್ಲಿ ಇರುವದು. ಇದರಿಂದ ಮನಸ್ಸು ಸರಳತನದ್ದೂ, (ನಿರ್ಮಲ) ಸುಖದ ಸುಳ್ಳು ಕಲ್ಪನೆಗೆ ಒಳಗಾಗದ್ದೂ,

ಆಸ್ತಿಕಭಾವವುಳ್ಳದ್ದೂ ಆಗುವದು. ಇದರ ಪರಿಣಾಮವು ಶಾರೀರಿಕ ದೃಷ್ಟಿಯಿಂದಲೂ, ಆರೋಗ್ಯ ದೃಷ್ಟಿಯಿಂದಲೂ ದೇಹಕ್ಕೆ ಒಳ್ಳೇ ಮಹತ್ವದ್ದಾಗಿರುತ್ತದೆ.

೬. ವಾಚನಾಲಯಗಳ ಮಹತ್ವ.

ಮೇಲೆ ಹೇಳಿದಂತೆ ಜನರಲ್ಲಿ ವಾಚನಾಭಿರುಚಿಯು ಬೆಳೆಯಲಾಗಿ ಅದರ ಫಲವು ಶ್ರೀಮಂತರಿಗೆ ಮಾತ್ರ ದೊರೆಯಬಹುದು. ಬಡವರಿಗೆ ದುರ್ಲಭವಾಗಬಹುದು. ಕಾರಣ, ಎಲ್ಲರಿಗೂ ಅದರ ಫಲವು ದೊರೆಯುವಂತೆ, ಪುಸ್ತಕಗಳನ್ನು ಸಂಗ್ರಹಿಸಿಡುವದು. ಅಂದರೆ ವಾಚನಾಲಯಗಳನ್ನು ಸ್ಥಾಪಿಸುವದು ಅತ್ಯವಶ್ಯವದೆ.

೭. ಉಪಸಂಹಾರ.

ಅದ್ದರಿಂದ ನಾವೆಲ್ಲರೂ ಸಾಮಾನ್ಯ ಜನರಲ್ಲಿ ವಾಚನಾಭಿರುಚಿಯನ್ನು ಬೆಳಿಸಿ, ಅವರು ಹೆಚ್ಚಿಗೆ ಜ್ಞಾನ ಸಂಪಾದಿಸಿಕೊಳ್ಳುವಂತೆ ಅನುಕೂಲ ಮಾಡಿಕೊಟ್ಟರೆ, ಎಲ್ಲ ಸಂಗತಿಗಳಿಂದಲೂ ಹಿಂದುಳಿದಂಥ ಈ ನಮ್ಮ ಸಮಾಜವು ಸುಧಾರಿಸಿ ಉನ್ನತಾವಸ್ಥೆಯನ್ನು ಹೊಂದಬಹುದು. ಜ್ಞಾನದ ಮಹತ್ವವು ಎಷ್ಟದೆಯೆಂಬ ಬಗ್ಗೆ, ಭಗವದ್ಗೀತೆಯಲ್ಲಿ ಸಹ "नहि ज्ञानेन सदृशं पवित्रमिहविद्यते" ಈ ಪ್ರಕಾರ ಉಕ್ತಿಯಿರುತ್ತದೆ. ಕಾರಣ ಎಲ್ಲರೂ ವಾಚಾಳಿಗಳಾಗಿರುವದು ಅವರ ಕರ್ತವ್ಯಕರ್ಮವಾಗಿದೆ.

ಗುರುಗಳೇ ಪತ್ರವಿಸ್ತಾರಕ್ಕೆ ಕ್ಷಮೆಯಿರಲಿ, ಇಂ ಸಾ ನಿ ಗಳು.

ತಮ್ಮ ವಿಧೇಯ ಶಿಷ್ಯರಲ್ಲೋರ್ವ,

ಕರಜಗಿ ಜಿ. ಧಾರವಾಡ.
ತಾ|| ೩೦–೧೧–೧೪ ಇ.

S. G. Haralapur.
ಅನ್ನಿ|| ಮಾಸ್ತರ ಕಂಟಿನ್ಯುಯೇಶನ್ ಕ್ಲಾಸ, ಕರಜಗಿ.

ಇತಿಹಾಸ ಮತ್ತು ಚರಿತ್ರೆ.

ಇತಿಹಾಸದಲ್ಲಿ ಒಂದು ಇಲ್ಲವೆ ಹೆಚ್ಚು ದೇಶಗಳ, ಮತ್ತು ಬಹಳ ದೊಡ್ಡ ಕಾಲದ ವೃತ್ತಾಂತವು ಹೇಳಿರುತ್ತದೆ. ಚರಿತ್ರೆಯಲ್ಲಿ ಯಾವುದೊಂದು ವ್ಯಕ್ತಿಯು ಆಯುಷ್ಯಕ್ರಮದಲ್ಲಿ ಸಂಭವಿಸಿದ ಸಂಗತಿಗಳು ಮಾತ್ರ ನಿವೇದಿಸಲ್ಪಟ್ಟಿರುತ್ತವೆ.

ಇತಿಹಾಸ ಹಾಗೂ ಚರಿತ್ರೆ ಇವೆರಡೂ ಮನೋರಂಜಕವಾಗಿಯೂ ಬೋಧಪ್ರದವಾಗಿಯೂ ಇರುತ್ತವೆ. ಪ್ರತ್ಯಕ್ಷ ಅನುಭವದಿಂದ ನಮಗೆ ಮೇಲಾದ ಜ್ಞಾನವುಂಟಾಗುವುದೇನೋ ನಿಜ; ಯಾವ ಯಾವ ಶ್ರಮದ ಕೆಲಸಗಳನ್ನು ಮಾಡಿದರಿಂದ ನಮಗೆ ಸುಖವಾಯಿತು? ಯಾವ ತಪ್ಪು ಗಳನ್ನು ಮಾಡಿದ್ದರಿಂದ ನಾವು ದುಃಖಿತರಾದೆವು? ಎಂಬದನ್ನು ತಿಳಿದು ಕೊಂಡರೆ ನಾವು ಜ್ಞಾನವಂತರಾಗಬಹುದೆಂಬದನ್ನು ಎಲ್ಲರು ಒಪ್ಪಿಕೊಳ್ಳಬಹುದಾಗಿದೆ. ಆದರೆ, ಈ ಜ್ಞಾನವು ನಮಗೆ ಪುಕ್ಕಟೆಯಾಗಿ ದೊರೆತಿರುವುದಿಲ್ಲ; ಸುಖವಾಗಬೇಕಾದರೆ ನಾವು ಶ್ರಮ ಮಾಡಿರುತ್ತೇವೆ; ಮತ್ತು ನಮ್ಮಿಂದಾದ ತಪ್ಪುಗಳ ದುಃಖಕಾರಕ ಪರಿಣಾಮವನ್ನು ನಾವು ಅನುಭೋಗಿಸಬೇಕಾಗಿರುತ್ತದೆ. ಅಂತೇ, ನಮಗೆ ನಮ್ಮ ಆಯುಷ್ಯ ದಲ್ಲಿ ಸ್ವತಃದ ಅನುಭವದಿಂದ ದೊರೆತ ಜ್ಞಾನವಂತಿಕೆಯು ಎಷ್ಟು ಮೂ ಲ್ಯವುಳ್ಳದ್ದಿದ್ದರೂ, ಅದು ಸುಖದಿಂದ ದೊರೆತಿರುವುದಿಲ್ಲ. ಆದರೆ, ಇತಿ ಹಾಸ ಮತ್ತು ಚರಿತ್ರೆ ಇವುಗಳ ವಾಚನದಿಂದ ದೊರೆತ ಬುದ್ಧಿವಂತಿಕೆ ಯು ಅತಿಶಯ ಬೆಲೆಯುಳ್ಳದ್ದಿದ್ದು, ಮನೋರಂಜಕವೂ ಆಗಿರುತ್ತದೆ. ಯಾಕಂದರೆ, ಯಾವ ಸಂಕಟಗಳನ್ನು ಯಾವುದೊಂದು ದೇಶವು ಇಲ್ಲವೆ ಯಾವನೊಬ್ಬ ಮನುಷ್ಯನು ಭೋಗಿಸಬೇಕಾಗಿರುತ್ತಿದ್ದರೂ ಅವುಗಳ ಪ್ರತ್ಯಕ್ಷ ಪಾಲುಗಾರನು ನಾವಾಗಿರುವುದಿಲ್ಲ. ಇತಿಹಾಸದಲ್ಲಿ ಅಥವಾ ಚರಿತ್ರೆಯಲ್ಲಿ ನಿವೇದಿಸಲ್ಪಟ್ಟ ಸಂಗತಿಗಳು ನಾನಾಪ್ರಕಾರದವೂ ಉತ್ಕಂ ಠೆಯನ್ನುಂಟುಮಾಡುವಂಥವೂ ಇದ್ದು, ಅವುಗಳನ್ನೋದುವುದರ ಕಡೆಗೆ ನಮ್ಮ ಮನಸ್ಸು ಆಕರ್ಷಿಸಲ್ಪಡುತ್ತದೆ; ಹಾಗೂ ಅದರಿಂದ ಮನರಂಜ ನವೂ ಆಗುತ್ತದೆ. ಈ ಪ್ರಕಾರವಾಗಿ, ಮನೋರಂಜನ ಮತ್ತು ಜ್ಞಾನ ಇವುಗಳೆರಡೂ ಒಮ್ಮೆಲೆ ನಮಗೆ ಸುಲಭವಾಗಿ ದೊರೆಯುವುವು.

ಮೇಲೆ ಹೇಳಿದಂತೆ ಮನೋರಂಜನ ಮತ್ತು ಜ್ಞಾನಪ್ರಾಪ್ತಿ ಇವು ಇತಿಹಾಸ ಹಾಗೂ ಚರಿತ್ರೆ ಇವುಗಳೆರಡರಿಂದಲೂ ದೊರೆಯು ವವಾದರೂ ಮನೋರಂಜನವೂ ಜ್ಞಾನಪ್ರಾಪ್ತಿಯೂ ಸಮಾನವಾಗಿ ಆಗುವುವೆಂದು ಮಾತ್ರ ಹೇಳಲಿಕ್ಕಾಗುವುದಿಲ್ಲ. ಇತಿಹಾಸವು ದೊಡ್ಡ ಜನ ಸಮುದಾಯದ ಸಂಗತಿಗಳನ್ನು ತಿಳಿಸುವುದರಿಂದ ನಮ್ಮ ಲಕ್ಷವು ಒಂದೇ ಕಾಲಕ್ಕೆ ಅನೇಕ ವ್ಯಕ್ತಿಗಳಲ್ಲಿ ವಿಭಾಗಿಸ

ಲ್ಪಡುತ್ತದೆ. ಚರಿತ್ರೆಯ ವಿಷಯವು ಒಂದೇ ವ್ಯಕ್ತಿಯಿರುವ ಕಾರಣ, ನಮ್ಮ ಲಕ್ಷವು ಅದೊಂದೇ ವ್ಯಕ್ತಿಯ ಕಡೆಗೆ ಹತ್ತಿರುತ್ತದೆ. ನಮ್ಮ ದಯೆಯೂ ಪ್ರೇಮವೂ ಅದೇ ವ್ಯಕ್ತಿಯ ಮೇಲೆ ಪೂರ್ಣವಾಗಿರುವುದರಿಂದ ಆ ವ್ಯಕ್ತಿಯ ಐತಿಹ್ಯವು ನಮ್ಮ ಹೃದಯದಲ್ಲಿ ನೆಲೆಗೊಂಡು, ಅದು ನಮಗೆ ಹೆಚ್ಚು ಮನೋರಂಜಕವಾಗಿ ತೋರುತ್ತದೆ; ಮತ್ತು ಅದರಿಂದ ನಾವು ತೆಗೆದುಕೊಳ್ಳಬಹುದಾದ ಬೋಧವು ಸಹ ಮನಸ್ಸಿನಲ್ಲಿ ಚನ್ನಾಗಿ ಬಿಂಬಿಸುತ್ತದೆ. ಏಕಕಾಲಕ್ಕೆ ಅನೇಕ ವಿಷಯಗಳನ್ನು ಅಭ್ಯಾಸಮಾಡಿದರೆ ಒಂದೂ ಚನ್ನಾಗಿ ತಿಳಿಯುವುದಿಲ್ಲೆಂಬದೂ, ಒಂದೇ ವಿಷಯವನ್ನು ಕೈಕೊಂಡರೆ ಅದು ಚನ್ನಾಗಿ ಸಾಧಿಸುತ್ತದೆಂಬದೂ ನಮಗೆ ಮೇಲಿಂದ ಮೇಲೆ ಅನುಭವಕ್ಕೆ ಬರುತ್ತವೆ. ಅದೇ ರೀತಿಯಲ್ಲಿ, ಇತಿಹಾಸವಾಚನದಿಂದುಂಟಾದ ಮನೋರಂಜನವೂ, ಬೋಧವೂ ಅದರಲ್ಲಿಯ ಅನೇಕ ವ್ಯಕ್ತಿಗಳಿಗೆ ಸಂಬಂಧಿಸಿರುವುದರಿಂದ ಅವರ ಸ್ವಾರಸ್ಯವೂ, ಸ್ಥಾಯಿಕತನವೂ ಕಡಿಮೆ ಪ್ರಮಾಣದಲ್ಲಿರುವುವು. ಚರಿತ್ರೆಯ ನಾಯಕನು ನಮ್ಮ ಮನಸ್ಸಿನ ಒಂದೇ ಒಂದು ಕೇಂದ್ರವಾಗಿರುವುದರಿಂದ, ಇತಿಹಾಸವಾಚನಕ್ಕಿಂತ ಚರಿತ್ರವಾಚನವು ನಮಗೆ ಹೆಚ್ಚು ರುಚಿಸುತ್ತದಲ್ಲದೆ, ಅದರಿಂದ ಹೊರಡುವ ನೀತಿಬೋಧವಾದರೂ ನಮ್ಮ ಮನಸ್ಸಿನಲ್ಲಿ ಚಿರಸ್ಥಾಯಿಯಾಗುತ್ತದೆ. ಚರಿತ್ರನಾಯಕನು ನಮ್ಮ ಹಾಗೆ ಒಬ್ಬ ಮನುಷ್ಯನಿರುವನು; ನಮ್ಮಂತೆ ಅವನಿಗಾದರೂ ಪ್ರಪಂಚದಲ್ಲನೇಕ ಅಡಚಣೆಗಳೂ, ನಾನಾವಿಧದ ಸಂಕಟಗಳೂ, ಸುಖದುಃಖಗಳೂ ಬಂದೇ ಬಂದಿರುತ್ತವೆ. ಆದರೆ, ಅವುಗಳ ನಿರಸನವನ್ನು ಅವನು ಹೇಗೆ ಮಾಡಿದನು? ಯಾವ ಯಾವ ಉಪಾಯಗಳಿಂದ ಅವನು ವೈಭವಶಾಲಿಯಾದನು? ಮೊದಲಾದ ಮಹತ್ವದ ಸಂಗತಿಗಳು ಸಹಜವಾಗಿ ತಿಳಿದು ಬರುತ್ತವೆ. ಅಲ್ಲದೆ, ಅವನಿಂದ ಜರುಗಿಸಲ್ಪಟ್ಟ ಮಹತ್ಕಾರ್ಯಗಳು ನಮಗಾದರೂ ಸಾಧ್ಯವಿರಬಹುದೆಂಬ ತಿಳುವಳಿಕೆಯು ನಮ್ಮ ಮನಸ್ಸಿನಲ್ಲಿ ದೃಢವಾಗಿ ನೆಲೆಗೊಂಡು, ಆ ವ್ಯಕ್ತಿಯ ಅನುಕರಣ ಮಾಡುವುದಕ್ಕೆ ನಾವು ಪ್ರವೃತ್ತರಾಗುತ್ತೇವೆ.

ಇತಿಹಾಸವಾಚನಕ್ಕಿಂತ ಚರಿತ್ರವಾಚನವು ಹೆಚ್ಚು ಲಾಭಪ್ರದವಾಗಿರುವುದೆಂದು ಕೆಳಗೆ ಬರೆದ ಬೇರೊಂದು ರೀತಿಯಲ್ಲಿಯೂ ಕಂಡು

ಬಹುವುದು. ಇತಿಹಾಸದಿಂದ ರಾಜನೀತಿತತ್ವಗಳು ತಿಳಿಯುತ್ತವೆ; ಚರಿತ್ರೆಯಿಂದ ವ್ಯಕ್ತಿನೀತಿತತ್ವಗಳು ಮನಸ್ಸಿನಲ್ಲಿ ನೆಲಿಸುತ್ತವೆ. ಇತಿಹಾಸವು ಮುತ್ಸದ್ದಿಗಳಿಗೆ ಮಾತ್ರ ಉಪಯೋಗವುಳ್ಳದ್ದು; ಆದರೆ ಚರಿತ್ರವು ಲೋಕದಲ್ಲಿ ಪ್ರತಿಯೊಬ್ಬನಿಗೆ ಉಪಯೋಗಕ್ಕೆ ಬೀಳುವಂಥಾದ್ದು. ಸಮಾಜದಲ್ಲಿ ಒಬ್ಬಿಬ್ಬರು ಮಾತ್ರ ಮುತ್ಸದ್ದಿಗಳಿರುವರು; ಆದರೆ ವ್ಯಕ್ತಿನೀತಿಯು ಪ್ರತಿಯೊಬ್ಬ ಮನುಷ್ಯನಿಗೆ ಪ್ರತಿ ಒಂದು ವ್ಯವಹಾರದಲ್ಲಿ ಅನುಸರಿಸುವಂಥಾದ್ದಿರುತ್ತದೆ. ಇದಲ್ಲದೆ, ಮುತ್ಸದ್ದಿಪದವಲ್ಲಿದ್ದಾಗ್ಗೆ ಯಾವನೊಬ್ಬ ಮನುಷ್ಯನು ತಾನು ಅನುಸರಿಸುವ ತತ್ವವು ನಿಜವಾದ ದ್ದಲ್ಲವೆಂದೂ, ಭ್ರಾಂತಿಯನ್ನುಂಟುಮಾಡಿ ಕಣ್ಣಾಮುಚ್ಚಿ ಮಾಡುವಂಥಾದ್ದೆಂದೂ ಮನಃಪೂರ್ವಕವಾಗಿ ತಿಳಿದಿದ್ದರೂ ಅವನು ನಮಸ್ಕರನನ್ನೇ ಮಾಡುತ್ತಿರುವನು; ಆದರೆ, ಆದೇ ಮನುಷ್ಯನು ತನ್ನ ಸ್ವಂತ ವ್ಯವಹಾರದಲ್ಲಿ ಅಂಥ ನೀತಿತತ್ವವನ್ನು ಅವಲಂಬಿಸುವುದಕ್ಕೆ ಹೇಸುತ್ತಿರುವನು. ಸ್ವಲ್ಪದಲ್ಲಿ ಹೇಳಬೇಕಾದರೆ, ಇತಿಹಾಸವಾಚನದಿಂದ ತಿಳಿದು ಬರುವ ತತ್ವಗಳು ಒಂದು ವೇಳೆ ನಿಜವಿದ್ದರೂ, ತೀರ ತುಸು ಜನರಿಗೆ ಮಾತ್ರ ಅವು ಉಪಯೋಗಕ್ಕೆ ಬೀಳುವುವು. ಆದರೆ ಚರಿತ್ರವಾಚನದಿಂದ ನಮಗೆ ರುದ್ಧವಾದ ಹಾಗೂ ನಿಜವಾದ ನೀತಿತತ್ವಗಳು ತಿಳಿದು ಬರುತ್ತವಲ್ಲದೆ, ಅವು ಪ್ರತಿಯೊಬ್ಬ ಮನುಷ್ಯನಿಗೆ ಅವಶ್ಯವಾಗಿರುವುವು. ಉದಾಹರಣಾರ್ಥವಾಗಿ, ಸರ್ ಐಸ್ಯಾಕ್ ನ್ಯೂಟನ್, ನಾನಾಫಡಣವೀಸ, ಸ್ಟಾಮೊವಿವೇಕಾನಂದ ಇವರೇ ಮೊದಲಾದ ವ್ಯಕ್ತಿಗಳ ಚರಿತ್ರೆಗಳನ್ನೋದಿದರೆ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮವಾಗಿ ಅದರಿಂದ ಮನರಂಜನವಾಗದೂ ಬಹಳ ದೊಡ್ಡ ಪ್ರಮಾಣದಲ್ಲಾಗುವುದು. ಇತಿಹಾಸದಲ್ಲಿ, ಸುಳ್ಳು ನೀತಿತತ್ವದ ಪ್ರಭಾವದಿಂದ ಒಂದು ವೇಳೆ ಯಾವುದೊಂದು ರಾಷ್ಟ್ರವು, ಇಲ್ಲವೆ ಯಾವನೊಬ್ಬ ಅರಸನು ವೈಭವಶಾಲಿಯಾದನೆಂದು ನಾವು ಓದಿದರೆ ಆ ಸುಳ್ಳು ನೀತಿತತ್ವದ ಬಗ್ಗೆ, ನಮಗೆ ವಿಶೇಷವೆನಿಸುವುದಿಲ್ಲ. ಇಲ್ಲಿ ನಾವು ಮಹಾರಾಷ್ಟ್ರರಾಜ್ಯಸ್ಥಾಪನೆಯನ್ನು ಮಾಡಿದ ಶಿವಾಜಿಯನ್ನು ಉದಾಹರಣಾರ್ಥವಾಗಿ ತೆಗೆದುಕೊಂಡರೆ, ಅವನನ್ನು ಪೂರ್ಣವಾಗಿ ನಂಬಿದ "ಅಫ್ಝುಲ್ ಖಾನ"ನ ಪರಿಣಾಮವೇನಾಯಿತು! ಇದಾದರೂ ರಾಜನೀತಿ ತತ್ವಗಳಲ್ಲೊಂದಾಗಿರುವುದೆಂದೂ, ಇದನ್ನೋದುವುದ

The
Dharwar District Sanitary Association

QUARTERLY.

Vol. II] NOVEMBER 1914. [No 2.

ಧಾರವಾಡ ಡಿಸ್ಟ್ರಿಕ್ಟ ಸ್ಯಾನಿಟರಿ ಅಸೋಸಿಯೇಶನ್ನಿನ

ತ್ರೈಮಾಸಿಕ ಪತ್ರ

ಸಂಪುಟ ೨. | ನವಂಬರ ೧೯೧೪. | ಸಂಚಿಕೆ ೨.

ವಿಷಯಾನುಕ್ರಮಣಿಕೆ.

೧. ಧಾರವಾಡ ಡಿಸ್ಟ್ರಿಕ್ಟ ಸ್ಯಾನಿಟರಿ ಅಸೋಸಿಯೇಶನಿನ ಸನ್ ೧೯೧೪ನೇ ಇಸ್ವಿಯ ೩೦ನೇ ಸೆಪ್ಟಂಬರದಿಂದ ಮುಗಿಯುವ ತ್ರೈಮಾಸಿಕ ಅವಧಿಯಲ್ಲಿ ಮಾಡಿದ ಕೆಲಸದ ರಿಪೋರ್ಟ ೧–೮

೨. ಛಳಿಜ್ವರಕ್ಕೆ ಕ್ವಿನಾಯಿನಿನ ಉಪಯೋಗ. ೮

೩. ಉಸುರಾಡಿಸುವದು. ೮

೪. ಕೂಸುಗಳ ಹೊಟ್ಟೆ ಜಾಡಿಸುವದು. ೯–೯

೫. ನೀರು. ೧೦–೧೪

೬. ಹಾಲುಹಲ್ಲುಗಳೂ ಚಿಕ್ಕಮಕ್ಕಳ ಪಾಲನೆಯೂ. ೧೫–೨೧

೭. ಕ್ಷಯರೋಗದ ನಿವಾರಣೆಗಾಗಿ ಮಾಡತಕ್ಕ ಉಪಾಯಗಳು. ೨೧–೨೨

೮. ಸಣ್ಣ ಹುಡುಗರಿಗೆ ಕ್ಷಯರೋಗವಾದ ಲಕ್ಷಣಗಳು. ೨೨–೨೩

೯. ಕ್ಷಯರೋಗದ ಪೂರ್ವ ಲಕ್ಷಣಗಳು. ೨೩–೨೪

Printed by K. H. Mudvedkar, at the K. P. Works, Dharwar, and published by Mr. G. R. Balekundri, Hon. Secretary, DISTRICT SANITARY ASSOCIATION, DHARWAR.

1914.

ಧಾರವಾಡ ಡಿಸ್ಟ್ರಿಕ್ಟ ಸ್ಯಾನಿಟರಿ ಅಸೋಸಿಯೇಶನ್ನದ

ತ್ರೈವಾಸಿಕ ಪತ್ರ

The
Dharwar District Sanitary Association

QUARTERLY.

ಸಂಪುಟ ೨. | ನವಂಬರ, ೧೯೧೪. | ಸಂಚಿಕೆ ೨

ಧಾರವಾಡ ಡಿಸ್ಟ್ರಿಕ್ಟ ಸ್ಯಾನಿಟರಿ ಅಸೋಸಿಯೇಶನದ ಸನ್ ೧೯೧೪ನೇ ಇಸ್ವಿಯ ೩೦ನೇ ಸಪ್ಟಂಬರದಿಂದ ಮುಗಿಯುವ ತ್ರೈಮಾಸಿಕ ಅವಧಿಯಲ್ಲಿ ಮಾಡಿದ ಕೆಲಸದ

ರಿಪೋರ್ಟ

ಜಮಾಖರ್ಚು: ಈ ತ್ರೈಮಾಸಿಕದ ಜಮಾಖರ್ಚಿನ ಪತ್ರಿಕೆಯು ಅ ಪರಿಶಿಷ್ಟದಲ್ಲಿ ತೋರಿಸಲ್ಪಟ್ಟಿದೆ. ಈ ತ್ರೈಮಾಸಿಕದಲ್ಲಿ ವರ್ಗಣಿಯನ್ನು ಕೂಡಿಸುವ ಕೆಲಸವು ಅತಿವೃಷ್ಟಿಯ ಮೂಲಕವಾಗಿಯೂ, ಸ್ಥಾನಿಕ ಸೇಕ್ರಟರಿಗಳ ಆದಲು ಬದಲಿನಿಂದಲೂ ಚನ್ನಾಗಿ ಆಗಿಲ್ಲ; ಮತ್ತು ೮ ಸೇಕ್ರಟರಿಗಳ ಹತ್ತಿರ ಹಳೇ ಮೆಂಬರ ಜನರ ಪತ್ರಿಕೆಯು ಇದ್ದಿಲ್ಲ. ಅಸೋಸಿಯೇಶನದ ಆಫೀಸದಲ್ಲಿಟ್ಟ ಮೆಂಬರ ಜನರ ರಜಿಸ್ಟರ ಬುಕ್ಕಿನೊಳಗಿಂದ ಮೆಂಬರ ಜನರ ಯಾದಿಗಳನ್ನೂ, ಮತ್ತು ಛಾಪಿ ಪಾವತಿ ಬುಕ್ಕುಗಳನ್ನೂ ತಾಲೂಕದೊಳಗಿನ ಬೇರೆ ಬೇರೆ ಸ್ಥಾನಿಕ ಸೇಕ್ರಟರಿಗಳ ಕಡೆಗೆ ಅವರವರ ಚೇರಮನ್ನರ ಮುಖಾಂತರವಾಗಿ ಕಳುಹಿಸಿಕೊಟ್ಟಿದೆ. ಈಗ ಪ್ರತಿಯೊಬ್ಬ ಸ್ಥಾನಿಕ ಸೇಕ್ರಟರಿಯು ಹತ್ತರ ಹಳೇ ಮೆಂಬರ ಜನರ ಪತ್ರಿಕೆ ಇರುತ್ತದ. ಆ ಮೆಂಬರ ಜನರ ಕಡೆಯಿಂದ ಅವನು ವರ್ಗಣೀ ವಸೂಲ ಮಾಡಿ ಅವರಿಗೆ ಹಣಾ ಮುಟ್ಟಿದ್ದಕ್ಕಾಗಿ ತನ್ನ ಸಹಿಯ ಪಾವತಿಯನ್ನು ಕೊಡಬಹುದು ಈ ವರಿಗೆ ಅಸೋಸಿಯೇಶನದ ಜಾಯಿಂಟ ಸೇಕ್ರಟರಿಯವರು ಮೆಂಬರ

ಇವರ ಕಡಿಗಿನ ವರ್ಗಣಿ ವಸೂಲ ಬಂದದ್ದಕ್ಕಾಗಿ ಸಾಮತಿ ಕೊಡಬೇಕಾಗುತ್ತಿತ್ತು. ಇನ್ನು ಮೇಲೆ ಸ್ಥಾನಿಕ ಸೇಕ್ರಟರಿಯವರು ವಸೂಲಿಯ ಕೆಲಸವನ್ನು ದಕ್ಷತೆಯಿಂದ ಮಾಡಬೇಕೆಂದೂ, ಯಾವ ಹಳ್ಳಿಗಳಿಗೆ ಮೆಂಬರರು ಇರುವದಿಲ್ಲವೋ ಆ ಹಳ್ಳಿಗಳಿಂದ ಹೊಸ ಮೇಂಬರರನ್ನು ಕೂಡಿಸಬೇಕೆಂದೂ ಪ್ರಾರ್ಥಿಸಲ್ಪಟ್ಟಿರುತ್ತದೆ.

ರಚನಾ:— ಈ ತ್ರೈಮಾಸಿಕದಲ್ಲಿ ಮಾಡಿದ ಮಹತ್ವದ ಸುಧಾರಣೆಯು ಸ್ಥಾನಿಕ ಸೇಕ್ರಟರಿಗಳ ಸಂಖ್ಯೆಯನ್ನು ಜಿಲಿಸಿದ್ದು. ಪ್ರತಿಯೊಬ್ಬ ಸ್ಥಾನಿಕ ಸೇಕ್ರಟರಿಯ ಅಧಿಕಾರಕ್ಕೊಳಪಟ್ಟ ಹಳ್ಳಿಗಳ ಸಂಖ್ಯೆಯು ಬಹಳವಾದದ್ದೆಂದು ಕಂಡು ಬಂದ ಕಾರಣ ಹಳ್ಳಿಗಳ ಸಂಖ್ಯೆಯನ್ನು ಕಡಿಮೆ ಮಾಡಿ ಸೇಕ್ರಟರಿಗಳ ವಾಸಸ್ಥಾನದಿಂದ ೫-೬ ಮೈಲುಗಳೊಳಗಿರುವ ಹಳ್ಳಿಗಳನ್ನು ಮಾತ್ರ ಅವರ ಅಧಿಕಾರದಲ್ಲಿ ಕೊಡಲ್ಪಟ್ಟಿದೆ. ಇಂಥ ಪ್ರತಿಯೊಂದು ಮಂಡಲಕ್ಕೆ ಒಬ್ಬೊಬ್ಬ ಸ್ಥಾನಿಕ ಸೇಕ್ರಟರಿಯನ್ನು ನೇಮಿಸಿದೆ. ಈ ಸ್ಥಾನಿಕ ಸೇಕ್ರಟರಿಗಳಲ್ಲೊಬ್ಬನನ್ನು ತಾಲೂಕಿನ ಅಥವಾ ಮಹಾಲಿನ ಚೇರಮನ್ನನಾಗಿ ನೇಮಿಸಿದೆ. ಈ ಪದ್ಧತಿಯು ಗದಗ, ನವಲಗುಂದ, ರೋಣ ತಾಲೂಕುಗಳಲ್ಲಿಯೂ, ಮುಂಡರಗಿ ನರಗುಂದ ಮಹಾಲುಗಳಲ್ಲಿಯೂ ಹೋದ ಗನೇ ಎಪ್ರೇಲದಿಂದ ಪ್ರಾರಂಭಿಸಲ್ಪಟ್ಟು ಉತ್ತಮವಾಗಿ ನಡೆದದ್ದು ಕಂಡು ಬಂದದ್ದರಿಂದ, ಈ ತ್ರೈಮಾಸಿಕದ ಆರಂಭದಿಂದ ಜಿಲ್ಲೆಯ ಉಳಿದಭಾಗಗಳಲ್ಲಿ ಸಹ ಇದೇ ಪದ್ಧತಿಯು ಪ್ರಾರಂಭಿಸಲ್ಪಟ್ಟಿದೆ. ಈ ಪದ್ಧತಿಯು ಸುಪರಿಣಾಮಕಾರಕವಾದದ್ದೆಂದು ಎಲ್ಲರೂ ಅಭಿಪ್ರಾಯ ಪಡುತ್ತಾರೆ.

ಈ ತ್ರೈಮಾಸದಲ್ಲಿ ದುರ್ದೈವದಿಂದ ಮಧ್ಯಭಾಗದ ಸಂಘದ ಮೆಂಬರರಲ್ಲಿ ಒಬ್ಬರಾದ ಮಿ|| ರಾಜೇಸಾಹೇಬ ಮುಗದ ಇವರ ಶೋಚನೀಯವಾದ ನಿಧನಕ್ಕಾಗಿ ದುಃಖಪಡಬೇಕಾಗಿದೆ. ಇವರ ನಿಧನದಿಂದ ಸಂಘದವರು ಒಬ್ಬ ಮಹಮ್ಮದೀಯ ಅನುಭವ ಶಾಲಿಯಾದ ನ್ಯಾಯಶೀಲ ಸದ್ಗೃಹಸ್ಥನ ಸಹಾನುಭೂತಿಗೂ, ಸಹಾಯಕ್ಕೂ ಎರವಾಗಬೇಕಾಯಿತು.

ಮಧ್ಯಭಾಗದ ಸಂಘದ ಕೆಲಸವು:— ೩೦ನೇ ಜೂನಕ್ಕೆ ಮುಗಿಯುವ ತ್ರೈಮಾಸಿಕ ಸಭೆಯು ೧೮ನೇ ಸೆಪ್ಟಂಬರ ೧೯೧೪ನೇಯ ದಿವಸ ಕೂಡಿತು ಇಷ್ಟು ತಡವಾದ ಕಾರಣವೇನೆಂದರೆ ಈ ಸಭೆಯ ಅಸೋಸಿಯೇಶನದ ವಾರ್ಷಿಕ ರಿಪೋರ್ಟು ಸರ್ವಾನು ಮತಿಯಿಂದ ಪಾಸಾಗತಕ್ಕದ್ದಿದ್ದು, ಆ

ರಿಪೋರ್ಟಿನ ಸಿದ್ಧತೆಯ ಸಾಧನೆಗಳು ಸ್ಥಾನಿಕ ಸೇಕ್ರಟರಿಗಳ ಕಡೆಯಿಂದ ವೇಳೆಗೆ ಪೂರೈಸಲ್ಪಡಲಿಲ್ಲವಾದ್ದರಿಂದ ಬರಲಿಲ್ಲ. ಈ ಸಭೆಯಲ್ಲಿ ೧೪ ಮಿಂಬರ್‌ಗಳಲ್ಲಿ ೯ ಮಿಂಬರ್ ಜನರು ಹಾಜರಿದ್ದರು. ಸಭೆಯಲ್ಲಿ ನಡೆದ ಮಹತ್ವದ ಸಂಗತಿಗಳು.

೧. ವಾರ್ಷಿಕ ರಿಪೋರ್ಟಿನ ನಕಲನ್ನೂ, ಬಜೆಟು ಮತ್ತು ಲೆಖ್ಖವನ್ನೂ ಸರ್ವಾನುಮತಿಯಿಂದ ಪಾಸು ಮಾಡುವದು. ಈ ವಾರ್ಷಿಕ ರಿಪೋರ್ಟು ಬೇರೆ ಮುದ್ರಿಸಲ್ಪಟ್ಟಿರುತ್ತದೆ.

೨. ತಾಲೂಕ ಮತ್ತು ಮಹಾಲುಗಳ ಸ್ಥಾನಿಕ ಸೇಕ್ರಟರಿಗಳ ಚೇರಮನ್ನರು ತ್ರೈಮಾಸಿಕ ಸಭೆಗಳಿಗೆ ಹಾಜರಾಗುವದಕ್ಕೆ ನಿಮಂತ್ರಿಸಲ್ಪಡತಕ್ಕದ್ದು.

೩. ಜಿಲ್ಲೆಯಲ್ಲಿರುವ ಹಳ್ಳಿಗಳಲ್ಲಿ ವ್ಯಾಜಿಕಲ್ಚ್ಯಂಟರ್ನದ ಸಹಾಯದಿಂದ ಲೆಕ್ಚರ ಕೊಡುವ ಪದ್ಧತಿಯನ್ನು ಮುಂದಿನ ವರ್ಷದಲ್ಲಿಯೂ ಸಾಗಿಸತಕ್ಕದ್ದು. ಮತ್ತು ಈ ಕೆಲಸಕ್ಕಾಗಿ ಡಾಕ್ಟರ ಟೆಂಬೆ ಇವರನ್ನು ಇನ್ನೊಂದು ವರ್ಷ ಕೊಡುವದಕ್ಕಾಗಿಯೂ ಇನ್ನೊಬ್ಬ ಸಬ್ಬ ಅಸಿಸ್ಟಂಟ ಸರ್ಜನನ್ನು ಅವರ ಸಹಾಯಕ್ಕೆ ಕೊಡುವದಕ್ಕಾಗಿ ಸರಕಾರದವರನ್ನು ಪ್ರಾರ್ಥಿಸತಕ್ಕದ್ದು. ಅಸೋಸಿಯೇಶನದ ಉದ್ದೇಶವನ್ನು ಕೊನೆಗಾಣಿಸುವದಕ್ಕಾಗಿ ಸ್ಥಾನಿಕ ಸೇಕ್ರಟರಿಗಳಿಂದಲೂ ಮತ್ತು ಸಾರ್ವಜನಿಕ ಜನರಿಂದಲೂ ಮಾಡಿದ ಸೂಚನೆಗಳನ್ನು ಈ ಸಭೆಯಲ್ಲಿ ವಿಚಾರ ಮಾಡಲಾಯಿತು.

೧೯೧೩–೧೪ನೇ ಇಸ್ವಿಯ ೩ನೇ ತ್ರೈಮಾಸಿಕ ಪುಸ್ತಕವು ಈ ತ್ರೈಮಾಸದಲ್ಲಿ ತೆಗೆಯಲ್ಪಟ್ಟಿತು. ಆದರೆ ಈ ತ್ರೈಮಾಸಿಕ ಪುಸ್ತಕವನ್ನು ಮುದ್ರಿಸಲಿಕ್ಕೆ ಕೊಟ್ಟ ಮುದ್ರಣಾಲಯದವರಿಗೆ ಸಂಭವಿಸಿದ ಅನಿವಾರ್ಯವಾದ ಕಾರಣಗಳ ಮೂಲಕವಾಗಿ ತಡವಾಗಿ ಮುದ್ರಿಸಲ್ಪಟ್ಟಿತ್ತು. ಈ ತ್ರೈಮಾಸಿಕದ ಸಂಚಿಕೆಯಲ್ಲಿ ೩೦ನೇ ಎಪ್ರೀಲ ೧೯೧೪ನೇಯ ತ್ರೈಮಾಸಿಕದಲ್ಲಿ ಮಾಡಿದ ಕೆಲಸದ ರಿಪೋರ್ಟು, ಜಮಾಖರ್ಚು, ಕೆಲವು ಉಪಯುಕ್ತವಾದ ಆರೋಗ್ಯದ ಸೂಚನೆಗಳು ಮುದ್ರಿತವಾಗಿವೆ.

೧. ಸಣ್ಣಬಾಲಕರಿಗೆ ಹಾಲುಹಾಕುವಾಗ ಅನುಸರಿಸತಕ್ಕ ಸೂಚನೆಗಳು. — ಡಾಕ್ಟರ ಶಿರಹಟ್ಟಿ.

೨. ಪ್ರಸೂತ ಸ್ತ್ರೀಯರ ಆರೈಕೆಯ ವಿಷಯದ ಸೂಚನೆಗಳು. — ಡಾ. ಉಪಾಧ್ಯೆ.

೩. ಕ್ಷಯರೋಗದ ಸೂಚನೆಗಳು. — ಡಾ. ಟೆಂಬೆ.

೪. ಪ್ಲೇಗವೂ ನಮ್ಮ ಈಗಿನಸ್ಥಿತಿಯೂ. ಡಾ. ಫರ್ನಾಂಡೀಸ
೫. ಇನಾಕ್ಯೂಲೇಶನ್. ಡಾ. ಶಿರಹಟ್ಟಿ.

ತ್ರೈಮಾಸಿಕದ ಸಂಚಿಕೆಗಳು ಲೋಕಲ್‌ಬೋರ್ಡದ, ಹಳ್ಳಿ, ಮತ್ತು ಶಹರದ ಪ್ರಾಥಮಿಕ ಶಾಲೆಗಳ ಮಾಸ್ತರ ಜನರಿಗೆ ಉಚಿತವಾಗಿ ಕಳುಹಿಸಲ್ಪಟ್ಟಿವೆ. ಮತ್ತು ಎಲ್ಲ ಮ್ಯುನಿಸಿಪಲ್ ಸ್ಕೂಲುಗಳಿಗೂ ಕಳುಹಿಸಬೇಕೆಂದು ಠರಾಯಿಸಲ್ಪಟ್ಟಿದೆ.

ಹೊಸದಾಗಿ ಮಾಡಿದ ವ್ಯವಸ್ಥೆಯಿಂದ ಪ್ರತಿಯೊಂದು ತಾಲೂಕ ಮತ್ತು ಮಹಾಲಗಳ ಚೇಅರಮನ್ನರು ತಿಂಗಳಲ್ಲಿ ಕಿವಾನ ಪಕ್ಷಕ್ಕೆ ಮಂದಾವರ್ತಿಯಾದರೂ ತಮ್ಮ ತಮ್ಮ ಸ್ಥಾನಿಕ ಸೇಕ್ರಟರಿಗಳ ಕಮೀಟಿಗೆ ಹೋಗಿ ಅಲ್ಲಿಯ ಸಭೆಯ ಕೆಲಸವು ಹ್ಯಾಗ ನಡೆದದೆ ಇದನ್ನು ನೋಡತಕ್ಕದ್ದು. ಮತ್ತು ಆಯಾ ಸ್ಥಾನಿಕ ಸೇಕ್ರಟರಿಗಳ ಸಹಾಯದಿಂದ ಅವರು ಅವರು ಕೂಡತಕ್ಕ ಸ್ಥಳ, ಕಾಲಗಳನ್ನು ಗೊತ್ತುಮಾಡತಕ್ಕದ್ದು. ಹಬ್ಬಳ್ಳಿ ಮತ್ತು ಮುಂಡರಿಗಿಗಳ ಚೇಅರಮನ್ನರು ಮೂರು ಕಮೀಟೆಗಳನ್ನು, ಹಾನಗಲ್ಲ, ನವಲಗುಂದಗಳ ಚೇಅರಮನ್ನರು ಒಂದೊಂದು ಕಮೀಟೆಯನ್ನೂ ಕೂಡಿಸಿದರು. ಆದರೆ ಉಳಿದ ತಾಲೂಕುಗಳ ಚೇಅರಮನ್ನರು ಕಮೀಟೆಯನ್ನೇ ಕೂಡಿಸಲಿಲ್ಲ. ಅಸೋಸಿಯೇಶನವು ಫಲದಾಯಕವಾಗುವದು ಮುಖ್ಯವಾಗಿ ಚೇಅರಮನ್ನರ ಉತ್ಸಾಹಬುದ್ಧಿವಂತಿಕೆಗಳನ್ನು ಆವಲಂಬಿಸಿರುತ್ತದೆ. ಅಸೋಸಿಯೇಶನವು ಆಶಿಸುವದೇನೆಂದರೆ ಇನ್ನು ವರ್ಷ ಸಭೆಗಳು ನಿಯಮಿತವಾಗಿ ಕೂಡಿಸಲ್ಪಡಬೇಕು. ಸಭೆಗಳನ್ನು ಕೂಡಿಸತಕ್ಕ ವ್ಯವಸ್ಥೆಯನ್ನು ಮಾಡುವ ಚೇಅರಮನ್ನರು ದೂರವದೇನೆಂದರೆ ಸ್ಥಾನಿಕಸೇಕ್ರಟರಿಗಳು ನಿಯಮಿತ ಕಾಲಕ್ಕೆ ಸಭೆಗೆ ಬರುವದಿಲ್ಲ. ಎಲ್ಲ ಚೇಅರಮನ್ನರು ನಿಯಮದಿಂದ ಸಭೆಗೆ ಹಾಜರಾಗದಿದ್ದ ಸ್ಥಾನಿಕಸೇಕ್ರಟರಿಗಳ ಬಗ್ಗೆ ರಿಪೋರ್ಟು ಮಾಡತಕ್ಕದ್ದು ಅಂದರೆ ಅಂಥ ಜನರ ಸ್ಥಳದಲ್ಲಿ ಮನಸ್ಸುಗೊಟ್ಟು ಕೆಲಸಮಾಡುವ ಎರಡನೇ ಸ್ಥಾನಿಕಸೇಕ್ರಟರಿಗಳನ್ನು ನೇಮಿಸಲಿಕ್ಕೆ ಅನುಕೂಲವಾಗುವದು.

ವ್ಯಾಖ್ಯಾನಗಳು:—ಕೆಳಗೆ ಬರೆದ ಪ್ರಕಾರ ವ್ಯಾಖ್ಯಾನಗಳು ಕೊಡಲ್ಪಟ್ಟವು:—

ಧಾರವಾಡ	೧
ಹುಬ್ಬಳ್ಳಿ	೧೬
ಕಲಘಟಗಿ	೧
ರಾಣೇಬೆನ್ನೂರ	೧
ಕೋಡ	೯
ಹಾನಗಲ್ಲ	೧

ಎರಡನೇ ತಾಲೂಕುಗಳಲ್ಲಿ ಇಂಥ ವ್ಯಾಖ್ಯಾನಗಳು ಕೊಡಲ್ಪಡಲಿಲ್ಲ; ಆದರೂ ಸ್ಥಾನಿಕಸೇಕ್ರಟರಿಗಳೂ ಮಾನುಲೀದಾರರೂ, ವ.ಹಾಲಕರಿಗಳೂ, ತಾವು ಫಿರತಿ ಮೇಲೆ ಹೋದಾಗ್ಗೆ ಎಷ್ಟೋ ಹಳ್ಳಿಗಳಲ್ಲಿ ಅಸೋಸಿಯೇಶನದ ಉದ್ದಿಷ್ಟ ಹೇತುವು ಸಾಧ್ಯವಾಗುವ ಕುರಿತು ಸಭಾಷಣೆಗಳನ್ನು ಮಾಡಿದರು.

ಹಳ್ಳಿಗಳ ಆರೋಗ್ಯವು:—ಈ ವಾಸತ್ರಯಗಳಲ್ಲಿ ಹಳ್ಳಿಗಳ ಆರೋಗ್ಯ ಸುಧಾರಣೆಯ ವಿಷಯವಾಗಿ ಹೆಚ್ಚು ಲಕ್ಷ್ಯವು ಕೊಡಲ್ಪಟ್ಟಿತು. ಎಷ್ಟೋ ಹಳ್ಳಿಗಳಲ್ಲಿ ಆರೋಗ್ಯ ವಿಷಯದ ಗ್ರಾಮ ಸಂಸ್ಥೆಗಳನ್ನು ಸ್ಥಾಪಿಸುವ ಕೆಲಸವು ಕೈಕೊಳ್ಳಲ್ಪಟ್ಟಿತು. ಮುಖ್ಯವಾಗಿ, ಹುಬ್ಬಳ್ಳಿ, ಕಲಘಟಗಿ, ರಾಣೇಬೆನ್ನೂರ, ಬಂಕಾಪೂರ, ಹಾನಗಲ್ಲ ಈ ತಾಲೂಕುಗಳಲ್ಲಿಯೂ ಮುಂಡರಗಿ ವಾಸಾಲಿನಲ್ಲಿಯೂ ವಾಳಿಗಾಲದಿಂದ ಈ ಕೆಲಸಕ್ಕೆ ಅಡ್ಡಿಯಾದಾಗ್ಯೂ ಈ ಪ್ರಯತ್ನವು ಮಾಡಲ್ಪಟ್ಟಿತು.

ವ್ಯಾಜಿಕ್ ಲ್ಯಾಂಟರ್ನದ ಪ್ರಯೋಗಗಳು:—ಈ ವಾಸತ್ರಯಗಳಲ್ಲಿ ೨೮ ಸ್ಥಳಗಳಲ್ಲಿ ವ್ಯಾಜಿಕ್‌ಲ್ಯಾಂಟರ್ನದ ಪ್ರಯೋಗಗಳು ಮಾಡಲ್ಪಟ್ಟವು. ಕಳೆದ ಅಗಸ್ಟದಲ್ಲಿ ದಕ್ಷಿಣಭಾಗದ ಕವೀಶನರರಾದ ಮೇ ಹಬ್ಬಾನ ಲಾರೆನ್ಸಸಾಹೇಬರವರು ಧಾರವಾಡಕ್ಕೆ ಬಂದಕಾಲಕ್ಕೆ ಬಂದು ಪ್ರಯೋಗವು ವಿದ್ವಾಮ ಮಾಡಲ್ಪಟ್ಟಿತು. ಆಗ್ಗೆ ಅಸೋಸಿಯೇಶನ್ನದ ಚೇರಮನ್ನರಾದ ಮೇಹಬ್ಬಾನ ಲಿಪ್ಟಿನಂಟ ಕರ್ನಲ್ಲ ಹಡಸನ್ನಸಾಹೇಬರವರು ಮಲೇರಿಯಾದ ಮೇಲೆ ವ್ಯಾಖ್ಯಾನಕೊಟ್ಟರು. ಕೂಡಲೆ ಮಲೇರಿಯಾಕ್ಕೆ ಸಮ್ಮಂಧಿಸಿದ ವ್ಯಾಜಿಕ್‌ಲ್ಯಾಂಟರ್ನದ ಪ್ರಯೋಗವು ತೋರಿಸಲ್ಪಟ್ಟಿತು. ಆಗ ಅಧ್ಯಕ್ಷಸ್ಥಾನಾವನ್ನಲಂಕರಿಸಿದ ಮೇಹಬ್ಬಾನ ಕವೀಶನರ ಸಾಹೇಬರವರು ತಮ್ಮ ಭಾಷಣದಲ್ಲಿ ಉಪಯುಕ್ತವಾದ ಸೂಚನೆಗಳನ್ನು ಮಾಡಿದರು. ಈ ವಾಸತ್ರಯಗಳಲ್ಲಿ ಮಲೇರಿಯಾರೋಗವು ವಿಶೇಷವಾಗಿ ಹಬ್ಬಲಿಲ್ಲ. ಮಲೇರಿಯಾ ಪೀಡಿತವಾದ ಸ್ಥಳದ ಜನರು ಕ್ವಿನಾಯಿನವನ್ನೂ, ಕ್ವಿನಾಯಿನದ ಗುಳಿಗೆಗಳನ್ನೂ ತೀವ್ರವಾಗಿ ತೆಗೆದುಕೊಂಡರು. ಡಿಸ್ಟ್ರಿಕ್ಟಲೋಕಲ್ಲಬೋರ್ಡಿನವರು ಮೋಫತ ಕ್ವಿನಾಯಿನವನ್ನು ಜನರಿಗೆ ಕೊಟ್ಟರು. ಮತ್ತು ಅಸೋಸಿಯೇಶನದವರು ೧೩೧೧ ಕ್ವಿನಾಯಿನದ ಕೊಳವಿಗಳನ್ನು ಮಾರಾಟಮಾಡಿದರು.

ಪ್ಲೇಗು ಬಹಳ ಸ್ವಲ್ಪು ಹಳ್ಳಿಗಳಲ್ಲಿ ಮಾತ್ರ ಹಬ್ಬಿತು ಇನಾಕ್ಯು ಲೇಶನ್ನಿನ ವಿಷಯವಾಗಿ ವ್ಯಾಖ್ಯಾನಕೊಡಲ್ಪಟ್ಟಿತು. ಮತ್ತು ಜನರು ಇನಾ ಕ್ಯುಲೇಶನ ಮಾಡಿಸಿಕೊಂಡರು. ಕೆಲವು ಪ್ಲೇಗಪೀಡಿತಸ್ಥಳಗಳಲ್ಲಿ ಮೇಹ ಬ್ಯಾನ ಮೆಕಾನಕೀಸಾಹೇಬರವರು ಬರೆದ ಪ್ಲೇಗಿನ ಮೇಲಿನ ಪತ್ರಿಕೆ ಗಳು ಮೋಫತ ಹಂಚಲ್ಪಟ್ಟವು.

ಕಾಲರಾ:—ಮಾರಿಕಾಬೇನೆಯು ಕಲಘಟಿಗಿ, ರಾಣೇಬೆನ್ನೂರ ತಾಲೂಕಗಳ ಸ್ವಲ್ಪುಹಳ್ಳಿಗಳಲ್ಲಿಯೂ, ಗದಗಿನಲ್ಲಿಯೂ ತಲೆದೋರಿತು. ಕೂಡಲೇ ಸ್ಥಾನಿಕಸೇಕ್ರಟರಿಗಳು ಕುಡಿಯುವ ನೀರಿನ ಸಂಚಯಗಳನ್ನು ಶುದ್ಧಮಾಡುವ ಉಪಾಯಗಳನ್ನು ಕೈಕೊಂಡರು; ಮತ್ತು ಪೋಟ್ಯಾಸಿಯು ಮ್ಮ ಪರ್ಮಾಂಗ್ನೇಟದ ಗುಳಿಗೆಗಳು ಎಷೋ ಸ್ಥಳಗಳಲ್ಲಿ ಮಾರಿಕಾಗ್ರಸ್ತ ರೋಗಿಗಳಿಗೆ ಕೊಡಲ್ಪಟ್ಟವು. ಕಲಘಟಗಿ ತಾಲೂಕಿನಲ್ಲಿ ಈ ಗುಳಿಗೆಗಳ ನ್ನು ತೆಗೆದುಕೊಂಡ ೨ ಜನರು ವಾಸಿಯಾದರು. ಗದಗಿನಲ್ಲಿ ಅಸೋಸಿಯೇ ಶನದ ಚೇಅರವನ್ನೆರಾದ ಮ|| ರಾ|| ಗೋಖಲೆ ಇವರು ತೆಗೆದುಕೊಂಡ ಗುಳ್ಳೆಯಿಂದ ಮಾರಿಕಾರೋಗದ ಪ್ರಸಾರವು ಕುಂಠಿತವಾಯಿತು.

ಸಾಮಾನ್ಯ ಸೂಚನೆಗಳು :—ಸಾರ್ವಜನಿಕ ಆರೋಗ್ಯದ ವಿಷಯ ವಾಗಿ ಈ ಅಸೋಸಿಯೇಶನ್ನವು ಜನರಲ್ಲಿ ಅಭಿರುಚಿಯನ್ನು ಹುಟ್ಟಿಸಿತು. ಹುಬ್ಬಳ್ಳಿತಾಲೂಕಿನ ಅಸೋಸಿಯೇಶನದ ಚೇಅರಮನ್ನೆರಾದ ಮ|| ರಾ|| ವಾಗಳೇಯವರು ಆರೋಗ್ಯ ಶಿಕ್ಷಣಕ್ಕಾಗಿ ಡಿಸ್ಪೆನ್ಸರಿಕ್ಲಾಸ ಮಿಶನದ ಆಶ್ರಯದ ಕೆಳಗೆ ಬಿಂದು ಪ್ರಾಥಮಿಕ ವರ್ಗವನ್ನು ಮಹಾರಾಷ್ಟ್ರ ಕನ್ನಡ ಭಾಷೆ ಗಳಲ್ಲಿ ಪ್ರಾರಂಭಮಾಡಿದ್ದಾರೆ. ಮಧ್ಯಭಾಗದ ಅಸೋಸಿಯೇಶನದ ಮೆಂಬ ರರಾದ ಡಾಕ್ಟರ ಗೋರೆ ಇವರು ಮಹಾರಾಷ್ಟ್ರ ವರ್ಗಕ್ಕೂ, ಡಾಕ್ಟರ ಕುಂಭಕೋಣಂ ಇವರು ಕನ್ನಡ ವರ್ಗಕ್ಕೂ, ಶಿಕ್ಷಣವನ್ನು ಕೊಡುತ್ತಿ ರುವರು, ಈ ವರ್ಗಗಳಿಗೆ ವರಿಷ್ಟ ವರ್ಗದ ಸಭ್ಯಸ್ತ್ರೀಯರು ಸಹ ಬರು ವದನ್ನು ನೋಡಿ ಸಮಾಧಾನವಾಗುತ್ತದೆ, ಇದೇ ಪ್ರಕಾರವಾಗಿ ಮ|| ರಾ|| ಚಿಟ್ಟಗುಪ್ಪಿ ಮತ್ತು ವಾಗಳೇಯವರು ಹುಬ್ಬಳ್ಳಿಯಲ್ಲಿಯ ಕನಿಷ್ಟ ವರ್ಗದ ಜನರ ಉದಾರಕ್ಕಾಗಿ ಸ್ಥಾಪಿಸಿದ ಸಂಘದ ಯೋಗದಿಂದ ನಮ್ಮ ಅಸೋಸಿ ಯೇಶನದ ಉದ್ದೇಶಪೂರ್ತಿಗಾಗಿ ಸಹಾಯ ಮಾಡುತ್ತಿರುವರು.

(ಸಹಿ), ಜೀ. ಆರ್. ಬಾಳೇಕುಂದ್ರಿ.

ಸನ್ಮಾನಿತಕಾರ್ಯದರ್ಶಿ.

ಡಿ. ಸ್ಯಾ: ಅಸೋಸಿಯೇಶನ್, ಧಾರವಾಡ.

ತಿಂಗಳು.	ಉತ್ಪನ್ನ.				ಖರ್ಚು.								
	ನಗರಣಿಯನ್ನು ಕೊಂಡು ಹೋದವರ ಸಂಖ್ಯೆ.	ನಮ್ಮೂರಲ್ಲಿ ಬಿಟ್ಟ ನಗರಣಿ ರಕ್ಷಣೆ.			ಮಾತೆಯು ನೌಕರ ಜನರ ಸಂಬಳವು.			ಪ್ರವಾಸದ ಭತ್ತೆ.			ಧಾರಿಸುವ ಖರ್ಚು.		
ಜುಲೈ ೧೯೧೪	೧೧೯	೯	೮	೦	೨೮	೦	೦	೦	೦	೦	೦	೦	
ಆಗಷ್ಟ ,,	೯೯	೧೧೬	೧೪	೦	೨೮	೦	೦	೦	೦	೦	೪೧	೮	
ಸಪ್ಟಂಬರ ,,	೭೭	೭೦	೦	೦	೨೮	೦	೦	೦	೦	೦	೧೪	೦	
ತ್ರೈಮಾಸಿಕದ ವಟ್ಟು	೨೯೫	೧೯೬	೬	೦	೮೪	೦	೦	೦	೦	೦	೫೫	೮	

*ಕಿತುಕೊಳ್ಳಿ ಖರ್ಚಿನ ತಪಶೀಲು.

ಆಫೀಸ ಸಂಬಂಧಿ.

ಫೂಟೊಗಳ ಮೂಲ ಕಾಪೀ ಖರ್ಚು	೬	೦	೦
ಸದರ ೨ ಬೇರೆ ಕಾಪಿಗಳು	೩	೦	೦
ಬೇಚ್ಚಿ ಚಾಮುಕ್	೨	೪	೦
ಸಿಪಾಯಿಯು ಕಂಬಿಸಪಟ್ಟಿಯು ಖರೀದಿ	೧	೧೦	೦
	೧೩	೧೪	೪

+ಮ್ಯಾಜಿಕ್ ಲ್ಯಾಂಟ
ಖರ್ಚಿನ ತ

೧೦೦ ಲಟೂಚಿ ವ ೧೦೦ ಪಾ
ಕ್ಯಾಲಿಸಿಯೊ ಕಾರ್ಬಾರ್ಯಿಡ

ಪ್ಲೇಗು ಬಹಳ ಸ್ವಲ್ಪ ಹಳ್ಳಿಗಳಲ್ಲಿ ಮಾತ್ರ ಹಬ್ಬಿತು. ಇನಾಕ್ಯೂಲೇಶನ್ನಿನ ವಿಷಯವಾಗಿ ವ್ಯಾಖ್ಯಾನಕೂಡಲ್ಪಟ್ಟಿತು. ಮತ್ತು ಜನರು ಇನಾಕ್ಯೂಲೇಶನ ಮಾಡಿಸಿಕೊಂಡರು. ಕೆಲವು ಪ್ಲೇಗಪೀಡಿತಸ್ಥಳಗಳಲ್ಲಿ ಪ್ರೋಹಬ್ರಾನ ಮೆಕಾನಕೀಸಾಹೇಬರವರು ಬರೆದ ಪ್ಲೇಗಿನ ಮೇಲಿನ ಪತ್ರಿಕೆಗಳು ಮೋಘತ ಹಂಚಲ್ಪಟ್ಟವು.

ಕಾಲರಾ:—ಮಾರಿಕಾಬೇನೆಯು ಕಲಘಟಗಿ ರಾಣೇಬೆನ್ನೂರ ತಾಲೂಕುಗಳ ಸ್ವಲ್ಪಸ್ವಲ್ಪಹಳ್ಳಿಗಳಲ್ಲಿಯೂ, ಗದಗಿನಲ್ಲಿಯೂ ತಲೆದೋರಿತು. ಕೂಡಲೇ ಸ್ಥಾನಿಕಸೇಕ್ರಟರಿಗಳು ಕುಡಿಯುವ ನೀರಿನ ಸಂಚಯಗಳನ್ನು ಶುದ್ಧಮಾಡುವ ಉಪಾಯಗಳನ್ನು ಕೈಕೊಂಡರು; ಮತ್ತು ಪೊಟ್ಯಾಸಿಯಮ್ಮ ಪರ್ಮಾಂಗ್ನೇಟಿನ ಗುಳಿಗೆಗಳು ಎಷ್ಟೋ ಸ್ಥಳಗಳಲ್ಲಿ ಮಾರಿಕಾಗ್ರಸ್ತರೋಗಿಗಳಿಗೆ ಕೊಡಲ್ಪಟ್ಟವು. ಕಲಘಟಗಿ ತಾಲೂಕಿನಲ್ಲಿ ಈ ಗುಳಿಗೆಗಳನ್ನು ತೆಗೆದುಕೊಂಡ ೬ ಜನರು ಸತ್ತಿರುವಾದರು. ಗದಗಿನಲ್ಲಿ ಅಸೋಸಿಯೇಶನದ ಚೇಅರಮನ್ನರಾದ ಮ॥ ರಾ॥ ಗೋಖಲೆ ಇವರು ತಗದುಕೊಂಡ ಗುಳ್ಳೆಯಿಂದ ಮಾರಿಕಾರೋಗದ ಪ್ರಸಾರವು ಕುಂಠಿತವಾಯಿತು.

ಸಾಮಾನ್ಯ ಸೂಚನೆಗಳು:—ಸಾರ್ವಜನಿಕ ಆರೋಗ್ಯದ ವಿಷಯವಾಗಿ ಈ ಅಸೋಸಿಯೇಶನ್ನವು ಜನರಲ್ಲಿ ಅಭಿರುಚಿಯನ್ನು ಹುಟ್ಟಿಸಿತು. ಹುಬ್ಬಳ್ಳಿತಾಲೂಕಿನ ಅಸೋಸಿಯೇಶನದ ಚೇಅರಮನ್ನರಾದ ಮ॥ ರಾ॥ ವಾಗಳೇಯವರು ಆರೋಗ್ಯ ಶಿಕ್ಷಣಕ್ಕಾಗಿ ಡಿಸ್ಪೆನ್ಸರಿ ಕ್ಲಾಸ ವಿಶನದ ಆಶ್ರಯದ ಕೆಳಗೆ ಬಂದು ವ್ಯಾಧಿವಿಷಕ ವರ್ಗವನ್ನು ಮಹಾರಾಷ್ಟ್ರ ಕನ್ನಡ ಭಾಷೆಗಳಲ್ಲಿ ವ್ಯಾರಂಭಮಾಡಿದ್ದಾರೆ. ಮುಖ್ಯಭಾಗದ ಅಸೋಸಿಯೇಶನದ ಮೆಂಬರರಾದ ಡಾಕ್ಟರ ಗೋಖಲೆ ಇವರು ಮಹಾರಾಷ್ಟ್ರ ವರ್ಗಕ್ಕೂ, ಡಾಕ್ಟರ ಕುಂಭಕೋಣಂ ಇವರು ಕನ್ನಡ ವರ್ಗಕ್ಕೂ, ಶಿಕ್ಷಣವನ್ನು ಕೊಡುತ್ತಲಿರುವರು, ಈ ವರ್ಗಗಳಿಗೆ ವರಿಷ್ಟ ವರ್ಗದ ಸಭ್ಯಸ್ತ್ರೀಯರು ಸಹ ಬರುವದನ್ನು ನೋಡಿ ಸಮಾಧಾನವಾಗುತ್ತದೆ, ಇದೇ ಪ್ರಕಾರವಾಗಿ ಮ॥ ರಾ॥ ಚಿಟಗುಪ್ಪಿ ಮತ್ತು ವಾಗಳೇಯವರು ಹುಬ್ಬಳ್ಳಿಯಲ್ಲಿಯ ಕನಿಷ್ಟ ವರ್ಗದ ಜನರ ಉದ್ಧಾರಕ್ಕಾಗಿ ಸ್ಥಾಪಿಸಿದ ಸಂಘದ ಯೋಗದಿಂದ ನವ್ಮ ಅಸೋಸಿಯೇಶನದ ಉದ್ದೇಶಪೂರ್ತಿಗಾಗಿ ಸಹಾಯ ಮಾಡುತ್ತಿರುವರು.

(ಸಹಿ) ಜೀ. ಆರ್ ಬಾಳೇಕುಂದ್ರಿ.

ಸನ್ಮಾನಿತಕಾರ್ಯದರ್ಶಿ

ಡಿ. ಸ್ಯಾ: ಅಸೋಸಿಯೇಶನ್ನ, ಧಾರವಾಡ.

ಪಾಸಿನ್ವೆ ೮.

ಧಾರವಾಡ ನಿಸ್ತ್ರಿಕ್ಷ ಕ್ಯಾಸಿಟ ಅಸೋಸಿಯೇಶನ್ನಿನ ೧೯೧೪ನೇ ಇಸ್ವಿಯ ೩೦ನೇ ಸಪ್ಟಂಬರದಿಂದ ಮುಗಿಯುವ ತ್ರೈಮಾಸಿಕದ ಲೆಕ್ಕಪತ್ರಿಕೆಯು

ತಿಂಗಳು.	ಉತ್ಪನ್ನ. ಸದಸ್ಯರಿಂದ ಸಂಗ್ರಹಿಸಿದ ಚಂದಾ ಹಣದ ಸಂಖ್ಯೆ	ಉತ್ಪನ್ನ. ವಸೂಲು ಆದ ಚಂದಾ ರೊಕ್ಕ.	ಖರ್ಚು. ಆಫೀಸಿನ ಸಂಬಂಧಿ ಖರ್ಚು. ಆಫೀಸಿನ ಕೆಲಸದವರ ಸಂಬಳವು.	ಪ್ರವಾಸದ ಭತ್ತೆ.	ಛಾಪಿಸುವ ಸ್ಟೇಶನರಿ ಸಾಮಾನಿನ ಖರ್ಚು.	ಟಪಾಲ ಖರ್ಚು.	ಮಸಿಯೊಡ್ಡರ ಖರ್ಚು	ಕಿರುಕೊಳ ಖರ್ಚು.	ಫರ್ನೀಚರಿನ ಸಲುವಾಗಿ ಖರ್ಚು ಮಾಡಿದ್ದು	ಅಂತು.	ಮ್ಯಾಜಿಕ್ ಲ್ಯಾಂಟರ್ನ್‌ದ ಖಾತೆಯ ಖರ್ಚು. ನವಕರ ಜನರ ಸಂಬಳವು.	ಪ್ರವಾಸ ಭತ್ತೆ.	ಕಚೇರಿ ಸಾಮಾನ ಗಾಡಿ ಭಾಡೆ.	ಕಿರಕೊಳ ಖರ್ಚು.	ಫರ್ನೀಚರಿನ ಸಲುವಾಗಿ ಖರ್ಚು ಮಾಡಿದ್ದು	ಅಂತು.	ಒಟ್ಟು ಅಂತು.
ಜುಲೈ ೧೯೧೪	೧೧೯	೯ ೮ ೦	೩೮ ೦ ೦	೦ ೦ ೦	೦ ೮ ೦	೮೦ ೩ ೦	೦ ೩ ೦	೧೦ ೮ ೦		೧೧೮ ೧೪ ೦	೭೮ ೭ ೦	೧೧ ೮ ೦	೦ ೦ ೦		೧೩೪ ೦ ೦	೨೩೭ ೧೪ ೦
ಆಗಸ್ಟ ,,	೯೯	೧೧೬ ೧೪ ೦	೮೮ ೦ ೦	೦ ೦ ೦	೪೧ ೮ ೦	೩೯ ೩ ೬	೧ ೦ ೦	೦ ೦ ೦		೧೧೦ ೧ ೬	೭೮ ೦ ೦	೧೧ ೮ ೦	೦ ೦ ೦		೧೦೬ ೮ ೦	೨೧೬ ೧೦ ೬
ಸಪ್ಟಂಬರ ,,	೭೨	೭೦ ೦ ೦	೭೮ ೦ ೦	೦ ೦ ೦	೧೪ ೦ ೦	೦ ೩ ೬	೦ ೧೨ ೦	೨ ೬ ೦		೪೫ ೫ ೬	೭೮ ೦ ೦	೮ ೧೨ ೮	೩ ೦ ೦		೮೮ ೮ ೮	೧೩೪ ೬ ೨
ತ್ರೈಮಾಸಿಕದ ವಟ್ಟು	೨೯೫	೨೯೬ ೬ ೦	೨೮ ೦ ೦	೦ ೦ ೦	೭೫ ೮ ೦	೧೨೦ ೦ ೦	೧ ೧೨ ೦	೧೨ ೧೪ ೦		೨೨೪ ೨ ೦	೨೩೨ ೦ ೦	೩೨ ೦ ೮	೩ ೦ ೦		೨೭೭ ೦ ೮	೬೦೨ ೨ ೮

* ಕಿರುಕೊಳ ಖರ್ಚಿನ ತಪಶೀಲು.

ಆಫೀಸ ಸಂಬಂಧಿ.

ಫೋಟೋಗಳ ಮೂಲ ಕಾಪೀ ಖರ್ಚು	೬– ೦–೦
ಸದರ ೨ ಜೇಬಿಕೆ ಕಾಪಿಗಳು	೩– ೦–೦
ಕೆಲ್ಸ ಚಾರ್ಜ	೨– ೪–೦
ಸಪಾಯಿಯು ಕಂಬರಪಟ್ಟೆಯು ಖರೀದಿ	೧–೧೦–೦
	೧೨–೧೪–೦

\+ ಮ್ಯಾಜಿಕ್ ಲ್ಯಾಂಟರ್ನದ ಕಿರುಕೊಳ ಖರ್ಚಿನ ತೀಲು.

೧೦೦ ಲಬೂಚಿ ವ ೧೦೦ ಪಾಲ	೦–೧೪–೦
ಕ್ಯಾಲಿಸಿಯಂ ಕಾರ್ಬಾಯಿಡದಬ್ಬಿಗಳು	೧– ೮–೦
	೨– ೨–೦

ನಿಜವಾದ ತೀಲ್ಮು ರೂಪಾಯಿ ೫೮೨೩–೯–೬ ವರ್ಷಾರಂಭದ ತೀಲ್ಮು ೬೩೨೩–೯–೬ ಇದರಲ್ಲಿ ಕೂಡಿಯದೆ

೫೮೨೩– ೯–೧೦ ಪೋಸ್ಟ ಆಫೀಸ ಸೆವ್ವಿಂಗ ಬ್ಯಾಂಕಿನಲ್ಲಿ
೯೦–೧೩ - ೪ ಆನರರಿ ಜಾಯಿಂಟ ಸೆಕ್ರೆಟರಿಯವರ ಕಾವಾದಲ್ಲಿ

ಧಾರವಾಡ
ತಾ|| ೧೪–೧೧–೧೯೧೪ ಇ

(ಸಹಿ). ಆರ್. ಬಿ. ಕೆತ್ತೂರ,
ಆನರರಿ ಜಾಯಿಂಟ ಸೆಕ್ರೆಟರಿ,
ಡಿ. ಸ್ಯಾ|| ಅ|| ಧಾರವಾಡ.

ಛಳಿ ಜ್ವರಕ್ಕೆ ಕ್ವಿನಾಯಿನದ ಉಪಯೋಗ.

(By Dr. R. H. Shirhatti. L. M. & S. DHARWAR.)

ದಿನಾಲು ಸ್ವಲ್ಪ ಕ್ವಿನಾಯಿನವನ್ನು ತೆಗದುಕೊಳ್ಳುತ್ತ ಹೋಗುವದು ಛಳಿ ಜ್ವರವು ಬರದಂತೆ ಮಾಡುವ ಉತ್ತಮ ಉಪಾಯವಾಗಿರುವದು.

ವಿಶೇಷವಾಗಿ ಬಿಕ್ಕಲಗರಲ್ಲಿ ಈ ಉಪಾಯವನ್ನು ಮಾಡಲೇಬೇಕಾಗುವದು. ಯಾಕಂದರೆ ಹೆಚ್ಚು ವೆಚ್ಚ ಮಾಡಲಿಕ್ಕೆ ಆಗದ ಇವರಿಂದ ತಾವು ಒಂಸಿಸುವ ಸ್ಥಳಗಳಲ್ಲಿಯ ಛಳಿ ಜ್ವರಗಳನ್ನುಂಟು ಮಾಡುವ ಗುಂಗಾಡುಗಳನ್ನು ನಿರ್ಮೂಲ ಮಾಡುವದು ಅಥವಾ ಅವುಗಳಿಂದ ರಕ್ಷಿಸಿಕೊಳ್ಳುವದು ಆಗುವದಿಲ್ಲ.

ಜವಳು ಪ್ರದೇಶಗಳಲ್ಲಿರುವವರು ಛಳಿಗಾಲದಲ್ಲಿ ದಿನಾಲು ದೊಡ್ಡವರು ೫ಗ್ರೇನಿನಂತೆ, ಹುಡುಗರು ವಯೋಮಾನಕ್ಕನುಸರಿಸಿ ಸ್ವಲ್ಪ ಕಡಿಮೆ ಪ್ರಮಾಣದಿಂದ ಕ್ವಿನಾಯಿನವನ್ನು ತೆಗೆದುಕೊಳ್ಳುತ್ತಿರಬೇಕು. ಕಡಿಮೆ ಜವಳು ಇದ್ದಲ್ಲಿ ಈ ಪ್ರಮಾಣವನ್ನು ಕಡಿಮೆ ಮಾಡಿದರೂ ಅಡ್ಡಿ ಇಲ್ಲ. ಇದನ್ನು ತೆಗೆದು ಕೊಳ್ಳುವಾಗ ಬಹುತರವಾಗಿ ಯಾರಿಗೂ ತ್ರಾಸವಾಗುವದಿಲ್ಲ. ಆದರೆ ಹಲಕೆಲವರಿಗೆ ಆರಂಭದ ಏಳೆಂಟು ದಿವಸಗಳವರೆಗೆ ಮಾತ್ರ ಅಲ್ಪ ಸ್ವಲ್ಪ ತ್ರಾಸವೆನಿಸಬಹುದು. ಬಹಳ ತ್ರಾಸವಾಗುವಂತೆ ಇದ್ದರೆ ಅದರ ಪ್ರಮಾಣವನ್ನು ಮೊದಲು ಕಡಿಮೆ ಮಾಡಿ ಬರಬರುತ್ತ ಬೆಳಿಸಬಹುದು. ಇದರ ಹೊರತು ಸಾಧ್ಯವಿದ್ದರೆ ಆ ಗುಂಗಾಡುಗಳು ಒಳಗೆ ಬರದಂತೆ ಮನೆಯ ಬಾಗಿಲು ಕಿಡಕಿಗಳಿಗೆ ಪಡದೆಗಳನ್ನು ಕಟ್ಟಬೇಕು ಮನೆಯ ಸುತ್ತಲಿನ ಕಾಡು ಗಿಡಗಂಟೆ, ಹುಲ್ಲು, ಮುಂತಾದವುಗಳನ್ನು ತೆಗೆದು ಹಾಕಬೇಕು. ನೀರು ನಿಲ್ಲುವಂಥ ತಗ್ಗುಗಳಿದ್ದರೆ ಅವುಗಳನ್ನು ಮುಚ್ಚಿಸಬೇಕು. ಇಲ್ಲವೇ ಆ ನೀರು ಹರಿದು ಹೋಗುವಂತೆ ವ್ಯವಸ್ಥೆ ಮಾಡಬೇಕು ಇವೆರಡೂ ಅಸಾಧ್ಯವಿದ್ದರೆ ಅಂಥ ತಗ್ಗುಗಳಲ್ಲಿ ಎಣ್ಣೆಯನ್ನು ಚಲ್ಲಬೇಕು. ಇದಕ್ಕೆ ಬಾವಣಿ ಎಣ್ಣೆಯು ಉತ್ತಮ ಗುಣವನ್ನು ಕೊಡುವದು.

ಉಸುರಾಡಿಸುವದು.

By Dr. R. H. Shirhatti L. M. & S. DHARWHR.

ಬಾಯಿಂದ ಉಸುರಾಡಿಸುವ ರೂಢಿಯು ಪುಪ್ಪುಸಗಳಿಗೆ ಬಹಳ ಅಪಾಯಕರವು. ಧೂಲಿಮಯವಾದ ವಾತಾವರಣದಲ್ಲಿ ಎಲ್ಲ ತರದ ಬೇನೆಗಳನ್ನುಂಟು ಮಾಡುವ ಕ್ರಿಮಿಗಳು ತುಂಬಿರುತ್ತವೆ ಮೂಗಿನ ದ್ವಾರದಿಂದ ಹವೆಯು ಸೋಸಿ ಹೋಗುವಂತೆ ವ್ಯವಸ್ಥೆ ಇರುತ್ತದೆ. ಈತರದ ವ್ಯವಸ್ಥೆಯು ಬಾಯಲ್ಲಿ ಇಲ್ಲದ್ದರಿಂದ ವಿಶೇಷವಾಗಿ ಇಂಥ ಹವೆಯಲ್ಲಿ ಬಾಯಿಂದ ಉಸುರಾಡಿಸಿದರೆ ರೋಗ ಜನಕ ಕ್ರಿಮಿಗಳು ಎಲ್ಲಿಯೂ ತಡೆಯಲ್ಪಡದೆ ನೆಟ್ಟಗೆ ಪುಪ್ಪುಸವನ್ನು ಸೇರುತ್ತವೆ. ವಲಗಿದಾಗ ಈ ಪ್ರಕಾರ ಉಸುರಾಡಿಸುವದರಿಂದಲೇ ಪುಪ್ಪುಸಗಳು ಕೆಟ್ಟು ಜನರಿಗೆ ಅಕಾಲ ಮೃತ್ಯು ಒದಗುತ್ತದೆ. ಎಡಬಲದಲ್ಲಿ ಮಲಗಿದವರಿಗೆ ತ್ರಾಸ ಕೊಡುವಂಥ ಗುರಿಕೆಯು ಸಪ್ಪಳದ ಕಾರಣವಾದರೂ ಇದೇ. ಮೂಗಿನಿಂದ ಉಸುರಾಡಿಸಿದರೆ ವಿದುಳಿಗೆ ವಿಶ್ರಾಂತಿ ದೊರೆಯುತ್ತದೆ. ಇದರ ಹಿತಕರವಾದ ಗುಣಗಳು ಸ್ವಚ್ಛವಾದ ಹವೆಯಲ್ಲಿ ತಿರುಗಾಡುವ ಇಲ್ಲವೇ ಗುಡ್ಡದ ಮೇಲೆ ಏರುವಾಗ ಕಂಡು ಬರುವವು.

ರೋಗಿಗಳು ಈ ಅಪಾಯಕರವಾದ ರೂಢಿಯನ್ನು ತೀವ್ರವಾಗಿ ಆದಷ್ಟು ಪ್ರಯತ್ನ ಮಾಡಿ ಬಿಟ್ಟು ಬಿಡಬೇಕು. ಈ ಚಟವನ್ನು ತಪ್ಪಿಸುವದು ಕಠಿಣವಾಗಿರುವದು. ಇದನ್ನು ಪೂರ್ಣವಾಗಿ ಬಿಡುವದು ಎರಡು ಮೂರು ವಾರಗಳಲ್ಲಿ ಸಹ ಆಗದು.

ಕೂಸುಗಳ ಹೊಟ್ಟೆ ಜಾಡಿಸುವದು.

By Dr. R, H. Shirhatti L. M. & S. DHARWAR.

ಬೇಸಿಗೆಯಲ್ಲಿ ಕೂಸುಗಳಲ್ಲಿ ಹಬ್ಬುವ ಹೊಟ್ಟೆ ಜಾಡಿಸುವ ರೋಗಕ್ಕೂ ಆ ಕೂಸುಗಳಿಗೆ ಕೊಡುವ ಆಹಾರಕ್ಕೂ ನಿಕಟ ಸಂಬಂಧ ಉಂಟೆಂಬದು ನಿಃಸಂಶಯವಾಗಿದ್ದು. ಹೊಟ್ಟೆ ಜಾಡಿಸುವದೆಂಬದೊಂದು ಸ್ವತಂತ್ರರೋಗವಲ್ಲ. ಕೆಲವೊಂದು ಆಹಾರದಿಂದಲೂ ವಿಷಕಾರಕ ಪದಾರ್ಥಗಳನ್ನು ಶೋಷಿಸಿಕೊಳ್ಳುವದರಿಂದಲೂ ಕರುಳುಗಳಲ್ಲಿ ಉತ್ಪನ್ನವಾಗುವ ಅವ್ಯವಸ್ಥೆಯು ಮತ್ತು ಶಕ್ತಿ ವೈಪರೀತ್ಯ ಇವುಗಳ ಸೂಚಕವಾಗಿರುವದು. ಅಂಥ ಹೊಟ್ಟೆ

ಒಳಗಿನ ಈ ದೋಷಗಳನ್ನು ಹೊರಗೆ ಹಾಕುವ ಸಲುವಾಗಿ ಶರೀರವು ಮಾಡುವ ಸ್ವಾಭಾವಿಕ ಪ್ರಯತ್ನವೇ ಹೊಟ್ಟೆ ಜಾತಿಸೋಣವು.

ಈ ವಿಷ ಪದಾರ್ಥಗಳು ಅಂತಸ್ಥ ಮತ್ತು ಬಾಹ್ಯ ಎರಡು ಪ್ರಕಾರವಿರುತ್ತವೆ. ನಾವು ಬಾಹ್ಯಕಾರಣಗಳಿಂದ ಉತ್ಪನ್ನವಾಗುವ ವಿಷ ಪದಾರ್ಥಗಳ ವಿಷಯಕ್ಕೆ ವಿಚಾರ ಮಾಡುವಾ ಯಾಕಂದರೆ ಹೊಲಿಹಾಲಿನ ಮೇಲೆ ಇರುವ ಕೂಸುಗಳಲ್ಲಿ ಈ ರೋಗವು ಸೇರುವದು ಕಡಿಮೆ. ಬಾಹ್ಯಕಾರಣಗಳಿಂದ ಉತ್ಪನ್ನವಾಗುವ ವಿಷಪದಾರ್ಥಗಳೆಂದರೆ ದೂಷಿತವಾದ ಆಹಾರಗಳಲ್ಲಿ ಹುಟ್ಟುವ ಕ್ರಿಮಿಗಳು. ಇವುಗಳ ಮೂಲಕವಾಗಿ ಬೇ ಹೊಯ್ಯಹಾಲು ಕುಡಿಯುವಂಥ ಆಹಾರವನ್ನೂ ಹೊಯ್ಯಹಾಲನ್ನೂ ತಿಂದುಕೊಳ್ಳುವಂಥ ಕೂಸುಗಳೇ ಈ ರೋಗಕ್ಕೆ ಬಲಿಬೀಳುತ್ತವೆ. ದೂಷಿತವಾದ ಹಾಲು ಈ ಬೇನೆಯ ತವರುಮನೆಯು.

ನಾವು ನಿರ್ದೋಷವಾದದ್ದೆಂದು ಕಲ್ಪಿಸುವ ಅಕಳ ಹಾಲು ಸಹ ಎದರ ಮೊಲೆಯಿಂದ ಹೊರಬೀಳುವಾಗಿನಿಂದ ಕೂಸಿನ ಹೊಟ್ಟೆಯಲ್ಲಿ ಬೀಳುವವರೆಗೆ ನೂರಾರು ಕಾರಣಗಳಿಂದ ದೂಷಿತವಾಗುವ ಸಂಭವ ವದೆ. ದನಗಳನ್ನು ತೊಳೆಯದೇ ಇರೋಣ, ಸೆಗಣೆಯಲ್ಲಿ ಎದ್ದಿದ್ದ ಬಾಲ ಅಸ್ವಚ್ಛವಾದ ಕೆಚ್ಚಲು, ಹಿಂಡುವವರ ಮಲಿನವಾದ ಕೈಗಳು ಸ್ವಲ್ಪ ವಾಗಿ ತೊಳೆಯದ ಪಾತ್ರೆಗಳು ಹುಡಿಯನ್ನು ತುಂಬಿಕೊಂಡು ನಾರು ವಂಥ ಹನೆ, ದನಗಳು ಕುಡಿಯುವ ಹೊಲಸು ನೀರು ಇವೇ ಮೊದಲಾದ ವುಗಳು ಈ ದೋಷದ ಮುಖ್ಯಕಾರಣಗಳು ಅಯೋಗ್ಯ ಪಾತ್ರೆಯಲ್ಲಿ ಬಹಳ ಹೊತ್ತಿನವರೆಗೆ ಹಾಲನ್ನು ಹಾಕಿ ಇಡೋಣ ಸ್ವಚ್ಛತೆಯ ಕಡೆಗೆ ಹಾಲು ಮಾರುವವರ ದುರ್ಲಕ್ಷ ಇವುಗಳಿಂದಂತು ಮೊದಲು ಹುಟ್ಟಿದ ಕ್ರಿಮಿಗಳಿಗೆ ಅನುಕೂಲವಾಗಿ ಬೆಳೆಯಲಿಕ್ಕೆ ಮತ್ತಿಷ್ಟು ಅನುಕೂಲವಾಗುತ್ತದೆ. ಇಷ್ಟೆಲ್ಲವೂ ಆದಮೇಲೆ ಹಾಲು ಕೊಳ್ಳುವವರು ಅದನ್ನು ಸರಿಯಾಗಿ ಉಪಯೋಗ ಮಾಡಬೆ ಇರುವದು, ಅದನ್ನು ಹಾಕಿಟ್ಟ ಪಾತ್ರೆಯ ಬಾಯನ್ನು ಮುಚ್ಚದೆ ಬಿಡುವದು ದೂಷಿತವಾದ ಬಾಟ್ಲಿ ಅಶುದ್ಧವಾದ ರಬ್ಬರಿನ ಮೊಲೆ ಮುಂತಾದವುಗಳೇ ಬಾಲಹತ್ಯದ ಪಾಪಕ್ಕೆ ಗುರಿಯಾಗುವವು.

ನೀರು.

By Lt.-Col. C. T. Hudson, I.M.S., Civil Surgeon, Dharwar.

ಪ್ರಾಣಿಗಳ ಜೀವನಕ್ಕೆ ನೀರೇ ಮೂಲಾಧಾರವಾಗಿದೆ. ನೀರಿಲ್ಲದಿದ್ದರೆ ಯಾವತ್ತೂ ಪ್ರಾಣಿಗಳು ಸತ್ತು ಹೋಗುವವು ನಮ್ಮ ಶರೀರದ ಅವಯವಗಳ ರಚನೆಯಲ್ಲಿ ನೀರು ಬಹಳ ದೊಡ್ಡ ಪ್ರಮಾಣದಿಂದ ಕೂಡಿಕೊಂಡಿರುವದು.

ನೀರು ಒಂದು ಮೂಲತತ್ವವಿರದೆ ಆಕ್ಸಿಜನ್ ಹೈಡ್ರೋಜನ್‌ಗಳೆಂಬ ಎರಡು ವಾಯುಗಳ ರಸಾಯನ್ನೀಕ ರೀತಿಯಿಂದ ಕೂಡಿ ಉಂಟಾಗಿರುವ ಒಂದು ಸಂಯುಕ್ತ ಪದಾರ್ಥವಾಗಿರುವದು. ಅದರಿಂದ ಅದನ್ನು ಕೃತ್ರಿಮ ರೀತಿಯಿಂದ ತಯಾರಿಸಲಿಕ್ಕೆ ಬರುವದು. ನೀರು ಮೂಲತಃ ಪಾರದರ್ಶಕವೂ ಆಗಿರುವದು. ಇದಕ್ಕೆ ಬಣ್ಣವಿಲ್ಲ; ರುಚಿಯಿಲ್ಲ; ವಾಸನೆಯಿಲ್ಲ. ಅದರೆ ದೊಡ್ಡ ಸಂಚಯವನ್ನೇ ಮೇಲಿನಿಂದ ನೋಡಿದಾಗ ಒಂದು ಬಗೆಯ ನಿಲೀ ಛಾಯೆಯು ಕಾಣಿಸುವದು. ಬರೇ ನೋಡುವದರಿಂದ ಮಾತ್ರ ನೀರಿನ ನಿರ್ಮಲತ್ವವು ಗೊತ್ತಾಗಲಾರದು. ಒಳ್ಳೇ ಸ್ವಚ್ಛವಾಗಿ ಕಾಣಿಸುವಂಥ ನೀರಿನಲ್ಲಿ ಎಷ್ಟೋ ಸಾರೆ ಅಪಾಯಕರವಾದ ವಾಯುಗಳು ಬೆರೆತುಕೊಂಡಿರುವವು.

ಉಷ್ಣಕಟಿಬಂಧದಲ್ಲಿರುವ ನಮಗೆ ಸಮಶೀತೋಷ್ಣದಲ್ಲಿರುವವರಿಗಿಂತ ನೀರು ಹೆಚ್ಚಿಗೆ ಬೇಕಾಗುವದು. ಹಾಗು ಇಲ್ಲಿ ನೀರಿನ ಬರವು ಸಹ ಬೀಳುವದುಂಟು.

ನೀರಿನಲ್ಲಿ ಅನೇಕ ಗುಣಗಳಿರುವವೆಂದು ಎಷ್ಟೋ ಜನರು ಕೇಳಿರಬಹುದು. ಕೆಲವರು ನೀರು ಸ್ವತಃ ನಿರ್ಮಲವಾಗಿದ್ದು ಅದರಲ್ಲಿ ಹೊಲಸು ಮುಂತಾದವುಗಳು ಬೆರೆತುಕೊಳ್ಳಲಾರದೆಂದು ಹೇಳುವರು. ಈ ತಿಳುವಳಿಕೆಯು ತೀರ ತಪ್ಪಾದದ್ದು. ಯಾಕಂದರೆ ನೀರಿನಲ್ಲಿ ಎಷ್ಟೋ ಘನ ಪದಾರ್ಥಗಳನ್ನು ಕರಗಿಸಿ ಇಟ್ಟುಕೊಳ್ಳುವ ಹಾಗು ವಾಯುಗಳನ್ನು ನುಂಗಿಕೊಳ್ಳುವ ಗುಣವಿರುವದು. ಇದರಿಂದ ನೀರು ಎಷ್ಟೋ ಬೇನೆಗಳನ್ನು ಸ್ಥಳಾಂತರ ಮಾಡುವ ಮುಖ್ಯ ಸಾಧನವಾಗಿದೆ. ಯುರೋಪದೊಳಗಿನ ಯಾವದೊಂದು ದೇಶದ ಹವೆಯು ಆರೋಗ್ಯಕರವಾದದ್ದು ಅಥವಾ ಅನಾರೋಗ್ಯ

ಕರವಾದದ್ದು ಎನ್ನುವಂತೆ ನಮ್ಮ ದೇಶದ ಜನರು ಯಾವದೊಂದು ಊರಿನ ನೀರು ಆರೋಗ್ಯಕರವಾದದ್ದು ಇಲ್ಲವೆ ಅಪಾಯಕರವಾದದ್ದು ಎಂದು ಹೇಳುವದು ಆ ರೋಗ್ಯತೆಯು ಇಲ್ಲವೆ ಅನಾರೋಗ್ಯತೆಯು ಸಂಬಂಧವನ್ನು ನೀರಿಗೆ ಹಚ್ಚಿ ಹೇಳುವದಂಟು.

ನಾವು ಕುಡಿಯುವ ನೀರಿನಲ್ಲಿ ಮಳೆಯ ನೀರು, ಭೂವಿಯ ನೀರು, ನದಿಯ ನೀರು, ಕೆರೆಯ ನೀರು ಎಂಬ ಬೇರೆ ಬೇರೆ ಪ್ರಕಾರಗಳಿರುವವು. ಹಾಗು ಕಠಿಣ ನೀರು ಮೃದು ನೀರು ಎಂಬ ಎರಡು ವರ್ಗಗಳಿರುವವು. ಕ್ಯಾಲ್ಸಿಯಮ್ ಅಥವಾ ಮ್ಯಾಗ್ನೇಸಿಯಮ್‌ದ ಲವಣಗಳು ಕಡಿಮೆ ಪ್ರಮಾಣದಿಂದ ಬೆರೆತುಕೊಂಡಿದ್ದ ನೀರಿಗೆ ಮೃದು ನೀರೆನ್ನುವರು. ಹಾಗು ಈ ಲವಣಗಳು ದೊಡ್ಡ ಪ್ರಮಾಣದಿಂದ ಬೆರೆತುಕೊಂಡಿದ್ದರೆ ಅದಕ್ಕೆ ಕಠಿಣ ನೀರೆನ್ನುವರು. ನೀರಿನಲ್ಲಿ ಸಾಬೂಣವನ್ನು ಬೆರಿಸಿದರೆ ಸಹಜವಾಗಿ ಬುರುಗು ಬರದೆ ಇದ್ದ ನೀರು ಕಠಿಣ ನೀರೆಂದು ತಿಳಿಯಬೇಕು.

ನೀರಿನ ಕಠಿಣತೆಯು ನಿತ್ಯವಾದದ್ದಿರಬಹುದು; ಅಥವಾ ನೈಮಿತ್ತಿಕವಾದದ್ದಿರಬಹುದು. ಸ್ವಾಭಾವಿಕವಾದ ಕಠಿಣ ನೀರಿನಲ್ಲಿ ಎರಡು ಪ್ರಕಾರಗಳಿರುವವು. ನೈಮಿತ್ತಿಕ ನೀರಿನ ಕಠಿಣತೆಯನ್ನು ಕಾಸುವದರಿಂದ ಕಡಿಮೆ ಮಾಡಬಹುದು. ಅಥವಾ ಪೂರಾ ತೆಗೆದುಹಾಕಬಹುದು. ಸುಣ್ಣದ ತಿಳಿ ನೀರನ್ನು ಕೂಡಿಸುವದರಿಂದಲೂ ಈ ನೀರಿನ ಕಠಿಣತೆಯನ್ನು ತೆಗೆದುಹಾಕಬಹುದು.

ನಿತ್ಯ ನೀರಿನ ಕಠಿಣತೆಯನ್ನು ಕಡಿಮೆ ಮಾಡಬಹುದು; ಆದರೆ ಸಾಮಾನ್ಯವಾಗಿ ಪೂರಾ ತೆಗೆದುಹಾಕಲಿಕ್ಕೆ ಬರುತ್ತಿರುವದಿಲ್ಲ. ಸುಣ್ಣದ ತಿಳಿನೀರನ್ನು ಕೂಡಿಸುವದರಿಂದ ನೈಮಿತ್ತಿಕ ಕಠಿಣನೀರಿನ ಕಠಿಣತೆಯನ್ನು ತೆಗೆದುಹಾಕಲಿಕ್ಕೆ ಬರುವಂತೆ ನಿತ್ಯ ಕಠಿಣನೀರಿನ ಕಠಿಣತೆಯನ್ನು ಸೋಡಾದ ಕಾರ್ಬೋನೇಟನ್ನು ಕೂಡಿಸುವದರಿಂದ ಕಡಿಮೆ ಮಾಡಬಹುದು ಅಥವಾ ಪೂರಾ ತೆಗೆದು ಹಾಕಬಹುದು.

ಮಳೆಯ ನೀರು ನಿರ್ಮಲವಾಗಿರುವದೆಂದು ಸಾಮಾನ್ಯವಾಗಿ ಹೇಳಬಹುದು. ಆದರೆ ವಾತಾವರಣದ ಸ್ಥಿತಿಗನುಗುಣವಾಗಿ ಇದರ ಸ್ಥಿತಿಯಾದರೂ ಬೇರೆ ಬೇರೆ ಸ್ಥಳಗಳಲ್ಲಿ ಬದಲಾಗುವದು. ಉದಾಹರಣಾರ್ಥ:—ಕಾರಖಾನೆಗಳ ಹೊಗೆ ಧೂಳಿಗಳಿಂದಲೂ ಕಲಾಕೌಶಲ್ಯ ಮತ್ತು ಜ್ವಲನ ಮುಂ

ತಾದವುಗಳ ಮೂಲಕವಾಗಿ ಹುಟ್ಟಿದ ಬೇರೆ ಬೇರೆ ಪದಾರ್ಥಗಳಿಂದಲೂ ವಾತಾವರಣವು ಮಲಿನವಾಗಿರುವ ಕಡೆಗಳಲ್ಲಿ ಬೀಳುವ ಮಳೆಯ ನೀರಿಗಿಂತ ಹಳ್ಳಿಗಳಲ್ಲಿ ಬೀಳುವ ಮಳೆಯ ನೀರು ಹೆಚ್ಚು ನಿರ್ಮಲವಾಗಿರುವದು. ಈ ನೀರು ಮೃದುವಾಗಿರುವದರಿಂದ ಅಡಿಗೆಗೂ ಕುಡಿಯಲಿಕ್ಕೂ ಉತ್ತಮವಾಗಿರುವದು. ಆದರೆ ಕುಡಿಯಲಿಕ್ಕೆ ಇದೊಂದು ರುಚಿಕರವಾದದ್ದಲ್ಲ.

ನದಿಯ ನೀರು ನಿರ್ಮಲವಾಗಿರಬಹುದು; ಆದರೆ ಇದು ಬಹುಶಃ ದೂಷಿತವಾಗಿರುವದೇ ಬಹಳ; ಮಳೆಗಾಲದಲ್ಲಿ ಸುತ್ತಮುತ್ತಲಿನ ನೆಲದ ಮೇಲೆ ಬೀಳುವ ನೀರು ಹರಿದು ಬಂದು ನದಿಗೆ ಕೂಡುವದು. ಆದರಿಂದ ಆ ಸ್ಥಳದಲ್ಲಿರುವ ಹೊಲಸೆಲ್ಲ ಆ ನೀರಿನ ಸಂಗಡ ನದಿಯಲ್ಲಿ ಬಂದು ಬೀಳುವದು.

ನದಿಯ ನೀರನ್ನು ಮನುಷ್ಯರೂ ಇತರ ಪ್ರಾಣಿಗಳೂ ಯಾವಾಗಲೂ ಬಹಳ ಹೊಲಸು ಮಾಡುತ್ತಿರುವರು. ಬೇಸಿಗೆಯ ಕಾಲದಲ್ಲಿ ಒಂದು ಸಣ್ಣ ನದಿಯ ದಂಡೆಗೆ ಹೋಗಿ ನೋಡಿದರೆ ಅದರ ನೀರು ಎಷ್ಟು ದೂಷಿತವಾಗಿರುವದೆಂಬದು ಪ್ರತ್ಯಕ್ಷವಾಗಿ ಕಾಣಿಸುವದು. ಮಾರಿಕಾಚೆನೆ ಮುಂತಾದ ಸಾಂಕ್ರಾಮಿಕರೋಗಗಳು ಹತ್ತಿದ ಜನರ ಬಟ್ಟೆಗಳನ್ನು ನದಿಯ ನೀರಿನಲ್ಲಿ ಒಗೆಯುವದರಿಂದ ಆ ನೀರು ದೂಷಿತವಾಗುವದು; ಹಾಗು ಈ ರೀತಿಯಿಂದ ದೂಷಿತವಾದ ನೀರು ಪ್ರವಾಹದಗುಂಟ ಕೆಳಗೆ ಹೋಗುವಾಗ ಆ ನೀರನ್ನು ಉಪಯೋಗಿಸುವ ಜನರಿಗೆ ಆ ಬೇನೆಗಳು ಹತ್ತಿ ಊರ ತುಂಬ ಹಬ್ಬುವವು.

ಭೂಮಿಯ ನೀರು ಕಡಿಮೆ ಆಳವುಳ್ಳ ಭೂಮಿಯಲ್ಲಿ ಸುತ್ತಮುತ್ತಲಿನ ಹೊಲಸುವದಾರ್ಥಗಳು ಇಂಗಿ ಬೀಳುವದರಿಂದ ಆ ನೀರು ದೂಷಿತವಾಗುವದು. ಆಳವಾದ ಭೂಮಿಯೊಳಗಿನ ನೀರು ಸಾಮಾನ್ಯವಾಗಿ ನಿರ್ಮಲವಾಗಿರುವವು. ಯಾಕಂದರೆ ಇಂಥ ಭೂಮಿಯೊಳಗಿನ ನೀರು ಭೂಮಿಗೆ ಬರುವದಕ್ಕಿಂತ ಮೊದಲು ಬೇರೆ ಬೇರೆ ಮಣ್ಣಿನ ಪದರಗಳೊಳಗಿಂದ ಹಾಯ್ದು ಸೋಸಿ ಬರುವದರಿಂದ ಅದರಲ್ಲಿಯ ಹೊಲಸೆಲ್ಲ ಮಾರ್ಗದಲ್ಲಿ ಸೋಸಿಹೋಗಿ, ಸ್ವಚ್ಛನೀರುಮಾತ್ರ ಉಳಿಯುವದು.

ಕೆರೆಯ ನೀರು ಇದು ಬಹುಶಃ ಯಾವಾಗಲೂ ದೂಷಿತವಾಗಿಯೇ ಇರುವದ; ಹಾಗೂ ಎರಡನೇ ನೀರು ಸಿಗುವಂತಿದ್ದಲ್ಲಿ ಈ ನೀರನ್ನು ಎಂದೂ ಕುಡಿಯಲಿಕ್ಕೆ ಉಪಯೋಗಿಸಬಾರದು ಯಾಕಂದರೆ ಮಳೆಗಾಲದಲ್ಲಿ ಸುತ್ತಲಿನ ನೆಲದ ಮೇಲಿನ ತಗ್ಗು ಗುಣಿಗಳ ಗಟಾರಗಳೊಳಗಿನ ಹೊಲಸೆಲ್ಲ ವಳಿಯು ನೀರಿನ ಸಂಗಡ ಹರಿದು ಬಂದು ಕೆರೆಯ ನೀರಿನಲ್ಲಿ ಕೂಡಿಕೊಳ್ಳುವದು; ಹಾಗೂ ನದಿಯ ನೀರು ದೂಷಿತವಾಗುವಂತೆಯೇ ಕೆರೆಯ ನೀರು ಆದರೂ ಆಗುವದು; ಆದರೆ ಹೆಚ್ಚು ಕಡಿಮೆ ಎನೆಂದರೆ, ಕೆರೆಯನೀರು ಹರಿಯದೆ ನಿಂತಲ್ಲೇ ಸಿಲ್ಲುವದರಿಂದ ಅದರೊಳಗಿನ ಹೊಲಸು ಅಲ್ಲೇ ಉಳಿದು ದಿನದಿನಕ್ಕೆ ಹೆಚ್ಚಾಗಲಿಕ್ಕೆ ಕಾರಣವಾಗುವದು, ಹಾಗು ಜೇಸಿಗೆಯಲ್ಲಿ ಕೆರೆಯ ನೀರು ಒಣಗಿ ಕಡಿಮೆಯಾಯಿತೆಂದರೆ ಹೊಲಸಿನ ತೀವ್ರತೆಯು ಮತ್ತಿಷ್ಟು ಹೆಚ್ಚಾಗುವದು.

ಕುಡಿಯುವ ನೀರಿನ ಬಗ್ಗೆ ಯಾವದಾರೊಂದು ನೀರು ಕುಡಿಯಲಿಕ್ಕೆ ಯೋಗ್ಯವಾದದ್ದೋ ಇಲ್ಲವೊ ಎಂಬದನ್ನು ನಿರ್ಣಯಿಸಬೇಕಾದರೆ ಅದನ್ನು ವಿಶೇಷ ಲಕ್ಷಪೂರ್ವಕವಾಗಿ ಪೃಥಕ್ಕರಣ ಮಾಡಿ ನೋಡಬೇಕಾಗುವದು ಹಾಗು ಆ ನೀರು ಎಲ್ಲಿಂದ ಹಾಗು ಯಾವ ತರದ ಭೂಮಿಯಲ್ಲಿ ಹರಿದು ಬರುವದ.? ಎಂಬ ಸಂಗತಿಗಳನ್ನು ವಿಚಾರಮಾಡಬೇಕಾಗುವದು.

ಕುಡಿಯಲಿಕ್ಕೆ ಯೋಗ್ಯವಾದ ನೀರಿನಲ್ಲಿ ಇಂತಿಂಥ ಪದಾರ್ಥಗಳು ಇಷ್ಟಿಷ್ಟು ಪ್ರಮಾಣದಿಂದ ಇರಬೇಕೆಂಬದನ್ನು ಅನುಭವದಿಂದ ಗೊತ್ತು ಪಡಿಸಿಕೊಳ್ಳಬೇಕು. ಕೆಲಕೆಲವು ಸಾರೆ ಈ ಪ್ರಮಾಣವು ಇಲ್ಲದಂಥ ನೀರನ್ನು ಕುಡಿದರೂ ನನಗೆ ಅಪಾಯವಾಗುವದಿಲ್ಲ? ಇದು ಕೇವಲ ಅನುಭವದ ಸಂಗತಿಯು.

ನೀರನ್ನು ಸಂಗ್ರಹಿಸಿ ಇಡುವ ವಿಷಯವಾಗಿ ಕೆಲವು ಸಂಗತಿಗಳನ್ನು ಲಕ್ಷದಲ್ಲಿಡಬೇಕಾಗುವದು. ನೀರನ್ನು ಮಣ್ಣಿನ ಗಡಿಗೆಯಲ್ಲಿಡುವದಾದರೆ ಅದರ ಬಾಯಿಯನ್ನು ಹೊಲಸು ಆರಿವೆಯಿಂದ ಎಂದೂ ಮುಚ್ಚಬಾರದು ಹಾಗು ಆ ಗಡಿಗೆಯನ್ನು ನೆಲದ ಮೇಲೆ ಇಡಬಾರದು. ಯಾಕಂದರೆ ಅಲ್ಲಿ ಹಲವು ತರದ ಹೊಲಸು ಇದ್ದಿದ್ದಾದರೆ ಆ ಹೊಲಸು ಗಡಿಗೆಯಿಂದ ಹೊರಬೀಳುವ ನೀರಿನಲ್ಲಿ ಕೂಡಿಕೊಂಡು ಕ್ರಮವಾಗಿ ಮಡಿಕೆಯಳ

ಗಿನ ನೀರಿನ ಸಂಗಡ ಕೂಡಿಕೊಳ್ಳಹತ್ತುವದು. ಆದ್ದರಿಂದ ನೀರನ್ನು ಇಡತಕ್ಕ ಪಾತ್ರೆಗಳನ್ನು ನೆಲದಿಂದ ಎತ್ತರದ ಮೇಲೆ ಇಡತಕ್ಕದ್ದು; ಹಾಗು ಆ ಗಡಿಗೆಯನ್ನು ಯಾವಾಗಲೂ ಮುಚ್ಚಿಡಬೇಕು. ನೀರು ರಾಡಿಯಾಗಿದ್ದರೆ ಅದರಲ್ಲಿ ತೊಸು ಪಟಕದ ಪುಡಿಯನ್ನು ಚಕ್ಕಲ್ಲಿದರೆ ರಾಡಿಯು ಕೆಳಗೆ ಕೂತು ನೀರು ಸ್ವಚ್ಛವಾಗುವದು. ಹಾಗು ಅದರಿಂದ ನಾರು ಹುಣ್ಣು ಆಗುವ ಸಂಭವವು ಬಹಳ ಮಟ್ಟಿಗೆ ಕಡಿಮೆಯಾಗುವದು.

ಮನೆಯ ಸುತ್ತಲಿನ ಸ್ಥಳಗಳಲ್ಲಿ ನೀರು ಮಲೆತುನಿಂತು ಕೊಳಚೆಯಾಗಗೊಡಬಾರದು ಅಂಥ ಹೊಲಸು ನೀರು ಬಿಣಗಹತ್ತಿದಾಗ ಅದರಿಂದ ದುರ್ಗಂಧವುಳ್ಳ ವಾಯುಗಳು ಹೊರಡುವವು. ಇಂಥ ನೀರಿನಲ್ಲಿ ಗುಂಗಾಡುಗಳು ಹುಟ್ಟುವವು. ಆ ಗುಂಗಾಡುಗಳು ಛಳಿಜ್ವರವನ್ನು ಹುಟ್ಟಿಸುವ ಗುಂಗಾಡುಗಳಾಗದಿದ್ದರೂ ಅವು ಕಡಿಯುವದರಿಂದ ಬೇರೆ ಬೇರೆ ರೋಗಜನಕ ಜಂತುಗಳು ಮೈಯಲ್ಲಿ ಸೇರಲಿಕ್ಕೆ ಕಾರಣವಾಗುವದು. ಒಂದು ವೇಳೆ ಆ ನೀರು ಮಳೆಯ ನೀರಿನಂತೆ ಸ್ವಚ್ಛವಾಗಿದ್ದರೆ ಅದರಲ್ಲಿ ಛಳಿಜ್ವರವನ್ನು ಹುಟ್ಟಿಸುವ ಗುಂಗಾಡುಗಳು ಹುಟ್ಟುವವು

ಸ್ವಚ್ಛ ಅರಿವೆಯಿಂದ ಸೋಸಿದ ನೀರನ್ನು ಕುಡಿಯುವದರಿಂದ ನಾರು ಹುಣ್ಣು ಆಗುವ ಭಯವು ಇರುವದಿಲ್ಲ; ಆದರೆ ಹೀಗೆ ಸೋಸುವದರಿಂದ ಮಾರಿಕಾ ವಿಷಮಜ್ವರ ಮುಂತಾದ ಬೇನೆಗಳನ್ನು ಹುಟ್ಟಿಸುವ ಜಂತುಗಳು ಮಾತ್ರ ಇಲ್ಲದಂತಾಗಲಾರವು. ಇಂಥ ಜಂತುಗಳನ್ನು ನಾಶಪಡಿಸಬೇಕಾದರೆ ಆ ನೀರನ್ನು ಎಸರು ಬರುವಷ್ಟು ಕಾಸಬೇಕಾಗುವದು.

ಹಾಲುಹಲ್ಲುಗಳೂ ಚಿಕ್ಕಮಕ್ಕಳ ಪಾಲನೆಯೂ.

(By Dr. M. S. Mudliar, Senior Sub-Assistant Surgeon, Civil Hospital Dhorwar.

ನಿರೋಗಿಗಳಾದ ಬಾಲಕರಿಗೆ ಕೆಳಗೆ ಹೇಳಿದ ಕ್ರಮದಿಂದ ಹಾಲು ಹಲ್ಲುಗಳು ಬರಹತ್ತುವವು. ಹಾಲು ಹಲ್ಲುಗಳು ಪ್ರತಿಯೊಂದು ದವಡೆಯಲಿ ಹತ್ತು ಹತ್ತರಂತೆ ನಟ್ಟು ೨೦ ಇರುವವು.

೨. ಕೆಳದವಡೆಯ ಮಧ್ಯದಲ್ಲಿ ಮುಂದುಗಡೆಗೆ ಇರುವ ಕಡಿಯುವ (ಛೇದಕ) ಹಲ್ಲುಗಳು.	೬ ತಿಂಗಳುಗಳಿಂದ ೮ ತಿಂಗಳುಗಳವರೆಗೆ.
೨. ಮೇಲ್ದವಡೆಯ ಮಧ್ಯದಲ್ಲಿರುವ ಕಡಿಯುವ (ಛೇದಕ) ಹಲ್ಲುಗಳು.	೭ ತಿಂಗಳುಗಳಿಂದ ೮ ತಿಂಗಳುಗಳವರೆಗೆ
೨. ಮೇಲ್ದವಡೆಯ ಛೇದಕ ಹಲ್ಲುಗಳ ಎಡಕ್ಕೊಂದು ಬಲಕ್ಕೊಂದರಂತೆ ಇರುವ ಕಡಿಯುವ (ಛೇದಕ) ಹಲ್ಲುಗಳು.	೭ ತಿಂಗಳುಗಳಿಂದ ೯ ತಿಂಗಳುಗಳವರೆಗೆ.
೨. ಕೆಳದವಡೆಯ ಛೇದಕ ಹಲ್ಲುಗಳ ಎಡಕ್ಕೊಂದು ಬಲಕ್ಕೊಂದರಂತೆ ಇರುವ ಕಡಿಯುವ (ಛೇದಕ) ಹಲ್ಲುಗಳು.	೧೦ ತಿಂಗಳುಗಳಿಂದ ೧೨ತಿಂಗಳುಗಳವರೆಗೆ.
೪ ಸಣ್ಣ ನುರಿಸುವ (ಲಘು ಪೇಷಕ) ಹಲ್ಲುಗಳು. (ಪ್ರತಿ ದವಡೆಯಲ್ಲಿ ಎರಡೆರಡರಂತೆ.	೧೨ ತಿಂಗಳುಗಳಿಂದ ೧೫ ತಿಂಗಳುಗಳವರೆಗೆ.
೪ ಕೋರೆಯ ಹಲ್ಲುಗಳು (ಪ್ರತಿದವಡೆಯಲ್ಲಿ ಎರಡೆರಡರಂತೆ.)	೧೬ ತಿಂಗಳುಗಳಿಂದ ೨೦ ತಿಂಗಳುಗಳವರೆಗೆ.
೪ ದೊಡ್ಡ ನುರಿಸುವ (ಬೃಹತ್ಪೇಷಕ) ಹಲ್ಲುಗಳು ಪ್ರತಿದವಡೆಯಲ್ಲಿ ಎರಡೆರಡರಂತೆ)	೨೦—೩೦ ತಿಂಗಳುಗಳಿಂದ ೩೬ ತಿಂಗಳುಗಳವರೆಗೆ.

೨೦

ಎಲ್ಲ ಹುಡುಗರಿಗೆ ಹಾಲ ಹಲ್ಲುಗಳು ಅದೇ ಕಾಲಕ್ಕೆ ಒರುವವೆಂಬ ನಿಯಮವಿಲ್ಲ. ಕೆಲವು ಹುಡುಗರಿಗೆ ಹುಟ್ಟುವಾಗಲೇ ಮುಂದಿನ ಕಡಿಯುವ ಹಲ್ಲುಗಳು ವಸಡಿಯಿಂದ ಹಾಯ್ದು ಬಂದಿರುವವು. ಕೆಲವು ಹುಡುಗರಿಗೆ ಎರಡು ವರ್ಷಗಳಾದರೂ ಇನ್ನೂ ಹಲ್ಲುಗಳು ಬರುವದೇ ಇಲ್ಲ. ಸಾಮಾನ್ಯವಾಗಿ ಹುಡುಗರಿಗೆ ೨೫—೩ ವರ್ಷಗಳ ಒಳಗಾಗಿ ೨೦ ಹಾಲ ಹಲ್ಲುಗಳು ಬಂದು ಬಿಡುವವು. ತಾಯಿಯು ನಿರೋಗಿಯಾಗಿದ್ದರೆ, ಮಗುವು ೮—೯ ತಿಂಗಳುಗಳವರೆಗೆ ತಾಯಿಯ ಮೊಲೆ ಹಾಲು ಕುಡಿದೇ ಬೆಳೆಯಬೇಕು. ಈ ಹಾಲು ಚಿಕ್ಕ ಮಕ್ಕಳಿಗೆ ಈ ವಯಸ್ಸಿನಲ್ಲಿ ಉತ್ತಮವಾದ ಆಹಾರವಾಗಿರುವದು.

ಮಗುವು ಹುಟ್ಟಿದ ಒಳಕ ಆರುವಾರಗಳವರೆಗೆ ಮುಂಜಾನೆ ೬ಘಂಟೆ
ಯಿಂದ ರಾತ್ರಿಯ ೧೦ ಘಂಟೆಯವರೆಗೆ ಎರಡೆರಡು ತಾಸಿಗೊಂದು ಸರತಿ
ಯಂತೆಯೂ, ರಾತ್ರಿಯಲ್ಲಿ ಮೂರು ತಾಸಿಗೊಂದು ಸರತಿಯಂತೆ ಅದಕ್ಕೆ
ತಾಯಿಯು ಮೊಲೆಯುಣಿಸಬೇಕು.

ಎರಡನೇಯ ತಿಂಗಳಿದಲ್ಲಿ ಸಾಮಾನ್ಯವಾಗಿ ಮೂರು ಮೂರೂ ತಾಸಿ
ಗೊವ್ಮೆ ಮೊಲೆಯುಣಿಸಿದರೆ ಸಾಕಾಗುವದು ಮುಂದೆ ೪ ತಿಂಗಳುಗಳ
ವರೆಗೆ ೩–೪ ತಾಸುಗಳ ಅಂತರದಿಂದ ಕೂಸಿಗೆ ಮೊಲೆಯುಣಿಸಬೇಕು.

೪–೬ ತಿಂಗಳುಗಳಾದ ನಂತರ ಮೊಲೆ ಹಾಲಿನ ಸಂಗಡ ಬೇರೆ
ತರದ ಆಹಾರವನ್ನು ಕೊಡಬಹುದು. ೧೦–೧೨ ತಿಂಗಳುಗಳ ವಯಸ್ಸಿನ
ಕೂಸಿಗೆ ಮೊಲೆಯುಣಿಸುವದನ್ನೇ ನಿಲ್ಲಿಸಬೇಕು. ತಾಯಿಯು ಕೂಸಿಗೆ
ಮೊಲೆಯುಣಿಸಲಾರದಿದ್ದರೆ, ಅದರ ಸಲುವಾಗಿ ಎರಡನೇ ನಿರೋಗಿಯಾದ
ತರುಣದಾಯಿಯನ್ನು ನೇಮಿಸಬೇಕು. ಇಲ್ಲವೆ, ಅದಕ್ಕೆ ಎರಡನೇ ಹಾಲ
ನ್ನುಣಿಸಬೇಕು. ಇಂಥ ಪ್ರಸಂಗದಲ್ಲಿ ಆಕಳು, ಆಡು ಇಲ್ಲವೆ ಕತ್ತೆಯ
ಹಾಲನ್ನು ಉಪಯೋಗಿಸಬಹುದು. ಹೀಗೆ ಹಾಲನ್ನು ಹಾಕುವಾಗ ಅದ
ರಲ್ಲಿ ಕೆಳಗೆ ಹೇಳಿದ ಪ್ರಮಾಣದಂದ ನೀರನ್ನು ಕೂಡಿಸಬೇಕಾಗುವದು.

ಮಗುವಿನ ವಯಸ್ಸು.	ಹಾಲು.	ನೀರು.
೧ ತಿಂಗಳವರೆಗೆ.	೧ ಪಾಲು	೨ ಪಾಲು
೧ ತಿಂಗಳದಿಂದ ೩ ತಿಂಗಳುಗಳವರೆಗೆ...	೧ ,,	೧ ,,
೩ ,, ೪ ,, ...	೧ ,,	೩ ,,
೪ ,, ೬ ,, ...	೧ ,,	೪ ,,

೫–೬ ತಿಂಗಳುಗಳ ತರುವಾಯ ಹಾಲನ್ನು ಹಾಗೆಯೇ ಉಪಯೋ
ಗಿಸ ಬಹುದು. ಹಾಲಿನ ಸಂಗಡ ಕೂಡಿಸತಕ್ಕ ನೀರನ್ನು ಸೋಸಿ, ಕಾ
ಯಿಸಿ, ಹಾಗು ಆರಿಸಿ ತರುವಾಯ ಒಂದು ಸ್ವಚ್ಛವಾದ ಪಾತ್ರೆಯಲ್ಲಿ ಹಾಕಿಟ್ಟಿ
ರಬೇಕು. ಬೇಕಾದಾಗ ಆ ನೀರನ್ನೇ ಸಾಕಷ್ಟು ಕಾಸಿ ಉಪಯೋಗಿಸ
ಬೇಕು.

ನಿರೋಗಿಯಾದ ಮಗುವು ಚನ್ನಾಗಿ ನಿದ್ದೆ ಮಾಡುವದು. ಹಾಗು

ಆ ಮಗುವು ತೆಗೆದುಕೊಂಡ ಆಹಾರವು ತೀವ್ರವಾಗಿ ಪಚನವಾಗುವದ. ಚಿಕ್ಕ ಮಗುವಿಗೆ ಆಹಾರವನ್ನು ಕ್ಷಣ ಕ್ಷಣಕ್ಕೆ ಹಾಕಬಾರದು. ಅದರಂತೆ ಬಹಳ ತಡವಾಗಿಯೂ ಉಣಿಸಬಾರದು. ಚಿಕ್ಕ ಮಕ್ಕಳಿಗೆ ಚಟುವು ಬೇಗನೆ ಹತ್ತುವದು. ಹಾಗು ಅವರಿಗೆ ಆಹಾರವನ್ನು ತೆಗೆದುಕೊಳ್ಳತಕ್ಕ ಕಾಲಾವಧಿಯು ಸಹ ತಾನೇ ಗೊತ್ತಾಗುವದು. ಚಿಕ್ಕ ಮಕ್ಕಳಿಗೆ ಚಟಗಳು ಹತ್ತದಂತೆ ನೋಡಿಕೊಳ್ಳಬೇಕು. ಕೆಲ ಕೆಲವು ತಾಯಂದಿರು ಹುಡುಗರು ಅಳಹತ್ತಿದ ಕೂಡಲೆ ಅವರಿಗೆ ಮೊಲೆಯುಣಿಸಿ ಇಲ್ಲವೆ ಹಾಲು ಕುಡಿಸಿ ಅವರನ್ನು ಸಮಾಧಾನಗೊಳಿಸುವರು. ಈ ರೂಢಿಯು ಒಳ್ಳೆದಲ್ಲ. ಹೆಚ್ಚು ಹೆಚ್ಚು ಅಳಹತ್ತಿದ ಹಾಗೆ ಹೆಚ್ಚು ಹೆಚ್ಚು ಆಹಾರವನ್ನು ಹಾಕಬೇಕಾಗುವದು. ಹಾಗು ಹೆಚ್ಚು ಹೆಚ್ಚು ಆಹಾರವನ್ನು ಹಾಕಿದ ಹಾಗೆ ಕೂಸು ಹೆಚ್ಚು ಹೆಚ್ಚಾಗಿ ಅಳಹತ್ತುವದು. ಇದರಿಂದ ತಾಯಿಯು ಹೆಗಲಿರುಳು ಕಷ್ಟಪಡಬೇಕಾಗುವದು. ಈ ತರದ ಆಹಾರವನ್ನು ಹಾಕುವ ರೂಢಿಯು ಸರಿಯಾದದ್ದಲ್ಲ. ಹುಡುಗರು ಸೀರಡಿಸಿ ಆಗಾಗ ಅಳುತ್ತಿರುವದೇ ಹೊರತು ಹಸಿದು ಅಳುತ್ತಿರುವದಿಲ್ಲ. ಆಗ ಒಂದು ಚಮಚೆಯಷ್ಟು ಕಾಸಿ ಆರಿಸಿದ ನೀರು ಕುಡಿಸಿದರೆ ಅವರು ಸುಮ್ಮನಾಗುವರು.

ಕೆಲ ಕೆಲವು ಹೆಂಗಸರು ಕೂಸಿಗೆ ಮೊಲೆಯುಣಿಸುವದರಿಂದ ಆಗುವ ಶಾರೀರಿಕ ನಷ್ಟವನ್ನು ಸಹಿಸಿಕೊಳ್ಳುವಷ್ಟು ಸಶಕ್ತರಿರುವದಿಲ್ಲ. ತಾಯಿಗೆ ಕಫ ಕ್ಷಯ ಮುಂತಾದ ರೋಗಗಳಿಲ್ಲದಿದ್ದರೆ ಅಕೆಯು ಮಗುವಿಗೆ ಮೊಲೆಯುಣಿಸುವದರಿಂದ ಮಗುವಿಗೂ ತಾಯಿಗೂ ಅಪಾಯವಾಗುವದು.

ದಾಯಿಯನ್ನು ನೇಮಿಸುವದಾದರೆ ಅಕೆಗೆ ಯಾವ ತರದ ಬೇನೆಯೂ ಇಲ್ಲವೆಂಬದನ್ನು ವಿಚಾರಿಸಬೇಕು. ಯಾಕಂದರೆ ಕೆಲಕೆಲವು ಬೇನೆಗಳುಳ್ಳ ದಾಯಿಯು ಹಾಲನ್ನು ಉಣ್ಣುವದರಿಂದ ಆ ಬೇನೆಗಳು ಕೂಸಿಗೂ ಬರುವವು.

ಕೂಸಿಗೆ ಮೊಲೆಯುಣಿಸುವದನ್ನು ಬಿಡಿಸತಕ್ಕ ಕಾಲವು ಅವರವರ ಪರಿಸ್ಥಿತಿಗನುಗುಣವಾಗಿ ಬೇರೆ ಬೇರೆಯಾಗಿದ್ದರೂ, ಸಾಮಾನ್ಯವಾಗಿ ೯ ತಿಂಗಳಾದ ಬಳಿಕ ಬಿಡಿಸಬಹುದೆಂದು ಹೇಳಬಹುದು. ಕೆಲಕೆಲವು ಪ್ರಸಂಗಗಳಲ್ಲಿ ತುಸು ಹೆಚ್ಚು ದಿವಸಗಳ ವರೆಗೆ ಮೊಲೆಯುಣಿಸಬಹುದು; ಅಥವಾ ೯ ತಿಂಗಳಿಗಿಂತ ಮೊದಲೇ ನಿಲ್ಲಿಸಿಬಿಡಬಹುದು. ಬೇಸಿಗೆಯಲ್ಲಿ ೯ ತಿಂಗ

(೩) ಕುದಿಯುವ ನೀರಿನಲ್ಲಿ ಹಾಲಿನ ಪಾತ್ರೆಯನ್ನು ಇಟ್ಟು ಐದು ನಿಮಿಷದ ವರಗೆ ಕಾಸುವದು.

ಹುಡುಗನಿಗೆ ಹಾಲನ್ನು ಕುಡಿಸುವದಕ್ಕೆ ಬೇಟೆಯಲ್ಲಿ ಮಾರಲಿಕ್ಕೆ ಸಿಗುವ ಕಾಜಿನ ಹಾಲು ಕುಡಿಯುವ ಬಾಟಲಿಗಳನ್ನು ಉಪಯೋಗಿಸಬೇಕು. ನಡುವೆ ಆಗಲವಾಗಿದ್ದು ಎರಡೂ ಕಡೆಗೆ ಸಣ್ಣಗುತ್ತ ಹೋಗಿರುವ ಅದರ ಮೇಲೆ ಅಳತೆಯನ್ನು ತೋರಿಸುವ ಗೆರೆಗಳನ್ನು ಕೊರದಿರುವ ಮೇಲೆ ರಬ್ಬರಿನ ಮೊಲೆಯಿರುವಂಥ ಬಾಟಲಿಯು ಉತ್ತಮವಾಗಿದ್ದು.

ಹುಡುಗರ ಸಲುವಾಗಿ ಆಹಾರವನ್ನು ಕಾಯಿಸುವಾಗ ಸ್ವಚ್ಛತೆಯ ಕಡೆಗೆ ವಿಶೇಷ ಲಕ್ಷಗೊಡಬೇಕು. ಇದಕ್ಕೆ ತಪ್ಪಿದರೆ ಹುಡುಗರ ಹೊಟ್ಟೆ ಝಾಡಿಸಹತ್ತುವದು. ಹುಡುಗರಿಗೆ ಹಾಲು ಕುಡಿಸಲಿಕ್ಕೆ ಬಾಟಲಿಯೂ ಅದರ ಮೇಲಿನ ಮೊಲೆಯೂ ಸಹಜವಾಗಿ ಸ್ವಚ್ಛವಾಡಲಿಕ್ಕೆ ಬರುವವು. ಹುಡುಗರಿಗೆ ಕುಡಿಸತಕ್ಕ ಹಾಲು ಬೆಚ್ಚಗಾಗಿರಬೇಕು. ಸಾಮಾನ್ಯವಾಗಿ ಫ್ಯಾರೆನ್‌ಹೀಟ ಉಷ್ಣಮಾಪಕ ಯಂತ್ರದ ೧೦೦ ಅಂಶ ಊಷ್ಣವಾಗಿರುವ ಹಾಲನ್ನು ಕುಡಿಸುವದಾದ ಬಳಿಕ ಬಾಟಲಿಯ ಮೇಲಿರುವ ಮೊಲೆಯನ್ನು ತೆಗೆದು ಬಾಟಲಿಯಲ್ಲಿ ಉಳಿದಿರುವ ಹಾಲನ್ನು ಚಲ್ಲಿಬಿಡಬೇಕು. ಹಾಗೂ ಬಾಟಲಿಯನ್ನೂ ಮೊಲೆಯನ್ನೂ ಬಿಸಿನೀರಿನಿಂದ ತೊಳೆದು ಸ್ವಚ್ಛ ಮಾಡಬೇಕು.

ಹುಡುಗರಿಗೆ ಹಲ್ಲು ಬಂದ ಬಳಿಕ ಹಾಲಿನ ಹೊರತು ಎರಡನೇ ಆಹಾರವನ್ನು ಹಾಕಬಹುದು. ಆದರೆ ಅವರಿಗೆ ದವಡೆ ಹಲ್ಲುಗಳು ಬರುವ ವರೆಗೆ ಮಾಂಸಾಹಾರವನ್ನು ಕೊಡಬಾರದು. ಆ ಮೇಲೆ ಕ್ರಮವಾಗಿ ಅಕ್ಕಿ, ಬೇಳೆ, ಚನ್ನಾಗಿ ಸಂಣ ಮಾಡಿದ ಮಾಂಸ, ಕೋಳಿಯ ಮರಿಯ ಅಥವಾ ಕುರಿಯ ಮಾಂಸದ ಸಾರ, ಹಾಗು ತರ್ತಿ ಮುಂತಾದವುಗಳನ್ನು ತಿನ್ನುವ ಅಭ್ಯಾಸವನ್ನು ಅವಶ್ಯವಿದ್ದರೆ ಮಾಡಿಸಬಹುದು.

ಹುಡುಗರು ಐದು ವರ್ಷದವರಾದ ಬಳಿಕ ಅವರಿಗೆ ಹೆದರಿಸಗೆ ಡಬಹುದು; ಆದರೆ ೧೮ ತಿಂಗಳದವರಾಗುವ ವರೆಗೆ ಎದ್ದು ನಿಂತು ನಡೆಯುಗೊಡಬಾರದು. ಚಿಕ್ಕವರ್ಕಳ ಅರಿವೆಗಳು ಬೆಚ್ಚಗಾಗಿಯೂ ಸ್ವಚ್ಛವಾಗಿಯೂ ಹಗುರಾಗಿಯೂ ಇರಬೇಕು. ಹೊಸದಾಗಿ ಹುಟ್ಟಿದ ಮಗುವಿನ ಮೈಯೊಳಗೆ ಉಷ್ಣತೆಯು ಕಡಿಮೆ ಇರುವುದರಿಂದ ಅದಕ್ಕೆ ಬೆಚ್ಚ

ಗಾನುವದಕ್ಕಾಗಿ ಅದನ್ನು ಮೂರುವಾರಗಳ ಅಥವಾ ೧ ತಿಂಗಳದವರೆಗೆ ತಾಯಿಬು ಇಲ್ಲವೆ ದಾಯಿಯ ವಗ್ಗಲಿನಲ್ಲಿಬೇ ಮಲಗಿಸಬೇಕು. ಆ ಮೇಲೆ ಬೇರೆ ಹಾಸಿಗೆಯ ಮೇಲೆ ಮಲಗಿಸಬಹುದು.

ಕೂಸನ್ನು ಮಲಗಿಸುವದಕ್ಕಿಂತ ಮೊದಲು ಅದನ್ನು ಬಿಸಿನೀರಿನಿಂದ ಎರಿದು ಸ್ವಚ್ಛ ಮಾಡತಕ್ಕದ್ದು ಮೊಸಿನ ಬಟ್ಟೆಗಳನ್ನೂ ಒದ್ದೆಯ ಬಟ್ಟೆಗಳನ್ನೂ ಅನತ ಮೈಮೇಲೆ ಎಂದೂ ಹಾಕಬಾರದು ಚಿಕ್ಕಮಕ್ಕಳು ಮಲಮೂತ್ರಗಳನ್ನು ಆಗಾಗ ಬಿಡುತ್ತಿರುವರು ಆ ಹೊಲಸನ್ನು ಹಾಗೇ ಉಳಿಯಗೊಡಬಾರದು ಸಣ್ಣ ಹುಡುಗರು ನಿದ್ದೆ ಇಲ್ಲದಿರೋಣ, ಹಸಿವೆ, ನೀರಡಿಕೆ, ಹೊಸದಾಗಿ ಹಲ್ಲು ಒಡೆಯುತ್ತಿರುವದು, ಕಿವಿನೋವು ಇಲ್ಲವೆ ಹೊಟ್ಟೆ ಕಡಿಯುತ್ತಿರುವದು ಮುಂತಾದ ತೊಂದರೆಗಳಿಂದ ಆಗಾಗ ಅಳುತ್ತಿರುವರು.

ಕ್ಷಯರೋಗದ ನಿವಾರಣೆಗಾಗಿ ಮಾಡತಕ್ಕ ಉಪಾಯಗಳು.

[illegible]

ಶುದ್ಧ ಹವೆಯಲ್ಲಿ ಉಸುರಾಡಿಸುವದು, ಪ್ರಕೃತಿಯನ್ನು ನಿರೋಗಿಯಾಗಿರಲಿಕ್ಕೆ ಉತ್ತಮ ಉಪಾಯವಾಗಿರುತ್ತದೆ.

ನಾವು ಉಸುರಾಡಿಸುವದರಿಂದ ಮನೆಯೊಳಗಿನ ಹವೆಯು ದೂಷಿತವಾಗುವದರಿಂದ ಅದರಲ್ಲಿ ಚೀಸಿನೆ, ಚಳಿಗಾಲ, ಹಗಲು ರಾತ್ರಿ ಮತ್ತು ಎಲ್ಲಾ ವೇಳೆಗಳಲ್ಲಿ ಆಗಾಗ್ಯೆ ಕಿಟಕಿ ತೆರೆದಿಡಬೇಕು. ಅದಕಾರಣ ಕಿಡಿಕೆಗಳನ್ನೂ ಮನೆಯ ಬಾಗಿಲಗಳನ್ನೂ ಯಾವಾಗಲೂ ತೆರೆದಿಡಬೇಕು.

ಕೋಣೆಯು ಸಣ್ಣದಿದ್ದು ಅದರಲ್ಲಿರುವವರ ಸಂಖ್ಯೆಯು ಹೆಚ್ಚಿದ್ದರೆ, ಅಲ್ಲಿ ಯಾವಾಗಲೂ ಅವರೆಲ್ಲರಿಗೆ ಉಸುರಾಡಿಸಲಿಕ್ಕೆ ಬೇಕಾಗುವಷ್ಟು ಶುದ್ಧ ಹವೆಯಾಡುತ್ತಿರುವಂತೆ ವ್ಯವಸ್ಥೆಯನ್ನು ಇಡಬೇಕು.

ಎಷ್ಟೋ ಜನರು ದೂಷಿತ ಹವೆಯಲ್ಲಿದ್ದ ಕಾರಣನೆ, ಇಲ್ಲವೆ ಮನೆಯಲ್ಲಿರುವದರಿಂದ ಸಾವಿಗೀಡಾಗುತ್ತಾರೆ. ಇಲ್ಲವೆ ತೀರ ಅಶಕ್ತರಾಗುತ್ತಾರೆ. ಕೆಟ್ಟನೀರು ಶರೀರಕ್ಕೆ ಅಪಾಯಕರವಾಗಿರುವಂತೆ ಅಶುದ್ಧ ಹವೆಯಲ್ಲಿರುವದರಿಂದಲೂ ಹಾನಿತಟ್ಟುವದು ಪ್ರಕೃತಿಯನ್ನು ಕ್ಷಯರೋಗದಿಂದ ಕಾಪಾಡಿಕೊಂಡು ಸುರಕ್ಷಿತವಾಗಿಡಲಿಕ್ಕೆ ಸ್ವಚ್ಛ ಹವೆಯಲ್ಲಿ ಉಸುರಾಡಿ [illegible] ನಿಜವಾದ ಉಪಾಯವಾಗಿದೆ.

ಕ್ಷಯರೋಗಿಯ ಉಗುಳಿನಿಂದ ಆ ರೋಗವು ಎರಡನೆಯವರಿಗೆ ತಗಲುವ ಸಂಭವವುಂಟು ಈ ಉಗಳು ಒಣಗಿತೆಂದರೆ ಅದರಲ್ಲಿಯ ಕಣಗಳು ಹವೆಯಲ್ಲಿ ಬೆರೆತು ಬೇರೆ ಜನರು ಉಸುರಾಡಿಸುವಾಗ್ಯೆ ಅವರ ಶ್ವಾಸಕೋಶಗಳಲ್ಲಿ ಸೇರಿದರೆ ಅವರಿಗೂ ಕ್ಷಯದ ಬಾಧೆಯಾಗುವ ಸಂಭವ ವಿರುತ್ತದೆ.

ಕೆಲವೊಬ್ಬನಿಗೆ ಕ್ಷಯದ ಭಾವನೆ ಇಲ್ಲದೆಯೂ ಅವನ ಉಗುಳಲ್ಲಿ ರೋಗ ಜಂತುಗಳಿರುವ ಸಂಭವವಿದೆ ಆದ್ದರಿಂದ ಯಾರೂ ಮನೆಯಲ್ಲಿ ಇಲ್ಲವೆ, ಅತ್ತಿತ್ತ ಉಗುಳುವದು ಅತಿ ಅನಿಷ್ಟಕರವಾದದ್ದು

ಚಟ್ಟಾ ಸೇದುವವರು ಇಲ್ಲವೆ ಇತರರು ಉಗುಳುವಾಗ್ಯೆ ಬಲು ಎಚ್ಚರದಿಂದ ಚಿನಯಿ ಮಣ್ಣಿನ "ಪೀಕದಾನಿಯಲ್ಲಿ" ಇಲ್ಲವೆ ಔಷಧವಿಶ್ರಿತ ನೀರುಹಾಕಿದ ಸೀಸೆಯಲ್ಲಾದರೂ ಉಗುಳಬೇಕು. ಅರಿವೆಯ ಮೇಲೆ ಉಗುಳಿದರೆ ಅದನ್ನು ಸುಟ್ಟಬಿಡಬೇಕು.

ಕಿಂಗ ಜಾರ್ಜಧಿ ಫಿಪ್ತ ಏ್ಯಂಟಿ ಟ್ಯೂಬರ್ ಕ್ಯುಲ್ಲಾಸಿಸ್‌ಲೀಗ,
ಮುಂಬಯಿ

ಸಣ್ಣ ಹುಡುಗರಿಗೆ ಕ್ಷಯರೋಗವಾದ ಲಕ್ಷಣಗಳು.

ಸಣ್ಣ ಹುಡುಗರಿಗೆ ಉಂಟಾದ ಕ್ಷಯರೋಗವು ಅವರ ಎಲುವಿನೊಳಗಿಂದಲೂ ಸಂದಿನೊಳಗಿಂದಲೂ ಗಂಟಿನೊಳಗಿಂದಲೂ ಕಂಡು ಬರುತ್ತದೆ. ಇಂಥ ಕಲ್ಪನೆಗಳು ಕ್ಷುಲ್ಲಕವಾಗಿ ಕಾಣುತ್ತದೆ ಆದರೆ ಅದರಿಂದ ಬಹಳ ಅಶಕ್ತತೆಯುಂಟಾಗುತ್ತದೆ, ತೀವ್ರ ಉಪಚಾರ ಮಾಡಿದರೆ ಸಣ್ಣ ಹುಡುಗರ ಕ್ಷಯರೋಗವು ಇಲ್ಲದಂತಾಗುತ್ತದೆ.

ಸಣ್ಣ ಹುಡುಗರಿಗೆ ಉಂಟಾದ ಕ್ಷಯರೋಗವು ಬಹಳ ಅಸ್ಪಷ್ಟವಾಗಿಯೂ ಅನಿಯಮಿತವಾಗಿಯೂ ಇರುವದರಿಂದ ಅದರ ಕಡಿಗೆ ನುರ್ಲಕ್ಷವಾಗುವ ಸಂಭವವದೆ.

ಯಾವನಾದರೊಬ್ಬ ಹುಡುಗನ ಕತ್ತಿಗೆ ಇಲ್ಲವೆ ಬಗಲಿನಲ್ಲಿ ಗಂಟುಗಳಿದ್ದರೆ ಇಲ್ಲವೆ ಆ ಹುಡುಗನ ಎಲುವುಗಳಲ್ಲಿಯೂ, ಸಂದುಗಳಲ್ಲಿಯೂ ಇಲ್ಲವೆ ಬೆನ್ನೆಲುವುಗಳಲ್ಲಿ ನೋಯುತ್ತಿದ್ದರೆ ಅಥವಾ ಬಾವು ಎರುತ್ತಿದ್ದರೆ, ಇಲ್ಲವೆ ಕೆಮ್ಮು ಬರುತ್ತಿದ್ದರೆ, ಮತ್ತು ಇವುಗಳಂಥೋಗ

ಂದ ಹುಡುಗನು ದಿನದಿನಕ್ಕೆ ಕೃಶನಾಗುತ್ತ ಹೋದರೆ, ಅವನ ಪ್ರಕೃತಿ ಯು ವಿಷಯಕ್ಕೆ ಡಾಕ್ಟರರ ಅಭಿಪ್ರಾಯವನ್ನು ತೆಗೆದುಕೊಳ್ಳುವದಕ್ಕೆ ತುರ್ತಕ್ಷವಾಡಬಾರದು ಆ ಹುಡುಗನಿಗೆ ಯೋಗ್ಯಕಾಲದಲ್ಲಿ ಯೋಗ್ಯ ಉಪಚಾರವನ್ನು ಮಾಡಿದರೆ, ಅವನ ಪ್ರಕೃತಿಯನ್ನು ಸುಧಾರಿಸಿ ಅತನ ದುಃಖವೂ, ರೋಗವೂ, ನಾಶವಾಗುವದು. ಮತ್ತು ರೋಗದ ಬೆಳವಣಿಗಿ ಯಾಗದೆ ಆ ಹುಡುಗನಿಗೆ ಬರುವ ಕಾಲಮೃತ್ಯು ದೂರಾಗುವದು,

ಮುಂಬಯಿಯಲ್ಲಿ ಪ್ರಿನ್‌ಸೆಸ್ ಸ್ಟ್ರೀಟನಲ್ಲಿರುವ ದವಾಖಾನೆಯಲ್ಲಿ ಬಡ ಹುಡುಗರಿಗೆ ಫೀ ಇಲ್ಲದೆ ಔಷಧೋಪಚಾರಗಳು ಮಾಡಲ್ಪಡುವವು.

ಕ್ಷಯರೋಗದ ಪೂರ್ವ ಲಕ್ಷಣಗಳು.

ತೀವ್ರ ಉಪಚಾರ ಮಾಡುವದರಿಂದ ಎಷ್ಟೋ ಕ್ಷಯರೋಗಿಗಳು ಸುಧಾರಿಸುತ್ತಾರೆ. ಈ ರೋಗವು ಬಹಳ ಹಳೇ ಸ್ಥಿತಿಯಲ್ಲಿ ಇದ್ದಾಗ್ಯೂ ಅದನ್ನು ನೆಟ್ಟಗೆ ಮಾಡಲಿಕ್ಕೆ ಬರುತ್ತದೆ. ಆದರೆ ರೋಗವು ಬೆಳೆಬೆಳೆದಂತೆ ಅದು ನೆಟ್ಟಗಾಗುವ ಸಂಭವವು ಕಡಿಮೆ ಇರುತ್ತದೆ. ಆದ್ದರಿಂದ ಯೋಗ್ಯಕಾಲದಲ್ಲಿಯೇ ಅದಕ್ಕೆ ಉಪಚಾರ ಮಾಡಬೇಕು. ಈ ರೋಗದ ಪೂರ್ವ ಲಕ್ಷಣಗಳು ಬಹುಶಃ ಅಸ್ಪಷ್ಟ ಇರುತ್ತವೆ. ಅಸಂಭಂಧಿಯಾದ ಲಕ್ಷಣಗಳನ್ನು ರೋಗಿಯು ಹೃತ್ ಪರೀಕ್ಷೆಯನ್ನು ಮಾಡಿ ಡಾಕ್ಟರರಿಗೆ ಮಾತ್ರ ಅದರ ಗುರ್ತು ಹಿಡಿಯಲಿಕ್ಕೆ ಬರುತ್ತದೆ ಕೆಳಗೆ ಬರೆದ ಲಕ್ಷಣಗಳ ಮೇಲಿಂದ ಬಹುವಂಶದಿಂದ ರೋಗದ ಪ್ರಾರಂಭವು ಸೂಚಿಸಲ್ಪಡುತ್ತದೆ.

೧. ಶಕ್ತಿ ಕಡಿಮೆಯಾಗುವದ :— ವಾಡಿಕೆಯಾದ ಕೆಲಸಗಳನ್ನು ಮಾಡುವದರಿಂದ ದಣಿದಂತಾಗುವದು.

೨. ಮಾಂಸಕ್ಷಯ:— ಯಾವದು ಸ್ಪಷ್ಟಕಾರಣವಿಲ್ಲದೆ.

೩. ಕೆಮ್ಮು:— ಇದು ಅಗದೀ ಸ್ವಲ್ಪವಿರುತ್ತದೆ ಆದರೆ ಯಾವಾಗಲೂ ಬರುತ್ತದೆ.

೪. ಉಗುಳಿನಲ್ಲಿ ರಕ್ತ ಬೀಳುವದು:— ಹೆಚ್ಚು ಕಡಿಮೆ ಪ್ರಮಾಣದಿಂದ ಆಥವಾ ಕಲ್ಪಿತ ಕಾರಣದಿಂದ ರಕ್ತಬೀಳುವದು.

೫. ಆಜೀರ್ಣ:— ಅನ್ನ ಪಚನವಾಗದೆ ರೋಗಿಯು ಸೊರಗು ಹೋಗುವದು

೬. ನವ್ಯ ಹತ್ತುವದು:— ವಿಶೇಷ ಶ್ರಮ ಮಾಡದೇ

೭. ಎದೆಯಲ್ಲಿ ಇಲ್ಲವೆ ಹೊಟ್ಟೆಯಲ್ಲಿ ಬಂದೇಸನನೇ ನೋಯುವದು.

೮. ರಕ್ತವು ಕಡಿಮೆಯಾದ್ದರಿಂದ ಪಾಂಡುರೋಗದಂತೆಯಾಗುವದು

ಮೇಲೆ ಹೇಳಿದ ಎಲ್ಲ ಅಥವಾ ಕೆಲವು ಚಿನ್ಹೆಗಳು ಯಾವರೋಗಿ ಆಗುತ್ತವೆಯೋ ಅವನು ಅಥವಾ ಯಾವ ಕುಟುಂಬದವರ ಸಂಗಡ ಕೆಲಸ ಮಾಡುವದರಲ್ಲಿ ಕ್ಷಯರೋಗದ ಬೀಜಗಳು ಕಂಡುಬರುತ್ತವೆಯೋ ಅವರು ಆಲಸ್ಯವಾಡದೆ ಪ್ರಕೃತಿಯ ಸಲುವಾಗಿ ಡಾಕ್ಟರರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕು. ಡಾಕ್ಟರರಿಗೆ ತನ್ನ ಪ್ರಕೃತಿಯನ್ನು ತಿಳಿಸಿ ತನ್ನ ಹೃತ್‌ಪರೀಕ್ಷೆಯನ್ನು ಕಾಳಜಿ ಪೂರಕವಾಗಿ ಮಾಡಿಸಿಕೊಳ್ಳಬೇಕು.

ಬಡವರಿಗೆ ಕ್ಷಯರೋಗವಾಗಲು ಅವರ ಉಪಚಾರ ಮಾಡುವದವಖಾನೆಯು ಮುಂಬಯಿ ಪಟ್ಟಣದಲ್ಲಿ ಪ್ರಿನ್ಸೆಸ್‌ಸ್ಟ್ರೀಟ್ ಈ ಜಾಗೆಯಲ್ಲಿ ಅದೆ.

ಪತ್ರ— ಕಿಂಗ ಜಾರ್ಜನ ಫಿಫ್ತ ಆ್ಯಂಟಿ ಟ್ಯೂಬರ್
ಕ್ಯುಲಾಸಿಸ್ ಲೀಗ
ಮುಂಬಯಿ

ಲಕ್ಷಣಗಳು.

ಕ್ಷಯರೋಗದಿಂದ ಬಹಳ ಪ್ರಾಣಹಾನಿಯಾಗುತ್ತದೆ.
ನಿಮ್ಮನ್ನೂ ನಿಮ್ಮ ಕುಟುಂಬದವರನ್ನೂ ಕ್ಷಯರೋಗದಿಂದ ರಕ್ಷಿಸರಿ,
ಕ್ಷಯರೋಗದ ಬಗ್ಗೆ ನಿಮಗೇನಾದರೂ ಮಾಹಿತಿ ಬೇಕಾಗಿದ್ದರೆ
,, ಕಿಂಗ ಜಾರ್ಜನ ಫಿಫ್ತ ಆಂಟಿ ಟ್ಯುಬರಕ್ಯೂಲಾಸಿಸ್ ಲೀಗ ,,
ಇವರ ಕಡಿಗೆ ಪತ್ರಬರೆಯಿರಿ,
ವಿಳಾಸ- ಪ್ರಿನ್ಸೆಸ್‌ಸ್ಟ್ರೀಟ ಮುಂಬಯಿ.